ಅಲ್ಲಾಹನ ಹೆಸರಲ್ಲಿ

ಮಾನಸಿಕ ಬಂಧನ



English Origin
AIDID SAFAR

Kannada Translation
CHILMAN ZAHIR

ಆಧ್ಯಾತ್ಮಿಕ ಗುರುಗಳು, ಆಯಾತುಲ್ಲಾಗಳು, ಪುರೋಹಿತರು, ಮುಲ್ಲಾಗಳು ಹಾಗೂ ಪಂಡಿತರು ಸಮರ್ಥಿಸುವಂತಹ

ತೀರ್ವವಾದ, ಭಯೋತ್ಪಾಧನೆ ಹಾಗೂ ಮೂರ್ತಿ ಆರಾಧನೆಯ ಸಿದ್ಧಾಂತಗಳಿಂದ ಬೇರ್ಪಡಲು ಇಚ್ಛಿಸುವ ಮುಸ್ಲಿಮರು

<u>ತಪ್ಪದೇ ಓದಬೇಕಾದ ಲೇಖನ</u>

ಅಲ್ಲಾಹನ ಹೆಸರಲ್ಲಿ

ಮಾನಸಿಕ ಬಂಧನ

ಧರ್ಮದ ಮೇಲೊಂದು ಸಂಶೊಧನಾ ಲೇಖನ

ಇಂಗ್ಲಿಷ್ ಮೂಲ:
AIDID SAFAR

ಕನ್ನಡಾನುವಾದ ಹಾಗೂ ಮುಖಪುಟ ವಿನ್ಯಾಸ:
CHILMAN ZAHIR

First Edition – April 2012

chilmanzahir@yahoo.com

ನಾವು ನಿರ್ವಾತಾವಸ್ಥೆಯಲ್ಲಿ ಸೃಷ್ಟಿಸಲ್ಪಟ್ಟಿರುವೆವು.

ನಂತರ ನಮ್ಮ ಸ್ವಾತಂತ್ರ್ಯವು ನಮ್ಮ ಅಹಂಕಾರವನ್ನು ಪ್ರಭಾವಿತಗೊಳಿಸುತ್ತದೆ.

ನಮ್ಮ ಅದೇ ಸ್ವಾತಂತ್ರ್ಯವು, ನಮ್ಮ ಅಹಂಕಾರವನ್ನು ಅಪ್ರಭಾವಿತಗೊಳಿಸಲೂ
ಸಮರ್ಥವಾಗಿದೆ ಎಂಬುವುದನ್ನು ಅರಿತುಕೊಳ್ಳುವುದು ಒಂದು ಮಹತ್ವದ ವಿಷಯವಾಗಿದೆ.

ಹಾಗೆಯೇ,
ನಾವು ಧರ್ಮದಿಂದ ಬೇರ್ಪಟ್ಟಾಗ ಅದೇ ನಿರ್ವಾತಾವಸ್ಥೆಯು ಸೃಷ್ಟಿಯಾಗುತ್ತದೆ.

ಪರಿವಿಡಿ

ಮುನ್ನುಡಿ 9
ಪರಿಚಯ 12
ಅನುಬಂಧ (Annex) 27

ಭಾಗ ಒಂದು

ತಪ್ಪುಧಾರಣೆ 32
ಕುರ್‌ಆನ್.....34
ಕೇವಲ ಅಲ್ಲಾಹನ ಸೇವೆ 36
ಅಲ್ಲಾಹನು ಅರಬನಲ್ಲ 42
ಪ್ರಭುತ್ವದ ದಾವೆ 50
ಜನರ ನಡುವೆ ವಿಭಾಗಗಳನ್ನು ಸೃಷ್ಟಿಸುವುದು 51
ಕಲ್ಲಿನ ಆರಾಧಕರು 54
ಶಿಲೆಗಳ ಆರಾಧನೆ.....56
ಕುತಂತ್ರಗಳು.....56

ಭಾಗ ಎರಡು

'ಅಲ್ಲಾಹನ ಧರ್ಮ' ಎಂಬುವುದಿಲ್ಲ.....63
'ದೀನ್' ಎಂದರೆ 'ಧರ್ಮ' ಎಂದಲ್ಲ 77
ಸಂಪೂರ್ಣ ಸ್ವಾತಂತ್ರ್ಯ.....79
ವಾಸ್ತವಿಕ ಮೂರ್ತಿಗಳು.....81
'ಬದ್ಧತೆ'ಗಳ ಮೂಲಕ ಅಲ್ಲಾಹನ ಸೇವೆ.....84
ಅಲ್ಲಾಹನು ಆರಾಧಿಸಲ್ಪಡಬೇಕಾದವನಲ್ಲ 90
ಮೂಸಾ ಮತ್ತು ಈಸಾರು ಅಲ್ಲಾಹನನ್ನು 'ಆರಾಧಿಸಲಿಲ್ಲ'.....95
'ಧರ್ಮ'ವು ಮಾನವ ನಿರ್ಮಿತವಾಗಿದೆ.....100

ಭಾಗ ಮೂರು

ಅರಬೀ ಧರ್ಮ.....103
ಪ್ರಸ್ತುತ 'ಕಾಬಾ'ದ ಬಗ್ಗೆ ಇರುವ ಅರಬೀ ಕಥೆಗಳು.....106
ಧರ್ಮವು ಅಲ್ಲಾಹನಿಂದ ಬಂದಿರುವುದಲ್ಲ 116
ಅರಬೀ ಧಾರ್ಮಿಕ ಕಾನೂನುಗಳು.....121
ಅರಬೀ ವಿಧ್ಯುಕ್ತ ಪ್ರಾರ್ಥನೆ 126
ಅನುಬಂಧ (Annex) 131

ಭಾಗ ನಾಲ್ಕು

ಸ್ವಲಾತ್ ಎಂದರೆ 'ಬದ್ಧತೆ' ಎಂದಾಗಿದೆ, 'ವಿಧ್ಯುಕ್ತ ಪ್ರಾರ್ಥನೆ' ಎಂದಲ್ಲ.....132

ಜನರ ನಡುವಿನ ಸ್ವಲಾತ್ 139
ಸ್ವಂತಕ್ಕೆ ಸ್ವಲಾತ್ 142
ಸ್ವಲಾತ್ ಎಂಬುವುದು ಕ್ರಿಯೆಗಳನ್ನು ಮಾಡುವುದರ ಬಗ್ಗೆಯಾಗಿದೆ 144
ಇಬ್ರಾಹೀಮರ ಬದ್ಧತೆಗಳು 149
ಮೂಸಾರ ಬದ್ಧತೆಗಳು 150
ಈಸಾರ ಬದ್ಧತೆಗಳು 152
ಮುಹಮ್ಮದರ ಬದ್ಧತೆಗಳು 153
ಆಚರಣೆಗಳಿಲ್ಲದೆ ಅಲ್ಲಾಹನ ಸಹಾಯ ಯಾಚನೆ 156
ಬದ್ಧತೆಗಳ ಮೂಲಕ ಅಲ್ಲಾಹನ ವೈಭವೀಕರಣ 160
ವಿಧ್ಯುಕ್ತ ಪ್ರಾರ್ಥನೆಯು ಕುರ್‌ಆನಿನಲ್ಲಿಲ್ಲ 161
ವಿಧ್ಯುಕ್ತ ಪ್ರಾರ್ಥನೆಯು ಒಂದು ಒಳಸಂಚಾಗಿದೆ 162
ನೂತನ ಹದೀಸುವಾದಿಗಳು 164

ಭಾಗ ಐದು

ಸ್ವಲಾತಿನ ಪದ ಪಲ್ಲಟ 167
ಸ್ವಲಾತಿನ ಪದ ಪಲ್ಲಟ – ಅರಬರ ರೀತಿ 168
ಪದೇ ಪದೇ ಕೇಳಲಾಗುವ ಪ್ರಶ್ನೆಗಳು 172
ಧಾರ್ಮಿಕರಿಗೆ ಉತ್ತರಿಸಲು ಸಾಧ್ಯವಿಲ್ಲದ ಪ್ರಶ್ನೆಗಳು 176

ಭಾಗ ಆರು

ಧಾರ್ಮಿಕ ದಶಾಂಶ ತೆರಿಗೆ ಸಂಗ್ರಹಣೆಯು ಒಂದು ಹಗರಣವಾಗಿದೆ 179
ಝಕಾತ್ ಎಂದರೆ ಧಾರ್ಮಿಕ ದಶಾಂಶ ತೆರಿಗೆ ಎಂದರ್ಥವಲ್ಲ 180
ಮೂಲಭೂತ ಸಾರ್ವತ್ರಿಕ ಮೌಲ್ಯಗಳು 181
ದಾನವು ವಿಧಿಸಲಾಗಿದೆ 183
ಧಾರ್ಮಿಕ ದಶಾಂಶ ತೆರಿಗೆಯು ಧಾರ್ಮಿಕರ ಆವಿಷ್ಕಾರವಾಗಿದೆ 185
ಝಕಾತ್ ಎಂಬುವುದು ಹಣದ ಬಗ್ಗೆ ಇರುವುದಲ್ಲ 189
ಝಕಾತ್ ಎಂಬ ಪದದ ಅರ್ಥ 189

ಭಾಗ ಏಳು

ಇಬ್ರಾಹೀಮರು ಪ್ರಧಾನ ಗುರಿಯಾದರು 193
ಇಬ್ರಾಹೀಮರ ದರ್ಜೆಯ ಮಹತ್ವ 198
ಕುತಂತ್ರಗಳನ್ನು ಬಲಪಡಿಸುವ ಕಟ್ಟು ಕಥೆಗಳು 199

ಭಾಗ ಎಂಟು

ಕಲ್ಲಿನ ಮನೆಯ ಆರಾಧನೆ 205
ಇಬ್ರಾಹೀಮರಿಗೂ ಮತ್ತು ಮಕ್ಕಾ ಎಂಬ ಸ್ಥಳಕ್ಕೂ ಯಾವುದೇ ಸಂಬಂಧವಿಲ್ಲ 206
ಬೈತ ಎಂದರೆ ಒಂದು ವ್ಯವಸ್ಥೆ ಎಂದಾಗಿದೆ. ಒಂದು ಮನೆ ಎಂದಲ್ಲ 213
ಕುರ್‌ಆನಿನ ಪ್ರಕಾರ ಬೈತ 215

ಕುರ್‌ಆನಿನಲ್ಲಿ ಬೈತಿಯ 218
'ಹರಾಮ್' ಅಂದರೆ 'ಪವಿತ್ರ' ಎಂದಲ್ಲ 222
ವ್ಯವಸ್ಥೆಯನ್ನು ಕಂಡುಹಿಡಿಯುವ 'ಸವಾಲನ್ನು ತೆಗೆದುಕೊಳ್ಳುವುದು' 226
ಬೈತದಲ್ಲಿ ಏನಿದೆ 227

ಭಾಗ ಒಂಭತ್ತು

ಭ್ರಷ್ಟತೆಯು ಮುಂದುವರಿಯುತ್ತದೆ 231
ಇಬ್ರಾಹೀಮರ ದರ್ಜೆ (ಮಕಾಮಿ ಇಬ್ರಾಹೀಮ್) 232
'ಬದ್ಧರಾದ' ಎಂಬ ಪದವು ಭ್ರಷ್ಟಗೊಂಡಿತು 233
ವ್ಯವಸ್ಥೆಯನ್ನು ಶುದ್ಧೀಕರಿಸುವುದು 236
'ಜನಸಮೂಹ' ಎಂಬುವುದು ಭ್ರಷ್ಟಗೊಂಡಿತು 237
ಥ್ವಾಫ್ 238
'ನಿಷ್ಠಾವಂತರು' ಎಂಬುವುದು 'ತಪಶ್ಚರ್ಯೆ ಮಾಡುವವರು' ಎಂದಾಯಿತು 240
'ವಿಧೇಯತೆಯಿಂದ ಸಮ್ಮತಿಕೊಳ್ಳುವುದು' ಎಂಬುವುದು 'ಬಗ್ಗುವುದು ಹಾಗೂ ಸಾಷ್ಟಾಂಗವೆಸಗುವುದು' ಎಂದಾಯಿತು 241
ಸುಜೂದ್ ಎಂದರೆ ದೈಹಿಕ ಸಾಷ್ಟಾಂಗ ಎಂದರ್ಥವಲ್ಲ 245
ರುಕೂ ಎಂದರೆ ದೈಹಿಕವಾಗಿ ಬಗ್ಗುವುದು ಎಂದರ್ಥವಲ್ಲ 249

ಭಾಗ ಹತ್ತು

'ಸಮ್ಮತಿಸಲ್ಪಟ್ಟಿರುವುದು' ಎಂಬುವುದು 'ಮಸೀದಿ' ಎಂದಾಯಿತು 256
'ದೀನ್' ನಿರೂಪಿಸಲಾಗಿದೆ 262
ಮಸ್ಜಿದ್ ಎಂದರೆ 'ಸಮ್ಮತಿಸಲ್ಪಟ್ಟಿರುವುದು' ಎಂದಾಗಿದೆ 264
'ಸಮ್ಮತಿಸಲ್ಪಟ್ಟ ಆದೇಶ'ಗಳು ವಿಧಿಸಲಾಗಿದೆ 268
ಅಲ್ಲಾಹನ ಅವತೀರ್ಣಗಳ ಸಂದೇಶ 271
'ಅಲ್ಲಾಹನ ಸಮ್ಮತಿಸಲ್ಪಟ್ಟಿರುವ ಆದೇಶಗಳು' ಪೂರ್ವ ಕುರ್‌ಆನಿನ ಅವಧಿಯದ್ದಾಗಿದೆ 272
ಪೂರ್ವ ಕುರ್‌ಆನಿನ ಅವಧಿಯ ನಿರ್ಬಂಧಗಳು 277
ಸಮ್ಮತಿಸಲ್ಪಟ್ಟಿರುವ ನಿರ್ಬಂಧಗಳಿಗೆ ಕೇಂದ್ರೀಕರಿಸುವುದು 288
'ಸಮ್ಮತಿಸಲ್ಪಟ್ಟಿರುವ ಆದೇಶಗಳು' ಅವತೀರ್ಣಗೊಂಡಿವೆ 290
2:142-152 - ವಿಸ್ತಾರವಾದ ಸನ್ನಿವೇಶದಲ್ಲಿ 293

ಭಾಗ ಹನ್ನೊಂದು

'ವನ್ಯಜೀವಿ ಸಂರಕ್ಷಣೆ' ಎಂಬುವುದು ವಿನಾಶಗೊಂಡಿತು 298
'ವನ್ಯಜೀವಿ ಸಂರಕ್ಷಣೆ' ಎಂಬುವುದು 'ತೀರ್ಥಯಾತ್ರೆಯ ಉಡುಪು' ಎಂದಾಯಿತು 308
ಇಹ್ರಾಮ್ ಎಂಬ ಪದವು ಕುರ್‌ಆನಿನಲ್ಲಿ ಕಂಡುಬಂದಿಲ್ಲ 309
'ಮಾರ್ಗದರ್ಶನ' ಎಂಬುವುದು 'ಪ್ರಾಣಿ ಬಲಿ' ಎಂದಾಯಿತು 312
ಇನ್ನಷ್ಟು ಭ್ರಷ್ಟಾಚಾರಗಳು 313
ಆಹಾರದ ಮೇಲಿನ ನಿರ್ಬಂಧಗಳು 316
ತರಬೇತಿ ನೀಡಲ್ಪಟ್ಟ ನಾಯಿಗಳು ಹಿಡಿದ ಪ್ರಾಣಿಗಳನ್ನು ಅನುಮತಿಸಲಾಗಿದೆ 318

ಧಾರ್ಮಿಕರು ಶೈತಾನನ ಭರವಸೆಯನ್ನು ಈಡೇರಿಸುತ್ತಿದ್ದಾರೆ.....319
'ಕಾಬಾ' (ಕಣಕಾಲು) ಎಂಬುವುದು 'ಅಲ್ಲಾಹನ ಮನೆ' ಎಂದಾಯಿತು.....320

ಭಾಗ ಹನ್ನೆರಡು

ಉಮ್ರ ಮತ್ತು ಹಜ್ಜ್ - ಆವಿಷ್ಕಾರಿತ ತೀರ್ಥಯಾತ್ರೆಯಾಗಿದೆ.....331
'ಉಮ್ರ' ಎಂದರೆ 'ಜೀವನ' ಎಂದರ್ಥ.....331
ಮಾನವರಿಗೆ ಅಲ್ಲಾಹನಿಂದ ಉಮ್ರ 332
ಮಾನವರು ಭೂಮಿಗೆ ಜೀವ ನೀಡುತ್ತಾರೆ.....333
9:19 ರಲ್ಲಿನ ಉಮ್ರ ಎಂಬ ಪದವನ್ನು ಹೇಗೆ ತಿರುಚಲಾಯಿತು 336
ಹಜ್ಜ್ ಎಂದರೆ ಸವಾಲು, ತೀರ್ಥಯಾತ್ರೆ ಎಂದಲ್ಲ 338
ಹಜ್ಜಿಲ್ ಅಕ್ಬರ್ ಎಂದರೆ 'ಮಹಾ ಸವಾಲು' 342
ಹಾಜ್ಜ ಇಬ್ರಾಹೀಮ.....345
ಇಬ್ರಾಹೀಮ್ ಮತ್ತು ಇಸ್ಮಾಯೀಲರು ಯಾವತ್ತೂ ಮಕ್ಕಾಗೆ ಬಂದಿರಲಿಲ್ಲ.....349
ಅರಬರು ಅನಾಚಾರಿಗಳಾಗಿದ್ದರು 352
ಸುನ್ನಿ ಮತ್ತು ಶಿಯಾಗಳು ತೆಗೆದುಕೊಳ್ಳಬೇಕಾದ ಸವಾಲು 357

ಅರಬೀ ಧಾರ್ಮಿಕರಿಗೊಂದು ಸಂದೇಶ 360

ಸಮಾರೋಪ

ಕುರ್'ಆನಿನ ಸಂದೇಶ.....367
ವೈಯುಕ್ತಿಕವಾಗಿ ಅಲ್ಲಾಹನ ಸೇವೆಯನ್ನು ಮಾಡುವುದು 369
ವಿವಾದಿತ ಡೊಂಬರಾಟಗಳು.....371
ಭ್ರಷ್ಟಾಚಾರಗಳು 375
ಅನುವಾದಗಳನ್ನು ಓದುವವರಿಗೆ.....378

ಮುನ್ನುಡಿ

ಕೆನಡಾದ ಒಬ್ಬ ಮಹಿಳಾ ವೈದ್ಯರು ನನಗೊಂದು ಪತ್ರ ಬರೆದು ಹೀಗೆಂದರು, *"ನಾವು ನಮ್ಮ ಸೃಷ್ಟಿಕರ್ತನನ್ನು ಅರ್ಥಮಾಡಿಕೊಳ್ಳಲು ಉದ್ದೇಶಿಸಿದರೆ, ನಾವು ಅವನನ್ನು ಮೂರ್ತೀಕರಿಸುವ ದೋಷವನ್ನು ಎಸಗಬೇಕಾಗುತ್ತದೆ"*. ನಾನು ಅವರ ಈ ವಿಚಾರವನ್ನು ಒಪ್ಪುವುದಿಲ್ಲ. ನಂತರ ಅವರು ಮುಂದುವರಿಸುತ್ತಾರೆ: *"...ನಾವು ಸಂಘಟಿತ ಧರ್ಮದ ಮುಖಾಂತರ ಇದಕ್ಕೆ ಉತ್ತರವನ್ನು ಹುಡುಕಲು ಪ್ರಯತ್ನಿಸಿದರೆ, ಈ ದೋಷವು ಮತ್ತಷ್ಟು ಉಲ್ಬಣಗೊಳ್ಳುತ್ತದೆ"*.

ಮಾನವೀಯತೆಯ ಬಹುಪಾಲು ವಿಭಾಗದ ಸಾಮೂಹಿಕ ಅನುಭವದಲ್ಲಿ, ಮನುಷ್ಯರು ತಮ್ಮ ಎಲ್ಲಾ ಧರ್ಮಗಳ ಪುರೋಹಿತರ, ಮುಲ್ಲಾಗಳ ಹಾಗೂ ಸನ್ಯಾಸಿಗಳ ಮೂಲಕ ರೂಢಿಗೆ ತರಲಾದ ಎಲ್ಲಾ ವಿದ್ಯೆಯು, ಮನುಕುಲಕ್ಕೆ ಯಾವುದೇ ರೀತಿಯ ಒಳಿತನ್ನು ಮಾಡದೇ ಇರಲು ಕಾರಣವೇನು?

ತಮ್ಮ ಧಾರ್ಮಿಕ ನಂಬಿಕೆಗಳು ಯಾವುದೇ ಆಗಿರಲಿ, ಒಟ್ಟಿನಲ್ಲಿ ಮಾನವರು ತಮ್ಮದೇ ಆದ ರೀತಿಯಲ್ಲಿ ತೀವ್ರವಾದಿಗಳಾಗಿದ್ದಾರೆ. ಅವರು ತಮ್ಮ ಸಮುದಾಯದಲ್ಲಿ ಅನ್ಯಾಯ, ದಬ್ಬಾಳಿಕೆ, ಪಕ್ಷಪಾತ, ಲಿಂಗ ತಾರತಮ್ಯ, ಮಕ್ಕಳ ಶೋಷಣೆ ಮತ್ತು ನಾಗರಿಕ ಹಕ್ಕುಗಳ ನಿಂದನೆಗಳ ಬಗ್ಗೆ ಬಹಳ ತುಚ್ಛವಾಗಿ ಸ್ಪಂದಿಸುತ್ತಾರೆ. ಈ ಯಾತನೆಗಳನ್ನು ನಿರ್ಲಕ್ಷಿಸುವುದು ಕೂಡ ಒಂದು ಹಿಂಸೆಯ ರೂಪವೇ ಆಗಿದೆ.

ಜೀವನದ ಒಂದು ಕ್ರಮಬದ್ಧ ರೀತಿಗಿರುವ ನಮ್ಮ ಮಹತ್ವಾಕಾಂಕ್ಷೆಯು ನಶಿಸುತ್ತಿದೆ ಎಂಬ ವಾಸ್ತವಿಕತೆಯನ್ನು ಮನಗಾಣುವ ಅಗತ್ಯವಿದೆ. ವಿಶ್ವದಲ್ಲಿ ಸಂಭವಿಸುತ್ತಿರುವ ಘಟನೆಗಳನ್ನೂ, ಅವುಗಳು ನಮಗೆ ಏನನ್ನು ಕಲಿಸುತ್ತದೆ ಎಂಬುವುದನ್ನೂ – ನಾವೂ, ನಮ್ಮ ಮಾತಾಪಿತರೂ ನಮ್ಮ ನೆರೆಹೊರೆಯವರೂ - ವೈಯುಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಇದಕ್ಕಾಗಿ ಏನು ಮಾಡುತ್ತಿದ್ದೇವೆ - ಎಂದು ಚಿಂತಿಸಬೇಕಾದ ಅವಶ್ಯಕತೆ ಇದೆ.

ಮಾನವಕುಲದ ಪ್ರಸ್ತುತ ವ್ಯವಸ್ಥೆಯಲ್ಲಿ ಅಡಗಿರುವ ಕೆಡುಕನ್ನು ಅರಿಯುವ ಶ್ರಮವನ್ನು ತೊಡಗಲು, ಅವರಿಗೆ ಇನ್ನೆಷ್ಟು ಸಮಯ ಬೇಕಾಗಿದೆ? ಬರೀ 'ದೇವವಿಶ್ವಾಸ'ವು ವಿಶ್ವದ ಈ ಎಲ್ಲಾ ಕೆಡುಕುಗಳನ್ನು ಗುಣಪಡಿಸಲು ಸಾಕಷ್ಟು ಪ್ರಬಲವಾಗಿದೆ ಎಂದು ಹೇಳುವವರು, 'ತಪ್ಪು ನಂಬಿಕೆಗಳೇ ಇದರ ವಾಸ್ತವಿಕ ಕಾರಣವಾಗಲು ಬಹಳ ಪ್ರಭಾವಶಾಲಿಯಾಗಿದೆ' ಎಂದರಿಯಲು ವಿಫಲರಾಗಿದ್ದಾರೆ.

ಮಾತುಗಾರಿಕೆಯನ್ನು ಬಿಟ್ಟು ವಿಚಾರದ ಆಶಯಕ್ಕೆ ತೆರಳೋಣ. ಧರ್ಮದ ಹೆಸರಿನಲ್ಲಿ ಬಹುಪಾಲು ಜನರು ಪ್ರಜ್ಞಾಪೂರ್ವಕವಾಗಿಯೋ ಅಲ್ಲದೆಯೋ, ಭೌತಿಕ ದೇವರುಗಳ ಗುಲಾಮರಾಗಿದ್ದಾರೆ.

ಉದಾಹರಣೆಗೆ, ತಮ್ಮ ಚೈತ್ತಾಶಕ್ತಿಯನ್ನು ಅಡವಿಟ್ಟು, ಅಲ್ಲಾಹನಿಗೆ ಏನು ಬೇಕು ಎಂದು ತಮಗೆ ತಿಳಿದಿರುವುದಾಗಿ ಹೇಳುವಂತಹ, ತಾವು ಅಲ್ಲಾಹನಿಂದ ಆರಿಸಲಾದ ವ್ಯಕ್ತಿಗಳು ಎಂದು ಘೋಷಿಸುವಂತಹ

ಜನರು, 'ಒಳ್ಳೆಯ ಗ್ರಂಥ' ಎಂಬುವುದೊಂದನ್ನು ಎತ್ತಿ ಹಿಡಿದು, ಪುರುಷರು ಮತ್ತು ಮಹಿಳೆಯರನ್ನು ಆರೋಪಕ್ಕೊಳಪಡಿಸಿ, ಪಟ್ಟಣದ ಚೌಕಟ್ಟುಗಳಲ್ಲಿ ಗಲ್ಲಿಗೇರಿಸುತ್ತಾರೆ, ಕೆಲವರನ್ನು ಸುಡುತ್ತಾರೆ. ವಿವಿಧ ಜನಾಂಗದವರ ನಡುವೆ ಮದುವೆಯಾಗುವುದನ್ನು ಅಕ್ರಮಗೊಳಿಸುವ ಕಾನೂನುಗಳನ್ನು ಜಾರಿಗೆ ತಂದವರೂ ಅವರೇ ಆಗಿದ್ದಾರೆ.

'ಆರಾಧನೆ, ಪ್ರಾಣಿ ಬಲಿ, ವಿಧ್ಯುಕ್ತ ಪ್ರಾರ್ಥನೆ (ನಮಾಝ್), ಉಪವಾಸ ಮತ್ತು (ಅಲ್ಲಾಹನ ಕೀರ್ತಿಯ ಸಂಕೇತ ಎನ್ನಲಾದ) ಬಂಡೆಕಲ್ಲಿನ ಶಿಲ್ಪಕ್ಕೆ ತೀರ್ಥಯಾತ್ರೆ' ಇತ್ಯಾದಿ ಆಚಾರಗಳು ಅಲ್ಲಾಹನಿಗೆ ಅಗತ್ಯವಿದೆ ಎಂಬ ಧರ್ಮಾಂಧ ಕಲ್ಪನೆಗೆ, ಸರಿಸುಮಾರು 1.5 ಶತಕೋಟಿ ಜನರು ತಮ್ಮ ಮನಸ್ಸನ್ನು ಸಂಕುಚಿತಗೊಳಿಸಿದ್ದಾರೆ. ಪ್ರತಿಯೊಂದು ಪ್ರದೇಶಕ್ಕೂ ಹಾಗೂ ಸಂಸ್ಕೃತಿಗೂ ಕೊಳ್ಳೆಗಾರರನ್ನು ವ್ಯಾಪಕವಾಗಿ ಕಳುಹಿಸಿ, ಕೊಲೆಪಾತಕಗಳನ್ನು ನಡೆಸಿ, ಅವುಗಳನ್ನು ವಶಪಡಿಸಿಕೊಂಡು ಇಸ್ಲಾಂ ರಾಷ್ಟ್ರದ ಅಧೀನದಲ್ಲಿ ತರುವಂತೆ, ಮುಸ್ಲಿಮರ ಸೈನ್ಯಗಳಿಗೆ ತಮ್ಮ ಈ ಭೌತಿಕ ದೇವರುಗಳು ಆದೇಶಿಸುತ್ತಾರೆ.

ಸುಮಾರು ಎರಡು ಶತಕೋಟಿ ಜನರು, ತಮ್ಮನ್ನು ಉತ್ತಮ ವ್ಯಕ್ತಿಗಳನ್ನಾಗಿಸಲು ಮತ್ತು ತಮ್ಮ ಆತ್ಮಗಳನ್ನು ಶುದ್ಧೀಕರಣಗೊಳಿಸಲು 'ಯಾತನೆಯನ್ನು ಅನುಭವಿಸಲೇ ಬೇಕಾಗಿದೆ' ಎಂಬ ಕಲ್ಪನೆಗೆ ನಿರ್ಬಂಧಿತರಾಗಿದ್ದಾರೆ. 'ಒಂದು ಜೀವವು ಯಾತನೆ ಅನುಭವಿಸಿದ ಕಾರಣದಿಂದ, ಎಲ್ಲಾ ಜೀವಿಗಳು ರಕ್ಷಣೆ ಹೊಂದಿದರು ಹಾಗೂ ಇತರರ ಪಾಪಗಳಿಗಾಗಿ ತನ್ನ ಜೀವವನ್ನು ಬಲಿಕೊಟ್ಟರು' ಎಂಬ ವಿಶ್ವಾಸದ ಮೇಲೆ ಒಂದು ಇಡೀ ಧರ್ಮವು ನೆಲೆ ನಿಂತಿದೆ.

ಇಬ್ರಾಹೀಮರ ನಂತರ ಮೂಸಾ ಎಂಬ ಒಬ್ಬ ವ್ಯಕ್ತಿಯು, ಶಾಂತಿಪರತೆಯನ್ನು ದೃಢೀಕರಿಸುವಂತಹ ಕ್ರಮಬದ್ಧ ಜೀವನ ರೀತಿಯನ್ನು ನಿರೂಪಿಸುವ 'ಹತ್ತು ಅನುಶಾಸನ'ಗಳಿಗೆ ಬದ್ಧರಾಗಿದ್ದರು. ಈ ವ್ಯಕ್ತಿಯ ಶತ್ರುಗಳು, ಇವರಿಗರಿಯದೇ, 'ತಲ್ಮೂದ್' ಎಂಬ ಗ್ರಂಥವನ್ನು ಬರೆದರು. ಯಹೂದಿಗಳು ಇದನ್ನು ದೇವವಾಣಿ ಎಂದು ಕಾಣುತ್ತಾರೆ. ಇದು ಮೂಸಾರಿಗೆ ತಿಳಿದೇ ಇರದಂತಹ 'ಯಹೂದಿತ್ವ' ಎಂಬ ಧರ್ಮದ ಸಿದ್ಧಾಂತವಾಗಿ ಬಿಟ್ಟಿತು.

ಕ್ರಮೇಣ ಈಸಾರು ಅದೇ ಸಮುದಾಯಕ್ಕೆ ತೆರಳಿ, ಮೂಲ ಕಾನೂನಿಗೆ ಮರಳಲು ಕರೆ ನೀಡಿದರು. ತದ ನಂತರ ತಲ್ಮೂದಿನ ರಬ್ಬಿಗಳು (ಪುರೋಹಿತರು), ಈಸಾರ ಮೇಲೆ ಧರ್ಮನಿಂದನೆಯ ಆರೋಪವನ್ನು ಹೊರಿಸಿ, ಅವರನ್ನು ಶಿಲುಬೆಗೇರಿಸಲು ಆದೇಶಿಸಿದರು. ಇಲ್ಲಿ ಒಂದು ಸರಳ ಪ್ರಶ್ನೆಯು ಮನಸ್ಸಿನಲ್ಲಿ ಉದ್ಭವಿಸುತ್ತದೆ. ಈಸಾರು ರಬ್ಬಿಗಳ ವಿರುದ್ಧ ಪಾಪವೆಸಗಿದ್ದಕ್ಕೆ ಸಾವನ್ನಪ್ಪಿದರೋ ಅಥವಾ ಇತರರ ಪಾಪಗಳಿಗಾಗಿ ಮರಣ ಹೊಂದಿದರೋ? ಉತ್ತರವು ಪ್ರತಿ ಶಾಸ್ತ್ರಾಧಾರವಾದ ಮನಸ್ಸನ್ನು ತಳಮಳಗೊಳಿಸುತ್ತದೆ. ಅದೇನೇ ಇದ್ದರೂ, ಇವರ ನಂತರ ಒಂದು ಹೊಸ ಧರ್ಮವನ್ನು ಸೃಷ್ಟಿಸಲಾಯಿತು. ಮೂಸಾರ ಹಾಗೆಯೇ, ಈಸಾರಿಗೂ 'ಕ್ರೈಸ್ತತ್ವ' ಎಂಬ ಧರ್ಮದ ಬಗ್ಗೆ ತಿಳಿದೇ ಇರಲಿಲ್ಲ.

ತನ್ನ ಕರುಣೆಯಿಂದ ಸೃಷ್ಟಿಕರ್ತನು ಹಿಂದಿನ ಗ್ರಂಥಗಳನ್ನು ದೃಢೀಕರಿಸುವ ಅದೇ ಆಜ್ಞೆಗಳನ್ನು ಇನ್ನೊಮ್ಮೆ ಒಬ್ಬ ಅರಬಿಯಾದ ಮುಹಮ್ಮದ್ ಎಂಬ ಒಬ್ಬ ವ್ಯಕ್ತಿಗೆ ದಯಪಾಲಿಸಿದನು. ಆದರೆ ಅವರ ಜನರು, ಅರಬೀ ಪುರಾಣ ಮತ್ತು ಬುಡಕಟ್ಟು ಸಂಸ್ಕೃತಿಯೊಳಗೊಂಡ ಒಂದು ಹೊಸ ಧರ್ಮವನ್ನು ಸೃಷ್ಟಿಸಿದರು. ಮೂಸಾ ಹಾಗೂ ಈಸಾರಂತೆ ಮುಹಮ್ಮದರಿಗೂ 'ಇಸ್ಲಾಂ' ಎಂಬ *'ಧರ್ಮ'* ಬಗ್ಗೆ ಯಾವುದೇ ಕಲ್ಪನೆ ಇರಲಿಲ್ಲ. ಸಶಸ್ತ್ರ ಪಡೆಗಳು, ಪೋಲಿಸ್ ಜನರಲ್'ಗಳು, ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಮತ್ತು ವಿಜ್ಞಾನಿಗಳೂ ಸೇರಿದಂತೆ, ಧರ್ಮಾಂಧ ಮನಸ್ಸುಗಳಿಗೆ ಈ ರೀತಿಯ ವಿಚಾರಗಳು ಅಪ್ರಿಯವಾಗಿರಬಹುದು. ದುರದೃಷ್ಟವಶಾತ್ ಅದುವೇ ವಾಸ್ತವವಾಗಿದೆ.

ಸಂಘಟಿತ ಧರ್ಮವು ಒಂದೇ ದಿಕ್ಕಿನಲ್ಲಿ ಅಧಿಕಾರವನ್ನು ನಿಯಂತ್ರಿಸುವ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. (ಫಿರ್'ಔನ್) ಜನರನ್ನು ಧರ್ಮದ ಹೆಸರಲ್ಲಿ ಗುಲಾಮನಾಗಿಸಿದ್ದನು. ಇಂದು ಫಿರ್'ಔನನು, ವಿವಿಧ ರೀತಿಯ ಉಡುಪನ್ನು ಧರಿಸಿದ ರಬ್ಬಿಗಳ, ಪುರೋಹಿತರ, ಸನ್ಯಾಸಿಗಳ ಮತ್ತು ಮುಲ್ಲಾಗಳ ರೂಪದಲ್ಲಿದ್ದಾನೆ. (ಜನಸಾಮಾನ್ಯರಲ್ಲದೆಯೂ) ರಾಜರು ಮತ್ತು ರಾಣಿಗಳು, ಅಧ್ಯಕ್ಷರು, ಪ್ರಧಾನ ಮಂತ್ರಿಗಳು ಮತ್ತು ಅವರ ಅಧಿಕಾರಿಗಳು - ತಿಳಿದೋ ಅಥವಾ ತಿಳಿಯದೆಯೋ - ಇಂತಹ ಫಿರ್'ಔನುಗಳ ಗುಲಾಮರಾಗಿದ್ದಾರೆ. ಅವನ ತಂತ್ರವು ಇಂದಿಗೂ ಇಲ್ಲಿ ನೆಲೆ ನಿಂತಿದೆ. ನಾವು ಯೋಚಿಸಲು ತೊಡಗಬೇಕಾಗಿದೆ!

'ಶಾಂತಿ ಮತ್ತು ಸಾಮರಸ್ಯದಲ್ಲಿ ಒಗ್ಗಟ್ಟಾಗಿ ಹೇಗೆ ಜೀವಿಸಬಹುದು?' ಎಂಬ ಪರಿಣಾಮಕಾರಿ ಮಾರ್ಗದರ್ಶನವನ್ನು, ಇದುವರೆಗೆ ಯಾವುದೇ ಸಂಘಟಿತ ಧರ್ಮವು ಮಾನವಕುಲಕ್ಕೆ ಒದಗಿಸಿಲ್ಲ. ಧರ್ಮಗಳು ಬರೇ ಭಿನ್ನಭಿಪ್ರಾಯಗಳನ್ನು ಮತ್ತು ಅವ್ಯವಸ್ಥೆಯನ್ನು ಸೃಷ್ಟಿಸಿದೆ. ಅದರ ಸಿದ್ಧಾಂತಗಳು, ನಮ್ಮನ್ನು ಜೀವನದ ಬೆಳಕಿನಿಂದ ಆಳವಾದ ಪ್ರಪಾತಕ್ಕೆ ಕೊಂಡೊಯ್ಯುತ್ತದೆ. ಜನರು ಈಗ ಸಾಮೂಹಿಕ ವಶೀಕರಣ ಮತ್ತು ಮಾನಸಿಕ ಬಂಧನದಲ್ಲಿ ವಾಸಿಸುತ್ತಿದ್ದಾರೆ. ನಾವು ಹೊರೆಯನ್ನು ಇಳಿಸುವ ಮತ್ತು ನಮ್ಮನ್ನು ಬಂಧಿಸಿದ ಸರಪಳಿಗಳನ್ನು ಮುರಿಯುವ ಸವಾಲನ್ನು ಕೈಗೆತ್ತಿಕೊಳ್ಳುವ ಧೈರ್ಯವನ್ನು ಕಳೆದುಕೊಂಡಿದ್ದೇವೆಯೇ?

ಈ ಪುಸ್ತಕವು, ಮೂರು ಪ್ರಮುಖ ಸಂಘಟಿತ ಧರ್ಮಗಳಲ್ಲಿ ಒಂದು ಧರ್ಮದ, ಅದರ ಮೂಲಗ್ರಂಥದ ಆಧಾರದಲ್ಲಿರುವ ಒಂದು ವಿಮರ್ಶಾ ಕೃತಿಯಾಗಿದೆ. ನಾವು ಇಂದು ತಿಳಿದಿರುವ ಮತ್ತು ಕಾಣುತ್ತಿರುವ ಹಾಗೆ ಒಂದು ಪ್ರವಾದಿಯ ಶತ್ರುಗಳು 'ಪದಗಳನ್ನು' ವಿಕೃತಗೊಳಿಸಿ 'ಇಸ್ಲಾಂ' ಎಂಬ *ಧರ್ಮ*ವನ್ನು ರಚಿಸಿದ ಪ್ರಕ್ರಿಯೆಯನ್ನು ಬಹಿರಂಗ ಪಡಿಸುತ್ತದೆ. ಯಹೂದಿ ಧರ್ಮ ಮತ್ತು ಕ್ರೈಸ್ತ ಧರ್ಮದ ಹಾಗೆ ಧಾರ್ಮಿಕರು 'ಅರಬೀ ಧರ್ಮ'ದ ಆವಿಷ್ಕಾರವನ್ನು ಮಾಡಿದರು. ನಿಸ್ಸಂಶಯವಾಗಿ, ನನ್ನ ಈ ಸಂಶೋಧನೆಯು, ವಿಶ್ವದ ಮುಸ್ಲಿಮರನ್ನು ಆಘಾತಗೊಳಿಸುತ್ತದೆ, ಆದರೂ **ಅವರಲ್ಲಿ ವಿಮರ್ಶಾತ್ಮಕ ಚಿತ್ತವಿರುವರನ್ನು ಇದು ಬಂಧನದಿಂದ ಮುಕ್ತರನ್ನಾಗಿಸುತ್ತದೆ. ಇದು ಕೇವಲ ಕುರ್'ಆನಿನ ಆಧಾರದ ಮೇಲೆ ನೈಜ್ಯ ಇಸ್ಲಾಮನ್ನು ಅನ್ವೇಷಿಸುವವರಿಗಾಗಿ ಬರೆಯಲಾಗಿದೆ.**

ಪರಿಚಯ

ವಿವೇಚನೆ ಮತ್ತು 'ನಂಬಿಕೆ'ಯ ನಡುವಿನ ಮುಖಾಮುಖಿಯು ಯಾವಾಗಲೂ ಮನುಷ್ಯನಿಗೆ ಚಿಂತನೆಯ ಆಹಾರವನ್ನು ಒದಗಿಸಿದೆ.

ಮಾನಸಿಕ ಬಂಧನ ಲೇಖನವು 'ಇಸ್ಲಾಮಿನ'[1] ಬಗ್ಗೆ ಬಹಳ ವರ್ಷಗಳ ಆಳವಾದ ಚಿಂತನೆಯ ಫಲವಾಗಿದೆ ಮತ್ತು *ಇಸ್ಲಾಂನ* ವಿರುದ್ಧ ಜಾತ್ಯತೀತ ಪಾಶ್ಚಿಮಾತ್ಯರು, ಹಿಂದೂಗಳು ಮತ್ತು ಯಹೂದಿಗಳು ಸೇರಿದಂತೆ ಮುಸ್ಲಿಮೇತರರಲ್ಲಿರುವ ವ್ಯಾಪಕ ಹಗೆತನವನ್ನು ಹಾಗೂ ಮುಸ್ಲಿಮರ ವೈಫಲ್ಯದ ಕಾರಣವನ್ನು ತಿಳಿಯುವ ಪ್ರಾಥಮಿಕ ಉದ್ದೇಶದಿಂದ ಬರೆಯಲಾಗಿದೆ.

ಇಂತಹ ಪೂರ್ವಾಗ್ರಹಗಳು ತಪ್ಪಾಗಿ ಪ್ರಸ್ತಾಪಿಸಿಲ್ಲವೆಂದು ನಾನು ಮನಗಂಡಿದ್ದೇನೆ ಮತ್ತು ಕುರ್'ಆನಿನ ಉಲ್ಲೇಖನೆಗಳ ಮೂಲಕ ನಾನು ಅದನ್ನು ಸಾಬೀತು ಪಡಿಸುತ್ತೇನೆ. ಇಂದು 'ಮುಸ್ಲಿಮರು' ಎಂದು ಹೇಳಿಕೊಳ್ಳುವವರು ವಾಸ್ತವದಲ್ಲಿ ಸ್ವಾಧೀನಿಸಿರುವುದು, ಒಂದು ಆವಿಷ್ಕಾರಿತ ಅರಬೀ ಧರ್ಮ[2]ವನ್ನಾಗಿದೆ ಎಂಬುವುದು ಓದುಗರಿಗೆ ಆಶ್ಚರ್ಯ ತರಬಹುದು. ನಿಜವಾದ ದೇವನ ಕಡೆಗೆ ಮರಳುವ ತನಕ, ಬಹುಶಃ ಈ ನಿರಂತರ ಯಾತನೆ ಮತ್ತು ಅವಮಾನಗಳಿಗೆ ಒಳಗಾಗಲು ಅವರು ಅರ್ಹರಾಗಿದ್ದಾರೆ. ನಿಜವಾದ ಇಸ್ಲಾಮಿನ ನಿಖರವಾದ ಚಿತ್ರವನ್ನು ನೀಡುವ ಈ ಪುಸ್ತಕವು, ಒಂದು ಮಹಾ ಅಸತ್ಯವನ್ನು ಬಯಲು ಪಡಿಸುತ್ತದೆ ಮತ್ತು ಒಂದು ಮಹಾ ಸತ್ಯವನ್ನು ಬಹಿರಂಗ ಪಡಿಸುತ್ತದೆ. ಇಲ್ಲದಿದ್ದಲ್ಲಿ ಬಹುಶಃ ಇವೆರಡೂ ಮರೆಯಾಗಿಯೇ ಉಳಿಯುತಿತ್ತು.

ನಾವು ತಿಳಿದಿರುವ ಮತ್ತು ಇಂದು ಕಾಣುವ ಇಸ್ಲಾಂ, ಕುರ್'ಆನಿನ ಕಲ್ಪನೆಗೆ ಹೋಲುವುದಿಲ್ಲ. ಓದುಗನ ವೈಯ್ಯುಕ್ತಿಕ ನಂಬಿಕೆಗಳು ಏನೇ ಇರಲಿ, ಇಸ್ಲಾಮಿನ ವಿಷಯಕ್ಕೆ ಸಂಬಂಧಿಸಿದಂತೆ, ಸಾಮಾನ್ಯವಾಗಿ ಹಾಗೂ

---

[1] ಇಸ್ಲಾಂ ಎಂಬ ಪದವು ಅರಬೀ ಮೂಲಪದವಾದ *ಸ-ಲ-ಮ* ಅಥವಾ *ಸಲಾಮ್* (ಶಾಂತಿ)ನಿಂದ ಪಡೆಯಲಾಗಿದೆ. *ಸಲಾಂ* ಎಂದರೆ ಶಾಂತಿ, *ಮುಸ್ಲಿಂ* ಎಂದರೆ ಶಾಂತಿಯಲ್ಲಿರುವವನು ಮತ್ತು ಇಸ್ಲಾಂ ಎಂದರೆ 'ಶಾಂತಿಪರತೆ'. ಒಬ್ಬನು ಬರೇ ಮುಸ್ಲಿಂ ಆಗುವುದರಿಂದ ನಿಜವಾದ ವಿಶ್ವಾಸಿ ಅಥವಾ *ಮು'ಮಿನ್* ಆಗುವುದಿಲ್ಲ, (ಅಲ್ಲಾಹನ ಇಚ್ಛೆಯ ಮೇರೆಗೆ) ನಂಬಿಕೆಯು ಆ ವ್ಯಕ್ತಿಯ ಹೃದಯವನ್ನು ಪ್ರವೇಶಿಸಬೇಕಾಗಿದೆ (49:14).

[2] 'ಅರಬೀ ಧರ್ಮ' ಎಂಬ ಪದ ಈ ಪುಸ್ತಕದುದ್ದಕ್ಕೂ ಬಳಸಲಾಗುತ್ತದೆ. ಏಕೆಂದರೆ, ಅರಬೇತರ 'ಮುಸ್ಲಿಮರು'ರಿಗೆ ಬಹುತೇಕ ಎಲ್ಲದರಲ್ಲೂ ಅರಬೀ ಪದಗಳನ್ನು ಬಳಸಲು ಒತ್ತಾಯ ಪಡಿಸಲಾಗುತ್ತದೆ. ಅಲ್ಲಾಹನೊಂದಿಗೆ ಪ್ರಾರ್ಥಿಸುವುದು, ಅವನನ್ನು ಹೊಗಳುವುದು ಮತ್ತು ವೈಭವೀಕರಿಸುವುದನ್ನೂ ಅರಬಿಯಲ್ಲೇ ಮಾಡಬೇಕೆಂದಾಗಿದೆ. '*ನಿಮ್ಮ ಮೇಲೆ ಶಾಂತಿ ಇರಲಿ*' ಎಂಬ ಶುಭಾಶಯ ವಾಕ್ಯವನ್ನೂ ಅರಬಿಯಲ್ಲೇ ಉಚ್ಚರಿಸಬೇಕೆಂದಾಗಿದೆ. ಒಬ್ಬ ಅರಬೀ ಪ್ರವಾದಿಯ ವೈಯಕ್ತಿಕ ಅಭ್ಯಾಸಗಳು ಸೇರಿದಂತೆ, ಅವರ ವಸ್ತ್ರೋಧ್ಧಾರಣೆಯ, ನಿಂತುಕೊಳ್ಳುವ, ಮಲಗುವ, ತಿನ್ನುವ ಮತ್ತು ಹಲ್ಲುಜ್ಜುವ ರೀತಿಗಳನ್ನು ಕೂಡಾ ಎಲ್ಲಾ 'ಮುಸ್ಲಿಮ'ರಿಗೆ (ಅವರ ಜನಾಂಗೀಯ ಮೂಲ ಮತ್ತು ಭಾಷೆಯನ್ನು ಗಣನೆಗೆ ತೆಗೆಯದೇ), ಎಲ್ಲಾ ವಿಷಯಗಳಲ್ಲೂ ಅನುಸರಣೆ ಮಾಡಲು ಅರಬರು ಒತ್ತಾಯಿಸುತ್ತಾರೆ.

ನಿರ್ಭರವಾಗಿ ನಿರ್ಲಕ್ಷಿಸಿದಂತಹ ಅನೇಕ ಆಸಕ್ತಿದಾಯಕ ಸತ್ಯಾಂಶಗಳನ್ನು ಅವನು ಅಥವಾ ಅವಳು ಇದರಲ್ಲಿ ಕಾಣಬಹುದು. **ಕೇವಲ ಕುರ್‌ಆನಿನ ಪಠ್ಯ**ದ ಆಧಾರದ ಮೇಲೆ, ಯಾವುದೇ ಮೂಢನಂಬಿಕೆ ಅಥವಾ ಧಾರ್ಮಿಕ ಪಕ್ಷಪಾತವಿಲ್ಲದೆ - ಯಾವುದು ಇಸ್ಲಾಂ, ಯಾವುದು ಅಲ್ಲ - ಎಂಬ ತುಲನೆಯನ್ನು ಮಾಡುವ ಸಾಮರ್ಥ್ಯವನ್ನು, ಈ ಲೇಖನವು ಓದುಗರಿಗೆ ನೀಡುತ್ತದೆ ಎಂದು ಆಶಿಸಲಾಗಿದೆ.

ನಾವು ಇಂತಹ ಕೆಲಸವನ್ನು ಕೈಗೆತ್ತಿಕೊಳ್ಳುವಾಗ - ಅಲ್ಲಾಹನ ಮತ್ತು ಅವನ ಪ್ರವಾದಿಯ ವಿರುದ್ಧ ಕುತಂತ್ರವನ್ನೆಸಗಿ, *ದೀನನ್ನು* (ಅಥವಾ ಜೀವನದ ಕ್ರಮಬದ್ಧ ರೀತಿಯನ್ನು) ಭ್ರಷ್ಟಗೊಳಿಸಿದ ಹಾಗೂ ಅದನ್ನು ಬರೇ ಒಂದು ಮೂರ್ತಿ[3]ಯನ್ನು ಆರಾಧಿಸುವ ಧರ್ಮವನ್ನಾಗಿ ಕಡಿತಗೊಳಿಸಿದ ಅರಬರನ್ನು - ಸ್ವತಃ ಕುರ್‌ಆನಿನ ಆಧಾರದಲ್ಲೇ ತಪ್ಪಿತಸ್ಥರನ್ನಾಗಿ ನಾವು ಕಾಣಬಹುದು. ಪರಿಣಾಮವಾಗಿ, ಇದನ್ನೇ 'ಇಸ್ಲಾಂ ಧರ್ಮ' ಎಂದು ಪರಿಚಯಿಸಲಾಯಿತು. ದುರದೃಷ್ಟವಶಾತ್, ಪ್ರಸ್ತುತವಾಗಿ ವಿಶ್ವದಾದ್ಯಂತ ಹೀಗೆಯೇ ಅರ್ಥೈಸಿಕೊಳ್ಳಲಾಗಿದೆ.

ಸಂಕ್ಷಿಪ್ತವಾಗಿ – ಕುರ್‌ಆನ್ ಎಂಬುವುದು ಧರ್ಮದ ಬಗ್ಗೆ ಇರುವ ಗ್ರಂಥವಲ್ಲ. ಇಸ್ಲಾಂ ಎಂಬುವುದು 'ಧರ್ಮ' ಎಂದಲ್ಲ. ಇಸ್ಲಾಂ ಎಂದರೆ ಏಕದೇವನಿಂದ ಸಮ್ಮತಿಸಲ್ಪಟ್ಟ ಅಥವಾ ಅನುಮೋದಿಸಲ್ಪಟ್ಟ ***'ಶಾಂತಿಯುತ ಅಥವಾ ಆನಂದಮಯ'*** ಜೀವನದ ಒಂದು ರೀತಿ (ದೀನ್) ಆಗಿದೆ. ಈ ಅಧ್ಯಯನವು ಪುಷ್ಟೀಕರಿಸುವ ನಿಲುವು, ವಿವರವಾಗಿದೆ ಮತ್ತು ಸವಿಸ್ತಾರವಾಗಿದೆ ಹಾಗೂ ಇದನ್ನು ನಿಜವಾದ ಇಸ್ಲಾಮನ್ನು ಪರಿಶೋಧಿಸಲು ಆಗ್ರಹಿಸುವವರ ಪ್ರಯೋಜನಕ್ಕಾಗಿ ಪ್ರಕಟಿಸಲಾಗಿದೆ.

ಕುರ್‌ಆನ್ ನನ್ನ ಧಾರ್ಮಿಕ ನಂಬಿಕೆಯ ಸರ್ವೋಚ್ಚ ಮೂಲ ಮತ್ತು ಮಾರ್ಗದರ್ಶನವಾಗಿದೆಯೆಂದು, ಜನ್ಮತಾ ಮುಸ್ಲಿಮನಾದ ನನಗೆ ಬಾಲ್ಯದಿಂದಲೇ ಹೇಳಲಾಗಿತ್ತು. ಆ ಮನವರಿಕೆಯ ಹೊರತಾಗಿಯೂ, ಕುರ್‌ಆನನ್ನು ಅದರ ಮಹತ್ವ ಮತ್ತು ಅರ್ಥವನ್ನು ಕಡೆಗಣಿಸಿ, ಬರೇ ಅರಬೀ ಭಾಷೆಯಲ್ಲಿ ಅದನ್ನು ಓದಲು ನನಗೆ ಬೋಧಿಸಲಾಗಿತ್ತು. ನನ್ನ ಹತ್ತನೇ ವಯಸ್ಸಿನಲ್ಲಿಯೇ, ಕುರ್‌ಆನನ್ನು ಅರಬಿಯಲ್ಲಿ ಸಲೀಸಾಗಿ ಪಾರಾಯಣ ಮಾಡುತ್ತಿದ್ದ ಕಾರಣ, ನಾನು ನನ್ನ ಕುಟುಂಬದ ಹೆಮ್ಮೆಯಾಗಿದ್ದೆ. ಅಲ್ಪಸ್ವಲ್ಪ ಎಡವಟ್ಟು ಆಗುತಿತ್ತು. ನಾನು ಏನು ಓದುತ್ತಿದ್ದೇನೆಂದು ನನಗೆ ಗೊತ್ತಿರಲಿಲ್ಲ. ಅರ್ಥವರಿಯದೆ ಶ್ಲೋಕಗಳನ್ನು ಹಾಡುವಂತೆ, ಕುರ್‌ಆನನ್ನು ಬರೇ ಓದುವುದು ಸಹ ಒಂದು ಧಾರ್ಮಿಕ ಆಚರಣೆ ಎಂದು ತಿಳಿದಿದ್ದೆ.

---

[3] ಕುರ್‌ಆನಿನ ಪ್ರಕಾರ: ಮನುಷ್ಯರು (7:194), ಪ್ರವಾದಿಗಳು ಮತ್ತು ಸಂದೇಶವಾಹಕರು (3: 79-80), ಧಾರ್ಮಿಕ ಮುಖಂಡರು (9:31), ಇಮಾಮರು ಅಥವಾ ಮುಲ್ಲಾಗಳು (39:3), ಮರಣಹೊಂದಿದವರು (16:20-21), ಮೂರ್ತಿಗಳು (2:93), ಸ್ವಂತ ಸೊತ್ತು (18:42), ತನ್ನ ಅಹಂ (25:43), ಜಿನ್ನ್'ಗಳು (6:100) ಮತ್ತು ಒಂದು ಧರ್ಮವನ್ನು ಅನುಸರಿಸುವುದು (30:31-32) - ಇತ್ಯಾದಿಗಳನ್ನು 'ಆರಾಧನೆ, ಪೂಜೆ ಅಥವಾ ಅವುಗಳ ಮೇಲೆ ಭರವಸೆ' ಮಾಡಲ್ಪಟ್ಟಾಗ – ಅವುಗಳು 'ಮೂರ್ತಿ'ಗಳಲ್ಲಿ ಒಳಪಡುತ್ತವೆ. ಮತ್ತು ಆ ಕರ್ಮವು 'ಮೂರ್ತಿ-ಆರಾಧನೆ, ಮೂರ್ತಿಪೂಜೆ ಅಥವಾ *ಶಿರ್ಕ್*' ಆಗುತ್ತದೆ. ಮತ್ತು ಆ ಕ್ರಿಯೆಯನ್ನು ಮಾಡುವವರು 'ಮೂರ್ತಿ-ಆರಾಧಕರು, ಮೂರ್ತಿಪೂಜಕರು ಅಥವಾ *ಮುಶ್ರಿಕರು*' ಆಗುತ್ತಾರೆ.

1980 ರಲ್ಲಿ ಮಕ್ಕಾದ ತೀರ್ಥಯಾತ್ರೆಯಿಂದ ಮರಳಿ ಬಂದ ನಂತರ ಮೊದಲ ಬಾರಿಗೆ ನಾನು ಕುರ್‌ಆನನ್ನು ಗಂಭೀರವಾಗಿ ಪರಿಶೀಲಿಸಿದೆ. ನಾನು ಒಂದು ಮುಸ್ಲಿಮನಾಗಿ ನನ್ನ ಹೊಣೆಗಾರಿಕೆಯನ್ನು ಪೂರೈಸಿದೆ ಎಂದು ಭಾವಿಸಿದ್ದೆ. ಆದಾಗ್ಯೂ, ಅಧ್ಯಯನ ಮತ್ತು ಪರ್ಯಾಲೋಚನೆಯ ನಂತರ, ಮಕ್ಕಾ ಸಂದರ್ಶನದಿಂದ ನಾನು ಮಾತ್ರವಲ್ಲ, ಯಾರೂ ಕೂಡಾ[4] ಅಲ್ಲಾಹನ ಯಾವುದೇ ಆಜ್ಞೆಯನ್ನು ನೆರವೇರಿಸಿಲ್ಲ ಎಂದು ಮನವರಿಕೆಯಾಯಿತು. ಮುಂದುವರಿದಂತೆ ಇದು ಸ್ಪಷ್ಟವಾಗುತ್ತಾ ಹೋಯಿತು.

ಈ ಅಧ್ಯಯನವನ್ನು ಆರಂಭಿಸುವ ಮೊದಲು, ನಾನು ನನ್ನಲ್ಲಿಯೇ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳಿದೆ:

- ಅರಬೀ ಮಣ್ಣಿನ ಮೇಲೆ ಮಾನವರು ಕಟ್ಟಿದ ಮನೆಯಲ್ಲಿ ಅಲ್ಲಾಹನು ವಾಸಿಸಲು ಆಯ್ದುಕೊಂಡಿದ್ದಾನೆಂಬುವುದು ನಿಜವೇ?

- ಅವನಿಗೆ ವಾಸಿಸಲು ಒಂದು ಮನೆಯ ಅಗತ್ಯವಿದೆಯೇ? ಇಲ್ಲದಿದ್ದಲ್ಲಿ, ಅವರು ಅದನ್ನು 'ಅಲ್ಲಾಹನ ಮನೆ' ಎಂದು ಏಕೆ ಕರೆಯುತ್ತಾರೆ? ಅಥವಾ ಅದು ಬರೇ ಮಾತಿನ ರೂಪವೇ?

- ಒಂದು ಪರ್ವತದ ಶಿಲೆಗಳಿಂದ ರಚಿಸಿದ ಖಾಲಿ ಚೌಕಾಕಾರದ ಆಯಕಟ್ಟಿಗೆ ನಾನು ಏಕೆ ಬಗ್ಗುವುದು, ಸಾಷ್ಟಾಂಗವೆಸಗುವುದು ಹಾಗೂ ಸುತ್ತು ಹೊಡೆಯುವುದು? ಮತ್ತು ಅದಕ್ಕೆ ಅಳವಡಿಸಿರುವ ಕಪ್ಪು ಕಲ್ಲನ್ನು ನಾನು ಏಕೆ ಚುಂಬಿಸುವುದು?

- ಸಾವಿರಾರು ಮೈಲಿ ದೂರ ವಾಸಿಸುತ್ತಿದ್ದರೂ, ನಾನು ಪ್ರತಿದಿನವೂ ಐದು ಬಾರಿ ಒಂದು ಶಿಲಾನಿರ್ಮಿತ ಕಟ್ಟಡಕ್ಕೆ ಮುಖಮಾಡಿ ಏಕೆ ವಿಧ್ಯುಕ್ತವಾಗಿ ಪ್ರಾರ್ಥಿಸಬೇಕು?

ಈ ರೀತಿಯ ಪ್ರಶ್ನೆಗಳು ನನ್ನನ್ನು ಕಳವಳಗೊಳಿಸಿತು ಮತ್ತು ಅದರ ಬುಡವನ್ನು ಅರಿಯಲು ಪ್ರೇರೇಪಿಸಿತು. ನಾನು ಮಕ್ಕಾದಲ್ಲಿ ಮಾಡಿದ ಕಾರ್ಯಗಳ, ಮದೀನದಲ್ಲಿ ನಡೆಸಿದ ಗೋರಿ ಸಂದರ್ಶನದ[5] ವಿವರಣೆಯನ್ನು ಹುಡುಕುವ ಉತ್ಸಾಹದಿಂದ ಕುರ್‌ಆನಿನ ಪಠ್ಯಗಳನ್ನು ಪರಿಶೀಲಿಸಿದೆ.

ನೂಹರ, ಇಬ್ರಾಹೀಮರ ಮತ್ತು ಅವರ ಮಕ್ಕಳಾದ ಇಸ್ಹಾಕ್ ಹಾಗೂ ಇಸ್ಮಾಯೀಲರ ಮತ್ತು ಯಾಕೂಬರ ಮತ್ತು ಅವರ ಮಕ್ಕಳಾದ ಯೂಸುಫರ ಹಾಗೂ ಅವರ ಸಹೋದರರ ಜೀವನದ ಬಗ್ಗೆ ಕುರ್‌ಆನಿನಲ್ಲಿ ವ್ಯಾಖ್ಯಾನಿಸಲಾಗಿದೆ ಎಂದು ಅದರ ಅನುವಾದದ ಮೂಲಕ ತಿಳಿದಿದ್ದೆ. ಈ ಗ್ರಂಥವು ದಾವೂದ್ ಮತ್ತು ಅವರ ಮಗ ಸುಲೈಮಾನ್, ಝಕರಿಯ್ಯಾ ಮತ್ತು ಅವರ ಮಗ ಯಹ್ಯಾ, ಮೂಸಾ ಮತ್ತು ಅವರ ಸಹೋದರ

[4] ಅರಬೀ ಧರ್ಮದಲ್ಲಿನ ಐದು ಅಗತ್ಯಗಳಲ್ಲಿ ಒಂದಾದ ಮಕ್ಕಾ ಪ್ರಯಾಣವನ್ನು ಪೂರೈಸುವುದು ಸ್ವರ್ಗದ ಪ್ರವೇಶಕ್ಕೆ ಅವಶ್ಯಕವಾಗಿದೆ.

[5] 'ಇಸ್ಲಾಂ ಧರ್ಮ' ದಲ್ಲಿ ಭೋಧಿಸಲಾದ ಆಚರಣೆ ಮತ್ತು ಜವಾಬ್ದಾರಿಗಳ ಪರಿಚಯವಿರುವ ಓದುಗರು ಅರಿಯಬೇಕೇನೆಂದರೆ, ಇಲ್ಲಿ ಸೂಚಿಸಲಾದ ಕ್ರಿಯೆಗಳು ಮುಸ್ಲಿಮರಿಗೆ ದೈವ-ಬದ್ಧತೆಯ ಭಾಗವಾಗಿ ನಡೆಸಬೇಕಾದ ಕರ್ಮಗಳೆಂದು ಕಲಿಸಲಾಗಿದೆ.

ಹಾರೂನ್ ಮತ್ತು ಈಸಾ ಹಾಗೂ ಅವರ ತಾಯಿ ಮರ್ಯಮರ ಬಗ್ಗೆಯೂ ವಿವರಗಳನ್ನು ನೀಡಿದೆಯೆಂದು ತಿಳಿದಿದ್ದೆ. ಆದರೆ, *ಉಮ್ಮಿ*[6]ಯಾದ, ದಿವ್ಯವಾಣಿಯನ್ನು ನೀಡಲ್ಪಟ್ಟ ಪ್ರವಾದಿ ಮುಹಮ್ಮದರ ಬಗ್ಗೆ ಬಹಳ ಕಡಿಮೆ ಮಾಹಿತಿಯು ಕುರ್‌ಆನಿನಲ್ಲಿ ಉಲ್ಲೇಖವಾಗಿರುವುದಾಗಿ ಕಂಡುಬರುತ್ತದೆ. ಲಕ್ಷಾಂತರ ಜನರು ಆರಾಧಿಸುವಂತಹ ಈ ಮನುಷ್ಯನ ವಿವರವಾದ ಜೀವನ ಇತಿಹಾಸದ ಬಗ್ಗೆ ಕುರ್‌ಆನಿನಲ್ಲಿ ಮನಃಪೂರ್ವಕವಾಗಿ ಹುಡಿಕಿದರೂ, ಅವರು ಅಲ್ಲಾಹನ ಪ್ರವಾದಿಯಾಗಿ ಕಾರ್ಯಪ್ರವರ್ತಿಸುವ ಅವಧಿಯಲ್ಲಿ ಅವರ ಹತಾಶೆ ಮತ್ತು ನಿರಾಸೆಗಳನ್ನು ಚಿತ್ರಿಸುವ ವಚನಗಳು ಮಾತ್ರ ಕಾಣಸಿಗುತ್ತದೆ. ಅವರ ಮೊದಲು ಬಂದಂತಹ ಪ್ರವಾದಿಗಳ ಹಾಗೆಯೇ, ತನ್ನ ಗ್ರಂಥದ ಬಗ್ಗೆಯೂ ಜನರಿಗೆ ಮನವರಿಕೆ ಮಾಡಿಸುವ ಧ್ಯೇಯದಲ್ಲಿ ಹತಾಶಗೊಂಡ ಒಂದು ಪ್ರವಾದಿಯ ಚಿತ್ರಣವು ಮೂಡಿ ಬರುತ್ತದೆ. ಹೀಗಿರುವಾಗ, ಈ ಪ್ರವಾದಿಯವರು ಪರಲೋಕದಲ್ಲಿ ಈ ತರಹ ಹೇಳುವುದರಲ್ಲಿ ಏನೂ ಅಚ್ಚರಿಯಿಲ್ಲ:

> ಪ್ರವಾದಿಯರು ಹೇಳುವರು, 'ಓ ನಾದನೇ, ನನ್ನ ಜನರು ಈ ಕುರ್‌ಆನನ್ನು ತ್ಯಜಿಸಿದರು' (25:30)

ನಾನು ಮೂಲ ಅರಬೀ ಕುರ್‌ಆನಿನ ಅಧ್ಯಯನವನ್ನು ಮಾಡುವ ಮೊದಲು, ಅನುವಾದಗಳ ಮೇಲೆ ಹೆಚ್ಚು ಅವಲಂಬಿತನಾಗಿದ್ದೆ. ಆದರೆ, ಅವೆಲ್ಲವೂ ಹಳೆಯ ವಿದ್ವಾಂಸರ ಅರ್ಥವಿವರಣೆಗಳನ್ನು ಪ್ರತಿಬಿಂಭಿಸುತಿತ್ತು. ತಕ್ಷಣ ವ್ಯಾಖ್ಯಾನ ಮತ್ತು ಅನುವಾದಗಳಲ್ಲಿ ಹಲವಾರು ಭಿನ್ನತೆಗಳಿರುವ ಮತ್ತು ವಿರೋಧಾತ್ಮಕ ಹೇಳಿಕೆಗಳನ್ನು ನಿರಾಶೆಗೊಳ್ಳುತ್ತಾ ಅರಿತುಕೊಂಡೆ. ಕೆಳಕಂಡ 2:125 ವಚನದ ಅವೈಚಾರಿಕ ಚಿತ್ರಣವು ನನ್ನನ್ನು ತುಂಬಾ ತಳಮಳಗೊಳಿಸಿತು. ಆ ಚರಣದ ಒಂದು ನಮೂನೆಯ ಚಿತ್ರಣವು ಹೀಗಿದೆ:

> "ನಾವು ಆ ಭವನ (ಕಅಬಾ)ವನ್ನು ಜನರಿಗೆ ಕೇಂದ್ರವಾಗಿ ಹಾಗೂ ಶಾಂತಿಯ ಸ್ಥಾನವನ್ನಾಗಿ ನಿಶ್ಚಯಿಸಿದ ಸಂದರ್ಭ(ವನ್ನು ಸ್ಮರಿಸಿರಿ). 'ಇಬ್ರಾಹೀಮರು ಆರಾಧನೆಗಾಗಿ ನಿಲ್ಲುವ ಸ್ಥಾನವನ್ನು ನೀವು ಸ್ಥಿರವಾದ ನಮಾಝಿನ ತಾಣವನ್ನಾಗಿಸಿಕೊಳ್ಳಿರಿ' ಎಂದು ನಾವು ಜನರಿಗೆ ಆಜ್ಞಾಪಿಸಿದ್ದೆವು. 'ನನ್ನ ಈ ಮನೆಯ ಪ್ರದಕ್ಷಿಣೆ ಮತ್ತು ಬಾಗುವವರಿಗಾಗಿ ಹಾಗೂ ಸಾಷ್ಟಾಂಗವೆರಗುವವರಿಗಾಗಿ ನಿರ್ಮಲವಾಗಿರಿಸಿರಿ' ಎಂದು ಇಬ್ರಾಹೀಮ್ ಮತ್ತು ಇಸ್ಮಾಯೀಲರಿಗೆ ನಾವು ತಾಕೀತು ಮಾಡಿದ್ದೆವು." (2:125)

ಎಲ್ಲಾ 'ಸಾಂಪ್ರದಾಯಿಕ' ವಿದ್ವಾಂಸರು, 'ಅಲ್ಲಾಹನು, ಮನೆಯೊಂದನ್ನು ತನ್ನದಾಗಿಸಿಕೊಂಡಿದ್ದಾನೆ ಮತ್ತು ಜನರು ಈ ನಿರ್ದಿಷ್ಟ ಮನೆಯ ಮೂಲಕ ಅವನನ್ನು ಆರಾಧಿಸಬೇಕು' ಎಂಬ ನಂಬಿಕೆಯನ್ನು ಹೊಂದಿದ್ದಾರೆ. ನನಗೆ ಇದರಲ್ಲಿ ಏನೋ ತಪ್ಪಿದೆಯೆಂದು ತೋಚಿತು. ನಂತರ ನಾನು ಅರಬೀ ಭಾಷೆಯನ್ನು

[6] ಉಮ್ಮೀ ಎಂದರೆ, ಅಲ್ಲಾಹನ ಗ್ರಂಥದ ಪೂರ್ವಜ್ಞಾನ ಇಲ್ಲದ ಒಬ್ಬ ವ್ಯಕ್ತಿ, ಜನಾಂಗ ಅಥವಾ ಜನರು (ref. 2:78). ಅವರು ಅನಕ್ಷರಸ್ಥರಾಗಿರಲು ಸಾಧ್ಯವಿಲ್ಲ. ಗ್ರಂಥವನ್ನು ಪಡೆಯಲು ಆಯ್ಕೆಯಾಗಿರದ ಕಾರಣ ಯಹೂದಿಗಳು ಇತರ ಜನರನ್ನು ಉಮ್ಮಿಗಳೆಂದು ಪರಿಗಣಿಸುತ್ತಾರೆ.

ಅರ್ಥಮಾಡಿಕೊಳ್ಳಲು ಮತ್ತು ಗ್ರಂಥದ ಅಸಲೀ ಪದಗಳನ್ನು ಓದಲು ತೊಡಗಿದಾಗ ಕೆಲವು ವಚನಗಳ ನಿಖರವಾದ ಅರ್ಥಗಳು ನನಗೆ ಮನಗಂಡಿತು ಮತ್ತು ನನ್ನ ಅನುಮಾನಗಳು ದೃಢಗೊಂಡವು.

ಕುರ್‌ಆನನ್ನು ಅರಿತುಕೊಳ್ಳುವ ಮತ್ತು ಅದನ್ನು ಸಮೀಪಿಸುವ ನನ್ನ ತತ್ವವು ಸರಳವಾಗಿದೆ. ಕುರ್‌ಆನ್ ಹಲವು ಸ್ಥಳಗಳಲ್ಲಿ ಪದ (ಕಲಿಮಾತ್)ಗಳಿಗೆ ಪ್ರಾಧಾನ್ಯತೆ ಕೊಡುತ್ತದೆ. ಕುರ್‌ಆನ್ ಒಂದು ವಿಶ್ವಾಸಾರ್ಹ ಪಠ್ಯವಾಗಿದೆ ಮತ್ತು ಉತ್ತರಕ್ಕಾಗಿ ನಾವು ಅದನ್ನು ಗಂಭೀರತೆಯಿಂದ ಸಮೀಪಿಸಬೇಕಾಗುತ್ತದೆ:

- ಆದಮರು ಅಲ್ಲಾಹನಿಂದ ಪದಗಳನ್ನು ಪಡೆದುಕೊಂಡರು (2:37 ನೋಡಿರಿ)
- ಇಬ್ರಾಹೀಮರು ಅಲ್ಲಾಹನ ಪದಗಳೊಂದಿಗೆ ಪರೀಕ್ಷಿಸಲ್ಪಟ್ಟರು (2:124 ನೋಡಿರಿ)
- ಅಲ್ಲಾಹನು ಮೂಸಾರಿಗೆ ತನ್ನ ಪದಗಳನ್ನು ಅವತೀರ್ಣಗೊಳಿಸಿದನು (7:144 ನೋಡಿರಿ)
- ಯಹೂದಿಗಳು ಅಲ್ಲಾಹನ ಪದಗಳ ಅರ್ಥವನ್ನು ವಿಕೃತಗೊಳಿಸಿದರು (5:13 ನೋಡಿರಿ)
- ಯಹ್ಯಾರು ಪದಗಳ ಮೂಲಕ ಸ್ಪಷ್ಟನೆ ನೀಡಿದರು (3:39 ನೋಡಿರಿ)
- ಮರ್ಯಮರು ಅಲ್ಲಾಹನ ಪದಗಳೊಂದಿಗೆ ಗ್ರಂಥವನ್ನು ದೃಢೀಕರಿಸಿದರು (66:12 ನೋಡಿರಿ)
- ಮರ್ಯಮರ ಮಗ ಈಸಾರು, ಸಂದೇಶವಾಹಕರು ಹಾಗೂ ಅಲ್ಲಾಹನ ಪದಗಳಾಗಿದ್ದರು (4:171 ನೋಡಿರಿ)
- ಮುಹಮ್ಮದರು ಅಲ್ಲಾಹನನ್ನು ಮತ್ತು ಅವನ ಪದಗಳನ್ನು ನಂಬಿದ್ದರು (7:158 ನೋಡಿರಿ)
- ಯಾವ ಮನುಷ್ಯನಿಗೂ ಅಲ್ಲಾಹನ ಪದಗಳನ್ನು ಬದಲಾಯಿಸಲು ಸಾಧ್ಯವಿಲ್ಲ (6:115 ಹಾಗೂ 18:27 ನೋಡಿರಿ)
- ಅಲ್ಲಾಹನು ತನ್ನ ಪದಗಳೊಂದಿಗೆ ಸತ್ಯವನ್ನು ಸ್ಥಾಪಿಸಲು ಇಚ್ಛಿಸಿದನು (8:7 ಮತ್ತು 10:82 ನೋಡಿರಿ)
- ಅಲ್ಲಾಹನು ತನ್ನ ಪದಗಳ ಮೂಲಕ ಯಾವುದೇ ಅಸತ್ಯವನ್ನು ಅಳಿಸಲು ಮತ್ತು ಸತ್ಯವನ್ನು ಮರು ಸ್ಥಾಪಿಸಲು ಸಾಧ್ಯವಿರುವವನು (42:24 ನೋಡಿರಿ)
- ಅಲ್ಲಾಹನು ಈ ಗ್ರಂಥವನ್ನು ಸಂರಕ್ಷಿಸುತ್ತಾನೆಂದು ಸ್ವತಃ ತಾನೇ ಭರವಸೆಯನ್ನು ನೀಡಿದ್ದಾನೆ. (15:9 ನೋಡಿರಿ)

- ಮನುಕುಲಕ್ಕೆ ನಿದರ್ಶನವಾಗಿ ಕೇವಲ ಕುರ್‌ಆನ್ ಮಾತ್ರ ಧಾರಾಳವಾಗಿ ಸಾಕು (29:51 ನೋಡಿರಿ)

(ಮೇಲಿನ ವಚನಗಳ ವಿವರಣೆಯು ಈ ಭಾಗದ ಕೊನೆಯಲ್ಲಿ ಅನುಬಂಧಿಸಲಾಗಿದೆ)

ನಾವು ಕುರ್‌ಆನಿನ ಅಧ್ಯಯನವನ್ನು ಬಯಸಿದರೆ, ನಾವು ಅದರ ಪದಗಳನ್ನು ಕಾಗುಣಿಸುವ ಮತ್ತು ಉಚ್ಚರಿಸುವ ರೀತಿಯನ್ನು ಗಮನಿಸಬೇಕು. ಕುರ್‌ಆನನ್ನು ಪಾರಾಯಣ ಮಾಡಲಾದಾಗ ಅದನ್ನು ನಾವು **ಎಚ್ಚರಿಕೆ**ಯಿಂದ ಕೇಳಬೇಕು ಎಂದು 7:204 ರಲ್ಲಿ ಹೇಳಲಾಗಿದೆ.

ನಾವು ಕುರ್‌ಆನನ್ನು ಎಚ್ಚರಿಕೆಯಿಂದ ಗಣನೆಗೆ ತೆಗೆದುಕೊಳ್ಳಬೇಕು ಹಾಗೂ ಅದರ ಬಗ್ಗೆ ವಿವೇಚಿಸಬೇಕು. ಕೆಲವು ಪ್ರಮುಖ ಪದಗಳ ಅರ್ಥವು ತಿರುಚಿಹೋಗಿರುವುದು ನನಗೆ ಪತ್ತೆಯಾಯಿತು. ಈ ವಿಕೃತಿಯು ಕೆಳಗಿನ ದುರಂತ ಪರಿಣಾಮಗಳನ್ನು ಹೊಂದಿದೆ:

- ಜನರು ಈ ಜೀವನದ ವಹಿವಾಟುಗಳನ್ನು ಅವರ ಸೃಷ್ಟಿಕರ್ತನಿಗೆ ಸಂಬಂಧಿಸುವ ರೀತಿಯಲ್ಲಿ ಭಾರೀ ಪ್ರಭಾವ ಬೀರುತ್ತದೆ.
- ಇದು ಪುರೋಹಿತರ ಮತ್ತು ವಿದ್ವಾಂಸರ ಕೈಯಲ್ಲಿ ಬೃಹತ್ ಪ್ರಮಾಣದ ಅಧಿಕಾರವನ್ನು ನೀಡುತ್ತದೆ.
- ಇದು ಬುಡಕಟ್ಟು ಮತ್ತು ಮೂರ್ತಿ ಆರಾಧಕರ ವಿಚಾರದಲ್ಲಿ ತಮ್ಮ ಗ್ರಹಿಕೆಗಳನ್ನು ಕ್ಷುಲ್ಲಕಗೊಳಿಸುತ್ತದೆ.
- ತಮ್ಮ ಒಡೆಯನಿಗೆ ಪ್ರತಿಕ್ರಿಯಿಸಲು ಬಯಸುವ ಅನೇಕ ಜನರ ಅವಕಾಶವನ್ನು ಕಡಿತಗೊಳಿಸುತ್ತದೆ.

ತಾವು ಮುಸ್ಲಿಮರೆಂದು ಹೇಳಿಕೊಳ್ಳುವವರು, ಈ ಪದಗಳನ್ನು ತಪ್ಪಾಗಿ ತಿಳುವಳಿಕೆ ಮಾಡಿಕೊಂಡಿರುವುದರಿಂದ ಉಂಟಾಗುವ (ಸ್ವೀಕಾರ್ಹವಲ್ಲದ) ವರ್ತನೆಯ ಮಾನದಂಡದ ಮೇಲೆ, ವಿಶ್ವದ ಮುಸ್ಲಿಮೇತರರು ಕುರ್‌ಆನನ್ನು ವಿಮರ್ಶಿಸುತ್ತಾರೆ.

ನನ್ನ ಈ ಪುಸ್ತಕವು, ಕುರ್‌ಆನಿನ ಆಧಾರದ ಮೇಲೆ ಹಾಗೂ ಅದರ ಮೂಲ ಅಂಶಗಳ ಬೆಳಕಿನಲ್ಲಿ, ಧಾರ್ಮಿಕ-ದಂಧೆಯನ್ನು ನಡೆಸುವಂತಹ ಆಡಳಿತ ವರ್ಗವು ಅದರ ಮೇಲೆ ಹೊರಿಸಿರುವ ಅಪಾರ್ಥಗಳನ್ನು ಅವಲಂಬಿಸದೇ, ಕಳೆದುಹೋದಂತಹ ಕ್ಷೇತ್ರಗಳನ್ನು ಹಿಂದಕ್ಕೆ ಬಯಸುತ್ತದೆ. ಅಲ್ಲಾಹನ ಪದಗಳಲ್ಲಿ ಯಾವುದೇ ದೋಷಗಳಿಲ್ಲ. ಬದಲಿಗೆ ಮಾನವರಿಂದ ಅವನ ಪದಗಳ ಅರ್ಥವನ್ನು ಉದ್ದೇಶಪೂರ್ವಕವಾಗಿ ತಿರುಚಲಾಗಿದೆ. ಇದು ಅವನ ಕುರಿತು ನಿಖರವಲ್ಲದ ಕಲ್ಪನೆಗಳನ್ನು ವ್ಯಾಪಕವಾಗಿ ಹರಡಿದೆ.

ಅದಲ್ಲದೆ, ಹೊಂದಾಣಿಕೆ ಇರದಂತಹ ವಿರೋಧಾತ್ಮಕ ಹೇಳಿಕೆಗಳು ಮತ್ತು ಕುರ್‌ಆನಿನ ವಚನಗಳ ಅವಿವೇಚಿತ ವ್ಯಾಖ್ಯಾನಗಳು ಎಲ್ಲಾ ಅನುವಾದಗಳಲ್ಲಿ ನುಸುಳಿಬಿಟ್ಟಿದೆ. ನನಗೆ ಗೋಚರಿಸಿದಂತಹ ಯಾವುದೇ ಪ್ರಮುಖ

ವಿಷಯಗಳ ಬಗ್ಗೆ, ಯಾವುದೇ ಅನುವಾದಗಳಲ್ಲಿಯೂ ಯಾವುದೇ ಸುಳಿವು ಸಿಗಲಿಲ್ಲ. ಉದಾಹರಣೆಗೆ, ವನ್ಯಜೀವಿ ಸಂರಕ್ಷಣೆಯ ವಿಷಯ (ಇದನ್ನು ಮುಂದೆ ವಿವರಿಸಲಾಗಿದೆ) - ಎಲ್ಲಾ ಸಂದರ್ಭಗಳಲ್ಲಿ ಇದನ್ನು ಮೂರ್ತಿ ಆರಾಧನೆಯ ಒಂದು ಆಚರಣೆಯಾಗಿ ತಿರುಚಲಾಗಿದೆ. ನಾನು ಸ್ವಲ್ಪ ಸಮಯ ಅನುಮಾನದಲ್ಲಿ ಸುತ್ತಲ್ಪಟ್ಟೆ. ನಾನು ಅರ್ಥಮಾಡಿಕೊಳ್ಳುವುದರಲ್ಲಿ ತಪ್ಪು ಇರಬಹುದೇ? ನಾನು ಭಾವಿಸಿರುವ ಹಾಗೆ ಅರಬೀ ಪಠ್ಯದ ಅರ್ಥದ ಆಧಾರದ ಮೇಲೆ, ಸ್ಪಷ್ಟವಾದ ಪ್ರತಿಷ್ಠಿತ ತತ್ವವನ್ನು ಅನಾವರಣಗೊಳಿಸುವ ಬದಲಿಗೆ, ಬಹುಶಃ ಕೇವಲ ಒಂದು ಕಾಲ್ಪನಿಕ ವ್ಯಾಖ್ಯಾನವನ್ನು ಸಮರ್ಥಿಸುತ್ತಿದ್ದೇನೆಯೇ? ನಾನು ಸರಿಯಾಗಲೂ, ಜ್ಞಾನದ ಗೌರವಾರ್ಹ ಸ್ಥಾನಗಳಲ್ಲಿರುವ 'ಅಧಿಕಾರಿಗಳು' ತಪ್ಪಾಗಲೂ, ಹೇಗೆ ಸಾಧ್ಯ?

ಅಂತೂ ನಾನು ಮುಂದೆ ಸಾಗಿದೆ. ಆದರೆ ಕುರ್‌ಆನಿನುದ್ದಕ್ಕೂ ಹರಡಿರುವ ಪ್ರತಿಯೊಂದು ವಿಷಯದ ಕುರಿತ, ವ್ಯಾಪಕ ಮಿಶ್ರ-ಉಲ್ಲೇಖಗಳನ್ನೊಳಗೊಂಡ ಆಳವಾದ ಅಧ್ಯಯನದ ನಂತರ, ನನ್ನ ಅನುಮಾನಗಳ ಸಮಂಜಸತೆಯು ನನಗೆ ಮನವರಿಕೆಯಾಯಿತು. ಅರಬೀ ಧರ್ಮದಲ್ಲಿ ಚಾಲ್ತಿಯಲ್ಲಿರುವ ಕಟ್ಟುಕಥೆ ಹಾಗೂ ಗೂಢತೆಗಳ ನಡುವೆ ಮತ್ತು ಕುರ್‌ಆನಿನ ಹೇಳಿಕೆಗಳ ನಡುವೆ ಹೊಂದಾಣಿಕೆ ಇಲ್ಲದಿರುವುದನ್ನು ನಾನು ಗಮನಿಸಿದೆ. ಒಂದು ಪಂಥೀಯ ಘಟಕವಾದ ಈ ಧರ್ಮವು, ವ್ಯವಸ್ಥಿತವಾಗಿ ಅಲ್ಲಾಹನ ಕಲ್ಪನೆಯನ್ನು ನಿರಾಕರಿಸುತ್ತದೆ. ನಾನು ಈ ತಪ್ಪಾದ ಕಲ್ಪನೆಗಳನ್ನು ಮತ್ತು ಕುರ್‌ಆನಿನಿಂದ ಇವುಗಳಿಗೆ ವಿರುದ್ಧವಾದ ಸಾಕ್ಷ್ಯಗಳ ಪಟ್ಟಿಯನ್ನು ಒಟ್ಟುಗೂಡಿಸಿದೆ. ನನಗೆ ಕೊನೆಯಲ್ಲಿ, ನನ್ನ ಮುಂದೆ ಈ ಸಾಕ್ಷಿಗಳ ಬಲವನ್ನು ಪ್ರದರ್ಶಿಸಬೇಕಿತ್ತು. ಧರ್ಮ, ವೃತ, ಆರಾಧನೆ, ತೀರ್ಥಯಾತ್ರೆ, ಪ್ರಾಣಿ ಬಲಿ ಇತ್ಯಾದಿ ಆಚರಣೆಗಳನ್ನು ಕುರ್‌ಆನ್ ಸಂಪೂರ್ಣವಾಗಿ ಖಂಡಿಸುತ್ತದೆ ಮತ್ತು ಇಂತಹ ಅಭ್ಯಾಸಗಳನ್ನು ಮೂರ್ತಿ ಆರಾಧನೆಯೆಂದು ವರ್ಗೀಕರಿಸುತ್ತದೆ. ಸಂಶಯವಿಲ್ಲದೆ, ಇದು ಹಲವರಿಗೆ ವಿಸ್ಮಯಕಾರಿಯಾಗಿರಬಹುದು. ಯಾವುದೇ ಅನುಮಾನವು ಉಳಿಯದಂತೆ ನಾನು ಇದನ್ನು ಧೃಢಪಡಿಸುತ್ತೇನೆ.

ಅನುವಾದಕರೆಲ್ಲರೂ ಮೂಲತಃ ಅಕ್ಷರಗಳ ಜನರಾಗಿದ್ದಾರೆ. ಅನೇಕ ಬಾರಿ ಅವರು ಕುರ್‌ಆನನ್ನು ಭಾಷಾಂತರಿಸುವಾಗ ಸಂದೇಶದ ಪ್ರಾಥಮಿಕ ಉದ್ದೇಶವನ್ನು ನಿರ್ಲಕ್ಷಿಸಿಸುತ್ತಾರೆ. ಬಹುಶಃ (ಮೇಲೆ ತಿಳಿಸಿದ ಧಾರ್ಮಿಕ ಗಣ್ಯರ ಮೂಲಕ ನಿಗದಿ ಪಡಿಸಲಾದ) ತಮ್ಮ ವೈಯ್ಯುಕ್ತಿಕ ಧಾರ್ಮಿಕ ನಂಬಿಕೆಗಳ ಕಾರಣವಾಗಿ, ಸಂದೇಶವು ಅನರ್ಥಗೊಂಡಂತಹ ಅವೈಚಾರಿಕ ಮತ್ತು ವಿರೋಧಾತ್ಮಕ ಪಠ್ಯಗಳಾಗಿ ಪರಿಣಮಿಸಿದೆ. ಕುರ್‌ಆನನ್ನು ಸರಿಯಾಗಿ ಭಾಷಾಂತರಿಸಲು, ತಾನು ಏನು ಓದುತ್ತಿದ್ದೇನೆಂದು ಮೊದಲು ಅರಿತುಕೊಳ್ಳಬೇಕು. ವಾಸ್ತವದಲ್ಲಿ, ಫಲದಾಯಕವಾಗಿ ಕುರ್‌ಆನನ್ನು ಸಮೀಪಿಸಲು, ನಾವು ನಮ್ಮ ಪೂರ್ವಭಾವಿ ಕಲ್ಪನೆಗಳನ್ನು ನಿಷ್ಕ್ರಿಯಗೊಳಿಸಬೇಕು. ಮತಾಂಧರಾಗಿ, ಐತಿಹಾಸಿಕವಾಗಿ ಮತ್ತು ಬುಡಕಟ್ಟು ಭಾವನೆಗೆ ಬಾಗದೇ, ಅದರ ಅರ್ಥವನ್ನು ತಿಳಿಯುವ ಸಲುವಾಗಿ, ನಾವು ವಿಮರ್ಶಾತ್ಮಕ ಪರಿಶೋಧಕರಾಗಬೇಕು.

ಮೇಲೆ ಸೂಚಿಸಲಾದಂತೆ, ಜನಪ್ರಿಯ ಅನುವಾದಕರು ಮುಂಚಿನ ಪುರೋಹಿತರ ಮತ್ತು ಟೀಕಾಕಾರರ ಟಿಪ್ಪಣಿಗಳ ಮೇಲೆ ಪ್ರಭಾವಿತರಾಗಿದ್ದಾರೆ. ಹೆಚ್ಚಾಗಿ, ಅವರ ವೈಯ್ಯುಕ್ತಿಕ ಅಭಿಪ್ರಾಯಗಳು, ಕುರ್‌ಆನಿನ ಪಠ್ಯದ

ಆಧಾರದಲ್ಲಿ ಪರಿಶೀಲನೆ ಅಥವಾ ಸಂಶೋಧನೆಗೆ ಒಳಪಟ್ಟಿರುವುದಿಲ್ಲ. ಕಾಲ ಕಳೆದಂತೆ, ಇಂತಹ ಟೀಕಾಕಾರರನ್ನು ಅಧಿಕೃತರೆಂದು ಪರಿಗಣಿಸಲಾಯಿತು. ಆದರೆ ಇಲ್ಲಿ ಒತ್ತಿ ಹೇಳಬೇಕಾದದ್ದೇನೆಂದರೆ, ಅವರು ಕುರ್‌ಆನಿನ ಪದಗಳ ಕಟ್ಟುನಿಟ್ಟಾದ ಅಧ್ಯಯನಕ್ಕೆ ಎಂದಿಗೂ ಬದ್ಧರಾಗಿರಲಿಲ್ಲ. ಉದಾಹರಣೆಗೆ, ಕುರ್‌ಆನಿನಲ್ಲಿ ಲಿಖಿತಗೊಂಡಿರುವ ಮೂರ್ತಿ ಆರಾಧನೆಯನ್ನು ಸೂಚಿಸುವ ವಾಕ್ಯವೃಂದಗಳ ಗಂಭೀರತೆಯನ್ನು ಗುರುತಿಸಲು ಇವರಿಗೆ ಸಾಧ್ಯವಾಗಲಿಲ್ಲ. ಅವರು ಕುರ್‌ಆನಿನ ಪಠ್ಯವನ್ನು, ಮೂರ್ತಿಪೂಜಕ ಅರಬೀ ಧರ್ಮದ ಸ್ವತಃ ಆದ್ಯತೆಗಳನ್ನು ಬೆಂಬಲಿಸುವ ರೀತಿಯಲ್ಲಿ ಓದಲು ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ಇವರು ಕುರ್‌ಆನನ್ನು ಅನರ್ಥವಾಗಿ ಪ್ರಚಾರ ಮಾಡಿದರು. ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ನಡೆಸಿ, ಅನುವಾದಕರು ಕುರ್‌ಆನಿನ ವಿಷಯಗಳನ್ನು ಇಂತಹ ಟೀಕಾಕಾರರ ಮತ್ತು 'ಅಧಿಕಾರಿಗಳ' ಪರಂಪರೆಯ ಮೂಲಕ ಭಾಷಾಂತರಿಸುತ್ತಾರೆ.

ಕುರ್‌ಆನಿನ 'ಅನುವಾದಗಳನ್ನು' ಅವಲಂಬಿಸಿರುವ ಮುಸ್ಲಿಮರು (ಅರಬೀ ಭಾಷೆಯ ತಿಳುವಳಿಕೆ ಇಲ್ಲದ ಕಾರಣ) ಗ್ರಂಥದ ಸತ್ವವನ್ನು ಅರಿತುಕೊಳ್ಳಲು ವಿಫಲರಾಗುತ್ತಾರೆ. ಕುರ್‌ಆನ್ ವೈಯುಕ್ತಿಕ ಹಕ್ಕು, ಅಧಿಕಾರ, ಸಹಿಷ್ಣುತೆ ಮತ್ತು ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತದೆ; ಅದು ಮಾನವ ಸಂಬಂಧಗಳು, ಜನಾಂಗೀಯ ಧ್ರುವೀಕರಣದ ವಿರುದ್ಧ ಎಚ್ಚರಿಕೆ ನೀಡುತ್ತದೆ; ಅದು ಈ ಜಗತ್ತಿನ ಜೀವನದಲ್ಲಿ ಹಾಗೂ ಮರಣಾನಂತರದ ಜೀವನದಲ್ಲಿ ಆನಂದದ ಭರವಸೆಯನ್ನು ನೀಡುತ್ತದೆ; ಅದು ಜಾಗತಿಕ ಶಾಂತಿಯನ್ನು ಸಾಧಿಸುವ ಬಗ್ಗೆ, ಪರಸ್ಪರ ಸಹಾನುಭೂತಿಯ ಅವಶ್ಯಕತೆಯ ಬಗ್ಗೆ, ಜನರ ಸಾಮಾಜಿಕ ವ್ಯವಸ್ಥಿತ ಸ್ಥಿತಿಯ ನಿಯಮಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಅದರ ಯೋಜನೆಯು ಯಾವುದೇ ಸಾಂಸ್ಕೃತಿಕ ವ್ಯವಸ್ಥೆಯಲ್ಲೂ ಅನ್ವಯವಾಗುತ್ತದೆ ಮತ್ತು ಅದಕ್ಕೂ 'ಧರ್ಮ'ಕ್ಕೂ ಯಾವುದೇ ಸಂಬಂಧವಿಲ್ಲ.

ಒಂದು ನಿಯಮದಂತೆ, ಅನುವಾದಕರು ವಿಷಯಗಳಿಗೆ ನಿರ್ದಿಷ್ಟವಾಗಿ ಸ್ಪಂದಿಸುವುದಿಲ್ಲ ಅಥವಾ ಕುರ್‌ಆನಿನ ಇತರ ಸಂಬಂಧಿತ ವಚನಗಳನ್ನು ಹೋಲಿಸಿ ನೋಡುವುದಿಲ್ಲ. ಇಂತಹ ಹೋಲಿಕೆಯು, ಕುರ್‌ಆನಿನ ಪದಗಳನ್ನು ಮತ್ತು ನಿರೂಪಣೆಯನ್ನು ಗ್ರಹಿಸುವ ಕೀಲಿಕೈಯನ್ನು ಒದಗಿಸುವಂತಹ ಒಂದು ಪ್ರಕ್ರಿಯೆಯಾಗಿದೆ. ಪರಿಣಾಮವಾಗಿ, ಅವರು ಸಂಪೂರ್ಣ ಚರಣವನ್ನು ಮತ್ತು ಪ್ರತ್ಯೇಕ ಪದಗಳ ಹಿಂದೆ ಇರುವ ಪ್ರಮುಖ ಪರಿಕಲ್ಪನೆಗಳನ್ನು ತಪ್ಪಾಗಿ ಅನುವಾದಿಸುತ್ತಾರೆ. ಅದರಿಂದಾಗಿ ಅವುಗಳು ಸಂದೇಹಾಸ್ಪದ, ಅಸ್ಪಷ್ಟ, ಅಸಂಗತ ಹಾಗೂ ಕೆಲವು ಸಂದರ್ಭದಲ್ಲಿ ಸಂಪೂರ್ಣ ಮೂರ್ಖತನದ ಹೇಳಿಕೆಗಳಾಗಿ ಪರಿಣಮಿಸುತ್ತದೆ.

ಸುಮಾರು ಹದಿನಾರು ವರ್ಷಗಳ ಹಿಂದೆ ಈ ಸಂಶೋಧನೆಯನ್ನು ಆರಂಭಿಸುವಾಗ, 'ಪಠ್ಯ ಟೀಕೆ'ಯ ಬಗ್ಗೆ ಹಿಂದಿನ ಯಾವುದೇ ಕೃತಿಗಳು ನನಗೆ ಸಿಗಲಿಲ್ಲ, ಕಾರಣ ಅಂತಹ ಯಾವುದೇ ಕೃತಿಗಳು ಇರಲಿಲ್ಲ. 'ಧರ್ಮದ ಪುರುಷರ' ಆಸಕ್ತಿಗನುಸಾರವಾಗಿ ವ್ಯವಹರಿಸುವ ಅನುವಾದಗಳು ಮಾತ್ರ ಲಭ್ಯವಿತ್ತೇ ವಿನಹಃ, ಕೇವಲ ಕುರ್‌ಆನಿನ ಆಧಾರದಲ್ಲಿ ಅನುವಾದಗಳ ಗ್ರಾಂಥಿಕ ಟೀಕೆಯ ಯಾವುದೇ ಪೂರ್ಣ ಅಧ್ಯಯನವು ಇರಲಿಲ್ಲ.

ಈ ಪುಸ್ತಕದಲ್ಲಿ ಮಂಡಿಸಿರುವಂತಹ ಅನ್ವೇಷನೆಗೆ, ಮುಕ್ತವಾದ ಮತ್ತು ವಿಮರ್ಶಾತ್ಮಕ ಚಿಂತನೆಯ ಅಗತ್ಯವಿದೆ. ಧಾರ್ಮಿಕ ವಿದ್ವಾಂಸರೆಂದು ಹೇಳಿಕೊಳ್ಳುವವರಿಗೆ ಇಂತಹ ಜ್ಞಾನವನ್ನು ಪ್ರಂಶಸಿಸಲು ಸಾಧ್ಯವಿಲ್ಲ. ಏಕೆಂದರೆ, ಅವರು ಕಟ್ಟುನಿಟ್ಟಾಗಿ ತಮ್ಮ 'ಧಾರ್ಮಿಕ' ನಂಬಿಕೆಗಳ ಕಡೆಗೆ ಬಾಗುವವರಾಗಿದ್ದಾರೆ. ಖಂಡಿತವಾಗಿಯೂ, ಈ ಅಧ್ಯಯನದಲ್ಲಿ ಎತ್ತಿದ ಅಂಶಗಳು, 'ಅರಬೀ ಧರ್ಮ'ದ ಎರಡು ದೊಡ್ಡ ಪಂಥಗಳಾದ ಸುನ್ನಿ ಮತ್ತು ಶಿಯಾಗಳಿಗೆ ಒಂದು ನೇರ ಬೆದರಿಕೆಯನ್ನು ಪ್ರಸ್ತುತ ಪಡಿಸುತ್ತದೆ. (ಅರಬೀ ಸಂಸ್ಕೃತಿ ಮತ್ತು ಬುಡಕಟ್ಟು ಕಾನೂನಿನಿಂದ ರೂಪಿತಗೊಂಡಿರುವ ಕಾರಣ, ಇವೆರಡನ್ನೂ 'ಅರಬೀ ಧರ್ಮ'ದ ಪಂಥಗಳೆಂದು ಸೂಚಿಸಲಾಗಿದೆ). ಅರಬೀ ಪಠ್ಯದ ಪರಿಚಯವಿರುವ (ಮತ್ತು ಅದರಲ್ಲಿ ನಿರತರಾಗಲು ಸಾಧ್ಯವಿರುವ) ವಿಮರ್ಶಾತ್ಮಕ ಮತ್ತು ಮುಕ್ತ ಮನಸ್ಕರು ಮಾತ್ರ ಈ ಅಧ್ಯಯನವನ್ನು ಮೆಚ್ಚಬಹುದು. ಆದಾಗ್ಯೂ, ಈ ಪುಸ್ತಕ ಒಂದು ಸುಲಭ ಶೈಲಿಯಲ್ಲಿ ಬರೆಯಲಾಗಿದೆ ಮತ್ತು ಕುರ್‌ಆನಿನ ಅಥವಾ ಅರಬೀ ಭಾಷೆಗೆ ಸಂಬಂಧಿಸಿದ ವಿಶೇಷ ಜ್ಞಾನ ಇಲ್ಲದ ಕೆಲವು ಓದುಗರಿಗೂ ಇಲ್ಲಿ ವಿವರಿಸಿರುವ ಚರ್ಚೆಗಳನ್ನು ಮನದಟ್ಟು ಮಾಡಲು ಕಠಿಣವಾಗದು ಎಂದು ಆಶಿಸಲಾಗಿದೆ.

ನನ್ನ ವಿಧಾನವು, ಯಾವುದೇ ವಿಷಯದ ಮುಖ್ಯಸೂಚಿ ಪದಗಳನ್ನು ಹೊಂದಿರುವ ಪವಿತ್ರ ಗ್ರಂಥದ ಪ್ರತಿಯೊಂದು ಚರಣಗಳನ್ನು ವಿಮರ್ಶಾತ್ಮಕವಾಗಿ ಓದುವುದಾಗಿದೆ. ಹೆಚ್ಚಿನ ಸ್ಥಳಗಳಲ್ಲಿ ಅಂತಹ ವಚನಗಳು ಗ್ರಂಥದ ವಿವಿಧ ಕಡೆಗಳಲ್ಲಿ ಹರಡಿರುತ್ತದೆ. ಕುರ್‌ಆನ್ ಹಲವಾರು ವಿಷಯಗಳನ್ನು ಒಂದರ ನಂತರ ಇನ್ನೊಂದು ಬಳಿಕ ಇತರ ಕಡೆಗಳಲ್ಲಿ, ಸಾಮಾನ್ಯವಾಗಿ ಪದೇ ಪದೇ ಪ್ರತಿಬಿಂಭಿಸುತ್ತದೆ. ಆದುದರಿಂದ 'ಮೂರ್ತಿ ಆರಾಧನೆ' ಅಥವಾ 'ಜೀವನ ರೀತಿ'ಯಂತಹ ನಿಖರವಾದ ವಿಷಯಗಳ ಪ್ರಸ್ತಾಪಗಳನ್ನು, ಗ್ರಂಥದ ವಿವಿಧ ಭಾಗಗಳಿಂದ ಸಂಗ್ರಹಿಸಿ ಒಂದು ಶೀರ್ಷಿಕೆಯ ಅಡಿಯಲ್ಲಿ ಒಟ್ಟಿಗೆ ತರಬೇಕಾಗುತ್ತದೆ. ಹಾಗೆ, ವಚನಗಳನ್ನು ಹುಡುಕಲು ಅನೇಕ ತಾಸುಗಳನ್ನು ವ್ಯಯಿಸಲಾಗಿದೆ. ಅನುವಾದಕರು ಒದಗಿಸಿರುವ ವಿಷಯಾಧಾರಿತ ಸೂಚಿಕೆಗಳು, ಅರಬೀ ಶಬ್ದಕೋಶಗಳು ಹಾಗೂ ನಿಘಂಟುಗಳು ಸಹ, ಭ್ರಷ್ಟ ಪಂಡಿತರ ಅನೇಕ ಶತಮಾನಗಳ 'ಧಾರ್ಮಿಕ' ಪ್ರಭಾವದಿಂದಾಗಿ, ಅನೇಕ ಸಂದರ್ಭಗಳಲ್ಲಿ ತಪ್ಪಾಗಿವೆ ಅಥವಾ ಅಪೂರ್ಣವಾಗಿವೆ.

ಅರಬೀ ಪಠ್ಯದ ಒಂದು ವಿಮರ್ಶಾತ್ಮಕ ಅಧ್ಯಯನದ ಬಳಿಕ - 'ಕುರ್‌ಆನ್ ನನ್ನ ಮಾರ್ಗದರ್ಶನದ ಮತ್ತು ನಂಬಿಕೆಯ ಸರ್ವೋಚ್ಚ ಮೂಲವಾಗಿದೆ' ಎಂದು ನನಗೆ ಬಾಲ್ಯದಲ್ಲಿ ತಿಳಿಸಲಾಗಿರುವುದಕ್ಕೂ, ನನ್ನ ಧಾರ್ಮಿಕ ಆಚರಣೆಗಳ ನಡುವೆ ವ್ಯತ್ಯಾಸಗಳಿರುವುದನ್ನು ಕಂಡು ನಾನು ಆಶ್ಚರ್ಯಚಕಿತಗೊಳ್ಳುತ್ತಿದ್ದೆ. ಅತ್ಯಂತ ಅಸಂಗತ ರೀತಿಯಲ್ಲಿ ಕುರ್‌ಆನಿನ ಪದಗಳನ್ನು ತಪ್ಪಾಗಿಯೂ, ಅನೇಕ ಬಾರಿ ಹಾಸ್ಯಾಸ್ಪದವಾಗಿಯೂ ಅನುವಾದಿಸಿರುವುದನ್ನು ಕಂಡು ದಿಗ್ಭ್ರಮೆಗೊಳ್ಳುತ್ತಲೂ ಇದ್ದೆ. ಹಲವಾರು ಶತಮಾನಗಳ 'ವಿದ್ವಾಂಸರ' ಕಠಿಣವಾದ ಪರಿಶೀಲನೆಯ ಬಳಿಕವೂ - ಅನುವಾದಕಾರರ ಪ್ರಕಾರ ಗ್ರಂಥದ ಒಂದು ಪದವು ಒಂದು ಕಡೆಯಲ್ಲಿ ಒಂದು ಅರ್ಥವನ್ನು, ಇನ್ನೊಂದೆಡೆ ಸಂಪೂರ್ಣವಾಗಿ ಬೇರೇನೋ ಅರ್ಥವನ್ನು ಕೊಡಬಹುದು. ಅನುವಾದಗಳ ಆವೃತ್ತಿಗಳ ನಡುವೆ ವೈರುಧ್ಯಗಳು, ಅಸ್ಪಷ್ಟತೆಗಳು, ಅಸಾಮರಸ್ಯಗಳ ಸಮಸ್ಯೆಯನ್ನು ನಮಗೆ ಅಲ್ಲಗಳೆಯಲು

ಸಾಧ್ಯವಿಲ್ಲ. ವಿದ್ವಾಂಸರು, ವಿಮರ್ಶಕರು ಮತ್ತು ಅನುವಾದಕರು, ತಿಳಿದಿರದಿದ್ದಂತೆ ನಟಿಸುತ್ತಿರುವುದು ಅಥವಾ ಈ ತರ್ಕಾಭಾಸಗಳನ್ನು ಮರೆಮಾಚಲು ಪ್ರಯತ್ನಿಸುತ್ತಿರುವುದು, ಮೊತ್ತದಲ್ಲೊಂದು ನಷ್ಟವಾಗಿದೆ.

ಬಹುತೇಕ ಅರಬೇತರಿಗೆ, ಕುರ್‌ಆನಿನ ಅನುವಾದಗಳಲ್ಲಿರುವ ವಿಕಾರತೆಯ ಅರಿವಿರುವುದಿಲ್ಲ. ಸತ್ಯದಲ್ಲಿ, ಕುರ್‌ಆನನ್ನು ಅರಬಿಯಲ್ಲಿ ಓದುವುದು ಅದನ್ನು ವರ್ಣರಂಜಿತವಾಗಿ ನೋಡುವ ಹಾಗೆ. ಆದರೆ ಅದನ್ನು ಅನುವಾದಗಳಲ್ಲಿ ಓದುವುದು ಅದನ್ನು ಕಪ್ಪುಬಿಳುಪಿನಲ್ಲಿ ನೋಡಿದ ಹಾಗೆ. ಅನುವಾದಗಳನ್ನು ಓದುವಾಗ, ನಮಗೆ ಮೂಲ ಆಶಯದ ಒಂದು ಕಲ್ಪನೆಯನ್ನು ಮಾತ್ರ ಪಡೆಯಬಹುದು, ಆದರೆ ಬಹಳಷ್ಟು ಸೂಕ್ಷ್ಮ ವ್ಯತ್ಯಾಸಗಳು ಗುರಿ ತಪ್ಪುತ್ತದೆ. ಈ ಅಜ್ಞಾನವು ಅವರಿಗೆ ಅಲ್ಲಾಹನ ವಿಶ್ವಾಸದ ಮೇಲೆ ಅತ್ಯಂತ ಹಾನಿಕಾರಕ ಪರಿಣಾಮವನ್ನು ಬೀರುತ್ತದೆ. ಕೆಲವರು ಈ ಭಿನ್ನತೆಗಳನ್ನು ಗ್ರಹಿಸಲು ಸಮರ್ಥರಾಗಿದ್ದಾರೆ. ಆದರೂ, ಬಹುಪಾಲು ಅರಬೇತರರು ಇಂತಹ ಅವೈಚಾರಿಕ ವ್ಯಾಖ್ಯಾನ ಮತ್ತು ಟೀಕೆಗಳ ವಿರುದ್ಧ ಬದ್ಧಿವಂತಿಕೆಯ ನಿಲುವನ್ನು ತೆಗೆದುಕೊಳ್ಳುವುದಿಲ್ಲ.

ವಿಮರ್ಶಾತ್ಮಕ ಅಧ್ಯಯನವನ್ನು ಕೈಗೊಳ್ಳಲು ಈ ಕೆಳಗಿನ ವಚನವು ನನ್ನನ್ನು ಪ್ರೇರೇಪಿಸಿತು:

> ಓ ಜನರೇ, ನಿಮ್ಮನ್ನೂ, ನಿಮ್ಮ ಪೂರ್ವಜರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವಿನ ಸೇವೆಯನ್ನು ಮಾಡಿರಿ, (ಅದರಿಂದ) ನೀವು ರಕ್ಷೆಹೊಂದಬಹುದು. ಅವನೇ ನಿಮಗೆ ಭೂಮಿಯನ್ನು ವಾಸಯೋಗ್ಯ ಸ್ಥಳವಾಗಿ, ಅವನೇ ಆಕಾಶವನ್ನು ಒಂದು ವಿನ್ಯಾಸದಂತೆ ಮಾಡಿದನು, ಮತ್ತು ಆಕಾಶದಿಂದ ಮಳೆಯನ್ನು ಸುರಿಸಿ ನಿಮಗೆ ಆಹಾರವಾಗಿ ಫಲಗಳನ್ನು ಉತ್ಪಾದಿಸಿದನು. ಆದ್ದರಿಂದ, ಇದನ್ನು ನೀವು ಅರಿತಿರುತ್ತಾ, ನೀವು ಅವನೊಂದಿಗೆ ಯಾವುದೇ ಸರಿಸಾಟಿಗಳನ್ನು ನೇಮಿಸಬೇಡಿರಿ. (2:21-22)

ಈ ಗ್ರಂಥವು, ಯಾವುದೇ ಜನಾಂಗೀಯ ಮೂಲ ಅಥವಾ ಪಂಥೀಯ ನಂಬಿಕೆಯನ್ನು ಗಣನೆಗೆ ತೆಗೆದುಕೊಳ್ಳದೇ, ಎಲ್ಲಾ ಮಾನವಕುಲವನ್ನು ಉದ್ದೇಶಿಸಿಸುವ ಸಂದೇಶವಾಗಿದೆಯೆಂದು ನಾನು ಅರಿತುಕೊಂಡೆನು. ಜನರು ತಮ್ಮನ್ನು ಸೃಷ್ಟಿಸಿದ ಏಕ ಒಡೆಯನ ಆಜ್ಞಾಪಾಲಕರಾಗಿರಬೇಕು ಎಂಬುವುದು ಅದರ ಮಹತ್ವವಾಗಿದೆ. ಆದರೆ, ಎಲ್ಲಾ ಧರ್ಮದ ಜನರು ಇದಕ್ಕೆ ನೇರ ವಿರುದ್ಧವಾಗಿ ಬೋಧನೆ ಮಾಡುತ್ತಾರೆ. ಅವರು ಒಂದೋ ಅಲ್ಲಾಹನ ಸೇವಕರನ್ನು ಆರಾಧಿಸಲು ಅಥವಾ ಯಾವುದೇ ಸ್ಪರ್ಶಿಸಲ್ಪಡುವಂತಹದ್ದರಲ್ಲಿ ತಮ್ಮನ್ನು ವಿನಿಯೋಗಿಸಲು ಕಲಿಸುತ್ತಾರೆ. ಕುರ್‌ಆನಿನ ಇನ್ನೂ ಕೆಲವು ಅಧ್ಯಾಯಗಳನ್ನು ಆಳವಾದ ಪರಿಶೀಲನೆ ಮಾಡುವಾಗ, ಈ ಕೆಳಗಿನಂತಹ, ಸ್ಪಷ್ಟ ಹೇಳಿಕೆಗಳನ್ನು ಕಂಡಾಗ ದಿಗ್ಭ್ರಮೆಗೊಂಡೆನು:

> ಓ ಪ್ರವಾದಿಯರೇ, ನೀವು ಭೂಮಿಯಲ್ಲಿ ಹೆಚ್ಚಿನವರ (ಬಹುಮತೀಯರ) ಹೇಳಿಕೆಯಂತೆ ನಡೆದರೆ, ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿಬಿಡುವರು. ಅವರಂತೂ ಕೇವಲ ಗುಮಾನಿಯನ್ನನುಸರಿಸಿ ಊಹಾಪೋಹಗಳ ಪ್ರಕಾರ ವರ್ತಿಸುತ್ತಾರೆ. (6:116)

> ಅವನು ನೂಹರಿಗೆ ಆಜ್ಞಾಪಿಸಿದ ಅದೇ ಜೀವನ ರೀತಿಯನ್ನು ನಿಮಗೂ ನಿಶ್ಚಯಿಸಿದ್ದಾನೆ ಮತ್ತು ಈಗ ನಾವು ಅದನ್ನೇ ನಿನಗೆ (ಮುಹಮ್ಮದರಿಗೆ) ಅವತೀರ್ಣಿಸುತ್ತಿದ್ದೇವೆ. ಇದನ್ನೇ ನಾವು ಇಬ್ರಾಹೀಮರಿಗೂ, ಮೂಸಾ ಮತ್ತು ಈಸಾರಿಗೆ ಭೋಧಿಸಿದ್ದೆವು. ಈ ಜೀವನ ರೀತಿಯನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ಭಿನ್ನರಾಗದಿರಿ. ನೀವು ಕರೆ ನೀಡುತ್ತಿರುವ ಈ ವಿಷಯವು ಮೂರ್ತಿ ಆರಾಧಕರಿಗೆ (ಒಪ್ಪಲು) ಅತ್ಯಂತ ಕಠಿಣವಾಗಿದೆ. ಅಲ್ಲಾಹನು ತಾನಿಚ್ಛಿಸುವವರನ್ನು ತನ್ನವರನ್ನಾಗಿ ಮಾಡಿಕೊಳ್ಳುತ್ತಾನೆ ಮತ್ತು ತನ್ನ ಕಡೆ ಮರಳುವವರಿಗೆ ಮಾತ್ರ ತನ್ನ ಕಡೆಗೆ ಬರುವ ಮಾರ್ಗವನ್ನು ತೋರಿಸುತ್ತಾನೆ. (42:13)

ಮೊದಲ ಸರಳ ಹೇಳಿಕೆಯಲ್ಲಿ, ಬಹುಮತೀಯರನ್ನು ಅನುಸರಿಸಬಾರದೆಂದು ಅಲ್ಲಾಹನು ನಮಗೆ ಎಚ್ಚರಿಕೆ ನೀಡಿದ್ದಾನೆ. ನಿಶ್ಚಯವಾಗಿಯೂ ಇದು ಎಲ್ಲರಿಗೂ ಕಣ್ಣು ತೆರೆಸುವಂತಹ ವಿಷಯವಾಗಿದೆ. ಎರಡನೇ ವಚನವು ಹೇಳುತ್ತದೆ, ಅಲ್ಲಾಹನು ಒಬ್ಬನೇ ಮತ್ತು ಅವನು ಎಲ್ಲಾ ಮಾನವಕುಲಕ್ಕೂ ಸಾಮಾನ್ಯನಾಗಿದ್ದಾನೆ. ಪ್ರವಾದಿಗಳಿಗೆ ಹಾಗೂ ಸಂದೇಶವಾಹಕರಿಗೆ ಗ್ರಂಥಗಳನ್ನು ಅವತೀರ್ಣಗೊಳಿಸಿದ ಆ ಕಾಣದ ದೇವನನ್ನು ಎಲ್ಲಾ ಜನರು ಒಗ್ಗಟ್ಟಾಗಿ ಸೇವೆ ಮಾಡಬೇಕು.

ನಮಗೆ ಮಾರ್ಗದರ್ಶನ ನೀಡಲು, ನಮ್ಮನ್ನು ಅವನ ಪಥದಲ್ಲಿ ನಡೆಸಲು, ಅವನಿಗೆ ಮಾತ್ರ ಸಾಧ್ಯವಿದೆಯೇ ಹೊರತು ಸಂದೇಶ ದೊರಕಿದವರಿಗೂ ಸಾಧ್ಯವಿಲ್ಲ. ಸರಳವಾಗಿ ಹೇಳಿದರೆ - ಸಂದೇಶವು, ಸಂದೇಶವಾಹಕರಿಗಿಂತ ಹೆಚ್ಚು ಮುಖ್ಯವಾಗಿರುವುದಾಗಿದೆ. ಸಂದೇಶವನ್ನು ತಲುಪಿಸಿದ ನಂತರ ಯಾವುದೇ ಪ್ರವಾದಿಗಳ ಅಥವಾ ಸಂದೇಶವಾಹಕರ ಅವಶ್ಯಕತೆಯು ಇಲ್ಲ. ಜನರನ್ನು ಅಲ್ಲಾಹನ ಕಡೆಗೆ ಕರೆಯುವುದು ಅವರ ಕರ್ತವ್ಯವಾಗಿತ್ತೇ ವಿನಹಃ, ಅವರಿಗೆ ಮಾರ್ಗದರ್ಶನ ಕೊಡುವುದಲ್ಲ. ಅಲ್ಲದೆ ಮಾನವರ ಮತ್ತು ಪ್ರತಿಕೃತಿಗಳ ಪಾಲಕರನ್ನು ಅಥವಾ ಆರಾಧಕರನ್ನು 42:13 ರಲ್ಲಿ ಮೂರ್ತಿಪೂಜಕರೆಂದು ಪರಿಗಣಿಸಲಾಗಿದೆ ಹಾಗೂ ಅವರ ಕರೆಗೆ ಪ್ರತಿಕ್ರಿಯಿಸಲಾಗುವುದಿಲ್ಲ ಎಂದು ಹೇಳಲಾಗಿದೆ.

ನೂಹ್, ಇಬ್ರಾಹೀಮ್, ಮೂಸಾ, ಈಸಾ, ಮುಹಮ್ಮದ್ ಹಾಗೂ ಎಲ್ಲಾ ಪ್ರವಾದಿಗಳಿಗೂ, ಅಲ್ಲಾಹನ ಕಡೆಗೆ ಯಾರನ್ನೂ ಕರೆತರಲು ಸಾಧ್ಯವಾಗಲಿಲ್ಲ. ಹಾಗಿರುವಾಗ, ಪೋಪರು, ಪುರೋಹಿತರು, ಪಂಡಿತರು, ಆಯತುಲ್ಲಾಗಳು, ರಬ್ಬಿಗಳು, ಸನ್ಯಾಸಿಗಳು, ಮುಲ್ಲಾಗಳೆಲ್ಲರೂ, ಏಕದೇವನ ಕಡೆಗೆ ಇತರರನ್ನು ಕೈಹಿಡದು ತರಲು ಸಾಧ್ಯವಿದೆ ಎಂದು ಹೇಗೆ ಹೇಳುತ್ತಾರೆ? ಖಂಡಿತವಾಗಿಯೂ, ಅವರ ಘೋಷಣೆಯಲ್ಲಿ ಏನೋ ತಪ್ಪಿದೆ ಅಥವಾ ಅವರ ಅನುಯಾಯಿಗಳಲ್ಲಿ ಏನೋ ದೋಷವಿದೆ ಅಥವಾ ಜನರು ತಮಗರಿಯದೇ ವಂಚಿಸಲ್ಪಡುತ್ತಿದ್ದಾರೆ. ಆದಾಗ್ಯೂ, ಪ್ರತಿ ಪುರುಷ ಮತ್ತು ಮಹಿಳೆಯರಿಗೆ ಈ ದುರಾವಸ್ಥೆಯಿಂದ ಪಾರಾಗಲು ಕುರ್‌ಆನ್ ಉತ್ತಮ ಸಲಹೆಗಳನ್ನು ನೀಡುತ್ತದೆ:

ನೀವು ಅವನ ಕಡೆಗೆ ಮರಳಿರಿ, ಅವನನ್ನು ಲಕ್ಷಿಸಿರಿ ಮತ್ತು ಬದ್ಧತೆಗಳನ್ನು (commitments) ಎತ್ತಿಹಿಡಿಯಿರಿ. ಜೀವನ ರೀತಿಯನ್ನು **ಧರ್ಮ**ವನ್ನಾಗಿ ಬದಲಿಸಿದವರಲ್ಲಿರುವ ಮೂರ್ತಿ ಆರಾಧಕರಂತೆ ಆಗಬೇಡಿರಿ. ಪ್ರತಿಯೊಂದು ಪಂಥವೂ ತಮ್ಮ ಬಳಿ ಇರುವುದರಲ್ಲಿ ಸಂತುಷ್ಟರಾಗಿದ್ದಾರೆ. (30:31-32)

ನಿಮ್ಮಿಂದ ಯಾವುದೇ ವೇತನವನ್ನು ಯಾಚಿಸದ ಹಾಗೂ ಸ್ವತಃ ನೇರ ಮಾರ್ಗದಲ್ಲಿರುವವರನ್ನು ಅನುಸರಿಸಿರಿ. (36:21)

ಧರ್ಮವು ಮಾನವರ ಒಂದು ಸುಳ್ಳು ಸೃಷ್ಟಿಯಾಗಿದೆ. ಧರ್ಮದ ಭಕ್ತರು ಅವರು ಅಭ್ಯಾಸ ಮಾಡುತ್ತಿರುವುದರಲ್ಲಿ ಸಂತೃಪ್ತರಾಗಿದ್ದಾರೆ. ಇಂದು ಅನೇಕ ಧರ್ಮಗಳಿವೆ, ಆದರೆ ಸೃಷ್ಟಿಕರ್ತನು ಕೇವಲ ಒಬ್ಬನೇ. ವಾಸ್ತವವೇನೆಂದರೆ, ಈ ಧಾರ್ಮಿಕ ಗುರುಗಳು ವಿವಿಧ ರೂಪದ ಆದಾಯದ ಮೂಲಕ ಬದುಕುತ್ತಾರೆ. ಕುರ್‌ಆನ್ ಇಂತಹ ವ್ಯವಸ್ಥೆಗೆ ವಿರುದ್ಧವಾಗಿದೆ.

ಕೆಲವು ಉದಾಹರಣೆಗಳು:

- ಮಕ್ಕಾದಲ್ಲಿರುವ ಶಿಲಾರಚೆಯ ಭೇಟಿ, ಆರಾಧನೆ, ಪ್ರದಕ್ಷಿಣೆ ಮತ್ತು ಅದರ ಒಂದು ಮೂಲೆಯಲ್ಲಿ ಅಳವಡಿಸಲಾದ ಕಪ್ಪು ಕಲ್ಲಿನ ಚುಂಬನ ಇತ್ಯಾದಿಗಳು ತಮ್ಮ ನಂಬಿಕೆಯ 'ಕಂಬಗಳಲ್ಲಿ'[7] ಒಂದಾಗಿವೆ ಎಂದು ಅರಬೀ ಧರ್ಮದ ಪರಿಣತರು ಹೇಳುತ್ತಾರೆ. ನಂತರ ಮತ್ತೊಂದು ಸ್ಥಳಕ್ಕೆ ಹೋಗಿ ಕೆಲವು ಕಲ್ಲಿನ ಸ್ತಂಭಗಳಿಗೆ ಕೆಲವು ಕಲ್ಲುಗಳನ್ನು (ಕೆಲವೊಮ್ಮೆ ಚಪ್ಪಲಿಗಳನ್ನು) ಎಸೆಯಬೇಕಾಗಿದೆ. ಈ ಕಂಬವು ಶೈತಾನನ್ನು ಪ್ರತಿನಿಧಿಸುವ ಕಲ್ಲು ಎಂದು ಭಾವಿಸಬೇಕಾಗಿದೆ. ಹಾಗೆಯೇ 'ರಿವರ್ಸ್ ಆಸ್ಮೋಸಿಸ್'[8] ಎಂಬ ವಿಧಾನದಲ್ಲಿ ಶುದ್ಧೀಕರಿಸಲ್ಪಟ್ಟ ನೀರನ್ನು ಬಹಳ ಪವಿತ್ರವೆಂದು ನಂಬಬೇಕಾಗಿದೆ.

- ಪರಮಾತ್ಮನು (ಜನರೊಂದಿಗೆ ಸೇರಿ ಬದುಕಿದಂತಹ) ಒಂದು ಮಗನಿಗೆ ಜನ್ಮ ನೀಡಿದ್ದಾನೆಂದು ನಂಬುವುದು ತಮ್ಮ ನಂಬಿಕೆಯ ಒಂದು ಕಂಬವಾಗಿದೆ ಎಂದು ಮತ್ತೊಂದು ಧರ್ಮದ ತಜ್ಞರಾದ, ಬೈಬಲ್ ನಲ್ಲಿ ಕಂಡುಬಂದಿರುವ *ಗಾಸ್ಪೆಲ್* ನ್ನು ತಾಂತ್ರಿಕವಾಗಿ ಅನುಸರಿಸುವವರು ಹೇಳುತ್ತಾರೆ. ಒಂದು ದೇವಾಲಯದ ಉನ್ನತ ಪಾದ್ರಿಯು ಈ ದೇವನ ಮಗನನ್ನು ಶಿಲುಬೆಗೇರಿಸುವ ಆಜ್ಞೆಯನ್ನು ಹೊರಡಿಸುವ ಅಧಿಕಾರವನ್ನು ಹೊಂದಿದ್ದಾರೆಂದೂ ಇವರು ನಂಬುತ್ತಾರೆ.

---

[7] ಇಸ್ಲಾಂ ಎಂದು ಕರೆಯಲ್ಪಡುವ 'ಧರ್ಮ'ವು ವದಂತಿಗಳ ಹಾಗೂ ಕುರ್‌ಆನೇತರ ಮೂಲಗಳ ಮೇಲೆ ಆಧಾರಿತವಾಗಿದ್ದೂ, ಅದು ನಂಬಿಕೆಯ ಐದು 'ಕಂಬಗಳನ್ನು' ಕಡ್ಡಾಯಗೊಳಿಸಿದೆ ಹಾಗೂ ಒಬ್ಬ ಮನುಷ್ಯ, ಮರಣದನಂತರ ಒಂದು ಉತ್ತಮ ಜೀವನವನ್ನು ಪಡೆಯಬೇಕಾದರೆ, ಈ ಐದು ಕಾರ್ಯಗಳನ್ನು ಖಡ್ಡಾಯವಾಗಿ ನಿರ್ವಹಿಸಬೇಕು.

[8] ಈ ಮಸೀದಿಯಲ್ಲಿ ಸರಬರಾಜಾಗುವ ನೀರು, ಅಲ್ಲಾಹನಿಂದ ಚಮಾತ್ಕಾರಿಕವಾಗಿ ಸರಬರಾಜು ಮಾಡಲಾಗಿದೆಯೆಂದು ನಂಬುತ್ತಾರೆ ಹಾಗೂ ಅದನ್ನು ಝಮ್ ಝಮ್ ಎಂದು ಕರೆಯುತ್ತಾರೆ. ಈ ರೀತಿಯ ಅಸಂಬದ್ಧತೆಯು ಕುರ್‌ಆನಿನಲ್ಲಿ ಕಂಡುಬರುವುದಿಲ್ಲ.

- ತೌರಾತಿನ ಅನುಯಾಯಿಗಳೆಂದು ಹೇಳಿಕೊಳ್ಳುವ, ಅದೇ ಧಾರ್ಮಿಕ ತಜ್ಞರು, ಅಲ್ಲಾಹನ ಪ್ರವಾದಿಯ ಮೇಲೆ ಧರ್ಮನಿಂದನೆಯ ಆರೋಪವನ್ನು ಹೊರಿಸಿ, ಅವರನ್ನು ಶಿಲುಬೆಗೇರಿಸಲು ಆದೇಶಿಸಿದರು. 'ಸಜ್ಜನ ಪುರುಷರು ಒಂದು ಟೋಪಿಯನ್ನು ಧರಿಸುತ್ತಾರೆ ಮತ್ತು ತಲೆಯ ಬದಿಯ ಹಾಗೂ ಗಡ್ಡದ ಅಂಚುಗಳ ಕೂದಲನ್ನು ಕತ್ತರಿಸುವುದಿಲ್ಲ' ಎಂದು ಅವರ ಪ್ರತಿರೂಪಿಗಳು ಇಂದು ಹೇಳುತ್ತಾರೆ.

ಈ 'ತಜ್ಞರಿಗೆ' ಇಂತಹ ಹಾಸ್ಯಾಸ್ಪದ ಸಿದ್ಧಾಂತಗಳನ್ನು ಉತ್ತೇಜಿಸಲು ಕೈತುಂಬಾ ಹಣ ಸಿಗುತ್ತದೆ ಮತ್ತು ವಿಶ್ವದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು 'ಝಕಾತ್'[9] ಮತ್ತು ವಿವಿಧ ರೀತಿಯ ತೆರಿಗೆಗಳ ಮೂಲಕ ಇವರಿಗೆ ಹಣವನ್ನು ಪಾವತಿ ಮಾಡುತ್ತಾರೆ. ಕುರ್‌ಆನ್ 'ನೀವು ಯಾವುದೇ ವೇತನ ಕೇಳದವರನ್ನು ಅನುಸರಿಸಿರಿ' ಎಂದು ಹೇಳುತ್ತದೆ.

ಕುರ್‌ಆನ್ ನಿರಂತರವಾಗಿ ಜನರಿಗೆ ತಮ್ಮ ಸಾಮಾನ್ಯ ಜ್ಞಾನವನ್ನು ಬಳಸುವಂತೆ ನೆನಪಿಸುತ್ತದೆ. ಜನರಿಗೆ ಯುಕ್ತಿಯನ್ನು ನಿರಾಕರಿಸುವುದು ತಪ್ಪೆಂದು ಗೊತ್ತಿದ್ದರೂ, ತಿಳಿಯಲು ಬೇಕಾದ ಪ್ರಯತ್ನವನ್ನು ಮಾಡುವುದಿಲ್ಲ:

> ನಿಜವಾಗಿಯೂ ನಾವು ಅನೇಕ ಜಿನ್ನ್ ಗಳನ್ನು ಮತ್ತು ಮನುಷ್ಯರನ್ನು ನರಕ್ಕಾಗಿ ನಿಯುಕ್ತಿಗೊಳಿಸಿದ್ದೇವೆ. ಅವರಿಗೆ ಹೃದಯಗಳಿವೆ ಆದರೆ ಅವರು ಅದರಿಂದ ವಿವೇಚಿಸುವುದಿಲ್ಲ. ಕಣ್ಣುಗಳಿವೆ ಆದರೆ ಅವರು ಅವುಗಳಿಂದ ವೀಕ್ಷಿಸುವುದಿಲ್ಲ. ಕಿವಿಗಳಿವೆ ಆದರೆ ಅವರು ಅವುಗಳಿಂದ ಆಲಿಸುವುದಿಲ್ಲ. ಅವರು ಪ್ರಾಣಿಗಳಂತೆ – ಅಲ್ಲ - ಅವುಗಳಿಗಿಂತಲೂ ನೀಚರು. ಅವರು ಅಲಕ್ಷರಾಗಿದ್ದಾರೆ. (7:179)

ನನ್ನ ಅಧ್ಯಯನದಲ್ಲಿ, ಕೇವಲ ಕುರ್‌ಆನಿನ ಸತ್ಯವೀಕ್ಷಣೆಯನ್ನು ಆಧಾರವನ್ನಾಗಿಸಿದ್ದೇನೆ ಮತ್ತು ಅವಶ್ಯಕತೆಯಿರುವ ವೈಚಾರಿಕ ತೀರ್ಮಾನಗಳನ್ನು ಕುರ್‌ಆನಿನಿಂದಲೇ ತೆಗೆದು ಪ್ರಸ್ತುತ ಪಡಿಸಿದ್ದೇನೆ. ನನ್ನ ಅರಿವಿನ ಪ್ರಕಾರ ಈ ರೀತಿಯ ಪುಸ್ತಕವು, ಇದೇ ಮೊದಲ ಮಾದರಿಯದ್ದು. ನಾನು ಈ ಸಂಶೋಧನೆ ನಡೆಸದೇ ಇರುತ್ತಿದ್ದರೆ, ಶೀರ್ಘದಲ್ಲೇ ಅಥವಾ ತಡವಾಗಿ, ಬೇರೆ ಯಾರೋ ನನ್ನ ಸ್ಥಳದಲ್ಲಿ ಇದನ್ನು ನಡೆಸುತ್ತಿದ್ದರು.

ವಿಶೇಷವಾಗಿ ಮುಸ್ಲಿಮೇತರ ಓದುಗರನ್ನು ಸಂಬಂಧಿಸಿದಂತೆ, ಈ ಅಧ್ಯಯನವು, ಗ್ರಂಥದ ಪರೀಕ್ಷಣೆಯ ವಿಧಾನದಲ್ಲಿ ಒಂದು ಹೊಸತನವಾಗಿದೆ. 'ಎಲ್ಲಾ ಮಾನವ ಜನಾಂಗಕ್ಕೆ ಅನ್ವಯವಾಗುವಂತಹ, ಜೀವನದ ಒಂದು ಅರ್ಥಪೂರ್ಣ ವಿಧಾನವನ್ನು, ಕುರ್‌ಆನಿನ ಪಾಠಗಳಿಂದ ಪಡೆಯುವ ಅಗತ್ಯವನ್ನು ಕುರ್‌ಆನ್ ಸೂಚಿಸುವುದಿಲ್ಲ' ಎಂಬುವುದು ಅನೇಕ 'ಮುಸ್ಲಿಮರ' ದೃಷ್ಟಿಕೋನವಾಗಿದೆ ಎಂದು, ಗ್ರಂಥದ ವಿಮರ್ಶಾತ್ಮಕ ಅಧ್ಯಯನದಿಂದ ತಿಳಿದುಬರುತ್ತದೆ. ಅವರನ್ನು ಸಂಬಂಧಿಸಿದಂತೆ, ಕುರ್‌ಆನ್ ಪರಿಶುದ್ಧವಾಗಿ 'ಧರ್ಮ'ದ ಬಗ್ಗೆ ವ್ಯವಹರಿಸುತ್ತದೆ. ಈ ಪ್ರಸ್ತಾಪವು, 'ಕುರ್‌ಆನ್ ಧರ್ಮವನ್ನು ವಿರೋಧಿಸುತ್ತದೆ' ಎಂಬ ಸತ್ಯಾಂಶಕ್ಕೆ

[9] ಈ ಪದವನ್ನು ಮುಂದೆ ವಿಸ್ತರಿಸಲಾಗಿದೆ.

ಸಂಪೂರ್ಣವಾಗಿ ವಿರುದ್ಧವಾಗಿದೆ ಮತ್ತು ಮುಸ್ಲಿಮರು ಈ ಮುಖ್ಯವಾದ ಅಂಶವನ್ನು ಗ್ರಹಿಸುವ ತನಕ, ತಾವು ಅನುಸರಿಸುತ್ತಿದ್ದೇವೆ ಎಂದು ಭಾವಿಸಿರುವಂತಹ ಗ್ರಂಥದ ಬಗ್ಗೆ ಅಜ್ಞಾನಿಗಳಾಗಿಯೇ ಉಳಿಯುತ್ತಾರೆ.

ಕೆಲವು ಓದುಗರಿಗೆ, ಈ ಅಧ್ಯಯನದ ನೇರ ಶೈಲಿಯು ಹೆಚ್ಚಾಗಿ ಹಿಡಿಸದಿರಬಹುದು. ಕೆಲವು ಭಾಗಗಳಲ್ಲಿ ಅವರು ವಿಪರೀತವಾಗಿ ಮೊಂಡಾದ ಭಾಷೆಯನ್ನು ಸಹ ಕಾಣಬಹುದು. ಈ ಪುಸ್ತಕವು, ಗ್ರಾಂಥಿಕ ಟೀಕೆಯ ಬಗ್ಗೆ ಯಾವುದೇ ಅರಿವಿಲ್ಲದವರಿಗೆ ಮತ್ತು ಧಾರ್ಮಿಕ ಗಣ್ಯರು ಕುರ್'ಆನಿನ ಸಂದೇಶವನ್ನು ಹೇಗೆ ಬದಲಾಯಿಸುತ್ತಿದ್ದಾರೆಂದು ಕಲಿಯಲು ಇಷ್ಟಪಡುವ ಜನರಿಗೆ ಬರೆಯಲಾಗಿದೆ. ಇದು ಅವರ ಜಾತಿಯನ್ನು ಲಕ್ಷಿಸದೆ, ಎಲ್ಲರಿಗೂ ಓದಲಾಗುವ ಉದ್ದೇಶವನ್ನು ಹೊಂದಿದೆ. ನಿಸ್ಸಂಶಯವಾಗಿ ಪ್ರಪಂಚದಾದ್ಯಂತ, ಸತ್ಯ ಮತ್ತು ಸರಿಯಾದ ದೀನನ್ನು ಹುಡುಕುತ್ತಿರುವ ಪ್ರಾಮಾಣಿಕ ಮತ್ತು ಬುದ್ಧಿವಂತ ಮುಸ್ಲಿಮರು ಇದ್ದಾರೆ. ಬಹುಶಃ ಅರಬರಲ್ಲೂ ಸಹ ಇರಬಹುದು. ಅವರಿಗೆ ನನ್ನ ಮನವಿ ಏನೆಂದರೆ, ಈ ಲೇಖನವನ್ನು - ತುಲನೆಮಾಡುವ ಮತ್ತು ಪರಿಗಣಿಸುವ ಉದ್ದೇಶದಿಂದ ಓದಬೇಕೇ ಹೊರತು - ಅದನ್ನು ವಿರೋಧಿಸಲು ಮತ್ತು ಅಲ್ಲಗಳೆಯಲು ಅಥವಾ ನಂಬಿದ ನಂತರ ಅಲಕ್ಷಿಸುವ ಸಲುವಾಗಿ - ಓದಬೇಡಿರಿ.

ಬಹುಮುಖ್ಯವಾಗಿ, ಯಾವುದೇ ಓದುಗನಿಗೆ ಅಪಮಾನವೆಸಗಲು ನಾನು ಇಚ್ಛಿಸುವುದಿಲ್ಲ. ನನ್ನ ಈ ಪ್ರಸ್ತಾಪವು, ಸಂಪೂರ್ಣವಾಗಿ ನನ್ನ ಧೃಢವಾದ ನಂಬಿಕೆಯ ಶಕ್ತಿಯಿಂದ ಹುಟ್ಟಿಕೊಂಡಿದೆ ಎಂಬುವುದನ್ನು ಪರಿಗಣಿಸಿದರೆ, ನಾನು ಕೃತಜ್ಞರಾಗಿರುತ್ತೇನೆ.

ಈ ಪರಿಚಯವನ್ನು ಸಮಾಪ್ತಿಗೊಳಿಸುವ ಮೊದಲು, ನಿಮಗೆ ತಿಳಿಸಲು ಇಚ್ಛಿಸುತ್ತೇನೆಂದರೆ, ಐದಿದ್ ಸಫರ್ ಎಂಬುವುದು ನನ್ನ ಕಾವ್ಯನಾಮ ಅಥವಾ ಉಪನಾಮ ವಾಗಿದೆ. ಯುಕ್ತಿ ಮತ್ತು ಸಹನೆ ಇಲ್ಲದ ಇಂದಿನ ಬುದ್ಧಿಭ್ರಮಣೆಯ ಅರಬೀ ಧರ್ಮವು, ಒಂದು ಜಟಿಲವಾದ ಸಮಸ್ಯೆಯಾಗಿ ಮಾರ್ಪಟ್ಟಿದೆ. ತಾವು ವಿಶ್ವಾಸವಿರಿಸಿದ್ದೇವೆಂದು ಹೇಳಿಕೊಳ್ಳುತ್ತಿರುವ ಗ್ರಂಥದ ಮೂಲಭೂತ ಜ್ಞಾನವು ಕೂಡ ಅವರಿಗಿಲ್ಲ. ಮೊರಾಕ್ಕೋದಿಂದ ಫಿಲಿಪೈನ್ಸ್'ನ ವರೆಗೆ, ಒಂದು ಶತಕೋಟಿಗಿಂತಲೂ ಹೆಚ್ಚು ಜನರು ತಮ್ಮನ್ನು ಈ ಮನೋರೋಗದಲ್ಲಿ ಭಾಗವಹಿಸಲು ಅವಕಾಶ ನೀಡಿ ವಂಚನೆಗೊಳಗಾಗಿದ್ದಾರೆ.

ಈ ಪುಸ್ತಕದಲ್ಲಿ ನಾನು ಹೇಳಿದ್ದಕ್ಕಿಂತಲೂ ಅಲ್ಪ ಪ್ರಮಾಣದ ವಿಚಾರಗಳನ್ನು ಹೇಳಲು ಮುಂದೆ ಬಂದಂತಹ ಜನರಿಗೆ ಮರಣದಂಡನೆಯನ್ನು ವಿಧಿಸಲಾಗಿದೆ. ಮುಸ್ಲಿಂ ರಾಷ್ಟ್ರಗಳೆಂದು ಕರೆಯಲ್ಪಡುವ ಅನೇಕ ದೇಶಗಳಲ್ಲಿ, ಇಂತಹ ಪುಸ್ತಕವನ್ನು ಬರೆಯುವುದು - ಕಿರುಕುಳ, ವಿಚಾರಣೆ, ಸೆರೆವಾಸ ಅಥವಾ ಅರಬೀ ಧರ್ಮದ ಉತ್ಸಾಹಿತ ಹುಚ್ಚು ಅನುಯಾಯಿಗಳ ಕೈಯಿಂದ ಸಾವಿಗೂ ಆಮಂತ್ರಣ ನೀಡುವುದಕ್ಕೆ ಸಮಾನವಾಗಿದೆ. ಖಂಡಿತವಾಗಿಯೂ, ಒಂದು ಸಂವೇದನಾಶೀಲ ವ್ಯಕ್ತಿಯು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳುತ್ತಾನೆ.

ಇಲ್ಲಿ ಸಂದೇಶವು ಮುಖ್ಯ, ಯಾರು ಹೇಳುತ್ತಿದ್ದಾನೆ ಎಂಬುವುದಲ್ಲ. ಸಂದೇಶ-ಧಾರಕನ ಹತ್ಯೆಯು ಇತಿಹಾಸದ ಪುಸ್ತಕಗಳಲ್ಲಿ ದೃಢಪಡಿಸಲಾದ ಒಂದು ನಡವಳಿಕೆಯಾಗಿದೆ. ಮತ್ತೊಂದೆಡೆ, ತಪ್ಪಾಗಿ ನಿರ್ದೇಶಿತರಾದ

ಅನುಯಾಯಿಗಳು, ಸಂದೇಶ-ಧಾರಿಗಳು ಹೇಳಿದ್ದನ್ನು ತಿರುಚಿ, ಅವರನ್ನೇ ಆರಾಧಿಸಲು ತೊಡಗುತ್ತಾರೆ. ಈ ಎರಡೂ ಸ್ಥಿತಿಗಳ ಸಾಧ್ಯತೆಯನ್ನು ನಾನು ತಡೆಯಲು ಬಯಸುತ್ತೇನೆ. ಹೀಗಾಗಿ, ಓದುಗರ ಅನುಮತಿಯನ್ನು ಕೋರುತ್ತಾ, ನಾನು ಬರೇ ಐದಿದ್ ಸಫರ್ ಎಂದಾಗಿ ಉಳಿದುಕೊಳ್ಳುತ್ತೇನೆ.

ಆಸಕ್ತಿಯುಳ್ಳ ವ್ಯಕ್ತಿಗಳು ಈ ಪುಸ್ತಕವನ್ನು ಬರೆದಂತಹ ವಿಚಾರಧಾರೆಯಲ್ಲೇ, ಇದನ್ನು ಓದಬೇಕೆಂಬುವುದು ನನ್ನ ಪ್ರಾಮಾಣಿಕ ಬಯಕೆಯಾಗಿದೆ. ಜೊತೆಗೆ, ನನಗೆ ಈ ಕಾರ್ಯವನ್ನು ಕೈಗೊಳ್ಳಲು ನೈತಿಕ ಬೆಂಬಲ ನೀಡಿದವರಿಗೆ ನನ್ನ ಪ್ರಾಮಾಣಿಕ ಧನ್ಯವಾದಗಳನ್ನು ವ್ಯಕ್ತಪಡಿಸಲು ಬಯಸುತ್ತೇನೆ. ಇಂತಹ ಒಂದು ಪುಸ್ತಕವನ್ನು ಬರೆಯಲು ನನಗೆ ಉತ್ತೇಜನ ನೀಡಿದ ನನ್ನ ಸ್ನೇಹಿತರು, ಸಹವರ್ತಿಗಳು ಮತ್ತು ಕುಟುಂಬಕ್ಕೆ ನಾನು ಅಭಾರಿಯಾಗಿದ್ದೇನೆ. ದಯವಿಟ್ಟು ನನ್ನ ಶಾಂತಿ ಶುಭಾಶಯವನ್ನು ಸ್ವೀಕರಿಸಿ.

ಧನ್ಯವಾದಗಳು.

ಅನುಬಂಧ (Annex)

‘ಪದಗಳಿಗೆ’ ಸಂಬಂಧಿಸಿದ ವಚನಗಳ ಕುರ್‌ಆನಿನ ಕೆಲವು ಸನ್ನಿವೇಶಗಳು:

- ಆದಮರು ಅಲ್ಲಾಹನಿಂದ ಪದಗಳನ್ನು ಪಡಕೊಂಡರು

ಆದರೆ ಶೈತಾನನು ಅವರನ್ನು ವಂಚಿಸಿದ ಕಾರಣವಾಗಿ ಅವರು ಅಲ್ಲಿಂದ ಗಡೀಪಾರು ಮಾಡಲ್ಪಟ್ಟರು. “ಪರಸ್ಪರ ಶತ್ರುಗಳಾಗಿ ಹೊರ ನಡೆಯಿರಿ ಮತ್ತು (ಇನ್ನು) ನಿಮಗೆ ತಾತ್ಕಾಲಿಕ ವಸತಿ ಮತ್ತು ಆಹಾರವು ಭೂಮಿಯ ಮೇಲಾಗಿದೆ” ಎಂದು ನಾವು ಹೇಳಿದೆವು. ನಂತರ ಆದಮ್ ತನ್ನ ಒಡೆಯನಿಂದ ‘ಪದಗಳನ್ನು’ ಸ್ವೀಕರಿಸಿದರು, ಮತ್ತು ನಂತರ ಆತನು ಅವರನ್ನು ವಿಮೋಚನೆಗೊಳಿಸಿದನು. ಅವನೇ ವಿಮುಕ್ತಿಗೊಳಿಸುವವನೂ ಮತ್ತು ಕರುಣಾಮಯನೂ ಆಗಿದ್ದಾನೆ. ನಂತರ ನಾವು “ನೀವೆಲ್ಲರೂ ಅಲ್ಲಿಂದ ಹೊರಗಿಳಿಯಿರಿ. ಮುಂದೆ ನನ್ನ ಕಡೆಯಿಂದ ಮಾರ್ಗದರ್ಶನವು ನಿಮ್ಮ ಬಳಿ ಬಂದಾಗ, ಯಾರು ಆ ಮಾರ್ಗದರ್ಶನದಂತೆ ನಡೆಯುವರೋ ಅವರಿಗೆ ಯಾವುದೇ ಭಯ ಮತ್ತು ಚಿಂತೆ ಇರಲಾರದು. ಅದನ್ನು ಯಾರು ನಿರಾಕರಿಸುತ್ತಾರೋ ಮತ್ತು ನನ್ನ ಅವತೀರ್ಣವನ್ನು ಸುಳ್ಳಾಗಿಸುತ್ತಾರೋ, ಅವರು ನರಕದಲ್ಲಿ ಬೀಳುವವರಾಗಿದ್ದು ಅಲ್ಲಿ ಅವರು ಸದಾಕಾಲವೂ ಇರುವರು”. (2:36-39)

- ಇಬ್ರಾಹೀಮರು ಅಲ್ಲಾಹನ ಪದಗಳೊಂದಿಗೆ ಪರೀಕ್ಷಿಸಲ್ಪಟ್ಟರು

ಇಬ್ರಾಹೀಮರು ತನ್ನ ಪ್ರಭುವಿನಿಂದ ಕೆಲವು ‘ಪದಗಳ’ ಮುಖಾಂತರ ಪರೀಕ್ಷಿಸಲ್ಪಟ್ಟಾಗ, ಅವರು ಅದನ್ನು ಪೂರೈಸಿದರು. ನಂತರ ಅಲ್ಲಾಹನು “ನಾನು ನಿನನ್ನು ಜನರಿಗೆ ನಾಯಕನಾಗಿ ಮಾಡುವವನಿದ್ದೇನೆ” ಎಂದರು. ಅವರು ಉತ್ತರಿಸಿದರು: “ನನ್ನ ಸಂತತಿಗಳನ್ನೂ ಇದು ಒಳಗೊಳ್ಳುತ್ತದೆಯೇ?”. ಅಲ್ಲಾಹನು ಹೇಳಿದನು: “ನನ್ನ ವಾಗ್ದಾನವು ಅಕ್ರಮಿಗಳಿಗೆ ಅನ್ವಯಿಸುವುದಿಲ್ಲ” (2:124). ನಂತರ ಮಾನವರಿಗೆ ಅನುಗ್ರಹವಾಗಿಯೂ, ರಕ್ಷಣೆಯಾಗಿಯೂ ಒಂದು ವ್ಯವಸ್ಥೆಯನ್ನು ನಾವು ಅವರಿಗೆ ಸೂಚಿಸಿದೆವು. ಆದ್ದರಿಂದ ನೀವು ಬದ್ಧನಾಗಿದ್ದ ಇಬ್ರಾಹೀಮರ ನಿಲುವನ್ನು ಅಲವಡಿಸಿರಿ. ನಿಷ್ಠೆಯುಳ್ಳ, ವಿನಮ್ರವಾಗಿ ಸಮ್ಮತಿಸುವ ಜನಸಮೂಹಕ್ಕಾಗಿ ನಮ್ಮ ವ್ಯವಸ್ಥೆಯನ್ನು ಶುದ್ಧಗೊಳಿಸಲು, ಇಬ್ರಾಹೀಮ್ ಮತ್ತು ಇಸ್ಮಾಯೀಲರನ್ನು ನಾವು ನೇಮಿಸಿದೆವು. (2:125)

- ಅಲ್ಲಾಹನು ಮೂಸಾರಿಗೆ ತನ್ನ ಪದಗಳನ್ನು ಅವತೀರ್ಣಗೊಳಿಸಿದನು

ಅಲ್ಲಾಹನು ಹೇಳಿದನು: “ಓ ಮೂಸಾ ನಾನು ನನ್ನ ಸಂದೇಶ ಹಾಗೂ ಪದಗಳೊಂದಿಗೆ, ಎಲ್ಲರಿಗಿಂತಲೂ ಮಿಗಿಲಾಗಿ ನಿನ್ನನ್ನು ಆಯ್ಕೆ ಮಾಡಿದ್ದೇನೆ. ಆದ್ದರಿಂದ ನಾನು ನಿನಗೆ ಕೊಟ್ಟದ್ದನ್ನು ಸ್ವೀಕರಿಸಿ ಕೃತಜ್ಞತನಾಗು.

ಅನಂತರ ನಾವು ಮೂಸಾರಿಗೆ, ಎಲ್ಲಾ ವಿಧದ ಜ್ಞಾನವನ್ನೂ, ಎಲ್ಲಾ ವಿಷಯದ ವಿವರವನ್ನೂ ಒಂದು ಫಲಕದಲ್ಲಿ ಬರೆದು ಕೊಟ್ಟೆವು: "ನೀವು ಇವುಗಳನ್ನು ದೃಢವಾಗಿ ಎತ್ತಿಹಿಡಿಯಿರಿ, ಇದರ ಒಳ್ಳೆಯ ಪಾಠಗಳನ್ನು ಅನುಸರಿಸಲು ನಿಮ್ಮ ಜನರಿಗೆ ಹೇಳಿರಿ. ಅಕ್ರಮಿಗಳ ವಿಧಿಯನ್ನು ಸದ್ಯವೇ ನಿಮಗೆ ತೋರಿಸಿ ಕೊಡುವೆನು".

ನಂತರ, ಅನ್ಯಾಯವಾಗಿ ಭೂಮಿಯಲ್ಲಿ ಅಹಂಕಾರ ಪಡುವವರ ದೃಷ್ಟಿಯನ್ನು ನನ್ನ ನಿದರ್ಶನಗಳಿಂದ ತಿರುಗಿಸಿ ಬಿಡುವೆನು. ಅವರು ಯಾವ ನಿದರ್ಶನಗಳನ್ನು ಕಂಡರೂ ಎಷ್ಟು ಮಾತ್ರಕ್ಕೂ ವಿಶ್ವಾಸವಿಡುವವರಲ್ಲ. ಅವರ ಮುಂದೆ ಮಾರ್ಗದರ್ಶನದ ಪಥವು ತೋಚಿದರೆ, ಅದನ್ನು ತಮ್ಮ ಪಥವನ್ನಾಗಿ ಒಪ್ಪಿಕೊಳ್ಳಲು ತಿರಸ್ಕರಿಸುತ್ತಾರೆ ಮತ್ತು ತಪ್ಪಾದ ಪಥವನ್ನು ಕಂಡರೆ ಅದನ್ನು ತಮ್ಮ ಪಥವನ್ನಾಗಿ ಒಪ್ಪಿಕೊಳ್ಳುತ್ತಾರೆ. ಏಕೆಂದರೆ ಅವರು ನಮ್ಮ ನಿದರ್ಶನಗಳನ್ನು ತಿರಸ್ಕರಿಸಿದರು ಮತ್ತು ಅವುಗಳನ್ನು ಕಡೆಗಣಿಸಿದರು. (7:144-146)

- ಯಹೂದಿಗಳು ಅಲ್ಲಾಹನ ಪದಗಳ ಅರ್ಥವನ್ನು ವಿಕೃತಗೊಳಿಸಿದರು

ಅಲ್ಲಾಹನು ಇಸ್ರಾಯೀಲರ ಸಂತತಿಗಳ ಜೊತೆ ಒಂದು ಕರಾರನ್ನು ಪಡೆದು ತೆಗೆದುಕೊಂಡಿದ್ದನು ಮತ್ತು ನಾವು ಅವರಿಗೆ ಹನ್ನೆರಡು ಮೇಲ್ವಿಚಾರಕರನ್ನು ನೇಮಿಸಿದ್ದೆವು; ಅಲ್ಲಾಹನು ಹೇಳಿದನು: "ನೀವು ನಿಮ್ಮ ಬದ್ಧತೆಗಳನ್ನು ಪಾಲಿಸಿಕೊಂಡು ಮತ್ತು ಅದನ್ನು ಪರಿಶುದ್ಧವಾಗಿ ಇರಿಸಿಕೊಳ್ಳುವ ತನಕ ನಾನು ನಿಮ್ಮೊಂದಿಗಿದ್ದೇನೆ. ಮತ್ತು ನನ್ನ ಸಂದೇಶವಾಹಕರ ಮೇಲೆ ವಿಶ್ವಾಸವನ್ನು ಇರಿಸಿರಿ ಹಾಗೂ ಅವರನ್ನು ಬೆಂಬಲಿಸಿರಿ ಮತ್ತು ನಿಮ್ಮ ಸಾತ್ವಿಕತೆಯನ್ನು ಅಲ್ಲಾಹನಿಗೆ ಸಾಲ ನೀಡಿರಿ. ನಿಶ್ಚಯವಾಗಿಯೂ ನಾನು ನಿಮ್ಮ ತಪ್ಪುಗಳನ್ನು ಕ್ಷಮಿಸಿ, ಹರಿಯುವ ಹೊಳೆಯಿರುವ ಆನಂದದೊಳಗೆ ನಿಮ್ಮನ್ನು ಪ್ರವೇಶ ಮಾಡಿಸುತ್ತೇನೆ. ಆದರೆ ಯಾರಾದರೂ ಧಿಕ್ಕರಿಸಿದರೆ, ವಾಸ್ತವವಾಗಿ ಅವರು ನೇರ ಪಥದಿಂದ ತಪ್ಪಿಹೋಗುತ್ತಾರೆ. ತರುವಾಯ, ತಮ್ಮ ಕರಾರನ್ನು ಉಲ್ಲಂಘಿಸಿದ ಕಾರಣ, ನಾವು ಅವರ ಮೇಲೆ ಶಾಪವನ್ನು ನೀಡಿ, ಅವರ ಹೃದಯವನ್ನು ಕಠಿಣಗೊಳಿಸಿದೆವು. ನಂತರ, **<u>ಅವರಿಗೆ ನೀಡಿದ 'ಪದಗಳನ್ನು' ತಿರುಚಿ, ಅದರ ಒಂದು ಪಾಲನ್ನು ಅವರು ನಿರ್ಲಕ್ಷಿಸಿದರು.</u>** ಕೆಲವರನ್ನು ಹೊರತುಪಡಿಸಿ, ನೀವು ಅವರಲ್ಲಿ ಯಾವಾಗಲೂ, ಕೆಡುಕನ್ನೇ ಕಾಣುತ್ತೀರಿ. ನೀವು ಅವರನ್ನು ಕ್ಷಮಿಸಿರಿ ಮತ್ತು ಮರೆತುಬಿಡಿರಿ - ಅಲ್ಲಾಹನು ಸಹಾನುಭೂತಿಯನ್ನು ಪ್ರೀತಿಸುತ್ತಾನೆ. (5:12-13)

- ಯಹ್ಯಾರು ಪದಗಳ ಮೂಲಕ ಸ್ಪಷ್ಟನೆ ನೀಡಿದರು

ನಂತರ ಝಕರಿಯ್ಯಾ ಹೀಗೆ ಪ್ರಾರ್ಥಿಸಿದರು: "ನನ್ನ ಪ್ರಭುವೇ, ನನಗೆ ಸದ್ಗುಣ ಸಂತತಿಯನ್ನು ದಯಪಾಲಿಸು. ನೀನೇ ಪ್ರಾರ್ಥನೆಗಳನ್ನು ಕೇಳುವವನು". ಅವರು ನಿರ್ಬಂಧಿತನಾಗಿ ತನ್ನ ಬದ್ಧತೆಯನ್ನು ಎತ್ತಿಹಿಡಿಯುತ್ತಿರುವ ಸಂದರ್ಭದಲ್ಲಿ, ಒಂದು ಶಕ್ತಿಯು *(ಮಲಾ' ಇಕ್)* ಅವರಿಗೆ ಪ್ರತಿಕ್ರಿಯಿಸಿತು: "ನಿಜವಾಗಿಯೂ, ಅಲ್ಲಾಹನು ನಿಮಗೆ ಯಹ್ಯಾರ ಶುಭವಾರ್ತೆಯನ್ನು ಕೊಡುತ್ತಾನೆ. ಅವನು (ಯಹ್ಯಾ) **<u>'ಅಲ್ಲಾಹನ ಪದಗಳ'</u>** ಬಗ್ಗೆ ಸತ್ಯಸಂಧನೂ,

ಗೌರವಾನ್ವಿತನೂ ಮತ್ತು ಪರಿಶುದ್ಧನೂ ಆಗಿರುತ್ತಾನೆ ಮತ್ತು ಸದ್ಗುಣರ ಪೈಕಿಯಲ್ಲಿರುವ ಒಬ್ಬ ಪ್ರವಾದಿಯಾಗಿರುತ್ತಾನೆ" (3:38-39).

- ಮರ್ಯಮರು ಅಲ್ಲಾಹನ ಪದಗಳೊಂದಿಗೆ ಗ್ರಂಥವನ್ನು ದೃಢೀಕರಿಸಿದರು

ಸತ್ಯನಿಷೇಧಕರಿಗೆ ಅಲ್ಲಾಹನು ನೂಹರ ಮತ್ತು ಲೂತರ ಪತ್ನಿಯರ ಉದಾಹರಣೆಯನ್ನು ಮುಂದಿಡುತ್ತಾನೆ. ಅವರಿಬ್ಬರು ಸದ್ಗುಣರಾದ ನಮ್ಮ ಇಬ್ಬರು ಸೇವಕರ ದಾಂಪತ್ಯದಲ್ಲಿದ್ದರೂ, ಅವರು ತಮ್ಮ ಪತಿಯರನ್ನು ವಂಚಿಸಿದರು. ಪರಿಣಾಮವಾಗಿ, ಅವರು ತಮ್ಮ ಪತ್ನಿಯರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. "ಇತರರ ಜೊತೆಗೆ ನೀವೂ ಯಾತನೆಗೆ ಪ್ರವೇಶಿಸಿ" ಎಂದು ಆ ಪತ್ನಿಯರಿಗೆ ಹೇಳಲಾಯಿತು. ವಿಶ್ವಾಸಿಗಳ ವಿಷಯದಲ್ಲಿ ಅಲ್ಲಾಹನು ಫಿರ್'ಔನಿನ ಪತ್ನಿಯ ಉದಾಹರಣೆಯನ್ನು ಮುಂದಿಡುತ್ತಾನೆ. ಅವಳು ಹೇಳಿದಳು: "ನನ್ನ ಪ್ರಭುವೇ, ನೀನು ನನಗೆ ಆನಂದದ ಒಂದು ವ್ಯವಸ್ಥೆಯನ್ನು ಸ್ಥಾಪಿಸು ಮತ್ತು ಫಿರ್'ಔನಿನ ಹಾಗೂ ಅವನ ಕ್ರಿಯೆಗಳಿಂದ ನನ್ನನ್ನು ರಕ್ಷಿಸು ಮತ್ತು ಅನ್ಯಾಯಿಗಳಾದ ಜನರಿಂದ ನನ್ನನ್ನು ಕಾಪಾಡು". ಮತ್ತು ಇಮ್ರಾನರ ಮಗಳು ಮರ್ಯಮರ (ಉದಾಹರಣೆ), ಅವರು ತಮ್ಮ ಮಾನವನ್ನು ಕಾಪಾಡಿಕೊಂಡಿದ್ದರು. ಹೀಗಾಗಿ ನಾವು ಅವರೊಳಗೆ ನಮ್ಮ ಆತ್ಮವನ್ನು ಊದಿದೆವು. **<u>ಅವರು ತನ್ನ ಪ್ರಭುವಿನ ಹಾಗೂ ಅವನ ಗ್ರಂಥದ 'ಪದಗಳ'</u>** ಬಗ್ಗೆ ಸತ್ಯಸಂಧರೂ ಮತ್ತು ಅನುಸರಿಸುವವರೂ ಆಗಿದ್ದರು. (66:10-12)

- ಮರ್ಯಮರ ಮಗ ಈಸಾರು, ಸಂದೇಶವಾಹಕರು ಹಾಗೂ ಅಲ್ಲಾಹನ ಪದಗಳಾಗಿದ್ದರು

ಓ ಗ್ರಂಥಗಳ ಜನರೇ, ಜೀವನ ರೀತಿಯಲ್ಲಿನ ಮಿತಿಗಳನ್ನು ಮೀರಬೇಡಿರಿ ಮತ್ತು ಅಲ್ಲಾಹನ ಬಗ್ಗೆ ಸತ್ಯದ ವಿನಹಃ ಬೇರೇನನ್ನೂ ನುಡಿಯದಿರಿ. ಮರ್ಯಮರ ಪುತ್ರ ಈಸಾ ಮಸೀಹರು, **<u>ಒಬ್ಬ ಸಂದೇಶವಾಹಕ ಹಾಗೂ ಅಲ್ಲಾಹನು ಮರ್ಯಮರಿಗೆ ಕಳುಹಿಸಿದಂತಹ 'ಪದಗಳಾಗಿದ್ದರು'</u>** ಹಾಗೂ ಅಲ್ಲಾಹನ ಕಡೆಯಿಂದ ಒಂದು <u>ಆತ್ಮವಾಗಿದ್ದರೇ ವಿನಹಃ ಬೇರೇನೂ ಆಗಿರಲಿಲ್ಲ.</u> ಆದ್ದರಿಂದ ನೀವು ಅಲ್ಲಾಹನಲ್ಲಿ ಹಾಗೂ ಅವನ ಸಂದೇಶವಾಹಕರಲ್ಲಿ ಮಾತ್ರ ವಿಶ್ವಾಸವಿರಿಸಿ ಮತ್ತು ಮೂವರಿದ್ದಾರೆನ್ನಬೇಡಿರಿ. ಇದನ್ನು ತ್ಯಜಿಸುವುದು ಸ್ವತಃ ನಿಮಗೇ ಉತ್ತಮ. ನಿಶ್ಚಯವಾಗಿಯೂ, ಅಲ್ಲಾಹನು ಏಕದೇವನಾಗಿದ್ದಾನೆ. ಅವನಿಗೊಬ್ಬ ಮಗನಿದ್ದಾನೆನ್ನಲು, ಅವನು ಅದರಿಂದ ಬಹಳ ಪರಿಶುದ್ಧನಾಗಿರುತ್ತಾನೆ. ಭೂಮಿ ಆಕಾಶಗಳಲ್ಲಿ ಇರುವುದೆಲ್ಲವೂ ಅವನ ಸೊತ್ತು ಮತ್ತು ನಿಮ್ಮ ಸಂರಕ್ಷಣೆಗೆ ಅಲ್ಲಾಹನೇ ಸಾಕು. (4:171)

- ಮುಹಮ್ಮದರು ಅಲ್ಲಾಹನನ್ನು ಮತ್ತು ಅವನ ಪದಗಳನ್ನು ನಂಬಿದ್ದರು

ಹೇಳಿರಿ: “ಓ ಜನರೇ, ನಾನು ನಿಮಗೆಲ್ಲರಿಗೂ, ಭೂಮಿ ಆಕಾಶಗಳನ್ನು ಆಳುತ್ತಿರುವ ನಿಮ್ಮ ಪ್ರಭುವಿನ ಸಂದೇಶವಾಹಕನಾಗಿದ್ದೇನೆ. ಅವನಲ್ಲದೆ ಬೇರೆ ದೇವರಿಲ್ಲ. ಅವನೇ ಜೀವನ ಹಾಗೂ ಮರಣವನ್ನು ಕೊಡುವವನು”. ಆದ್ದರಿಂದ ಅಲ್ಲಾಹನ ಹಾಗೂ **ಅವನ ‘ಪದಗಳ’** ಮೇಲೆ ವಿಶ್ವಾಸವಿರಿಸುವ, ಉಮ್ಮೀ ಪ್ರವಾದಿಯಾದ, ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿ ಮತ್ತು ಅವರನ್ನು ಅನುಸರಿಸಿರಿ, ನೀವು ಸನ್ಮಾರ್ಗ ಹೊಂದಬಹುದು. (7:158)

- ಯಾವ ಮನುಷ್ಯನಿಗೂ ಅಲ್ಲಾಹನ ಪದಗಳನ್ನು ಬದಲಾಯಿಸಲು ಸಾಧ್ಯವಿಲ್ಲ

ನಿಮ್ಮ ಪ್ರಭುವಿನ ಪದವು ಸತ್ಯ ಮತ್ತು ನ್ಯಾಯದ ದೃಷ್ಟಿಯಲ್ಲಿ ಪರಿಪೂರ್ಣವಾಗಿದೆ. **ಅವನ ಪದಗಳನ್ನು** ಯಾರಿಗೂ ಬದಲಾವಣೆ ಮಾಡಲಾಗದು. ಅವನು ಸರ್ವಶ್ರುತನೂ, ಸರ್ವಜ್ಞನೂ ಆಗಿರುತ್ತಾನೆ (6:115). ನಿಮ್ಮ ಪ್ರಭುವಿನ ಗ್ರಂಥದಿಂದ ಅವತೀರ್ಣ ಮಾಡಲಾಗಿರುವುದನ್ನು ಪಠಿಸಿರಿ, ಅವನ **‘ಪದಗಳನ್ನು’** ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ ಮತ್ತು ಅದರ ಹೊರತಾಗಿ ಬೇರೆ ಯಾವುದೇ ಮೂಲವು ಇಲ್ಲ. (18:27)

- ಅಲ್ಲಾಹನು ತನ್ನ ಪದಗಳೊಂದಿಗೆ ಸತ್ಯವನ್ನು ಸ್ಥಾಪಿಸಲು ಇಚ್ಛಿಸಿದನು

ನಿಮಗೆ ಪರಸ್ಪರ ಎದುರಿಸುವ ಶಕ್ತಿ ಇಲ್ಲವೆಂದು ಭಾವಿಸಿದ್ದಾಗ, ನಿಮಗೆ ಅವನು ಬಲವರ್ಧನೆ ಮಾಡುವನು ಎಂದು ಎರಡು ಗುಂಪುಗಳಲ್ಲಿ ಒಂದಕ್ಕೆ ಅಲ್ಲಾಹನು ಭರವಸೆ ಕೊಡುತ್ತಾನೆ ಮತ್ತು ಅವನ ‘ಸತ್ಯಸಂಧತೆಯೇ ಸತ್ಯವಾಗಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ ಮತ್ತು ಅದು ಸತ್ಯನಿಷೇಧಿಗಳೆಲ್ಲರನ್ನೂ ತಟಸ್ಥಗೊಳಿಸುತ್ತದೆ (8:7). ಅಪರಾಧಿಗಳಿಗೆ ಎಷ್ಟೇ ಅಸಂತುಷ್ಟಿಯುಂಟಾದರೂ ಸರಿ, ಅಲ್ಲಾಹನು **ತನ್ನ ‘ಪದಗಳೊಂದಿಗೆ’** ಸತ್ಯವನ್ನು ಬೆಂಬಲಿಸುತ್ತಾನೆ (10:82).

- ಅಲ್ಲಾಹನು ತನ್ನ ಪದಗಳ ಮೂಲಕ ಯಾವುದೇ ಅಸತ್ಯವನ್ನು ಅಳಿಸಲು ಮತ್ತು ಸತ್ಯವನ್ನು ಮರು ಸ್ಥಾಪಿಸಲು ಸಾಧ್ಯವಿರುವವನು

ನೀನು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿರುವೆ ಎಂದು ಅವರು ಹೇಳುತ್ತಾರೆಯೇ? ಅಲ್ಲಾಹನು ಇಚ್ಛಿಸಿದರೆ, ನಿನ್ನ ಹೃದಯಕ್ಕೆ ಮುದ್ರೆಯೊತ್ತಿ, **ಅವನ ಪದಗಳ** ಮೂಲಕ ಯಾವುದೇ ಮಿತ್ಯವನ್ನು ಅಳಿಸಿ, ಸತ್ಯವನ್ನು ಮರು ಸ್ಥಾಪಿಸುತ್ತಾನೆ. ನಿಶ್ಚಯವಾಗಿಯೂ, ಅವನು ನಿಮ್ಮ ಹೃದಯದಲ್ಲಿ ಅವಿತಿರುವುದನ್ನು ಬಲ್ಲನು (42:24).

- ಅಲ್ಲಾಹನು ಈ ಗ್ರಂಥವನ್ನು ಸಂರಕ್ಷಿಸುತ್ತಾನೆಂದು ಸ್ವತಃ ತಾನೇ ಭರವಸೆಯನ್ನು ನೀಡಿದ್ದಾನೆ

ಈ 'ಉಪದೇಶ'ವನ್ನು ನಿಶ್ಚಯವಾಗಿಯೂ ನಾವೇ ಅವತೀರ್ಣಗೊಳಿಸಿದೆವು ಹಾಗೂ ಅದನ್ನು ನಾವೇ ಸಂರಕ್ಷಿಸುವೆವು (15:9)

- ಮನುಕುಲಕ್ಕೆ ನಿದರ್ಶನವಾಗಿ ಕೇವಲ ಕುರ್‌ಆನ್ ಮಾತ್ರ ಧಾರಾಳವಾಗಿ ಸಾಕು

"ಇವನ ಪ್ರಭುವಿನ ಕಡೆಯಿಂದ ಇವನ ಮೇಲೆ ನಿದರ್ಶನಗಳೇಕೆ ಇಳಿಸಲ್ಪಡಲಿಲ್ಲ?" ಎಂದು ಅವರು ಕೇಳುತ್ತಾರೆ. ಹೇಳಿರಿ, "ನಿದರ್ಶನಗಳು ಅಲ್ಲಾಹನ ಕಡೆಯಿಂದ ಮಾತ್ರ ಬರುತ್ತದೆ, ನಾನಂತೂ ಕೇವಲ ಸುಸ್ಪಷ್ಟ ಎಚ್ಚರಿಕೆ ನೀಡುವವನು ಮಾತ್ರ". **ಇವರಿಗೆ ಓದಿ ಕೇಳಿಸಲಾಗುತ್ತಿರುವ ಈ ಗ್ರಂಥವನ್ನು ನಾವು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ಇವರಿಗೆ (ನಿದರ್ಶನವಾಗಿ) ಸಾಕಾಗದೇ?** ನಿಶ್ಚಯವಾಗಿಯೂ, ಸತ್ಯವಿಶ್ವಾಸಿಗಳಿಗೆ ಇದರಲ್ಲಿ ಕೃಪೆ ಹಾಗೂ ಉಪದೇಶವಿದೆ (29:50-51).

ನಾವು ಕುರ್‌ಆನಿನ ಅಧ್ಯಯನವನ್ನು ಬಯಸುವುದಾದರೆ, ಅದರ ಪದಗಳನ್ನು ಕಾಗುಣಿಸುವ ಮತ್ತು ಉಚ್ಚರಿಸುವ ರೀತಿಯನ್ನು ಗಮನಿಸಬೇಕು. ಕುರ್‌ಆನ್ ಪಾರಾಯಣಿಸಲಾದಾಗ ಅದನ್ನು ನಾವು ಎಚ್ಚರಿಕೆಯಿಂದ ಕೇಳಬೇಕು ಎಂದು 7:204 ರಲ್ಲಿ ಹೇಳಲಾಗಿದೆ.

> ಮತ್ತು ಕುರ್‌ಆನ್ ಓದಲ್ಪಟ್ಟಾಗ, ಅದನ್ನು ಎಚ್ಚರಿಕೆಯಿಂದ ಆಲಿಸಿರಿ ಮತ್ತು ಆವಲೋಕಿಸಿರಿ, ನೀವು ಅನುಗ್ರಹೀತರಾಗಬಹುದು (7:204).

ಭಾಗ ಒಂದು

ತಪ್ಪು ಕಲ್ಪನೆ

ಇಸ್ಲಾಂ ಇಂದು ಅತ್ಯಂತ ದುರುಪಯೋಗಿಸಲ್ಪಟ್ಟ ಮತ್ತು ಅಪಾರ್ಥಗೊಂಡ ಪದಗಳಲ್ಲೊಂದಾಗಿದೆ. ಇಸ್ಲಾಂ ಎಂಬ ಪದವು, 'ಶಾಂತಿಪರತೆ' ಎಂಬ ಪ್ರಭಾವಕಾರಿಯಾದ ಅರ್ಥವನ್ನು ನೀಡುತ್ತದೆ – ಅದು ಆದೇಶಗಳ ಪಾಲನೆಯ ಮೂಲಕ ಪ್ರಾಪ್ತಿಯಾಗುತ್ತದೆ (ಅಂದರೆ ದೀನ್) – ಮನುಕುಲವು ಸೃಷ್ಟಿಕರ್ತನ ಭವ್ಯವಾದ ಸೃಷ್ಟಿ ವಿನ್ಯಾಸದಲ್ಲಿ ಒಂದು ವ್ಯವಸ್ಥಿತ ಜೀವನ ರೀತಿಯನ್ನು ಆನಂದಿಸಲು, ಎಲ್ಲಾ ಪ್ರವಾದಿಯರಿಗೆ ಹಾಗೂ ಸಂದೇಶವಾಹಕರಿಗೆ ಅವನು ಅವತರಿಸಿದಂತಹ ಕೊಡುಗೆಯಾಗಿದೆ (ಅಂದರೆ ಅಲ್ಲಾಹನ ವ್ಯವಸ್ಥೆ). ಆದರೆ ಇಸ್ಲಾಂ ಎಂದು ಕೇಳುವಾಗ ಮನಸ್ಸಿಗೆ ಮೂಡಿಬರುವ ರೂಪವು ಇದು ಅಲ್ಲ. ಧರ್ಮ, ಪುರಾಣ, ಮೂಢನಂಬಿಕೆ ಇರುವಂತಹ ಹಾಗೂ ಪಾವನತೆಗಳು ಇಲ್ಲದಂತಹ ಆನಂದಮಯ ಜೀವನವನ್ನು ನೈಜ್ಯವಾದ ಇಸ್ಲಾಂ ಉದ್ದೇಶಿಸುತ್ತದೆ. ಆದಾಗ್ಯೂ, ಧಾರ್ಮಿಕರು ಅದನ್ನು ಸಂಪೂರ್ಣವಾಗಿ ಧ್ವಂಸಗೊಳಿಸಲಿಲ್ಲ. ಬದಲಿಗೆ, ಅದರ ವಿನ್ಯಾಸಕಾರನ ಸಂಕಲ್ಪವನ್ನು ಅದು ಎಂದೆಂದಿಗೂ ಪ್ರತಿಭಿಂಬಿಸದಂತೆ, ಅದರ ಸ್ವರೂಪವನ್ನೇ ಪರಿವರ್ತನೆಗೊಳಿಸಿ, ಅದನ್ನು ವ್ಯವಸ್ಥಿತವಾಗಿ ನಾಶಗೊಳಿಸಿದರು. ಅರಬೀ ಧರ್ಮದ ಪ್ರಸ್ತಾವಣೆಯು ಜನರನ್ನು ದಾರಿ ತಪ್ಪಿಸುತ್ತದೆ, ಜನರ ಸಂಭಾವ್ಯ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಇಂದಿನ ಪ್ರತಿಕೂಲ ಮತ್ತು ನಿಷ್ಕ್ರಿಯ ಮುಸ್ಲಿಂ ಸಮಾಜವು, ಅದರ ಫಲಿತಾಂಶವಾಗಿದೆ. ಅದು ಹಿಂಸೆ, ಭಯೋತ್ಪಾದನೆ, ತೀರ್ವವಾದ, ಆರಾಧನೆ, ಮೂರ್ತಿಪೂಜೆ, ಆಚಾರಗಳು, ವಿಧಿಗಳು, ಪ್ರಾಣಿಬಲಿ, ತೀರ್ಥಯಾತ್ರೆಯ ಸಂಸ್ಕಾರಗಳು, ದಬ್ಬಾಳಿಕೆಯ ಬುಡಕಟ್ಟು ಕಾನೂನುಗಳು, ಜಾತಿ ಪದ್ಧತಿ, ಶೋಷಣೆ, ದುರಭಿಮಾನ, ಅವನತಿ, ಮತ್ತು ಬಡತನವನ್ನು ಭೋಧಿಸುವ ಒಂದು ಜೀವನ ರೀತಿಯಾಗಿ (ದೀನ್) ಮಾರ್ಪಟ್ಟಿದೆ. ಇದು ಅಲ್ಲಾಹನು ಆಜ್ಞಾಪಿಸಿರುವುದಾಗಿದೆ ಎಂದು ಅವರು ಪ್ರತಿಪಾದಿಸುತ್ತಾರೆ. ಇವುಗಳು ಕುರ್‌ಆನಿನಲ್ಲಿ ಪ್ರಸ್ತಾವಿಸಲಾದ ಶಾಂತಿಪರತೆಯ ಸಿದ್ಧಾಂತಕ್ಕೆ, ಸಾಬೀತು ಪಡಿಸಬಹುದಾದಂತಹ ವೈರುದ್ಯಗಳಾಗಿವೆ.

ಈ ಪುಸ್ತಕವು ಮೂರ್ತಿಪೂಜಕ ಅರಬೀ ಧರ್ಮವನ್ನು ಚರ್ಚಿಸುತ್ತದೆ. ಪ್ರಸ್ತುತ ಸ್ಥಿತಿಯ ವ್ಯವಹಾರಗಳು, ಅಂತ್ಯ ಪ್ರವಾದಿಗೆ ಅವತರಿಸಲಾದ ಇಸ್ಲಾಮಿನ ದೃಷ್ಟಿಕೋನವಲ್ಲವೆಂದು ನಾನು ಸಾದರಪಡಿಸುತ್ತೇನೆ. ಕುರ್‌ಆನಿನ ಪ್ರಕಾರ, ಒಬ್ಬ ವ್ಯಕ್ತಿಯು ಒಂದು ಧರ್ಮವನ್ನೂ ತನ್ನದಾಗಿಸಿಕೊಳ್ಳದೆ, ಸುಖಮಯವಾದ ಜೀವನವನ್ನು ಆನಂದಿಸಬಹುದು. ಪ್ರತಿಯೊಂದು ಪ್ರವಾದಿಗಳ ಶತ್ರುಗಳು, ಅಲ್ಲಾಹನ ಪಥದಿಂದ ಮಾನವಕುಲವನ್ನು ತಿರುಗಿಸಲು ಧರ್ಮಗಳನ್ನು ಅವಿಷ್ಕರಿಸುತ್ತಾರೆಂದು ಕುರ್‌ಆನಿನಲ್ಲಿರುವ ಆಧಾರಗಳು ತಿಳಿಸುತ್ತದೆ. ಧಾರ್ಮಿಕರು 'ಶಾಂತಿ'ಯನ್ನು 'ಹಿಂಸೆ ಪೀಡಿತ' ಮೂರ್ತಿಪೂಜಕ ಧರ್ಮವನ್ನಾಗಿ ಬದಲಿಸಿ, ತಾವು ನಿಜವಾಗಿಯೂ ಅಲ್ಲಾಹನ ಶತ್ರುಗಳೆಂದು ವಿಶ್ವಕ್ಕೆ ಸಾಬೀತು ಪಡಿಸಿರುವುದು ಆಘಾತಕಾರಿಯಾಗಿದೆ.

ಈ ದಾವೆಯನ್ನು ಬೆಂಬಲಿಸುವ ಮೊದಲು, ಈ ಅಧ್ಯಯನವು ಅವಲಂಬಿಸಿರುವತಹ ವಿಚಾರಗಳನ್ನು ಗಮನಿಸೋಣ. ಅವುಗಳೆಂದರೆ:

- ಕುರ್‌ಆನ್ ಅಲ್ಲಾಹನ ಪದವಾಗಿದೆ.
- ಕುರ್‌ಆನ್ ಮುಸ್ಲಿಮರಿಗೆ ಹಕ್ಕುಗಳ ಏಕೈಕ ದಾಖಲೆಯಾಗಿದೆ.
- ಕುರ್‌ಆನಿನ ಅಂಶಗಳು ಸತ್ಯ, ನಿಖರ, ವಿವಾದರಹಿತವಾಗಿವೆ ಹಾಗೂ ಪರಿಪೂರ್ಣವಾಗಿ ಲಿಖಿತಗೊಂಡಿದೆ.
- ಜನರು ಶಾಶ್ವತಪಡಿಸ ಬಯಸುವ ವಿಕೃತಿಗಳನ್ನು ಹಾಗೂ ವೈಪರೀತ್ಯಗಳನ್ನು, ಕುರ್‌ಆನ್ ಸುಲಭವಾಗಿ ಬಯಲು ಪಡಿಸುತ್ತದೆ.

ನಾವು ಮುಂದುವರೆಯುವ ಮೊದಲು, ನಾನು ಈ ವಿಷಯನ್ನು ಸಂಭೋದಿಸಲು ಆಯ್ಕೆ ಮಾಡಿರುವ ಕಾರಣವೇನೆಂದು ಸಂಕ್ಷಿಪ್ತವಾಗಿ ವಿವರಿಸಲು ಅವಕಾಶ ಬಯಸುತ್ತೇನೆ. ಕುರ್‌ಆನಿನ ಪ್ರಕಾರ ಅಲ್ಲಾಹನು, ಮೂರ್ತಿ ಆರಾಧನೆಯನ್ನು ಹೊರತು ಪಡಿಸಿ, ಅವನು ಇಚ್ಛಿಸುವವರ ಪಾಪಗಳು ಕ್ಷಮಿಸುತ್ತಾನೆ. ಅವನು ಅಥವಾ ಅವಳು, ತಿಳಿದೋ ಅಥವಾ ತಿಳಿಯದೆಯೋ ಮೂರ್ತಿ ಆರಾಧನೆಗೆ ಕುಸಿದು ಬಿದ್ದರೆ, ಆ ವ್ಯಕ್ತಿಯ ಎಲ್ಲಾ ಸತ್ಕಾರ್ಯಗಳೂ ರದ್ದುಮಾಡಲಾಗುವುದು.

> ನೀವು ಮೂರ್ತಿ ಆರಾಧನೆ ಮಾಡಿದರೆ, ನಿಮ್ಮ ಕರ್ಮಗಳನ್ನು ರದ್ದುಪಡಿಸಲಾಗುವುದು ಹಾಗೂ ನೀವೂ ನಷ್ಟಹೊಂದುವವರಲ್ಲಾಗುತ್ತೀರಿ ಎಂದು, ನಿಮ್ಮ ಕಡೆಗೂ, ನಿಮಗಿಂತ ಮುಂಚಿನವರ ಕಡೆಗೂ ಅವತೀರ್ಣಿಸಲಾಗಿದೆ. ಆದ್ದರಿಂದ ನೀವು, ಕೇವಲ ಅಲ್ಲಾಹನನ್ನು ಮಾತ್ರ ಸೇವೆ ಮಾಡಿರಿ ಹಾಗೂ ಕೃತಜ್ಞತರಾಗಿರಿ. (39:65-66)
>
> ತನ್ನ ಜೊತೆ ಬೇರೆ ಯಾವುದನ್ನಾದರೂ ಮೂರ್ತೀಕರಿಸಿದರೆ, ಅಲ್ಲಾಹನು ಅದನ್ನು ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು, ಅವನು ಇಚ್ಛಿಸುವವರಿಗೆ ಅವನು ಕ್ಷಮಿಸುತ್ತಾನೆ. ಅಲ್ಲಾಹನ ಜೊತೆ, ಯಾರಾದರೂ ಏನನ್ನಾದರೂ ಮೂರ್ತೀಕರಿಸಿದರೆ, ಅವನು ಅತಿ ದೊಡ್ಡ ಪಾಪವನ್ನು ಸೃಷ್ಟಿಸಿದನು. (4:48)

ಉದಾಹರಣೆಗೆ, ಮೂಸಾರು ತನ್ನ ಯವ್ವನದ ದಿನಗಳಲ್ಲಿ, ಒಬ್ಬ ಮನುಷ್ಯನನ್ನು ಕೊಂದಿದ್ದರು. ಆದರೆ, ಅವರು ಕೇವಲ ಸರ್ವೋಚ್ಚ ಅಲ್ಲಾಹನನ್ನು ಮಾತ್ರ ಸೇವೆ ಮಾಡಿಕೊಳ್ಳುತ್ತಾ ಬದಲಾವಣೆಗೊಂಡ ಕೂಡಲೇ, ಅಲ್ಲಾಹನು ಅವರು ಎಸಗಿದ ಅಪರಾಧವನ್ನು ಕ್ಷಮಿಸಿ, ಅವರನ್ನು ಪ್ರವಾದಿಯಾಗಿ ಆರಿಸಿದನು. ಕುರ್‌ಆನ್ ಮೂಸಾರ ಇತಿಹಾಸದ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡುತ್ತದೆ.

‘ದುರ್ಬಲತೆ’ ಮಾನವನ ಸಹಜಗುಣವಾಗಿದೆ. ನಾವು ಅನೇಕ ತಪ್ಪುಗಳನ್ನು ಮಾಡುತ್ತಾ, ಒಂದು ಸಾಮಾನ್ಯ ಜೀವನ ಮಿತಿಯನ್ನು ಉಲ್ಲಂಘಿಸುತ್ತಾ ನಮ್ಮ ಆತ್ಮಗಳನ್ನು ದೋಷಿತಗೊಳಿಸುತ್ತೇವೆ. ಒಂದು ವ್ಯಕ್ತಿ ಏನೇ ತಪ್ಪುಗಳನ್ನು ಎಸಗಲಿ, ನಂತರ ಅವನು ಅಥವಾ ಅವಳು ಒಂದು ಸದ್ಗುಣ ಜೀವನ ನಡೆಸಿದರೆ, ಆ ಕೆಡುಕುಗಳನ್ನು ಒಳಿತಾಗಿ ಪರಿವರ್ತಿಸಲ್ಪಡಬಹುದೆಂದು ಎಂದು ಮತ್ತೊಂದು ಕಡೆ ಕುರ್‌ಆನ್ ಭರವಸೆ ನೀಡುತ್ತದೆ. ಇಂತಹ ನಿರ್ಧಾರಕ್ಕೆ ಆ ವ್ಯಕ್ತಿಯು ಒಂದು ಧರ್ಮವನ್ನೂ ತನ್ನದಾಗಿಸಬೇಕೆಂದಿಲ್ಲ.

> ಪಶ್ಚಾತ್ತಾಪ ಪಟ್ಟು, ವಿಶ್ವಾಸವಿಟ್ಟು, ಸತ್ಕರ್ಮಗಳನ್ನು ಮಾಡವವರ ಕೆಡುಕುಗಳನ್ನು ಅಲ್ಲಾಹನು ಒಳಿತಾಗಿ ಪರಿವರ್ತಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾಮಯನೂ ಆಗಿರುತ್ತಾನೆ. ಪಶ್ಚಾತ್ತಾಪ ಪಟ್ಟು ಸತ್ಕರ್ಮಗಳನ್ನು ಮಾಡಲಾರಂಭಿಸುವವರಿಗೆ, ಅಲ್ಲಾಹನು ಸಂಪೂರ್ಣವಾಗಿ ವಿಮೋಚನೆಗೊಳಿಸುತ್ತಾನೆ. (25:70-71)

ಇದು ಕುರ್‌ಆನಿನಲ್ಲಿರುವಂತಹ ಸ್ವತಃ ಅಲ್ಲಾಹನ ಭರವಸೆಯಾಗಿದೆ. ಸತ್ಯವಿಶ್ವಾಸ ತರಲು ಹಾಗೂ ಪಶ್ಚಾತಾಪ ಪಡಲು ನಾವು ಧಾರ್ಮಿಕರಾಗಿಬೇಕಾಗಿಲ್ಲ. ಒಳ್ಳೆಯ ಕರ್ಮಗಳನ್ನು ಮಾಡಲು ನಾವು ಯಾವುದೇ ಧರ್ಮವನ್ನು ತನ್ನದಾಗಿಸಿ ಕೊಳ್ಳಬೇಕೆಂದಿಲ್ಲ.

ಕುರ್‌ಆನ್

‘ಕುರ್‌ಆನನ್ನು ಬೇರೆ ಭಾಷೆಗಳಿಗೆ ಭಾಷಾಂತರಿಸಲು ಸಾಧ್ಯವೇ ಇಲ್ಲ, ಯಾಕೆಂದರೆ ಅಂತಹ ಪ್ರಯತ್ನ ಅದರ ಅರ್ಥದ ಸತ್ವವನ್ನು ಬದಲಾವಣೆಗೊಳಿಸುತ್ತದೆ’ ಎಂಬ ವಾದವೇ ಧಾರ್ಮಿಕರ ಮೊದಲ ವಿಕೃತಿಯಾಗಿದೆ.

ಇದು ಸ್ಪಷ್ಟವಾದ ಸುಳ್ಳಾಗಿದೆ. ತಮ್ಮ ಸ್ವಂತ ಭಾಷೆಗಳಲ್ಲಿ ಅಲ್ಲಾಹನ ಪದಗಳನ್ನು ತಿಳಿದು ಕೊಳ್ಳದಂತೆ ಪ್ರಪಂಚದ ಜನರನ್ನು ತಡೆಯಲು ಧಾರ್ಮಿಕರು ತಯಾರಿಸಿದ ಮೊದಲ ಷಡ್ಯಂತ್ರವಾಗಿದೆ. ಅರಬೀ ಭಾಷೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಅರಬೀ ಧಾರ್ಮಿಕರನ್ನೇ ಅವಲಂಬಿಸುವಂತಾದರೆ, ಅವರು ಸತ್ಯವಿಶ್ವಾಸದ ಅಧಿಕೃತ ಕಾವಲುಗಾರರಾಗಿ ಪರಿಣಮಿಸುತ್ತಾರೆ. ಇದರ ಅನಿವಾರ್ಯ ಪ್ರಭಾವವಾಗಿ, ಯಾವುದು ಸರಿಯಾದ ವಿವರಣೆಯೆಂದು ಇವರು ಹೇಳಿಕೊಳ್ಳುತ್ತಾರೋ, ಅದೇ ಅಲ್ಲಾಹನ ಸತ್ಯ ಎಂದು ಒಪ್ಪಿಕೊಳ್ಳಬೇಕಾಗಿದೆ. **ಇದರ ನಿವ್ವಳ ಪರಿಣಾಮವಾಗಿ, ಅಲ್ಲಾಹನ *ದೀನ್* ಕ್ರಮೇಣ ಮತ್ತು ಗಮನಕ್ಕೆ ಬಾರದಂತೆ, ಅನ್ವೇಷಿತ ಅರಬೀ ಧರ್ಮದ ಪದ್ಧತಿಗಳಾಗಿ ಬದಲಾಯಿಸಲಾಯಿತು.**

ಜಗತ್ತಿನಾದ್ಯಂತ ಅರಬೇತರ ಮುಸ್ಲಿಮರು ದೈನಂದಿನ ಐದು ಬಾರಿಯ ವಿಧ್ಯುಕ್ತ ಪಾರ್ಥನೆಯನ್ನು (ನಮಾಝ್) ಅರಬೀ ಭಾಷೆಯಲ್ಲಿ ನಡೆಸುತ್ತಾರೆಂಬುವುದು ನಮಗೆಲ್ಲರಿಗೂ ತಿಳಿದಿದೆ. ಇದು ಕುರ್‌ಆನಿನಲ್ಲಿ ಕಂಡುಬರದಂತಹ, ಅವರ ಅರಬೀ ಧರ್ಮದ ವಿಶಿಷ್ಟ ಅಗತ್ಯಗಳಲ್ಲಿ ಒಂದಾಗಿದೆ. ತಮ್ಮ ವಿಧ್ಯುಕ್ತ

ಪ್ರಾರ್ಥನೆಯನ್ನು ಅರಬೀ ದೇವನೊಂದಿಗೆ ಅರಬೀ ಭಾಷೆಯಲ್ಲೇ ನಿರ್ವಹಿಸಬೇಕೆಂದು, ಇಂಗ್ಲೀಷ್, ಫ್ರೆಂಚ್, ಜರ್ಮನ್, ರಶ್ಯನ್, ಜಪಾನೀ, ಚೀನೀ, ಇಂಡಿಯನ್, ಆಫ್ರಿಕನ್ ಮತ್ತು ಇತರ ಅರಬಿ ಮಾತನಾಡದ ಸಮೂಹಗಳಿಗೂ ಹೇಳಲಾಗಿದೆ. ಅಲ್ಲಾಹನಿಗೆ ಅರಬಿಯಲ್ಲದೆ ಇತರ ಯಾವುದೇ ಭಾಷೆ ಅರ್ಥವಾಗುವುದಿಲ್ಲ ಎಂಬಂತ್ತಾಗುತ್ತದೆ. ಇದು ಅವೈಚಾರಿಕವಾಗಿದೆ.

ಧಾರ್ಮಿಕರು ಧರ್ಮದ ಹಾಗೂ ಅದರ ವಿಸ್ತರಣೆಯ ಮೂಲಕ ಅದರ ಅನುಯಾಯಿಗಳ ಮೇಲೆ ತಮ್ಮ ಪ್ರಭಾವವನ್ನು ಪ್ರಯೋಗಿಸಲು, ಉದ್ದೇಶಪೂರ್ವಕವಾಗಿ ಒಂದು ಭಾಷೆಯ ತಡೆಗೋಡೆಯನ್ನು ನಿರ್ಮಿಸಿದರು. ಪರಿಣಾಮವಾಗಿ, ನಾವು ಇಂದು ತಿಳಿದಿರುವಂತಹ ಅರಬೀ ಮತ್ತು ಮುಸ್ಲಿಂ ಸಂಸ್ಕೃತಿಯನ್ನು ಅವರು ಸೃಷ್ಟಿಸಿದರು. ಕುರ್‌ಆನನ್ನು ಕಲಿಯುವುದರಿಂದ ವಿಶ್ವಾಸಿಗಳನ್ನು ವ್ಯವಸ್ಥಿತವಾಗಿ ದೂರವಿರಿಸಿ, ಸರ್ವಲೋಕದ ಪ್ರಭುವಿನ ಸೇವೆಯನ್ನು ಮಾಡದಂತೆ ತಡೆಗಟ್ಟುತ್ತಾರೆ. ಅಂತಿಮವಾಗಿ, ಕುರ್‌ಆನಿನ ಯಾವುದೇ ಅನುವಾದಗಳು, ಕಾನೂನುಬದ್ಧ ಅನುವಾದಗಳೆಂದು ಪ್ರಕಟಿಸಬೇಕಾದರೆ ಮೊದಲು ಅವುಗಳು ಇವರ 'ಪೂರ್ವ ಪರಿಶೀಲನೆ'ಗೆ ಒಳಗಾಗಬೇಕಾಗುತ್ತದೆ.

ಈ ಎಲ್ಲಾ ಅವೈಚಾರಿಕ ಅರಬೀ ಭ್ರಮೆಗಳನ್ನು ವ್ಯವಸ್ಥಿತವಾಗಿ ಅನ್ವೇಷಿಸುವ ಮತ್ತು ನಾಶಪಡಿಸುವ ಆಶಯವನ್ನು ಈ ಪುಸ್ತಕವು ಹೊಂದಿದೆ. **ಸಾಮಾನ್ಯ ಪ್ರಜ್ಞೆ** (Common Sense) ಮತ್ತು **ವೈಚಾರಿಕತೆ** (Logic)ಯ ಒಂದು ಆರೋಗ್ಯಕರವಾದ ಪ್ರಮಾಣದಿಂದ ಸಜ್ಜಿತಗೊಂಡು, ನಾವು ಕುರ್‌ಆನನ್ನು ಅವಲೋಕಿಸೋಣ. ಅಂದರೆ, ಪ್ರಸ್ತುತಪಡಿಸಿರುವಂತಹ ತರ್ಕಗಳನ್ನು ಅರಬರೂ, ಅರಬೇತರೂ ಅಥವಾ ಯಾರಾದರೂ ಸರಿ, ತಪಾಸಣೆ ಮಾಡಿ ಪರಿಶೀಲಿಸಬಹುದು. ಕುರ್‌ಆನ್ ಯಾವುದೇ ಸೂಕ್ಷ್ಮ ಪರಿಶೀಲನೆ ಅಥವಾ ಟೀಕೆಗಳನ್ನು ಎದುರಿಸುತ್ತದೆ. ಇದು ನಿಜವಾಗಿಯೂ ಅಲ್ಲಾಹನಿಂದ ಅವತೀರ್ಣಸಲ್ಪಟ್ಟ ಗ್ರಂಥವಾಗಿದೆ.

ಸತ್ಯವನ್ನು ಅನ್ವೇಷಿಸಲು ತಮ್ಮ ಸಾಮಾನ್ಯ ಪ್ರಜ್ಞೆಯನ್ನು ಬಳಸದಂತಹ ಅಥವಾ ತಮ್ಮ ಪುರೋಹಿತರನ್ನು ಪ್ರಶ್ನಿಸದಂತಹ ಮತ್ತು ತಮ್ಮನ್ನು 'ಮುಸ್ಲಿಮರು' ಎಂದು ನಾಚಿಕೆಯಿಲ್ಲದೆ ಕರೆಸಿಕೊಳ್ಳುವಂತಹ, ಅನ್ವೇಷಿತ ಅರಬೀ ಧರ್ಮದ ಅನುಯಾಯಿಗಳು, ಇಂದು ಭೂಮುಖದ ಮೇಲಿರುವ ಅತಿ ಕೆಟ್ಟ ಸಮುದಾಯವಾಗಿದ್ದಾರೆ**.** ಮೂರ್ಖ ಧಾರ್ಮಿಕ ಗುರುಗಳಿಗೆ ಆಧೀನರಾದುದರಿಂದ ಅಲ್ಲಾಹನು ಇವರನ್ನು ಖಂಡಿಸಿದ್ದಾನೆ ಮತ್ತು ಅವಮಾನಗೊಳಿಸಿದ್ದಾನೆ. ವಿಶ್ವದ ಪ್ರಭು ಹಾಗೂ ಏಳು ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನ ಆಶಯಕ್ಕೆ ಅವರ ಷಡ್ಯಂತ್ರವು ವಿರುದ್ಧವಾಗಿದೆ. ಅವನ ಕರುಣೆಯ ಮೂಲಕ, ಇಬ್ರಾಹೀಮ್, ಇಸ್ಮಾಯೀಲ್, ಇಸ್ಹಾಕ್, ಯಾಕೂಬ್, ಮೂಸಾ, ಈಸಾ ಮತ್ತು ಇತರ ಪ್ರವಾದಿಗಳ ಮೇಲೆ ತನ್ನ ಸಂಕಲ್ಪವನ್ನು ಅಲ್ಲಾಹನು ಅವತರಿಸಿದನು. ಸ್ಪಷ್ಟವಾಗಿ, ಅವುಗಳಲ್ಲಿ ಪ್ರತಿಯೊಬ್ಬರೂ ತಮ್ಮ ಸ್ವಂತ ಭಾಷೆಯಲ್ಲೇ ಅವತೀರ್ಣವನ್ನು ಪಡೆದು ಕೊಂಡಿದ್ದರು. ಈ ದಿನಾಂಕದ ವರೆಗೆ, ಕೇವಲ ಒಂದು ನಿರ್ದಿಷ್ಟ ಭಾಷೆಯಲ್ಲಿ ದೇವನನ್ನು ಸೇವೆ ಮಾಡಲು ಮಾನವಕುಲಕ್ಕೆ ಸೂಚಿಸಲಾಗಲಿಲ್ಲ. ಎಲ್ಲರ ಜೀವನವನ್ನು ಸರಳ ಪಡಿಸಿ ಅಲ್ಲಾಹನ ಸೇವೆ ಮಾಡಲು ಸಾಧ್ಯಗೊಳಿಸುವುದೇ, ಅಲ್ಲಾಹನ ಅವತೀರ್ಣಗಳ ನಿಜವಾದ ಉದ್ದೇಶವಾಗಿತ್ತು.

ಕೇವಲ ಅಲ್ಲಾಹನ ಸೇವೆ

ಅಲ್ಲಾಹನ ಕಡೆಯಿಂದ ಅವನ ಎಲ್ಲಾ ಪ್ರವಾದಿಗಳಿಗೆ ಕಳುಹಿಸಿದ ಸಂದೇಶವು ಸಮಂಜಸವಾದುದು ಅಥವಾ ಏಕರೂಪದವುಗಳಾಗಿವೆ. ಅದು ಸರಳ ಮತ್ತು ನೇರವಾಗಿದೆ. ಪಾಲಿಸಬೇಕಾದ ಕರ್ಮಗಳ ಪಟ್ಟಿಯನ್ನೊಳಗೊಂಡ ಸಾರ್ವತ್ರಿಕ ಮೌಲ್ಯಗಳ ಸಮ್ಮತಿಯಾಗಿದೆ. ಸರಳವಾಗಿ ಹೇಳಿದರೆ, **ಅದು ಒಂದು ಲಾಭದಾಯಕ ಜೀವನದ ಒಂದು ನಿಪುಣವಾದ ಯೋಜನೆ (Master Plan) ಆಗಿರುತ್ತದೆ.**

ಮಧ್ಯಪ್ರವೇಶಿಸುವುದು, ಶೈತಾನನ ಉದ್ದೇಶ ಮತ್ತು ಪ್ರಕೃತಿ ಎಂದು ನಾವು ಮರೆಯಬಾರದು. ಅಲ್ಲಾಹನ ಸಮ್ಮತಿಗಳನ್ನು[10] ಮೀರಿ ಸುಳ್ಳು ಮಿತಿಯನ್ನು ಹೇರುವಂತಹ ಅವನನ್ನು ಸೇವೆ ಮಾಡಬಾರದೆಂದು ಅಲ್ಲಾಹನು, ಪದೇ ಪದೇ ತನ್ನ ಸೇವಕರಿಗೆ ನೆನಪಿಸುತ್ತಾನೆ. ಅಲ್ಲಾಹನ ಅವತೀರ್ಣಗಳೆಲ್ಲವೂ ಈ ಪರಿಕಲ್ಪನೆಯ ಬಗ್ಗೆಯಾಗಿದೆ – ಅದಕ್ಕಿಂತ ಹೆಚ್ಚೂ ಇಲ್ಲ ಅಥವಾ ಕಡಿಮೆಯೂ ಇಲ್ಲ. ಯಾವುದೇ ಧಾರ್ಮಿಕ ಸಂಸ್ಥೆಗಳೂ, ಧಾರ್ಮಿಕ ಕಟ್ಟುಪಾಡುಗಳೂ ಮತ್ತು ವಿಧ್ಯುಕ್ತ ಪ್ರಾರ್ಥನೆಗಳೂ ಇಲ್ಲ. ಧಾರ್ಮಿಕ ತೀರ್ಥಯಾತ್ರೆಗಳಿಗೆ ಅಥವಾ ಅಲ್ಲಾಹನ ಹೆಸರಿನಲ್ಲಿ ವ್ಯವಸ್ಥಿತವಾಗಿ ಧನ ಸಂಗ್ರಹ ಮಾಡುವುದಕ್ಕೆ ಅವಕಾಶವನ್ನು ಅವನು ನೀಡಲಿಲ್ಲ. ಪ್ರವಾದಿಗಳಿಗೆ ಅಥವಾ ಸಂದೇಶವಾಹಕರಿಗೆ ಅವನನ್ನು (ನಾವು ಕಾಣುತ್ತಿರುವಂತಹ) *ಆರಾಧನೆಗಳನ್ನು* ಮಾಡುವ ಆಜ್ಞೆಯನ್ನೂ ಅವನು ನೀಡಲಿಲ್ಲ. ಅವನ ಪವಿತ್ರ ಗ್ರಂಥದಲ್ಲಿ, ಧಾರ್ಮಿಕ ಸಂಸ್ಥೆಗಳ ಅಥವಾ ಧಾರ್ಮಿಕ ಕಟ್ಟುಪಾಡುಗಳ ಯಾವುದೇ ಉಲ್ಲೇಖವಿಲ್ಲ. ಕಿಂಚಿತ್ತೂ ಇಲ್ಲ. ಶೈತಾನನಿಗೆ ಅಲ್ಲಾಹನ ವ್ಯವಸ್ಥೆಯನ್ನು[11] ಬುಡಮೇಲು ಮಾಡಲು, ಅದನ್ನು ಕಲುಷಿತಗೊಳಿಸುವುದಕ್ಕಿಂತ ಮಿಗಿಲಾದ ಕುತಂತ್ರವು ಬೇರೆ ಯಾವುದಿದೆ?

---

[10] 'The Chambers 20th Century' ಶಬ್ದಕೋಶವು ಸೇರಿದಂತೆ ಇತರ ಶಬ್ದಕೋಶಗಳಲ್ಲಿಯೂ, 'ಸಮ್ಮತಿ' (Sanction) ಎಂಬ ಪದದ ವ್ಯಾಖ್ಯಾನವು ಹೀಗಿದೆ: 'ಯಾವುದೇ ನೈತಿಕ ಅಥವಾ ಧಾರ್ಮಿಕ ಕಾನೂನಿಗೆ (ನೀತಿಸಂಹಿತೆಗೆ) ನಿಷ್ಠೆಯುಳ್ಳ ಉದ್ದೇಶ; ಒಂದು ಕಾನೂನಿನ ಅಥವಾ ಕರಾರಿನ ನಿಷ್ಠೆಗೆ ಅಥವಾ ಅನಿಷ್ಠೆಗೆ ಲಗತ್ತಿಸಲಾದ ಪ್ರತಿಫಲ ಅಥವಾ ದಂಡ. ಕುರ್‌ಆನಿನ ಸನ್ನಿವೇಶದಲ್ಲಿ, ಜೀವನದ ಕ್ರಮಬದ್ಧ ರೀತಿಗೆ ನಿರ್ಬಂಧನೆಗಳನ್ನು ಸಮ್ಮತಿಸಲಾಗಿದೆ. ಆದ್ದರಿಂದ ಅದನ್ನು 'ಸಮ್ಮತಿಸಲಾದ ನಿರ್ಬಂಧಗಳು' ಅಥವಾ 'ಮಸ್ಜಿದಿಲ್ ಹರಾಮ್' ಎಂದು ಕರೆಯಲಾಗುತ್ತದೆ.

[11] ಅಲ್ಲಾಹನ ವ್ಯವಸ್ಥೆಯು ಸಂಘಟಿತ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುವುದಿಲ್ಲ. ಜನರನ್ನು ಪ್ರತ್ಯೇಕ ವ್ಯಕ್ತಿಗಳಾಗಿ ಸೃಷ್ಟಿಸಲಾಗಿದೆ ಮತ್ತು ಪ್ರತಿಯೊಬ್ಬನೂ ಅಲ್ಲಾಹನನ್ನು ನೇರವಾಗಿ ಉತ್ತರಿಸಬೇಕಾಗಿದೆ., "ಯಾವುದೇ ಆತ್ಮವು ಇನ್ನೊಂದರ ಹೊರೆಯನ್ನು ಹೊರಲಾರದು" ಎಂದು ಜನರಿಗೆ ತಿಳಿಸಲು ಇಬ್ರಾಹೀಮ್, ಮೂಸಾ, ಈಸಾ ಹಾಗೂ ಮುಹಮ್ಮದರಿಗೆ ಹೇಳಲಾಗಿದೆ. ರಬ್ಬಿಗಳು, ಪುರೋಹಿತರು, ಸನ್ಯಾಸಿಗಳು ಮತ್ತು ಮುಲ್ಲಾಗಳು ಅಲ್ಲಾಹನ ಹಾಗೂ ಅವನ ಸಂದೇಶವಾಹಕರ ಶತ್ರುಗಳು ರಚಿಸಿದ ಒಂದು ಸುಳ್ಳು ವ್ಯವಸ್ಥೆಯ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಹಾಗಾದರೆ, ಈ ಎಲ್ಲಾ ಆಚರಣೆಗಳು ಹೇಗೆ ಇಸ್ಲಾಮಿನ ಒಳಗೆ ನುಸುಳಿತು? ಕುರ್‌ಆನಿನಲ್ಲಿ ಈ ಆಚರಣೆಗಳು ಎಲ್ಲಿ ದಾಖಲಾಗಿವೆ? ಅಲ್ಲಾಹನು ನಮಗೆ ಏನನ್ನು ನಿರ್ದೇಶಿಸಿದ್ದಾನೆ ಎಂದು ಅರಿಯಲು ನಾವು ಗ್ರಂಥವನ್ನು ಅವಲೋಕಿಸಿ ನೋಡೋಣ.

ಸಹಜವಾಗಿಯೂ ಎಲ್ಲಾ ಪ್ರವಾದಿಗಳು, ಸಂದೇಶವಾಹಕರು ಮತ್ತು ಅಲ್ಲಾಹನ ಸೇವಕರು - ಪುರುಷರು ಅಥವಾ ಮಹಿಳೆಯರು – ದೈಹಿಕವಾಗಿಯೂ, ಆಧ್ಯಾತ್ಮಿಕವಾಗಿಯೂ - ತಮ್ಮ ತಮ್ಮ ವೈಯಕ್ತಿಕ ಕರ್ಮಗಳ ಮೂಲಕ ಅಲ್ಲಾಹನ ಸೇವೆ ಮಾಡುವ ಅಗತ್ಯವಿದೆ. ಈ ಜಗತ್ತಿನಲ್ಲಿ ಶಾಂತಿ ಪಡೆಯಲು ಪ್ರತಿಯೊಂದು ವ್ಯಕ್ತಿಯೂ ಉದ್ದೇಶಪೂರ್ವಕರಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಅಲ್ಲಾಹನಿಗೆ ವಿಧೇಯರಾಗುವುದು ಇಸ್ಲಾಮಿನ ಕಾಳಜಿಯಾಗಿದೆಯೇ ಹೊರತು ನಿರ್ಲಕ್ಷವಾದ ಸ್ವಯಂಚಾಲಿತ ನಡವಳಿಕೆಗಳಲ್ಲ. ತನ್ನ ಎಲ್ಲಾ ಸಂದೇಶವಾಹಕರ ಮೂಲಕ ತಲುಪಿಸಲಾದ ಅಲ್ಲಾಹನ ಸಂದೇಶವು ನಮಗೆ ಸರಳವಾಗಿ ಹೇಳುತ್ತದೆ: 'ನೀವು ಅವನನ್ನಲ್ಲದೇ ಬೇರೆ ಯಾರ ಸೇವೆಯನ್ನೂ ಮಾಡದಿರಿ'. ಈ ಪದಗಳ ಚೌಕಟ್ಟಿನೊಳಗೆ *ಇಸ್ಲಾಂ* ಅಥವಾ *ಶಾಂತಿಪರತೆ* ಯ ಸತ್ಯದ ಉಪಸ್ಥಿತಿಯಿದೆ.

> "**ನನ್ನ ಹೊರತು ಅನ್ಯ ದೇವರಿಲ್ಲ**, ಆದ್ದರಿಂದ **ನೀವು ಕೇವಲ ನನ್ನ ಸೇವೆಯನ್ನು ಮಾತ್ರ ಮಾಡಿರಿ**"[12] ಎಂಬ ಸಂದೇಶದ ವಿನಹಃ, ನಿಮಗಿಂತ ಮುಂಚೆ ನಾವು ಯಾವುದೇ ಸಂದೇಶವಾಹಕರನ್ನೂ ಕಳುಹಿಸಿಲ್ಲ. (21:25)

ಪ್ರವಾದಿಗಳ ಅಥವಾ ಸಂದೇಶವಾಹಕರ ಅಥವಾ ಬೇರೆ ಯಾರದೇ ಸೇವೆ ಮಾಡದೆ, ಕೇವಲ ಅಲ್ಲಾಹನ ಸೇವೆಯನ್ನು ಮಾಡುವುದೇ **ಶಾಂತಿಪರತೆಯ ಕೀಲಿಕೈ** ಆಗಿದೆ. ಹಾಗೆ ಮಾಡಲು, ನಾವು ಕೇವಲ ಅವನಿಂದ ನಿರ್ದೇಶಿತವಾದ ಜೀವನದ ರೀತಿಗೆ ಸಂಪೂರ್ಣವಾಗಿ ನಿಷ್ಠರಾಗುವ ಅವಶ್ಯಕತೆ ಇದೆ. ಇದು ಅವನು ನಮಲ್ಲಿ ಅಳವಡಿಸಲಾದ ನೈಸರ್ಗಿಕ ಗುಣವಾಗಿದೆ. ಈ ಜೀವನದಲ್ಲಿ ಶಾಂತಿಪರತೆಯ ಹಾದಿಯನ್ನು ಹುಡುಕಲು ಶ್ರಮಿಸುವಾಗ, ನಾವು ಅಲ್ಲಾಹನ ಬಗ್ಗೆ ಹಲವಾರು ಕಥೆಗಳನ್ನು ಕೇಳುತ್ತೇವೆ. ಅಲ್ಲಾಹನು ಒಬ್ಬ ಮಗನಿಗೆ ಜನನ ನೀಡಿದ್ದಾನೆಂದೂ, ಅಲ್ಲಾಹನ ಹೆಸರು ಪ್ರಸ್ತಾಪಿಸಲಾದಾಗ ಕೆಲವು ಆಯ್ದ ಸಂದೇಶವಾಹಕರನ್ನು ಗೌರಸಬೇಕೆಂದೂ ಕೇಳಿಬರುತ್ತದೆ. ಅಲ್ಲಾಹನು ಏನನ್ನು ಬಯಸುತ್ತಾನೆ ಎಂಬುವುದರ ಬಗೆಯೂ ಕಥೆಗಳು ಕೇಳಸಿಗುತ್ತದೆ. ಇವುಗಳು ಆವಿಷ್ಕಾರಿತ ಧರ್ಮದ ಸಿದ್ಧಾಂತಗಳಾಗಿವೆ ಮತ್ತು ಅನೇಕ ಜನರು ಈ ಧರ್ಮಗಳ ಬೆಂಬಲಿಗರ ವಂಚನೆಗೆ ಒಳಗಾಗುತ್ತಿದ್ದಾರೆ.

---

[12] 'ಕೇವಲ ಅಲ್ಲಾಹನ ಸೇವೆ'ಯು ಎಲ್ಲಾ ಗ್ರಂಥಗಳ ಮುಖ್ಯ ಸಾರವಾಗಿದೆ. ಮೂಸಾರು *ಡಿಯೋಟರೋನಮಿ* 6:4 ರಲ್ಲಿ ಪ್ರಕಟಿಸಿದರು ಮತ್ತು ಈಸಾರು *ಮಾರ್ಕ್* 12:29-30 ರಲ್ಲಿ ಮತ್ತು ಮಹಮ್ಮದರು *ಕುರ್‌ಆನ್* 17:22-23 ರಲ್ಲಿ ಇದನ್ನು ಪುನರುಚ್ಚಿಸಿದರು.

> “ಯಾರನ್ನೂ ತನ್ನ ಮಗನಾಗಿ ಮಾಡಿಕೊಳ್ಳದಂತಹ, ತನ್ನ ಪ್ರಭುತ್ವದಲ್ಲಿ ಯಾರೂ ಸಹಭಾಗಿಯಿಲ್ಲದಂತಹ ಅಥವಾ ಅವಮಾನದಿಂದ ತನನ್ನು ರಕ್ಷಿಸಲು ಯಾರ ಅವಶ್ಯಕತೆಯೂ ಇಲ್ಲದಂತಹ ಅಲ್ಲಾಹನ ಪ್ರಶಂಸೆಯನ್ನು ಮಾಡಿರಿ” (17:111)

ಅಲ್ಲಾಹನು ಒಂದು ಪುತ್ರನನ್ನು ಹೊಂದಿದ್ದಾನೆ ಎನ್ನುವಾಗ, ಅವನನ್ನು ಹೊಗಳುವ ಜೊತೆಗೆ ಇತರರ ಹೆಸರುಗಳನ್ನು ಉಲ್ಲೇಖಿಸುವಾಗ ಅಥವಾ ಅವನ ಹೆಸರಿನಲ್ಲಿ ಸುಳ್ಳುಗಳನ್ನು ಅವಿಷ್ಕರಿಸುವಾಗ, ಜನರು ಅಲ್ಲಾಹನನ್ನು ಅವಮಾನಿಸಿದಂತಾಗುತ್ತದೆ. ನಾವು ನಮ್ಮ ಸುತ್ತಲೂ ನೋಡಿದರೆ, ತಾವು ಅಲ್ಲಾಹನ ರಕ್ಷಕರು ಎಂದು ಪ್ರತಿಪಾದಿಸುವ ರಬ್ಬಿಗಳು, ಪಾದ್ರಿಗಳು, ಮುಲ್ಲಾಗಳು ಮತ್ತು ಇಮಾಮುಗಳನ್ನು ಕಾಣುತ್ತೇವೆ. ಇವರೇ ಇಂತಹ ಕಲ್ಪನೆಗಳನ್ನು ಪ್ರೇರೇಪಿಸುತ್ತಿದ್ದಾರೆಂದು ಜನರು ಅರಿತುಕೊಳ್ಳಲು ವಿಫಲರಾಗಿರುವುದು ಅಚ್ಚರಿಯೇ ಸರಿ. ನಿರ್ದೇಶಿಸಲ್ಪಡದಂತಹ ಆರಾಧನೆ, ಪ್ರಾರ್ಥನೆ, ಧಾರ್ಮಿಕ ಕಾನೂನುಗಳು, ತೀರ್ಥಯಾತ್ರೆ, ತ್ಯಾಗ ಮುಂತಾದವುಗಳನ್ನು ಆವಿಷ್ಕಾರ ಮಾಡಿರುವುದು ಇಂತಹ ಜನರೇ ಆಗಿದ್ದಾರೆ. ನಂತರ ಅಲ್ಲಾಹನು ಇದನ್ನೇ ಬಯಸುತ್ತಾನೆಂದು ಅವರು ವಾದಿಸುತ್ತಾರೆ.

ತಮ್ಮ ಇಂದ್ರಿಯಗಳ ಹೆಚ್ಚಿನ ಸಾಮರ್ಥ್ಯವನ್ನು ಉಪಯೋಗಿಸುತ್ತಾ ಒಂದು ಸಾಮಾನ್ಯ ಜೀವನವನ್ನು ನಡೆಸುವ ಮೂಲಕ ಪ್ರತಿಯೊಂದು ವ್ಯಕ್ತಿಯೂ ತನ್ನ ಅಲ್ಲಾಹನ ಸೇವೆಯನ್ನು ಸಲ್ಲಿಸಬೇಕು. ಸಾಮಾನ್ಯ ಅರ್ಥದಲ್ಲಿ ಪ್ರಯೋಗಿಸುವಂತಹ *ಆರಾಧನೆಗಳ* ಬಗ್ಗೆ ಅಥವಾ ವಿಧ್ಯುಕ್ತ ಪ್ರಾರ್ಥನೆ (ಅದು ದಿನಕ್ಕೆ ಅಥವಾ ವಾರಕ್ಕೆ ಮೂರೋ, ನಾಲ್ಕೋ ಅಥವಾ ಐದೋ, ಏನೇ ಆಗಿರಲಿ)ಗಳ ಬಗ್ಗೆ ಕುರ್‌ಆನಿನಲ್ಲಿ ಯಾವುದೇ ಪ್ರಸ್ತಾವವಿಲ್ಲ. ಇವುಗಳು ಕೇವಲ ಅಲ್ಲಾಹನ ಹಾಗೂ ಅವನ ಅಂತ್ಯ ಪ್ರವಾದಿಯ ವಿರುದ್ಧ ಧಾರ್ಮಿಕರ ಷಡ್ಯಂತ್ರವಾಗಿದೆ. ಅದರಲ್ಲಿ ಧಾರ್ಮಿಕ ಸ್ಥಾಪನೆಗಳು, ಆರಾಧನಾಲಯಗಳು, ವಿಧ್ಯುಕ್ತ ಪ್ರಾರ್ಥನೆಗಳು ಮತ್ತು ಧಾರ್ಮಿಕ ಕಾನೂನುಗಳು ಕಂಡುಬರುತ್ತದೆ.

ಉದಾಹರಣೆಗೆ, ‘ಜೀವನ ರೀತಿ’ (ದೀನ್) ಎಂಬುವುದರ ಅರ್ಥವನ್ನು ‘ಧರ್ಮ’ ಎಂದೂ, ‘ನಾನು ಸೇವೆಮಾಡುತ್ತೇನೆ’ (ಯ’ಅಬುದು) ಎಂಬುವುದನ್ನು ‘ನಾನು ಆರಾಧಿಸುತ್ತೇನೆ’ ಎಂದೂ ಧಾರ್ಮಿಕರು ಕುಶಲತೆಯಿಂದ ಬದಲಾಯಿಸಿದರು. ಮೊದಲ ನೋಟಕ್ಕೆ ಈ ಬದಲಾವಣೆಗಳು ಕ್ಷುಲ್ಲಕವಾಗಿ ತೋಚಬಹುದು. ಆದರೆ ವಾಸ್ತವದಲ್ಲಿ ಇದು ಇಸ್ಲಾಮಿನ ಮೇಲೆ ಪ್ರಚಂಡ ಪ್ರಭಾವವನ್ನು ಬೀರಿದೆ. ದುಃಖಕರವೆಂದರೆ, ವಿಶ್ವಾಸದ ಕಾವಲುಗಾರರಾದ ಇವರು ಇತರ ಅನೇಕ ವಿಕೃತಿಗಳನ್ನೂ ಸಂರಕ್ಷಿಸುತ್ತಾ ಬಂದಿದ್ದಾರೆ. ಮಕ್ಕಾದಲ್ಲಿರುವ ಕಾಬಾ ಮತ್ತು ಅದಕ್ಕಿರುವ ಕಡ್ಡಾಯವಾದ ತೀರ್ಥಯಾತ್ರೆಯ ಆಚರಣೆಯು ಅವುಗಳಲ್ಲಿ ಸೇರಿವೆ. (ಕೆಲವರು ಹೇಳುವಂತೆ) ಅರ್ಥಗಳ ಬದಲಾವಣೆಗಳು, ಪದಗಳ ಅರ್ಥದ ಮೇಲೆ ಅಥವಾ ಅನುವಾದಕರ ಅಭಿಪ್ರಾಯಗಳಿಂದ ಒಬ್ಬನು ಅರ್ಥಮಾಡಿಕೊಳ್ಳುವುದರ ಮೇಲೆ ಯಾವುದೇ ಪ್ರಭಾವವನ್ನು ಬೀರುವುದಿಲ್ಲ ಎಂಬುವುದು ಸರಿಯಲ್ಲ. ವಾಸ್ತವವು ಇವೆರಡಕ್ಕೂ ವ್ಯತಿರಿಕ್ತವಾಗಿರುವುದನ್ನು ನಾವು ನೋಡಬಹುದು. ಕೆಲವು

ನಿರ್ದಿಷ್ಟ ಸಂದರ್ಭಗಳಲ್ಲಿ, ವಿಷಯವಸ್ತುವಿನ ವಾಸ್ತವಿಕ ಅರ್ಥವು, ಪಠ್ಯದ ಸಮಸ್ಯೆಗಳನ್ನು ಹೇಗೆ ಪರಿಹರಿಸುತ್ತದೆ ಎಂಬುವುದನ್ನು ಅವಲಂಬಿಸಿರುತ್ತದೆ.

ಕುರ್‌ಆನಿನ ಅರ್ಥಗಳನ್ನು ಅರಿತುಕೊಳ್ಳುವುದಕ್ಕಿರುವ ಮೊತ್ತಮೊದಲ ಮತ್ತು ಮೂಲಭೂತವಾದ ನಿಯಮವು ಕುರ್‌ಆನಿನಲ್ಲೇ ಇರುವ **'ಸ್ಥಿರತೆ'** (ಪರಸ್ಪರ ಹೋಲುವಂತಹ) ಎಂಬ ಪದವನ್ನು ಚೆನ್ನಾಗಿ ಮನದಟ್ಟು ಮಾಡುವುದಾಗಿದೆ.

> *ಅವರು ಕುರ್‌ಆನಿನ ಬಗ್ಗೆ ವಿಮರ್ಶಿಸುವುದಿಲ್ಲವೇಕೆ? ಅದು ಅಲ್ಲಾಹನ ಹೊರತು ಇತರರಿಂದಿರುವುದಾಗಿದ್ದರೆ, ಅದರಲ್ಲಿ ಖಂಡಿತವಾಗಿಯೂ ಅವರು ಅನೇಕ ವೈರುದ್ಯಗಳನ್ನು ಕಾಣುತ್ತಿದ್ದರು. (4:82)*

ಸರಳವಾಗಿ ಹೇಳುವುದಾದರೆ, ಕುರ್‌ಆನಿನ ಸಂದೇಶವು ಸ್ಥಿರತೆಯುಳ್ಳದ್ದಾಗಿದೆ. ಪದಗಳನ್ನು ಅರ್ಥೈಸುವುದರಲ್ಲಿ ಆಗುವ ಯಾವುದೇ ತಪ್ಪು ತಿಳುವಳಿಕೆಯು ಅಥವಾ ಅಸಮಂಜಸತೆಯು ಮನುಷ್ಯರ ದೋಷಗಳ ಫಲಿತಾಂಶಗಳಾಗಿದೆ. ಮಾನವರು ಗ್ರಂಥದ ಒಂದು ಪದ ಅಥವಾ ವಾಕ್ಯವನ್ನು ವ್ಯಾಖ್ಯಾನಿಸುವ ವೇಳೆ, ಆ ಅರ್ಥವು ಕುರ್‌ಆನಿನ ಇತರ ಭಾಗಗಳಲ್ಲಿ ಉಪಯೋಗಿಸಲಾದ ಇದೇ ರೀತಿಯ ಪದಗಳನ್ನು ಅಥವಾ ವಾಕ್ಯಗಳನ್ನು ಬೆಂಬಲಿಸುತ್ತದೆಯೇ ಎಂದು ಖಚಿತಗೊಳಿಸಬೇಕು. ಅಂತಹ ಒಂದು ವ್ಯಾಖ್ಯಾನವು ಪರಸ್ಪರ ವಿರುದ್ಧವಾಗಿದ್ದರೆ – ಆ ವ್ಯಾಖ್ಯಾನವು ತಪ್ಪಾಗಿರುತ್ತದೆ. ಉದಾಹರಣೆಗೆ, 'ಅಮ್ರ್' ಎಂಬ ಮೂಲಪದವನ್ನು 'ಜೀವನ' ಎಂದೂ, ಅದೇ ರೀತಿಯ ಅರ್ಥವನ್ನು ನೀಡುವ ಅದರ ಪದೋತ್ಪನ್ನಗಳಾದ 'ಉಮ್ರ್'ನ್ನು 'ಆಯಸ್ಸು' ಎಂದೂ, 'ಅಮರ'ವನ್ನು 'ಬೆಳೆಸು' ಅಥವಾ 'ಜೀವನಕ್ಕೆ ತರುವುದು' ಎಂದೂ, 'ಮ-ಮುರ್'ನ್ನು 'ಸಜೀವ' ಎಂದೂ ವ್ಯಾಖ್ಯಾನಿಸಿದ ನಂತರ, ಇದ್ದಕ್ಕಿದ್ದಂತೆ 'ಉಮ್ರ'ವನ್ನು ಜೀವನ ಎಂಬ ಪದಕ್ಕೆ ಯಾವುದೇ ಸಂಬಂಧವಿಲ್ಲದಂತಹ ಅರ್ಥವಾದ 'ಭೇಟಿ' ಎಂಬುದಾಗಿ ಬದಲಿಸಲಾಗಿದೆ.

ಅರಬೀ ಪದಗಳು ನಿಷ್ಪತ್ತಿ, ಶಬ್ದವ್ಯುತ್ಪತ್ತಿ, ಶಬ್ದಸಾಧನೆ, ಸಂಯೋಜನೆ ಮತ್ತು ಮೌಖಿಕ ವಿಭಕ್ತಿ ಪ್ರತ್ಯಯ ಯೋಜನೆಗಳ ನಿಯಮಿತ ವ್ಯವಸ್ಥೆಯ ಮೇಲೆ ನಿರ್ಮಿತವಾಗಿವೆ. ಈ ಮೂಲಪದಗಳು, ಶಬ್ದಗಳ ನಿಘಂಟಿತ ಅರ್ಥವನ್ನು ನೀಡುತ್ತದೆ. ತಮ್ಮ ಮೂಲಪದಕ್ಕೆ ಕೆಲವು ಅಕ್ಷರಗಳನ್ನು ಸೇರಿಸುವ ಅಥವಾ ಸ್ವರ ಚಿಹ್ನೆಗಳನ್ನು ಬದಲಾಯಿಸುವ ಮೂಲಕ ನಾಮಪದ, ಕ್ರಿಯಾಪದ, ವಿಷಯ, ವಿಶೇಷಣ, ಸರ್ವನಾಮ, ಕ್ರಿಯಾವಿಶೇಷಣ ಇತ್ಯಾದಿಗಳನ್ನು ಪಡೆಯುತ್ತದೆ. ಇದು ಕಾಲರೂಪ, ಸಂಖ್ಯೆ, ಲಿಂಗ, ಮತ್ತು ಲಕ್ಷಣಗಳನ್ನು ಸೂಚಿಸುವುದಕ್ಕಾಗಿ ಮೂಲಪದದಿಂದ ವಿವಿಧ ಪದಗಳನ್ನು ಮಾಡುವ ಸಾಮಾನ್ಯ ರೀತಿಯನ್ನೂ ಹೊಂದಿದೆ. ಉದಾಹರಣೆಗೆ, ಮೂರು ವ್ಯಂಜನಗಳಾದ ಕ-ತ-ಬ ವನ್ನು ನೋಡೋಣ. ಇದು *ಬರೆಯುವುದಕ್ಕೆ* ಸಂಬಂಧಿಸಿದ ಒಂದು ಮೂಲಪದವಾಗಿದೆ. ಈ ಕೆಳಗಿರುವುದು ಇದರ ವ್ಯಂಜನಗಳ ನಡುವೆ ವಿವಿಧ ಸ್ವರಗಳು ಮತ್ತು ಅಕ್ಷರಗಳನ್ನು ಸೇರಿಸುವ ಮೂಲಕ ಪಡೆದ ಕೆಲವು ಉತ್ಪನ್ನಗಳು ಮತ್ತು ಸ್ವರೂಪಗಳಾಗಿವೆ:

ಕಿತಾಬ್	=	ಪುಸ್ತಕ ಅಥವಾ ಗ್ರಂಥ
ಕಾತಿಬ್	=	ಬರೆಯುವವ ಅಥವಾ ಲಿಪಿಗಾರ
ಉಕ್ತುಬ್	=	ಬರೆ
ಮಕ್ತೂಬ್	=	ಬರೆಯಲ್ಪಟ್ಟ ಪಠ್ಯ
ಕುತಿಬ	=	ಅದು ಲಿಖಿತಗೊಂಡಿತು
ಕತಬ	=	ಅವನು ಬರೆದನು
ಕತಬೂ	=	ಅವರು ಬರೆದರು
ಕತಬತ್	=	ಅವಳು ಬರೆದಳು
ಕತಬ್ನ	=	ನಾವು ಬರೆದೆವು
ಯಕ್ತುಬು	=	ಅವನು ಬರೆಯುತ್ತಾನೆ/ಬರೆಯುವನು
ಯಕ್ತುಬೂನ	=	ಅವರು ಬರೆಯುತ್ತಾರೆ/ಬರೆಯುವರು
ತಕ್ತುಬು	=	ನೀನು ಬರೆಯುತ್ತಿರುವೆ/ಬರೆಯುವೆ
ನಕ್ತುಬು	=	ನಾವು ಬರೆಯುತ್ತಿದ್ದೇವೆ/ಬರೆಯುವೆವು
ಮಕ್ತಬ್	=	ಶಾಲೆ

ಮೂಲ ಅರ್ಥವನ್ನು ತಿಳಿದುಕೊಂಡರೆ, ಅದರ ಇತರ ಉತ್ಪನ್ನಗಳ ಅರ್ಥಗಳನ್ನು ತಿಳಿದುಕೊಳ್ಳಬಹುದು ಎಂದು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಅರಬೀ ಭಾಷೆ ಅಸಂಖ್ಯಾತ ಮೂಲಪದಗಳನ್ನು ಹೊಂದಿದೆ ಮತ್ತು ಪ್ರತಿಯೊಂದು ಪದಗಳೂ ಒಂದು ಸ್ಪಷ್ಟ ಅರ್ಥವನ್ನು ಹೊಂದಿರುತ್ತವೆ. ಅದು ವಿವಿಧ ಕಲ್ಪನೆಗಳನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲು ಪದಗಳು ಮತ್ತು ನುಡಿಗಟ್ಟುಗಳನ್ನು ಹೊಂದಿದೆ ಮತ್ತು ಅರ್ಥ ಛಾಯೆಗಳನ್ನು ಪ್ರತ್ಯೇಕಿಸುತ್ತದೆ.

ಕುರ್‌ಆನಿನ ಪದಗಳ ಅರ್ಥಗಳು ಬದಲಾದವಣೆಗೊಳ್ಳಲು (ಕುರ್‌ಆನಿನ ಅರಬೀ ಮೂಲಕೃತಿ ಅಲ್ಲ) ಹೇಗೆ ಮತ್ತು ಏಕೆ ಆರಂಭವಾಯಿತು ಎಂದು ಪತ್ತೆ ಹಚ್ಚುವುದು ಕಷ್ಟಕರವಾಗಿದೆ. ಏಕೆಂದರೆ, ನಮ್ಮ ಬಳಿ ಇರುವ ಮೊದಲ ಇಂಗ್ಲೀಷ್ ಅನುವಾದವು ನೂರ ಐವತ್ತು ವರ್ಷಗಳಿಗಿಂತಲೂ ಕಡಿಮೆ ಹಳೆಯದ್ದಾಗಿದೆ. ಅರಬೀ

ಪುರೋಹಿತರು, ಏಳನೇ ಶತಮಾನದಿಂದಲೇ ಧಾರ್ಮಿಕ ಉದ್ದೇಶಗಳಿಗಾಗಿ ಅರಬೀ ಶಬ್ದಕೋಶಗಳ ಸಂಕಲನವನ್ನು ಆರಂಭಿಸಿದರು. ಈ ಶಬ್ದಕೋಶಗಳು ವಿವಿಧ ಅವಶ್ಯಕತೆಗಳನ್ನು ಸಂಬೋಧಿಸಲು, ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಬರೆಯಲಾಗಿತ್ತು. ಈ ಪುರೋಹಿತರು ವಿವಿಧ ದೃಷ್ಟಿಕೋನಗಳ, ನಂಬಿಕೆಗಳ, ಅಭಿಪ್ರಾಯಗಳ, ಅವಶ್ಯಕತೆಗಳ, ಆಕಾಂಕ್ಷೆಗಳ, ತಿಳಿವಳಿಕೆಗಳ ಮತ್ತು ವಿವಿಧ ರೀತಿಯ ಚಿಂತನೆಗಳ ಕಲಿಕೆಯ ಮೇಲೆ ಆಧಾರಿಸಿ ತಮ್ಮ ಶಬ್ದಕೋಶಗಳನ್ನು ಸಂಗ್ರಹಿಸಿದರು. ಈ ಎಲ್ಲಾ ರೀತಿಗಳಲ್ಲಿ ಇವುಗಳು ಪರಸ್ಪರ ಭಿನ್ನವಾಗಿದ್ದವು. ನಂತರ ತಪ್ಪುಗಳನ್ನು ಮತ್ತು ಮುಂಚಿನ ಸಂಕಲನಕಾರರ ದೋಷಗಳನ್ನು ವರ್ಗೀಕರಿಸುವ, ಅರ್ಹತೆಗೊಳಿಸುವ ಮತ್ತು ನಿವಾರಿಸಿಕೊಳ್ಳುವ ಪ್ರತಿಪಾದನೆಯೊಂದಿಗೆ ಶೀಘ್ರದಲ್ಲೇ ಇತರ ಎದುರಾಳಿ ಬಣಗಳು ಪುಸ್ತಕಗಳನ್ನು ಬರೆದರು. ಅಂದರೆ ದೋಷಗಳು ಮತ್ತು ತಪ್ಪುಗಳು ಮನುಷ್ಯರ ಕೆಲಸದಲ್ಲಿ ಸಂಭವಿಸಬಹುದು ಮತ್ತು ವೈರುಧ್ಯಕರವಾಗಿ ಪರಿಣಮಿಸಬಹುದು. *"ಅಲ್ಲಾಹನಲ್ಲದೇ ಇತರರಿಂದಿರುವುದಾಗಿದ್ದರೆ, ಖಂಡಿತವಾಗಿಯೂ ಅವರು ಇದರಲ್ಲಿ ಅನೇಕ ವೈರುಧ್ಯತೆಗಳನ್ನು ಕಾಣುತ್ತಿದ್ದರು"* ಎಂದು ಕುರ್‌ಆನ್ 4:82 ರಲ್ಲಿ ಹೇಳುತ್ತದೆ.

ಮೊದಲ ಅರಬಿಕ್-ಇಂಗ್ಲೀಷ್ ನಿಘಂಟು 1892 ರಲ್ಲಿ 'ಎಡ್ವರ್ಡ್ ವಿಲಿಯಮ್ ಲೇನ್' ಎಂಬವರು ಬರೆದದ್ದಾಗಿದೆ. ಲೇನ್'ರವರ ಹೆಚ್ಚಿನ ಕೆಲಸಗಳು, ಹದಿನೇಳನೇ ಶತಮಾನದ ಒಬ್ಬ ಅರಬೀ ಪುರೋಹಿತನಾದ ಸಯ್ಯಿದ್ ಮುರ್ತದ್ಜ ಅಲ್ ಝಾಬಿದಿ ಅಲ್ ಬಿಲ್ಗ್ರಾಮಿಯ 'ತಾಜ್ ಅಲ್-ಅರಸ್' ಎಂಬ ಶಬ್ದಕೋಶ ಸಂಗ್ರಹದಿಂದ ಪಡೆಯಲಾಗಿದೆ. ಹಲವಾರು ಅರ್ಥಗಳು ಹಾಗೂ ವಿವರಣೆಗಳನ್ನು ಸಂಪೂರ್ಣವಾಗಿ ಮತ್ತು ಸ್ಪಷ್ಟವಾಗಿ ಪ್ರದರ್ಶಿಸುವ ಮತ್ತು ಹಿಂದಿನ ನಿಘಂಟುಕಾರರ ಕೃತಿಗಳಲ್ಲಿ ಕಂಡುಬರುವ ತಪ್ಪುಗಳ ಸಮಗ್ರ ತಿದ್ದುಪಡಿಗೊಳನ್ನು ಒಳಗೊಂಡಿದೆ ಎನ್ನಲಾದ ಈ ಸಂಗ್ರಹವು ಇತರ ಅರಬೀ ಶಬ್ದಕೋಶಗಳ ನಡುವೆ ಉತ್ತಮವಾದದ್ದು ಎಂದು ಪರಿಗಣಿಸಲಾಗಿದೆ. ಈ ತಿದ್ದುಪಡಿಗಳ ಹೊರತಾಗಿಯೂ, ಉತ್ತಮ ಶಬ್ದಕೋಶಗಳಲ್ಲಿ ಮತ್ತು ನಿಘಂಟುಗಳಲ್ಲಿಯೂ ನಾವು ದೋಷಗಳನ್ನು ಕಾಣಬಹುದು. ಉದಾಹರಣೆಗೆ, *ಇಬಿಲ್, ಬೈರ್, ಜಮಾಲ್, ರಿಕಾಬ್, ಅಬ್ಬರ್, ಇಶಾರ್ ಮತ್ತು ಹಿಮ್* ಎಂಬ ಏಳು ವಿವಿಧ ಪದಗಳನ್ನು 'ಒಂಟೆ' ಎಂದು ವ್ಯಾಖ್ಯಾನಿಸಲಾಗಿದೆ, ಇನ್ನೊಂದೆಡೆ ಒಂಬತ್ತು ವಿವಿಧ ಪದಗಳನ್ನು 'ಅವಮಾನಿಸು' ಅಥವಾ 'ತುಚ್ಛೀಕರಿಸು' ಎಂದು ಅನುವಾದಿಸಲಾಗಿದೆ.

ಆರಂಭಿಕ ಅರಬರು, ಅನೇಕ ದೇವರುಗಳ ಸುದೃಢ ನಂಬಿಕೆಗೆ ಸೇರಿದ ಒಂದು ಸಮುದಾಯಕ್ಕೆ ಸೇರಿದವರಾಗಿದ್ದರು ಎಂದು ತಿಳಿಯುವುದು ಕುತೂಹಲಕಾರಿಯಾಗಿದೆ. ಅವರು ಆಚಾರಗಳ ಮೂಲಕ ಮತ್ತು ಪ್ರಾಣಿಬಲಿ ಹಾಗೂ ಇತರ ಆಹಾರ ಉತ್ಪನ್ನಗಳ ಅರ್ಪನೆಗಳ ಮೂಲಕ ತಮ್ಮ ದೇವರನ್ನು ಪೂಜಿಸುತ್ತಿದ್ದರು. ಈ ದೇವರುಗಳು ಕೆಲವು ಭೂಮಿಯ ವಿಶೇಷ ಪವಿತ್ರ ಸ್ಥಳಗಳಲ್ಲಿ (ಮಕ್ಕಾದ ಚದರ ಗೃಹದ ತರಹ) ವಾಸಿಸುತ್ತಾರೆ ಎಂದು ಕೊಂಡಿದ್ದರು. ಅಲ್ಲಿಯೇ ಅವರು ಈ ಪ್ರಾಣಿಬಲಿಗಳನ್ನು ನಡೆಸುತ್ತಿದ್ದರು. ಅವರು ತಮ್ಮ ಸಾಮುದಾಯಿಕ ಮತ್ತು ವೈಯಕ್ತಿಕ ಅವಶ್ಯಕತೆಗಳಿಗೆ ಈ ದೇವರನ್ನು ಪ್ರಾರ್ಥಿಸುತ್ತಿದ್ದರು. ಆದ್ದರಿಂದ ಕುರ್‌ಆನ್ ಒಂದು ಅರಬನಿಗೆ ಅವತೀರ್ಣಿಸಲ್ಪಟ್ಟಾಗ, ಅವರು ಅದನ್ನು ನಿಖರವಾಗಿ ಕಲಿಯುವ ಅಥವಾ ಪರಿಣಿತಿ

ಪಡೆಯುವ ವಸ್ತುವಾಗಿ ಕಾಣುವ ಬದಲು ಅದು ಧರ್ಮಕ್ಕೆ ಕೆಲವು ಪ್ರಾಮುಖ್ಯತೆ ನೀಡುವ ನಿಗೂಢ ಗ್ರಂಥವೆಂದು ಪರಿಗಣಿಸುತ್ತಾರೆ. ನಾನು ಆಗಲೇ ಹೇಳಿದಂತೆ, ಕುರ್‌ಆನ್ ಧರ್ಮದ ಬಗ್ಗೆ ಇರುವ ಗ್ರಂಥವಲ್ಲ – ಅದು ಎಲ್ಲಾ ರೀತಿಯ ಧಾರ್ಮಿಕ ಆಚರಣೆಗಳನ್ನು ನಿರಾಕರಿಸುತ್ತದೆ – ಅದು ಸರಿ ಮತ್ತು ತಪ್ಪು ಹಾಗೂ ಒಳಿತು ಮತ್ತು ಕೆಡುಕುಗಳನ್ನು ಬೇರ್ಪಡಿಸುವ ಒಂದು ಕೈಪಿಡಿ ಪುಸ್ತಕ ಮತ್ತು ಮಾನದಂಡವಾಗಿದೆ - ಅದು ವಿವಿಧ ನಾಗರೀಕತೆಗಳ ಗತಿಸಿದ ಜನರ ನೈತಿಕ ಮೌಲ್ಯದ ವಿವರಗಳನ್ನು ನೀಡುತ್ತದೆ ಮತ್ತು ಕೇವಲ ನ್ಯಾಯವತ್ತಾದ ಕಾನೂನುಗಳ ಮಿತಿಗಳನ್ನು ಸಮ್ಮತಿಸುತ್ತದೆ.

ಒಂದು ಅರಬೀ ಪ್ರವಾದಿಗೆ ಕುರ್‌ಆನನ್ನು ಅವತೀರ್ಣಿಸುವ ಮುಂಚೆ ಅಲ್ಲಾಹನು ಈ ಅರಬೀ ಜನಾಂಗದ ಬಗ್ಗೆ ಅರಿತಿದ್ದನು ಎಂದು ತಿಳಿದುಬರುತ್ತದೆ ಮತ್ತು ಅವರು ಸತ್ಯನಿಷೇಧದಲ್ಲಿಯೂ ಹಾಗೂ ಕಪಟತನದಲ್ಲಿಯೂ ಅತಿ ಕಠೋರರು ಮತ್ತು ಗ್ರಂಥದಲ್ಲಿರುವ ಸಮ್ಮತಿಗಳ ಮೇರೆಗಳನ್ನು ತಿಳಿಯಲು ಅರ್ಹರಲ್ಲದವರು ಎಂದು ಅವನು ಘೋಷಿಸಿದ್ದಾನೆ. ಇವುಗಳನ್ನು ಸಂಕೋಚವಿಲ್ಲದೆ ಈ ಪುಸ್ತಕದಲ್ಲಿ ಪ್ರದರ್ಶಿಸಲಾಗಿದೆ. ಕುರ್‌ಆನ್ ಹೀಗೆ ಸ್ಪಷ್ಟಪಡಿಸುತ್ತದೆ:

> ಅರಬರು ಸತ್ಯನಿಷೇಧದಲ್ಲಿಯೂ ಹಾಗೂ ಕಪಪತನದಲ್ಲಿಯೂ ಅತಿ ಕಠೋರರು ಮತ್ತು ಅಲ್ಲಾಹನಿಂದ ತನ್ನ ಸಂದೇಶವಾಹಕರಿಗೆ ಅವತರಿಸಿದ ಮಿತಿಗಳ ಬಗ್ಗೆ ಅವರು ಅಜ್ಞರಾಗುವ ಸಾಧ್ಯತೆಗಳೇ ಹೆಚ್ಚು ಮತ್ತು ಅಲ್ಲಾಹನು ಜ್ಞಾನಿಯೂ ಮತ್ತು ನ್ಯಾಯಾಧಿಪತಿಯೂ ಆಗಿರುತ್ತಾನೆ. (9:97)

ಕುರ್‌ಆನ್ ಅರಬೀ ಬಾಷೆಯಲ್ಲಿ ಅವತರಿಸಲಾಗಿದೆ ಎಂಬ ಕಾರಣಕ್ಕಾಗಿ, ವಿಶ್ವದ ಎಲ್ಲಾ ಅರಬೇತರ ಮುಸ್ಲಿಮರು ಅರಬರನ್ನು ಅತಿ ಮಹನೀಯತಾ ಭಾವದಿಂದ ಕಾಣುವುದು ಬಹಳ ಖೇದಕರವಾಗಿದೆ. ಅರಬರು *ದೀನಿನ* ಕಾವಲುಗಾರರು ಆಗುವ ಸಂಭವನೀಯತೆ ಶೂನ್ಯಕ್ಕೆ ಸಮೀಪ ಎಂದು ಕುರ್‌ಆನನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೆ ಮಾತ್ರ ತಿಳಿಯಲು ಸಾಧ್ಯ. ಪ್ರಸ್ತುತ ಯಥಾಸ್ಥಿತಿಯಲ್ಲಿ, ಅರಬರು 'ಧರ್ಮ'ದ ನಾಯಕರು ಹಾಗೂ ವೀರರಾಗಿದ್ದಾರೆ - ಅರಬೀ ಭಾಷೆಯ ಹಾಗೂ ಸಂಸ್ಕೃತಿಯ ಭ್ರಾಂತಿಯಲ್ಲಿರುವ ಧಾರ್ಮಿಕರ ಮೇಲೆ ಅರಬೇತರು ತಮ್ಮ ಕುರುಡು ನಂಬಿಕೆ ಇರಿಸಿದ್ದಾರೆ.

ಅಲ್ಲಾಹನು ಅರಬನಲ್ಲ

ವಿಶ್ವದ ಒಡೆಯನನ್ನು ಕೇವಲ ಅರಬೀ ಭಾಷೆಯಲ್ಲೇ ಸೇವೆ ಮಾಡಬೇಕು ಎಂಬ ಆಲೋಚನೆಯನ್ನು ಪ್ರೋತ್ಸಾಹಿಸುವುದು ತಪ್ಪಾಗಿದೆ. ಅಂತಹ ಅಭಿಪ್ರಾಯಗಳು (ಮತ್ತು ನಿಜಕ್ಕೂ ಇಂದು ಇರುವಂತೆ) ಈ ಕೆಳಗಿನ ವಾಸ್ತವಿಕತೆಯನ್ನು ನಿರ್ಲಕ್ಷಿಸುತ್ತವೆ:

- ವಿಶ್ವದ ಒಡೆಯನು ಒಬ್ಬ ಅರಬನಲ್ಲ.

- ಬ್ರಹ್ಮಾಂಡದ ಪ್ರಭುವಿಗೆ ಇಂಗ್ಲಿಷ್, ಫ್ರೆಂಚ್, ಸ್ಪಾನಿಶ್, ಜರ್ಮನ್, ರಶ್ಯನ್, ಥಾಯ್, ಜಪಾನೀಸ್, ಚೀನೀ, ಹಿಂದಿ ಅಥವಾ ಯಾವುದೇ ಇತರ ಭಾಷೆಗಳನ್ನು (ಇರುವೆಗಳ ಮತ್ತು ಪ್ರಾಣಿಗಳ ಭಾಷೆಗಳೂ ಸೇರಿದಂತೆ) ತಿಳಿದಿರುತ್ತಾನೆ.

ಹಾಗಾದರೆ ಇಸ್ಲಾಮಿನಲ್ಲಿ, 'ರಾಜಕೀಯ ನಿಖರತೆ'ಯ ಮೇಲೆ ಪ್ರಾಧಾನ್ಯತೆಯು ಮತ್ತು ಅರಬೀ ಭಾಷೆ ಹಾಗೂ ಸಂಸ್ಕೃತಿಯ ಮೇಲೆ ಭ್ರಾಂತಿಯು ಏಕೆ ನೆಲೆಗೊಂಡಿದೆ? ಹಿಂದಿನ ಕಾಲದ ಇಬ್ರಾಹೀಮ್, ಇಸ್ಮಾಯೀಲ್, ಇಸ್ಹಾಕ್, ಯಾಕೂಬ್, ದಾವೂದ್, ಸುಲೈಮಾನ್, ಮೂಸಾ, ಈಸಾ ಮತ್ತು ಅಲ್ಲಾಹನಿಗೆ ಸೇವೆ ಸಲ್ಲಿಸಿದ ಇತರ ಅನೇಕ ಮಹಾನ್ ವ್ಯಕ್ತಿಗಳ ಜೀವನದ ಬಗ್ಗೆ ಕುರ್'ಆನ್ ವಿವರಿಸುತ್ತದೆ. ಅವರೆಲ್ಲರೂ ಅರಬೀ ಭಾಷೆಯನ್ನೇ ಮಾತನಾಡುತ್ತಿದ್ದರು ಎಂದು ಹೇಳಲು ಯಾವುದೇ ಪುರಾವೆಗಳಿಲ್ಲ ಆದರೆ ಅವರು ಸಜ್ಜನರೂ ಹಾಗೂ ಮುಂಚೂಣಿಯ ಸೇವಕರೂ ಆಗಿದ್ದರು ಎಂದು ಖಚಿತವಾಗಿ ಹೇಳಬಹುದು. ಅವರು ಅಲ್ಲಾಹನ 'ಆರಾಧನೆ' (ಈ ಪದದ ಸಾಮಾನ್ಯ ಅರ್ಥದಲ್ಲಿ) ಮಾಡಲಿಲ್ಲ. ಅಲ್ಲಾಹನ ಜೊತೆ ಅವರ ಸಂಬಂಧವು, ತಮ್ಮ ಕರ್ತವ್ಯಗಳನ್ನು ಎತ್ತಿಹಿಡಿಯುವ ಹಾಗೂ ತಮ್ಮ ಬದ್ಧತೆಗಳನ್ನು[13] ಕರ್ಮಗಳ ಮೂಲಕ ನಿಷ್ಕಳಂಕ ಮತ್ತು ಪರಿಶುದ್ಧವಾಗಿ ಕಾಪಾಡುವುದರ ಮೂಲಕವಾಗಿತ್ತು. ಇವೆಲ್ಲವೂ ಅರಬೀ ನುಡಿಯ ಸೌಲಭ್ಯವಿಲ್ಲದೆ ಸಾಧಿಸಲಾಯಿತು. ಆರಾಧನೆಯು ಒಂದು ಮೂರ್ತಿಪೂಜಕ ಆಚರಣೆಯಾಗಿದೆ. ಆಚರಣೆಗಳ ಮೂಲಕ ಆರಾಧಿಸುವುದನ್ನು ನಿಲ್ಲಿಸುವಂತೆ ಜನರಿಗೆ ತಿಳಿಸುವ ಸಲುವಾಗಿ ಇಬ್ರಾಹೀಮ್, ಮೂಸಾ, ಈಸಾ, ದಾವೂದ್, ಮತ್ತು ಮುಹಮ್ಮದರನ್ನು ಕಳುಹಿಸಲಾಗಿತ್ತು. ನಮ್ಮ ಕರ್ತವ್ಯಗಳನ್ನು ಎತ್ತಿಹಿಡಿಯುವ ಮೂಲಕ ಅಲ್ಲಾಹನ ಸೇವೆಯನ್ನು ಮಾಡಲು ಹಾಗೂ ಸತ್ಕರ್ಮಗಳನ್ನು ನಿರ್ವಹಿಸಲು, ಅವನ ದೀನನ್ನು ಸಮ್ಮತಿಸುವ ಪಕ್ಷವನ್ನಾಗಿ ನಮ್ಮನ್ನು ಮಾಡಿರುವುದು ಅವನ ಇಚ್ಛೆಯಾಗಿದೆ.

ಭೂಮಿ ಮತ್ತು ಏಳು ಆಕಾಶಗಳಲ್ಲಿರುವ ಪ್ರತಿಯೊಂದು ಜೀವಿಯೂ ತಮ್ಮದೇ ಆದ ರೀತಿಯಲ್ಲಿ ಅಲ್ಲಾಹನನ್ನು ಸ್ತುತಿಸುತ್ತದೆ. ಅವನನ್ನು ಸ್ತುತಿಸದಂತಹ ಯಾವುದೇ ವಸ್ತುಗಳಿಲ್ಲ. ಅಲ್ಲಾಹನು ಅವರ ಸ್ತುತಿಗಳನ್ನು ಮತ್ತು ಅವರ ಭಾಷೆಗಳನ್ನು ತಿಳಿದಿದ್ದಾನೆ. ಈ ಸಂಗತಿಯನ್ನು ವಿವರಿಸಲು, ಕುರ್'ಆನ್ ಪ್ರವಾದಿ ಸುಲೈಮಾನ್ ಸಂಬಂಧಿಸಿದ ಒಂದು ಘಟನೆ ವಿವರಿಸುತ್ತದೆ. ಸುಲೈಮಾನ್ ಪ್ರಾಣಿಗಳ, ಪಕ್ಷಿಗಳ, ಹಾಗೂ ಇರುವೆಗಳ ಭಾಷೆಯನ್ನು ತಿಳಿಯುವ ಅನುಗ್ರಹ ಪಡೆದಿದ್ದರು. ಒಂದು ದಿನ ಅವರು ಇರುವೆಗಳ ಒಂದು ಕಣಿವೆಯನ್ನು ಹಾದುಹೋಗುವಾಗ, ಇರುವೆಗಳ ಪರಸ್ಪರ ಸಂಭಾಷಣೆಯನ್ನು ಕೇಳಿ, ಅವರು ವಿನೋದದಿಂದ ಮುಗುಳ್ನಕ್ಕರು:

---

[13] 'Collins Co-build' ಶಬ್ದಕೋಶವು, ಬದ್ಧತೆ (Commitment)ಯನ್ನು ಈತರಹ ವ್ಯಾಖ್ಯಾನಿಸುತ್ತದೆ: 'ಒಂದು ಕಲ್ಪನೆ ಅಥವಾ ವ್ಯವಸ್ಥೆಯಲ್ಲಿ ಬಲವಾದ ನಂಬಿಕೆ, ವಿಶೇಷವಾಗಿ ಅದು ತಮ್ಮ ಕ್ರಿಯೆ ಮತ್ತು ನಡವಳಿಕೆಯಲ್ಲಿ ಗೋಚರಿಸಲಾದಾಗುವಂತಹದ್ದು. ಒಬ್ಬ ವ್ಯಕ್ತಿ ತನ್ನನ್ನು ಒಂದು ಕ್ರಿಯೆಗೆ ಬದ್ಧನಾಗಿಸಿದರೆ, ಅವನು ಅದನ್ನು ಮಾಡುತ್ತೇನೆಂದು ನಿರ್ಧರಿಸುತ್ತಾನೆ ಮತ್ತು ಅವನು ಜನರಿಗೆ ತಮ್ಮ ನಿರ್ಧಾರದ ಬಗ್ಗೆ ತಿಳಿಸುತ್ತಾನೆ'. ಕುರ್'ಆನಿನ ಸಂದರ್ಭದಲ್ಲಿ, ಇಬ್ರಾಹೀಮರು ಸಮರ್ಥಿಸಿದಂತಹ ಅಲ್ಲಾಹನ ವ್ಯವಸ್ಥೆಯಲ್ಲಿರುವ ನಿರ್ಬಂಧಗಳ ಅಥವಾ 'ಬೈತಲ್ ಮುಹರ್ರಮಿ'ಯ ಮೂಲಕ ಒಬ್ಬ ವ್ಯಕ್ತಿಯು ಅವನ / ಅವಳ ಬದ್ಧತೆಗಳನ್ನು ಎತ್ತಿಹಿಡಿಯುವ ಅಗತ್ಯವಿದೆ. ಇದರ ಬಗ್ಗೆ ಕೆಳಗೆ ವಿವರವಾಗಿ ಚರ್ಚಿಸಲಾಗಿದೆ.

> ಅವರು ಇರುವೆಗಳ ಒಂದು ಕಣಿವೆಯನ್ನು ಸಮೀಪಿಸಿದಾಗ, ಒಂದು ಇರುವೆ ಹೇಳಿತು "ಓ ಇರುವೆಗಳೇ, ನಿಮ್ಮ ಬಿಲಗಳೊಳಗೆ ನುಗ್ಗಿರಿ, ಇಲ್ಲದಿದ್ದರೆ ಸುಲೈಮಾನ್ ಮತ್ತು ಅವರ ಸೈನ್ಯವು ಅರಿಯದೇ ನಿಮ್ಮನ್ನು ತುಳಿದು ಬಿಡುವರು." (27:18)

ನಿಸ್ಸಂಶಯವಾಗಿ ಇರುವೆಗಳು ಅರಬಿಯಲ್ಲಿ ಪರಸ್ಪರ ಸಂಭಾಷಣೆ ನಡೆಸಿರಲಿಲ್ಲ. ಅಲ್ಲಾಹನು ಎಲ್ಲಾ ಭಾಷೆಗಳನ್ನು ಅರಿಯುವುದರಿಂದ, ಮೇಲೆ ಉಲ್ಲೇಖಿಸಿದ ವಚನದಲ್ಲಿ ಹೇಳಿದ ಇರುವೆಗಳ ಭಾಷೆಯನ್ನು ಅವನು ಅರಬೀ ಭಾಷೆಗೆ ಭಾಷಾಂತರ ಮಾಡಿದನು. ಅವನು ಒಂದು ಫ್ರೆಂಚ್ ಪ್ರವಾದಿಯನ್ನು ಆಯ್ದಿರುತ್ತಿದ್ದರೆ, ಇರುವೆಯು ತನ್ನ ಸಹಚರರಿಗೆ ನೀಡಿದ ಎಚ್ಚರಿಕೆಯನ್ನು ಅವನು ನಿಸ್ಸಂದೇಹವಾಗಿ ಫ್ರೆಂಚ್'ನಲ್ಲಿ ಅನುವಾದ ಮಾಡುತ್ತಿದ್ದನು.

ಮೂಸಾರಿಗೆ ತನ್ನ ಮಾತೃಭಾಷೆಯಾದ ಹಿಬ್ರೂವಿನಲ್ಲಿ ದೇವನು ಗ್ರಂಥವನ್ನು ಅವತೀರ್ಣಗೊಳಿಸಿದನು. ಆದರೆ ಕುರ್'ಆನ್ ಒಂದು ಅರಬನಿಗೆ ಅರಬೀ ಭಾಷೆಯಲ್ಲಿ ಅವತರಿಸಲಾದಾಗ, ಇಸ್ರಾಯೀಲರ ಮಕ್ಕಳಿಗೆ ಅದರ ಮೇಲೆ ವಿಶ್ವಾಸವಿರಿಸಲು ಹೇಳಲಾಯಿತು. ಅಲ್ಲಾಹನೊಂದಿಗೆ ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವ ಸಲುವಾಗಿ, ಅರಬರಾಗಿ ಮಾರ್ಪಡಲೋ ಅಥವಾ ಅರಬೀ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಅನುಸರಿಸಲೋ ಅಲ್ಲಾಹನು ಅವರಿಗೆ ಹೇಳಲಿಲ್ಲ.

> ಓ ಇಸ್ರಾಯೀಲರ ಮಕ್ಕಳೇ, ನಾನು ನಿಮಗೆ ದಯಪಾಲಿಸಿದ ಅನುಗ್ರಹಗಳನ್ನು ಮೆಚ್ಚಿರಿ ಮತ್ತು ನನ್ನೊಂದಿಗೆ ಮಾಡಿದ ಒಪ್ಪಂದವನ್ನು ಪೂರೈಸಿದರೆ, ನಾನು ನಿಮ್ಮೊಂದಿಗೆ ಮಾಡಿದ ಒಪ್ಪಂದವನ್ನು ಪೂರೈಸುವೆನು ಮತ್ತು ನನ್ನನ್ನು ಮಾತ್ರ ಭಯಪಡಿರಿ. ನಾನು ಅವತೀರ್ಣಿಸಿದ ಈ ಗ್ರಂಥದ ಮೇಲೆ ವಿಶ್ವಾಸವಿಡಿರಿ. ಈ ಗ್ರಂಥವು ಈ ಮೊದಲೇ ನಿಮ್ಮ ಬಳಿಯಿರುವ ಗ್ರಂಥವನ್ನು ಸಮರ್ಥಿಸುತ್ತದೆ. ಆದುದರಿಂದ ಅದನ್ನು ತಿರಸ್ಕರಿಸುವವರಲ್ಲಿ ನೀವು ಮೊದಲಿಗರಾಗಬೇಡಿರಿ. ನನ್ನ ವಚನಗಳನ್ನು ಅಲ್ಪ ಬೆಲೆಗೆ ವಿಕ್ರಯಿಸಬೇಡಿರಿ ಮತ್ತು ನನ್ನನ್ನು ಲಕ್ಷಿಸಿ. ಸುಳ್ಳುಗಾರಿಕೆಯ ಜೊತೆ ಸತ್ಯವನ್ನು ಬೆರೆಸಬೇಡಿರಿ ಮತ್ತು ಅರಿತುಕೊಂಡು ಸತ್ಯವನ್ನು ಮುಚ್ಚಿಡಬೇಡಿರಿ. ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ ಹಾಗೂ ಅದನ್ನು ಪರಿಶುದ್ಧವಾಗಿಡಿರಿ ಮತ್ತು ವಿನಮ್ರರೊಂದಿಗೆ ನೀವೂ ವಿನಮ್ರರಾಗಿರಿ. (2:40-41-43)

ಅಲ್ಲಾಹನ ಅವತೀರ್ಣಗಳು ಹಲವು ಭಾಷೆಗಳಲ್ಲಿ ಬಂದಿವೆ ಮತ್ತು ಅದರಲ್ಲಿರುವ ಸಂದೇಶವು ಸರ್ವೋಚ್ಚ ಪ್ರಾಮುಖ್ಯತೆಯಾಗಿದೆಯೇ ಹೊರತು, ಸಂದೇಶವಾಹಕರೋ ಅಥವಾ ಅದರ ಭಾಷೆಯೋ ಅಲ್ಲ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ. ವಿಶ್ವಾಸವಿಡಲು ನಿರಾಕರಿಸುವವರು, ಅಲ್ಲಾಹನ ಸಂದೇಶವನ್ನು ಸ್ವೀಕರಿಸಲು ಭಾಷೆಯನ್ನು ಒಂದು ಹೊರೆಯಾಗಿ ಕಾಣುತ್ತಾರೆ. ಅಲ್ಲಾಹನ ಗ್ರಂಥದ ಭಾಷೆಯು ಮುಖ್ಯವಲ್ಲ ಎಂದು ಕುರ್'ಆನ್ ಕಲಿಸುತ್ತದೆ ಮತ್ತು ಅಲ್ಲಾಹನು ಪ್ರಾಮಾಣಿಕ ವಿಶ್ವಾಸಿಗಳ ಹೃದಯದಲ್ಲಿ ಅವರ ಮಾತೃಭಾಷೆಯನ್ನು ಲೆಕ್ಕಿಸದೆ ಆತನ ಸಂದೇಶವನ್ನು ಇಳಿಸುತ್ತಾನೆ. ಸತ್ಯನಿಷೇಧಿಗಳು ಭಾಷೆಯ ಬಗ್ಗೆ ವಿವಾದಿಸುತ್ತಾರೆಯೇ ಹೊರತು ಸಂದೇಶದ ಬಗ್ಗೆ ಅಲ್ಲವೆಂದು ಕುರ್'ಆನ್ ಹೇಳುತ್ತದೆ. ಹಿಂದಿನ ಜನರು

ತೌರಾತಿನ ಭಾಷೆಯ ಬಗ್ಗೆ ವಿವಾದ ನಡೆಸಿದ ಬಗ್ಗೆ ಕುರ್‌ಆನ್ ಒಂದು ಉತ್ತಮ ಉದಾಹರಣೆ ನೀಡುತ್ತದೆ. ತಾವು ಮೂಸಾರ ಬೋಧನೆಗಳ ಅನುಯಾಯಿಗಳೆಂದು ಹೇಳಿಕೊಳ್ಳುವವರು, ತೌರಾತಿನ ಭಾಷೆಯ ಬಗ್ಗೆ ಜಗಳವಾಡಿ ಅಂತಿಮವಾಗಿ ಆ ಗ್ರಂಥವನ್ನು ಕೈಬಿಟ್ಟ ನಿದರ್ಶನಗಳೂ ಇವೆ. ಬದಲಾಗಿ, ಯಹೂದಿ ಋಷಿಗಳ ಒಂದು ಸಣ್ಣ ಗುಂಪು ಬ್ಯಾಬಿಲೋನಿಯನ್ ಮತ್ತು ಪ್ಯಾಲೆಸ್ತೇನಿಯನ್ ತಲ್ಮೂದನ್ನು ಬರೆದರು – ತೌರಾತನ್ನು ವಿವರಿಸಲು ಇದು ಅತ್ಯಂತ ಪ್ರಭಾವಶಾಲಿಯಾದ ದಾಖಲೆ ಎಂದು ದಾವೆ ಮಾಡಿದರು - ಆದರೆ ತಲ್ಮೂದನ್ನು 'ಓದಬಾರದು', ಬದಲಿಗೆ ಅದನ್ನು ಒಂದು ಗಾಯಕವೃಂದದ ಸಂಗೀತ ಧ್ವನಿಗಳ ರೀತಿಯಲ್ಲಿ 'ಕಲಿಯಲು' ಹೇಳಲಾಗಿದೆ - ಇದನ್ನು ಹಾಡಲಾಗುತ್ತದೆ. ತೌರಾತನ್ನು ಅರಿಯಬೇಕಾದರೆ, ಅವರು ಯಹೂದಿ ಋಷಿಗಳ ಚಿಂತನೆಯ ಪ್ರತೀಕವಾದ 'ಮಿಶ್ನಾ'ವನ್ನು ವಿವರಿಸುವ 'ತೊಸೆಫ್ತ'ವನ್ನೂ ಹಾಗೂ ಮಿಶ್ನಾದ ವ್ಯಾಖ್ಯಾನವಾದ 'ಜೆಮ್ರ'ವನ್ನೂ ಓದಬೇಕಾಗಿದೆ. ಮಿಶ್ನಾವನ್ನು ಕುಲಪತಿಯಾದ 'ಜೂದಹ್' ಎಂಬವನು ಬರೆದನು, ಆದರೆ ಇದನ್ನು 'ಶಮ್ಮಾಯಿ' ಮತ್ತು 'ಹಿಲ್ಲೇಲ್' ಎಂಬ ವಿವಾದಿತ ಪುಸ್ತಕಗಳು ವಿವರಿಸಬೇಕಾಗಿದೆ. ಹೀಗೆ ನಾವು ಇಂದು ಕಾಣುತ್ತಿರುವ (ಮೂಸಾರಿಗೆ ತಿಳಿದೇ ಇಲ್ಲದಂತಹ) ಒಂದು ವಿಚಿತ್ರ ಸಾಂಪ್ರದಾಯಿಕ ಘಟಕವಾದ 'ಯಹೂದಿ ಧರ್ಮ'ವು ಇಂತಹ ಬಹಳ ಗೊಂದಲಗಳಿಂದ ಕೂಡಿದೆ. ಅವರ ಆವಿಷ್ಕೃತ ವ್ಯಾಖ್ಯಾನಗಳು ಮತ್ತು ತಿಳಿವಳಿಕೆಗಳು ವಿಭಿನ್ನವಾದಾಗ ಅವರು ಅನೇಕ ಪಂಥಗಳನ್ನು ಸೃಷ್ಟಿಸಿದರು. ಇದೇ ರೀತಿಯ ವಿವಾದಗಳು ಅರಬೀ ಧರ್ಮದ ಒಳಗೆಯೂ ಪ್ರಬಲವಾಗಿರುವುದರಲ್ಲಿ ಆಶ್ಚರ್ಯಕರವೇನೂ ಇಲ್ಲ. ಅಲ್ಲಾಹನ ಅವತೀರ್ಣವು ಯಾವ ಭಾಷೆಯಲ್ಲಿ ಬಂದರೂ ಜನರು ಅದನ್ನು ಪ್ರಶ್ನಿಸುತ್ತಾರೆ ಎಂಬುವುದನ್ನು ಕುರ್‌ಆನ್ ಪ್ರತೀಕ್ಷೆ ಮಾಡಿತ್ತು:

> ನಾವು ಇದನ್ನು ಅರಬೇತರ ಕುರ್‌ಆನನ್ನಾಗಿ ಮಾಡಿ ಕಳುಹಿಸುತ್ತಿದ್ದರೆ ಇವರು ಹೇಳುತ್ತಿದ್ದರು: 'ಇದರ ಸೂಕ್ತಗಳು ಸುಸ್ಪಷ್ಟವಾಗಿ ವಿವರಿಸಲಾಗಿಲ್ಲವೇಕೆ? ಅರಬರಿಗೆ ಅರಬೇತರ (ಕುರ್‌ಆನನ್ನು ಅವತೀರ್ಣಿಸಬೇಕಿತ್ತೇ?). ಹೇಳಿರಿ – "ಸತ್ಯವಿಶ್ವಾಸಿಗಳಿಗೆ ಇದು ಒಂದು ಸ್ಫೂರ್ತಿಯು ಹಾಗೂ ಮಾರ್ಗದರ್ಶನವು ಆಗಿದೆ. ಸತ್ಯನಿಷೇಧಿಗಳು ಇದರ ಬಗ್ಗೆ ಕಿವುಡರೂ ಮತ್ತು ಕುರುಡರೂ ಆಗಿರುತ್ತಾರೆ. ಅವರ ಅವಸ್ಥೆಯು, ಅವರನ್ನು ದೂರದಿಂದ ಕರೆಯಲಾಗುತ್ತಿದೆಯೋ ಎಂಬಂತಿದೆ." ನಾವು ಮೂಸಾರಿಗೂ ಗ್ರಂಥವನ್ನು ನೀಡಿದ್ದೆವು ಮತ್ತು ಅವರು ಅದನ್ನು ಕೂಡಾ ವಿವಾದಕ್ಕೊಳಪಡಿಸಿದರು. ನಿಮ್ಮ ಪ್ರಭುವಿನ ಒಂದು ಪೂರ್ವ ನಿರ್ಧರಿತ ತೀರ್ಮಾನವಾಗಿರದಿದ್ದರೆ, ಅವರು ತಕ್ಷಣವೇ ಇತ್ಯರ್ಥಗೊಳಿಸಲ್ಪಡುತ್ತಿದ್ದರು. ಅವರು ಮಹಾ ಗೊಂದಲದಲ್ಲೇ ಇದ್ದಾರೆ. (41:44-45)
>
> ಅರಬೇತರರ ಮೇಲೆ ಅರಬಿಯಲ್ಲಿ ಇದನ್ನು ಪ್ರಸ್ತಾವಿಸಿದ್ದರೆ, ಅವರಿಗೆ ಓದಿಸಲ್ಪಡುವಾಗ ಇದನ್ನು ಸ್ವೀಕರಿಸಲು ಸಾಧ್ಯವಾಗಿರುತ್ತಿರಲಿಲ್ಲ. ಹೀಗೆ ನಾವು ಅದನ್ನು ಅಪರಾಧಿಗಳ ಹೃದಯಗಳಿಂದ ಹಾಯಿಸುತ್ತೇವೆ. ವೇದನಾತ್ಮಕ ಯಾತನೆಯನ್ನು ಕಂಡುಕೊಳ್ಳುವ ವರೆಗೂ ಅವರು ಅದರಲ್ಲಿ ವಿಶ್ವಾಸವಿರಿಸಲಾರರು. (26:198-201)

ಕುರ್‌ಆನ್ ಅರಬೀ ಬಾಷೆಯಲ್ಲಿ ಅವತೀರ್ಣಿಸಲಾಗಿದೆ ಎಂಬ ವಾಸ್ತವದ ಹೊರತಾಗಿಯೂ, ಅಲ್ಲಾಹನು ಇತರ ಜನಾಂಗಗಳ ಮೇಲೆ ಅರಬರನ್ನು ಆದ್ಯತೆಗೊಳಿಸಲಿಲ್ಲ. ಬದಲಿಗೆ, ಅಪನಂಬಿಕೆ ಹಾಗೂ ಕಪಟತೆಯಲ್ಲಿ ಕಠೋರರು ಎಂದು ಅರಬರನ್ನು ಅರಬೀ ಗ್ರಂಥದಲ್ಲೇ ಬಲವಾದ ಪರಿಭಾಷೆಯಲ್ಲಿ ಖಂಡಿಸುವ ಮೂಲಕ ಸ್ಪಷ್ಟಪಡಿಸುತ್ತಾನೆ.

ಮೇಲೆ ತಿಳಿಸಲಾದಂತೆ ನಿಖರವಾದ ಪರಿಭಾಷೆಯಲ್ಲಿ ಅರಬರನ್ನು ವಿವರಿಸಿದ ಕುರ್‌ಆನಿನ ವಚನಗಳ ಅಸ್ತಿತ್ವವನ್ನು ಕೇವಲ ಸೂಚಿಸಿದ ಕಾರಣಕ್ಕಾಗಿ, ಕೆಲವು ಜನರು ಲೇಖಕರಿಗೆ ಅರಬರ ಮೇಲೆ ದ್ವೇಷವಿದೆ ಎಂದು ಆರೋಪಿಸಿದ್ದಾರೆ.

ಉದಾಹರಣೆಗೆ 9:97-101 ನ್ನು ತೆಗೆದುಕೊಂಡರೆ, ಮೇಲೆ ತಿಳಿಸಿದ ಆರೋಪವನ್ನು ಹೊರಿಸುವಂತಹ ವಿಮರ್ಶಕರು, *ಅ'ರಾಬು* ಮತ್ತು *ಅ'ರಾಬಿ* ಎಂಬ ಪದಗಳ ಅರ್ಥ 'ಬದುಗಳು' ಅಥವಾ 'ಮರುಭೂಮಿಯ ಅರಬರು' ಎಂಬುವುದಾಗಿದೆ ಎಂದು ಪಟ್ಟು ಹಿಡಿಯುತ್ತಾರೆ. ಅಲ್ಲದೆ, ಅವರು ಈ ಕೆಳಗಿನ (ತಮ್ಮ ಅಭಿಪ್ರಾಯಗಳು ಸೇರಿಸಿದಂತಹ) ಅನುವಾದಗಳನ್ನು ಮುಂದಿಡುತ್ತಾರೆ. ಕುರ್‌ಆನಿನ ಪದಗಳು ಹೊಂದಿರುವಂತಹ ಅರ್ಥಗಳನ್ನು ಸಾಮಾನ್ಯ ಮೌಲ್ಯದಲ್ಲಿ ತೆಗೆದುಕೊಳ್ಳದಂತೆ ಅವುಗಳು ನಮ್ಮನ್ನು ತಡೆಯುತ್ತದೆ:

- ಅಲೆಮಾರಿ ಅರಬರು ಸತ್ಯನಿಷೇಧ ಮತ್ತು ಕಪಟತನದಲ್ಲಿ ಅತೀ ಕಠೋರರು ಮತ್ತು ಅಲ್ಲಾಹನು ತನ್ನ ಸಂದೇಶವಾಹಕರಿಗೆ ಅವತರಿಸಿದ ಮಿತಿಗಳ ಬಗ್ಗೆ ಅಜ್ಞರಾಗಿರುತ್ತಾರೆ. ಅಲ್ಲಾಹನು ಜ್ಞಾನಿಯೂ, ಧೀಮಂತನೂ ಆಗಿದ್ದಾನೆ. (9:97 – ಮರ್ಮದೂಕೆ ಪಿಕ್ಥಾಲ್)

- ಬದುಗಳು (ಬದುಗಳ ಪೈಕಿ ಕೆಲವು ಕಪಟವಿಶ್ವಾಸಿಗಳು), ಸತ್ಯವನ್ನು ಒಪ್ಪಿಕೊಳ್ಳಲು ನಿರಾಕರಿಸುವುದರಲ್ಲಿ ಮತ್ತು (ತಮ್ಮ) ಕಪಟತನದಲ್ಲಿ ಅತೀ ಕಠೋರರು ಮತ್ತು ಅವರು ಅಲ್ಲಾಹನು ಮೇಲಿನಿಂದ ತನ್ನ ಧರ್ಮಪ್ರಚಾರಕನ ಮೇಲೆ ಅನುಗ್ರಹಿಸಿದ್ದನ್ನು ನಿರ್ಲಕ್ಷಿಸಿಸುವ ಸಾಧ್ಯತೆಯು ಹೆಚ್ಚು, ಆದರೆ ಅಲ್ಲಾಹನು ಸರ್ವಜ್ಞನೂ, ತೀರ್ಪುಗಾರನೂ ಆಗಿರುತ್ತಾನೆ. (9:97 – ಮುಹಮ್ಮದ್ ಅಸದ್)

- ಬದು ಅರಬರು ಸತ್ಯನಿಷೇಧ ಮತ್ತು ಕಪಟತನದಲ್ಲಿ ಅತೀ ಕೆಟ್ಟವರು ಮತ್ತು ಅಲ್ಲಾಹನು ತನ್ನ ಸಂದೇಶವಾಹಕರಿಗೆ ಕಳುಹಿಸಿದ ಶಾಸನಗಳ ಬಗ್ಗೆ ಅಜ್ಞರಾಗಲು ಹೆಚ್ಚು ಸೂಕ್ತರಾಗಿರುತ್ತಾರೆ. ಆದರೆ ಅಲ್ಲಾಹನು ಸರ್ವಜ್ಞನೂ, ಮಹಾ ಧೀಮಂತನೂ ಆಗಿದ್ದಾನೆ. (9:97 – ಯೂಸುಫ್ ಅಲಿ)

ಕುರ್‌ಆನಿನಲ್ಲಿರುವ ಅಲ್ಲಾಹನ ಅರಬೀ ಭಾಷೆಯು, ಪರಿಪೂರ್ಣವೂ ಮತ್ತು ಬಹಳ ನಿಖರವೂ ಆಗಿದೆ. ಕುರ್‌ಆನಿನ ಭಾಷೆಯಲ್ಲಿ, ಬದು ಅರಬರನ್ನು ಅಥವಾ 'ಮರುಭೂಮಿಯ ಅರಬರನ್ನು' *ಬಾದೂನ ಫಿಲ್ ಅ'ರಾಬಿ* ಎಂದು ಉಲ್ಲೇಖಿಸಲಾಗಿದೆ.

ಕುರ್‌ಆನ್ ಬದು ಅರಬರ ಬಗ್ಗೆ ಮಾತನಾಡುವಾಗ, ಹೀಗೆ ಹೇಳುತ್ತದೆ:

> *ಯಹ್ಸಬೂನಲ್ ಅಹ್ಝಾಬ ಲಮ್ ಯಝ್ಹಬೂ ವ ಇನ್ ಯ'ತಿಲ್ ಅಹ್ಝಾಬು ಯವದ್ದು ಲವ್ ಅನ್ನಹುಮ್ ಬಾದೂನ ಫಿಲ್ ಆ'ರಾಬಿ ಯಸ್‌ಅಲೂನ ಅನ್ ಅಂಬಾಯಿಕುಮ್ ವಲವ್ ಕಾನೂ ಫೀಕುಮ್ ಮಾ ಕಾತಿಲೂ ಇಲ್ಲಾ ಖಲೀಲನ್. ಲಕದ್ ಕಾನ ಲಕುಮ್ ಫೀ ರಸೂಲಿಲ್ಲಾಹಿ ಉಸ್ವತುನ್ ಹಸನತುನ್ ಲಿಮನ್ ಕಾನ ಯರ್ಜೂಲ್ಲಾಹ ವಲ್ ಯೌಮಲ್ ಆಹಿರ ವಧಕರಲ್ಲಾಹ ಕಸೀರನ್ (33:20-21)*
>
> ಅವರು ತಮ್ಮ ಮೈತ್ರಿಕೂಟರು ಬರಲಾರರು ಎಂದು ಕೊಂಡಿದ್ದರು, ಆದರೆ ತಮ್ಮ ಮೈತ್ರಿಕೂಟರು ಬಂದಾಗ, ತಾವು ನಿಮ್ಮನ್ನು ದೂರದಿಂದ ಮಾತ್ರ ನೋಡುತ್ತಿರುವ ಬದು-ಅರಬರಾಗಿದ್ದರೆ ಚೆನ್ನಾಗಿರುತ್ತಿತ್ತು ಎಂದು ಭಾವಿಸುತ್ತಾರೆ. ಅವರು ನಿಮ್ಮೊಂದಿಗೆ ಇರುವವರಾಗಿದ್ದರೂ ಅವರು ಪರಿಶ್ರಮಿಸುತ್ತಿರಲಿಲ್ಲ. ಅಲ್ಲಾಹನ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವರಿಗೆ ಮತ್ತು ಅಲ್ಲಾಹನನ್ನು ನಿರಂತರವಾಗಿ ಸ್ಮರಿಸುವವರಿಗೆ, ಅಲ್ಲಾಹನ ಸಂದೇಶವಾಹಕರಲ್ಲಿ ಅತ್ಯುತ್ತಮ ಉದಾಹರಣೆ ಇದೆ. (33:20-21)

9:97-101 ಸ್ಪಷ್ಟವಾಗಿ 'ಅರಬ್' ಎಂಬ ಪದ ಬಳಸುತ್ತದೆ. ಇದು ನಾಮಪದವನ್ನು ವಿಶ್ಲೇಷಿಸುವುದಿಲ್ಲ. ಇದು ಅರಬರು ನಗರವಾಸಿಗಳೆಂದು ಸೂಚಿಸುತ್ತದೆ. ಅವರ ಗುರುತನ್ನು, 9:101 ರಲ್ಲಿ ಸ್ಪಷ್ಟಪಡಿಸಿದೆ. *"ನಿಮ್ಮ ಸುತ್ತಮುತ್ತಲಲ್ಲಿ ಇರುವವರ ಪೈಕಿ, ಕಪಟ ಅರಬರು ಇದ್ದಾರೆ - ಮತ್ತು ನಗರ ವಾಸಿಗಳು ಇದ್ದಾರೆ. ಅವರು ಕಪಟತನದಲ್ಲಿ ಆಳವಾಗಿರುತ್ತದೆ."* ಹಾಗಾಗಿ, ಅವರು ಮರುಭೂಮಿಯ ನಿವಾಸಿಗಳು ಅಲ್ಲ. ಕುರ್‌ಆನನ್ನು ವಿರೂಪಗೊಳಿಸುವವರನ್ನು ಕುರಾನ್ ಸ್ವತಃ ಹೇಗೆ ವಿವರಿಸುತ್ತದೆ ಮತ್ತು ದಿಗ್ಭ್ರಮೆಗೊಳಿಸುತ್ತದೆ ಎಂಬುವುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ.

ಸತ್ಯವಿಶ್ವಾಸಿಗಳಾದ ಅರಬರ ಬಗ್ಗೆಯೂ ಕುರ್‌ಆನ್ ಸೂರ 9 ವಚನ 99 ರಲ್ಲಿ ಹೇಳುತ್ತದೆ:

> ಅರಬರಲ್ಲಿ ಅಲ್ಲಾಹನ ಹಾಗೂ ಅಂತಿಮ ದಿನದ ಮೇಲೆ ವಿಶ್ವಾಸವಿಡುವವರೂ ಇದ್ದಾರೆ ಮತ್ತು ತಮ್ಮ ಅನುದಾನಗಳನ್ನು ಅಲ್ಲಾಹನ ಹಾಗೂ ಅವನ ಸಂದೇಶವಾಹಕರ ಬದ್ಧತೆಗಳ ದಿಸೆಗೆ ತಮ್ಮ ಸನಿಹಗೊಳಿಸುವ ವಿಧಾನವಾಗಿ ಪರಿಗಣಿಸುತ್ತಾರೆ. ನಿಶ್ಚಯವಾಗಿಯೂ, ಅದು ಅವರನ್ನು ಅಲ್ಲಾಹನ ಸಮೀಪ ತರುವುದು ಮತ್ತು ಅಲ್ಲಾಹನು ಅವರನ್ನು ತನ್ನ ಕಾರುಣ್ಯದೊಳಗೆ ಪ್ರವೇಶಗೊಳಿಸುವನು. ನಿಶ್ಚಯವಾಗಿಯೂ, ಅಲ್ಲಾಹನು ಕ್ಷಮಾಶೀಲನೂ ಕರುಣಾಮಯನೂ ಆಗಿದ್ದಾನೆ.

ವಿಶ್ವಾಸಿಗಳಾದ ಅರಬರು ಈ ವಚನದಲ್ಲಿ ಸೂಚಿಸಿರುವ ಅರ್ಹತೆಯನ್ನು ಪಡೆಯಲು ತಮ್ಮ ಸಂದೇಶವಾಹಕರ ಹಾಗೆ, ದೀನಿಗೆ ತಮ್ಮನ್ನು ಬದ್ಧರಾಗಿಸಬೇಕು. ಅಲ್ಲಾಹನ ಶಾಂತಿಪರತೆಯನ್ನು (ಇಸ್ಲಾಂ) ಶುದ್ಧಗೊಳಿಸಲು ಅವರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಕುರ್‌ಆನನ್ನು ಮಾರ್ಗದರ್ಶನದ ಏಕೈಕ ಮೂಲವಾಗಿ ಸ್ವೀಕರಿಸಲು ನಿರಾಕರಿಸಿದ, ತನ್ನದೇ ಸ್ವಂತ ಸಮುದಾಯದ ಸತ್ಯನಿಷೇಧಿಗಳ ವಿರುದ್ಧ ತನ್ನ ಜೀವನವನ್ನು

ಅಪಾಯಕ್ಕೊಳಪಡಿಸಿದ ಸಂದೇಶವಾಹಕರು ಬಹು ದೊಡ್ಡ ಪ್ರಯತ್ನವನ್ನು ನಡೆಸಿದ್ದರು ಎಂಬ ವಾಸ್ತವವನ್ನು ಯಾರೂ ನಿರಾಕರಿಸುವುದಿಲ್ಲ. ಅವರು ಕಪಟವಿಶ್ವಾಸಿಗಳ ಮತ್ತು ಮೂರ್ತಿ ಆರಾಧಕರ ವಿರುದ್ಧ ಕಠಿಣವಾಗಿ ಪರಿಶ್ರಮಿಸಿದ್ದರು. ಅಂದರೆ, ಇತರ ಎಲ್ಲಾ ರೀತಿಯ ಜೀವನ ರೀತಿಗಳ ಅಥವಾ ದೀನುಗಳ ಬದಲಿಗೆ ಅಲ್ಲಾಹನ ಮಾರ್ಗದರ್ಶನವನ್ನು ಪ್ರಬಲಗೊಳಿಸಲು ಉತ್ತೇಜಿಸುವ (ಉಮ್ರ) ಸಲುವಾಗಿ ಸಂದೇಶವಾಹಕರು ತನ್ನ ಜನರ ವಿರುದ್ಧವೇ ಸವಾಲನ್ನು ತೆಗೆದುಕೊಂಡಿದ್ದರು (ಹಜ್ಜ್).

ಮೇಲಿನ 33:20 ರಲ್ಲಿ ಬದುಗಳು ಅಲ್ಲಾಹನ ಮಾರ್ಗದಲ್ಲಿ ಶ್ರಮಿಸಲು ಆಸಕ್ತಿಯಿಲ್ಲದವರಾಗಿದ್ದರು ಎಂದೂ, ನಂತರ 33:21 ರಲ್ಲಿ '*ಅಲ್ಲಾಹನ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವರಿಗೆ ಮತ್ತು ಅಲ್ಲಾಹನನ್ನು ನಿರಂತರವಾಗಿ ಸ್ಮರಿಸುವವರಿಗೆ, ಅಲ್ಲಾಹನ ಸಂದೇಶವಾಹಕರಲ್ಲಿ ಅತ್ಯುತ್ತಮ ಉದಾಹರಣೆ ಇದೆ*' ಎಂದೂ ನಾವು ನೋಡಬಹುದು. ಹಾಗಾಗಿ, ತಾವು 9:99 ರಲ್ಲಿ ಸೂಚಿಸಿದ ಜನರ ಗುಂಪಿಗೆ ಸೇರುತ್ತೇವೆ ಎಂದುಕೊಂಡಿರುವ ಇಂದಿನ ಅರಬರು - ತಮ್ಮ ಪ್ರವಾದಿಯರು ಮಾಡಿದ ಹಾಗೆಯೇ ನಿಖರವಾಗಿ ಅನುಸರಿಸಬೇಕು. ನಿಸ್ಸಂಶಯವಾಗಿ ಅವರಿಗೆ 9:20 ರ ಅರ್ಥ ತಿಳಿದಿದೆ. ಅದು ಅವರಿಗೆ ಹೀಗೆ ಪ್ರೇರೇಪಿಸುತ್ತದೆ "*ಜಾಹದೂ ಫೀ ಸಬೀಲಿಲ್ಲಾಹಿ ಬಿಅಮ್ವಾಲಿಹಿಮ್ ವ ಅನ್ಫುಸಿಹಿಮ್*" ಅಥವಾ *ತಮ್ಮ ಹಣ ಮತ್ತು ಪ್ರಾಣದೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಶ್ರಮಿಸಬೇಕು.* ತಮ್ಮ ತಾಯ್ನಾಡಿನಲ್ಲಿ ಇಂದು ನಡೆಯುತ್ತಿರುವ ಮೂರ್ತಿ ಆರಾಧನಾ ಆಚರಣೆಗಳ ಬದಲಿಗೆ ಕುರ್‌ಆನಿನಲ್ಲಿ ಅಲ್ಲಾಹನು ಅಂಗೀಕರಿಸಿರುವಂತಹದ್ದನ್ನು ಪ್ರಚಲಿತಗೊಳಿಸಲು ಉತ್ತೇಜಿಸುವ ಸಲುವಾಗಿ ತಮ್ಮ ಜನರ ವಿರುದ್ಧ ಅದೇ ಸವಾಲನ್ನು ತೆಗೆದುಕೊಳ್ಳುವುದು ಅವರ ಕರ್ತವ್ಯವಾಗಿದೆ.

ದುರದೃಷ್ಟವಶಾತ್, ಅರಬೀ ಭಾಷೆಯಲ್ಲಿ ತಮ್ಮ ಪರಿಣಿತಿಯ ಹೊರತಾಗಿಯೂ, ಅವರಲ್ಲಿ ಅನೇಕರು ತಮ್ಮ ನಾಡಿನ ಸ್ವೇಚ್ಛಾಚಾರಿಕ ಯೋಜನೆಯನ್ನು ವರ್ಜಿಸಿ, ಉತ್ತಮ ಆಡಳಿತ ವ್ಯವಸ್ಥೆಗಾಗಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಸ್ಥಳಾಂತರಗೊಳ್ಳಲು ನಿರ್ಧರಿಸಿದರು. ವೈಚಾರಿಕವಾಗಿ, ಒಬ್ಬ ವ್ಯಕ್ತಿಯು ಅರ್ಹತೆ ಪಡೆಯಬೇಕಾದರೆ, ತಾನು ವಿಶ್ವಾಸವಿರಿಸುವುದನ್ನು ಅನುಸರಿಸಬೇಕು. ಅದರ ಬಗ್ಗೆ ಮಾತನಾಡಬೇಕೆಂದಿಲ್ಲ. ತಮ್ಮ ಪ್ರವಾದಿಯವರು ಶಾಂತಿಪರತೆಯನ್ನು ಸ್ಥಾಪಿಸಿದ ಉದಾಹರಣೆಯನ್ನು (ಎಲ್ಲರಿಗಿಂತಲೂ ಹೆಚ್ಚಾಗಿ) ಅರಬರು ಹಿಂಬಾಲಿಸಬೇಕಾಗಿತ್ತು - ಏಕೆಂದರೆ ಅವರಿಗೆ ಕುರ್‌ಆನಿನ ಭಾಷೆಯನ್ನು ಅರ್ಥಮಾಡಿಕೊಳ್ಳಬಹುದು - ಅವರು ತಮ್ಮ ದೇಶದಲ್ಲಿ ನಡೆಯುತ್ತಿರುವಂತಹ ಅರಬೀ ಪುರಾಣ ಮತ್ತು ಬುಡಕಟ್ಟು ಸಂಪ್ರದಾಯದ ಆಚರಣೆಗಳಿಂದ ತುಂಬಿದ ಮೂರ್ತಿ ಆರಾಧನೆಯ ರೂಢಿಯನ್ನು ಯಥಾರ್ಥದಲ್ಲಿ ವಿವೇಕಿಸಬಹುದು. ಈ ಸುಳ್ಳು ಅವಿಷ್ಕಾರಗಳನ್ನು ತಿರಸ್ಕರಿಸುವ ವರೆಗೂ - ಸೂರ 9 ವಚನ 99 ರ ಅವರ ದಾವೆಯು ಅಸಂಬದ್ಧವಾಗಿದೆ.

ಸತ್ಯನಿಷೇಧ ಮತ್ತು ಬೂಟಾಟಿಕೆಯ ಅರಬರನ್ನು ವಿರೋಧಿಸಿ, ಅಲ್ಲಾಹನ ಮಾರ್ಗದರ್ಶನಕ್ಕೆ ಸ್ಪೂರ್ತಿ ನೀಡುವ ಸಲುವಾಗಿ ಅವನು ಸಮ್ಮತಿಸಲ್ಪಟ್ಟಿರು ಆದೇಶಗಳನ್ನು ಉತ್ತೇಜಿಸುವಂತಹ ಸವಾಲು ತೆಗೆದುಕೊಳ್ಳಲು ಇತರ ದೇಶಗಳ ಅರಬರೂ ಸಮಾನವಾಗಿ ಜವಾಬ್ದಾರಿಯುತರಾಗಿದ್ದಾರೆ. "ಜನರನ್ನು ಭಯಪಡಬೇಡಿರಿ ಬದಲಿಗೆ

ನನ್ನನ್ನು ಭಯಪಡಿರಿ, ಹೀಗೆ ನಾನು ನಿಮ್ಮ ಮೇಲೆ ನನ್ನ ಕೃಪೆಯನ್ನು ಸಂಪೂರ್ಣಗೊಳಿಸುತ್ತೇನೆ ಮತ್ತು ನೀವು ಮಾರ್ಗದರ್ಶನ ಪಡೆಯುವಿರಿ" ಎಂದು ಅಲ್ಲಾಹನು ಕುರ್‌ಆನಿನಲ್ಲಿ ಅನೇಕ ಸ್ಥಳಗಳಲ್ಲಿ ಹೇಳಿದ್ದಾನೆ.

ಅವರಿಗೆ ದೃಷ್ಟಾಂತಗಳನ್ನು ಓದಿ ಕೇಳಿಸಲು ಮತ್ತು ಅವರನ್ನು ಶುದ್ದೀಕರಿಸಲು ಮತ್ತು ಗ್ರಂಥ ಹಾಗೂ ಬುದ್ಧಿವಂತಿಕೆಯನ್ನು ಕಲಿಸಲು ಮತ್ತು ಅವರಿಗೆ ತಿಳಿದೇ ಇರದಂತಹ ವಿಷಯವನ್ನು ಕಲಿಸಲು - ಸಂದೇಶವಾಹಕರನ್ನು ಅರಬರ ಪೈಕಿಯಿಂದ ಕಳುಹಿಸಿರುವುದು ಅವರ ಮೇಲೆ ಅಲ್ಲಾಹನ ಅನುಗ್ರಹವಾಗಿದೆ ಎಂದು ಅವರು ಪರಿಗಣಿಸಲೇಬೇಕು. ಹಾಗಾಗಿ, ವಿಶ್ವಾಸಿ ಅರಬರು, ತಾವು ನಿರ್ವಹಿಸದಂತಹ ವಿಷಯವನ್ನು ನುಡಿಯುವುದು ಕಪಟತನವಾಗಿರುತ್ತದೆ, ಏಕೆಂದರೆ ಕುರ್‌ಆನ್ ಹೇಳುತ್ತದೆ "ನೀವು ನಿರ್ವಹಿಸದಂತಹ ವಿಷಯವನ್ನು ನುಡಿಯುವುದು ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಅಸಹನೀಯವಾಗಿದೆ" (61:3).

ಅವರು ಪ್ರವಾದಿಯವರ ಉತ್ತಮ ಉದಾಹರಣೆಯನ್ನು ಅನುಸರಿಸುವ ತನಕ, ಕುರ್‌ಆನ್ ತಮ್ಮ ಮಾತೃಭಾಷೆಯಲ್ಲಿ ಇದ್ದರೂ ಸಹ, ಅಲ್ಲಾಹನ ಈ ಗ್ರಂಥವು ಅರಬರಿಗೆ ಯಾವುದೇ ಪ್ರಯೋಜನವನ್ನು ಕೊಡುವುದಿಲ್ಲ. ದುಃಖಕರವೆಂದರೆ, ಪ್ರಪಂಚದಾದ್ಯಂತ ಅರಬರಿಗಿಂತ ಅಧಿಕವಾಗಿ ಅನೇಕ ಅರಬೇತರು ತಮ್ಮನ್ನು ಹೆಚ್ಚು 'ಅರಬೀ ಸಂಪ್ರದಾಯ'ಗಳಿಗೆ ಹೊಂದಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಒಬ್ಬನು ಅರಬೀ ಭಾಷೆಯನ್ನು ತಿಳಿದಿರುವ ಕಾರಣ ತಾನು ವಿಶ್ವಾಸಿಯೆಂದೂ, ತಾನು ಅಲ್ಲಾಹನ ಆದೇಶಗಳನ್ನು ಸಮ್ಮತಿಸುವವನೆಂದು ವಾದಿಸಲು ಸಾಧ್ಯವಿಲ್ಲ. ವಾಸ್ತವವಾಗಿ 'ಅರಬೀ ಸಂಪ್ರದಾಯ'ದ ಮೇಲೆ ಬಲವಂತವು, ಅವರ ಕ್ರೂರತನವನ್ನು ತೆರೆದಿಡುತ್ತದೆ.

ಅಲ್ಲಾಹನು ಎಲ್ಲಾ ಭಾಷೆಗಳನ್ನು ಅರಿಯುತ್ತಾನೆಂದಾದರೆ, ಸೃಷ್ಟಿಕರ್ತನನ್ನು ವೈಭವೀಕರಿಸಲು ಭಾಷೆಯು ಒಂದು ತಡೆಯಾಗುವುದು ಎಂತೂ ಸಾಧ್ಯವಿಲ್ಲ. ಆಕಾಶಗಳು, ಭೂಮಿ ಮತ್ತು ಪರ್ವತಗಳೂ ಸಹ ಮಾನವರು ಏನು ಹೇಳುತ್ತಾರೆಂದು ಅರ್ಥಮಾಡಿಕೊಳ್ಳಲು ಸಮರ್ಥರಾಗಿದ್ದಾರೆ ಎಂದು ಅಲ್ಲಾಹನು ಹೇಳುತ್ತಾನೆ. ಪ್ರತಿ ಬಾರಿಯು ಒಬ್ಬ ವ್ಯಕ್ತಿಯು 'ಅಲ್ಲಾಹನು ಒಂದು ಮಗುವನ್ನು ಹುಟ್ಟಿಸಿದ್ದಾನೆ' ಎಂಬ ದೇವದೂಷಕ ಮಾತನ್ನು ನುಡಿದಾಗ ಆಕಾಶಗಳು, ಭೂಮಿ ಮತ್ತು ಪರ್ವತಗಳು ಪ್ರತಿಕ್ರಿಯಿಸುತ್ತದೆ. ಆಕಾಶಗಳು, ಭೂಮಿ ಮತ್ತು ಪರ್ವತಗಳು ಇಂತಹ ವಿರೋಧಾತ್ಮಕ ನುಡಿಗಳನ್ನು 'ಅರಬೀ ಭಾಷೆ'ಯಲ್ಲಿ ಅರ್ಥಮಾಡಿಕೊಳ್ಳುತ್ತದೆ ಎಂಬುವದು ಈ ವಚನವು ತಿಳಿಸುತ್ತಿದೆ ಎಂದು ನಾನು ಭಾವಿಸುವುದಿಲ್ಲ.

> ಅವರು ಹೇಳುತ್ತಾರೆ: "ಅಲ್ಲಾಹನು ಒಬ್ಬ ಮಗನನ್ನು ಹುಟ್ಟಿಸಿದ್ದಾನೆ", ವಾಸ್ತವದಲ್ಲಿ ನೀವು ಉಚ್ಚರಿಸಿದ್ದು ಘೋರ ದೈವದೂಷಣೆಯಾಗಿದೆ. ಅತ್ಯಂತ ಸೌಜನ್ಯಶೀಲನಾಗಿರುವವನ ಬಗ್ಗೆ ಇಂತಹ ಅಪವಾದಗಳನ್ನು ಕೇಳಿದಾಗ, ಆಕಾಶಗಳು ಚೆಲ್ಲಾಪಿಲ್ಲಿಯಾಗಲು, ಭೂಮಿ ಸ್ಫೋಟಗೊಳ್ಳಲು ಮತ್ತು ಪರ್ವತಗಳು ಕುಸಿದು ಬೀಳಲು ಸನ್ನಿಹಿತವಾಗುತ್ತದೆ. (19:90-91)

ಸರಳ ಶಬ್ದಗಳಲ್ಲಿ ಹೇಳುವುದಾದರೆ, ಅರಬೀ ಭಾಷೆಯಲ್ಲಿ ಮತ್ತು ಅರಬೀ ರೀತಿಯಲ್ಲಿ ಅಲ್ಲಾಹನ ಸೇವೆಯನ್ನು ಮಾಡಬೇಕೆಂದು ಅರಬೀ ಧರ್ಮವು ತಪ್ಪಾಗಿ ಮತ್ತು ದುರುದ್ದೇಶಪೂರಿತವಾಗಿ ಮುಸ್ಲಿಮರನ್ನು ಒತ್ತಾಯಿಸುತ್ತದೆ. ಈ ನಿಲುವು, ಕುರ್‌ಆನಿನ ದುರುಪಯೋಗವು ಮಾತ್ರವಲ್ಲದೆ, ಅವೈಚಾರಿಕವೂ ಆಗಿದೆ.

ಪ್ರಭುತ್ವದ ದಾವೆ

ಕುರ್‌ಆನ್ ಸರಳವೂ ಮತ್ತು ದಿಟ್ಟವೂ ಆಗಿ ಉಳಿದಿದೆ. ಆಧಿಪತ್ಯದ ಗೊಂದಲವು ಸಂಪೂರ್ಣವಾಗಿ ಮಾನವನಿರ್ಮಿತವಾಗಿದೆ. ಜನರು ಅವತರಿಸಲ್ಪಟ್ಟ ಪದಗಳನ್ನು ತೆಗೆದುಕೊಂಡು ತಮ್ಮ ಪರಿಸ್ಥಿತಿಗೆ ಹೊಂದುವಂತೆ ಬದಲಾಯಿಸಿದಾಗ ಅದು ಎಂದಿಗೂ ನಿಜವಾಗುವುದಿಲ್ಲ. ಧಾರ್ಮಿಕರು ಪ್ರಚಾರ ಮಾಡುತ್ತಿರುವುದು ತಮ್ಮ ಅವಿಷ್ಕೃತ ಅರಬೀ ಧರ್ಮವನ್ನಾಗಿದೆಯೇ ಹೊರತು ಕೊನೆಯ ಪ್ರವಾದಿಗೆ ಅವತರಿಸಲ್ಪಟ್ಟ ಇಸ್ಲಾಮನ್ನು ಅಲ್ಲ. ಅವರು ಹೀಗೆ ಮಾಡುತ್ತಿರುವುದು, ಕುರ್‌ಆನಿನ ಮೇಲೆ ಅವರ ಪ್ರಭುತ್ವದ ದಾವೆಯನ್ನು ಬೆಂಬಲಿಸಲು ಮತ್ತು ತಮ್ಮನ್ನು ಧರ್ಮದ ಅರ್ಹರಾದ ಕಾವಲುಗಾರರೆಂದು ಘೋಷಿಸುವ ಸಲುವಾಗಿದೆ. ಇಂತಹ ವಿಚಾರಗೆಟ್ಟ ಧೈರ್ಯವು ಜಗತ್ತಿನಲ್ಲಿ ಬೇರೆ ಎಲ್ಲಿಯೂ ಕಾಣಸಿಗದು. ಶೈತಾನನು ಅರಬಿಯಲ್ಲಿ ಮಾತ್ರ ಸಂಭಾಷಣೆ ಮಾಡುತ್ತಾನೋ ಎಂಬ ಒಂದು ಪ್ರಶ್ನೆಯೂ ಉದ್ಭವಿಸುತ್ತದೆ.

ಇಂದು, ಅಲ್ಲಾಹನ ದಾರಿಯತ್ತ ನಡೆದು ಅವನ ಸೇವೆ ಮಾಡಲು ಬಯಸುವ ಜನರು ಅರಬೀ ಧರ್ಮದ ಸಂಕೀರ್ಣತೆಯೊಳಗೆ ಸಿಲುಕುತ್ತಾರೆ. ಬೇರೆ ರೀತಿಯಲ್ಲಿ ಹೇಳಿದರೆ, ಅಲ್ಲಾಹನನ್ನು ತಲುಪಲು ಒಂದು ವಾಹಕ ನಳಿಕೆಯಂತೆ - ಅಥವಾ ಸಂರಕ್ಷಕ ಮತ್ತು ಸಂದೇಶವಾಹಕರಿಗಿಂತ ಕಡಿಮೆಯಲ್ಲದಂತೆ – ಧಾರ್ಮಿಕರು ತಮ್ಮನ್ನು ತೋರಿಸುಕೊಳ್ಳುತ್ತಾರೆ.

ಅಲ್ಲಾಹನು ನಿರ್ದೇಶಿಸಿದ ಜೀವನ ರೀತಿಯನ್ನು (ಅಥವಾ ದೀನ್'ಲ್ಲಾಹ) ಸ್ವೀಕರಿಸುವವನು, ಆ ಏಕದೇವನಲ್ಲಿ ಮಾತ್ರ ವಿಶ್ವಾಸವಿಡಬೇಕಾಗಿದೆ. ನಿಷ್ಠಾವಂತರು ಇದನ್ನು ತಿಳಿದಿದ್ದಾರೆ ಮತ್ತು ಅಲ್ಲಾಹನು ಮಾನವಕುಲದ ಮಾರ್ಗದರ್ಶನಕ್ಕಾಗಿ ಹಲವಾರು ಪ್ರವಾದಿಗಳ ಮುಖಾಂತರ ತನ್ನ ಗ್ರಂಥಗಳನ್ನು ಅವತೀರ್ಣಗೊಳಿಸಿದ್ದಾನೆಂದೂ ಅರಿತಿದ್ದಾರೆ. ಯಾವಾಗಲೂ ನಮ್ಮನ್ನು ಅಲ್ಲಾಹನ ಪಥದಿಂದ ತಪ್ಪಿಸಲು ಕಾಯುತ್ತಿರುವ ಅಲ್ಲಾಹನ ಶತ್ರುಗಳ ಬಗ್ಗೆ ಇರಬೇಕಾದ ಜಾಗರೂಕತೆಯನ್ನು ನಾವು ಬರಬರುತ್ತಾ ನಿರ್ಲಕ್ಷಿಸಿದ್ದೇವೆ.

ಅರಬೀ ಭಾಷೆಯ ವಿದ್ಯಾರ್ಥಿಗಳು, ಮುಲ್ಲಾಗಳ ಅರ್ಥವಿವರಣೆಯ ಪ್ರಕಾರ (ಕುರ್‌ಆನಿನ ಭಾಗವಲ್ಲದ) ಆವಿಷ್ಕಾರಿತ ಅರಬೀ ಧರ್ಮದ ಸೇವೆಯನ್ನು ಮಾಡುತ್ತಾರೆ. ಕುರ್‌ಆನಿನ ಕೆಲವು ಸರಳ ಪದಗಳ

ವ್ಯಾಖ್ಯಾನಗಳನ್ನು, ತಮ್ಮ ಕೃತಕ, ಮಾನವನಿರ್ಮಿತ ಧರ್ಮದ ಅವಶ್ಯಕತೆಗಳನ್ನು ಪೂರೈಸಲು ಹೇಗೆ ತಿರುಚಲಾಗಿದೆ ಎಂದು ತೋರಿಸಿಕೊಡಲು ಕೆಲವು ಉದಾಹರಣೆಗಳನ್ನು ಈ ಪುಸ್ತಕದಲ್ಲಿ ನೀಡಲಾಗಿದೆ.

ಅಲ್ಲಾಹನ ಅನುಗ್ರಹ ಮತ್ತು ಒಲುಮೆಯನ್ನು ಬಯಸುವ ಪ್ರಾಮಾಣಿಕ ಜನರನ್ನು, ಅರಬೀ ಧರ್ಮದ ಕವಚದೊಳಗೆ ಹಿಂಸೆ, ಘರ್ಷಣೆ ಮತ್ತು ದ್ವೇಷದಿಂದ ಕೂಡಿದ ಪಂಥಗಳಾಗಿ[14] ವಿಂಗಡಿಸಲಾಗಿದೆ. ಅವರು ಬಹುತೇಕ ಎಲ್ಲಾ ವಿಷಯಗಳಲ್ಲೂ ಕಾದಾಡುತ್ತಾರೆ ಹಾಗೂ ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಾರೆ. ಮುಸ್ಲಿಂ ವಿಶ್ವಾಸದ ಉಸ್ತುವಾರಿಗಳಾಗಬೇಕಾದವರು, ಇಂದು ಘನತೆಹೀನ ಸಾಕ್ಷಿಗಳಾಗಿದ್ದಾರೆ.

ಕಲ್ಲಿನ ಪೆಟ್ಟಿಗೆಯ ಸುತ್ತು ನಡೆಯುವ ಸಲುವಾಗಿ, ಗಮನಾರ್ಹ ಪ್ರಮಾಣದಲ್ಲಿ ಹಣವನ್ನು ವ್ಯಯಿಸಿ ಅರಬೀ ಮಣ್ಣಿಗೆ ಪ್ರಯಾಣ ಮಾಡಲು ಹೇಳುವ ಮೂಲಕ ಧಾರ್ಮಿಕರು ಎಲ್ಲರನ್ನು ಮೂರ್ಖರನ್ನಾಗಿ ಮಾಡುತ್ತಾ ಮುಂದುವರಿದಿದ್ದಾರೆ. ಇದು ಒಂದು ದುರಂತವಾಗಿರದೆ ಇರುತ್ತಿದ್ದರೆ, ಬಹಳ ಹಾಸ್ಯಾಸ್ಪದವಾಗಿತ್ತು.

ಜನರ ನಡುವೆ ವಿಭಾಗಗಳನ್ನು ಸೃಷ್ಟಿಸುವುದು

ಅಲ್ಲಾಹನ ಪಥದಲ್ಲಿ ವಿಭಾಗಗಳನ್ನು ಸೃಷ್ಟಿಸುವುದು ತಪ್ಪೆಂದು ಧಾರ್ಮಿಕರನ್ನು ನಂಬುವವರು ಮನವರಿಕೆ ಮಾಡುವುದಿಲ್ಲ. ಈ ಬದಲಾವಣೆಗಳು ಇಸ್ಲಾಮನ್ನು ಸುಧಾರಿಸುತ್ತವೆ ಎಂದು ಭಾವಿಸುವುದು ಸರಿಯಲ್ಲ. ಪರಿಕಲ್ಪನೆಗಳಿಗೆ ಮರು-ವ್ಯಾಖ್ಯಾನಗಳ ಅಗತ್ಯವಿದೆಯೆಂದು ಯೋಚಿಸುವುದು ತಪ್ಪು. ವಿನ್ಯಾಸ ಮತ್ತು ನಿರ್ವಹಣೆಯಲ್ಲಿ ಪರಿಪೂರ್ಣವಾಗಿರುವಂತಹ ಒಂದು ವಿಷಯದಲ್ಲಿ ನಾವು ಬಾಲಬಿಚ್ಚಕೂಡದು. ಅಲ್ಲಾಹನು ಕಲಿಸಿಕೊಟ್ಟ ಜೀವನ ರೀತಿಯ ಬದಲು ಇತರ ರೀತಿಯನ್ನು ಅನುಸರಿಸುವವರು ಸಂದೇಶವಾಹಕರ ಜೊತೆಗಾರರಲ್ಲ ಎಂದು ಅಲ್ಲಾಹನ ಸೇವಕರನ್ನು ಎಚ್ಚರಿಸುವ ಸ್ಪಷ್ಟ ಅಪ್ಪಣೆಯು ಕುರ್‌ಆನಿನ ಸರಳವಾದ ಅವಲೋಕನದಲ್ಲಿ ಕಂಡುಬರುತ್ತದೆ. ಏನೇ ಆದರೂ, ಸಂದೇಶವಾಹಕರ ಜೊತೆಗಾರರೆಂದು ಖಚಿತಪಡಿಸಲು ಮುಸ್ಲಿಮರಿಗೆ ಕೇವಲ ಇದುವೇ ಸಾಕು. ಹಾಗೆ ಮಾಡುವಾಗ, ಸತ್ಯವು ಬಹಿರಂಗವಾಗಿ ಕಂಗೊಳಿಸುತ್ತದೆ.

> ಖಚಿತವಾಗಿಯೂ, ದೀನನ್ನು ಧರ್ಮವನ್ನಾಗಿ(ಶಿಯ'ಅನ್) ಪರಿವರ್ತನೆಗೊಳಿಸುವವರ ಮೇಲೆ ನೀವು ಯಾವ ವಿಧದಲ್ಲೂ ಹೊಣೆಗಾರರಲ್ಲ. (6:159)

[14] ಅಹ್ಮದೀಯ ಪಂಥವನ್ನು ಧರ್ಮದ್ರೋಹಿಗಳೆಂದು ಪಾಕಿಸ್ತಾನದ ಸಂವಿಧಾನವು ಅಧಿಕೃತವಾಗಿ ಘೋಷಿಸಿದೆ. ಅವರಲ್ಲಿ ಹಲವರನ್ನು ಕೊಲ್ಲಲಾಯಿತು ಮತ್ತು ಅವರ ಮಸೀದಿಗಳನ್ನು ಸುಡಲಾಯಿತು. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಭಾರತದಲ್ಲಿ ಸುನ್ನಿಗಳು ಶಿಯಾರನ್ನು ಹಾಗೂ ಶಿಯಾರು ಸುನ್ನಿಗಳನ್ನು ಕೊಲ್ಲುತ್ತಾರೆ – ಇವು ಇರಾಕಿನಲ್ಲಿ ಪ್ರತಿದಿನವೂ ನಡೆಯುತ್ತದೆ. ಮಲೇಷ್ಯಾದಲ್ಲಿ ಶಿಯಾ ಪಂಥದ ಅನುಯಾಯಿಗಳನ್ನು ಸುನ್ನಿ ಸರ್ಕಾರದ ಅಡಿಯಲ್ಲಿ ವಿಚಾರಣೆಯ ವಿನಹ ಬಂಧಿಸಲಾಗುತ್ತದೆ ಮತ್ತು ಅಹ್ಮದೀಯರನ್ನು ಅಧಿಕೃತವಾಗಿ ಧರ್ಮಭ್ರಷ್ಟರೆಂದು ಘೋಷಿಸಲಾಗಿದೆ.

ಹೀಗಾಗಿ, ಮುಹಮ್ಮದರಿಗೂ, ಯಾವುದೇ ರೀತಿಯ ಧರ್ಮಕ್ಕೂ ಏನೂ ಸಂಬಂಧವಿಲ್ಲವೆಂದೂ ಮತ್ತು ಅವರು ಸುನ್ನಿ ಮತ್ತು ಶಿಯಾ ಪಂಥಗಳ ಮುಖ್ಯಸ್ಥನೂ ಅಲ್ಲವೆಂದೂ ಈ ವಚನದಿಂದ ಸ್ಪಷ್ಟವಾಗುತ್ತದೆ.

ನಮ್ಮ ಒಡೆಯನು ನಿರ್ದೇಶಿಸಿದ ಜೀವನ ರೀತಿಯನ್ನು ಪಾಲಿಸುವುದು ನಮ್ಮ ಇಚ್ಛೆಯಾಗಿರಬೇಕು. ಲೆಕ್ಕಾಚಾರ ನಡೆಸಲು ಅವನೇ ಅಂತಿಮವಾಗಿ ನಮ್ಮ ಜೀವವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾನೆ. ಈ ದಿವ್ಯ ಯೋಜನೆಯಲ್ಲಿ ಭಾಗವಹಿಸಲು ನಾವು ಆ ಅದೃಷ್ಯ ದೇವನ ಮೇಲೆ ನಂಬಿಕೆಯಿಡಲು, ಅವನು ನಮಗೆ ಆದೇಶಿಸುತ್ತಾನೆ. ಅದುದರಿಂದ ನಾವು ಮರಣಾನಂತರದ ಶಾಶ್ವತ ಜೀವನದ ಬಗ್ಗೆ ಖಚಿತರಾಗಬಹುದು. ಅಲ್ಲಾಹನನ್ನು ಸಂತೃಪ್ತಿ ಪಡಿಸಲು, ನಾವು ಜೀವಿಸಿರುವ ತನಕ ಈ ಜೀವನದಲ್ಲಿ ನಾವು ಸದ್ಗುಣರಾಗಿರಬೇಕೆಂದು ಆದೇಶಿಸಲಾಗಿದೆ. ಮನುಷ್ಯರಾಗಿ, ನಮ್ಮ ಉದ್ದೇಶಗಳು ಉತ್ತಮವಾಗಿರುತ್ತದೆ, ಆದರೆ ನಾವು ಪ್ರಮುಖ ಬಾಧ್ಯತೆಯಾದ 'ಓದುವಿಕೆ' ಅಥವಾ 'ಶಿಕ್ಷಣ'ವನ್ನು ನಿರ್ವಹಿಸುವುದರಲ್ಲಿ ವಿಫಲಗೊಳ್ಳುತ್ತೇವೆ. ಈ ಕೆಳಗಿನ ವಚನಗಳು ತಿಳಿಸುವ ಹಾಗೆ ಇಷ್ಟು ಸುಂದರವಾಗಿ ಯಾರೂ ನಿವೇದಿಸಿಲ್ಲ.

> ನಿಮ್ಮನ್ನು ಸೃಷ್ಟಿಸಿದ ನಾದನ ಹೆಸರಿನಲ್ಲಿ ಓದಿರಿ. ಅಂಟಿಕೊಂಡಿರುವಂತಹ ವಸ್ತುವಿನಿಂದ ಅವನು ಮನುಷ್ಯರನ್ನು ಸೃಷ್ಟಿಸಿದನು. ಓದಿರಿ, ನಿಮ್ಮ ಪ್ರಭುವು ಅತ್ಯಂತ ಗೌರವಾನ್ವಿತನಾಗಿದ್ದಾನೆ. ಅವನು ಲೇಖನಿಯ ಮೂಲಕ ಕಲಿಸುತ್ತಾನೆ. ತಾವು ತಿಳಿಯದೇ ಇದ್ದಂತಹ ವಿಷಯಗಳನ್ನು ಅವನು ಜನರಿಗೆ ಕಲಿಸುತ್ತಾನೆ. (96:1-5)
>
> ವಾಸ್ತವವಾಗಿ, ನಾವು ಕುರ್‌ಆನನ್ನು ನೆನಪಿನಲ್ಲಿ ಇಡುವ ಸಲುವಾಗಿ ಸುಲಭ ಗೊಳಿಸಿದ್ದೇವೆ. ಕಲಿಯಲು ಬಯಸುವ ಯಾರಾದರೂ ಇದ್ದಾರೆಯೇ? (54:17, 22, 32, 40)

ಇಂದು ಇಸ್ಲಾಂ ಎಂಬುವುದು, ಸದ್ಗುಣ ಕಾರ್ಯಗಳ ಮತ್ತು ಸೇವೆಗಳ ಬದಲಾಗಿ, ಚಿಂತನೆ ಮತ್ತು ಪ್ರತಿಭೆಯನ್ನು ಸದೆಬಡೆಯುವ ಒಂದು ಜೀವನ ರೀತಿಯ ಪ್ರದರ್ಶನದ ಮೇಲೆ ಕೇಂದ್ರಿತವಾಗಿದೆ ಮತ್ತು ಪ್ರಾರ್ಥನೆ, ಮೂರ್ತಿಗಳು, ಪದ್ಧತಿಗಳು, ಸಂಪ್ರದಾಯಗಳು ಮತ್ತು ತೀರ್ಥಯಾತ್ರೆಗಳೆಂಬ ಗಡಸು ಆಚರಣೆಗಳನ್ನು ತನ್ನದಾಗಿಸಿದೆ.

ಲೇಖಕರ ಅಭಿಪ್ರಾಯದಂತೆ, ತೀರ್ಥಯಾತ್ರೆಯ ಈ ವ್ಯವಸ್ಥೆಯಿಂದ ಲಾಭ ಪಡೆಯುವುದು ಅರಬೀ ಪ್ರವಾಸೋದ್ಯಮ ಮಾತ್ರವಾಗಿದೆ. ಪ್ರಭಾವಕಾರಿಯಾಗಿ, ಯಾವುದೋ ದೇವರಿಗೆ ಪರಿಣಾಮಕಾರಿಯಲ್ಲದ ಮತ್ತು ಅನುಪಯುಕ್ತ ರೀತಿಯಲ್ಲಿ, ಜೀವನಪರ್ಯಂತ ದಾಸ್ಯತ್ವ ನಡೆಸುವಂತೆ ಈ ಆಚರಣೆಯು ಪ್ರತಿಯೊಂದು ಮುಸ್ಲಿಮನನ್ನು ಕುಲಗೆಡಿಸಿದೆ. ಇನ್ನೊಂದು ಅರ್ಥದಲ್ಲಿ, 'ಧರ್ಮ'ವು ಸೌದಿ ಅರೇಬಿಯಾದ ಪ್ರಮುಖ ರಫ್ತು ಆಗಿದೆ. ಈ ಆವಿಷ್ಕಾರಿತ ತೀರ್ಥಯಾತ್ರೆಯನ್ನು ನಿರ್ವಹಿಸಲು ಸಾಮರ್ಥ್ಯವಿಲ್ಲದ ಲೆಕ್ಕವಿಲ್ಲದಷ್ಟು ನಿಷ್ಠಾವಂತರಿದ್ದಾರೆ. ಆದರೂ ಅವರು ಒದ್ದಾಡಿ, ಸಾಲಮಾಡಿ, ಸತತವಾಗಿ ತ್ಯಾಗಮಾಡಿ ಈ ಅನ್ವೇಷಿತ ಬಾಧ್ಯತೆಗಳನ್ನು ಪೂರೈಸುತ್ತಾರೆ. (ವಿಶ್ವದ ಎಲ್ಲಾ ದೇಶಕ್ಕಿಂತಲೂ ಹೆಚ್ಚಾಗಿ ಯಾತ್ರಿಕರ ಶೇಕಡಾವಾರು

ಹೊಂದಿರುವ) ಸೌದಿ ಅರೇಬಿಯಾವನ್ನು, ಅಲ್ಲಾಹನ ಪ್ರೀತಿಯನ್ನು ಪ್ರತಿಬಿಂಬಿಸುವ ಒಂದು ಮಾದರಿ ರಾಷ್ಟ್ರವಾಗಿ ಪರಿಗಣಿಸಲು ಯಾರಿಗೂ ಸಹ ಸಾಧ್ಯವಿಲ್ಲ ಎಂಬ ವಾಸ್ತವವು ವಿಚಿತ್ರವೇ ಸರಿ.

ಈ ಆಚರಣೆಗಳು, ಜನರ ನಡುವೆ ಭಿನ್ನಭಿಪ್ರಾಯ, ಜನಾಂಗೀಯ ಭಾವನೆ ಮತ್ತು ಧಾರ್ಮಿಕ ತಪ್ಪುಕಲ್ಪನೆಯನ್ನು ಸೃಷ್ಟಿಸಿ, ಮುಸ್ಲಿಮರನ್ನೂ ಮತ್ತು ಸಂಪೂರ್ಣ ಮಾನವಕುಲವನ್ನೂ ವಿಭಾಗಿಸಿದೆ. ಅಲ್ಲಾಹನ ಪಥದಿಂದ ಮಾನವಕುಲವನ್ನು ತಿರುಗಿಸಿರುವುದು ಬಹುಶಃ ಇದರ ಅತ್ಯಂತ ಹಾನಿಕಾರಕ ಪರಿಣಾಮವಾಗಿದೆ. ವಿವಿಧ ಧಾರ್ಮಿಕ ಪಂಗಡಗಳನ್ನು ರಚಿಸುವ ಮೂಲಕ ತಮ್ಮ ಅರಬ್-ಕೇಂದ್ರಿತವಾದ ಧಾರ್ಮಿಕ ನಂಬಿಕೆಗಳು ಮತ್ತು ಸಂಪ್ರದಾಯಗಳನ್ನು ಪಸರಿಸಲು, ಈ ಅಂಧ ಅರಬೀ ಧರ್ಮದ ಸಾಂಪ್ರದಾಯಿಕ ಪೂರ್ವ ನಿಯಮಗಳು ವಿಶ್ವದಾದ್ಯಂತ ಕೆಡುಕನ್ನು ಹರಡಿಸಿದೆ. ಇನ್ನೂ ಮುಖ್ಯವಾಗಿ, ಶಾಂತಿಯಲ್ಲಿ ಇರುವವರನ್ನು ಛಿದ್ರಗೊಳಿಸುವುದು ಅರಬೀ ಧರ್ಮ ಪ್ರಸಾರದ ಅತ್ಯಂತ ಅಪಾಯಕಾರಿ ಅಂಶವಾಗಿದೆ. ಈ ದ್ವೇಷವು ಇಂದು, ಮುಸ್ಲಿಮರ ಬಗ್ಗೆ ಪ್ರತಿಕೂಲ ಮನೋಭಾವ ತೋರುವಂತೆ ಮಾಡಲು ಇತರ ಧರ್ಮಗಳಿಗೆ ಎಡೆ ನೀಡಿದೆ. 'ಮೂಲಭೂತವಾದಿ ಮುಸ್ಲಿಂ' ಎಂಬ ಪದವು ಈಗ ಸಕರಾತ್ಮಕವಾದ ಪದವಾಗಿ ಏಕೆ ಪರಿಗಣಿಸಲಾಗುತ್ತಿಲ್ಲ? ಆದ್ದರಿಂದ ಮುಗ್ಧ ಮುಸ್ಲಿಮರು ಅಥವಾ ಶಾಂತಿಯಲ್ಲಿರುವಂತಹವರು, ಅಲ್ಲಾಹನ ನಿಜವಾದ ಸೇವಕರಾಗಿ, ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಾ ಅವನ ದೀನಿನ ಕಡೆಗೆ ಸ್ವ-ಇಚ್ಛೆಯಿಂದ ಸಮ್ಮತಿಸಿಕೊಂಡು ಮರಳಬೇಕು. ಕ್ರಮಬದ್ಧ ಜೀವನ ರೀತಿಯನ್ನು (ದೀನ್) ಧರ್ಮವಾಗಿ ಬದಲಿಸಿದ ಮೂರ್ತಿ ಆರಾಧಕರ ಪೈಕಿ ಸೇರಬಾರದು:

> ನೀವೆಲ್ಲರೂ ಅವನ ಕಡೆಗೆ ಹಿಂದಿರುಗಿರಿ ಮತ್ತು ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವುದನ್ನು ಪಾಲಿಸಿರಿ. ಮತ್ತು ದೀನನ್ನು ಧರ್ಮವನ್ನಾಗಿ (ಶಿಯ'ಅನ್) ಪರಿವರ್ತನೆಗೊಳಿಸಿದಂತಹ ಮೂರ್ತಿ ಆರಾಧಕರ ಪೈಕಿ ಆಗದಿರಿ. ಪ್ರತಿಯೊಂದು ಪಂಥವೂ ತಮ್ಮಲ್ಲಿರುವುದರಲ್ಲಿ ಸಂತೋಷವಾಗಿದ್ದಾರೆ. (30:31-32)

ಅರಬೀ ಧರ್ಮದ ತಮ್ಮ ಉಲೆಮಾಗಳ (ಗುರುಗಳ) ಬೋಧನೆಗಳನ್ನು, ಸಂಶಯಿಸದೆ ಮತ್ತು ಅದರ ಉಪಯುಕ್ತತೆ ಅಥವಾ ನಿಖರತೆಯನ್ನು ಲಕ್ಷಿಸದೆ ಸ್ವೀಕರಿಸಲು ಅರಬೀ ಭಾಷೆಯ ವಿದ್ಯಾರ್ಥಿಗಳು ಬಾಲ್ಯದಿಂದಲೂ ನಿಯಮಾಧೀನರಾಗಿರುತ್ತಾರೆ. ಅವರಿಗೆ ತಮ್ಮ ತಪ್ಪಿನ ಬಗ್ಗೆ ಅರಿವಿಲ್ಲ ಮತ್ತು ಮುಸ್ಲಿಮರ ಪ್ರತಿಯೊಂದು ಹೊಸ ಪೀಳಿಗೆಗೆ ಅದೇ ಬೋಧನೆಗಳನ್ನು ಪ್ರಸಾರ ಮಾಡುತ್ತಾರೆ. ತಮ್ಮ ಮೂರ್ಖತನವನ್ನು ಎಚ್ಚರಿಸಿದರೆ, 'ಕೇವಲ ಕುರ್'ಆನಿನ ಆಧಾರದಲ್ಲಿ ಅರಬೀ ಧರ್ಮದ ಶಿಸ್ತುಗಳ ಪಾಲನೆಯನ್ನು ವಿರೋಧಿಸುವಂತಹ ಮುಸ್ಲಿಮರು ಧರ್ಮದ್ರೋಹಿಗಳು' ಎಂದು ಹೇಳುವ ಮೂಲಕ ಪ್ರತಿಕ್ರಿಯಿಸುತ್ತಾರೆ. ಅವರ ಅರಬೀ ಧರ್ಮದ ಪ್ರಕಾರ ಅಂತಹ 'ಧರ್ಮದ್ರೋಹಿ'ಗಳನ್ನು ಕಲ್ಲು ಹೊಡೆದು ಸಾಯಿಸುವುದು ಸಂಪೂರ್ಣವಾಗಿ ಭಯಾನಕವಾಗಿದೆ. ಈ ಅಸಹಜತೆಯು ಮೂರ್ತಿಪೂಜಕ ತತ್ವದ ಸಾಕ್ಷಿಯಾಗಿದೆ.

ಕಲ್ಲಿನ ಆರಾಧಕರು

ಮೂರ್ತಿಪೂಜಕ ಅರಬರ ಧರ್ಮವು, ಕಾಬಾ ಎಂದು ತಪ್ಪಾಗಿ ನಾಮಕರಣಮಾಡಲಾದ ಮಕ್ಕಾದಲ್ಲಿರುವ ಚದರ ಕಲ್ಲಿನ ವಿಗ್ರಹವನ್ನು ಮತ್ತು ಅದರ ಪರಿಸರವನ್ನು ಸಂಬಂಧಿಸಿದ ಸಂಪ್ರದಾಯಗಳಿಗೆ ಕೇಂದ್ರಿತವಾಗಿದೆ. ವಿಶ್ವಾಸಿಗಳು ಇದನ್ನು ಆರಾಧಿಸುವುದನ್ನು ಧಾರ್ಮಿಕರು ಕಡ್ಡಾಯಪಡಿಸಿದ್ದಾರೆ. ಆದುದರಿಂದ ಇಂದಿಗೂ, ವಿಶ್ವದಾದ್ಯಂತ ಮುಸ್ಲಿಮರು, ಅವರು ಎಲ್ಲೇ ಇದ್ದರೂ ಸರಿ, ಈ ನಿರ್ದಿಷ್ಟ ಬಂಡೆಕಲ್ಲಿನ ಕಟ್ಟಡದ ದಿಕ್ಕಿನಲ್ಲಿ ಬಗ್ಗುತ್ತಾರೆ ಹಾಗೂ ಸಾಷ್ಟಾಂಗವೆಸಗುತ್ತಾರೆ.

ಮಕ್ಕಾದಲ್ಲಿರುವ ಬಂಡೆಕಲ್ಲಿನ ಕಟ್ಟಡವನ್ನು *ಬೈತುಲ್ಲಾ* ಅಥವಾ *ಅಲ್ಲಾಹನ ಮನೆ* ಎಂದು ಕರೆಯುತ್ತಾರೆ. ***ಬೈತುಲ್ಲಾ ಅಥವಾ ಅಲ್ಲಾಹನ ಮನೆ* ಎಂಬ ಪದವು ಕುರ್‌ಆನಿನಲ್ಲಿ ಕಂಡುಬರುವುದಿಲ್ಲ**. ಈ ಪರಿಕಲ್ಪನೆಯು ಮುಸ್ಲಿಮರ ನಂಬಿಕೆಯ ಕೇಂದ್ರವಾಗಿದ್ದರೆ, ಅದು ಕುರ್‌ಆನಿನಲ್ಲಿ ನಮೂದಿಸಲ್ಪಡಲು ತಪ್ಪಿಹೋದದ್ದು ಹೇಗೆ? ಇದು ಮತ್ತೊಂದು ಅರಬೀ ಕಟ್ಟಕಥೆಯಾಗಿರಲೇಬೇಕು.

ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ, ಈ ಕಲ್ಪನೆಯು ಸರಿಯಾಗಿರುತ್ತಿದ್ದರೆ, ಪ್ರಪಂಚದ ಒಡೆಯನು ಈ ಪುಟ್ಟ 627-ಚದರ ಅಡಿಯ ಟೊಳ್ಳಾದ ಬಂಡೆಕಲ್ಲಿನ ಘನಾಕೃತಿಯೊಳಗೆ ವಾಸಿಸುತ್ತಾನೆ ಎಂಬ ವಿಚಾರದಲ್ಲಿ ನಿಲ್ಲಬೇಕಾಗುತ್ತದೆ. *ಬೈತುಲ್ಲಾ* ಎಂಬುವುದು ಒಂದು ಪ್ರಸಿದ್ಧ ಅರಬಿಕ್ ಪದವಾದ ಕಾರಣ ಮಾತ್ರ ಅದರ ನಿಜವಾದ ಅರ್ಥವನ್ನು ಪರೀಕ್ಷಿಸುವ ಗೋಜಿಗೆ ಯಾರೂ ಹೋಗಿಲ್ಲ. ಜಗತ್ತಿನಾದ್ಯಂತ ಮುಸ್ಲಿಮರು *ಬೈತುಲ್ಲಾ* ಎಂಬ ಪದವನ್ನು ಉಚ್ಚರಿಸುವಾಗ, ತಾವು ಏನು ಹೇಳುತ್ತಿದ್ದೇವೆಂದು ಅವರು ಪ್ರಶ್ನಿಸುವುದಿಲ್ಲ. ಏಕೆಂದರೆ, ಆ ಪದವನ್ನು 'ದೈವಿಕ' ಅಥವಾ 'ಪವಿತ್ರ' ಎಂದು ಸಾರಲಾಗಿದೆ. ಆದ್ದರಿಂದ, ಅದರ ಮಹತ್ವವನ್ನು ಪ್ರಶ್ನಿಸಲಾಗುವುದಿಲ್ಲ ಹಾಗೂ ಈ ಪ್ರಶ್ನೆಯು ಅಸಮ್ಮತಿಯ ಆಪಾದನೆಯನ್ನು ಆಹ್ವಾನಿಸುತ್ತದೆ.

ಈ ಗಾತ್ರದ ದಂತಕಥೆಗಳನ್ನು ಮುಂದುವರಿಸಿಕೊಂಡು ಬಂದ ಕಾರಣಕ್ಕೆ 'ಅರಬರಿಗೆ' ಮನ್ನಣೆಯನ್ನು ನೀಡಲೇಬೇಕು. *ಅಲ್ಲಾಹ್* ಎಂಬ ಪದಗಳ ಜೊತೆಗೆ ಉಚ್ಚರಿಸಲ್ಪಡುವ ಕಾರಣ, ಅರಬೇತರ ಮುಸ್ಲಿಮರಿಗೆ ಈ ರೀತಿಯ ಪದಗಳು ಯಾವಾಗಲೂ 'ದೈವಿಕ' ವಾಗಿರುತ್ತದೆ. ಆ ಹೆಸರಿಗೆ ಸೇರಿರುವ ಯಾವುದನ್ನೂ ಅವರು ಆರಾಧಿಸುತ್ತಾರೆ. ಆ ಪದದ ಬಳಕೆಯ ಸಲುವಾಗಿ ಅವರು ಒಂದು ಕಲ್ಲಿನ ಮೂರ್ತಿಗೆ ಬಾಗುತ್ತಾರೆ ಮತ್ತು ಸಾಷ್ಟಾಂಗವೆಸಗುತ್ತಾರೆ.

ನಾನು ಹಲವು ವರ್ಷಗಳ ಹಿಂದೆ ಈ ಬಂಡೆಕಲ್ಲಿನ ಕಟ್ಟಡಕ್ಕೆ ಭೇಟಿ ನೀಡಿದ್ದೆ ಮತ್ತು ಅದಕ್ಕೆ ಬಾಗಿದಾಗ ಹಾಗೂ ಸಾಷ್ಟಾಂಗವೆಸಗಿದಾಗ ಏನೋ ಅವಮಾನ ಭಾವನೆ ಮೂಡಿತ್ತು. ನನ್ನ ದೇಶಕ್ಕೆ ಹಿಂದಿರುಗಿದ ನಂತರ, ನಾನು ಪ್ರಪಂಚದ ಒಡೆಯನೊಂದಿಗೆ ಕ್ಷಮೆಯಾಚಿಸಿದೆ ಮತ್ತು ಆ ಮಣ್ಣಿಗೆ ಇನ್ನು ಯಾವತ್ತೂ ಕಾಲು ಹೂರುವುದಿಲ್ಲ ಎಂದು ಅವನಿಗೆ ವಾಗ್ದಾನ ಮಾಡಿದೆ. ಇಂದು, ರಾಜ್ಯಗಳ ಮತ್ತು ವೃತ್ತಿಪರ ಮುಖ್ಯಸ್ಥರು ಸೇರಿದಂತೆ ಲಕ್ಷಾಂತರ ಬುದ್ಧಿವಂತ ಪುರುಷರು ಮತ್ತು ಮಹಿಳೆಯರು ನಿರಂತರವಾಗಿ, ತಮ್ಮ ಸಾಮಾನ್ಯ ಜ್ಞಾನವನ್ನು

ಉಲ್ಲಂಘಿಸಿಕೊಂಡು, ಅರಬರು ನಿರ್ಮಿಸಿದ ಕಲ್ಲಿನ ಕಟ್ಟಡಕ್ಕೆ ಹೇಗೆ ಸೇವೆ ಸಲ್ಲಿಸುತ್ತಾರೆ ಎಂಬುವುದು ಚಿಂತನೆಗೆ ನಿಲುಕದ ವಿಷಯವಾಗಿದೆ. 'ಮಕ್ಕಾ ಮತ್ತು ಮದೀನಾ, ವಿಶ್ವದ ಅತಿ ದೊಡ್ಡ ಮೂರ್ತಿ ಆರಾಧನಾ ನಗರಗಳಾಗಿವೆ' - ಎಂಬ ಅಂಶವು ದ್ವೇವದೂಷಣೆಯೆಂದು ನಿಂದಿಸಲಾದರೂ ಸಹ, ನಿಜವಾದ ಹೇಳಿಕೆಯಾಗಿದೆ.

ಕೆಲವು ಮುಸ್ಲಿಮರು ಹೇಳುತ್ತಾರೆ: "*ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಒಡೆತನ ಹೊಂದಿರುವುದರಿಂದ, ಅಲ್ಲಾಹನಿಗೆ ಒಂದು ಮನೆ ಇದೆಯೆಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ*". ಆದರೆ, ಬ್ರಹ್ಮಾಂಡದ ಸೃಷ್ಟಿಕರ್ತನು ಮರುಭೂಮಿಯ ಮರಳಿನ ಮೇಲೆ ಅವನ ವೈಭವವನ್ನು ಪ್ರತಿನಿಧಿಸುವ ಒಂದು ವಿಶೇಷ ಮನೆಯನ್ನು ಹೊಂದಿದ್ದಾನೆಂದು ತಿಳಿಯುವುದು ಒಂದು ಸಂಪೂರ್ಣ ಮೂರ್ಖತನವಾಗಿದೆ. ತಮ್ಮ ಮೂರ್ತಿ ಆರಾಧನೆಯ ಹೊರತಾಗಿಯೂ ಅದೇ ಮೂರ್ಖ ಮುಸ್ಲಿಮರು ಇತರ ಧರ್ಮದವರನ್ನು ಮೂರ್ತಿಪೂಜಕರೆಂದು ಆರೋಪಿಸುತ್ತಾರೆ. ಅವರು ಒಂದು ಬಂಡೆಕಲ್ಲಿನ ಕಟ್ಟಡವನ್ನು ಆರಾಧಿಸುವಾಗ ಅದನ್ನೇ ಮಾಡುತ್ತಿಲ್ಲವೇ?

ಇವುಗಳೆಲ್ಲವು ಶೈತಾನನಿಂದ ಪ್ರೇರಿತವಾಗಿರುವ ಲಕ್ಷಣಗಳನ್ನು ಹೊಂದಿವೆ. ಶೈತಾನನು ಮನಸ್ಸಿನ ನಿಯಂತ್ರಣದ ಅಗ್ರಗಣ್ಯ ತಜ್ಞನೆಂದು ಚಿತ್ರೀಕರಿಸುವ ಕುರ್'ಆನಿನ ಹೇಳಿಕೆಯನ್ನು ಪರಿಗಣಿಸಿರಿ. ಅಲ್ಲಾಹನ ಸಂದೇಶವನ್ನು ಅಲಕ್ಷಿಸುವವರಿಗೆ, 'ತಾವು ಮಾರ್ಗದರ್ಶನದಲ್ಲಿ ಇದ್ದೇವೆಂದು' ಚಿಂತಿಸುವ ಹಾಗೆ ಶೈತಾನನು ಅವರನ್ನು ಮೋಡಿ ಮಾಡುತ್ತಾನೆ:

> ದಯಾಮಯನ ಸಂದೇಶವನ್ನು ಅಲಕ್ಷಿಸುವವರಿಗೆ, ಶೈತಾನನ್ನು ನಿರಂತರ ಒಡನಾಡಿಯಾಗಿ ನಾವು ನೇಮಿಸುತ್ತೇವೆ. ನಂತರ ಶೈತಾನನು ಅವರನ್ನು ಅಲ್ಲಾಹನ ಪಥದಿಂದ ದೂರವಿಡುತ್ತಾನೆ ಮತ್ತು ತಾವು ಮಾರ್ಗದರ್ಶನದಲ್ಲಿದ್ದೇವೆ ಎಂದು ಅವರು ಭಾವಿಸುವಂತೆ ಮಾಡುತ್ತಾನೆ. (43:36-37)

ಈ ಎಲ್ಲಾ ಭಾಷಾ ಮತ್ತು ಸಂದರ್ಭೋಚಿತ ಸಂದಿಗ್ಧತೆಗಳು, ಕುರ್'ಆನಿನ ನಿಜವಾದ ಸಂದೇಶವನ್ನು ಯಶಸ್ವಿಯಾಗಿ ಬಚ್ಚಿಟ್ಟಿವೆ. ಪವಿತ್ರ ಗ್ರಂಥವು, ಮಂತ್ರಪಠಣೆ ಹಾಗೂ ಹಾಡಿನಂತೆ ಬಳಸುವ ವಾದ್ಯಮೇಳ ಪುಸ್ತಕವಾಗಿ ಮೊಟಕುಗೊಳಿಸಲಾಗಿದೆ. ಇಂದಿಗೂ, ಅನೇಕರು ತಮಗೆ ಪರಕೀಯವಾದ ಭಾಷೆಯಲ್ಲಿದ್ದರೂ ಈ ಮುಸ್ಲಿಂ 'ಆಚಾರಸೂತ್ರ'ಗಳಲ್ಲಿ ಮಂಡಿಸಿರುವಂತಹ 'ಯೋಗಕಲ್ಪ'ಗಳನ್ನು ಕಣ್ಣುಮುಚ್ಚಿ ಅನುಸರಿಸುತ್ತಾರೆ ಮತ್ತು ಅವರು ಈ ಕಟ್ಟುಕಥೆಗಳನ್ನು ಶಾಶ್ವತಗೊಳಿಸುತ್ತಾರೆ. ಅನೇಕ ಧರ್ಮಗಳಲ್ಲಿ ಇದೇ ರೀತಿಯ ಸನ್ನಿವೇಶಗಳು ಇವೆ, ಆದರೂ ಯಾವುದೂ ಇಷ್ಟೊಂದು ದ್ರೋಹಭರಿತ ಮತ್ತು ವ್ಯಾಪಕವಾಗಿಲ್ಲ. ಇಂತಹ ಅನೇಕ ತಪ್ಪುಗ್ರಹಿಕೆಗಳು, ಸ್ವಲ್ಪ ಜಾಗ್ರತೆ ಮತ್ತು ವಿವೇಕತೆಯ ಬಳಕೆಯಿಂದ ಸುಲಭವಾಗಿ ಕಂಡುಹಿಡಿಯಬಹುದು. **ಸಾಮಾನ್ಯ ಜ್ಞಾನವು, ಸಾಮಾನ್ಯ ವಸ್ತುವಾಗಿ ಉಳಿದಿಲ್ಲವೆಂದು ತೋಚುತ್ತದೆ.**

ಶಿಲೆಗಳ ಆರಾಧನೆ

ಮಾನವಕೃತ ಕಾಬಾದ ಸುತ್ತಲೂ ಸ್ಥಾಪಿಸಿರುವ ಆಚರಣೆಗಳನ್ನು ಒಂದು ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ವಿಶ್ವಾಸಿಗಳು ಪರ್ವತ ಬಂಡೆಗಳ ರಾಶಿಗೆ ಬಗ್ಗುತ್ತಾರೆ ಮತ್ತು ಸಾಷ್ಟಾಂಗವೆಸುಗುತ್ತಾರೆ; 'ಓ ಅಲ್ಲಾಹನೇ, ನಾನು ಇಲ್ಲಿದ್ದೇನೆ' ಎಂದು ಸರ್ವಶಕ್ತನಿಗೆ ಕೂಗಿಹೇಳುತ್ತಾ, ಆ ಮೂರ್ತಿಯನ್ನು ಏಳು ಬಾರಿ ಸುತ್ತು ಹೊಡೆಯುತ್ತಾರೆ ಹಾಗೂ 'ಪವಿತ್ರ' ಕಪ್ಪುಕಲ್ಲಿನ ಬಳಿ ತಲುಪುವಾಗ ಅವರ ಶಬ್ದವನ್ನು ಇನ್ನೂ ಹೆಚ್ಚಿಸುತ್ತಾರೆ. ಅವರು ಆ ಮೂರ್ತಿಯನ್ನು ಚುಂಬಿಸುತ್ತಾರೆ, ಅಳುತ್ತಾರೆ ಮತ್ತು ರೋದಿಸುತ್ತಾರೆ. ಒಂದು ಕಲ್ಲಿನ ಮೂರ್ತಿಯ ಮೂಲಕ ತಮ್ಮ ದೇವರನ್ನು ಪೂಜಿಸುತ್ತಾರೆ ಎಂಬುವುದನ್ನು ಅವರು ನಿರಾಕರಿಸುವುದಿಲ್ಲ. ಆದರೆ ಅದನ್ನು ರೋಚಕವಾಗಿ ಮಾಡಲು ಅವರು ಅದನ್ನು 'ಅಲ್ಲಾಹನ ಮನೆ' ಎಂದು ಕರೆಯುತ್ತಾರೆ.

ದಿನದಲ್ಲಿ ಇಪ್ಪತ್ತನಾಲ್ಕು ಗಂಟೆಯ ಕಾಲವೂ, ವಾರದಲ್ಲಿ ಏಳು ದಿನಗಳಲ್ಲೂ, ಪ್ರಪಂಚದಾದ್ಯಂತದಿಂದ ಬರುವಂತಹ ಸಾವಿರಾರು ಜನರು ಮಕ್ಕಾದಲ್ಲಿರುವ ಈ ಚದರ ಬಂಡೆಯ ರಚನೆಯನ್ನು ನಿರಂತರವಾಗಿ ಸುತ್ತುವರೆಯುತ್ತಿರುತ್ತಾರೆ. ವಾರ್ಷಿಕ ತೀರ್ಥಯಾತ್ರೆಯ ಸಮಯದಲ್ಲಿ ಜಗತ್ತಿನ ಸುಮಾರು ಎರಡು ದಶಲಕ್ಷ ಜನರು ಇದನ್ನು ಪೂಜಿಸುತ್ತಾರೆ. ಇದು ಕಾಬಾವನ್ನು ಭೂಮಿಯ ಅತ್ಯಂತ ಯಶಸ್ವೀ ಆರಾಧ್ಯ ವಸ್ತುವಾಗಿ ಮಾಡುತ್ತದೆ. ಧಾರ್ಮಿಕರು ಇಸ್ಲಾಮನ್ನು ಮೂರ್ತಿಪೂಜಕ ಧರ್ಮವನ್ನಾಗಿ ಪರಿವರ್ತಿಸಲು ಹೇಗೆ ಸಂಚು ಹಾಕಿದರೆಂದು ಮುಂದಿನ ಪುಟಗಳಲ್ಲಿ ಪ್ರದರ್ಶಿಸಲಾಗಿದೆ. ಹಾಗೆ ಮಾಡುವುದರಿಂದ, ಅವರು ಉದ್ದೇಶಪೂರ್ವಕವಾಗಿ ಕುರ್‌ಆನಿನಲ್ಲಿರುವ ಅಲ್ಲಾಹನ ಪದಗಳಲ್ಲಿ ತಮ್ಮ ಕೈಚಳಕ ತೋರಿಸಿದರು ಮತ್ತು ಅದನ್ನು ಅಗ್ಗದಲ್ಲಿ ವ್ಯಾಪಾರ ಮಾಡಿದರು.

ಕುತಂತ್ರಗಳು

ಧಾರ್ಮಿಕರು 'ಅರಬ್' ಧರ್ಮವನ್ನು ರಚಿಸುವ ಸಲುವಾಗಿ ಅರ್ಥವನ್ನು ತಿರುಚಿರುವಂತಹ, ಕುರ್‌ಆನಿನಲ್ಲಿರುವ ಇಪ್ಪತ್ತೆಂಟು ನಿರ್ಣಾಯಕ ಪದಗಳನ್ನು ಕೆಳಗಿನ ಪಟ್ಟಿಯಲ್ಲಿ ಅವುಗಳ ಅನುವಾದದ ಜೊತೆಗೆ ತೋರಿಸಲಾಗಿದೆ. (ಇವುಗಳಲ್ಲದೆ, ಇತರ ಅನೇಕ ಪದಗಳೂ ಬೇರೆ ಇವೆ.)

ಅರಬೀ ಪದ	**ಅರಬೀ ದುರ್ವ್ಯಾಖ್ಯಾನ**	**ಮೂಲಭೂತ ಅರ್ಥ**
ಇಸ್ಲಾಂ	ಸಮರ್ಪಣೆ	ಶಾಂತಿಪರತೆ
ಮುಸ್ಲಿಮ್	ಸಮರ್ಪಿಸುವವನು	ಶಾಂತಿಯಲ್ಲಿರುವವನು

ಅಸ್ರಾ	ಯಾತ್ರೆ	ಬಂಧಿಸಲಾದ
ಸ್ವಲಾತ್	ವಿಧ್ಯುಕ್ತ ಪ್ರಾರ್ಥನೆ (ನಮಾಝ್)	ಬದ್ಧತೆ ಅಥವಾ ಕರ್ತವ್ಯ
ದೀನ್	ಧರ್ಮ	ಜೀವನ ರೀತಿ
ಬೈತ	(ಅಲ್ಲಾಹನ) ಮನೆ	ಒಂದು ವ್ಯವಸ್ಥೆ
ಬೈತಿ-ಯ	ನನ್ನ ಮನೆ	ನನ್ನ ವ್ಯವಸ್ಥೆ
ಬೈತಲ್ ಹರಾಮ	(ಅಲ್ಲಾಹನ) ಪವಿತ್ರ ಮನೆ	ವ್ಯವಸ್ಥೆಯಲ್ಲಿರುವ ನಿರ್ಬಂಧಗಳು
ಮಕಾಮ್	ಕಾಲುಹೆಜ್ಜೆ	ದರ್ಜೆ ಅಥವಾ ಸ್ಥಾನಮಾನ
ಮುಸಲ್ಲನ್	ವಿಧ್ಯುಕ್ತ ಪ್ರಾರ್ಥನೆಯ ಸ್ಥಳ	ಬದ್ಧನಾದವನು
ಮುಸಲ್ಲೀನ್	ವಿಧ್ಯುಕ್ತವಾಗಿ ಪ್ರಾರ್ಥಿಸುವವರು	ಬದ್ಧರಾದವರು
ಥಾಯಿಫೀನ್	ಪ್ರದಕ್ಷಿಣೆ ಮಾಡುವವರು	ಜನಸಮೂಹ
ಆಕಿಫೀನ್	ತಪಶ್ಚರ್ಯೆ ಮಾಡುವವರು	ನಿಷ್ಠಾವಂತರು
ಸುಜೂದ್	ಭೌತಿಕ ಸಾಷ್ಟಾಂಗ	ಸಮ್ಮತಿ ಅಥವಾ ಅಂಗೀಕಾರ
ರುಕ್ಕ-ಇ-ಸ್ಸುಜೂದ್	ಬಗ್ಗುವುದು ಹಾಗೂ ಸಾಷ್ಟಾಂಗವೆಸಗುವುದು	ವಿನಮ್ರವಾಗಿ ಸಮ್ಮತಿಸು
ಮಸ್ಜಿದ್	ಮಸೀದಿ	ಸಮ್ಮತಿಸಲ್ಪಟ್ಟ ಆದೇಶ
ಮಸಾಜಿದ-ಲ್ಲಾಹ್	ಅಲ್ಲಾಹನ ಮಸೀದಿಗಳು	ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳು
ಮಸ್ಜಿದಿಲ್ ಹರಾಮಿ	ಪವಿತ್ರ ಮಸೀದಿ	ಸಮ್ಮತಿಸಲ್ಪಟ್ಟ ಆದೇಶಗಳಲ್ಲಿನ ನಿರ್ಬಂಧಗಳು
ಮಸ್ಜಿದಿಲ್ ಅಕ್ಸಾ	ದೂರದ ಮಸೀದಿ	ಸಮ್ಮತಿಸಲ್ಪಟ್ಟ ಆದೇಶದ ಅಂಚು ಅಥವಾ ತುದಿ
ಹುರುಮುನ್	ಯಾತ್ರಿ ಅಥವಾ ಯಾತ್ರಿಯ ಉಡುಪು	ನಿಷೇಧಿತ
ಕಾಬಾ	ಅಲ್ಲಾಹನ ಮನೆ	ಕಣಕಾಲು ಅಥವಾ ತಲಪಾದ
ಹದ್ಯ	ಪ್ರಾಣಿ ಬಲಿ	ಮಾರ್ಗದರ್ಶನ
ಖಲಾಇದ	ಬಲಿಪ್ರಾಣಿಗೆ ಹಾಕುವ ಮಾಲೆ	(ಬೇಟೆಯ ನಿಯಮಗಳ) ಸೂಚಕ

ಉಮ್ರ	ಅಲ್ಲಾಹನ ಮನೆಗೆ ಭೇಟಿ	ಜೀವನ ಕೊಡು ಅಥವಾ ಸಮೃದ್ಧಗೊಳಿಸು
ಹಜ್ಜ್	ವಾರ್ಷಿಕ ತೀರ್ಥಯಾತ್ರೆ	ಸವಾಲು ತೆಗೆಯುವುದು
ಝಕಾತ್	ಧಾರ್ಮಿಕ ದಶಾಂಶ ತೆರಿಗೆ	ಶುದ್ಧತೆ

ಈ ಪಟ್ಟಿಯ ಒಂದು ಕ್ಷಿಪ್ರ ಪಠಣೆಯು ಒಬ್ಬ ವ್ಯಕ್ತಿಯನ್ನು ಸಂಶಯಭರಿತನನ್ನಾಗಿ ಮಾಡುತ್ತದೆ. ಇಷ್ಟೊಂದು ಪ್ರಮಾಣದಲ್ಲಿ ಈ ಪದಗಳ ಭಾವಗಳನ್ನು ಜನರ ಗಮನಕ್ಕೆ ಬಾರದಂತೆ ಹೇಗೆ ಅಪಾರ್ಥಗೊಳಿಸಲಾಯಿತು? ಆದಾಗ್ಯೂ, ವೈಯ್ಯುಕ್ತಿಕ ಲಾಭ ಮತ್ತು ಅಧಿಕಾರಕ್ಕಾಗಿ *ದೀನನ್ನು* ತಮ್ಮ ಅಧೀನದಲ್ಲಿರಿಸುವ ಉದ್ದೇಶದಿಂದ, ಈ ಮೇಲಿನ ಪಟ್ಟಿಯಲ್ಲಿರುವ ಪದಗಳ ಅರ್ಥವನ್ನು ಧಾರ್ಮಿಕರು ಉದ್ದೇಶಪೂರ್ವಕವಾಗಿ ವಿಕೃತ, ಅಪಾರ್ಥ ಹಾಗೂ ಭಂಗಗೊಳಿಸಿದ್ದಾರೆ ಎಂಬುವುದನ್ನು, ಕುರ್‌ಆನನ್ನು ಮಾತ್ರ ಆಧಾರಿಸಿದಂತಹ ಒಂದು ಸರಳ ಪರಿಶೀಲಣೆಯಿಂದ ಸಹ ಸಾಧಿಸಬಹುದು; ಇದು ಅಲ್ಲಾಹನ ಹಾಗೂ ಅವನ ಸಂದೇಶವಾಹಕರ ನಿರ್ದಿಷ್ಟ ಬಯಕೆಗಳಿಗೆ ತೀರಾ ವಿರುದ್ಧವಾಗಿದೆ. ಚಾಲ್ತಿಯಲ್ಲಿರುವುದನ್ನು ಲೆಕ್ಕಿಸದೆ, ವೈಯ್ಯುಕ್ತಿಕ ಮತ್ತು ಪಕ್ಷಪಾತವಿಲ್ಲದ ಅಧ್ಯಯನದ ಆಧಾರದ ಮೇಲೆ ಕುರ್‌ಆನಿನ ಒಂದು ಅವಲೋಕನೆಯನ್ನು ಕೈಗೊಳ್ಳುವ ಒಂದು ನಿಜವಾದ ನಂಬಿಕೆಯುಳ್ಳವನಿಗೆ ಅಥವಾ ವಿದ್ವಾಂಸನಿಗೆ, ಕುರ್‌ಆನಿನಲ್ಲಿ ಪದೇ ಪದೇ ಕಾಣಿಸುವ ಸಂಬಂಧಿತ ಅರ್ಥಗಳ ಒಂದು ಸರಳ ಪರಿಶೀಲನೆಯು ಸಾಕಷ್ಟು ಉತ್ತೇಜನವನ್ನು ನೀಡುತ್ತದೆ. ಏನೇ ಆದರೂ, ಕುರ್‌ಆನ್ ಮುಸ್ಲಿಮ್ ವಿಶ್ವಾಸದ ಪೂರ್ವನಿಯೋಜಿತ ದಸ್ತಾವೇಜು ಆಗಿದೆ.

ಇಂತಹ ಕಾರ್ಯವನ್ನು ಮಾಡುವಂತಹ ಚಿಂತಿಸುವ ವ್ಯಕ್ತಿಯ ಬಗ್ಗೆ ನಿರ್ದಿಷ್ಟವಾದ ಪರಿಭಾಷೆಯಲ್ಲಿ ಕುರ್‌ಆನ್ ಸಾದರಪಡಿಸುತ್ತದೆ. ಈ ಖಚಿತವಾದ ಭರವಸೆಯು ಒಂದೇ ಸುರಾದಲ್ಲಿ ನಾಲ್ಕು ಬಾರಿ ಕಂಡುಬರುತ್ತದೆ:

> ವಾಸ್ತವವಾಗಿ, ನಾವು ಕುರ್‌ಆನನ್ನು ನೆನಪಿನಲ್ಲಿ ಇಡುವ ಸಲುವಾಗಿ ಸುಲಭ ಗೊಳಿಸಿದ್ದೇವೆ. ಕಲಿಯಲು ಬಯಸುವ ಯಾರಾದರೂ ಇದ್ದಾರೆಯೇ? (54:17, 22, 32, 40)

ನಿಶ್ಚಯವಾಗಿಯೂ, ಧಾರ್ಮಿಕರು ತಮ್ಮ ಹಕ್ಕನ್ನು ಸ್ಥಾಪಿಸಲು ಕುರ್‌ಆನಿನ ನಾಲ್ಕು ಪ್ರಮುಖ ವಚನಗಳನ್ನು ವಿಕೃತಿಗೊಳಿಸಿದರು. ಈ ಬದಲಾವಣೆಗಳನ್ನು ಮಾಡಿದ ನಂತರ, ಅವುಗಳ ಸ್ಥಿರತೆಯನ್ನು ತೋರಿಸುವುದಕ್ಕಾಗಿ ಇತರ ವಚನಗಳ ಮತ್ತು ಪದಗಳ ಮರುವ್ಯಾಖ್ಯಾನ ಮಾಡಬೇಕಾಯಿತು. ಇವುಗಳ ಅಂತಿಮ ಉತ್ಪನ್ನವು, ಅಸಂಗತ ಮತ್ತು ಕಟ್ಟುಕಥೆಗಳ ಜಟಿಲ ಸಮಸ್ಯೆಯಾಗಿ ಮಾರ್ಪಟ್ಟ ಮಾನವಕೃತ ದುರ್ವ್ಯಾಖ್ಯಾನಗಳಾಗಿವೆ. ಇಂತಹ ಆಕ್ರಮಣದ ಫಲಿತಾಂಶವು ಹಾನಿಕಾರಕವಾಗಿರುವುದು ಸ್ಪಷ್ಟವಾಗಿ ಸಾಬೀತಾಗಿದೆ. ಇದರ ಆಧಾರಗಳು ಈ ವಚನಗಳಲ್ಲಿ ಸ್ಪಷ್ಟವಾಗಿದೆ: (2:124-129[15]; 5:1-5; 3:95-97; 9:17-20).

[15] ಅರಬೀ ದೇವರು ವಾಸಿಸುತ್ತಿದ್ದಾರೆಂದು ಹೇಳಲ್ಪಡುವ ಸ್ಥಳದ ಆಚರಣೆಗಳನ್ನು ಸರಿಹೊಂದಿಸಲು, ಧಾರ್ಮಿಕರು ಕೇವಲ 2:125 ರಲ್ಲೇ ಎಂಟು ಪದಗಳನ್ನು ತಿರುಚಿದರು.

ಉಲ್ಲೇಖದ ಆಧಾರವನ್ನಾಗಿ ಕುರ್‌ಆನನ್ನು ಮಾತ್ರ ಬಳಸಿಕೊಂಡು, ಈ ಕುತಂತ್ರಗಳನ್ನು ಬಹಿರಂಗಗೊಳಿಸುವ ಸಂಶೋಧಣೆಯಲ್ಲಿ ನನ್ನ ಜೊತೆಗೂಡಲು ನಾನು ಓದುಗರನ್ನು ಆಮಂತ್ರಿಸುತ್ತೇನೆ. ನಾವು ಮುಂದುವರೆದಂತೆ ನೆನಪಿಡಬೇಕಾದದ್ದು ಏನೆಂದರೆ, ಅವತೀರ್ಣಿಸಲ್ಪಟ್ಟ ಅಲ್ಲಾಹನ ಆದೇಶಗಳ ಏಕೈಕ ಗ್ರಂಥವು ಕೇವಲ ಕುರ್‌ಆನ್ ಮಾತ್ರವಾಗಿದೆ.

ನಾವು ಕುರ್‌ಆನಿನ ಈ ಮೂಲಭೂತ ತತ್ವಗಳೊಂದಿಗೆ ಪ್ರಾರಂಭಿಸಬೇಕು:

- ಕುರ್‌ಆನ್ ಸ್ಥಿರತೆಯುಳ್ಳ ಗ್ರಂಥವಾಗಿದೆ ಮತ್ತು ಇದರಲ್ಲಿ ಯಾವುದೇ ವೈರುಧ್ಯತೆಗಳಿಲ್ಲ.

  > ಅವರು ಯಾಕೆ ಕುರ್‌ಆನನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡುವುದಿಲ್ಲ? ಅಲ್ಲಾಹನ ಹೊರತು ಇತರರಿಂದಿರುವಾಗಿದ್ದರೆ, ಅವರು ಅವುಗಳಲ್ಲಿ ಅನೇಕ ವೈರುಧ್ಯತೆಗಳನ್ನು ಕಾಣುತ್ತಿದ್ದರು. (4:82)

- ಕುರ್‌ಆನ್ ಅತ್ಯತ್ತಮ ಹದೀಸ್ ಅಥವಾ ಸಂದೇಶವಾಗಿದೆ ಮತ್ತು ಸ್ಥಿರತೆಯುಳ್ಳದ್ದಾಗಿದೆ. ಹದೀಸ್ ಎಂಬ ಪದವನ್ನು ಕೆಳಗಿನ ವಚನಗಳಲ್ಲಿ ಕಾಣಬಹುದು:

  > ಅತ್ಯುತ್ತಮ ಹದೀಸ್/ಸಂದೇಶ ಆದಂತಹ, ಒಂದು ಸ್ಥಿರತೆಯುಳ್ಳ ಗ್ರಂಥವನ್ನು (ಕುರ್‌ಆನ್) ಅಲ್ಲಾಹನು ಅವತೀರ್ಣಿಗೊಳಿಸಿದ್ದಾನೆ (39:23)

  > ಇದರ (ಕುರ್‌ಆನ್) ಹೊರತು, ಬೇರೆ ಯಾವುದರ ಮೇಲೆ ಇನ್ನು ನೀವು ವಿಶ್ವಾಸವಿರಿಸುವಿರಿ? (77:50)

- ಕೇವಲ ಕುರ್‌ಆನನ್ನು ಬಳಸಿಕೊಂಡು, ಪ್ರತಿ ಪದದ ಅರ್ಥವು ಇತರ ಸಂಬಂಧಿತ ವಾಕ್ಯವೃಂದಗಳ ಜೊತೆಗೆ ಹೊಂದಿಕೆಯಾಗುತ್ತದೆಯೇ ಎಂದು ಪತ್ತೆಹಚ್ಚುವುದು ಈ ಅಧ್ಯಯನದ ಮಾನದಂಡವಾಗಿದೆ. ಅಂದರೆ, ಕುರ್‌ಆನಿನ ಹೊರತು ಇತರ ಮೂಲಗಳ ವಿರೋಧಾತ್ಮಕ ಅರ್ಥಗಳನ್ನು ಕೈಬಿಡಲಾಗಿದೆ.

- ಕುರ್‌ಆನನ್ನು ಮಾನವರ ಮನಸ್ಸಿಗೆ ಅವತರಿಸುವುದು ಅಲ್ಲಾಹನಾಗಿರುವ ಕಾರಣ ಅವನಿಗೆ ಮಾತ್ರ ಅದನ್ನು ವಿವರಿಸಲು ಸಾಧ್ಯವಾಗಿದೆ.

  > (ಸಂದೇಶವಾಹಕರೇ) ಈ ಅವತೀರ್ಣವನ್ನು ವೇಗಗೊಳಿಸಲು ನಿಮ್ಮ ನಾಲಿಗೆಯನ್ನು ಚಲಾಯಿಸಬೇಡಿರಿ. ಅವುಗಳನ್ನು ಕುರ್‌ಆನಾಗಿ ಜೋಡಿಸುವ ಜವಾಬ್ದಾರಿ ನಾವು ವಹಿಸಿದ್ದೇವೆ. ನಾವು ಇದನ್ನು ಓದಿ ಕೇಳಿಸಿದಾಗ, ಈ ಕುರ್‌ಆನನ್ನು ನೀವು ಅನುಸರಿಸಬೇಕು. ನಂತರ ಅದನ್ನು ವಿವರಿಸುವವರು ನಾವಾಗಿದ್ದೇವೆ. (75:16-19)

- ಕುರ್‌ಆನನ್ನು ಸ್ವತಃ ಅದೇ ವಿವರಿಸುತ್ತದೆ ಮತ್ತು ಯಾವುದೇ ಮಾನವನ ಕೃತಿಗಳನ್ನು ಮೀರಿದ, ಉತ್ತಮ ವ್ಯಾಖ್ಯಾನವನ್ನು ಒದಗಿಸುತ್ತದೆ.

> ಅವರು ಯಾವುದೇ ಉದಾಹರಣೆಯ ಜೊತೆ ನಿಮ್ಮ ಕಡೆ ಬಂದಾಗಲೂ, ನಾವು ನಿಮಗೆ ಸತ್ಯ ಮತ್ತು ಉತ್ತಮ ವ್ಯಾಖ್ಯಾನವನ್ನು ನೀಡಿದೆವು. (25:33)

ಈ ಅಧ್ಯಯನವು ಕೇವಲ ಕುರ್‌ಆನನ್ನು ಆಧರಿಸಿರುವ ಕಾರಣ, ಈ ಪುಸ್ತಕದ ವಿಮರ್ಶಕರು ಅದೇ ತತ್ವವನ್ನು ಅಳವಡಿಸುವ ಮೂಲಕ ತಮ್ಮ ವಾದಗಳನ್ನು ಮುಂದಿಡುವುದನ್ನು ಸ್ವಾಗತಿಸಲಾಗಿದೆ.

- ಇಸ್ಲಾಮಿನಲ್ಲಿ ಯಾವುದೇ ಪುರೋಹಿತವರ್ಗ ಅಥವಾ ಧಾರ್ಮಿಕ ಪುರೋಹಿತರು ಇಲ್ಲ. ಆದ್ದರಿಂದ ವಿದ್ವಾಂಸರ ಅಥವಾ ಪುರೋಹಿತರ ವ್ಯಾಖ್ಯಾನಗಳನ್ನು ಸಹ ದೂರವಿಡಲಾಗಿದೆ.

  > ಅವರು ತಮ್ಮ ಪುರೋಹಿತರನ್ನು ಮತ್ತು ಪಂಡಿತರನ್ನು ಅಲ್ಲಾಹನ ಹೊರತು ಪ್ರಭುಗಳಾಗಿ ಪರಿಗಣಿಸಿದ್ದಾರೆ (9:31)

- ಯಾವುದೇ ಮಾನವನು ಕುರ್‌ಆನಿನ ಏಕೈಕ ತಜ್ಞತೆಯ ಪ್ರಭುತ್ವವನ್ನು ಘೋಷಿಸಲು ಸಾಧ್ಯವಿಲ್ಲ.

  > ಅಲ್ಲಾಹನು ದಯಾಮಯನು, ಕುರ್‌ಆನನ್ನು ಕಲಿಸುವವನು, ಮಾನವನನ್ನು ಸೃಷ್ಟಿಸಿದವನು (55:2-3)

- ಕುರ್‌ಆನಿನಲ್ಲಿ ಯಾವುದೇ ಸಂದೇಹಾರ್ತತೆ ಕಂಡುಬರುವುದಿಲ್ಲ.

  > (ಇದು) ಒಂದು ವಕ್ರತೆಯೂ ಇಲ್ಲದ ಅರಬೀ ಕುರ್‌ಆನ್ ಆಗಿದೆ. ಅದರಿಂದ ಅವರು ಲಕ್ಷತೆಯನ್ನು ಸಾಧಿಸಲಿ. (39:28)

ಅರಬೀ ಧಾರ್ಮಿಕ ಅಧೀಶರ ಪ್ರಬಲ ಸಂಕೋಲೆಗೆ ಒಳಪಟ್ಟ ತಮ್ಮ ಪೂರ್ವಜರಿಂದ ಪಡೆದ ನಂಬಿಕೆಯಾದಂತಹ ಇಸ್ಲಾಂ 'ಧರ್ಮ'ದ ಅಡಿಸ್ಥಾನದಲ್ಲಿ, ಈಗಾಗಲೇ ಸನ್ಮಾರ್ಗದಲ್ಲಿ ಇದ್ದಾರೆಂದು ಭಾವಿಸುತ್ತಿರುವುದರಿಂದ, ಹೆಚ್ಚಿನ ಮುಸ್ಲಿಮರು ಈ ಪುಸ್ತಕವನ್ನು ಓದಲು ಹೆದರುತ್ತಾರೆ. ಈ ಪುಸ್ತಕವು ಅವರನ್ನು ಕುರ್‌ಆನಿನ ಆಧಾರದಲ್ಲಿ ಯೋಚಿಸಲು, ವಿವೇಚಿಸಲು, ಮತ್ತು ಪ್ರಶ್ನಿಸಲು ಪ್ರೋತ್ಸಾಹಿಸುತ್ತದೆ. ನಾವು ಜೀವನದ ಉದ್ದೇಶವನ್ನು ಪರ್ಯಾಲೋಚಿಸಬೇಕು ಮತ್ತು ಅದ್ಭುತಗಳನ್ನು ನೋಡಬೇಕು. ಆದರೆ ಮುಸ್ಲಿಮರನ್ನು ತಮ್ಮ ಕಣ್ಣುಗಳ ಮುಂದೆಯೇ ಚೂರು ಚೂರಾಗಿ ಬಿಚ್ಚಿಹಾಕಲ್ಪಟ್ಟಿದ್ದಾರೆ. ಇದು ಒಂದೋ ಮುಸ್ಲಿಮರನ್ನು ಹಾನಿಗೊಳಿಸಲು ಇಚ್ಛಿಸುವವರು ಮಾಡಿರಬಹುದು ಅಥವಾ ತಮ್ಮನ್ನು ಹಾನಿಗೊಳಿಸಲು ಇಚ್ಛಿಸುವವರಿಂದ ಸಂರಕ್ಷಣೆ ಪಡೆಯಲು ಇಚ್ಛಿಸುವವರು ಮಾಡಿರಬಹುದು.

ನಿಸ್ಸಂಶಯವಾಗಿ ಅವರು ಓದಲು ಹೋಗುವ ವಿಷಯವು, ಪ್ರಸ್ತುತವಾಗಿ ಅವರಲ್ಲಿರುವ ಇಸ್ಲಾಮಿನ ಭಾವನೆಗಿಂತ ನಾಟಕೀಯವಾಗಿ ಪ್ರತ್ಯೇಕವಾಗಿದೆ. ಈ ಅಧ್ಯಯನವು ಮೂಲ ಅರಬೀ ಕುರ್‌ಆನಿನ ದಾಖಲೆಯ ಮೇಲೆ ಆಧಾರಿತವಾಗಿದೆ. ಆ ಕುರ್‌ಆನಿನ ವಿಶ್ವಾಸಾರ್ಹತೆಯನ್ನು ಅವರು ನಿರಾಕರಿಸಲು ಸಾಧ್ಯವಿಲ್ಲ. ಅವರಿಗೆ ನನ್ನ ಸಲಹೆಯು ಹೀಗಿದೆ: ಕುರ್‌ಆನ್ ವಿವರಿಸಿದ ಈ ಜನರ ಗುಂಪುಗಳಲ್ಲಿ ಪಡದಿರಲು ಪ್ರಯತ್ನಿಸಿರಿ:

> ನಿಶ್ಚಯವಾಗಿಯೂ ನೀನು ಸತ್ಯನಿಷೇಧಿಗಳಿಗೆ ಎಚ್ಚರಿಕೆ ನೀಡಿದರೂ ಅಥವಾ ನೀಡದಿದ್ದರೂ ಸರಿಯೇ, ಅವರು ನಂಬುವುದಿಲ್ಲ. ಅಲ್ಲಾಹನು ಅವರ ಕಿವಿಗಳ, ದೃಷ್ಟಿಗಳ ಹಾಗೂ ಹೃದಯಗಳ ಮೇಲೆ ಮುದ್ರೆ ಹಾಕಿದ್ದಾನೆ, (ಅವರು) ಆವೃತರಾಗಿದ್ದಾರೆ ಮತ್ತು ಅವರಿಗೆ ಮಹಾ ಯಾತನೆಯಿದೆ. (2:6-7)

ಈ ಅಧ್ಯಯನವು, ಅಲ್ಲಾಹನ ಹೆಸರಿನಲ್ಲಿ ಕಲ್ಲಿನ ಆರಾಧನೆ, ಮೂರ್ತಿಪೂಜೆ, ತೀವ್ರವಾದ ಹಾಗೂ ಭಯೋತ್ಪಾದನೆಯನ್ನು ಪ್ರಚಾರ ಮಾಡುವಂತಹ ಎಲ್ಲಾ ಇಸ್ಲಾಮೀ ವಿದ್ವಾಂಸರ ಮತ್ತು ಸಾಂಪ್ರದಾಯಿಕ ನಾಯಕರ ಸ್ಥಾನಮಾನವನ್ನು ಬೆದರಿಸುತ್ತದೆ. ಕೇವಲ ಕುರ್‌ಆನಿನ ಆಧಾರದ ಮೇಲೆ ನನ್ನನ್ನು ತಪ್ಪು ಸಾಬೀತು ಪಡಿಸಲು ನಾನು ಅವರನ್ನು ಆಮಂತ್ರಿಸುತ್ತೇನೆ. ಸ್ವತಃ ಗ್ರಂಥದ ಆಧಾರದ ಮೇಲೆ ಸಾಬೀತು ಪಡಿಸದೆ, ಐದಿದ್ ಸಫರ್'ನ ತಪ್ಪುಗಳನ್ನು ಗಟ್ಟಿಯಾಗಿ ಕೂಗುವುದು ಅಥವಾ ಕುರ್‌ಆನಿಗೆ ಹೊಸ ಅರ್ಥವನ್ನು ಕಲ್ಪಿಸಿದ್ದಾನೆಂದು ಆಪಾದಿಸುವುದು ವ್ಯರ್ಥವಾಗಿದೆ. ಇದು ಜನರನ್ನು ಮೂರ್ಖರನ್ನಾಗಿ ಮಾಡಬಹುದು ಎಂದು ತಿಳಿದಿರುವ ಮುಲ್ಲಾಗಳ ಪಿತೃಪ್ರಭುತ್ವ ನಡವಳಿಕೆಯಾಗಿದೆ.

ತಮ್ಮ ಸಾಮಾನ್ಯ ಜ್ಞಾನವನ್ನು ಬಳಸುವಂತೆ ಕುರ್‌ಆನ್ ನಮಗೆ ಕಲಿಸುತ್ತದೆ ಎಂದು ಜಗತ್ತಿನ ಪ್ರಾಮಾಣಿಕ ಮುಸ್ಲಿಮರು ಅರ್ಥ ಮಾಡಬೇಕು. *'ತಮ್ಮ ಸಾಮಾನ್ಯ ಜ್ಞಾನವನ್ನು ಉಪಯೋಗಿಸದವರನ್ನು ಅಲ್ಲಾಹನು ಮಾರ್ಗದರ್ಶನದಿಂದ ಉದ್ದೇಶಪೂರ್ವಕವಾಗಿ ತಡೆಯುತ್ತಾನೆ' (10:100).* ಧಾರ್ಮಿಕ ತಜ್ಞರೆಂದು ಕರೆಯಿಸಿಕೊಳ್ಳುವವರು ಯಾವುದೇ ಸಾಮಾನ್ಯ ಮುಸ್ಲಿಮರಿಗಿಂತ ಉತ್ತಮರಲ್ಲ. ಅಲ್ಲಾಹನು ಅವರಿಗೆ ಮಾರ್ಗದರ್ಶನ ಕೊಡುವ ತನಕ ಅವರು ಸನ್ಮಾರ್ಗಿಗಳಾಗುವುದಿಲ್ಲ. ಪುರುಷರಾಗಲಿ ಅಥವಾ ಮಹಿಳೆಯರಾಗಲಿ, ತಾನು ಇಚ್ಛಿಸುವವರಿಗೆ ಅಲ್ಲಾಹನು ಅನ್ಯಾಯವಿಲ್ಲದೆ ಮಾರ್ಗದರ್ಶನ ಕೊಡುತ್ತಾನೆ. **ಅವನು ಅಥವಾ ಅವಳು ತನ್ನ ಬುದ್ಧಿವಂತಿಕೆ ಮತ್ತು ವೈಚಾರಿಕ ಶಕ್ತಿಯ ಉಪಯೋಗದ ಮೂಲಕವಲ್ಲದೆ ಬರೇ ಭಾಷಾ ಜ್ಞಾನದ ಕಾರಣದಿಂದ ಸನ್ಮಾರ್ಗಿಗಳಾಗುವುದಿಲ್ಲ**. ಕುರ್‌ಆನಿನ ಅದ್ಭುತ ಶೋಧನೆಗಳ ತಪ್ಪು ಸಿದ್ಧಾಂತವನ್ನು ಪ್ರಚಾರ ಮಾಡುವವರು ಸೇರಿದಂತೆ ಇತರ ಸ್ವಘೋಷಿತ ತಜ್ಞರುಗಳ ಮಾರ್ಗದರ್ಶನವು ತಮಗೆ ಅವಶ್ಯಕತೆ ಇದೆಯೆಂದು ತಿಳಿಯುವ ಮುಗ್ಧ ಜನರನ್ನು, ಅವರು ದುರ್ಬಳಕೆ ಹಾಗೂ ಮೋಸ ಮಾಡುವುದನ್ನು ಮುಂದುವರಿಸುತ್ತಾರೆ. ಪ್ರತಿ ಬಾರಿಯೂ ಯಾವುದೇ ಹೊಸ ವಿಷಯವನ್ನು ಕೇಳಿದಾಗ, ನಾವು ಆ ಮಾಹಿತಿಯನ್ನು ಪರಿಶೀಲಿಸುವಂತೆ ಮತ್ತು ನಮ್ಮ ಸಾಮಾನ್ಯ ಜ್ಞಾನವನ್ನು ಬಳಸುವಂತೆ ನಮಗೆ ಕುರ್‌ಆನ್ ಕಲಿಸುತ್ತದೆ. ನೀವು ಈ ಕೆಳಗಿನ ಉದಾಹರಣೆಯಲ್ಲಿ ಕಾಣಿಸಿದಂತಾಗಬೇಡಿರಿ: -

> ಅವರಲ್ಲಿ ಕೆಲವರು ನಿಮ್ಮನ್ನು ಆಲಿಸುತ್ತಾರೆ ಆದರೆ ಅವರು ನಿಮ್ಮಲ್ಲಿಂದ ಹೊರಟ ನಂತರ ಪ್ರಾಜ್ಞ (ತಜ್ಞ)ರೊಂದಿಗೆ, "ಅವನು ಈಗ ಹೇಳಿದ್ದೇನು?" ಎಂದು ಕೇಳುತ್ತಾರೆ. ಹೀಗೆ ಅಲ್ಲಾಹನು ಅವರ ಹೃದಯಕ್ಕೆ ಮುದ್ರೆ ಹಾಕುತ್ತಾನೆ ಮತ್ತು ಅವರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಅನುಸರಿಸುತ್ತಾರೆ. (47:16)

ಮೇಲಿನ ವಚನವನ್ನು ಇನ್ನೊಮ್ಮೆ ಓದಿ ಆಲೋಚಿಸಿರಿ. ಯೋಚಿಸಲು ಒಂದು ಪೈಸೆಯ ವೆಚ್ಚವೂ ಇಲ್ಲ. ಆದ್ದರಿಂದ, ಈ ಪುಸ್ತಕವನ್ನು ಒಂದು ಮುಕ್ತ ಮನಸ್ಸಿನಿಂದ ಓದಿ - ಮತ್ತು ಎಚ್ಚರಿಕೆಯಿಂದ ಆಲೋಚಿಸಿರಿ. ನೀವು ಮಾತ್ರವಲ್ಲ, ಇತರ ಧರ್ಮದ ಧಾರ್ಮಿಕರು ಮತ್ತು ವಿದ್ವಾಂಸರು ಸಹ ಇದೇ ರೀತಿಯಲ್ಲಿ, ಕಣ್ಣುಮುಚ್ಚಿ ತಮ್ಮನ್ನು ಅನುಸರಿಸುವ ಮುಗ್ಧ ಜನರ ಮನಸ್ಸನ್ನು ಗುಲಾಮರನ್ನಾಗಿ ಮಾಡಿದ್ದಾರೆ. ಅವರಲ್ಲಿ ಕ್ರಿಶ್ಚಿಯನ್ನರು, ಯಹೂದಿಗಳು, ಹಿಂದೂಗಳು, ಬೌದ್ಧರು, ಸಿಖ್ಖರು, ಝೋರೊಸ್ಟ್ರಿಯನ್ನರು, ಬಹಾಯಿಸರು ಅಥವಾ ಇತರ ಎಲ್ಲಾ ಸಂಘಟಿತ ಧರ್ಮಗಳೂ ಸೇರುತ್ತದೆ.

ಭಾಗ ಎರಡು

‘ಅಲ್ಲಾಹನ ಧರ್ಮ’ ಎಂಬುವುದಿಲ್ಲ

ಅಲ್ಲಾಹನಿಂದ ನಿರೂಪಿಸಲ್ಪಟ್ಟ ಇಸ್ಲಾಮಿಗೂ ಮತ್ತು ಧಾರ್ಮಿಕರಿಂದ ಸೃಷ್ಟಿಸಿಲಾದ (ಇಸ್ಲಾಂ ಎಂದೇ ಹೆಸರಿಡಲ್ಪಟ್ಟ) ಅರಬೀ ಧರ್ಮಕ್ಕೂ ನಡುವೆ ವಿಶಾಲವಾದ ಪಾರಿಭಾಷಿಕ ವ್ಯತ್ಯಾಸಗಳಿವೆ. ಇಸ್ಲಾಂ ಎಂಬ ಪದವು ಬಹುಶಃ ಇಂದು ವಿಶ್ವದಲ್ಲೇ ಅತ್ಯಂತ ನಿಂದಿಸಲ್ಪಟ್ಟ ಪದವಾಗಿದೆ.

> ವಾಸ್ತವವಾಗಿ, ಅಲ್ಲಾಹನಿಂದ ಇರುವ ದೀನ್, ಇಸ್ಲಾಂ ಆಗಿದೆ. (3:19)

ಒಂದು ಸರಳ, ನೇರ ವಾಕ್ಯದಲ್ಲಿ ಇಸ್ಲಾಂ ಒಂದು ದೀನ್ ಎಂದು ಅಲ್ಲಾಹನು ಪ್ರಸ್ಥಾಪಿಸುತ್ತಾನೆ. 3:19 ವಚನದ ಅರ್ಥವು ಅಕ್ಷರಶಃ ಹೀಗೆ ಹೇಳುತ್ತದೆ: -

> ವಾಸ್ತವವಾಗಿ, ಅಲ್ಲಾಹನಿಂದ ಇರುವ ಜೀವನದ ರೀತಿ, ಶಾಂತಿಪರತೆ ಆಗಿದೆ.

ಇಸ್ಲಾಂ ಎಂಬ ಪದದ ಅರ್ಥವು ಶಾಂತಿಪರತೆ ಎಂದಾಗಿದೆ. ಈ ಪದವು ‘ಶಾಂತಿ’ ಎಂದು ಅರ್ಥಕೊಡುವ ಸ-ಲ-ಮ ಅಥವಾ ಸಲಾಮ್ ಎಂಬ ಮೂಲ ಪದದಿಂದ ಪಡೆಯಲಾಗಿದೆ. ನಾವು ಪರಸ್ಪರ ಸ್ವಾಗತಿಸಲು ಉಪಯೋಗಿಸಬೇಕಾದ ವಾಕ್ಯವು 6:54ರಲ್ಲಿ ಈ ತರಹ ಇದೆ: -

“ನಿಮ್ಮ ಮೇಲೆ **ಶಾಂತಿ** ಇರಲಿ” ಅಥವಾ “***ಸಲಾಮುನ್*** *ಅಲೈಕುಮ್*”.

ಅ-ದ್ದೀನ್ ಎಂಬ ಪದದ ಅರ್ಥವು, ಒಂದು ನಿರ್ದಿಷ್ಟ ರೀತಿ ಅಥವಾ ದಾರಿ ಅಥವಾ ವ್ಯವಸ್ಥೆ. ಇಸ್ಲಾಮನ್ನು ‘ಧರ್ಮ’ ಎಂದು ನಿರೂಪಿಸಿರುವುದಾಗಿ, ಕುರ್‌ಆನಿನಲ್ಲಿ ಎಲ್ಲಿಯೂ ಕಾಣಸಿಗದು. ಇದು ಅತಿ ಸೂಕ್ಷ್ಮವಾಗಿ ಪರಿಗಣಿಸಬೇಕಾದ ನಿರ್ಣಾಯಕ ಅಂಶವಾಗಿದೆ.

ಧರ್ಮಕ್ಕೂ ಮತ್ತು ದೀನಿಗೂ ನಡುವಿನ ವ್ಯತ್ಯಾಸವೇನು?

- ಒಂದು *ಧರ್ಮ* ಎಂಬುವುದು, “ಒಂದು ದೇವರ ಅಥವಾ ಹಲವು ದೇವರುಗಳ ಮೇಲಿರುವ ನಂಬಿಕೆ - ಮತ್ತು ಆ ನಂಬಿಕೆಗೆ ಸಂಬಂಧ ಹೊಂದಿರುವಂತಹ - ದೇವಸ್ಥಾನ, ಚರ್ಚು, ಮಂದಿರ, ಅಥವಾ ಮಸೀದಿಗಳಲ್ಲಿ ನಡೆಸಲಾಗುವ ಚಟುವಟಿಕೆಗಳಾದ - ಪ್ರಾರ್ಥನೆ ಅಥವಾ ಆರಾಧನೆ ಅಥವಾ ಪೂಜೆ ಅಥವಾ ವಿಧಿಗಳು” ಎಂದಾಗಿರುತ್ತದೆ.

- ಒಂದು *ದೀನ್* ಅಂದರೆ, ಒಂದು ರೀತಿ ಅಥವಾ ಒಂದು ಕಾರ್ಯವನ್ನು ಮಾಡುವ ವಿಧಾನ; ಅಥವಾ ವಿನ್ಯಾಸ ಮಾಡಲಾದ (ಕ್ರಿಯೆ ಅಥವಾ ಕ್ರಿಯೆಗಳ ಸರಣಿಯ) ಲಕ್ಷ್ಯವನ್ನು ಸಾಧಿಸುವ ಒಂದು ಕ್ರಮಬದ್ಧ ವಿಧಾನ.

ಕುರ್‌ಆನಿನ ಪ್ರಕಾರ:

ಧರ್ಮ[16] ವನ್ನು *ಶೀಅ* ಎಂದು ಕರೆಯಲಾಗುತ್ತದೆ. ಇದು ಅಲ್ಲಾಹನು ನಿರ್ದೇಶಿಸಿದ ಜೀವನ ರೀತಿಯಿಂದ (ಅಥವಾ *ದೀನ್-ಅಲ್ಲಾಹ್)* ಬೇರ್ಪಟ್ಟ ಒಂದು ವ್ಯವಸ್ಥೆಯಾಗಿದೆ. ಮಾನವರು ಧರ್ಮವನ್ನು, ಭೌತಿಕ ಅಸ್ತಿತ್ವವಿರುವ ಮರ, ಕಲ್ಲು, ಬಂಡೆ, ಲೋಹ, ಇತರ ಸೃಷ್ಟಿಗಳು ಅಥವಾ ಸ್ಪರ್ಶಿಸಲಾಗುವಂತಹ ಯಾವುದಾದರೂ ಒಂದು ಸಾಮಾನ್ಯ ವಸ್ತುವಿಗೆ, ಜನರು ತಮ್ಮನ್ನು ವಿನಿಯೋಗಿಸುವ ಸಲುವಾಗಿ ರಚಿಲಾಗುತ್ತದೆ. ಜನರು ಪ್ರಾರ್ಥನೆಗಳ ಹಾಗೂ ಧಾರ್ಮಿಕ ವಿಧಿಗಳ ಮೂಲಕ ಈ ವಿಗ್ರಹ ಅಥವಾ ಮೂರ್ತಿಗಳನ್ನು ಆರಾಧಿಸುತ್ತಾರೆ. ಅದು ಅಂತಿಮವಾಗಿ ಸಂಸ್ಥಾಪಿತ ಮತ್ತು ನಿಯಂತ್ರಿತ ಧಾರ್ಮಿಕ ಕಟ್ಟುಪಾಡುಗಳಾಗಿ ವಿಕಾಸಹೊಂದುತ್ತದೆ.

ದೀನ್ ಎಂಬುವುದು, ಏಕ ಮತ್ತು ಕಾಣದ ದೇವನಿಗೆ, ಅವನ ಗ್ರಂಥದಲ್ಲಿ ಸಮ್ಮತಿಸಿರುವ ಅವನ ನಿರ್ದೇಶನಗಳ ಮೂಲಕ ತಮ್ಮನ್ನು ವಿನಿಯೋಗಿಸಲು ಅನುಮತಿಸುವಂತೆ, ಜನರಿಗೆ ಸರ್ವಜ್ಞನು ಆಜ್ಞಾಪಿಸಿದ ವ್ಯವಸ್ಥೆಯ ಒಂದು ಕ್ರಮವಾಗಿದೆ. ಈ ವ್ಯವಸ್ಥೆಯ ನಿಜವಾದ ಅನುಯಾಯಿಗಳು, ಈ ಪ್ರಪಂಚದಲ್ಲಿ ಶಾಂತಿಪರತೆಯನ್ನು ಸಾಧಿಸಲು, ಅಲ್ಲಾಹನ ವ್ಯವಸ್ಥೆಯಲ್ಲಿ ಅವನು ಹೇಳಿರುವ ಕಾರ್ಯಗಳನ್ನು ಮಾಡಲು ತಮ್ಮನ್ನು ಬದ್ಧರನ್ನಾಗಿಸಿ, ಅವನಿಗೆ ಸೇವೆಯನ್ನು ಸಲ್ಲಿಸುತ್ತಾರೆ. **ಈ ಕರ್ತವ್ಯಗಳ ನಿರ್ವಹಣೆಗೆ ಆತ್ಮತ್ಯಾಗದ ಅವಶ್ಯಕತೆ ಇದೆ ಮತ್ತು ಅಂಧ ಆಚರಣೆಗಳಾದ ಆರಾಧನೆ ಅಥವಾ ವಿಧಿಗಳಿಂದ ಮುಕ್ತವಾಗಿದೆ.** ಅಲ್ಲಾಹನ ಹಾಗೂ ಅಂತಿಮ ದಿನದ ಮೇಲೆ ವಿಶ್ವಾಸವಿರಿಸುವ ಹಾಗೂ ಈ ಜೀವನದಲ್ಲಿ ಸಚ್ಚಾರಿತ್ರ್ಯತೆಯನ್ನು ಪಾಲಿಸುವ ಪುರುಷ ಹಾಗೂ ಮಹಿಳೆಯರನ್ನು, ಮುಸ್ಲಿಮರು ಅಥವಾ ಶಾಂತಿಯುತರು ಎಂದು ಕರೆಯಲಾಗುತ್ತದೆ. **ಮುಸ್ಲಿಮ್ ಎಂಬುವುದು ಒಂದು ಹಣೆಪಟ್ಟಿಯಲ್ಲ, ಅದು ಶಾಂತಿಪರತೆಯನ್ನು ಆನಂದಿಸುವ ಒಂದು ವ್ಯಕ್ತಿಯ ಸ್ಥಿತಿಯಾಗಿದೆ**.

ಕುರ್‌ಆನಿನಲ್ಲಿ ನೂಹ್ ಎಂದೇ ಹೆಸರಿಡಲ್ಪಟ್ಟ ಒಂದು ಸೂರ ಅಥವಾ ಅಧ್ಯಾಯದಲ್ಲಿ ನೂಹರ ಚರಿತ್ರೆಯ ಬಗ್ಗೆ ನಿರೂಪಣೆಯಿದೆ. ಅಲ್ಲಾಹನ ಗ್ರಂಥದ ಅಲ್ಪ ಜ್ಞಾನವಿರುವವರಿಗೂ ಮಹಾ ಪ್ರವಾಹದ ಇತಿಹಾಸದ ಬಗ್ಗೆ ತಿಳಿದಿದೆ. ಸುಳ್ಳು ದೇವರುಗಳ ಸೇವೆಯಲ್ಲಿ ನಿರತರಾದ ಒಂದು ಸಮುದಾಯದ ಸುಧಾರಣೆಗಾಗಿ ನೂಹರನ್ನು ಅಲ್ಲಾಹನು ನಿಯೋಜಿಸಿದ್ದನು. ಅವರ ಸಮುದಾಯವು ಒಂದು ಧರ್ಮಕ್ಕೆ ಸೇರಿದವರಾಗಿದ್ದರು.

---

[16] 'Chambers Encyclopaedic English'ಶಬ್ದಕೋಶವು 'ಧರ್ಮ' (religion) ಎಂಬ ಪದವನ್ನು ಹೀಗೆ ವ್ಯಾಖ್ಯಾನಿಸಿದೆ: 1. ದೇವರ ಅಥವಾ ದೇವರುಗಳ ನಂಬಿಕೆ, ಆರಾಧನೆ ಅಥವಾ ಪೂಜೆ. 2. ನಂಬಿಕೆ, ಆರಾಧನೆ ಅಥವಾ ಪೂಜೆಯ ಒಂದು ನಿರ್ದಿಷ್ಟ ವ್ಯವಸ್ಥೆ. ಉದಾಹರಣೆಗೆ, ಕ್ರಿಶ್ಚಿಯನಿಟಿ ಅಥವಾ ಜುದಾಯಿಸಮ್. 3. ಒಬ್ಬನು ಸಂಪೂರ್ಣವಾಗಿ ಅರ್ಪಿಸಿಕೊಂಡಂತಹದ್ದು ಮತ್ತು ಅವನ ಜೀವನವನ್ನು ಆಳುವಂತಹದ್ದು. 4. ಸನ್ಯಾಸತ್ವ ಜೀವನ ರೀತಿ. [ಲ್ಯಾಟಿನ್ ರೆಲಿಜಿಯೊ ನಿಂದ]

ಎರಡು ಅತ್ಯಂತ ವಿಭಿನ್ನ ವ್ಯವಸ್ಥೆಗಳು ನೂಹರ ಸಮಯದಲ್ಲಿ ಅಸ್ತಿತ್ವದಲ್ಲಿತ್ತು ಎಂಬುವುದು ಸ್ಪಷ್ಟವಾಗಿದೆ. ಜನರು ಪ್ರಾರ್ಥನೆ ಹಾಗೂ ಆರಾಧನೆಯ ಸಾಂಪ್ರದಾಯಿಕ ವ್ಯವಸ್ಥೆಯನ್ನು ಜೀವನದ ತಮ್ಮ ರೀತಿಯಾಗಿ ಸಂರಕ್ಷಣೆ ಮತ್ತು ವಿಸ್ತರಣೆ ಮಾಡುವುದರಲ್ಲಿ ತೊಡಗಿದ್ದರು. ಆದಾಗ್ಯೂ ನೂಹರು, ಪ್ರಾರ್ಥನೆ ಹಾಗೂ ಆರಾಧನೆಯನ್ನು ಸಂಸ್ಥಾಪಿಸದೆಯೇ, ಅಲ್ಲಾಹನ ನಿರ್ದೇಶಿಸಿದ ವ್ಯವಸ್ಥೆಯ ಪ್ರಕಾರ ತನ್ನ ಜೀವನ ರೀತಿ ಅಥವಾ ದೀನನ್ನು ಪಾಲಿಸಿದರು. ತನ್ನ ಮನೆಯು ಪ್ರವಾಹಕ್ಕೀಡಾದ ಒಡನೆಯೇ ಅವರು ಅಲ್ಲಾಹನೊಂದಿಗೆ ಹೇಳಿದರು:

> ನನ್ನ ಪ್ರಭುವೇ, ನನ್ನ ಮತ್ತು ನನ್ನ ಮಾತಾಪಿತರನ್ನು ಮತ್ತು ನನ್ನ ವ್ಯವಸ್ಥೆ (ಬೈತಿ'ಯ)ಯನ್ನು ವಿಶ್ವಾಸಿಗಳಾಗಿ ಪ್ರವೇಶಿಸುವವರನ್ನು ಮತ್ತು ಎಲ್ಲಾ ವಿಶ್ವಾಸವಿರುವ ಪುರುಷರು ಮತ್ತು ಮಹಿಳೆಯರನ್ನು ಸುರಕ್ಷಿತಗೊಳಿಸು. ಮತ್ತು ದುಷ್ಟರಿಗೆ ನಾಶದ ವಿನಹಃ ಬೇರೇನನ್ನೂ ವರ್ಧಿಸಬೇಡ. (71:28)

ಈ ವಚನದಲ್ಲಿ *ಬೈತಿ'ಯ* ಎಂಬ ಪದದ ಅರ್ಥವು ಮನೆ ಎಂದೂ, ಹಾಗೆ "... ಮತ್ತು ವಿಶ್ವಾಸಿಗಳಾಗಿ ನನ್ನ ಮನೆಯನ್ನು ಪ್ರವೇಶಿಸುವವರನ್ನು..." ಎಂದು ಧಾರ್ಮಿಕರು ವ್ಯಾಖ್ಯಾನಿಸುತ್ತಾರೆ. ಆದರೂ, ನೂಹಾರು ಮಹಾ ಜಲಪ್ರಲಯದ ವೇಳೆ, ಅವರೇ ನಿರ್ಮಿಸಿದ ಹಡಗಿನ ಒಳಗೆ ಈ ವಿನಮ್ರ ಮನವಿಯನ್ನು ಮಾಡಿದರು ಎಂಬ ವಾಸ್ತವವನ್ನು ವಿವೇಕ ಶಕ್ತಿಯ ಒಂದು ಕೋಮಲ ಪ್ರಯೋಗದಿಂದಲೂ ತಿಳಿಯಬಹುದು. ಎಲ್ಲಾ ಸಂಭವನೀಯತೆಯಲ್ಲೂ, ಆ ತೀರ ಕ್ಷಣದಲ್ಲಿ ನೂಹರ ಮನೆಯು, ಈತನಕ ಅವರ ಕರೆಯನ್ನು ನಿರಾಕರಿಸಿದವರ ವಿರುದ್ಧ ಅಲ್ಲಾಹನ ಪ್ರತಿಕಾರದ ಪ್ರವಾಹದಡಿಯಲ್ಲಿ ಮುಳುಗಿತ್ತು ಎಂದು ಸ್ಪಷ್ಟವಾಗುತ್ತದೆ. ಹಾಗೆಯೇ, ಎಲ್ಲಾ ಮನುಕುಲವು ಮುಳುಗಿ ಹೋದಾಗ, ಅಲ್ಲಿ ಅವರ ಮನೆಗೆ ಪ್ರವೇಶಿಸಲು ಯಾರೂ ಇರಲಿಲ್ಲ ಎಂಬುವುದೂ ವ್ಯಕ್ತವಾಗಿದೆ. *ಬೈತಿ'ಯ* ಎಂಬ ಪದವು ನೂಹರು ಪಾಲಿಸಿದಂತಹುದೇ ಆಗಿದೆ ಎಂದು ನಾವು ತಿಳಿಯಬೇಕು. ಪ್ರಾಸಂಗಿಕವಾಗಿ, ಕುರ್'ಆನಿನಲ್ಲಿ ಹಡಗಿಗೆ ಉಪಯೋಗಿಸಲಾದ ಪದವು *ಫುಲ್ಕ್* ಎಂದಾಗಿದೆ.

ಹಾಗಾದರೆ, ಮನೆ ಮತ್ತು ವ್ಯವಸ್ಥೆಯು ಹೇಗೆ ವಿಭಿನ್ನವಾಗಿವೆ?

ಸಾಮಾನ್ಯವಾಗಿ ಒಂದು ಕುಟುಂಬಕ್ಕೆ ಸೇರಿದ ಜನರು ವಾಸಿಸುವ ಒಂದು ಕಟ್ಟಡ ಎಂಬುವುದು *ಮನೆ* ಎಂಬ ಪದದ ಸಾಧಾರಣ ಅರ್ಥವಾಗಿದೆ. ಪ್ರವಾಹದಲ್ಲಿ ಮುಳುಗಿ ಹೋದ ನೂಹರ ಮನೆಗೆ ಪ್ರವೇಶಿಸಿದ ಮಾತ್ರಕ್ಕೆ ಅಲ್ಲಾಹನು ಜನರನ್ನು ಕ್ಷಮಿಸಬೇಕೆಂದು ನೂಹರು ಉದ್ದೇಶಿಸಿದ್ದರೆಂಬುವುದು ಚಿಂತನೆಗೆ ನಿಲುಕದ ವಿಷಯವಾಗಿದೆ. ಪ್ರಪಂಚದ ಪ್ರಭುವಿಗೆ ಮೊರೆಯಿಟ್ಟಾಗ, ನೂಹರು ಬಳಸಿರುವ 'ಬೈತಿಯ' ಎಂಬ ಪದವು, ಮೂರ್ತಿ ಆರಾಧಕರ ವ್ಯವಸ್ಥೆಗಿಂತ ಭಿನ್ನವಾದ 'ತನ್ನ ವ್ಯವಸ್ಥೆ'ಯನ್ನು ಉಲ್ಲೇಖಿಸುತ್ತದೆ.

ಒಂದು *ವ್ಯವಸ್ಥೆ* ಎಂದರೆ, ಒಂದು ಯೋಜನೆ ಅಥವಾ ನಿರ್ದಿಷ್ಟ ನಿಯಮಗಳನ್ನು ಅನುಸರಿಸುತ್ತಾ ಕೆಲಸ ಮಾಡುವ, ಸಂಘಟಿಸುವ ಅಥವಾ ಯಾವುದಾದರೂ ಕಾರ್ಯವನ್ನು ನಿರ್ವಹಿಸುವ ಒಂದು ರೀತಿ ಅಥವಾ ಹಾದಿಯಾಗಿದೆ. ಒಂದು ಸನ್ನಿವೇಶ ಅಥವಾ ಚಟುವಟಿಕೆಯು ಒಂದು ವ್ಯವಸ್ಥೆಯನ್ನು ಪಾಲಿಸುತ್ತಿದ್ದರೆ, ಅದು

ಕ್ರಮಬದ್ಧವಾಗಿದೆ ಅಥವಾ ಉತ್ತಮ ಸಂಘಟನೆಯಾಗಿದೆ ಎಂದು ಅರ್ಥವಾಗಿದೆ. ಅದು, ಒಂದು ಇಡೀ ಸಂಸ್ಥೆಯನ್ನು ಅಥವಾ ಸಮಾಜದ ಒಂದು ಅಂಶವನ್ನು ಸಂಘಟಿಸುವ ಅಥವಾ ಕ್ರಮಪಡಿಸುವ ಒಂದು ರೀತಿಯಾಗಿದೆ.

ನೂಹರ ಕಾಲದಲ್ಲಿ ಜನರು ಈಗಾಗಲೇ ಮೂರ್ತಿಗಳನ್ನು ಆರಾಧಿಸುವ ತಮ್ಮ ಆವಿಷ್ಕಾರಿತ ವ್ಯವಸ್ಥೆಯ ಪ್ರಕಾರ ಜೀವಿಸುತ್ತಿದ್ದರು. ಆದಾಗ್ಯೂ, ನೂಹರು ಕೇವಲ ಬ್ರಹ್ಮಾಂಡದ ಒಡೆಯನ ಸೇವೆ ಮಾಡುತ್ತಿದ್ದರು ಮತ್ತು ಅಲ್ಲಾಹನು ನಿರ್ದೇಶಿಸಿದ ವ್ಯವಸ್ಥೆಗೆ ತನ್ನನ್ನು ಬದ್ಧರಾಗಿಸಿದ್ದರು. ಅವರು *ಖೈತಿ'ಯ* ಎಂಬ ಪದವನ್ನು ಉಚ್ಚರಿಸಿದ್ದು '*ನನ್ನ ವ್ಯವಸ್ಥೆ*' ಎಂಬರ್ಥದಲ್ಲಿ ಆಗಿದೆ. ಅದೇ ವ್ಯವಸ್ಥೆಗೆ ಅವರು ಬದ್ಧರಾಗಿದ್ದರು. ಅಲ್ಲಾಹನು *ಖೈತಿ'ಯ* ಎಂದು ಕರೆದ ಆ ವ್ಯವಸ್ಥೆಯನ್ನೇ ಇಬ್ರಾಹೀಮರಿಗೂ ಸೂಚಿಸಲಾಗಿದೆ ಎಂದು ನಾವು ಶೀಘ್ರದಲ್ಲೇ ನೋಡೋಣ. ಅಲ್ಲಾಹನ ಅನುಗ್ರಹಕ್ಕೆ ತಮ್ಮನ್ನು ಅಧೀನರಾಗಿಸಿದ ಹಾಗೂ ಸಮರ್ಪಿಸಿದ ಜನರ ಪ್ರಯೋಜನಕ್ಕಾಗಿ, ಮೂರ್ತಿಪೂಜೆಯ ವ್ಯವಸ್ಥೆಯನ್ನು ಶುದ್ಧೀಕರಿಸಲು ಇಬ್ರಾಹೀಮರಿಗೂ ಅವರ ಮಗನಿಗೂ ನಿರ್ದೇಶಿಸಲಾಗಿತ್ತು.

ವಿಧ್ಯುಕ್ತ ಪ್ರಾರ್ಥನೆ ಮತ್ತು ಆರಾಧನೆಯ ಜೀವನ ರೀತಿಯನ್ನು ಪಾಲಿಸುವವರನ್ನು *ಶಿಯ'ಅನ್* (ಅಥವಾ ಧರ್ಮಗಳು)ಗೆ ಸೇರಿದವರು ಎಂದು ಕುರ್‌ಆನ್ ಹೇಳುತ್ತದೆ. ಧರ್ಮಕ್ಕೆ ಮೀಸಲಾದವರನ್ನು *ಮುಶ್ರಿಕೀನ್* ಅಥವಾ 'ಮೂರ್ತಿ ಆರಾಧಕರು' ಎನ್ನಲಾಗಿದೆ.

ಇಬ್ರಾಹೀಮರ ಚರಿತ್ರೆಯ ಜೊತೆಗೆ ನೂಹರ ಚರಿತ್ರೆಯನ್ನು ಸೂರಾ ಮೂವತ್ತೇಳರಲ್ಲೂ ಇನ್ನೊಮ್ಮೆ ಉಲ್ಲೇಖಿಸಲಾಗಿದೆ:

> ನೂಹರು ನಮಗೆ ಮೊರೆಯಿಟ್ಟರು ಮತ್ತು ಪ್ರತಿಸ್ಪಂದಿಸುವವರಲ್ಲಿ ನಾವು ಅತ್ಯುತ್ತಮರಾಗಿದ್ದೇವೆ. ನಾವು ಮಹಾ ದುರಂತದಿಂದ ಅವರನ್ನು ಮತ್ತು ಅವರ ಕುಟುಂಬವನ್ನು ರಕ್ಷಿಸಿದೆವು. ಮತ್ತು ನಾವು ಅವರ ಹಾಗೂ ಅವರ ಕುಟುಂಬದವರನ್ನು ಬದುಕುಳಿದವರಾಗಿ ಮಾಡಿದೆವು, ಅನಂತರದ ತಲೆಮಾರುಗಳಿಗೆ ಅವರ ಇತಿಹಾಸವನ್ನು ಜೋಪಾನವಾಗಿಟ್ಟೆವು. (37:75-78)

ನೂಹರ ಜನರ ವಿರುದ್ಧ ಪ್ರತೀಕಾರದ ಇತಿಹಾಸವನ್ನು ಇಬ್ರಾಹೀಮರ ಜನರಿಗೆ ಉದಾಹರಣೆಯಾಗಿ ಸಂರಕ್ಷಿಸಲಾಗಿತ್ತು. ಇದರ ಹೊರತೂ, ಇಬ್ರಾಹೀಮರ ಜನರು ಅದೇ ರೀತಿ ಸುಳ್ಳು ದೇವರುಗಳಿಗೆ ತಮ್ಮನ್ನು ಸಮರ್ಪಿಸಿಕೊಂಡರು. ನೂಹರ ಜನರಂತೆ ತಾವೇ ಸೃಷ್ಟಿಸಿದ ದೇವರುಗಳನ್ನು ಅವರು ಆರಾಧಿಸ ತೊಡಗಿದರು.

ಶೀ'ಅತ (ಒಂದು ಧರ್ಮ)ಕ್ಕೆ ಸೇರಿದ ನೂಹರ ಜನರು, ಪ್ರವಾಹದ ಮೂಲಕ ಮುಳುಗಡೆ ಹೊಂದಿದರು. ಆದರೆ ಕಾಲಕ್ರಮೇಣ ಜನರು ಅದೇ ರೀತಿಯಲ್ಲಿ ಮೂರ್ತಿಗಳಿಗೆ ಆರಾಧನೆ ಮತ್ತು ಪ್ರಾರ್ಥನೆ ಮಾಡುತ್ತಾ ಶೀ'ಅತವನ್ನು ಪುನರ್ ಸ್ಥಾಪಿಸಿದರು. ಅಂತಹ ಒಂದು ಸಮುದಾಯದಲ್ಲಿ ಇಬ್ರಾಹೀಮರು ಜನಿಸಿದರು.

ಇತಿಹಾಸದುದ್ದಕ್ಕೂ ನೂಹರ ಮೇಲೆ ಶಾಂತಿಯಿರಲಿ. ನಾವು ಪ್ರಾಮಾಣಿಕ ಜನರಿಗೆ ಪ್ರತಿಫಲ ಕೊಡುತ್ತೇವೆ. ಹೀಗೆ ಅವರು ನಿಜವಾದ ವಿಶ್ವಾಸಿಗಳ ಪೈಕಿಯಾಗಿದ್ದರು. ತದನಂತರ ನಾವು ಉಳಿದವರನ್ನು ಮುಳುಗಿಸಿದೆವು. ಮತ್ತು ನಿಶ್ಚಯವಾಗಿಯೂ, ಇಬ್ರಾಹೀಮರು ತಮ್ಮ ಧರ್ಮದಲ್ಲೇ (ಶೀ'ಅತಹೀ) ಇದ್ದರು. ಆದರೆ ಅವರು ತನ್ನ ಪ್ರಭುವಿನೆಡೆಗೆ ನಿರ್ಮಲ ಹೃದಯದಿಂದ ಬಂದರು. ತನ್ನ ತಂದೆಯೊಂದಿಗೆ ಅವರು ಕೇಳಿದರು "ನೀವು ಏನನ್ನು ಸೇವೆ ಮಾಡುತ್ತಿದ್ದೀರಿ? ಅಲ್ಲಾಹನ ಜೊತೆಗೆ ಇತರ ಸುಳ್ಳು ದೇವರುಗಳು ನಿಮಗೆ ಬೇಕೆ? ಪ್ರಪಂಚದ ಒಡೆಯನ ಬಗ್ಗೆ ನೀವು ಏನು ಕಲ್ಪಿಸಿಕೊಂಡಿದ್ದೀರಿ?" (37:79-87)

ಮೂರ್ತಿಗಳ ಸೇವೆಯ ಪರಿಕಲ್ಪನೆಗೆ ಗುಲಾಮರಾದ ಒಂದು ಸಮುದಾಯದಲ್ಲಿ ಇಬ್ರಾಹೀಮರು ವಾಸಿಸುತ್ತಿದ್ದರು. ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನು ಅಲ್ಲಾಹನೇ ಆಗಿರುತ್ತಾನೆ ಮತ್ತು ಸೇವೆ ಸಲ್ಲಿಸಲ್ಪಡಲು ಯೋಗ್ಯನು ಅವನು ಮಾತ್ರನಾಗಿದ್ದಾನೆಂದು ಇಬ್ರಾಹೀಮರು ತಿಳಿದುಕೊಂಡರು. ನಂತರ, ಒಂದು ಸರಳ ಯುಕ್ತಿಯನ್ನು ಪ್ರದರ್ಶಿಸಲು ತನ್ನ ಜನರ ಕಡೆಗೆ ತೆರಳಿದರು.

ಅವರು (ಇಬ್ರಾಹೀಮರು) ತನ್ನ ತಂದೆ ಮತ್ತು ಜನರಿಗೆ ಹೇಳಿದರು. "ಏನಿವು, ನೀವು ಸೇವೆ ಮಾಡುತ್ತಿರುವ ಪ್ರತಿಮೆಗಳು?" ಜನರು ಹೇಳಿದರು "ನಾವು ನಮ್ಮ ಪೂರ್ವಜರು ಇವುಗಳಿಗೆ ಸೇವೆ ಮಾಡುತ್ತಿದ್ದವರಾಗಿ ಕಂಡಿದ್ದೇವೆ". ಅವರು ಹೇಳಿದರು "ನಿಶ್ಚಯವಾಗಿ, ನೀವು ಮತ್ತು ನಿಮ್ಮ ಪೂರ್ವಿಕರು ಸಂಪೂರ್ಣ ತಪ್ಪಿನಲ್ಲಿದ್ದೀರಿ". ಜನರು ಹೇಳಿದರು "ನೀನು ಸತ್ಯವನ್ನು ತಂದಿರುವೆಯಾ ಅಥವಾ ಬರೇ ತಮಾಷೆ ಮಾಡುತ್ತಿರುವೆಯಾ?". ಅವರು "ಇಲ್ಲ! ನಿಮ್ಮನ್ನೂ ಮತ್ತು ನಿಮ್ಮ ಪೂರ್ವಿಕರನ್ನೂ ಸೃಷ್ಟಿಸಿದಂತಹ, ಭೂಮಿ ಮತ್ತು ಆಕಾಶಗಳ ಪ್ರಭುವೇ, ನಿಜವಾದ ಪ್ರಭು. ಇದಕ್ಕೆ ನಾನು ಸಾಕ್ಷ್ಯ ಹೇಳುತ್ತೇನೆ! ಅಲ್ಲಾಹನ ಆಣೆ, ನೀವು ಹೊರಟ ತಕ್ಷಣ, ನಾನು ನಿಮ್ಮ ಪ್ರತಿಮೆಗಳ ಬಗ್ಗೆ ನಿಮಗೆ ಏನಾದರೂ ರುಜುವಾತು ಮಾಡುತ್ತೇನೆ". ನಂತರ ಅವರು ಎಲ್ಲಾ ಸಣ್ಣ ವಿಗ್ರಹಗಳನ್ನು ಒಡೆದರು, ಉಲ್ಲೇಖನೆಯಾಗಿ ಬಳಸಲು ಅತಿದೊಡ್ಡದೊಂದು ವಿಗ್ರಹವನ್ನು ಹೊರತು ಪಡಿಸಿದರು. ನಂತರ ಅವರು ಕೇಳಿದರು "ನಮ್ಮ ದೇವರುಗಳಿಗೆ ಹೀಗೆ ಮಾಡಿದವನು ಅನ್ಯಾಯವೆಸಗಿದವನಾಗಿರುತ್ತಾನೆ". ಅವರಲ್ಲಿ ಕೆಲವರೆಂದರು "ನಾವು ಒಬ್ಬ ಯುವಕನು ಅವುಳಿಗೆ ಬೆದರಿಕೆ ನೀಡಿದ್ದಾಗಿ ಕೇಳಿದ್ದೇವೆ - ಅವನ ಹೆಸರು ಇಬ್ರಾಹೀಮ್". "ಅವನನ್ನು ಜನರ ಮುಂದೆ ತನ್ನಿjf, ಎಲ್ಲರೂ ಸಾಕ್ಷಿಯಾಗಲಿ" ಎಂದು ಹೇಳಲಾಯಿತು. ಅವರು ಕೇಳಿದರು, "ಇಬ್ರಾಹೀಮ್, ನಮ್ಮ ದೇವರುಗಳ ಜೊತೆ ಹೀಗೆ ಮಾಡಿರುವುದು ನೀನಾಗಿರುವೆಯಾ?" ಅವರು "ಆ ಅತಿದೊಡ್ಡ ವಿಗ್ರಹವೇ ಇದನ್ನು ಮಾಡಿರಬೇಕು, ನೀವು ಅದನ್ನೇಕೆ ಕೇಳಬಾರದು? ಬಹುಶಃ ಅದು ಮಾತನಾಡಬಹುದು". ಎಂದು ಉತ್ತರಿಸಿದ್ದರು. (ಇದನ್ನು ಕೇಳಿ) "ನಿಜವಾಗಿಯೂ ನೀವೇ ತಪ್ಪಿತಸ್ಥರು" ಎಂದು ಅವರು ತಮ್ಮೊಳಗೆ ಚರ್ಚೆಮಾಡಿ ಹೇಳಿದರು. ಆದರೂ ಅವರು ಅಭಿಪ್ರಾಯವನ್ನು ಬದಲಿಸಿ "ಅವುಗಳು ಮಾತನಾಡುವುದಿಲ್ಲ ಎಂದು ನಿನಗೆ ಚೆನ್ನಾಗಿ ತಿಳಿದಿದೆ" ಎಂದರು. ನಂತರ ಅವರು (ಇಬ್ರಾಹೀಮರು)

ಹೇಳಿದರು “ಉಪಕಾರ ಅಥವಾ ಹಾನಿಯನ್ನುಂಟು ಮಾಡಲು ಅಸಮರ್ಥವಾದುದ್ದನ್ನು ನೀವು ಅಲ್ಲಾಹನ ಜೊತೆಗೆ ಸೇವೆ ಮಾಡುತ್ತೀರೇನು?” (21:52-66)

ಮೇಲಿನ ಪಾಠದಿಂದ ನಾವು ಕಲಿತುಕೊಳ್ಳಬೇಕಾಗಿರುವುದು ಏನೆಂದರೆ, ತಮ್ಮ ಧಾರ್ಮಿಕ ನಂಬಿಕೆಗಳ ಸಂಕೋಲೆಯಲ್ಲಿರುವ ಜನರು ಅತ್ಯಂತ ಅಪಾಯಕಾರಿಯಾಗಿರುತ್ತಾರೆ ಮತ್ತು ತಮ್ಮ ಸಾಮಾನ್ಯ ಜ್ಞಾನವನ್ನು ಬಳಸುವಂತೆ ಹೇಳುವವರ ಮೇಲೆ ನ್ಯಾಯವಲ್ಲದ ತೀರ್ಪುನ್ನು ಹೊರಡಿಸುತ್ತಾರೆ. ಇದು ಎಲ್ಲಾ ಸಂಘಟಿತ ಧರ್ಮಗಳಲ್ಲಿರುವ ಒಂದು ವಿಶಿಷ್ಟ ಉದಾಹರಣೆಯಾಗಿದೆ. ತಮ್ಮ ಸಾಮಾನ್ಯ ಜ್ಞಾನವನ್ನು ನಿರಾಕರಿಸುವಂತೆ ಅವರು ತಮ್ಮ ಭೋಧಕರಿಂದ ನಿರ್ಬಂಧಿತರಾಗಿದ್ದಾರೆ.

ಒಂದು *ಧರ್ಮ* ಎಂದರೆ, ಜನರು ತಾವು ಆರಾಧಿಸುವುದನ್ನು ನೋಡಿಕೊಂಡು, ಭೌತಿಕ ಮೂರ್ತಿಗಳನ್ನು ಕೇಂದ್ರೀಕರಿಸಿ, ಆಚರಣೆಗಳು ಅಥವಾ ವಿಧಿಗಳನ್ನು ನಿರ್ವಹಿಸುವ ಪರಿಕಲ್ಪನೆಯಾಗಿದೆ. ಕುರ್‌ಆನಿನ ಪ್ರಕಾರ ಈ ಏಕ ಲಕ್ಷಣವು, ಧರ್ಮವನ್ನು ಸೂಚಿಸುತ್ತದೆ. ಅಲ್ಲದೆ, ಸ್ಪರ್ಶಾರ್ಹ ಮತ್ತು ಮಾನವಕೃತ ವಸ್ತುಗಳ ಮುಖಾಂತರ ಅಲ್ಲಾಹನ ಮಹಿಮೆಯನ್ನು ತೋರಿಸುವ ವಿಧಾನವನ್ನು ತಮ್ಮದಾಗಿಸಲು ಧಾರ್ಮಿಕರಿಗಲ್ಲದೆ ಬೇರೆ ಯಾರಿಗೆ ಸಾಧ್ಯವಿದೆ?

ಒಂದು *ದೀನ್* ಎಂದರೆ, ಮಾನವರು ಅಥವಾ ಸ್ವತಃ ಅಲ್ಲಾಹನು ಅನುಮೋದಿಸಿರುವ ಜೀವನದ ಮಾರ್ಗ. ಅಲ್ಲಾಹನು “ನೀವು ನನ್ನನ್ನಲ್ಲದೇ ಸೇವೆಮಾಡದಿರಿ” ಎಂದು ಹೇಳುವಾಗ, ಅವನ ನಿರ್ಬಂಧಗಳನ್ನು ಮಾತ್ರ ನಾವು ಲಕ್ಷಿಸಬೇಕು ಅಥವಾ ಪಾಲಿಸಬೇಕು ಎಂದಾಗಿದೆ. ಈ ನಿರ್ಬಂಧಗಳು ವಿವಿಧ ಪ್ರವಾದಿಗಳಿಗೆ ಅವತೀರ್ಣಗೊಳಿಸಲಾಗಿದೆ. ಕುರ್‌ಆನಿನಲ್ಲಿ ಇದು *ದೀನಿಲ್ಲಾಹ್* ಅಥವಾ ಅಲ್ಲಾಹನು ನಿರ್ದೇಶಿಸಿದ ಜೀವನ ರೀತಿ ಎಂದು ಅರಿಯಪಡುತ್ತದೆ. ಆದ್ದರಿಂದ, ಒಂದು ನಿರ್ದಿಷ್ಟ ಧರ್ಮದ ನೆವಣೆಯ ಕೆಳಗೆ ಅಲ್ಲಾಹನು ನಿರ್ದೇಶಿಸಿದ ನಿರ್ಬಂಧಗಳನ್ನು ನಿರಾಕರಿಸದೆ, ಅಲ್ಲಾಹನನ್ನು ಹಾಗೂ ಸಂದೇಶವಾಹಕರನ್ನು ಪಾಲಿಸಬೇಕೆಂದು ಕುರ್‌ಆನ್ ಜನರಿಗೆ ಸೂಚಿಸುವಂತಹ ಅನೇಕ ವಾಕ್ಯವೃಂದಗಳನ್ನು ನಾವು ಕಾಣಬಹುದು. ಅಲ್ಲಾಹನು ತನ್ನ ದಾಸರಿಗೆ, ಪ್ರಾಯೋಗಿಕ ಕ್ರಿಯೆಗಳಾದ ದಾನ ಹಾಗೂ ಸತ್ಕರ್ಮಗಳ ನಿರ್ವಹಣೆಯ ಮೂಲಕ ತಮ್ಮ ನಂಬಿಕೆಯನ್ನು ಪ್ರಕಟಗೊಳಿಸಬೇಕೆಂದು ಆಜ್ಞಾಪಿಸುತ್ತಾನೆ. ಅಲ್ಲಾಹನ ರೀತಿಯು, ಆದೇಶಗಳ ಸರಣಿಯನ್ನು ಕ್ರಿಯೆಗಳಾಗಿ ಮಾರ್ಪಡಿಸುವಂತಹ ಒಂದು ಜೀವನದ ರೀತಿಯಾಗಿದೆ. ಉದಾಹರಣೆಗೆ, ಎಲ್ಲಾ ಪ್ರವಾದಿಗಳ ಮೂಲಕ ಬಹಿರಂಗಗೊಳಿಸಿದಂತಹ ಅಲ್ಲಾಹನ ಒಪ್ಪಂದದ ಪ್ರಕಾರ, ಅವನ ಸೇವಕರು ಕೆಳಗಿನ ಪಟ್ಟಿಯಲ್ಲಿರುವ ಆದೇಶಗಳನ್ನು ಪಾಲಿಸುವ ಅಗತ್ಯವಿದೆ. ಯಾವುದೇ ಧಾರ್ಮಿಕ ಪುರೋಹಿತರನ್ನು ಭೇಟಿ ಮಾಡದೆ, ಯಾರು ಬೇಕಾದರೂ ಈ ನಿರ್ದೇಶಿಸಲಾದಂತಹ ಆದೇಶಗಳನ್ನು ಎತ್ತಿಹಿಡಿದು ಅಲ್ಲಾಹನೊಂದಿಗೆ ತಮ್ಮ ಒಪ್ಪಂದವನ್ನು ಪೂರೈಸಬಹುದು.

- ಅಲ್ಲಾಹನನ್ನಲ್ಲದೇ ಬೇರೆ ಯಾವುದನ್ನೂ ಅಥವಾ ಯಾರನ್ನೂ ನೀವು ಸೇವೆಮಾಡದಿರಿ ಎಂದು ಅವನು ಆದೇಶಿಸಿದ್ದಾನೆ.

- ನಿಮ್ಮ ಮಾತಾಪಿತರು ಜೀವಿಸಿರುವ ತನಕ ಅವರನ್ನು ಗೌರವಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರು ವೃದ್ಧರಾಗಿ ನಿಮ್ಮ ಬಳಿಯಿದ್ದರೆ, ನೀವು ಅವರೊಂದಿಗೆ ಬಿರುಸಾಗಿ ಮಾತನಾಡಬಾರದು ಅಥವಾ ಅವರೊಂದಿಗೆ ಅನುಚಿತವಾಗಿ ವರ್ತಿಸಬಾರದು.

- ನೀವು ಜನರೊಂದಿಗೆ ಸ್ನೇಹಭಾವದಿಂದ ಮಾತನಾಡಬೇಕು ಮತ್ತು ಸುಳ್ಳುಗಳನ್ನು ಉಚ್ಚರಿಸಬಾರದು.

- ನೀವು ಸಂಬಂಧಿಕರು, ಅನಾಥರು, ಮತ್ತು ಬಡವರನ್ನು ಆದರಿಸಬೇಕು.

- ನೀವು ಬಡತನದ ಭಯದಿಂದ ನಿಮ್ಮ ಮಕ್ಕಳನ್ನು ಕೊಲ್ಲಬಾರದು.

- ನೀವು ವ್ಯಭಿಚರಿಸಬಾರದು, ಇದು ದುರ್ಗುಣವಾಗಿದೆ.

- ನೀವು ಯಾರನ್ನೂ ಕೊಲ್ಲಬಾರದು. ಜೀವವನ್ನು ತೆಗೆಯುವುದು ನಿಷೇಧಿಸಲಾಗಿದೆ.

- ನೀವು ಅನಾಥರ ಹಣ ಅಥವಾ ಸೊತ್ತನ್ನು ಅವರದೇ ಒಳಿತಿನ ಸಲುವಾಗಿ ಹೊರತು ಸಮೀಪಿಸಬಾರದು.

- ನೀವು ವ್ಯಾಪಾರ ಮಾಡುವಾಗ ಪೂರ್ಣ ಅಳತೆಯನ್ನು ನೀಡಬೇಕು, ತೂಕ ಮಾಡುವಾಗ ನಿಷ್ಪಕ್ಷಪಾತವಾದ ಸಮತೋಲನೆ ಮಾಡಬೇಕು.

- ಸ್ವತಃ ಖಚಿತಪಡಿಸಿಕೊಳ್ಳಲು ಸಾಧಿಸದ ಯಾವೊಂದನ್ನು ನೀವು ಸ್ವೀಕರಿಸಬಾರದು.

- ನೀವು ಸಾಕ್ಷಿ ನುಡಿಯುವಾಗ ಸಂಪೂರ್ಣ ಪ್ರಾಮಾಣಿಕರಾಗಿರಬೇಕು, ಅದು ನಿಮ್ಮ ಸ್ವಂತದ, ಮಾತಾಪಿತರ ಅಥವಾ ಸಂಬಂಧಿಕರ ವಿರುದ್ಧವಾಗಿದ್ದರೂ ಸಹ, ಮತ್ತು ಆರೋಪಿಯು ಶ್ರೀಮಂತ ಅಥವಾ ಬಡವನಾಗಿದ್ದರೂ ಸಹ.

- ಅಲ್ಲಾಹನು ನಿಮಗೆ ವಹಿಸಿದ ಅವನ ಸೌಲಭ್ಯಗಳಿಂದ ನೀವು ದಾನವನ್ನು ನೀಡಬೇಕು.

- ಅಲ್ಲಾಹನ ಪಥದಲ್ಲಿ *(ಫೀ ಸಬೀಲಿಲ್ಲಾಹ್)* ನಿಮ್ಮ ವಿರುದ್ಧ ಸೆಣಸಾಡುವವರ ವಿರುದ್ಧ ನೀವು ಸೆಣಸಾಡಬೇಕು ಆದರೆ ನೀವು ಅತಿಕ್ರಮಿಸಬಾರದು.

- ನೀವು ನಿಮ್ಮ ಬದ್ಧತೆಗಳನ್ನು ಈಡೇರಿಸಬೇಕು ಮತ್ತು ವಿನಮ್ರರಾಗಿರುವವರೊಂದಿಗೆ ನೀವೂ ವಿನಮ್ರರಾಗಿರಬೇಕು.

- ನೀವು ಅಹಂಕಾರಿಗಳಾಗಿ ಅಥವಾ ದರ್ಪಿಷ್ಠರಾಗಿ ಇರಬಾರದು ಮತ್ತು ಹೆಮ್ಮೆಯಿಂದ ನಡೆಯಬಾರದು. ಅಲ್ಲಾಹನು ಬಡಾಯಿ ಕೊಚ್ಚುವವರನ್ನು ಮತ್ತು ಅಹಂಕಾರಿಗಳನ್ನು ಪ್ರೀತಿಸುವುದಿಲ್ಲ. ನೀವು ನಿಮ್ಮ ನಡೆತೆಯಲ್ಲಿ ವಿನಮ್ರರಾಗಿರಿ ಮತ್ತು ನಿಮ್ಮ ಧ್ವನಿಯನ್ನು ಕಡಿಮೆಮಾಡಿರಿ.

- ಕಾನೂನುಬದ್ಧ ಮತ್ತು ಉತ್ತಮವಾದ ಎಲ್ಲವನ್ನೂ ನೀವು ತಿನ್ನಬಹುದು, ಮತ್ತು ಶೈತಾನನ ಹೆಜ್ಜೆಗಳನ್ನು ಅನುಸರಿಸಬಾರದು, ಅವನು ನಿಮ್ಮ ಉತ್ಸಾಹೀ ಶತ್ರುವಾಗಿದ್ದಾನೆ. ದುಷ್ಟ ಹಾಗೂ ಕೆಡುಕಿನ ಕಡೆಗೆ ಮತ್ತು ಸುಳ್ಳುಗಳನ್ನು ಅವಿಷ್ಕಾರಿಸಿ ಅದನ್ನು ಅಲ್ಲಾಹನ ಮೇಲೆ ಹೊರಿಸುವ ಕಡೆಗೆ ಅವನು ನಿಮ್ಮನ್ನು ಪ್ರೇರೇಪಿಸುತ್ತಾನೆ.

ಇದು ನಿರ್ದೇಶಿಸಲ್ಪಟ್ಟ ಜೀವನ ರೀತಿಯ ಭಾಗವಾಗಿದೆ ಮತ್ತು ಕುರ್‌ಆನಿನಲ್ಲಿ ಅಲ್ಲಾಹನು ಸಮ್ಮತಿಸಿದ ಬುದ್ಧಿವಂತಿಕೆಯಾಗಿದೆ. ನೂಹ್, ಇಬ್ರಾಹೀಮ್, ಮೂಸಾ, ಈಸಾ ಮತ್ತು ಮುಹಮ್ಮದರ ಕಾಲದ ಜನರು ಕೂಡ ಇವೇ ಮೌಲ್ಯಗಳಿಗೆ ಬದ್ಧರಾಗಿದ್ದರು. ಅವರು ಈ ಮೌಲ್ಯಗಳನ್ನು ಒಂದು ಕ್ರಮಬದ್ಧ ರೀತಿಯಲ್ಲಿ (ಒಂದು ದೀನಾಗಿ) ಪಾಲಿಸುತ್ತಿದ್ದರು. **ಈ ಮೌಲ್ಯಗಳು ಕರ್ಮಗಳಾಗಿ ಮಾರ್ಪಡಬೇಕು ಎಂದು ನಮ್ಮ ಸಾಮಾನ್ಯ ಜ್ಞಾನವು ನಮಗೆ ಹೇಳುತ್ತದೆ. ಆರಾಧನೆ ಅಥವಾ ವಿಧ್ಯುಕ್ತ ಪ್ರಾರ್ಥನೆಗಳು ಅಸಂಬದ್ಧವಾಗಿದೆ**. ಹೀಗಾಗಿ, *ಧರ್ಮ* ಮತ್ತು *ದೀನ್* ಸ್ಪಷ್ಟವಾಗಿ ವಿಭಿನ್ನವಾಗಿದೆ.

ಜನರು ನಿಗದಿತ ಆದೇಶಗಳನ್ನು ಪಾಲಿಸುವುದರ ಮೂಲಕ ಸೃಷ್ಟಿಕರ್ತನನ್ನು ಸೇವೆ ಮಾಡಬೇಕಾಗಿದೆ.

> ಅವನು ನೂಹರಿಗೆ ನಿಯೋಜಿಸಿದ ಅದೇ ದೀನನ್ನು ನಿಮಗೂ ವಿಧಿಸಿದ್ದಾನೆ ಮತ್ತು ಈಗ ನಾವು ಅದನ್ನೇ ದಿವ್ಯವಾಣಿಯ ಮೂಲಕ ನಿಮ್ಮ ಕಡೆಗೆ ಕಳುಹಿಸಿರುತ್ತೇವೆ. ಮತ್ತು ಅದನ್ನೇ ಇಬ್ರಾಹೀಮ್, ಮೂಸಾ ಮತ್ತು ಈಸಾರಿಗೂ ವಿಧಿಸಲಾಗಿತ್ತು. ನೀವು ಒಂದೇ ದೀನನ್ನು ಸಂಸ್ಥಾಪಿಸಿರಿ ಮತ್ತು ವಿಭಿನ್ನರಾಗದಿರಿ. ಮೂರ್ತಿ ಆರಾಧಕರಿಗೆ ನೀವು ಪ್ರತಿಪಾದಿಸುವುದನ್ನು ಸ್ವೀಕರಿಸಲು ಬಹಳ ಕಷ್ಟಕರವಾಗಿದೆ. (42:13)
>
> ಅಲ್ಲಾಹನೊಂದಿಗೆ ತಾಳ್ಮೆಯಿಂದಿರಿ, ಅವನ್ನು ಲಕ್ಷಿಸಿ, ಬದ್ಧತೆಗಳನ್ನು ಎತ್ತಿಹಿಡಿಯಿರಿ ಮತ್ತು ಮೂರ್ತಿ ಆರಾಧನೆಗೆ ಅಧೀನರಾಗಬೇಡಿರಿ. ದೀನನ್ನು ಧರ್ಮಗಳನ್ನಾಗಿ (ಶಿಯ'ಅನ್) ಬದಲಾಯಿಸಿದವರ ಜೊತೆಗೂಡಬೇಡಿರಿ. ಪ್ರತಿಯೊಂದು ಪಂಗಡವೂ ಅವರಲ್ಲಿರುವುದರಲ್ಲಿ ಸಂತೋಷವಾಗಿದ್ದಾರೆ. (30:31-32)

ಸೂರ 6, ವಚನ 65ನ್ನು ಓದಿದರೆ *ಶೀ'ಅ* ಎಂಬ ಪದವನ್ನು ಸುಲಭವಾಗಿ ಅರ್ಥೈಸಬಹುದು:

> ಹೇಳಿರಿ: "ನಿಮಗೆ ನಿಮ್ಮ ಮೇಲ್ಭಾಗದಿಂದ ಅಥವಾ ನಿಮ್ಮ ಪಾದದ ಕೆಳಗಿನಿಂದ ಯಾವುದಾದರೂ ಯಾತನೆಯನ್ನು ಎರಗಿಸಲಿಕ್ಕೂ ಅಥವಾ ನಿಮ್ಮನ್ನು ಧರ್ಮಗಳನ್ನಾಗಿ (ಶಿಯ'ಅನ್) ವಿಭಾಗಿಸಿ, ಒಂದು ಪಂಗಡಕ್ಕೆ ಇನ್ನೊಂದು ಪಂಗಡದ ಬಲದ ಸವಿಯನ್ನು ಉಣಿಸಲಿಕ್ಕೂ ಅವನು ಶಕ್ತನಾಗಿದ್ದಾನೆ. ಅವರು ವಿವೇಚಿಸಲೆಂದು ನಾವು ನಿದರ್ಶನಗಳನ್ನು ಹೇಗೆ ವಿವರಿಸುತ್ತೇವೆಂದು ಅವರು ಗಮನಿಸಲಿ" (6:65)

ಅನುವಾದಕರು *ಶೀ'ಅ* ಎಂಬ ಪದವು "ಪಂಗಡ ಅಥವಾ ಪಂಥ"ವನ್ನು ಸೂಚಿಸುತ್ತದೆ ಎಂದೆನ್ನುತ್ತಾರೆ. ಅಲ್ಲಾಹನಿಗೆ ಪಂಗಡಗಳಲ್ಲಿ ಆಸಕ್ತಿಯಿದೆ ಎಂದು ನನಗನಿಸುವುದಿಲ್ಲ. ಏಕೆಂದರೆ, ಪ್ರತಿಯೊಂದು ಧರ್ಮವು ತಮ್ಮ ಭಿನ್ನಾಭಿಪ್ರಾಯಗಳ ಕಾರಣದಿಂದ ಅನೇಕ "ಪಂಗಡ"ಗಳನ್ನು ಸೃಷ್ಟಿಸುತ್ತದೆ ಹಾಗೂ ಅವುಗಳು ಹೆಚ್ಚಿನ ವೈರತ್ವಕ್ಕೆ ಹಾದಿ ತೋರಿಸುತ್ತದೆ ಎಂದು ಅಲ್ಲಾಹನು ಅರಿತಿರುತ್ತಾನೆ. ಆದರೆ, ಧರ್ಮಗಳೆಂಬುವುದು ಒಂದು ದೊಡ್ಡ ಸನ್ನಿವೇಶವಾಗಿದೆ. ಅದು ಗರಿಷ್ಠ ವಿಭಜನೆಯ ಹಾಗೂ ಅಪಾರ ದ್ವೇಷದ ಪರಿಣಾಮವನ್ನು ಹೊಂದಿವೆ. ತಮ್ಮ ದಬ್ಬಾಳಿಕೆ ಅಥವಾ ದುಷ್ಕೃತ್ಯಗಳ ಸಲುವಾಗಿ ಅವರನ್ನು ವಿಭಜಿರುವುದು ಅಲ್ಲಾಹನ ಇಚ್ಛೆಯೇ ಆಗಿದೆ. ಜನರನ್ನು ವಿಭಜಿಸುವುದು ಮತ್ತು ಅವರನ್ನು ದುರ್ಬಲರಾಗಿಸುವುದು ಧರ್ಮದ ಉದ್ದೇಶವೆಂದು ಅಲ್ಲಾಹನು ನಮಗೆ ಕಲಿಸುತ್ತಾನೆ. ಫಿರ್‌ಔನ್ ತಾನು ದೇವನೆಂದು ಘೋಷಿಸಿದ್ದನ್ನು 28:38 ರಲ್ಲಿ ಕಾಣಬಹುದು. ಹಾಗೆ ಮಾಡುವುದರ ಮೂಲಕ ಅವನು ಧರ್ಮ ಅಥವಾ *ಶೀ'ಅ* ವನ್ನು ಸೃಷ್ಟಿಸಿದನು – ಅದರಲ್ಲಿ ಮಹಾ ಕುತಂತ್ರವು ಅಡಗಿತ್ತು.

> ನಿಶ್ಚಯವಾಗಿಯೂ ಫಿರ್‌ಔನ್ ಭೂಮಿಯ ಮೇಲೆ ಕ್ರೂರನಾಗಿದ್ದನು. ಅದರ ನಿವಾಸಿಗಳನ್ನು ಧರ್ಮಗಳನ್ನಾಗಿಸಿ (ಶಿಯ'ಅನ್) ಅವುಗಳಲ್ಲಿ ಒಂದು ಗುಂಪನ್ನು ದುರ್ಬಲಗೊಳಿಸಿದನು (28:4)

ಫಿರ್‌ಔನ್ ಪಂಗಡಗಳನ್ನು ರಚಿಸಲಿಲ್ಲ ಬದಲಿಗೆ ಅವನು ಸೃಷ್ಟಿಸಿದ ಧರ್ಮದಲ್ಲಿ ತನ್ನನ್ನು ದೇವನನ್ನಾಗಿ ಸಂಸ್ಥಾಪಿಸಿದನು.

ಈ ಪ್ರಪಂಚದಲ್ಲಿ ಎಲ್ಲಾ ಧರ್ಮಗಳು ಒಂದೇ ಸಮಾನ. ಧರ್ಮದ ನಿಷ್ಠಾವಂತರು ಒಟ್ಟುಸೇರುತ್ತಾರೆ. ಒಂದು ಸಾಮಾನ್ಯ ಧ್ಯೇಯಕ್ಕೆ ಸಾರ್ವಜನಿಕ ಗುಂಪುಗಳನ್ನು ರೂಪಿಸುತ್ತಾರೆ. ಅವರು ವಿವಿಧ ಮೂರ್ತಿಗಳ ಆಕಾರಗಳಾದ ಗೋಡೆ, ಶಿಲುಬೆ, ನಕ್ಷತ್ರ, ಅರ್ಧಚಂದ್ರ, ಚೌಕ ಮನೆ ಅಥವಾ ಇತರ ಆಕೃತಿಗಳಿಗೆ ವಿಧಿವಿಧಾನಗಳ ಮೂಲಕ ಪ್ರಾರ್ಥನೆ ಮತ್ತು ಆರಾಧನೆಗಳನ್ನು ಸಲ್ಲಿಸುತ್ತಾರೆ. ಸ್ವತಃ ತಮ್ಮ ಅಸ್ತಿತ್ವದಲ್ಲಿ ನಿಜವಾದ ಅಲ್ಲಾಹನಿಗೆ ಬದ್ಧವಾಗಿರುವ ವಸ್ತುಗಳಿಂದ ಈ ಮೂರ್ತಿಗಳನ್ನು ನಿರ್ಮಿಸಲಾಗುತ್ತದೆ. ಕುರ್‌ಆನನ್ನು ಸಂಬಂಧಿಸಿದಂತೆ, ಧರ್ಮ ಮತ್ತು ದೀನಿನ ನಡುವಿನ ವ್ಯತ್ಯಾಸದ ವ್ಯಾಪ್ತಿ ಇದಾಗಿದೆ.

ಉದಾಹರಣೆಗೆ, ಉತ್ತಮ ಹಾಗೂ ಕಾನೂನುಬದ್ಧ ಆಹಾರಗಳನ್ನು ನಿಯಮಿಸುವಾಗ, ತಾನು ದೀನನ್ನು ಪರಿಪೂರ್ಣಗೊಳಿಸಿದನೆಂದು ಅಲ್ಲಾಹನು ಘೋಷಿಸುತ್ತಾನೆ. ಅವನು ಹೇಳುತ್ತಾನೆ: '*ಇಂದು ನಾನು ನಿಮಗೆ ದೀನನ್ನು ಪರಿಪೂರ್ಣಗೊಳಿಸಿದೆ ಮತ್ತು ನಿಮ್ಮ ಮೇಲೆ ನನ್ನ ಕೃಪೆಯನ್ನು ಪೂರ್ಣಗೊಳಿಸಿದೆ ಮತ್ತು ಇಸ್ಲಾಮನ್ನು (ಶಾಂತಿಪರತೆ) ದೀನಾಗಿ ಶಾಸನಗೊಳಿಸಿದೆ*'. ಇದನ್ನು ಪ್ರಸ್ತಾಪಿಸಿರುವುದು ಆಹಾರದ ವಿಷಯದ ನಡುವೆಯಾಗಿದೆ.

ದೀನ್ ಎಂಬ ಪರಿಕಲ್ಪನೆಯನ್ನು ಅಕ್ಷರಶಃ ತೆಗೆದುಕೊಂಡು ಹಾಗೂ ಧರ್ಮ ಎಂಬ ಪದದೊಂದಿಗೆ ಬದಲಿ ಮಾಡಿದರೆ, ಈ ಶಾಸನವು ಅಸಂಬದ್ಧವಾಗುತ್ತದೆ. 26:195-196 ರಲ್ಲಿ ಕುರ್‌ಆನ್ ಹೇಳುತ್ತದೆ: '*ಇದು ಸ್ಪಷ್ಟ*

ಅರಬಿ ಭಾಷೆಯಲ್ಲಿ ಬಂದಿದೆ ಮತ್ತು ಇದು ಹಿಂದಿನ ಗ್ರಂಥಗಳಲ್ಲಿರುವವುಗಳೇ ಆಗಿವೆ. ಅಂದರೆ, ಕುರ್‌ಆನ್ ಗ್ರಂಥವು, ಹಿಂದಿನ ಎಲ್ಲಾ ಗ್ರಂಥಗಳ ಜೊತೆಗೆ ಹೊಂದಾಣಿಕೆ ಇರುವಂತಹುದಾಗಿದೆ ಅಥವಾ ಅಲ್ಲಾಹನಿಂದ ಅವತೀರ್ಣಗೊಂಡ ಎಲ್ಲಾ ಗ್ರಂಥಗಳ ಸಂದೇಶವು ಒಂದೇ ಆಗಿದೆ. ಆಹಾರದ ಮೇಲೆ ಒಪ್ಪಂದವನ್ನು ವಿವರಿಸಿದ ನಂತರ ಅಲ್ಲಾಹನು ತನ್ನ ಸೇವಕರಿಗೆ ದೀನನ್ನು ಪರಿಪೂರ್ಣಗೊಳಿಸಿದನು. ಸತ್ತ ಪ್ರಾಣಿ, ಹಂದಿಯ ಮಾಂಸ, ರಕ್ತ, ಧಾರುಣವಾಗಿ ಕೊಲ್ಲಲ್ಪಟ್ಟ ಯಾವುದೇ ಪ್ರಾಣಿ ಮತ್ತು ಮೂರ್ತಿಗಳಿಗೆ ಅರ್ಪಿಸಲ್ಪಟ್ಟಂತಹ ಆಹಾರಗಳನ್ನು ಹೊರತು ಪಡಿಸಿ ಅಲ್ಲಾಹನು ಈ ಲೋಕದಲ್ಲಿ ಬೇರೆ ಯಾವುದೇ ಆಹಾರವನ್ನು ನಿಷೇಧಿಸಿಲ್ಲ. ಇದು ಅವನ ವ್ಯವಸ್ಥೆಯಲ್ಲಿ ಅಲ್ಲಾಹನು ಶಾಸನಗೊಳಿಸಿದ ದೀನ್ (ಅಥವಾ ಕ್ರಮಬದ್ಧ ರೀತಿ) ಆಗಿದೆ. ಅದಕ್ಕೆ ಯಾವುದೇ ನಿಷೇಧವನ್ನು ಯಾರೂ ಸೇರಿಸಬಾರದು. ಇದರಲ್ಲಿ ಧಾರ್ಮಿಕವಾಗಿ ಏನೂ ಇಲ್ಲ. ಇದು ಕೇವಲ ಒಂದು ಉತ್ತಮ ಆರೋಗ್ಯಪಾಲನೆಯ ಅಥವಾ ನೈರ್ಮಲ್ಯವನ್ನು ಆಧರಿಸಿದ ಆಹಾರ ನಿರ್ಬಂಧವಾಗಿದೆ.

> ನಿಮಗೆ ನಿಷಿದ್ಧಗೊಳಿಸಿರುವುದು ಇವುಗಳಾಗಿವೆ: ಸ್ವತಃ ಸತ್ತ ಪ್ರಾಣಿಗಳ ಮಾಂಸ, ರಕ್ತ, ಹಂದಿಯ ಮಾಂಸ, ಅಲ್ಲಾಹೇತರಿಗೆ ಅರ್ಪಿಸಲ್ಪಟ್ಟಂತಹವುಗಳು ಮತ್ತು ಉಸಿರುಕಟ್ಟಿ, ಒಂದು ವಸ್ತುವಿನಿಂದ ಹೊಡೆಯಲ್ಪಟ್ಟು, ಎತ್ತರದಿಂದ ಬಿದ್ದು ಮತ್ತು ಘರ್ಷಿಸಲ್ಪಟ್ಟು ಸತ್ತಂತಹ (ಪಾಣಿ), ಮತ್ತು ಕ್ರೂರಮೃಗದಿಂದ (ಭಾಗಶಃ) ತಿನ್ನಲ್ಪಟ್ಟಂತಹ (ಪ್ರಾಣಿ) ಆದರೆ ಅದನ್ನು ನೀವು ಜೀವಂತವಾಗಿ ಪಾರುಮಾಡಿದರೆ ಇದಕ್ಕೆ ಹೊರತಾಗಿದೆ, ಮತ್ತು ಜೂಜಾಟಕ್ಕೆ ವಿನಿಯೋಗಿಸಿದಂತಹ (ಪ್ರಾಣಿ) ಮತ್ತು ಎರಕದ ಮೂಲಕ ವಿಂಗಡಿಸಲಾದ (ಪ್ರಾಣಿ) - ಇವುಗಳು ಅಸಹ್ಯತೆಗಳಾಗಿವೆ. ಇಂದು, ಸತ್ಯನಿಷೇಧಿಗಳು ನಿಮ್ಮ ದೀನಿನ ಬಗ್ಗೆ ಹತಾಶರಾಗಿದ್ದಾರೆ. ಅವರನ್ನು ಭಯಪಡಬೇಡಿರಿ ಬದಲಿಗೆ ನನ್ನನ್ನು ಭಯಪಡಿರಿ. ಇಂದು, ನಾನು ನಿಮಗೆ ದೀನನ್ನು ಪರಿಪೂರ್ಣಗೊಳಿಸಿದೆ ಮತ್ತು ನಿಮ್ಮ ಮೇಲೆ ನನ್ನ ಕೃಪೆಯನ್ನು ಪೂರ್ಣಗೊಳಿಸಿದೆ ಮತ್ತು ಇಸ್ಲಾಮನ್ನು (ಶಾಂತಿಪರತೆ) ನಿಮಗೆ ದೀನಾಗಿ ಶಾಸನಗೊಳಿಸಿದೆ. (5:3)

ಅಲ್ಲಾಹನು ಆಜ್ಞಾಪಿಸಿದ್ದನ್ನು ಪಾಲಿಸಲು ಸರಳ ಮತ್ತು ಸ್ಪಷ್ಟ ಶಬ್ದಗಳಲ್ಲಿ ವಿಶ್ವಾಸಿಗಳಿಗೆ ಸೂಚಿಸುತ್ತಾ, ದೀನ್ ಎಂಬ ಪದವನ್ನು ಮೇಲಿನ ವಚನದಲ್ಲಿ ಮೂರು ಸಲ ಉಲ್ಲೇಖಿಸಲಾಗಿದೆ. ಕೊಳೆತ ಅಥವಾ ಸತ್ತ ಪ್ರಾಣಿಗಳನ್ನು ತಿನ್ನದಿರುವುದರಲ್ಲಿ ಏನೂ ಧಾರ್ಮಿಕತೆ ಇಲ್ಲ. ಅದು ನಿಮ್ಮನ್ನು ಸೃಷ್ಟಿಸಿದವನು ನಿರ್ದೇಶಿಸಿದ ಒಂದು ಕ್ರಮಬದ್ಧ ರೀತಿಯಾಗಿದೆ ಮತ್ತು ಅದು ನಿಮ್ಮ ಕ್ಷೇಮವನ್ನು ಉದ್ದೇಶಿಸಿದೆ. ಈ ನಿರ್ದೇಶನವು ಇದಕ್ಕೆ ಮುಂಚಿನ ಎಲ್ಲಾ ಇತರ ಆಹಾರ ಕ್ರಮದ ನಿರ್ಬಂಧಗಳನ್ನು ಚ್ಯುತಿಪಡಿಸುತ್ತದೆ. **ಕೇವಲ ಅಲ್ಲಾಹನ ಸೇವೆ ಮಾಡುವ ವ್ಯಕ್ತಿಗಳಾಗಬೇಕಾದರೆ, ಅವನಿಂದ ನಿರ್ದೇಶಿಸಲ್ಪಪಟ್ಟ ಮಿತಿಗಳನ್ನು ಮಾತ್ರ ಪ್ರಾಮಾಣಿಕವಾಗಿ ಅನುಸರಿಸ ಬೇಕಾಗಿದೆ. ಅದುವೇ ಪರಿಪೂರ್ಣ ಇಸ್ಲಾಮೀ ಜೀವನ ಕ್ರಮದ ಸತ್ವವಾಗಿದೆ.**

> ನಾವು ಈ ಗ್ರಂಥವನ್ನು ನಿಮ್ಮ ಕಡೆಗೆ ಪರಮ ಸತ್ಯವಾಗಿ ಅವತೀರ್ಣಗೊಳಿಸಿದ್ದೇವೆ. ಆದ್ದರಿಂದ ಕೇವಲ ಅಲ್ಲಾಹನ ಸೇವೆಯನ್ನು ಮಾಡಿರಿ. ಜೀವನ ರೀತಿಯಲ್ಲಿ (ದೀನಿನಲ್ಲಿ) ಅವನಿಗೆ ಪ್ರಾಮಾಣಿಕರಾಗಿರಿ. (39:2)

ಅವನನ್ನು ಸೇವೆ ಮಾಡುವುದೆಂದರೆ, ದೀನಿನಲ್ಲಿ ಅವನಿಂದ ಸಮ್ಮತಿಸಲಾದ, ನಿರ್ದೇಶಿತ ಮಿತಿಗಳನ್ನು ವಿಧೇಯಪೂರ್ವಕವಾಗಿ ಅಂಗೀಕರಿಸುವುದಾಗಿದೆ. ಅದು ಅಷ್ಟೇ ಕಲ್ಪಿಸುತ್ತದೆ. ಬಹು ಸರಳ. ಅಲ್ಲಾಹನು ಬಣ್ಣ ಅಥವಾ ಭಾಷೆಯನ್ನು ಲೆಕ್ಕಿಸದೆ, ವಿಶ್ವದಾದ್ಯಂತ ತನ್ನ ಸೇವಕರಿಗೆ ತನ್ನ ಪದಗಳ ಪರಿಕಲ್ಪನೆಯನ್ನು, ಈ ಸರಳ ಶಾಸನದಲ್ಲಿ ಬಲಪಡಿಸಿದ್ದಾನೆ. **ಇಸ್ಲಾಂ ಸರಳವಾಗಿದೆ, ಕುರ್‌ಆನ್ ಸರಳವಾಗಿದೆ.** ಆದಾಗ್ಯೂ, ಇಲ್ಲಿ 'ಸರಳ' ಎಂಬುವುದು 'ಸುಲಭ' ಅಲ್ಲ ಎಂದು ಪ್ರತ್ಯೇಕವಾಗಿ ಮನದಟ್ಟು ಮಾಡಬೇಕು. ಹೆಚ್ಚುವರಿ ನಿಷೇಧಗಳ ಕೂಟವನ್ನು ಅನುಮೋದಿಸುವ ಮೂಲಕ, ಅಲ್ಲಾಹನ ಶತ್ರುಗಳು ವಿರಮಿಸದೆ, ಪುರುಷರು ಮತ್ತು ಮಹಿಳೆಯರನ್ನು ಅವನ ಮಾರ್ಗದಿಂದ ದಿಕ್ಕುತಪ್ಪಿಸಲು ಪ್ರಯತ್ನಿಸುತ್ತಿರುತ್ತಾರೆ. ಈ ಬಿಕ್ಕಟ್ಟನ್ನು ನಿವಾರಿಸುವ ಸಲುವಾಗಿ ನಾವು ಪ್ರಾಮಾಣಿಕರಾಗಿ ಅವನಿಗೆ ಮಾತ್ರ ಬದ್ಧರಾಗಿರಲು ಹೇಳಲಾಗಿದೆ:

> ಸಹನೆ ಹಾಗೂ ಬದ್ಧತೆಯ ಮೂಲಕ ಸಹಾಯವನ್ನು ಯಾಚಿಸಿರಿ. ತಮ್ಮ ಪ್ರಭುವನ್ನು ಭೇಟಿಮಾಡಬೇಕಿದೆ ಹಾಗೂ ಅವನ ಬಳಿಗೆ ಅಂತಿಮವಾಗಿ ಹಿಂದಿರುಗಲಿದೆ ಎಂದು ಭಯಪಡುವವರನ್ನು ಹೊರತು ಪಡಿಸಿದರೆ, ಇದು ವಾಸ್ತವವಾಗಿಯೂ ಕಷ್ಟಕರ ಕಾರ್ಯವಾಗಿದೆ. (2:45-46)

ನಾನು ಒತ್ತಿಹೇಳುತ್ತಿರುವ ನನ್ನ ನಿಲುವು ಏನೆಂದರೆ, ***ಇಸ್ಲಾಂ ಧರ್ಮ*** ಎಂಬುವುದಿಲ್ಲ. ಆದರೆ ನಿಸ್ಸಂದೇಹವಾಗಿಯೂ, ಅಲ್ಲಾಹನು ಆಜ್ಞಾಪಿಸಿದ ಒಂದು ಕ್ರಮಬದ್ಧ ಜೀವನ ರೀತಿಯಾದ **ಶಾಂತಿಪರತೆ**ಯು ಇದೆ. ಅವನ ಸೇವಕರಾಗಿ ನಮ್ಮ ಜವಾಬ್ದಾರಿಯು - ಅವನು ನಿಗದಿಸಿರುವ ರೀತಿಯನ್ನು ಮಾತ್ರ ಪಾಲಿಸುತ್ತಾ ಅವನ ಇಚ್ಛೆಗೆ ಸಮ್ಮತಿಸುವುದಾಗಿದೆ. ಈಗ ಇಸ್ಲಾಮಿನ ಈ ಅವಶ್ಯಕತೆಗಳ ಹಿಂದೆ ಇರುವ ಯುಕ್ತಿಯನ್ನು ಅನ್ವೇಷಣೆ ಮಾಡೋಣ:

- ಜೀವನ ಮತ್ತು ಮರಣವನ್ನು ಅನುದಾನಿಸುವವನು ಅಲ್ಲಾಹನಾಗಿದ್ದಾನೆ.
- ಸೃಷ್ಟಿಯನ್ನು ಪರಿಪೂರ್ಣ ಸಮತೋಲನದಲ್ಲಿ ಇಡುವವನು ಅಲ್ಲಾಹನಾಗಿದ್ದಾನೆ.
- ನಮಗೆ ಸಂತೋಷ ಅಥವಾ ದುಃಖಃವಸ್ಥೆಯನ್ನು ಕೊಡುವವನು ಅಲ್ಲಾಹನಾಗಿದ್ದಾನೆ.
- ಅಲ್ಲಾಹನು ಮಾನವನನ್ನು ದ್ರವದ ಒಂದು ಹನಿಯಿಂದ, ನಂತರ ಅಂಟಿಕೊಳ್ಳುವ ಒಂದು ವಸ್ತುವಿನಿಂದ ಗಂಡು ಮತ್ತು ಹೆಣ್ಣಾಗಿ ಸೃಷ್ಟಿಸಿದನು. ನಂತರ ಒಂದು ಶಿಶುವಾಗಿ ಜೀವನ ನೀಡಿದನು. ನಂತರ, ಕೆಲವರು ಪೂರ್ಣ ಶಕ್ತರಾಗಿ ಬೆಳೆದು ವೃದ್ಧತೆಗೆ ತಲುಪುತ್ತಾರೆ ಮತ್ತು

ಕೆಲವರು ಬೇಗನೆ ಸಾಯುತ್ತಾರೆ. ಅಲ್ಲಾಹನೇ ನಮ್ಮ ಜೀವನ ಮತ್ತು ಸಾವಿನ ಸಮಯವನ್ನು ನಿರ್ಧರಿಸುತ್ತಾನೆ, ಬೇರೆ ಯಾರೂ ಅಲ್ಲ.

- ನಮ್ಮನ್ನು ಶ್ರೀಮಂತ ಅಥವಾ ಬಡವರಾಗಿ ಮಾಡುವುದು ಅಲ್ಲಾಹನಾಗಿದ್ದಾನೆ.
- ಎಲ್ಲವನ್ನೂ ಸರಿಯಾದ ಅಳತೆಯಲ್ಲಿ ನೀಡುವವನು ಅಲ್ಲಾಹನಾಗಿದ್ದಾನೆ.
- ಆಕಾಶಗಳ ಮತ್ತು ಭೂಮಿಯ ಸಾಮ್ರಾಜ್ಯವು ಅಲ್ಲಾಹನಿಗೆ ಸೇರಿದೆ.
- ಅಲ್ಲಾಹನಲ್ಲದೇ ಬೇರೆ ಯಾವುದೇ ದೇವರಿಲ್ಲ.

ಈ ಜಗತ್ತಿನಲ್ಲೂ, ಮರಣಾನಂತರವೂ ಶಾಂತಿಯುತ ಜೀವನವನ್ನು ಆನಂದಿಸಲು, ಮಾನವಕುಲಕ್ಕೆ ಅವನ ಕರುಣೆಯಿಂದ ಅವನ ಮಾರ್ಗದರ್ಶನವನ್ನು ಬಹಿರಂಗಪಡಿಸಿದನು. ಅವನ ಇಚ್ಛೆಗೆ ಸಮ್ಮತಿಸುವವರು ಹಾಗೂ ಜಾಗರೂಕರಾಗಿರುವವರು ಮತ್ತು ಕೇವಲ ಅವನಲ್ಲಿ ಮಾತ್ರ ವಿಶ್ವಾಸವಿರಿಸುವವರು, ಎಂದಿಗೂ ಮುರಿಯದ ಒಂದು ಬಂಧವನ್ನು ಭದ್ರವಾಗಿ ಹಿಡಿದುಕೊಂಡಿದ್ದಾರೆ. ಮಾನವಕುಲಕ್ಕೆ ಅವನ ಸಂದೇಶವು ಇದಾಗಿದೆ:

> ಓ ಮಾನವಕುಲವೇ, ನೀವು ಅನುಸರಣೆಯುಳ್ಳವರಲ್ಲಿ ಆಗಲು, ನಿಮ್ಮನ್ನೂ, ನಿಮ್ಮ ಪೂರ್ವಿಕರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವಿನ ಸೇವೆ ಮಾಡಿರಿ. (2:21)

> ಜಿನ್ನ್'ಗಳನ್ನು ಮತ್ತು ಮಾನವರನ್ನು ನನ್ನನ್ನು ಮಾತ್ರ ಸೇವೆ ಮಾಡುವ ಸಲುವಾಗಿ ಅಲ್ಲದೆ ನಾನು ಸೃಷ್ಟಿಸಿಲ್ಲ (51:56)

ಅಲ್ಲಾಹನನ್ನು ಪ್ರಪಂಚದ ಒಡೆಯನಾಗಿ ಒಪ್ಪಿಕೊಳ್ಳದೆ ಅವನನ್ನು ನಿರಾಕರಿಸುವ ಜನರೂ ಇದ್ದಾರೆ. ಅವನ ಅಸ್ತಿತ್ವ ಮತ್ತು ಸಾಮರ್ಥ್ಯವನ್ನು ನಾವು ಎಷ್ಟೇ ಕಠಿಣವಾಗಿ ಅಲ್ಲಗಳೆಯಲು ಪ್ರಯತ್ನಿಸಿದರೂ – ಅವನು ಜೀವನ ನೀಡುತ್ತಾನೆ ಮತ್ತು ಅದನ್ನು ಅವನು ಹಿಂದಕ್ಕೆ ತೆಗೆದುಕೊಳ್ಳುತ್ತಾನೆ ಎಂಬ ವಾಸ್ತವಿಕತೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅಸ್ತಿತ್ವದಲ್ಲಿರುವ ಎಲ್ಲವನ್ನೂ ಸೃಷ್ಟಿಸಿ, ಅದನ್ನು ಪರಿಪೂರ್ಣ ಸಮತೋಲನದಲ್ಲಿ ನಿರ್ವಹಿಸುತ್ತಿರುವ, ಕಾಣದಂತಹ ಒಂದು ಪ್ರಬಲ ಶಕ್ತಿ ಎಲ್ಲೋ ಇದೆಯೆಂದು, ಮನುಷ್ಯರಾಗಿ ನಮ್ಮ ನೈಸರ್ಗಿಕ ಸ್ವಭಾವವು ನಮಗೆ ಹೇಳುತ್ತದೆ. ದೇವನು ಒಬ್ಬನೆ, ಅವನು ಎಲ್ಲಾ ಜನರಿಗೂ ಸಾಮಾನ್ಯನಾಗಿದ್ದಾನೆ ಎಂದು ಕುರ್'ಆನ್ ನಮಗೆ ಹೇಳುತ್ತದೆ. ಹಾಗೆಯೇ, ದೇವನೆಂಬುವುದೇ ಇಲ್ಲ ಎನ್ನುವ ಕೃತಘ್ನ ಜನರೂ ಇದ್ದಾರೆ. ಏಕೆಂದರೆ, ಅವರು ಭವ್ಯ ವಿನ್ಯಾಸದ ಸಂಕೀರ್ಣತೆಯ ಕೆಲವೊಂದು ಸರಳ ಪ್ರಕ್ರಿಯೆಗಳ ಪೂರ್ವ ತಪ್ಪುಗ್ರಹಿಕೆಗಳನ್ನು ಆವಿಷ್ಕರಿಸಿ, ನಂತರ ದೇವನೆಂಬುವುದೂ ತಪ್ಪುಗ್ರಹಿಕೆ ಎಂದು ಭಾವಿಸಿದ್ದಾರೆ. ವಿಚಿತ್ರವೆಂದರೆ, ಅವರು 'ಯಾವುದೋ ಒಂದು ಶಕ್ತಿ' ಅಥವಾ 'ಉನ್ನತ ಬುದ್ಧಿವಂತ ಶಕ್ತಿ' ಎಂಬುವುದು ಇದೆ ಎಂದು ಒಪ್ಪುತ್ತಾರೆ, ಆದರೆ ಅದನ್ನು ದೇವನೆಂದುಕೊಳ್ಳಲು ಬಯಸುವುದಿಲ್ಲ. ಅವರಲ್ಲಿ ಹಲವರು, ಧರ್ಮದ

ಸಿದ್ಧಾಂತದ ಮತ್ತು ಎಲ್ಲಾ ಧರ್ಮಗಳು ಅನೇಕ ರೀತಿಗಳಲ್ಲಿ ಮೂರ್ತೀಕರಿಸಿದ ದೇವರ ವಿರುದ್ಧ ದಂಗೆ ಏಳುತ್ತಾರೆ. ಅವರ ಈ ತಪ್ಪು ತಿಳುವಳಿಕೆಯೊಂದಿಗೆ ಅವರು ಸರಿಯಾಗಿದ್ದಾರೆ. ಅದೃಶ್ಯ ಸೃಷ್ಟಿಕರ್ತನನ್ನು ನಂಬುವುದನ್ನು ವಿವೇಚನಾರಹಿತ ಕ್ರಿಯೆಯೆಂದು ಪರಿಗಣಿಸುತ್ತಾರೆ. ಆದಾಗ್ಯೂ, ಅವರಲ್ಲಿ ಬಹುಪಾಲು ಜನರು, ಎಲ್ಲಾ ವಸ್ತುವಿನ ಅಸ್ತಿತ್ವವನ್ನು ಸೃಷ್ಟಿಕರ್ತನಿಗೆ ಸೂಚಿಸುವ ವಿವೇಕತೆಯ ಪ್ರಶ್ನೆಯನ್ನು ಉದ್ದೇಶಪೂರ್ವಕವಾಗಿ ನಿರಾಕರಿಸುತ್ತಾರೆ, ಉದಾಹರಣೆಗೆ: ಭೌತಶಾಸ್ತ್ರದ ಪರಿಧಿಯನ್ನು ತಲುಪಿದವರು.

ಸೃಷ್ಟಿಕರ್ತನ ವೈಭವದ ಕ್ಷಣಿಕ ದರ್ಶನವನ್ನು ಕೇವಲ ಮೆಚ್ಚುವುದು ಹಾಗೂ ಅದರ ಸಾರವನ್ನು ಅರಿತು ಅವನ ಸೃಷ್ಟಿಗಳ ಬಗ್ಗೆ ಪರ್ಯಾಲೋಚನೆ ನಡೆಸುವುದರ ನಡುವೆ ಖಂಡಿತವಾಗಿಯೂ ವ್ಯತ್ಯಾಸವಿದೆ. ನಮಗೆ ಕುರ್‌ಆನಿನಲ್ಲಿ ಈ ಅತ್ಯುನ್ನತ ಅದೃಷ್ಟ ಶಕ್ತಿಯ ಅಸ್ತಿತ್ವದ ಬಗ್ಗೆ ಸ್ವಲ್ಪ ಮಾಹಿತಿ ನೀಡಲಾಗಿರುವುದು ನಮ್ಮ ಭಾಗ್ಯವಾಗಿದೆ. ಆ ಪರಮಶ್ರೇಷ್ಠನನ್ನು ಸಂಪೂರ್ಣವಾಗಿ ಅರಿತುಕೊಳ್ಳಲು ನಮಗೆ ಸಾಧ್ಯವಿಲ್ಲ, ಆದರೂ ಭೂಮಿ ಆಕಾಶಗಳ ಮತ್ತು ಸಮುದ್ರದಲ್ಲಿರುವ ಎಲ್ಲವನ್ನು ತಿಳಿಯುವ ಶಕ್ತಿ ಅವನು ಹೊಂದಿದ್ದಾನೆ ಎಂದು ನಾವು ತಿಳಿದುಕೊಳ್ಳಬೇಕು. ಅವನು ಅರಿಯದೇ ಒಂದು ಎಲೆಯು ಸಹ ಬೀಳುವುದಿಲ್ಲ, ಮಣ್ಣಿನಲ್ಲಿ ಒಂದು ಬೀಜವು ಕೂಡಾ ಮೊಳಕೆಯೊಡೆಯುವುದಿಲ್ಲ. ನಾವು ಆಕಾಶ ಮತ್ತು ಭೂಮಿಯಲ್ಲಿರುವ ದೃಷ್ಟಾಂತಗಳನ್ನು ಮಾತ್ರ ನೋಡಲು ಸಮರ್ಥರಾಗಿದ್ದೇವೆ. ನೀರಿನ ಚಕ್ರದ ವ್ಯವಸ್ಥೆಯನ್ನು ಸೃಷ್ಟಿಸುವ ಮೂಲಕ ಆಕಾಶದಿಂದ ಶುದ್ಧ ಮತ್ತು ನಿರ್ಮಲ ನೀರನ್ನು ನೀಡುವುದರ ಮೂಲಕ, ತನ್ನ ಭವ್ಯವಾದ ವಿನ್ಯಾಸದಲ್ಲಿ ನಮಗೆ ಅವನ ಸಹಾನುಭೂತಿ ಹಾಗೂ ಕರುಣೆಯನ್ನು ವ್ಯಕ್ತಪಡಿಸಿದ್ದಾನೆ. ನೀರನ್ನು ಪ್ರತಿಯೊಂದು ಜೀವಿಯ ಅವಶ್ಯಕತೆಯಾಗಿ ಅಲ್ಲಾಹನು ಮಾಡಿದ್ದಾನೆಂದು 11:7 ರಲ್ಲಿ ಕುರ್‌ಆನ್ ಹೇಳುತ್ತದೆ. ಜೀವನ ನೀರಿನಿಂದ ಆರಂಭವಾಗುತ್ತದೆ ಮತ್ತು ಅದಿಲ್ಲದೆ ಈ ಗ್ರಹದಲ್ಲಿ ಯಾವುದಕ್ಕೂ ಬದುಕಲು ಸಾಧ್ಯವಿಲ್ಲವೆಂದು 'ದೇವನೆಂಬುವುದೇ ಇಲ್ಲ' ಎನ್ನುವವರೂ ಸೇರಿಸಿದಂತೆ, ವಿಜ್ಞಾನವೂ ಕೂಡ ಸಾಬೀತು ಪಡಿಸಿದೆ. ಶಾಖಗುರುತ್ವದ ನಿಖರ ಸಮತೋಲನದ ಮೂಲಕ ಅರಣ್ಯ ಮರಗಳ, ನದಿಗಳ ಹಾಗೂ ಸಮುದ್ರಗಳಿಂದ ಆವಿಯನ್ನು ಮೇಲಕ್ಕೆತ್ತಿ ಮೋಡಗಳನ್ನು ರಚಿಸುವ ಅವನ ಅದ್ಭುತವಾದ ನೀರಿನ ಚಕ್ರದ ವ್ಯವಸ್ಥೆಯ ಬಗ್ಗೆ ಮಾತ್ರ ಚಿಂತಿಸಿದರೆ ಸಾಕು, ಅವನ ಸೃಷ್ಟಿಸಾಮರ್ಥ್ಯದ ಆಳವನ್ನು ಸ್ವಲ್ಪಮಟ್ಟಿಗೆ ಊಹಿಸಬಹುದು. ಅವನ ಇತರ ವೈಶಿಷ್ಟ್ಯಗಳ ಪೈಕಿ - ಅವನು ಸಹಾನುಭೂತಿಯುಳ್ಳ, ಕರುಣಾಮಯ, ಶಕ್ತಿಯುತ ಚೈತನ್ಯ, ಪರಿಶುದ್ಧ, ಶಾಂತಿವಂತ ಮತ್ತು ಕಾತರಿಯಿರುವವನು; ಅವನ ಶ್ರೇಷ್ಠತೆ ಮತ್ತು ಸಾಮರ್ಥ್ಯಕ್ಕೆ ಸರಿಸಾಟಿಯಿಲ್ಲ; ಅವನು ಎಲ್ಲಾ ರೀತಿಯ ಘನತೆಗಿಂತ ಉನ್ನತನು - ಎಂದೆಲ್ಲಾ ಕುರ್‌ಆನ್ ಚಿತ್ರಿಸಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಅವನು ಭೂಮಿ ಮತ್ತು ಆಕಾಶಗಳಲ್ಲಿ ಪ್ರತಿಯೊಂದನ್ನು ಪರಿಪೂರ್ಣ ಸಮತೋಲನದಲ್ಲಿ ವಿನ್ಯಾಸಗೊಳಿಸುವ ಹಾಗೂ ರಚಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ.

ಕುರ್‌ಆನ್ ಹೇಳುತ್ತದೆ, ಭೂಮಿ ಆಕಾಶಗಳಲ್ಲಿ, ಅವುಗಳ ನಡುವೆ ಹಾಗೂ ಭೂಮಿಯ ಒಳಗಿರುವ ಪ್ರತಿಯೊಂದು ವಸ್ತುಗಳು ಪ್ರತಿ ಘಳಿಗೆಯಲ್ಲೂ ಅವನನ್ನು ವೈಭವೀಕರಿಸುತ್ತದೆ, ಆದರೆ ಅಹಂಕಾರ ಹೊಂದಿರುವ ಹಾಗೂ ಅವನ ಸೃಷ್ಟಿಗಳಲ್ಲಿ ಉತ್ತಮವಾದಂತಹ, ಒಂದು ಜೀವಿಯಾದ 'ಮಾನವ'ನನ್ನು

ಹೊರತುಪಡಿಸಿ. ಮಾನವಕುಲವು ಅವನನ್ನು ಯಾವತ್ತೂ ಗೌರವಿಸಲಿಲ್ಲ ಎಂದೂ ಕುರ್‌ಆನ್ ನಮಗೆ ಹೇಳುತ್ತದೆ. *"ನನಗೆ ನಿಮ್ಮ ಅವಶ್ಯಕತೆಯೇ ಇಲ್ಲ, ನನ್ನ ಅವಶ್ಯಕತೆ ನಿಮಗಿದೆ, ಆದ್ದರಿಂದ ವಿಶ್ವಾಸವಿಡಲು ಅಥವಾ ತಿರಸ್ಕರಿಸಲು ನೀವು ಸ್ವತಂತ್ರರಾಗಿದ್ದೀರಿ!"* ಎಂದು ನಮಗೆ ಹೇಳಲು ಅಲ್ಲಾಹನು ಮರೆಯಲಿಲ್ಲ.

ಅವನು ಪೂರ್ವ ದಿಕ್ಕಿನಿಂದ ಸೂರ್ಯನನ್ನು ಮೇಲೆ ತರುತ್ತಾನೆ, ಅವನನ್ನು ನಿರಾಕರಿಸಲು ಇಚ್ಛಿಸುವ ಅಥವಾ ಅವನ ಅಧಿಕಾರಕ್ಕೆ ಸವಾಲು ಹಾಕುವ ಯಾರಾದರೂ ಇದ್ದರೆ, ಅವರು ಆ ಸೂರ್ಯನನ್ನು ಪಶ್ಚಿಮ ದಿಕ್ಕಿನಿಂದ ಮೇಲೆ ತರಲಿ ಎಂದು ಹೇಳುತ್ತಾ ತನ್ನ ಶಕ್ತಿಯ ಒಂದು ಸರಳ ವಿವರಣೆಯನ್ನು 2:258 ರಲ್ಲಿ ಕೊಡುತ್ತಾನೆ. ಹಾಗಾಗಿ, ಇಂದು ಯಾರಾದರೂ ಈ ಸವಾಲನ್ನು ತೆಗೆದುಕೊಳ್ಳ ಬಯಸುವವರಿದ್ದಾರೆಯೇ? ಇಲ್ಲದಿದ್ದರೆ, ಅವರು ತಮ್ಮ ಅಹಂಕಾರವನ್ನು ಕೊಂದು, ವಿನಮ್ರರಾಗಿರುವವರ ಜೊತೆ ವಿನಮ್ರರಾಗಿಲು ಯತ್ನಿಸಬೇಕು.

ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಕಾನೂನಿಗೆ ಒಂದೇ ಒಂದು ನಿಯಮ ಅಥವಾ ವಿಧಿಯನ್ನು ಸೇರಿಸುವವರು ಸಹ ಅವನ ಪ್ರತ್ಯಕ್ಷ ಶತ್ರುಗಳಾಗಿದ್ದಾರೆ ಎಂದು ತಿಳಿಸಲಾಗಿದೆ. ಅಲ್ಲಾಹನು ಸಮ್ಮತಿಸಿರುದನ್ನು ಅವರು ತಿರಸ್ಕರಿಸಿದ್ದಾರೆ. ಈ ಹೆಚ್ಚಿನ ನಿರ್ಬಂಧಗಳನ್ನು ಅನುಸರಿಸುವವರು, ಅಲ್ಲಾಹನ ಆದೇಶಗಳನ್ನು ಸಮ್ಮತಿಸುವವರಲ್ಲ, ಬದಲಾಗಿ, ಅವರು ಶೈತಾನನಿಂದ ತಪ್ಪುದಾರಿಗೆಳೆಯಲ್ಪಟ್ಟಿದ್ದಾರೆ. ಕುರ್‌ಆನ್ ಈ ವಿಷಯದಲ್ಲಿ ಬಹಳ ಸ್ಪಷ್ಟವಾಗಿದೆ. ಅಲ್ಲಾಹನು ಹೇಳುತ್ತಾನೆ: 'ಅವರಂತೆ ನೀವು ಸಾಕ್ಷ್ಯ ಹೇಳಬೇಡಿರಿ ಮತ್ತು ಅವರ ಅಭಿಪ್ರಾಯಗಳನ್ನು ಅನುಸರಿಸಬೇಡಿರಿ'.[17]

> ಅಲ್ಲಾಹನು ಈ ವಸ್ತುಗಳನ್ನು[18] ನಿಷಿದ್ಧ ಗೊಳಿಸಿದ್ದಾನೆಂದು ಸಾಕ್ಷ್ಯ ಹೇಳುವ ನಿಮ್ಮ ಸಾಕ್ಷಿಗಳನ್ನು ತನ್ನಿರಿ. ಅವರು ಸಾಕ್ಷಿ ಹೇಳಿಬಿಟ್ಟರೂ ನೀವು ಅವರೊಂದಿಗೆ ಸಾಕ್ಷಿ ಹೇಳಬಾರದು. ಮತ್ತು ನಮ್ಮ ನಿದರ್ಶನಗಳನ್ನು ತಿರಸ್ಕರಿಸುವ, ಪರಲೋಕದಲ್ಲಿ ವಿಶ್ವಾಸವಿಡದ ಮತ್ತು ಅಲ್ಲಾಹನೊಂದಿಗೆ ತರ್ಕಿಸುವವರ ಅಭಿಲಾಷೆಯನ್ನು ಅನುಸರಿಸಬಾರದು. (6:150)

ಅಲ್ಲಾಹನಿಗೆ ಸಮ್ಮತಿಸುವವರು ತಮ್ಮ ಕರಾರುಗಳನ್ನು ಎತ್ತಿಹಿಡಿಯಬೇಕು ಹಾಗೂ ಅವನ ಗ್ರಂಥದಲ್ಲಿ ಅವನು ನಿರ್ಬಂಧಿಸಿದವುಗಳನ್ನು ಹೊರತುಪಡಿಸಿ, ಅವರಿಗೆ ರುಚಿಕರವಾದ ಯಾವುದೇ ಆಹಾರವನ್ನು ಅವರು ತಿನ್ನಬಹುದು.

---

[17] ಅಂದರೆ, ಕುರ್‌ಆನಿನ ಆಜ್ಞೆಗಿಂತ ಹೊರತಾಗಿರುವ ಆಹಾರದ ಮೇಲಿನ ಕಾನೂನನ್ನು ರಚಿಸುವವರು.

[18] ಯಹೂದಿಯರು *ಕೋಶರ್*‌ನ್ನು ಪರಿಚಯಿಸಿದರು. ಅರಬೀ ಧಾರ್ಮಿಕರು ಕುರ್‌ಆನ್ ತಿರಸ್ಕರಿಸಿದರು ಹಾಗೂ ಯಹೂದಿಯರನ್ನು ಅನುಸರಿಸಿ ಆಹಾರಗಳನ್ನು *ಹಲಾಲ್ ಮತ್ತು ಹರಾಮ್* ಎಂದು ಘೋಷಿಸಿದರು. 6:138 ಹೇಳುತ್ತದೆ: ಅವರ ದಾವೆಯ ಪ್ರಕಾರ, ಅವರು ಹೇಳುತ್ತಾರೆ, *"ಈ ಜಾನುವಾರು ಮತ್ತು ಬೆಳೆಗಳು ನಿಷೇಧಿಸಲಾಗಿದೆ, ಮತ್ತು ನಾವು ಹೇಳುವ ಹೊರತು ಅದನ್ನು ಯಾರೂ ತಿನ್ನುವ ಹಾಗಿಲ್ಲ"*.

‘ದೀನ್’ ಎಂದರೆ ‘ಧರ್ಮ’ ಎಂದಲ್ಲ

ಇಸ್ಲಾಂ ದೀನ್ ಎಂಬ ಪದವನ್ನು, *ಇಸ್ಲಾಂ ಧರ್ಮ* ಎಂದು ಸಾಮಾನ್ಯವಾಗಿ ಸ್ವೀಕರಿಸಲಾದ ಅರ್ಥವಾಗಿ ಭ್ರಷ್ಟಗೊಳಿಸುವ ಪ್ರಮುಖ ಕಲ್ಪನೆಯು ಧಾರ್ಮಿಕರಿಂದ ಹುಟ್ಟಿಕೊಂಡಿತು. ಈ ಡೊಂಕಾದ ಸಂಚಿನ ಮೂಲಕ, ಕುರ್‌ಆನಿನ ಕಡೆಗೆ ಬರುವವರಿಗೆ, ಸ್ವರ್ಗದ ಚಾವಿಯನ್ನು ನಿಯಂತ್ರಿಸುವವರಂತೆ ತಮ್ಮನ್ನು ಪರಿಣಾಮಕಾರಿಯಾಗಿ ಸ್ಥಾಪಿಸಿದರು. ಯಹೂದಿ ಮತ್ತು ಕ್ರೈಸ್ತರಲ್ಲೂ, ಪುರೋಹಿತತ್ವವನ್ನು ನಿಯಂತ್ರಿಸುವ ಇದೇ ರೀತಿಯ ಸನ್ನಿವೇಶಗಳನ್ನು ಕಾಣಬಹುದಾಗಿದೆ. ಧರ್ಮ ಎಂಬ ಪದದ ಭಾಷಾರ್ಥದಲ್ಲಿ ಅದು *‘ದೇವನಿಂದ ಜನರಿಗೆ’* ಎಂದಾಗಿರಬೇಕೇ ವಿನಹಃ ಬೇರೆ ಯಾವುದೇ ಆಧಾರದ ಮೇಲೆ ಆಗಿರಬಾರದು.

5:3 ವಚನವು, ಅರಬೀ ಪದ್ಧತಿಯ ದೃಷ್ಟಿಕೋನದಲ್ಲಿ ಹೀಗಿದೆ:

> ‘ಇಂದು ನಾನು ನಿಮಗೆ ಧರ್ಮವನ್ನು ಪರಿಪೂರ್ಣತೆಗೊಳಿಸಿದೆ ಮತ್ತು ನಿಮ್ಮ ಮೇಲೆ ನನ್ನ ಕೃಪೆಯನ್ನು ಪೂರ್ಣಗೊಳಿಸಿದೆ, ಮತ್ತು ಇಸ್ಲಾಮನ್ನು ಧರ್ಮವಾಗಿ ಅಂಗೀಕರಿಸಿದೆ.

ಈ ಸರಳ ತಂತ್ರದಿಂದ ಮತ್ತು ಕಣ್ಣು ಪಿಳಕಿಸುವುದರೊಳಗೆ, ಮುಸ್ಲಿಮರನ್ನು ಅರಬೀ ಧರ್ಮದ ಪರಿಕಲ್ಪನೆಯ ಗುಲಾಮರನ್ನಾಗಿ ಮಾಡಲಾಗುತ್ತದೆ. 5:3 ರಲ್ಲಿರುವ ನಿರ್ದೇಶನದ ಹೊರತಾಗಿ, ಕೆಳಗೆ ಸೂಚಿಸಿದ ಆಜ್ಞೆಗಳ ವಿನಹಃ ಜನರಿಗೆ ಜೀವನ *ರೀತಿ*ಯಲ್ಲಿ ನಿರ್ಬಂಧಗಳನ್ನು ನಿಯಂತ್ರಿಸುವಂತಹ ಬೇರೆ ಯಾವುದೇ ಆದೇಶಗಳಿಲ್ಲ:

- ನಿಮ್ಮ ಸ್ವಂತ ತಾಯಿ; ನಿಮ್ಮ ಪುತ್ರಿಯರು, ನಿಮ್ಮ ಸಹೋದರಿಯರು, ನಿಮ್ಮ ತಂದೆಯ ಸಹೋದರಿಯರು, ನಿಮ್ಮ ತಾಯಿಯ ಸಹೋದರಿಯರು, ನಿಮ್ಮ ಸಹೋದರರ ಪುತ್ರಿಯರು, ನಿಮ್ಮ ಸಹೋದರಿಯರ ಪುತ್ರಿಯರು, ನಿಮಗೆ ಮೊಲೆಹಾಲುಣಿಸಿದ ನಿಮ್ಮ ಸಾಕು ತಾಯಂದಿರು, ನಿಮಗೆ ಮೊಲೆಹಾಲುಣಿಸಿದ ಸಾಕು ತಾಯಿಯ ಪುತ್ರಿಯರು, ನಿಮ್ಮ ಪತ್ನಿಯರ ತಾಯಂದಿರು, ನಿಮ್ಮ ಪತ್ನಿಯರ ಪುತ್ರಿಯರು, ನಿಮ್ಮ ಸ್ವಂತ ಪುತ್ರರ ಪತ್ನಿಯರು – ಈ ಮಹಿಳೆಯರನ್ನು ವಿವಾಹವಾಗುವುದನ್ನು ನಿಷೇಧಿಸಲಾಗಿದೆ. (4:23)

- ಅಲ್ಲಾಹನೊಂದಿಗೆ ಬೇರೆ ಯಾವುದನ್ನೂ ಸಹಭಾಗಿಯಾಗಿ ಮಾಡುವುದು, ಬಡತನದ ಭಯದಿಂದ ಶಿಶುಗಳನ್ನು ಕೊಲ್ಲುವುದು, ಬಹಿರಂಗವಾಗಿ ಅಥವಾ ಗುಟ್ಟಾಗಿ ಪಾಪಗಳನ್ನು ಎಸಗುವುದು, ಒಂದು ವ್ಯಕ್ತಿಯನ್ನು ಕೊಲ್ಲುವುದು, ಅನಾಥರ ಹಣವನ್ನು ಸಮೀಪಿಸುವುದು, ಲಾಭದ ಕೊಳ್ಳೆಹೊಡೆಯುವುದು (ಅಥವಾ ಅಳತೆ ಮೀರಿ ಲಾಭ ಮಾಡುವುದು), ನಿಮ್ಮ ಅಥವಾ ನಿಮ್ಮ ಸಂಬಂಧಿಕರ ಪ್ರಯೋಜನಕ್ಕಾಗಿ ಸುಳ್ಳು ಸಾಕ್ಷಿಗಳನ್ನು ಹೇಳುವುದು - ಇವುಗಳನ್ನು ನಿಷೇಧಿಸಲಾಗಿದೆ. (6:151-152)

- ಬಹಿರಂಗವಾದ ಅಥವಾ ಗುಟ್ಟಾದ ದುಷ್ಟ ಕಾರ್ಯಗಳನ್ನು ಮಾಡುವುದು, ಸತ್ಯದ ವಿರುದ್ಧ ಹೋಗುವುದು, ಅಲ್ಲಾಹನೊಂದಿಗೆ ಮೂರ್ತಿಗಳನ್ನು ಸಂಯೋಜಿಸುವುದು ಮತ್ತು ಅವನ ಮೇಲೆ ಸುಳ್ಳನ್ನು ಹೊರಿಸುವುದು - ಇವುಗಳನ್ನು ನಿಷೇಧಿಸಲಾಗಿದೆ. (7:33)

ಧಾರ್ಮಿಕ ಮಾರ್ಗದರ್ಶನವಿಲ್ಲದೆ, ಪ್ರಜ್ಞೆಯುಳ್ಳ ಯಾವುದೇ ವ್ಯಕ್ತಿಗೂ ಮೇಲೆ ಹೇಳಿರುವುದು ನೈತಿಕವಾಗಿ ತಪ್ಪು ಎಂದು ಅರಿಯಬಹುದು. ಅವುಗಳು ಕೆಡುಕು ಎಂದು ಇತರ ಜನರಿಗೆ ಹೇಳಲು ಯಾವುದೇ ಪುರೋಹಿತನ ಅಥವಾ ಮುಲ್ಲಾನ ಅಗತ್ಯವಿಲ್ಲ. ಸಹಜವಾಗಿ, ಇಂತಹ ಆಜ್ಞೆಗಳಿಗೆ ಸಾಮಾನ್ಯ ಜ್ಞಾನದ ಬಳಕೆಯ ಅಗತ್ಯವಿದೆ. ಆದಾಗ್ಯೂ, **ಅತ್ಯಂತ ಅವಶ್ಯಕತೆಯುಳ್ಳ ಈ ಸಾಮಾನ್ಯ ಜ್ಞಾನದ ಅಥವಾ ಸಹಜ ವಿವೇಕತೆಯ ಅನುಪಸ್ಥಿತಿಯ ಕಾರಣವಾಗಿ ಅರಬೀ ಧರ್ಮವು ನೆಲೆನಿಂತಿದೆ**. ತಮ್ಮ ಸಾಮಾನ್ಯ ಜ್ಞಾನವನ್ನು ಬಳಸುವ ಆಗ್ರಹ ತೋರಿಸಿದರೆ, ಉಲೆಮಾಗಳು ತಮ್ಮ ಅನುಯಾಯಿಗಳಿಗೆ ನರಕದ ಬೆಂಕಿಯ ಬೆದರಿಕೆಯನ್ನು ನೀಡುತ್ತಾರೆ. ದುರದೃಷ್ಟವಶಾತ್, ಧಾರ್ಮಿಕರನ್ನು ಮತ್ತು ಉಲೆಮಾಗಳನ್ನು ಅನುಸರಿಸುವವರು ತಡವಾಗಿ ಅರ್ಥಮಾಡುತ್ತಾ ಪರಲೋಕದಲ್ಲಿ ಹೀಗೆ ಹೇಳಬಹುದು:

> ನಾವು ಆಲಿಸಿರುತ್ತಿದ್ದರೆ ಮತ್ತು ನಮ್ಮ ಸಾಮಾನ್ಯ ಜ್ಞಾನವನ್ನು ಬಳಸಿರುತ್ತಿದ್ದರೆ, ನಾವು ಈ ಧಗಧಗಿಸುವ ಬೆಂಕಿಯ ಸಹಚರರಾಗಿ ಇರುತ್ತಿರಲಿಲ್ಲ. (67:10)

ಕೇವಲ ಮೇಲಿನ ನಿರ್ಬಂಧಗಳು ಮಾತ್ರ ಅಲ್ಲಾಹನ *ರೀತಿ*ಯಲ್ಲಿ ಸ್ಪಷ್ಟವಾಗಿರುವ ನಿಷೇಧಿತ ವಿಷಯಗಳಾಗಿವೆ. ಬ್ರಹ್ಮಾಂಡದ ಪ್ರಭುವು *ಹರಾಮ್* ಎಂದು ವರ್ಗೀಕರಿಸಿದ ಎಲ್ಲಾ ಕಟ್ಟುಪಾಡುಗಳನ್ನು ಅಥವಾ ವಿಷಯಗಳನ್ನು ಈ ನಾಲ್ಕು ವಚನಗಳು ಒಳಗೊಂಡಿವೆ. ಆಹಾರದ ಮೇಲಿನ ನಿರ್ಬಂಧಗಳು ಇತರ ಎರಡು ವಚನಗಳಲ್ಲಿ ಪುನರಾವರ್ತಿಸಲಾಗಿದೆ. ಹಾಗೆ, ಒಟ್ಟು 6,348 ವಚನಗಳಲ್ಲಿ ನಿಬಂಧನೆಗಳನ್ನು ಹೊಂದಿರುವ ವಚನಗಳು ಮೊತ್ತದಲ್ಲಿ ಬರೇ ಆರು. ಕುರ್‌ಆನಿನ ಇತರ ಶ್ಲೋಕಗಳಲ್ಲಿ ಯಾವುದೇ ನಿರ್ಬಂಧಗಳು ಇಲ್ಲ. ನೀವು ಅರಬೀ ಧರ್ಮಕ್ಕೆ ಸೇರಿದವರಾಗಿದ್ದರೆ, ಮನುಷ್ಯರು ಬರೆದ ನಿಷೇಧಾಜ್ಞೆಗಳನ್ನು ಒಳಗೊಂಡಂತಹ ಗ್ರಂಥಗಳ ಮೇಲೆ ಗ್ರಂಥಗಳ ರಾಶಿಯನ್ನು ಕಾಣಬಹುದು. ಅರಬೀ ಧರ್ಮದಲ್ಲಿ ವಿವಿಧ ಪಂಥಗಳಿಗೆ ವಿವಿಧ ನಿಷೇಧಾಜ್ಞೆಗಳಿವೆ ಮತ್ತು ಕೆಲವು ಪಂಥಗಳಲ್ಲಿ ಪ್ರಾಥಮಿಕ ಬಲಿಪಶುಗಳು ಮಹಿಳೆಯರಾಗಿದ್ದಾರೆ. ಅವರು ತಮ್ಮ ಮುಖವನ್ನು ತೋರ್ಪಡಿಸುವುದು, ಬೀದಿಯಲ್ಲಿ ಒಂಟಿಯಾಗಿ ನಡೆಯುವುದು, ಪುರುಷರೊಂದಿಗೆ ಮಾತನಾಡುವುದು ಅಥವಾ ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣ ಮಾಡುವುದು ನಿಷಿದ್ಧವಾಗಿದೆ ಮತ್ತು ಕೆಲವು ತೀವ್ರ ಪ್ರಕರಣಗಳಲ್ಲಿ ಅವರು ಶಾಲೆಗೆ ಹಾಜರಾಗುವುದೂ ನಿಷಿದ್ಧವಾಗಿದೆ.

ಅವನ ರೀತಿಯನ್ನಲ್ಲದೆ, ಬೇರೆ ಮೂಲದಿಂದ ಯಾವುದೇ ರೀತಿಯನ್ನೂ ಪಾಲಿಸಬಾರದೆಂದು ಅವನು ನಮಗೆ ನಿರಂತರವಾಗಿ ನೆನಪಿಸಿ ಕೊಡುತ್ತಾನೆ:

> ಆಕಾಶಗಳ ಮತ್ತು ಭೂಮಿಯಲ್ಲಿರುವ ಪ್ರತಿಯೊಂದೂ ಅವನಿಗೆ ಸೇರಿದೆ, ಮತ್ತು ಜೀವನದ ರೀತಿಯೂ *(ದೀನ್)* ಅವನಿಗಿರುವುದಾಗಿದೆ. ಅಲ್ಲಾಹನ ಹೊರತು ಬೇರೆ ಯಾವುದನ್ನಾದರೂ ನೀವು ಲಕ್ಷಿಸುವಿರೇ? (16:52)
>
> ನಿಮ್ಮ ಪ್ರಭುವಿನಿಂದ ನಿಮ್ಮ ಮೇಲೆ ಅವತೀರ್ಣಿಸಲ್ಪಟ್ಟದ್ದನ್ನು ಅನುಸರಿಸಿ, ಮತ್ತು ಅವನನ್ನು ಹೊರತು ಇತರರನ್ನು ಸಹಾಯಿಗಳಾಗಿ ಅನುಸರಿಸಬೇಡಿರಿ. ನಿಮ್ಮಲ್ಲಿ ಕೆಲವರು ಮಾತ್ರ ಕಾಳಜಿವಹಿಸುತ್ತಾರೆ. (7:3)

ದುಃಖಕರವೆಂದರೆ, ಅರಬೀ ಧರ್ಮದಿಂದ ತಪ್ಪುದಾರಿಗೆಳೆಯಲ್ಪಟ್ಟವರು, ಸಾಂಕಲ್ಪಿಕವಾಗಿ ನಿಷೇಧಿತ ಅಥವಾ *ಹರಾಮ್* ಗೊಳಿಸಲಾದ ಇತರ ಸಂಗತಿಗಳ ಸಂಗ್ರಹವನ್ನೇ ಪಾಲಿಸುತ್ತಾರೆ. ಈ ಇತರ ನಿಷೇಧಗಳು ಯಾವುದನ್ನೂ ಆಧರಿಸಿಲ್ಲ. ತಾರ್ಕಿಕವಾಗಿ ನೋಡಿದರೆ, ವೀಕ್ಷಣೆಯ ಮೂಲಕ ನಿಜವಾದ ಮುಸ್ಲಿಮನನ್ನು ಗುರುತಿಸಲು ಅನುಕೂಲವಾಗುವ ಮೂಲಕ, *ದೀನ್* ಒಂದು ಮಾಧ್ಯಮದಂತೆಯೂ ವರ್ತಿಸುತ್ತದೆ. ಈ ಕೆಲವು ಸರಳ ನಿರ್ಬಂಧಗಳನ್ನು ಪಾಲಿಸುವ ಯಾರು ಕೂಡ, ಮೂರ್ತಿ ಆರಾಧನೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗುತ್ತದೆ. ಅಲ್ಲಾಹನ ಮೌಲ್ಯಗಳು ಸ್ವರೂಪ ಮತ್ತು ಕಾರ್ಯದಲ್ಲಿ ಪರಿಪೂರ್ಣವಾಗಿದೆ ಮತ್ತು ಅನ್ವಯತೆಯಲ್ಲಿ ಸಾರ್ವತ್ರಿಕವಾಗಿದೆ. ಅವುಗಳಿಗೆ ಯಾವುದನ್ನೂ ಸೇರಿಸುವ ಅವಶ್ಯಕತೆಯೇ ಇಲ್ಲ. ಈ ನಿಗದಿತ ಆದೇಶಗಳಿಗೆ ಯಾವುದೇ ಸೇರಿಕೆ ಅಥವಾ ಕಳಿಕೆಯು, ಸ್ವಾಭಾವಿಕವಾಗಿ ಮೂರ್ತಿ ಆರಾಧನೆಯ ಭಾಗವಾಗುತ್ತದೆ.

ಇಂದು ಜನರು, ತಮ್ಮನ್ನು ಯಾವ ಪರಿಸ್ಥಿತಿಯಲ್ಲಿ ಕಾಣುತ್ತಿದ್ದಾರೆಂಬುವುದು ಎದ್ದುಕಾಣುತ್ತಿದೆ. ಜನರು ತಮ್ಮ **ಪ್ರಭುವಿಗಾಗಿ** ಜೀವಿಸಬೇಕು. ಏಕೆಂದರೆ, ಅವನು ಕೇವಲ ನ್ಯಾಯವನ್ನು ಮಾತ್ರ ಸಮರ್ಥಿಸುತ್ತಾನೆ. ಜನರು ಪ್ರಾಮಾಣಿಕರಾಗಿರಬೇಕು ಮತ್ತು ಅಲ್ಲಾಹನಿಗಾಗಿ ಮಾತ್ರ ತಮ್ಮ ಬದ್ಧತೆಗಳ ಪಾಲನೆ ಮಾಡಬೇಕು. ಈ ಸರಳ ನಿಯಮಗಳನ್ನು ಪಾಲಿಸಿ, ಸತ್ಯ ಮತ್ತು ಸಾಮಾನ್ಯ ಜ್ಞಾನವನ್ನು ಉಲ್ಲಂಘಿಸದೆ ಮತ್ತು ಸುಳ್ಳನ್ನು ಸೃಷ್ಟಿಸಿ ಅದನ್ನು ಅಲ್ಲಾಹನ ಮೇಲೆ ಆರೋಪಿಸದೆ ಇರುವ ವರೆಗೆ, ಜನರಲ್ಲಿ ಎರಡೂ ಲಿಂಗಗಳಿಗೂ ಆಯ್ಕೆಯ ಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗಿದೆ ಎಂಬುವುದು, ಈ ಹಂತದಲ್ಲಿ ಧಾರ್ಮಿಕರಿಗಿರುವ ದೊಡ್ಡ ಆಘಾತವಾಗಿದೆ. ಇದಕ್ಕಿಂತ ಹೆಚ್ಚು ಸರಳ ಬೇರೆ ಏನಿರಲು ಸಾಧ್ಯ?

ಸಂಪೂರ್ಣ ಸ್ವಾತಂತ್ರ್ಯ

ಅಲ್ಲಾಹನು ನಮಗೆ ಜೀವಿತಗೊಳಿಸಿದ ದಿನದಿಂದ ಹಿಡಿದು ಅವನು ಅದನ್ನು ಹಿಂದೆ ತೆಗೆದುಕೊಳ್ಳುವ ದಿನದವರೆಗೂ, ಅವನಿಗೆ ಅಥವಾ ಅವಳಿಗೆ ತಾವು ಇಚ್ಛಿಸುವ ಮಾರ್ಗವನ್ನು ಆಯ್ಕೆ ಮಾಡುವ ಪೂರ್ಣ

ಸ್ವಾತಂತ್ರ್ಯವನ್ನು ನೀಡಲಾಗಿದೆ. ಜಾಣತನದಿಂದ ಆಯ್ಕೆಮಾಡುವುದು ನಮ್ಮ ಹಕ್ಕು ಮತ್ತು ಜವಾಬ್ದಾರಿಯಾಗಿದೆ. ನಮ್ಮ ಮುಂದೆ ಎರಡು ಮೂಲಭೂತ ಆಯ್ಕೆಗಳಿವೆ:

- ಅಲ್ಲಾಹನಿಂದ ವಿಧಿಸಲಾದ *ಅವನಿಗಾಗಿರುವ* ಒಂದು ಜೀವನ ರೀತಿ (ದೀನಿಲ್ಲಾಹ್)

  ಅಥವಾ

- ಅಲ್ಲಾಹನಿಗಾಗಿ ಇರದ (ತಾಗೂತ್[19]ಗಾಗಿ ಇರುವ) ಒಂದು ರೀತಿ

ಅಲ್ಲಾಹನು ಯಾರ ಮೇಲೂ ಅವನ ದೀನನ್ನು ಬಲವಂತವಾಗಿ ಹೇರಲಿಲ್ಲ. ಅವನು ಕುರ್‌ಆನನ್ನು 'ಸರಿ ಹಾಗೂ ತಪ್ಪುಗಳ ನಡುವಿನ ಮಾನದಂಡವಾಗಿದೆ' ಎಂದು ವಿವರಿಸುತ್ತಾನೆ. 'ಕುರ್‌ಆನ್ ವಿವರಣೆಯಲ್ಲಿ ಸಂಪೂರ್ಣವಾಗಿದೆ ಮತ್ತು ಅದರಲ್ಲಿ ವಿವರಿಸಬೇಕಾದ ಯಾವುದನ್ನೂ ಅವನು ಬಿಟ್ಟುಬಿಡಲಿಲ್ಲ' ಎಂದು ಹೇಳಿದ್ದಾನೆ. ವಿಚಿತ್ರವೆಂದರೆ, ಇಸ್ಲಾಮನ್ನು 'ಆಯ್ಕೆಯ ಸ್ವಾತಂತ್ರ್ಯ ವಿರದ ಮತ್ತು ಬಲವಂತ ಪಡಿಸುವಂತಹ ಒಂದು ಧರ್ಮ' ಎಂದು ಅನೇಕರು ತಿಳಿದುಕೊಂಡಿದ್ದಾರೆ. ಅವರು, ಇಸ್ಲಾಮಿನ ಮುಖವಾಡ ಧರಿಸಿದ ಅರಬೀ ಧರ್ಮದ ಪದ್ಧತಿಗಳನ್ನು ನೈಜ್ಯ ಇಸ್ಲಾಂ ಎಂದು ತಿಳಿದುಕೊಂಡಿರುವುದು ಇದರ ದುಃಖಕರವಾದ ಕಾರಣವಾಗಿದೆ. ಅಲ್ಲಾಹನನ್ನು ಅನುಸರಿಸುವ ಆಯ್ಕೆಯನ್ನು ಸಂಪೂರ್ಣವಾಗಿ ಅವನ ಸೇವಕರಿಗೆ ಬಿಡಲಾಗಿದೆ: '*ಯಾವುದೇ ಕಡ್ಡಾಯವಿಲ್ಲ*'. ಓದುಗರು ಇದೇ ಭಾವದಿಂದ, ಜೀವನದ ಒಂದು ನಿರ್ದಿಷ್ಟ ರೀತಿಯ (ದೀನ್) ಮೂಲವು ಸರಿಯಾಗಿದೆಯೋ ಅಥವಾ ತಪ್ಪಾಗಿದೆಯೋ ಎಂಬ ವ್ಯತ್ಯಾಸವನ್ನು ತಿಳಿಯಲು, ಅವನು ಅಥವಾ ಅವಳು ತನ್ನ ವಿವೇಕತೆ ಮತ್ತು ಬುದ್ಧಿವಂತಿಕೆಯ ಅನ್ವಯ ಮಾಡಬೇಕಾಗಿದೆ. ನಿಮ್ಮ ಆಯ್ಕೆಯು, ಈ ಜೀವನದ ಹಾಗೂ ಪರಲೋಕ ಜೀವನದ ಪ್ರಯಾಣದ ದರ್ಜೆಯನ್ನು ನಿರ್ಧರಿಸುತ್ತದೆ.

> ಜೀವನದ ರೀತಿಯಲ್ಲಿ *(ದೀನ್)* ಯಾವುದೇ ಬಲವಂತವಿಲ್ಲ. ಆದರೆ, ಈಗ ಸರಿ ಮತ್ತು ತಪ್ಪುಗಳ ನಡುವೆ (ವ್ಯತ್ಯಾಸ) ಸ್ಪಷ್ಟಪಡಿಸಲಾಗಿದೆ. ಆದ್ದರಿಂದ, ಯಾರು ವಾಸ್ತವ ಮೂರ್ತಿಗಳನ್ನು (ತಾಗೂತ್) ತಿರಸ್ಕರಿಸುತ್ತಾರೆ ಮತ್ತು ಅಲ್ಲಾಹನಲ್ಲಿ ವಿಶ್ವಾಸವಿಡುತ್ತಾರೆ, ನಿಶ್ಚಯವಾಗಿಯೂ ಅವರು ಮುರಿಯದ ಒಂದು ಬಲವಾದ ಬಂಧವನ್ನು ಹಿಡಿದಿಟ್ಟುಕೊಂಡಿದ್ದಾರೆ. ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿದ್ದಾನೆ. (2:256)
>
> ಭೂಮಿಯ ಮೇಲೆ ಚಲಿಸುವ ಜೀವಿಗಳು ಅಥವಾ ರೆಕ್ಕೆಗಳಿಂದ ಹಾರಾಡುವ ಪಕ್ಷಿಗಳು, ಇವೆಲ್ಲವೂ ನಿಮ್ಮಂತೆಯೇ ಇರುವ ಜನಾಂಗಗಳಾಗಿವೆ. ನಾವು ಗ್ರಂಥದ ಹೊರಗೆ ಏನನ್ನೂ ಬಿಡಲಿಲ್ಲ. ಎಲ್ಲರೂ ತಮ್ಮ ಪ್ರಭುವಿನ ಕಡೆಗೆ ಹಿಂತಿರುಗಿಸಲ್ಪಡುವರು. (6:38)

[19] ತಾಗೂತ್ ಎಂದರೆ ಮೂರ್ತಿ. ಮೂರ್ತಿ ಪದದ ವಿವರಣೆ, ಅಡಿ ಟಿಪ್ಪಣಿ ಅಂಕೆ 3ರಲ್ಲಿ ನೀಡಲಾಗಿದೆ.

ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿಡುವವರು, ಅಲ್ಲಾಹನು ನಿಗದಿಸಿರುವ ರೀತಿಗೆ ಸಮ್ಮತಿಸಬೇಕು ಮತ್ತು ಪ್ರಾಮಾಣಿಕರಾಗಿ ಅದಕ್ಕೆ ಕೇಂದ್ರಿತರಾಗಿರಬೇಕು. ಕೊನೆಯ ಪ್ರವಾದಿಗೆ ಹೀಗೆ ಘೋಷಿಸಲು ಹೇಳಲಾಗಿದೆ:

> ಹೇಳಿರಿ, "ನನ್ನ ಪ್ರಭುವು ನ್ಯಾಯವನ್ನು ಸಮರ್ಥಿಸುತ್ತಾನೆ. ಮತ್ತು ಸಂಪೂರ್ಣವಾಗಿ ಸಮ್ಮತಿಸುತ್ತಾ ನಿಮ್ಮ ಗಮನವನ್ನು ಕೇಂದ್ರೀಕರಿಸುವುದರಲ್ಲಿ ನೇರವಾಗಿರಿ. ಮತ್ತು ಅವನು ನಿಮ್ಮನ್ನು ಹೇಗೆ ರಚಿಸಿದನೋ ಹಾಗೆಯೇ ನೀವು ಹಿಂದಿರುಗುವಿರಿ. ಜೀವನ ರೀತಿಯಲ್ಲಿ ಪ್ರಾಮಾಣಿಕರಾಗಿ ಅವನನ್ನು ಯಾಚಿಸಿರಿ." (7:29)
>
> ನಿಮಗೊದುಗುವ ಒಳಿತುಗಳು ಅಲ್ಲಾಹನಿಂದಾಗಿರುತ್ತದೆ[20]. ನಿಮಗೊದುಗುವ ಕೆಡುಕುಗಳು ನಿಮ್ಮ ಸ್ವಂತ ಕರ್ಮಗಳ ಪರಿಣಾಮಗಳಾಗಿರುತ್ತದೆ. (4:79)

ಇನ್ನೊಂದು ರೀತಿಯಲ್ಲಿ, ಒಬ್ಬ ವ್ಯಕ್ತಿಯು ತನ್ನ ಜೀವನ ಶೈಲಿಯನ್ನು ರೂಪಿಸಲು, ಆಯ್ಕೆಯ ಪೂರ್ಣ ಸ್ವಾತಂತ್ರ್ಯ ನೀಡಿ, ಸರಿ ತಪ್ಪುಗಳ ನಡುವೆ ವ್ಯತ್ಯಾಸವನ್ನು ತಿಳಿದುಕೊಳ್ಳಲು ಅಲ್ಲಾಹನು ಒತ್ತಿಹೇಳುತ್ತಾನೆ. ಆ ವೇಳೆ ಈ ಸುವರ್ಣ ನಿಯಮವು ಅನ್ವಯಿಸುತ್ತದೆ: ಅಲ್ಲಾಹನು ನ್ಯಾಯವನ್ನು ಮಾತ್ರ ಪ್ರತಿಪಾದಿಸುತ್ತಾನೆ.

ವಾಸ್ತವಿಕ ಮೂರ್ತಿಗಳು

ಮೂರ್ತಿಪೂಜೆಯು ಅನೇಕ ಸ್ವರೂಪಗಳನ್ನು ಪಡೆದುಕೊಳ್ಳಬಹುದು. ಉದಾಹರಣೆಗೆ, ಒಬ್ಬ ವ್ಯಕ್ತಿಯು ಅಹಂಕಾರಕ್ಕೆ ಪ್ರಧಾನ್ಯಕೊಡಲು ಆಯ್ಕೆ ಮಾಡಿದರೆ, ಅವನ ಜೀವನವನ್ನು ತನ್ನ ಅಹಂಕಾರವು ನಿಯಂತ್ರಿಸುತ್ತದೆ. ಅವರು ತಮ್ಮ ಅಹಂಕಾರವನ್ನು ಮೂರ್ತೀಕರಿಸುತ್ತಾರೆ. ಒಬ್ಬ ವ್ಯಕ್ತಿಯು ತನ್ನ ಸಂಪತ್ತಿನ ಸಂಗ್ರಹಕ್ಕೆ ಪ್ರಧಾನ್ಯತೆ ನೀಡಿದರೆ, ಅವನ ಅಥವಾ ಅವಳ ಜೀವನವು ದುರಾಶೆಯಿಂದ ನಿಯಂತ್ರಿಸಲ್ಪಡುತ್ತದೆ ಮತ್ತು ಅವನು ಅಥವಾ ಅವಳು ಹಣವನ್ನು ಮೂರ್ತೀಕರಿಸಿದಂತಾಗುತ್ತದೆ. ಒಬ್ಬ ವ್ಯಕ್ತಿಯು ಮನುಷ್ಯರನ್ನು

[20] ಜೀವನದಲ್ಲಿ ಎಲ್ಲವೂ ವಿಧಿಯಾಗಿದೆ ಮತ್ತು ಅಲ್ಲಾಹನಿಂದ ಪೂರ್ವಕಲ್ಪಿತವಾಗಿದೆ ಎಂದು ಅರಬೀ ಧಾರ್ಮಿಕರು ತಮ್ಮ ಅನುಯಾಯಿಗಳಿಗೆ ಕಲಿಸುತ್ತಾರೆ. ಒಬ್ಬ ವ್ಯಕ್ತಿಯು ಹತ್ತನೆ ಮಹಡಿಯಿಂದ ಕುದಿದರೆ ಅಥವಾ ತನ್ನ ದೇಹವನ್ನು ಸ್ಫೋಟಕದಿಂದ ಸುತ್ತಿಕೊಂಡರೆ – ಇದು ಅಲ್ಲಾಹನಿಂದ ಪೂರ್ವಕಲ್ಪಿತವಾಗಿತ್ತು ಎಂದು ಅವರು ಹೇಳುತ್ತಾರೆ. ಪೋಲಿಸರಿಂದ ಬಂಧಿತನಾದ ಅಪರಾಧಿಯು ನ್ಯಾಯಾಲಯದಲ್ಲಿ 'ಮಹಿಳೆಯ ಮೇಲೆ ನಡೆದ ಬಲಾತ್ಕಾರವು ಅಲ್ಲಾಹನಿಂದ ಪೂರ್ವಕಲ್ಪಿತವಾಗಿತ್ತು' ಎಂದು ಹೇಳಿದ ಘಟನೆಯೂ ಇದೆ. ಧಾರ್ಮಿಕರನ್ನು ಅನುಸರಿಸುವವರು ಈ ಲೋಕದಲ್ಲಿ ಬಡವರಾಗಿರುತ್ತಾರೆಂದು ಪೂರ್ವಕಲ್ಪಿತವಾಗಿದೆ ಎಂದೂ, ಆದರೆ ಅವರು ಪರಲೋಕದಲ್ಲಿ ಶ್ರೀಮಂತರಾಗಿರುತ್ತಾರೆಂದೂ ಅವರು ಹೇಳುತ್ತಾರೆ. ಇಸ್ಲಾಮೀ ದೇಶಗಳ ಅಧಿಕಾರಿಗಳು ಮತ್ತು ಆಯತುಲ್ಲಾಹ್'ಗಳೂ ಸೇರಿದಂತೆ, ತೈಲದಿಂದ ಸಿಗುವ ಹಣವನ್ನು ಸ್ವಿಸ್ಸ್ ಬ್ಯಾಂಕಿನ ತಮ್ಮ ವೈಯ್ಯಕ್ತಿಕ ಖಾತೆಯಲ್ಲಿ ಇಡಬೇಕೆಂಬುವುದೂ ಬಹುಶಃ ಪೂರ್ವಕಲ್ಪಿತವಾಗಿದೆ.

ಮೂರ್ತೀಕರಿಸಲು ಆಯ್ಕೆ ಮಾಡಿದರೆ, ಅವನ ಅಥವಾ ಅವಳ ದೀನ್ ಆ ಸಂಕಲ್ಪದಿಂದ ನಿಯಂತ್ರಿಸಲ್ಪಡುತ್ತದೆ ಮತ್ತು ಇತರರು ಅವರ ಜೀವನದ ದಾರಿಯನ್ನು ತೀರ್ಮಾನ ಮಾಡುತ್ತಾರೆ. ಹಾಗೆಯೇ, ಒಬ್ಬ ವ್ಯಕ್ತಿಯು ಧರ್ಮವನ್ನು ತನ್ನದಾಗಿಸಿಕೊಂಡರೆ, ಅವನು ಅಥವಾ ಅವಳು ಧಾರ್ಮಿಕ ನಾಯಕರನ್ನು ಮತ್ತು ಅವರು ಆಜ್ಞಾಪಿಸುವ ಆಚರಣೆಗಳನ್ನು ಮೂರ್ತೀಕರಿಸುತ್ತಾರೆ, ಅಥವಾ ಪುರೋಹಿತರು ಅವರ ಜೀವನ ರೀತಿಯನ್ನು ನಿಯಂತ್ರಣ ಮಾಡುತ್ತಾರೆ.

ಇಲ್ಲಿ ಸಾಮಾನ್ಯ ಅಂಶವು ಮೂರ್ತಿ ಆರಾಧನೆಯಾಗಿದೆ. ತಮ್ಮ ಪ್ರವಾದಿಗಳನ್ನು, ಸಂದೇಶವಾಹಕರನ್ನು, ಶಕ್ತಿಗಳನ್ನು ಮತ್ತು ಜಿನ್ನ್'ಗಳನ್ನು ಮೂರ್ತೀಕರಿಸುವುದರ ಬಗ್ಗೆ ಕುರ್‌ಆನಿನಲ್ಲಿ ಸ್ಪಷ್ಟವಾದ ಸಂದರ್ಭಗಳಿವೆ.

> ಅಲ್ಲಾಹನು ಗ್ರಂಥ, ಬುದ್ಧಿವಂತಿಕೆ ಮತ್ತು ಪ್ರವಾದಿತ್ವವನ್ನು ಕರುಣಿಸಿದಂತಹ ಒಬ್ಬ ಮನುಷ್ಯನು, ಅಲ್ಲಾಹನ ಹೊರತು ನನ್ನ ಸೇವೆಯನ್ನು ಮಾಡಿರಿ ಎಂದು ಹೇಳಲು ಸಾಧ್ಯವಿಲ್ಲ. ಅಲ್ಲದೆ ಶಕ್ತಿಗಳನ್ನು ಮತ್ತು ಪ್ರವಾದಿಗಳನ್ನು ಮೂರ್ತೀಕರಿಸಿ ಎಂದೂ ಹೇಳುವುದಿಲ್ಲ. (3:79-80)

ಸ್ಪಷ್ಟವಾಗಿ, ಅಲ್ಲಾಹನ ಪ್ರವಾದಿ ಮತ್ತು ಸಂದೇಶವಾಹಕರನ್ನು ಮೂರ್ತೀಕರಿಸಬಾರದು. ಆದರೂ ಹಲವಾರು ಪ್ರವಾದಿಗಳು ಮತ್ತು ಸಂದೇಶವಾಹಕರು ಆರಾಧಿಸಲ್ಪಡುತ್ತಾರೆ. ಹಾಗೂ ಸಂತರು, ಗುರುಗಳು, ಪುರೋಹಿತರು ಮತ್ತು ಧಾರ್ಮಿಕ ಪಂಡಿತರನ್ನು ಮೂರ್ತೀಕರಿಸುವವರೂ ಇದ್ದಾರೆ.

> ತಮ್ಮ ಪುರೋಹಿತರನ್ನು ಮತ್ತು ಪಂಡಿತರನ್ನು ಅವರು ಅಲ್ಲಾಹನ ಜೊತೆಗೆ ಪ್ರಭುಗಳಾಗಿ ಪರಿಗಣಿಸಿದ್ದಾರೆ. (9:31)

> ತನ್ನ ಚಿತ್ತಾಕಾಂಕ್ಷೆಯನ್ನು ದೈವೀಕರಿಸುವವರ (ಮೂರ್ತೀಕರಿಸಿದವನನ್ನು) ನೀನು ಕಂಡೆಯಾ? ಅವನಿಗೆ ರಕ್ಷಕನಾಗಲು ನೀನು ಬಯಸುವೆಯಾ? (25:43)

ಅಹಂಕಾರಿಗಳಿಗೆ ಮುನ್ನೆಚ್ಚರಿಕೆ ನೀಡಲಾಗಿದೆ. ಅವರಿಗೆ ಏನು ಮಾಡಬಹುದು ಎಂಬ ಪ್ರಶ್ನೆಗೆ ಅಲ್ಲಾಹನದೇ ಪ್ರತಿಕ್ರಿಯೆ ಹೀಗಿದೆ:

> ಅನೇಕರು ಆಲಿಸುತ್ತಿದ್ದಾರೆ ಅಥವಾ ಅರ್ಥಮಾಡಿಕೊಳ್ಳುತ್ತಿದ್ದಾರೆಂದು ಊಹಿಸಿತ್ತಿರುವೆಯಾ? ವಾಸ್ತವವಾಗಿ, ಅವರು ಕೇವಲ ಪ್ರಾಣಿಗಳ ಹಾಗೆ. ಅಲ್ಲ, ಅವರು ಪ್ರಾಣಿಗಳಿಗಿಂತಲೂ ಹೆಚ್ಚು ಹೀನ. (25:44)

ಕುರ್‌ಆನಿನ ಪದಗಳಲ್ಲಿ ಕ್ಷೀಣತೆಯಿಲ್ಲ. ತಿರಸ್ಕರಿಸುವವರ ಸಂಬಂಧಿಸಿದಂತೆ, ಅದು ಸ್ಪಷ್ಟ ಮತ್ತು ನಿಸ್ಸಂದಿಗ್ಧವಾಗಿದೆ:

> ಕುರ್‌ಆನ್ ಬುದ್ಧಿವಂತಿಕೆಯಿಂದ ತುಂಬಿದೆ. ನೀವು ಸನ್ಮಾರ್ಗವನ್ನು ಸಮರ್ಥಿಸುವ ಸಂದೇಶವಾಹಕರಲ್ಲಾಗಿದ್ದೀರಿ. ಅರಿವಿಲ್ಲದ ಹಾಗೂ ಅವರ ಪೂರ್ವಜರು ಎಚ್ಚರಿಕೆ ಪಡಿಸಲ್ಪಡದಂತಹ ಜನರಿಗೆ ಎಚ್ಚರಿಕೆ ನೀಡಲು, ಅತ್ಯಂತ ಕರುಣಾಮಯನಾದ ಸರ್ವಶಕ್ತನ ಬಳಿಯಿಂದಿರುವ ಒಂದು ಅವತೀರ್ಣವಾಗಿದೆ. ಬಹುಮತವು ಸತ್ಯನಿಷೇಧಿಗಳದ್ದಾಗಿರುತ್ತದೆ ಎಂಬುವುದು ದಾಖಲೆಯಾಗಿದೆ. ಪರಿಣಾಮವಾಗಿ, ನಾವು ಅವರ ಗದ್ದವನ್ನು ಅವರ ಕತ್ತಿಗೆಗೆ ಬಿಗಿಯುತ್ತೇವೆ. ಅವರು (ತಮ್ಮ ಆಯ್ಕೆಯ ದಿಕ್ಕಿಗೆ) ನಿರ್ಬಂಧಿತರಾಗಿದ್ದಾರೆ. ಮತ್ತು ಹಾಗೆ ನಾವು ಅವರ ಮುಂದೆಯೂ ಮತ್ತು ಹಿಂದೆಯೂ ತಡೆಗೋಡೆಯನ್ನು ಇಟ್ಟಿದ್ದೇವೆ. ಆದ್ದರಿಂದ ಅವರು ಎಂದಿಗೂ ನೋಡುವುದಿಲ್ಲ. (36:2-9)

ಸೃಷ್ಟಿಯ ಬಗ್ಗೆ ಪರಿಗಣನೆ ನಡೆಸಲು ಕುರ್‌ಆನ್ ಜನರನ್ನು ಹುರಿದುಂಬಿಸುತ್ತದೆ:

> ಸೂರ್ಯನು ಒಂದು ನಿರ್ದಿಷ್ಟ ಕಕ್ಷೆಯಲ್ಲಿ ಚಲಿಸುತ್ತಿರುತ್ತಾನೆ. ಹೀಗಿದೆ ಸರ್ವಶಕ್ತ ಹಾಗೂ ಸರ್ವಜ್ಞನ ವಿನ್ಯಾಸ. ಮತ್ತು ನಾವು ಚಂದ್ರನನ್ನು ಒಂದು ತೆಳುವಾದ ವಕ್ರರೇಖೆಗೆ ಮರಳುವವರೆಗೆ ಹಂತಗಳಲ್ಲಿ ಕಾಣಿಸಿಕೊಳ್ಳುವಂತೆ ವಿನ್ಯಾಸಗೊಳಿಸಿದ್ದೇವೆ. ಸೂರ್ಯನು ಚಂದ್ರನನ್ನು ಎಂದಿಗೂ ಸಮೀಪಿಸುವುದಿಲ್ಲ, ಅಥವಾ ರಾತ್ರಿಯು ಅಕಾಲಿಕವಾಗಿ ಹಗಲನ್ನು ಅತಿಕ್ರಮಿಸುವುದಿಲ್ಲ. ಪ್ರತಿಯೊಂದೂ ತಮ್ಮದೇ ಆದ ಕಕ್ಷೆಯಲ್ಲಿ ತೇಲುತ್ತಿದೆ. (36:38-40)

ಸಿಂಹಾವಲೋಕನ ಮಾಡಿದಾಗ, 'ಸೂರ್ಯ ಹಾಗೂ ಚಂದ್ರನನ್ನು ರಚಿಸಿದ ಮತ್ತು ಅವುಗಳನ್ನು ತಮ್ಮ ಕಕ್ಷೆಯಲ್ಲಿ ಅಳವಡಿಸಿದವನಿಂದ ತನಗೆ ಕೆಲವು ಸೂಚನೆಗಳು ಬಂದು ಎರಗಿದೆ' ಎಂದು ಒಂದು ನಿಸ್ಸಂದೇಹವಾದ ಮೂಲವು ನನಗೆ ಹೇಳಿದರೂ, ನಾನು ಅವುಗಳನ್ನು ವೈಜ್ಞಾನಿಕ ಸಂಶೋಧನೆಗಳ ಮೂಲಕ ಪರಿಶೀಲಿಸುವೆ ಅಥವಾ ವೀಕ್ಷಣೆಯ ಮೂಲಕ ವೈಚಾರಿಕ ತಿಳುವಳಿಕೆಯಲ್ಲಿ ಒಪ್ಪಿಕೊಳ್ಳುವೆ. ಇಂದಿನ ತನಕ ಯಾರಿಗೂ ಈ ಮಾಹಿತಿಗಳನ್ನು ತಪ್ಪೆಂದು ಸಾಬೀತು ಮಾಡಲು ಸಾಧ್ಯವಾಗಲಿಲ್ಲ. ಇದಕ್ಕೆ ವಿರುದ್ಧವಾಗಿ, 1969 ರಲ್ಲಿ ಮಕ್ಕಾದ ಭವ್ಯ ಮಸೀದಿಯ ಒಬ್ಬ ಮುಖ್ಯ ಪುರೋಹಿತರು, ಭೂಮಿಯು ಸಮತಟ್ಟಾಗಿದೆ ಮತ್ತು ಇದಕ್ಕೆ ವಿರುದ್ಧವಾಗಿ ಯಾರಾದರೂ ಒಪ್ಪಿಕೊಂಡರೆ, ಅವರು ನಾಸ್ತಿಕರಾಗಿರುತ್ತಾರೆ ಎಂದು ಹೇಳಿದ್ದನ್ನು ಉದ್ಧರಿಸಲಾಗಿತ್ತು. ಇದು *ಇಸ್ಲಾಂ* ಎಂದು ಹೆಸರಿಡಲಾದ ಅರಬೀ ಧರ್ಮದ ಸಮಸ್ಯೆಯ ತಿರುಳಾದ 'ಅಜ್ಞಾನ'ವನ್ನು ಬಯಲುಪಡಿಸುತ್ತದೆ. ಕುರ್‌ಆನ್ ಹೇಳುತ್ತದೆ:

> ಆಕಾಶಗಳ ಮತ್ತು ಭೂಮಿಯಲ್ಲಿರುವುದೆಲ್ಲವೂ, ಇಚ್ಛೆಯಿಂದಲೂ ಮತ್ತು ಇಚ್ಛೆಯಿಲ್ಲದೆಯೂ ಶಾಂತವಾಗಿರುವಾಗ (*ಅಸ್ಲಮ*)[21], ಅವರು ಅಲ್ಲಾಹನ ದೀನಿನ ಹೊರತು ಬೇರೆ ಯಾವುದನ್ನಾದರೂ ಆಯ್ಕೆ ಮಾಡುತ್ತಾರೆಯೇ? ತರುವಾಯ, ಅವರ ಮರಳಿಕೆ ಅವನ ಕಡೆಗಾಗಿದೆ. (3:83)

ಈ ವಚನದಲ್ಲಿರುವ *ಅಸ್ಲಮ* ಎಂಬ ಪದವೂ, *ಇಸ್ಲಾಂ* ಎಂಬ ಪದವು ಮೂಲತಃ ಒಂದೇ ಆಗಿರುತ್ತದೆ. (ಅಂದರೆ, ಅವುಗಳು ಒಂದೇ ಮೂಲಪದದ ಉತ್ಪನ್ನಗಳಾಗಿವೆ ಮತ್ತು ಅದು ಕೇವಲ ಮೂಲ ಕಲ್ಪನೆಯ ಒಂದು ಪ್ರತ್ಯೇಕ ಧಾತುರೂಪವಾಗಿದೆ). ಏಳು ಆಕಾಶದಲ್ಲಿರುವ ಶತಕೋಟಿ ತಾರೆಗಳು, ಗ್ರಹಗಳು, ಭೂಮಿಯಲ್ಲಿರುವ ಎಲ್ಲಾ ವಿಧದ ತೆವಳುವ ಜೀವಿಗಳು, ಸಸ್ಯ ಹಾಗೂ ಮರಗಳು, ಎಲ್ಲಾ ವಿಧದ ಪ್ರಾಣಿ ಮತ್ತು ಕೀಟಗಳು, ಎಲ್ಲಾ ವಿಧದ ಪಕ್ಷಿಗಳು, ಎಲ್ಲಾ ವಿಧದ ಜಲಜೀವಿಗಳೂ - ಸ್ವಇಚ್ಛೆಯಿಂದಲು ಅಥವಾ ಇಚ್ಛೆಯಿಲ್ಲದೆಯೂ ಶಾಂತಿಯುತವಾಗಿ ಅಸ್ತಿತ್ವದಲ್ಲಿದೆ. ಆದ್ದರಿಂದ ಅಲ್ಲಾಹನು ಈ ಪ್ರಶ್ನೆಯನ್ನು ಹಾಕುತ್ತಾನೆ: *'ಅವನ ಇತರ ಸೃಷ್ಟಿಗಳು ಶಾಂತಿಯುತವಾಗಿ ಅಸ್ತಿತ್ವದಲ್ಲಿರಲು ಸಮರ್ಥರಾಗಿರುವಾಗ, ಅವರು ಅಲ್ಲಾಹನ ದೀನಿನ ಹೊರತು ಬೇರೆಯದ್ದನ್ನು ಆಯ್ಕೆ ಮಾಡುತ್ತಾರೆಯೇ?'*. ಈ ಪ್ರಶ್ನೆಯು ಉತ್ತರವನ್ನು ಯಾಚಿಸುತ್ತಿದೆ.

ಸಂದೇಶವು, ಸ್ಪಷ್ಟ ಮತ್ತು ಸರಳವಾಗಿದೆ ಮತ್ತು ಪ್ರತಿ ಸಂದರ್ಭದಲ್ಲೂ[22] ಒಂದೇ ತಾತ್ಪರ್ಯದ್ದಾಗಿದೆ. ಒಂದು ಧರ್ಮವನ್ನು ತಲುಪಿಸಲು ಅಥವಾ ಆರಂಭಿಸಲು ಯಾವುದೇ ಪ್ರವಾದಿಯನ್ನು ಕಳುಹಿಸಲಾಗಿಲ್ಲ. ಕೇವಲ ಅಲ್ಲಾಹನ ಸಂದೇಶವನ್ನು ತಲುಪಿಸುವುದು ಅವರ ಕೆಲಸವಾಗಿತ್ತು ಮತ್ತು ಅದರ ಮುಖ್ಯಾಂಶ *ದೀನ್* ಆಗಿತ್ತು.

'ಬದ್ಧತೆ'ಗಳ ಮೂಲಕ ಅಲ್ಲಾಹನ ಸೇವೆ

ಇದು ಇನ್ನೊಂದು ಭಯಾನಕವಾದ ಸರಳ ಪರಿಕಲ್ಪನೆಯಾಗಿದೆ. ಕುರ್'ಆನಿನ ಬೋಧನೆಗಳು ನಮಗೆ ಸದಾ ನೆನಪಿಡಲು ಪ್ರೋತ್ಸಾಹಿಸುವುದೇನೆಂದರೆ:

> ನನ್ನ ಬದ್ಧತೆಗಳು, ನನ್ನ ತ್ಯಾಗ, ನನ್ನ ಜೀವನ ಮತ್ತು ನನ್ನ ಮರಣ, ಸರ್ವಲೋಕಪಾಲಕನಾದ ಅಲ್ಲಾಹನಿಗೆ ಮಾತ್ರ. ಅವನಿಗೆ ಯಾವುದೇ ಸಹಭಾಗಿಯಿಲ್ಲ. ಇವುಗಳು ನನಗೆ ನೀಡಲಾದ

[21] ಅಸ್ಲಮ ಎಂಬ ಪದವು ಸ.ಲ.ಮ. ಎಂಬ ಮೂಲಪದದ ಉತ್ಪತ್ತಿಯಾಗಿದೆ. ಅಲ್ಲಾಹನು ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಸೃಷ್ಟಿಸಿರುವುದೆಲ್ಲವೂ ಶಾಂತಿಯುತವಾಗಿ ಅಸ್ತಿತ್ವದಲ್ಲಿದೆ ಎಂದು ಭಾಷಾಂತರಿಸಲಾದಾಗ – ಮನುಕುಲವು ಹೇಗೆ ತಮ್ಮ ಸ್ವಂತ ಆಯ್ಕೆಯಿಂದ ಅವ್ಯವಸ್ಥೆಯನ್ನು ಸೃಷ್ಟಿಸಿದರು ಎಂದು ಮನಗಾಣಬಹುದು.

[22] ಎಲ್ಲಾ ಪ್ರವಾದಿಗಳು ಅವರಿಗೆ ಅವತೀರ್ಣಿಸಲ್ಪಟ್ಟ ರೀತಿಯಲ್ಲೇ ಅದನ್ನು ತಲುಪಿಸಿದರು. ಒಬ್ಬ ವ್ಯಕ್ತಿಯು ಅವನ ಅಥವ ಅವಳ ಬದುಕನ್ನು ಹೇಗೆ ನಡೆಸಬೇಕು ಎಂಬ ತಮ್ಮ ವೈಯುಕ್ತಿಕ ಅಭಿಪ್ರಾಯಗಳನ್ನು ಕೊಡಲು ಯಾವತ್ತೂ ಪ್ರಯತ್ನಿಸಲಿಲ್ಲ. ಮುಸ್ಲಿಮರಲ್ಲಿ ಬಹುಪಾಲು ಜನರಿಗೆ, ತಾವು ಹೇಗೆ ಮತ್ತು ಏನನ್ನು ತಿನ್ನಬೇಕು, ಹೇಗೆ ವಸ್ತ್ರ ಧರಿಸಬೇಕು, ಹೇಗೆ ಗಡ್ಡದ ಕೂದಲನ್ನು ಬೆಳೆಸಬೇಕು ಎಂದು ಕಲಿಸಲು ಅರಬೀ ಧಾರ್ಮಿಕರ ಅಗತ್ಯವಿದೆ.

> ಅನುಶಾಸನಗಳಾಗಿವೆ ಮತ್ತು ನಾನು ಶಾಂತಿಯಲ್ಲಿರುವವರ ಪೈಕಿ ಮೊದಲಿಗರಲ್ಲಾಗಿದ್ದೇನೆ. (6:162-163)

ನಮ್ಮ ಒಳಿತಿಗಾಗಿಗೂ ಹಾಗೂ ***ಅಲ್ಲಾಹನಿಗಾಗಿಯೂ***, ನಮ್ಮಲ್ಲಿ ಪರಸ್ಪರ ಪ್ರೀತಿ, ಶಾಂತಿ ಮತ್ತು ಸಾಮರಸ್ಯವನ್ನು ಆನಂದಿಸುವ ಸಲುವಾಗಿ ನಾವು ನಮ್ಮ ವೈಯ್ಯುಕ್ತಿಕ ಜೀವನದಲ್ಲಿ ನಮ್ಮ ಪೋಷಕರು, ಸಂಗಾತಿಯರು, ಮಕ್ಕಳು, ಸಹವರ್ತಿಗಳು ಮತ್ತು ನಮ್ಮ ಉದ್ಯೋಗ ಇತ್ಯಾದಿಗಳಿಗೆ ಪ್ರಾಮಾಣಿಕತೆಯೊಂದಿಗೆ ಬದ್ಧರಾಗಿರುತ್ತೇವೆ. ಇದಕ್ಕೆ ಆತ್ಮ ತ್ಯಾಗದ ಅಗತ್ಯವಿದೆ. ನಮ್ಮ ಸುತ್ತಲಿರುವ ಎಲ್ಲರ ಪ್ರಯೋಜನಕ್ಕಾಗಿ ಕುರ್‌ಆನ್ ಆತ್ಮ ತ್ಯಾಗವನ್ನು ಒಳಗೊಂಡಿರುವ ಒಂದು ಜೀವನ ರೀತಿಯನ್ನು ಕಲಿಸುತ್ತದೆ. ಅಲ್ಲಾಹನಿಂದ ನಿರ್ದೇಶಿಸಲ್ಪಟ್ಟ ಅವನ ದೀನಿನ ಮೂಲಭೂತ ಮೌಲ್ಯಗಳಿಗೆ ತಮ್ಮನ್ನು ಬದ್ಧರಾಗಿಸಲು ಜನರು ನಿರಾಕರಿಸುತ್ತಾರೆ. ಅವರು ಉತ್ತಮ ಕಾರ್ಯಗಳನ್ನು ಮಾಡುವ ಮೂಲಕ ತಮ್ಮ ಜವಾಬ್ದಾರಿಯನ್ನು ಪಾಲಿಸುತ್ತಾ ತಮ್ಮ ಅಹಂ, ದುರಾಶೆ ಮತ್ತು ಸೊಕ್ಕನ್ನು ತ್ಯಾಗ ಮಾಡಲು ಇಚ್ಛಿಸುವುದಿಲ್ಲ.

ಕುರ್‌ಆನ್ ಈ ಉತ್ತಮ ಮೌಲ್ಯಗಳನ್ನು ಕಲಿಸುತ್ತದೆ, ಆದರೆ ಧಾರ್ಮಿಕರು ಅದಕ್ಕೆ ವಿರುದ್ಧವಾಗಿ ಒತ್ತಾಯ ಮಾಡುತ್ತಾರೆ. ನಾವು ಈ ಸರಳ ಪರಿಕಲ್ಪನೆಯನ್ನು ವಿವಾದಿಸುವವರನ್ನು ಎದುರಿಸಬೇಕಾದಾಗ, ಹೀಗೆ ಹೇಳಲು ಪ್ರೋತ್ಸಾಹಿಸಲಾಗುತ್ತದೆ:

> ಅಲ್ಲಾಹನು ಅಸ್ತಿತ್ವದಲ್ಲಿರುವ ಸಕಲ ವಸ್ತುಗಳ ಪ್ರಭುವಾಗಿರುವಾಗ, ಅವನ ಹೊರತು ಇತರ ಪ್ರಭುವನ್ನು ಅರಸಬೇಕೆ? ಪ್ರತಿಯೊಬ್ಬನು ಸಂಪಾದಿಸಿರುವುದು ಅವನದೇ ಸ್ವಂತಕ್ಕಾಗಿದೆ. ಹೊರೆ ಹೊರುವ ಯಾವ ಆತ್ಮವೂ ಇನ್ನೊಬ್ಬನ ಹೊರೆಯನ್ನು ಹೊರುವುದಿಲ್ಲ. ನಂತರ ನಿಮಗೆಲ್ಲರಿಗೂ ನಿಮ್ಮ ಪ್ರಭುವಿನ ಕಡೆಗೆ ಮರಳಲಿಕ್ಕಿದೆ ಮತ್ತು ಆಗ ಅವನು ನೀವು ವಾದಿಸುತ್ತಿರುವುದರ ವಾಸ್ತವಿಕತೆಯನ್ನು ನಿಮಗೆ ತಿಳಿಸುತ್ತಾನೆ. (6:164)

ಸರ್ವಲೋಕಪಾಲಕನು ವ್ಯರ್ಥವಾಗಿ ಅವನ ಗ್ರಂಥವನ್ನು ಅವತರಿಸಲಿಲ್ಲ. ಈ ಗ್ರಂಥವು ಅವನ ನಿದರ್ಶನ, ಸುವಾರ್ತೆಯಾಗಿದೆ ಮತ್ತು ಮಾನವಕುಲಕ್ಕಿರುವ ಮಾರ್ಗದರ್ಶನವಾಗಿದೆ. ಈ ಗ್ರಂಥವು ದಿಟ್ಟವಾಗಿದೆ ಮತ್ತು ಇದರಲ್ಲಿ ಕೈಚಳಕ ತೋರಿಸಲು ಸಾಧ್ಯವಿಲ್ಲ.

> ಇವುಗಳು ಕುರ್‌ಆನಿನ ನಿದರ್ಶನಗಳಾಗಿವೆ. ಇದೊಂದು ಆಳವಾದ ಗ್ರಂಥ ಹಾಗೂ ಒಂದು ಮಾರ್ಗದರ್ಶನವಾಗಿದೆ ಮತ್ತು ವಿಶ್ವಾಸವಿಡುವವರಿಗೆ ಸುವಾರ್ತೆಯಾಗಿದೆ. ಅವರು ಬದ್ಧತೆಗಳನ್ನು ಎತ್ತಿಹಿಡಿಯುತ್ತಾರೆ ಮತ್ತು ಅವುಗಳನ್ನು ನಿಷ್ಕಳಂಕವಾಗಿಡುತ್ತಾರೆ. ಅವರು ಪರಲೋಕದ ಬಗ್ಗೆ ಖಚಿತರಾಗಿದ್ದಾರೆ. (27:2-3)

> ಅಲ್ಲಾಹನ ಗ್ರಂಥವನ್ನು ಪಠಿಸುವವರು ಮತ್ತು ಬದ್ಧತೆಗಳನ್ನು ಎತ್ತಿಹಿಡಿಯುವವರು ಮತ್ತು ತಮಗೆ ದಯಪಾಲಿಸಿರುವುದರಿಂದ ಸಾರ್ವಜನಿಕವಾಗಿಯೂ ಅಥವಾ ರಹಸ್ಯವಾಗಿಯೂ ದಾನ ನೀಡುವವರು - ಅವರು ನಷ್ಟವಿಲ್ಲದಂತಹ ಒಂದು ವ್ಯವಹಾರವನ್ನು ಬಯಸುವವರಾಗಿದ್ದಾರೆ. (35:29)

ದಾನ, ದೇಣಿಗೆ, ಜನರೊಂದಿಗೆ ಸೌಹಾರ್ದಯುತ ಉಪಚಾರ, ನ್ಯಾಯವಾದ ವ್ಯಾಪಾರ, ನೈತಿಕ ಶಿಸ್ತು ಮತ್ತು ವಾಗ್ದಾನವನ್ನು ಪೂರೈಸುವಿಕೆ – ಇವುಗಳು ಅಲ್ಲಾಹನ ರೀತಿಯಲ್ಲಿ ಒಳಗೊಂಡಿರುವ ಕೆಲವು ಮಾರ್ಗದರ್ಶಿ ಸೂತ್ರಗಳಾಗಿವೆ. ಇದು ನಿಸ್ಸಂದೇಹಕವಾಗಿ ಮಾನವ ಸಮುದಾಯಕ್ಕಿರುವ ಪರಿಪೂರ್ಣ ಸೂತ್ರಗಳಾಗಿದೆ. ಆದಾಗ್ಯೂ, ನಾವು ಈ ನಿಗದಿತ ಮೌಲ್ಯಗಳನ್ನು ಅಳವಡಿಸಿಕೊಂಡಿಲ್ಲ. ಗ್ರಂಥವನ್ನು ಸ್ವೀಕರಿಸಿದ ಬಳಿಕವೂ, ತಮ್ಮ ನಡುವೆ ಪರಸ್ಪರ ಒಳಿತಾದ ಕೆಲಸ ಕಾರ್ಯಗಳನ್ನು ಮಾಡಲು ಉತ್ತೇಜಿಸುವ ಸತ್ಯಸಂಧತೆಯ ಒಂದು ರೀತಿಯ ಬದಲಿಗೆ, ಧರ್ಮವನ್ನು ಅನುಸರಿಸಲು ಜನರು ಕಾಲದ ಆರಂಭದಿಂದಲೂ ಒತ್ತಾಯಿಸಿಕೊಂಡು ಬಂದಿರುವುದಾಗಿ, ಕುರ್‌ಆನಿನಲ್ಲಿರುವ ಇತಿಹಾಸವು ನಮಗೆ ತಿಳಿಸುತ್ತದೆ. ಸಭ್ಯತೆ, ಪ್ರಾಮಾಣಿಕತೆ, ನಿಷ್ಕಪಟತೆ, ದೈನ್ಯತೆ, ಕನಿಕರ, ಪ್ರೀತಿ, ಪರಸ್ಪರ ಸೌಹಾರ್ದಯುತ ಉಪಚಾರ – ಇತ್ಯಾದಿಗಳನ್ನು ಜೀವನದ ಒಂದು ರೀತಿಯಾಗಿ ಅವರು ಪ್ರಚಾರ ಮಾಡುವುದಿಲ್ಲ. ಅವರು ಎಸಗಿರುವ ಎಲ್ಲಾ ದುಷ್ಕೃತ್ಯಗಳನ್ನು ಸೃಷ್ಟಿಕರ್ತನು ಕ್ಷಮಿಸಿಬಿಡಬಹುದು ಎಂಬ ನಂಬಿಕೆಯೊಂದಿಗೆ ಕೆಲವು ನಿರ್ದಿಷ್ಟ ಸಮಯದಲ್ಲಿ ಆರಾಧನೆಗಳನ್ನು ಮಾಡಲು ಒತ್ತಾಯಿಸುತ್ತಾರೆ. ಅವರಲ್ಲಿ ಬಹುಪಾಲು ಜನರು ಅವರ ಮಕ್ಕಳು, ಆಸ್ತಿ, ಇಮಾಮರು, ಪುರೋಹಿತರು, ಧಾರ್ಮಿಕ ವಿದ್ವಾಂಸರು, ಪ್ರವಾದಿಗಳು ಮತ್ತು ಭೌತಿಕ ವಿಗ್ರಹಗಳನ್ನು ಮೂರ್ತಿಕರಿಸಲು ಇಚ್ಛಿಸುತ್ತಾರೆ. ಅವರು ಸರಳ ಕಲ್ಪನೆಯಾದ ಸತ್ಯಸಂಧತೆಯ ರೀತಿಯನ್ನು ಅಥವಾ *ದೀನ್-ಅಲ್-ಹನಫಾ'ವನ್ನು* ತಿರಸ್ಕರಿಸುತ್ತಾರೆ. ವಾಸ್ತವದಲ್ಲಿ ಅವರಿಗೆ ಆಜ್ಞಾಪಿಸಲ್ಪಟ್ಟಿರುವುದು, ಉತ್ತಮ ಕಾರ್ಯಗಳು ಮತ್ತು ಉತ್ತಮ ಕೆಲಸಗಳನ್ನು ಮಾಡುವ ಮೂಲಕ, ನಿರ್ದೇಶಿಸಲಾದ ದೀನಿಗೆ ತಮ್ಮನ್ನು ಪ್ರಾಮಾಣಿಕರಾಗಿ ಅಳವಡಿಸಿಕೊಂಡು, ಅಲ್ಲಾಹನ ಅನುಶಾಸನಗಳನ್ನು ಎತ್ತಿಹಿಡಿಯುವುದು ಮಾತ್ರವಾಗಿದೆ. ಇದು ಜೀವನದ ಒಂದು ಸ್ಪಷ್ಟ ಮತ್ತು ಸರಳ ಮಾರ್ಗವಾಗಿದೆ. ಅಲ್ಲಾಹನು ಸಂಕಷ್ಟವನ್ನು ಹೇರಲಿಲ್ಲ. ಮೂರ್ತಿ ಆರಾಧಕರ ಬಗ್ಗೆ ಕುರ್‌ಆನ್ ಹೀಗೆ ಹೇಳುತ್ತದೆ:

> ಹಿಂದಿನ ಗ್ರಂಥಗಳ ಅನುಯಾಯಿಗಳಲ್ಲಿ ಇರುವ ಸತ್ಯನಿಷೇಧಿಗಳು ಮತ್ತು ಮೂರ್ತಿ-ಆರಾಧಕರು, ಅವರ ಕಡೆಗೆ ಪುರಾವೆಗಳು ಬಂದ ನಂತರವೂ ಅವರು ವಿಶ್ವಾಸವಿಡುವುದಿಲ್ಲ. (98:1)[23]

> ಅವರಿಗೆ ನಿರ್ದೇಶಿಸಿಲಾಗಿರುವುದು ಏನೆಂದರೆ - ಜೀವನ ರೀತಿಯಲ್ಲಿ (ದೀನ್) ಅಲ್ಲಾಹನ ಮೇಲೆ ವಿಶ್ವಾಸವಿಟ್ಟುಕೊಂಡು ಪ್ರಾಮಾಣಿಕವಾಗಿ ಅವನ ಸೇವೆ ಮಾಡಲು ತಮ್ಮನ್ನು ಸಮರ್ಪಿಸಿಕೊಳ್ಳಬೇಕು

[23] ಹಿಂದಿನ ಗ್ರಂಥಗಳ ಜನರಲ್ಲಿರುವ ಧರ್ಮವನ್ನು ಅನುಸರಿಸುವರು ಮತ್ತು ಕುರ್‌ಆನ್ ಸ್ವೀಕರಿಸಿದ ನಂತರವೂ ಧರ್ಮವನ್ನೇ ಪಾಲಿಸುವವರು ಮೂರ್ತಿ ಆರಾಧಕರಾಗಿತ್ತಾರೆ. ಮಾನವಕುಲಕ್ಕೆ ಜೀವನದಲ್ಲಿ ಪಾಲಿಸಲಿಕ್ಕಾಗಿ ಇರುವುದು ಕೇವಲ ಒಂದೇ ರೀತಿ, ಅದು ಅಲ್ಲಾಹನ ರೀತಿಯಾಗಿದೆ.

> ಮತ್ತು ಬದ್ಧತೆಗಳನ್ನು ಎತ್ತಿಹಿಡಿಯಬೇಕು ಹಾಗೂ ಅವುಗಳನ್ನು ನಿಷ್ಕಳಂಕವಾಗಿರಿಸಬೇಕು. ಇದಾಗಿದೆ ಸತ್ಯಸಂಧತೆಯ ಮಾರ್ಗ (ದೀನ್-ಅಲ್-ಹುನಫ). (98:5)

ಅವನ ಗ್ರಂಥದಲ್ಲಿ ವಿವರಿಸಲಾದ ಕಾರ್ಯಗಳ ಮೇಲೆ ವೈಯ್ಯುಕ್ತಿಕ ಬದ್ಧತೆಯ ಮೂಲಕ ಸತ್ಯಸಂಧತೆಯ ಮಾರ್ಗವನ್ನು ಅಳೆಯಲಾಗುತ್ತದೆ. ನಮಗೆ ಇದು 98:5 ರಿಂದ ತಿಳಿದಿದೆ. ಈ ಕೆಳಗೆ ತಿಳಿಸಿರುವುದು, ಶಿಫಾರಸು ಮಾಡಲಾದಂತಹ ಬದ್ಧತೆಯನ್ನು ಎತ್ತಿಹಿಡಿಯುವ ಒಂದು ರೀತಿಯಾಗಿದೆ:

> ನಿಮ್ಮ ಪ್ರಭುವು ನಿಮಗೆ ಹೀಗೆ ಆಜ್ಞಾಪಿಸಿದ್ದಾನೆ – ನೀವು ಅವನನ್ನಲ್ಲದೇ ಇತರರನ್ನು ಸೇವೆ ಮಾಡದಿರಿ, ನಿಮ್ಮ ಮಾತಾಪಿತರನ್ನು ಗೌರವಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರು ವೃದ್ಧರಾಗಿ ನಿಮ್ಮ ಬಳಿಯಿದ್ದರೆ, ನೀವು ಅವರೊಂದಿಗೆ ಬಿರುಸಾಗಿ ಮಾತನಾಡದಿರಿ ಅಥವಾ ಅವರೊಂದಿಗೆ ಅನುಚಿತವಾಗಿ ವರ್ತಿಸದಿರಿ. ಅವರೊಂದಿಗೆ ಸ್ನೇಹ ಭಾವದಿಂದ ಮಾತನಾಡಿರಿ ಮತ್ತು ನಮ್ರತೆ ಮತ್ತು ದಯೆಯ ರೆಕ್ಕೆಗಳನ್ನು ಅವರಿಗಾಗಿ ತಗ್ಗಿಸಿರಿ ಮತ್ತು ಹೇಳಿರಿ: “ನನ್ನ ಪ್ರಭುವೇ, ಅವರು ನನ್ನನ್ನು ಚಿಕ್ಕಂದಿನಿಂದ ಸಾಕಿದ್ದಾರೆ, ನೀನು ಅವರು ಮೇಲೆ ಕರುಣೆತೋರು.” (17:23-24)

ಈ ಸರಳ ನಿಯಮಗಳನ್ನು ಪಾಲಿಸುತ್ತಾ ಏಕದೇವನ ಸೇವೆಯನ್ನು ಮಾಡುವಂತಹ ಒಂದು ಜನಸಮೂಹದ ವಿಶ್ವವ್ಯಾಪ್ತಿಯಾದ ಪ್ರಭಾವವನ್ನು ಒಮ್ಮೆ ಊಹಿಸಿಲು ಪ್ರಯತ್ನಿಸಿ ನೋಡಿ. **ಇಸ್ಲಾಂ ಸಂಕಲ್ಪಿಸಿರುವುದು ಇಂತಹ ಒಂದು ವಿಶ್ವವನ್ನಾಗಿದೆ.** ನಾವು ಅವನ ಆಜ್ಞೆಗಳನ್ನು ಸಮ್ಮತಿಸಬೇಕಾಗಿದೆ - ಈ ಬದ್ಧತೆಗಳನ್ನು ಎತ್ತಿಹಿಡಿಯಬೇಕು ಮತ್ತು ಅವುಗಳನ್ನು ನಿಷ್ಕಳಂಕವಾಗಿಡಬೇಕು. ಈ ಆದೇಶಗಳು ಕೊನೆಯ ಪ್ರವಾದಿಗಿರುವ ಒಂದು ಹೊಸ ಅವತೀರ್ಣವೇನಲ್ಲ. ಇಸ್ರಾಯೀಲರ ಮಕ್ಕಳಿಗಾಗಿ ಮೂಸಾರಿಗೂ ಅದೇ ಆದೇಶಗಳನ್ನು ನೀಡಲಾಗಿತ್ತು:

> ನಾವು ಇಸ್ರಾಯೀಲರ ಮಕ್ಕಳ ಜೊತೆ ಒಂದು ಒಪ್ಪಂದವನ್ನು ಮಾಡಿದೆವು, “ನೀವು ಅಲ್ಲಾಹನನ್ನಲ್ಲದೇ ಇತರರನ್ನು ಸೇವೆ ಮಾಡದಿರಿ, ಮಾತಾಪಿತರು, ಸಂಬಂಧಿಕರು, ಅನಾಥರು, ಮತ್ತು ಬಡವರನ್ನು ಆದರಿಸಿ. ಅವರೊಂದಿಗೆ ನೀವು ಸ್ನೇಹಭಾವದಿಂದ ಮಾತನಾಡಿರಿ. ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ ಮತ್ತು ಅವುಗಳನ್ನು ನಿಷ್ಕಳಂಕವಾಗಿರಿಸಿ. ಆದರೆ ಕೆಲವರನ್ನು ಹೊರತು ಪಡಿಸಿ, ನೀವು (ಆ ಒಪ್ಪಂದದಿಂದ) ತಿರುಗಿ ಬಿಟ್ಟಿರಿ, ಮತ್ತು ನೀವು ವಿಮುಖರಾಗಿದ್ದೀರಿ.” (2:83)

ಇಸ್ರಾಯೀಲರ ಮಕ್ಕಳಲ್ಲಿ ಬಹುಭಾಗವು ಅಲ್ಲಾಹನೊಂದಿಗೆ ಮಾಡಿದ ತಮ್ಮ ಒಪ್ಪಂದದಿಂದ ವಿಮುಖರಾದರು ಮತ್ತು ಅದನ್ನು ನಿಷ್ಕ್ರಿಯೆಗೊಳಿಸಿದರು ಎಂದು 2:83 ಹೇಳುತ್ತದೆ. ಅವರು ತಮ್ಮ ಜವಾಬ್ದಾರಿಯನ್ನು ಪೂರೈಸಲಿಲ್ಲ.

ಅದೇ ರೀತಿ, ನಾವು ಈ ಕೆಳಗಿನ ಆದೇಶಗಳ ಅವಶ್ಯಕತೆಗಳನ್ನು ಪಾಲಿಸುವ ಮೂಲಕ ನಮ್ಮ ಬದ್ಧತೆಗಳನ್ನು ಎತ್ತಿಹಿಡಿಯಲು ನಿರೀಕ್ಷಿಸಲಾಗಿದೆ:

> ಓ ಮಾನವಕುಲವೇ! ನೀವು ನಿಮ್ಮ ಪ್ರಭುವನ್ನು ಲಕ್ಷಿಸಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ನಂತರ ಅದರಿಂದ ಅದರ ಸಂಗಾತಿಯನ್ನು ಸೃಷ್ಟಿಸಿದನು. ಅವರಿಬ್ಬರಿಂದಲೂ ಅನೇಕ ಪುರುಷರು ಮತ್ತು ಮಹಿಳೆಯರನ್ನು ವ್ಯಾಪಿಸಿದನು. ನೀವು ಪ್ರತಿಜ್ಞೆ ಮಾಡುವಂತಹ ಅಲ್ಲಾಹನನ್ನು ಲಕ್ಷಿಸಿರಿ, ಮತ್ತು ನಿಮ್ಮ ಸಂಬಂಧಿಕರನ್ನು ಆದರಿಸಿರಿ. ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ. ನೀವು ಅನಾಥರಿಗೆ ಅವರ ಹಕ್ಕಿನ ಸೊತ್ತನ್ನು ಕೊಡಬೇಕು ಮತ್ತು ಒಳಿತನ್ನು ಕೆಡುಕಿನೊಂದಿಗೆ ಬದಲಿಸಬಾರದು ಅಥವಾ ಅವರ ಸೊತ್ತಿನೊಂದಿಗೆ ನಿಮ್ಮ ಸೊತ್ತನ್ನು ಮಿಶ್ರಣಗೊಳಿಸಿ ಅವರ ಹಣವನ್ನು ತಿನ್ನಬಾರದು. ಇದು ಘೋರ ಅನ್ಯಾಯವಾಗಿದೆ. (4:1-2)

ಇಸ್ರಾಯೀಲರ ಮಕ್ಕಳಿಗೆ ಅವತೀರ್ಣವಾದ ಆದೇಶಗಳೇ ಮತ್ತೊಮ್ಮೆ ಕೊನೆಯ ಪ್ರವಾದಿಗೆ ಅವತೀರ್ಣಿಸಲಾಯಿತು. ಅದನ್ನು ಅಂಗೀಕರಿಸಿದವರಿಗೆ ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯಲು ಮತ್ತು ಅವುಗಳನ್ನು ನಿಷ್ಕಳಂಕವಾಗಿರಿಸಲು ಜ್ಞಾಪಿಸಲಾಯಿತು. ಅವನಲ್ಲಿ ವಿಶ್ವಾಸವಿರಿಸುವವರು ಅವನ ಸೇವೆಯನ್ನು ಮಾಡಬೇಕು ಮತ್ತು ತಮ್ಮ ಬದ್ಧತೆಗಳನ್ನು ಈಡೇರಿಸಿಕೊಳ್ಳುವ ಹಾಗೂ ಅವುಗಳನ್ನು ನಿಷ್ಕಳಂಕವಾಗಿರಿಸುವ ಮೂಲಕ ಅವನ ಇಚ್ಛೆಯನ್ನು ಪಾಲಿಸಬೇಕು ಎಂದು ಕುರ್‌ಆನಿನುದ್ದಕ್ಕೂ ಅನೇಕ ಬಾರಿ ಅವನು ಪುನರಾವರ್ತನೆ ಮಾಡುತ್ತಾನೆ. ಅಲ್ಲಾಹನು ಅವನ ಗ್ರಂಥದಲ್ಲಿ ನಿರ್ದೇಶಿಸಿರುವುದೇ ಅವನ ಒಪ್ಪಂದಗಳಾಗಿವೆ. ಒಪ್ಪಂದಗಳನ್ನು ಪೂರೈಸುವ ಅವನ ಸೇವಕರ ಬಾಧ್ಯತೆಯನ್ನು ಅವನು ನಿರಂತರವಾಗಿ ನಮಗೆ ನೆನಪಿಸುತ್ತಾನೆ:

> ನೀವು ಅನಾಥರ ಹಣವನ್ನು ಮುಟ್ಟದಿರಿ, ಅವರು ಯೌವನಾವಸ್ಥೆಗೆ ತಲುಪುವವರೆಗೆ ಅವರಿಗೆ ಒಳಿತು ಮಾಡುವುದನ್ನು ಹೊರತುಪಡಿಸಿ. ನೀವು ನಿಮ್ಮ ಒಪ್ಪಂದಗಳನ್ನು ಈಡೇರಿಸಿರಿ. ನಿಮ್ಮ ಒಪ್ಪಂದಕ್ಕೆ ನೀವು ಹೊಣೆಗಾರರಾಗಿದ್ದೀರಿ. ನೀವು ವ್ಯಾಪಾರ ಮಾಡುವಾಗ ಪೂರ್ಣ ಅಳತೆಯನ್ನು ನೀಡಿರಿ, ಮತ್ತು ಸಮಾನತೆಯ ತುಲನೆಯಿಂದ ತೂಕ ಮಾಡಿರಿ. ಇದು ಉತ್ತಮವೂ ಮತ್ತು ನ್ಯಾಯಸಮ್ಮತವೂ ಆಗಿದೆ. ಖಚಿತವಾಗಿಯೂ, ನಿಮ್ಮ ಶ್ರವಣ, ದೃಷ್ಟಿ ಮತ್ತು ಮನಸ್ಸು - ಇವುಗಳ ಬಗ್ಗೆ ಪ್ರಶ್ನಿಸಲ್ಪಡುವುದು. (17:34-36)

ಅಂದರೆ, ನಾವು ಅನಾಥರ ಆರೈಕೆ ಅಥವಾ ನಮ್ಮ ವ್ಯಾಪಾರ ಚಟುವಟಿಕೆಗಳು ಸೇರಿದಂತೆ ನಾವು ನಮ್ಮ ಜೀವನದಲ್ಲಿ ಮಾಡುವ ಪ್ರತಿಯೊಂದೂ ದಾಖಲಿಸಲ್ಪಡುತ್ತದೆ. ಪರಲೋಕದಲ್ಲಿ, ನಮ್ಮ ಕಿವಿಗಳು, ಕಣ್ಣುಗಳು ಮತ್ತು ಹೃದಯವು ನಮ್ಮ ವಿರುದ್ಧ ಸಾಕ್ಷ್ಯ ಹೇಳುವ ಕಾರಣ, ನಾವು ಮಾಡಿದ ಯಾವುದೇ ಕಾರ್ಯವನ್ನು ಅಲ್ಲಿ ನಿರಾಕರಿಸಲು ಸಾಧ್ಯವಿಲ್ಲ. ಉದಾಹರಣೆಗೆ ನಾವು ನಮ್ಮ ಸಾಮಾನ್ಯ ಜ್ಞಾನವನ್ನು ಬಳಸದೆ ಕಣ್ಣುಮುಚ್ಚಿ ಯಾವುದನ್ನಾದರೂ ಸ್ವೀಕರಿಸಿದರೆ, ಶ್ರವಣ, ದೃಷ್ಟಿ ಮತ್ತು ಮನಸ್ಸು ನಮ್ಮ ವಿರುದ್ಧ ಸಾಕ್ಷ್ಯ ಹೇಳುವುದು.

ಅಲ್ಲಾಹನಿಗೆ ತನ್ನನ್ನು ಸಮ್ಮತಿಸಿಕೊಂಡಿದ್ದೇನೆ ಎಂದು ಒಬ್ಬ ಮುಸ್ಲಿಮನು ಹೇಳಿಕೊಳ್ಳುವುದಾದರೆ, ಅವನು ತನ್ನ ಒಪ್ಪಂದಗಳಿಗೆ ಎಷ್ಟು ಬದ್ಧನಾಗಿದ್ದಾನೆ ಎಂದು ಗಮನಿಸುವ ಮೂಲಕ ಅವನ ಹೇಳಿಕೆಯ ಸತ್ಯಾಂಶವನ್ನು

ಪರೀಕ್ಷಿಸಬಹುದು. ಇಸ್ಲಾಂ ಎಂಬುವುದು ಕರ್ಮಗಳ ಹಾಗೂ ಮೌಲ್ಯಗಳ ಮೇಲೆ ಆಧರಿತವಾದ, ಸೃಷ್ಟಿಕರ್ತನಿಂದ ವಿನ್ಯಾಸಮಾಡಲಾದ ಒಂದು ಜೀವನ ರೀತಿಯಾಗಿದೆ. ಒಂದು ವ್ಯಕ್ತಿಯ ಕರ್ಮಗಳ ಮೂಲಕ ಅವನ್ನು ತಿಳಿಯಬಹುದು.

ತಮ್ಮ ಬದ್ಧತೆಗಳನ್ನು ಎಂದಿಗೂ ಈಡೇರಿಸಿಕೊಳ್ಳದಂತೆ ಅಥವಾ ಯಾವುದೇ ನೈತಿಕ ಮೌಲ್ಯವನ್ನು ಗಳಿಸದಂತೆ, ಧಾರ್ಮಿಕರು (ಅಲ್ಲಾಹನ ಗ್ರಂಥವನ್ನು ಅರಬಿಯಲ್ಲೇ ಪಠಿಸಬೇಕೆಂದು ತಮ್ಮ ಅನುಯಾಯಿಗಳನ್ನು ಒತ್ತಾಯಿಸಿ) ಜನರಿಗೆ ಕುರ್‌ಆನಿನ ವಚನಗಳನ್ನು ಕೇವಲ ಗಿಳಿಪಾಠ ನಡೆಸುವಂತೆ ಮಾಡುತ್ತಾರೆ. ವಿಧ್ಯುಕ್ತವಾಗಿ (ಅಂದರೆ ವಿಧಿ ವಿಧಾನದಲ್ಲಿ) ಪ್ರಾರ್ಥಿಸುವುದು ಅಲ್ಲಾಹನಿಂದ ಅವತರಿಸಲ್ಪಟ್ಟ ದೀನಿನ ಭಾಗವಲ್ಲ. ಅವನಿಂದ ಆಜ್ಞಾಪಿಸಲ್ಪಟ್ಟ ರೀತಿಯು ಕರ್ಮಗಳ ಮೂಲಕ ಸೇವೆ ಮಾಡುವುದನ್ನು ನಿರೀಕ್ಷಿಸುತ್ತದೆ. ವಿಧ್ಯುಕ್ತ ಪ್ರಾರ್ಥನೆಯನ್ನು ಯಾರು ಬೇಕಾದರೂ ಮಾಡಬಹುದು.

ಒಳ್ಳೆಯ ಮುಸ್ಲಿಮರು ಮಕ್ಕಾದ ಕಡೆಗೆ ಮುಖ ಮಾಡಿ ದಿನಕ್ಕೆ ಐದು ಬಾರಿ ವಿಧ್ಯುಕ್ತವಾಗಿ ಪ್ರಾರ್ಥನೆ [24]ಮಾಡುಬೇಕೆಂದು ಅರಬೀ ಧರ್ಮದ ವೀರರು ಒತ್ತಾಯ ಪಡಿಸುತ್ತಾರೆ. ಇದು ಅವರ ಧರ್ಮದ ಅತ್ಯಂತ ಪ್ರಮುಖವಾದ ಬದ್ಧತೆಯಾಗಿದೆ ಮತ್ತು ಅವರ ವಿಶ್ವಾಸದ ಮೊದಲ ಕಂಬವಾಗಿದೆ. ವಿಧ್ಯುಕ್ತವಾಗಿ ಪ್ರಾರ್ಥನೆ ಮಾಡುವ ಮೂಲಕ ಬದ್ಧತೆಗಳನ್ನು ಪೂರೈಸುವ ಅಗತ್ಯವನ್ನು ಕುರ್‌ಆನ್ ಎಲ್ಲಿಯೂ ಪ್ರಸ್ಥಾವಿಸಿಲ್ಲದ ಕಾರಣ ಅವರ ಈ ವಾದಕ್ಕೆ ಯಾವುದೇ ಆಧಾರವಿಲ್ಲ. ವಾಸ್ತವವಾಗಿಯೂ ಇದು ಸತ್ಯಾಂಶವಾಗಿದೆ ಮತ್ತು ಅದರಿಂದ ಓಡಿಹೋಗಲು ಸಾಧ್ಯವಿಲ್ಲ.

ಹಾಗೆ, ಕುರ್‌ಆನಿನ ಪ್ರಮುಖ ಪದಗಳಲ್ಲಿ ಒಂದಾದ (ತರುವಾಯ ದೀನಿನ ಪ್ರಮುಖ ಪರಿಕಲ್ಪನೆಗಳಲ್ಲಿಯೂ ಒಂದಾದ) *ಸ್ವಲಾತ್* (ಬದ್ಧತೆ) ಎಂಬ ಪದವನ್ನು ವಿಧ್ಯುಕ್ತ ಪ್ರಾರ್ಥನೆ ಎಂಬ ಅರ್ಥದೊಂದಿಗೆ ತಿರುಚುವ ಮೂಲಕ ಭ್ರಷ್ಟಗೊಳಿಸಿದರು. ಅವರು ಗ್ರಂಥದಲ್ಲಿ ಅಲ್ಲಾಹನು ನಿಗದಿ ಪಡಿಸಿದ ಕರಾರುಗಳ ಪ್ರಕಾರ ಬದ್ಧತೆಗಳನ್ನು ಎತ್ತಿಹಿಡಿಯುವುದರಿಂದ ಜನರನ್ನು ತಡೆಯುತ್ತಾರೆ.

ಸ್ವಲಾತ್ ಪದದ ಮಿಥ್ಯನಿರೂಪಣೆಯನ್ನು ಅನ್ವೇಷಿಸುವ ಮುಂಚೆ, ಆರಾಧನೆ ಅಥವಾ ಪೂಜೆಯ ಬಗ್ಗೆ ಕುರ್‌ಆನ್ ಏನು ಹೇಳುತ್ತದೆ ಎಂದು ನೋಡೋಣ ಮತ್ತು ಅದರ ಬಗ್ಗೆ ಇರುವ ಸೂಚನೆಗಳು ಯಾವುವು ಎಂದು ಚೆನ್ನಾಗಿ ತಿಳಿದುಕೊಳ್ಳೋಣ. ಇದು ಮುಖ್ಯವಾದ ವಿಷಯವಾಗಿದೆ. ಏಕೆಂದರೆ, ಸ್ವಲಾತ್ ಎಂಬ ಪದವನ್ನು ವಿಧ್ಯುಕ್ತ

[24] ಇದು ಅರಬೀ ಧರ್ಮದಲ್ಲಿ ಅತಿ ಮುಖ್ಯವಾದ ವಿಶ್ವಾಸದ ಕಂಬವಾಗಿದೆ. ಅಪರಾಧಿಗಳೂ ಸೇರಿದಂತೆ, ಒಂದು ವ್ಯಕ್ತಿಯ ಸ್ವಭಾವವನ್ನು ಅವನ ವಿಧ್ಯುಕ್ತ ಪ್ರಾರ್ಥನೆಗಳ ಅನುಸರಣೆಯ ಮೇಲೆ ತೀರ್ಮಾನಿಸಲಾಗುತ್ತದೆ. ಕೆಲವು ದೇಶಗಳಲ್ಲಿ, ಪ್ರಾರ್ಥಿಸದೇ ಇರುವುದು ಗಂಭೀರ ಅಪರಾಧವಾಗಿದೆ.

ಪ್ರಾರ್ಥನೆ ಎಂದು ಚೇಷ್ಟೆಯಿಂದ ತಿರುಚಲಾಗಿದೆ. ನಾವು ತಿಳಿದಿರುವಂತೆ ವಿಧ್ಯುಕ್ತ ಪ್ರಾರ್ಥನೆಯು, ಆರಾಧನೆಯ ಅಥವಾ ಪೂಜೆಯ ಕ್ರಿಯೆಯಾಗಿದೆ[25].

ಅಲ್ಲಾಹನು ಆರಾಧಿಸಲ್ಪಡಬೇಕಾದವನಲ್ಲ

ಪ್ರಥಮವಾಗಿ ಹಾಗೂ ಪ್ರಮುಖವಾಗಿ: 'ಪೂಜೆ ಅಥವಾ ಆರಾಧನೆ' ಎಂಬ ಪದವು ಕುರ್‌ಆನಿನಲ್ಲಿ ಎಲ್ಲೂ ಕಂಡುಬರುವುದಿಲ್ಲ. ಮತ್ತೊಮ್ಮೆ, ಧಾರ್ಮಿಕರು ಗ್ರಂಥದಲ್ಲಿನ ಒಂದು ಸರಳ ಪದದ ಅರ್ಥವನ್ನು ತಿರುಚಿದರು.

ಎಲ್ಲಾ ಮಾನವರು ನಿಗದಿತ ಕರಾರುಗಳ ಪ್ರಕಾರ ತಮ್ಮ ಬದ್ಧತೆಗಳನ್ನು ಎತ್ತಿಹಿಡಿದು, ಅವುಗಳನ್ನು ನಿಷ್ಕಳಂಕವಾಗಿ ಕಾಪಾಡಿಕೊಂಡು, ಸತ್ಯಸಂಧವಾದ ಒಂದು ಜೀವನ ರೀತಿಯನ್ನು ನಡೆಸುವ ಅವಶ್ಯಕತೆಯು ಗ್ರಂಥದ ಸಾರಾಂಶವಾಗಿದೆ. **ಆರಾಧನೆ ಅಥವಾ ವಿಧ್ಯುಕ್ತ ಪ್ರಾರ್ಥನೆಯ ನಿರ್ವಹಣೆಯ ಮೂಲಕ ಈ ಬದ್ಧತೆಗಳನ್ನು ಈಡೇರಿಸಲು ಯಾರಿಗೂ ಸಾಧ್ಯವೇ ಇಲ್ಲ**. ಪ್ರತಿಯೊಬ್ಬ ವ್ಯಕ್ತಿಯು, ತನ್ನ ಪ್ರಭುವಿನ ಅನುಗ್ರಹದ ಕಡೆಗೆ ಸಮ್ಮತಿಸಿಕೊಳ್ಳುವಂತಹ ವೈಯುಕ್ತಿಕ ಕಾರ್ಯಗಳ ಮೂಲಕ ತನ್ನ ಬದ್ಧತೆಗಳನ್ನು ಪಾಲಿಸಬೇಕಾಗಿದೆ.

> *ವಮಾ ಖಲಕ್ತುತುಲ್ ಜಿನ್ನ ವಲ್ ಇನ್'ಸ ಇಲ್ಲಾ ಲಿ-ಯ'ಅಬುದೂನಿ (51:56)*
>
> ನಾನು ಜಿನ್ನ್'ಗಳನ್ನು ಮತ್ತು ಮಾನವರನ್ನು, ನನ್ನನ್ನು ಸೇವೆ ಮಾಡುವ ಹೊರತಾಗಿ ಸೃಷ್ಟಿಸಲಿಲ್ಲ. (51:56)

ಈ ಭೂಮಿಯ ಮೇಲೆ ನಾವು ಇರುವ ಉದ್ದೇಶವನ್ನು, ಕುರ್‌ಆನ್ ಒಂದೇ ವಾಕ್ಯದಲ್ಲಿ ವಿವರಿಸಿದೆ. ನಾವು ಅವನ ಸೇವೆಯನ್ನು ಮಾಡುವ ಸಲುವಾಗಿ ಸೃಷ್ಟಿಸಲ್ಪಟ್ಟಿದ್ದೇವೆ, ಆರಾಧನೆಯನ್ನು ಮಾಡಲು ಅಲ್ಲ. ನಾವು ಭವ್ಯ ವಿನ್ಯಾಸದಲ್ಲಿ, ಕರ್ಮಗಳ ಮೂಲಕ (ಕೇವಲ ಚಿಂತನೆಗಳ ಅಥವಾ ಪದಗಳ ಮೂಲಕವಲ್ಲ) ಸೇವೆ ಮಾಡಲು ಸೃಷ್ಟಿಸಲ್ಪಟ್ಟಿದ್ದೇವೆ. 'ಸೇವೆ'ಯನ್ನು 'ಆರಾಧನೆ' ಎಂದಾಗಿಸಿದ ಮಿಥ್ಯನಿರೂಪಣೆಯು, ಇಸ್ಲಾಮಿನ ರಮ್ಯನೋಟದ ಮೇಲೆ ದಾರುಣ ಪರಿಣಾಮವನ್ನು ಬೀರುತ್ತದೆ.

ಇಲ್ಲಿ ನಡೆಯುವ ಚರ್ಚೆಯ ಸನ್ನಿವೇಶಗಳಲ್ಲೂ, ಸೇವೆ ಮತ್ತು ಆರಾಧನೆ ಎಂಬ ಪದಗಳು ವ್ಯತ್ಯಸ್ತ ಅರ್ಥಗಳನ್ನು ಹೊಂದಿವೆ. ಸೇವೆ ಎಂಬ ಪದವು, ಅಲ್ಲಾಹನ ಕಾನೂನುಗಳಿಗೆ ಅನುಗುಣವಾಗಿ ಉತ್ತಮ ಕಾರ್ಯಗಳನ್ನು ಮಾಡುವುದರ ಮೂಲಕ ಅವನ ಸೇವೆ ಮಾಡುವುದನ್ನು ವ್ಯಕ್ತಪಡಿಸುತ್ತದೆ. ಆರಾಧನೆ ಎಂಬ ಪದವು ಆಚರಣೆಗಳು, ವಿಧ್ಯುಕ್ತ ಪ್ರಾರ್ಥನೆಗಳು, ತೀರ್ಥಯಾತ್ರೆಗಳು ಮತ್ತು ಸ್ತೋತ್ರಗಳ ಹಾಡುಗಳು,

[25] ಕುರ್‌ಆನಿನಲ್ಲಿ ಅಬ್ದ್ ಎಂಬ ಪದದ ಅರ್ಥ ಸೇವಕ, ನ'ಬುದು ಎಂದರೆ ನಾವು ಸೇವೆಮಾಡುತ್ತೇವೆ, ಲಾನ'ಬುದು ಎಂದರೆ ನಾವು ಸೇವೆ ಮಾಡುವುದಿಲ್ಲ ಎಂದಾಗಿದೆ, ಹೊಂಬತ್ತು ಪ್ರತಿಶತ ಅನುವಾದಗಳು ಈ ಪದವನ್ನು 'ಸೇವೆ'ಯ ಬದಲಿಗೆ ಪೂಜೆ/ಆರಾಧನೆ ಎಂದು ಬಳಸಿವೆ.

ಇತ್ಯಾದಿಗಳ ಮೂಲಕ, ಮರಣಹೊಂದಿದಂತಹ ಮೂರ್ತಿಗಳಿಗೆ, ಅಥವಾ ನಿರ್ಜೀವ ವಿಗ್ರಹಗಳಿಗೆ ಗೌರವ, ಮೆಚ್ಚುಗೆ ಅಥವಾ ಪ್ರೀತಿಯ ಭಾವನೆ ಸಲ್ಲಿಸುವುದನ್ನು ಸೂಚಿಸುತ್ತದೆ. ತ'ಬುದು, ಯ'ಬುದು ಇತ್ಯಾದಿ ಪದಗಳು *ಅಬ್ದ್* ಎಂಬ ಮೂಲಪದದಿಂದ ಪಡೆಯಲಾಗಿದೆ ಹಾಗೂ ಅದರ ಅರ್ಥ 'ಸೇವಕ'ಎಂದಾಗಿದೆ ('ಆರಾಧಕ' ಎಂದಲ್ಲ). ಎಲ್ಲಾ ಮಾನವರು ಅಲ್ಲಾಹನ ಸೇವಕರಾಗಿದ್ದಾರೆ. ಆದ್ದರಿಂದ ಅವರು ಕೇವಲ ಅವನನ್ನು ಮಾತ್ರ ಸೇವೆ ಮಾಡಬೇಕು - ಮತ್ತು ತಮ್ಮನ್ನು ಅವನಿಗೆ ಮಾತ್ರ ಸಮರ್ಪಿಸಬೇಕು (ಸುಜೂದ್). ಅಬ್ದ್ (ಸೇವಕ) ಎಂಬ ಪದದ ಹಲವಾರು ಉತ್ಪನ್ನಗಳು ಇವೆ. ಉದಾಹರಣೆಗೆ, ಈ ಕೆಳಗಿನ ವಚನವು ಮರ್ಯಮರ ಮಗ ಈಸಾ ಮತ್ತು ಅಲ್ಲಾಹನಿಗೆ ನಿಕಟವರ್ತಿಗಳಾಗಿ ನಿಯೋಜಿಸಲ್ಪಟ್ಟಂತಹ ಶಕ್ತಿಗಳ (ಮಲಾ'ಇಕ್) ಬಗ್ಗೆ ಸಂಬಂಧಿಸಿದೆ.

> *ಲನ್-ಯಸ್ತನ್-ಕಿಫಲ್ ಮಸೀಹು ಅನ್ ಯಕೂನ ಅಬ್ದನ್ ಲಿಲ್ಲಾಹಿ ವಲಲ್ ಮಲಾಯಿಕತುಲ್ ಮುಕರ್ರಬೂನ ವ ಮನ್ ಯಸ್ತನ್ಕಿಫ ಅನ್ ಇಬಾದತಿಹೀ ವ ಯಸ್ತಕ್-ಬಿರ್ ಫಸಯಹ್-ಶುರುಹುಮ್ ಇಲ್ಲೈಹಿ ಜಮೀಅನ್ (4:172)*
>
> ತಾನು ಅಲ್ಲಾಹನ ಸೇವಕ(ಅಬ್ದ್)ನಾಗಿರುವ ಬಗ್ಗೆ ಈಸಾರು ಎಂದಿಗೂ ಸಂಕೋಚ ಪಡಲಿಲ್ಲ, ನಿಕಟವರ್ತಿಗಳಾದ ಶಕ್ತಿಗಳೂ (ಸಂಕೋಚ) ಪಡುವುದಿಲ್ಲ. ಯಾವನಾದರೂ ಅವನನ್ನು ಸೇವೆ (ಇಬಾದತಿಹೀ) ಮಾಡುವ ಬಗ್ಗೆ ಸಂಕೋಚಪಟ್ಟರೆ ಮತ್ತು ಅಹಂಭಾವ ತೋರಿಸಿದರೆ ನಿಶ್ಚಯವಾಗಿಯೂ ಅವನು ಅವರೆಲ್ಲರನ್ನೂ ಒಟ್ಟಾಗಿ ಸೇರಿಸಿ ತನ್ನ ಮುಂದೆ ಹಾಜರುಪಡಿಸುವನು. (4:172)

ಈಸಾರು ತಾನು ಅಲ್ಲಾಹನ ಸೇವಕನಾಗಿರಲು ಕಿಂಚಿತ್ತೂ ಸಂಕೋಚಪಡಲಿಲ್ಲ. ತನ್ನ ಮಾಲಿಕನ ಸೇವೆಮಾಡುವುದು ಸೇವಕನ ಕರ್ತವ್ಯವಾಗಿದೆ. ತನ್ನ ಬದ್ಧತೆಗಳನ್ನು ಎತ್ತಿಹಿಡಿಯುವ ಮೂಲಕ ಅಲ್ಲಾಹನ ಸೇವೆ ಮಾಡುವುದು ಒಂದು ವಿಶ್ವಾಸಿಯ ಕರ್ತವ್ಯವಾಗಿದೆ ಅಲ್ಲದೆ ಬಗ್ಗುವುದರ ಅಥವಾ ಸಾಷ್ಟಾಂಗದ ಮೂಲಕವೋ ಅಥವಾ ಕೆಲವು ಆಚರಣೆಗಳನ್ನು ಎಸಗಿ ಕೈತೊಳೆಯುವಂತಹ ರೀತಿಯಲ್ಲಿ ಅವನನ್ನು 'ಆರಾಧನೆ' ಮಾಡುವುದೋ ಅಲ್ಲ. ಯಾವುದೇ ಒಂದು ಗೃಹಸ್ಥನಿಗೂ ಕೂಡ, ತನ್ನನ್ನು ಪ್ರತಿನಿತ್ಯ ಪೂಜೆ ಮಾಡುವಂತಹ ಸೇವರಕರ ಒಂದು ಕೂಟವಿದ್ದರೆ ಅದು ವಿಚಿತ್ರವಾಗಿ ತೋರಬಹುದು. ಇದು ತರ್ಕಬದ್ಧವಾದ ಕಲ್ಪನೆಯೇ?

ಒಂದು ಸೇವಕರಾಗಿ, ಭೂಮಿ ಆಕಾಶಗಳಲ್ಲಿರುವ ಇತರ ಸೃಷ್ಟಿಗಳಂತೆ ನಾವು ಕೂಡ, ಅವನ ಕಡೆಗೆ ದೃಷ್ಟಿಯಿಟ್ಟು ಅವನನ್ನು ಹೊಗಳುತ್ತಿರಲು ನಿರೀಕ್ಷಿಸಲಾಗಿದೆ.

> ಓ ಮಾನವಕುಲವೇ, ಅಲ್ಲಾಹನ ಅಗತ್ಯ ನಿಮಗಾಗಿದೆ, ಅವನು ಸಮೃದ್ಧನೂ ಪ್ರಶಂಸನೀಯನೂ ಆಗಿರುತ್ತಾನೆ. (35:15)

ಅವನಿಗೆ ನಮ್ಮ ಕ್ಷುಲ್ಲಕ ಆಹಾರ ತ್ಯಾಗವೂ ಅಥವಾ ಸ್ವಯಂ ವಿಧಿಸಿಕೊಂಡ ತೀರ್ಥಯಾತ್ರೆಗಳೂ ಅಗತ್ಯವಿಲ್ಲ. ಮಕ್ಕಾದಲ್ಲಿ ನಮ್ಮ ಹಾಜರಿ ಅವನಿಗೆ ಅಗತ್ಯವಿಲ್ಲ. ವಾಸ್ತವದಲ್ಲಿ ಅವನಿಗೆ ನಮ್ಮ ವಾಗ್ದಾನಗಳ ಅಗತ್ಯವಿಲ್ಲ. ನಾವು ಒಂದು ವಾಗ್ದಾನವನ್ನು ಮಾಡಿದರೆ, ಆ ವಾಗ್ದಾನವನ್ನು ಈಡೇರಿಸುವುದು ನಮ್ಮ ಕರ್ತವ್ಯವಾಗಿದೆ ಮತ್ತು ಅದರಲ್ಲಿ ನಮಗೇ ಒಳಿತಾಗುತ್ತದೆ. **ಅವನ ಆದೇಶಗಳನ್ನು ನಾವು ಕಾರ್ಯಗಳಾಗಿ ಪರಿವರ್ತಿಸಲು ಅವನು ಇಚ್ಛಿಸುತ್ತಾನೆ.** ಒಂದು ಸೇವಕನು ತನ್ನ ಬದ್ಧತೆಗಳನ್ನು ಪಾಲಿಸಬೇಕು ಇಲ್ಲದಿದ್ದರೆ ಅವನು ನಿಷ್ಪ್ರಯೋಜಕ ವ್ಯಕ್ತಿಯಾಗಿ ಬಿಡುತ್ತಾನೆ.

ವಾಸ್ತವದಲ್ಲಿ, ಅಲ್ಲಾಹನಿಗೆ ನಮ್ಮ ಸೇವೆಯ ಅವಶ್ಯಕತೆಯೂ ಇಲ್ಲ ಎಂದು ಒಬ್ಬನು ವಾದಿಸಬಹುದು. ಇದು ನಿಜವಾಗಿದೆ. ಅವನಿಗೆ ಪ್ರಾಮಾಣಿಕವಾಗಿ ಸೇವೆ ಮಾಡುವುದರಿಂದ ಪ್ರಯೋಜನ ಪಡೆಯುವವರು ನಾವಾಗಿದ್ದೇವೆ. ಈ ಮೂಲಕ, ನಮಗೆ ನೀಡಿರುವ ಸ್ವತಂತ್ರವಾದ ಆಯ್ಕೆಯ ಜವಾಬ್ದಾರಿಯನ್ನು ನಾವು ಸಮರ್ಥಿಸಬಹುದು ಮತ್ತು ನಮ್ಮ ಸಂಪೂರ್ಣ ಸಾಮರ್ಥ್ಯದಲ್ಲಿ ಬೆಳೆಯಬಹುದು. ನಮ್ಮ ಅಸ್ತಿತ್ವದ ವಾಸ್ತವಿಕತೆಗೆ ನಾವು ಸಂಪೂರ್ಣವಾಗಿ ಹೊಂದಿಕೊಳ್ಳಬಹುದು. ನಾವು ನಮ್ಮ ನೈಜ್ಯ ಸ್ವರೂಪಕ್ಕೆ ಋಜುವಾಗಬಹುದು. ಇದು ಅಲ್ಲಾಹನ ಇಚ್ಛೆಯಾಗಿದೆ, ಮತ್ತು ನಮ್ಮ ಒಳಿತಿಗಾಗಿದೆ.

ಅದೇ ರೀತಿ, ವಿಶೇಷವಾಗಿ ನಿಯೋಜಿಸಲ್ಪಟ್ಟ ಮತ್ತು ಅಲ್ಲಾಹನಿಗೆ ನಿಕಟವರ್ತಿಗಳಾದ ಶಕ್ತಿಗಳು (ಮಲಾಇಕ್) ಇದ್ದಾರೆ. ಅವರು ಕೂಡ ತಮ್ಮ ಮಾಲಿಕನ ಸೇವೆ ಮಾಡುತ್ತಾರೆ. ಮೇಲಿನ 4:172 ವಚನದಲ್ಲಿ 'ಅಬ್ದ್' ಎಂಬ ಪದದ ಅರ್ಥ 'ಸೇವಕ'. ಅದೇ ವಚನವು ಆ ಪದದ ಇನ್ನೊಂದು ಉತ್ಪನ್ನವಾದ 'ಇಬಾದತಿಹಿ'ನ್ನು ಬಳಸಿದೆ, ಅದರ ಅರ್ಥ 'ಅವನ ಸೇವೆ ಮಾಡುವುದು'. ಈಸಾರು ಮತ್ತು ನಿಯೋಜಿಸಲ್ಪಟ್ಟ ಶಕ್ತಿಗಳು ಅಲ್ಲಾಹನ ಆರಾಧನೆಯನ್ನು ಮಾಡಲಿಲ್ಲ. ಅವರು ಅವನು ಹೇಳಿದ ಕೆಲಸ ಹಾಗೂ ಅವನ ಸೇವೆಯಲ್ಲಿ ಬಹಳ ನಿರತರಾಗಿದ್ದರು.

ಕುರ್‌ಆನಿನಲ್ಲಿ ಮೂಲ ಪದ ಅಬ್ದ್'ನ ಇದೇ ರೀತಿಯ ಇತರ ಉತ್ಪನ್ನಗಳನ್ನು ನಮಗೆ ಕಾಣಬಹುದು, ಅವೆಲ್ಲಾ ಸೇವೆ ಎಂಬ ಅರ್ಥವನ್ನೇ ನೀಡುತ್ತದೆ, ಆರಾಧನೆ ಎಂದಲ್ಲ:

ವ ನಹ್ನು ಲಹೂ ಆಬಿದೂನ್ (2:138)

ನಾವು ಅವನನ್ನು ಸೇವೆ ಮಾಡುತ್ತೇವೆ (2:138)

ವಸ್-ಅಲ್ ಮನ್ ಅರ್-ಸಲ್ನಾ ಮಿನ್ ಕಬ್-ಲಿಕ ಮಿನ್ ರುಸುಲಿನಾ ಅಜಅಲ್-ನಾ ಮಿನ್ ದೂನಿರ್ರಹ್ಮಾನಿ ಆಲಿಹತಿನ್ ಯ'ಅಬುದೂನ (43: 45)

ನಿಮಗಿಂತ ಮುಂಚೆ ಕಳಿಸಿದಂತಹ ಸಂದೇಶವಾಹಕರಿಗೆ ನಾವು ಕರುಣಾಮಯನ ಹೊರತು ಸೇವೆ ಮಾಡಲು ಇತರ ದೇವರನ್ನು ನಿಶ್ಚಯಿಸಿಕೊಟ್ಟಿದ್ದೇವೆಯೇ ಎಂದು ಕೇಳಿ ನೋಡಿ. (43:45)

ಸರಳವಾಗಿ, ಎಲ್ಲಾ ರೀತಿಯ ಸೇವೆಗಳು ಕರ್ಮಗಳ ನಿರ್ವಹಿಸಲಾಗುತ್ತದೆ. ವಿಶ್ವವು ಉತ್ತಮ ಉದ್ದೇಶಗಳಿಂದ ತುಂಬಿದೆ, ಆದರೆ ಕೇವಲ ಉದ್ದೇಶಗಳು ಸಾಕಾಗದು.

ಕುರ್‌ಆನಿನ ಆರಂಭಿಕ ಅಧ್ಯಾಯ *ಅಲ್-ಫಾತಿಹ* ದಲ್ಲಿ ಏಳು ವಚನಗಳನ್ನು, ಅರಬೀ ಧರ್ಮದ ಅನುಯಾಯಿಗಳು ತಮ್ಮ ಐದು 'ಕಡ್ಡಾಯ' ಪ್ರತಿದಿನದ ಪ್ರಾರ್ಥನೆಯ ವೇಳೆ ಓದುತ್ತಾರೆ. 1:5 ರಲ್ಲಿ 'ನ-ಬುದು' (ನಾವು ಸೇವೆ ಮಾಡುತ್ತೇವೆ) ಎಂಬ ಪದಕ್ಕೆ 'ನಾವು ಆರಾಧನೆ ಮಾಡುತ್ತೇವೆ' ಎಂಬ ದೂಷಿತ ಅರ್ಥ ಕೊಟ್ಟು ಧಾರ್ಮಿಕರು ಅವರನ್ನು ವಂಚಿಸುತ್ತಾರೆ. ಈ ಪದವು ಅಬ್ದ್ (ಸೇವಕ) ಎಂಬ ಮೂಲಪದದಿಂದ ಪಡೆಯಲಾಗಿದೆ. ಯಾವುದನ್ನೂ ಅವನೊಂದಿಗೆ ಸಂಯೋಜಿಸದೆ, ಅವನ ಸೇವೆಯನ್ನು ಮಾತ್ರ ಮಾಡುತ್ತೇವೆ ಎಂದು ಘೋಷಿಸುವ ಬದಲಿಗೆ ಅವರು 'ಆರಾಧನೆ' ಎಂದು ಹೇಳುತ್ತಾರೆ. ಅಲ್ಲಾಹನು ತನ್ನನ್ನು ಆರಾಧಿಸಲು ಯಾರಿಗೂ ಆದೇಶಿಸಲಿಲ್ಲ.

ಅಲ್-ಫಾತಿಹ ಸೂರದ ಸಾರಾಂಶವೇನೆಂದರೆ, ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದರ ದೀನಿನ ಮೇಲೂ ಅಲ್ಲಾಹನ ಪ್ರಭುತ್ವವಿರುವುದು ಅವನ ಲಕ್ಷಣಗಳಲ್ಲಿ ಒಳಗೊಂಡಿದೆ ಎಂಬುವುದಾಗಿದೆ. ಈ ಪ್ರಪಂಚದ ಮತ್ತು ಪರಲೋಕದಲ್ಲಿನ ಕ್ರಮಬದ್ಧ ವ್ಯವಸ್ಥೆಯ ನಿರಂಕುಶ ದೊರೆ ಅವನಾಗಿದ್ದಾನೆ. ಮೊದಲ ನಾಲ್ಕು ವಚನಗಳು ಹೇಳುತ್ತದೆ: '*ಅತ್ಯಂತ ಸಹಾನುಭೂತಿಯುಳ್ಳ, ಕರುಣಾಮಯನಾದ ಅಲ್ಲಾಹನ ಹೆಸರಿನೊಂದಿಗೆ. ಪ್ರಪಂಚದ ಪ್ರಭುವಾದ ಅಲ್ಲಾಹನಿಗೆ ಪ್ರಶಂಸೆಗಳು. ಅವನು ಅತ್ಯಂತ ಸಹಾನುಭೂತಿಯುಳ್ಳವನು, ಕರುಣಾಮಯನು. ವ್ಯವಸ್ತೆಯ ದಿನದ ದೊರೆ*'. ಅನಂತರ, ನಮ್ಮ ಪ್ರಭುವಿನ ಸೇವಕರಾಗಿ, ಅವನ ಮಾರ್ಗದರ್ಶನದಿಂದ ನಾವು ಈಗ ಓದಲು ಮುಂದಾಗುತ್ತಿರುವುದರ ಮೂಲಕ ನಾವು ಅವನನ್ನು ಸೇವೆ ಮಾಡುವ ಸಲುವಾಗಿ, ನಮ್ಮ ಒಪ್ಪಂದವನ್ನು ಎತ್ತಿಹಿಡಿಯುತ್ತೇವೆ ಎಂದು ಪ್ರತಿಜ್ಞೆ ಮಾಡುತ್ತೇವೆ - ಇದರ ಮುಂದಿನ ಅಧ್ಯಾಯದ ಪ್ರಾರಂಭದಲ್ಲೇ ತಿಳಿಸಿದ ಮಾರ್ಗದರ್ಶನವು ಇದಾಗಿದೆ: 'ಇದು ನಿಸ್ಸಂಶಯವಾದ (ಕುಂದುಕೊರತೆ ಇಲ್ಲದ) ಗ್ರಂಥವಾಗಿದೆ. ಅದೃಶ್ಯತೆಯಲ್ಲಿ ನಂಬಿಕೆ ಇರಿಸುವ ಮತ್ತು ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವಂತಹ, ಲಕ್ಷ್ಯತೆ ಇರುವವರಿಗೆ ಮಾರ್ಗದರ್ಶಿಯಾಗಿದೆ...'

1:5 ಹೀಗೆ ಸರಿಯಾಗಿ ಓದಬೇಕು:

> *ಇಯ್ಯಾಕ ನ'ಅಬುದು ವ ಇಯ್ಯಾಕ ನಸ್ತ-ಈನ್ (1:5)*
>
> ನಿನ್ನನ್ನು ಮಾತ್ರ ಸೇವೆ ಮಾಡುತ್ತೇವೆ ಮತ್ತು ನಿನ್ನಲ್ಲಿ ಮಾತ್ರ ನಾವು ಸಹಾಯ ಯಾಚಿಸುತ್ತೇವೆ. (1:5)

ನಂತರ:

> ನೇರ ಮಾರ್ಗದಲ್ಲಿ ನಮ್ಮನ್ನು ನಡೆಸು. ಅದು ನೀನು ಅನುಗ್ರಹಿಸಿದವರ ಮಾರ್ಗ, ನಿನ್ನ ಕ್ರೋಧಕ್ಕೆ ಅರ್ಹರಾಗದವರ ಮತ್ತು ದಾರಿಗೆಟ್ಟು ಹೋಗದವರ ಮಾರ್ಗವಾಗಿದೆ. (1:6-7)

ಅವನು ಅನುಗ್ರಹಿಸಿದಂತಹ ನೇರ ಮಾರ್ಗದಲ್ಲಿ ನಮ್ಮನ್ನು ನಡೆಸಲು ಅವನ ಸಹಾಯ ಯಾಚನೆಯು ಇಲ್ಲಿರುವ ವಿನಂತಿಯಾಗಿದೆ. ವೈಚಾರಿಕವಾಗಿ, ಅವನು ಅವತರಿಸಿದ ಗ್ರಂಥದ ಮುಖಾಂತರ ತನ್ನ ಸೇವಕರಿಗೆ ಮಾರ್ಗದರ್ಶನ ಕೊಡುವುದು ಅವನ ಏಕೈಕ ರೀತಿಯಾಗಿದೆ. ಖಂಡಿತವಾಗಿಯೂ ವಿಧ್ಯುಕ್ತ ಪ್ರಾರ್ಥನೆಗಳ ನಿರ್ವಹಣೆಯ ಮೂಲಕವಲ್ಲ. ಅವನ ಗ್ರಂಥದಲ್ಲಿ ಅವನು ಆದೇಶಿಸಿದ ಪ್ರಕಾರ ತಮ್ಮ ಸೇವೆಗಳನ್ನು ಪ್ರಾಯೋಗಿಕ ಕ್ರಿಯೆಗಳಾಗಿ ಭಾಷಾಂತರಿಸುವ ಬದಲಿಗೆ, *'ನಿನ್ನ ಆರಾಧನೆಯನ್ನೇ ನಾವು ಮಾಡುತ್ತೇವೆ ಮತ್ತು ನಿನ್ನ ಸಹಾಯವನ್ನು ಮಾತ್ರ ನಾವು ಕೇಳುತ್ತೇವೆ'* ಎಂದು ಧಾರ್ಮಿಕರು ಪ್ರತಿದಿನ ಹದಿನೇಳು ಬಾರಿ ಕೇವಲ ತುಟಿ ಸೇವೆಯ ಮೂಲಕ ಪುನರಾವರ್ತಿಸುತ್ತಾರೆ. (ದಿನಂಪ್ರತಿಯ ಐದು ಬಾರಿಯ ವಿಧ್ಯುಕ್ತ ಪ್ರಾರ್ಥನೆಯು ಬೆಳಗ್ಗೆ, ಮಧ್ಯಾಹ್ನ, ಅಪರಾಹ್ನ, ಸಂಜೆ ಮತ್ತು ರಾತ್ರಿಯಲ್ಲಿ 2, 4, 4, 3, 4 ಎಂಬ ಘಟಕಗಳಲ್ಲಿ ನಿರ್ವಹಿಸಲಾಗುತ್ತದೆ)

ಈ ವಚನಗಳು ಸ್ಪಷ್ಟವಾಗಿ ಹೇಳುವುದೇನೆಂದರೆ - ನಮಗೆ ಅವನ ದೀನಿನಲ್ಲಿ ಸರಿಯಾದ ಮಾರ್ಗದ ಕಡೆಗೆ ಮಾರ್ಗದರ್ಶನ ನೀಡಲು ಅವನ ದಯೆ ಮತ್ತು ಆಶೀರ್ವಾದಗಳನ್ನು ಯಾಚಿಸುವ ಸಲುವಾಗಿ, ನಾವು ಕೇವಲ ಅವನ ಸೇವೆಯನ್ನು ಮಾಡುತ್ತೇವೆ ಮತ್ತು ಅವನ ಮೇಲೆ ನಮ್ಮ ಭರವಸೆಯನ್ನು ಇಡುತ್ತೇವೆ ಎಂದು ಘೋಷಿಸುವುದು – ಆಗಿದೆ. ಅಲ್ಲಾಹನಿಗೆ ಮಾತ್ರ ತನ್ನ ಸೇವಕರನ್ನು ನೇರ ಮಾರ್ಗಕ್ಕೆ ಮಾರ್ಗದರ್ಶನ ನೀಡಲು ಸಾಧ್ಯವಿದೆ. ಪ್ರವಾದಿಗಳು ಸೇರಿದಂತೆ, ಬೇರೆ ಯಾರಿಗೂ ಸಹ ಇದು ಸಾಧ್ಯವಿಲ್ಲ:

> (ಪ್ರವಾದಿಯರೇ) ನೀವು ಪ್ರೀತಿಸುವವರಿಗೆ (ಸಹ) ನಿಮಗೆ ಮಾರ್ಗದರ್ಶನ ಕೊಡಲು ಸಾಧ್ಯವಿಲ್ಲ. ತಾನು ಇಚ್ಛಿಸುವವರಿಗೆ ಮಾರ್ಗದರ್ಶನ ಕೊಡುವವನು ಅಲ್ಲಾಹನಾಗಿದ್ದಾನೆ. ಏಕೆಂದರೆ, ಅವನು ಮಾತ್ರ ಮಾರ್ಗದರ್ಶನಕ್ಕೆ ಅರ್ಹರಾದವರನ್ನು ಅರಿಯುವವನು. (28:56)

ಇತರರನ್ನು ನೇರ ಮಾರ್ಗಕ್ಕೆ ಮಾರ್ಗದರ್ಶನ ಮಾಡುತ್ತಾರೆಂದು ಹೇಳಿಕೊಳ್ಳುವ 'ಪವಿತ್ರ ಜನರು' – ಎಂಬ ಸಂಗತಿಯೇ ಇಲ್ಲ. ಈ 'ಪವಿತ್ರ ಜನರು' ಅಂತಿಮವಾಗಿ ತಮ್ಮ ಅನುಯಾಯಿಗಳ ಮೂರ್ತಿಗಳಾಗಿ ಪರಿಣಮಿಸುತ್ತಾರೆ.

> ವಿಶ್ವಾಸಿಗಳ ಪ್ರಭುವು ಅಲ್ಲಾಹನಾಗಿದ್ದಾನೆ. ಅವನು ಅವರನ್ನು ಅಂಧಕಾರದಿಂದ ಬೆಳಕಿನ ಕಡೆಗೆ ನಡೆಸುತ್ತಾನೆ. ಸತ್ಯನಿಷೇಧಿಗಳ ಪ್ರಭುಗಳು ಮೂರ್ತಿಗಳಾಗಿತ್ತಾರೆ. ಅವುಗಳು ಅವರನ್ನು ಬೆಳಕಿನಿಂದ ಅಂಧಕಾರದ ಕಡೆಗೆ ನಡೆಸುತ್ತದೆ. ಅವರು ತಮ್ಮ ಶಾಶ್ವತ ಪ್ರತಿಫಲವಾದ ಅಗ್ನಿಗೆ ಅರ್ಹರಾಗಿದ್ದಾರೆ. (2:257)

‘ಪವಿತ್ರ ಪುರುಷರು’ ಜನರನ್ನು ಬೆಳಕಿನಿಂದ ಅಂಧಕಾರದ ಕಡೆಗೆ ಹಾಯಿಸಿ, ತಮ್ಮ ಅನುಯಾಯಿಗಳನ್ನು ನರಕದ ಬೆಂಕಿಯ ಕಡೆಗೆ ಕೊಂಡೊಯ್ಯುತ್ತಿದ್ದಾರೆ ಎಂದು ಕುರ್‌ಆನ್ ನಮಗೆ ಹೇಳುತ್ತಿದೆ. ಒಬ್ಬ ವ್ಯಕ್ತಿಯು ಒಂದು ಧರ್ಮಕ್ಕೆ ಸೇರಿರುವ ತನಕ, ಅವನಿಗೆ ಈ ‘ಪವಿತ್ರ ಪುರುಷ’ರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ವಿಧಿವತ್ತಾಗಿ ಪ್ರಾರ್ಥಿಸುವುದರ ಮೂಲಕ, ನಮಗೆ ಜೀವನವನ್ನು ಕೊಟ್ಟಂತಹ ನಮ್ಮ ಮಾಲಿಕನಿಗೆ ಬಿಣ್ಣೆಹಚ್ಚಲು ಸಾಧ್ಯವಿಲ್ಲ – ಎಂದು ಕುರ್‌ಆನಿನ ಒಂದು ವಿಮರ್ಶಾತ್ಮಕ ಪಠಣೆಯಿಂದ ಸ್ಪಷ್ಟವಾಗುತ್ತದೆ. ಯಾವುದೇ ಆಚರಣೆಗಳ ನಿರ್ವಹಣೆಯನ್ನು ಒಳಗೊಂಡ ಒಂದು ವಿನಿಮಯ ವ್ಯವಸ್ಥೆಯೂ ಇಲ್ಲ. ನಾವು ಅಲ್ಲಾಹನ ಕರುಣೆಯ ಮೂಲಕ ಅವನಿಂದ ಮಾರ್ಗದರ್ಶನ ಪಡೆಯುತ್ತೇವೆ – ಆ ಕರುಣೆಗೆ ಬೇಕಿರುವ ಅರ್ಹತೆ ನಮ್ಮಲ್ಲಿಲ್ಲ. ಅದಕ್ಕೆ ಅರ್ಹರಾಗುವ ಸಲುವಾಗಿ, ನಾವು ಕೇವಲ ಅಲ್ಲಾಹನ ಜೊತೆಗಿರುವ ನಮ್ಮ ಒಪ್ಪಂದವನ್ನು ಈಡೇರಿಸಿಕೊಂಡು ಅವನ ಸೇವೆಯನ್ನು ಮಾಡಬೇಕು. ಅದು ಅವನೊಂದಿಗಿರುವ ಕರಾರಾಗಿದೆ ಮತ್ತು ಕೊನೆಯ ಉಸಿರಿನ ತನಕ ಅದು ನಮ್ಮ ಮೇಲೆ ಅನ್ವಯವಾಗಿದೆ. ಸೃಷ್ಟಿಕರ್ತನನ್ನು ‘ಆರಾಧಿಸಲು’ ಮಾನವರಿಗೆ ಆಜ್ಞಾಪಿಸುವಂತಹ ಯಾವುದೇ ಒಂದು ವಚನವು ಕುರ್‌ಆನಿನಲ್ಲಿಲ್ಲ.

ಮೂಸಾ ಹಾಗೂ ಈಸಾರು ಅಲ್ಲಾಹನನ್ನು ‘ಆರಾಧಿಸಲಿಲ್ಲ’

ಕುರ್‌ಆನಿನ ಪ್ರಕಾರ, ಅವತೀರ್ಣಗೊಂಡ ಎಲ್ಲಾ ಗ್ರಂಥಗಳು ಒತ್ತುಕೊಡುವ ಏಕೈಕ ಪ್ರಮುಖ ಸಂದೇಶವೇನೆಂದರೆ: ಮಾನವಕುಲವು ಅವನನ್ನಲ್ಲದೇ ಬೇರೆ ಯಾವುದನ್ನೂ ಸೇವೆ ಮಾಡಬಾರದು. ಮೂಸಾರ ಇತಿಹಾಸವನ್ನು ಸ್ಫುಟವಾಗಿ ಕುರ್‌ಆನಿನುದ್ದಕ್ಕೂ ವಿವರಿಸಲಾಗಿದೆ. ಮೂಸಾರಿಗೆ ಅವತರಿಸಿದ್ದನ್ನೇ ದೃಢೀಕರಿಸಲು ಮರ್ಯಮರ ಮಗ ಈಸಾರನ್ನು ಅದೇ ಸಮುದಾಯಕ್ಕೆ ಕಳುಹಿಸಲಾಯಿತು.

> ಮತ್ತು ನಾವು ಮೂಸಾರಿಗೆ ಗ್ರಂಥವನ್ನು ನೀಡಿದೆವು ಮತ್ತು ಇಸ್ರಾಯೀಲರ ಮಕ್ಕಳಿಗೆ ಅದನ್ನು ಮಾರ್ಗದರ್ಶನವನ್ನಾಗಿ ಮಾಡಿ ಹೇಳಿದೆವು: “ನೀವು ನನ್ನ ಹೊರತು ಇತರರನ್ನು ನಿಮ್ಮ ಸಂರಕ್ಷಕನಾಗಿ ತೆಗೆದುಕೊಳ್ಳಬಾರದು.” (17:2)

ಇಸ್ರಾಯೀಲರ ಮಕ್ಕಳು, (ತಮ್ಮ ಒಪ್ಪಂದವನ್ನು ಎತ್ತಿ ಹಿಡಿಯುವ ಆದೇಶದ ನಂತರವೂ) ಅಲ್ಲಾಹನ ಪದಗಳನ್ನು ತಿರುಚಿ ಅವುಗಳನ್ನು ಉಲ್ಲಂಘಿಸಿದರು, ಅವರಲ್ಲಿ ಹಲವರು ಗ್ರಂಥವನ್ನು ಭಾಗಶಃ ಕಡೆಗಣಿಸಿದರು, ಎಂದು ಕುರ್‌ಆನ್ ಅನೇಕ ಕಡೆಗಳಲ್ಲಿ ನಮಗೆ ಹೇಳುತ್ತದೆ. ಅವರಿಗೆ ಗೊತ್ತುಪಡಿಸಿದ ಪವಿತ್ರ ಭೂಭಾಗವನ್ನು ಪ್ರವೇಶಿಸಲು ನಿರಾಕರಿಸಿದ ನಂತರ, ಮೂಸಾರು ಕೋಪದಿಂದ ತನ್ನ ಜನರನ್ನು ಬಿಟ್ಟು ಹೋದರು. ಅಂತಿಮವಾಗಿ, ಆ ಭೂಭಾಗವು ಅವರಿಗೆ ನಿಷೇಧಿಸಲ್ಪಟ್ಟಿತು ಮತ್ತು ಅವರು ಮೂಸಾ ವಿನಹಃ ನಲವತ್ತು ವರ್ಷಗಳ ಕಾಲ ಭೂಮಿಯಲ್ಲಿ ಅಲೆದಾಡಿದರು. (5:25-26).

ಅವರು ಯಹೂದಿತ್ವ ಎಂಬ ಧರ್ಮವನ್ನು ಸೃಷ್ಟಿಸಿದರು ಮತ್ತು ತಮ್ಮನ್ನು ಯಹೂದಿಗಳು ಎಂದು ಕರೆದರು. ಅವರು ಸಿನಗಾಗ್ ಎಂದು ಕರೆಯಲಾಗುವ ಪೂಜಾ ಮನೆಗಳನ್ನು ನಿರ್ಮಿಸಿದರು ಮತ್ತು ಪೌರೋಹಿತ್ಯದ ವ್ಯವಸ್ಥೆಯನ್ನು ರಚಿಸಿದರು, ಎಂದು ಬೈಬಲನ್ನು ಓದುವವರು ತಿಳಿದಿದ್ದಾರೆ. ಅವರು ಆಚರಣೆ, ಪೂಜೆ ಮತ್ತು ಕಾಣಿಕೆಗಳನ್ನು ಜೀವನ ರೀತಿಯಾಗಿ ಪರಿಚಯಿಸಿ, ಅದನ್ನು ಅಲ್ಲಾಹನ ಆದೇಶ ಎಂದು ತಪ್ಪಾಗಿ ವಾದಿಸಿದರು. ಉಝೈರ್[26] ಅಲ್ಲಾಹನ ಮಗ ಎಂದು ಯಹೂದಿಗಳು ಹೇಳುತ್ತಾರೆ, ಆದರೆ ಅಲ್ಲಾಹನು ದೀನನ್ನು ಉತ್ತೇಜಿಸಲು ಅವನಿಗೆ ಯಾವುದೇ ಅಧಿಕಾರ ನೀಡಲಿಲ್ಲ ಎಂದು ಕುರ್‌ಆನ್ ತಿಳಿಸುತ್ತದೆ. ಇಸ್ರಾಯೀಲರ ಮಕ್ಕಳು ಸೃಷ್ಟಿಸಿದ ಧಾರ್ಮಿಕ ವ್ಯವಸ್ಥೆಯನ್ನು ನಾಶಗೊಳಿಸಲು ಮರ್ಯಮರ ಮಗ ಈಸಾರನ್ನು ಅಲ್ಲಾಹನು ಒಂದು ಕರುಣೆಯಾಗಿ ಕಳುಹಿಸಿದನು; ಪವಿತ್ರ ಆತ್ಮದ ಜೊತೆಗೆ ಈಸಾರನ್ನು ಬೆಂಬಲಿಸಿದನು. ಈಸಾರು ಹೇಳಿದರು:

> "ನಿಮ್ಮೊಂದಿಗಿನ ತೌರಾತಿನಲ್ಲಿ ಇರುವುದನ್ನು ನಾನು ಖಚಿತಪಡಿಸಲು ಮತ್ತು ನಿಮಗೆ ನಿಷೇಧಿಸಲಾಗಿದ್ದುದನ್ನು ಅನುಮತಿಸಲು ಬಂದಿರುವೆನು. ಮತ್ತು ನಾನು ನಿಮ್ಮ ಪ್ರಭುವಿನಿಂದ ನಿದರ್ಶನಗಳೊಂದಿಗೆ ಬಂದಿರುವೆನು. ಆದ್ದರಿಂದ ಅಲ್ಲಾಹನನ್ನು ಲಕ್ಷಿಸಿರಿ ಮತ್ತು ನನ್ನನ್ನು ಅನುಸರಿಸಿರಿ. ನಿಶ್ಚಯವಾಗಿ, ಅಲ್ಲಾಹನು ನನ್ನ ಮತ್ತು ನಿಮ್ಮ ದೇವನಾಗಿದ್ದಾನೆ, ಆದ್ದರಿಂದ ಅವನನ್ನೇ ಸೇವೆ ಮಾಡಿರಿ. ಇದುವೇ ಸನ್ಮಾರ್ಗ."(3:50-51)

ಅವರು ತಮಗಾಗಿ ಬೆರೆಸಿ ತಯಾರಿಸಿದ ನಂಬಿಕೆಗಳ ವಿರುದ್ಧವಾಗಿರುವ ಅನುಶಾಸನಗಳೊಂದಿಗೆ ಬಂದಿದ್ದ ಯಾವುದೇ ಸಂದೇಶವಾಹಕರನ್ನು ಒಪ್ಪಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ಅಹಂಕರಿಸಿದರು, ತಿರಸ್ಕರಿಸಿದರು ಹಾಗೂ ಕೆಲವು ಸಂದೇಶವಾಹಕರನ್ನು ಕೊಂದರು ಕೂಡಾ. ಕುರ್‌ಆನಿನಲ್ಲಿರುವ ಇತಿಹಾಸದಿಂದ ಹೊರಹೊಮ್ಮುವ ಚಿತ್ರಣವು ಇದಾಗಿದೆ.

ವಾಸ್ತವದಲ್ಲಿ, ಅಲ್ಲಾಹನ ಆರಾಧನೆಯನ್ನು ಮಾಡಲು ಮೂಸಾರು ಅಥವಾ ಈಸಾರು ತಮ್ಮ ಅನುಯಾಯಿಗಳಿಗೆ ಹೇಳಲಿಲ್ಲ. ಇಂದು, ಈಸಾರನ್ನು ತಿರಸ್ಕರಿಸಿದ ಯಹೂದಿಗಳನ್ನು ಒಪ್ಪದ ಜನರು, *ಏಕದೇವನನ್ನು ಲಕ್ಷಿಸಿರಿ ಮತ್ತು ಅವನನ್ನು ಮಾತ್ರ ಸೇವೆ ಮಾಡಿರಿ* ಎಂಬ ಸಂದೇಶದೊಂದಿಗೆ ಬಂದಂತಹ ವ್ಯಕ್ತಿಯನ್ನೇ ಅಕ್ಷರಶಃ ಆರಾಧನೆ ಮಾಡುತ್ತಾರೆ. ಈಸಾರನ್ನು ಬೆಂಬಲಿಸಿದ್ದ ತನ್ನ ಸಮಕಾಲೀನರಾದ

---

[26] ಹಳೆಯ ಒಡಂಬಡಿಕೆ (Old Testament)ಯಲ್ಲಿ ಉಝೈರ್ ಎಂಬವನು ಬ್ಯಾಬಿಲೋನಿನ ಒಬ್ಬ ಪರ್ಷಿಯಾದ ವ್ಯಕ್ತಿಯಾಗಿದ್ದನು. ಅವನ ಮುಖ್ಯ ಉದ್ದೇಶವು, ಪರ್ಷಿಯನ್ ಸಾಮ್ರಾಜ್ಯದ ರಾಜರ ರಾಜನಾದ ಅರ್ತಾಕ್ಷರಕ್ಸಸ್'ನ ಆಸಕ್ತಿಯನ್ನು ರಕ್ಷಿಸುವುದಾಗಿತ್ತು. ಆ ರಾಜನು ಜುದಹ್ ಮತ್ತು ಜೆರುಸಲೆಮ್ ಸೇರಿದಂತೆ, ಟ್ರಾನ್ಸ್-ಯೂಪ್ರಟಿಸ್ ಖಂಡದ ಮುಖ್ಯ ಪುರೋಹಿತನಾಗಿ ಉಝೈರನ್ನು ನಿಯೋಜಿಸಿದನು. ಅವನಿಗೆ ಧಾರ್ಮಿಕ ಕಾನೂನುಗಳು, ತೆರಿಗೆಗಳು, ಆಚರಣೆಗಳು, ಆರಾಧನೆಗಳನ್ನು ರಚಿಸುವ ಸಂಪೂರ್ಣ ಅಧಿಕಾರವನ್ನು ನೀಡಲಾಗಿತ್ತು. ಧರ್ಮವಿರೋಧಿಗಳಿಗೆ ಮರಣದಂಡನೆ, ಬಹಿಷ್ಕಾರ, ಆಸ್ತಿ ಜಪ್ತಿ ಮತ್ತು ಜೈಲುವಾಸದಂತಹ ದಂಡನೆಗಳನ್ನು ಸೇರಿರುವ ಅವನ ಕಾನೂನುಗಳು, ಪವಿತ್ರವಾದುದೆಂದು ಮಂಜೂರು ಮಾಡಲಾಯಿತು. ಹೊಸ ಒಡಂಬಡಿಕೆಯಲ್ಲಿ ಈಸಾರು ಪಾರ್ಷಿಗಳ ನಿಯಮದ ಶಿಕ್ಷಕರನ್ನು ಖಂಡಿಸಿ ಹೀಗೆ ಹೇಳಿದ್ದಾಗಿ ಇದೆ: 'ಪರ್ಷಿಯನ್ ಪ್ರಭಾವವನ್ನು ಜನರು ಬಹಿರಂಗವಾಗಿ ಖಂಡಿಸುವ ತನಕ ಅವರಿಗೆ ವಿಮೋಚನೆಯಿಲ್ಲ'.

ಕೆಲವರನ್ನು ಹೊರತುಪಡಿಸಿ, ಅವರು ಒಂದು ಧರ್ಮವನ್ನು ಆವಿಷ್ಕಾರ ಮಾಡಿದರು ಮತ್ತು ಪೌರೋಹಿತ್ಯದ ವ್ಯವಸ್ಥೆಯ ಒಂದು ಹೊಸ ಆವೃತ್ತಿಯನ್ನು ಪ್ರಾರಂಭಿಸಿದರು; ಅವರು ಮಾಡಬೇಕಿದ್ದದ್ದು ಕೇವಲ, ಈಸಾರು ಬೋಧಿಸಿದ ಅನುಶಾಸನಗಳನ್ನು ಎತ್ತಿಹಿಡಿಯುವುದಾಗಿತ್ತು:

> ಅವರ ನಂತರ, ನಾವು ಸಂದೇಶವಾಹಕರನ್ನು ಕಳುಹಿಸಿದೆವು, ತರುವಾಯ ನಾವು ಮರ್ಯಮರ ಮಗ ಈಸಾರನ್ನು ಕಳುಹಿಸಿದೆವು. ನಾವು ಅವರಿಗೆ ಇಂಜೀಲನ್ನು ನೀಡಿದೆವು ಮತ್ತು ನಾವು ಅವರ ಅನುಯಾಯಿಗಳ ಹೃದಯದಲ್ಲಿ ದಯೆ ಹಾಗೂ ಕರುಣೆಯನ್ನು ಸ್ಥಾಪಿಸಿದೆವು. ಅವರು ಸೃಷ್ಟಿಸಿದ ಪೌರೋಹಿತ್ಯದ ವ್ಯವಸ್ಥೆಯು, ಅವರಿಗೆ ಯಾವತ್ತೂ ಆದೇಶಿಸಲ್ಪಡಲಿಲ್ಲ. ಅವರು ಕೇವಲ ಅಲ್ಲಾಹನ ಅನುಶಾಸನಗಳನ್ನು ಎತ್ತಿಹಿಡಿಯಬೇಕಿತ್ತು, ಆದರೆ ಆ ಅನುಶಾಸನಗಳನ್ನು ಎತ್ತಿಹಿಡಿಯಬೇಕಿದ್ದ ರೀತಿಯಲ್ಲಿ ಅದನ್ನು ಅವರು ಎತ್ತಿಹಿಡಿಯಲಿಲ್ಲ. ಆದಾಗ್ಯೂ, ಅವರಲ್ಲಿರುವ ವಿಶ್ವಾಸಿಗಳಿಗೆ ತಕ್ಕ ಪ್ರತಿಫಲವನ್ನು ನಾವು ಕೊಡುವೆವು ಆದರೆ, ಅವರಲ್ಲಿ ಬಹುಪಾಲು ಮಂದಿ ದುಷ್ಟರಾಗಿದ್ದಾರೆ. (57:27)

ಈಸಾರ ಬೋಧನೆಗಳನ್ನು ಅನುಸರಿಸುವವರ ಮೇಲೆ ಅಲ್ಲಾಹನು ದಯೆ ಮತ್ತು ಕರುಣೆಯನ್ನು ಸ್ಥಾಪಿಸುತ್ತಾನೆ ಮತ್ತು ಅವರಿಗೆ ಯಾವುದೇ ಪೌರೋಹಿತ್ಯದ ವ್ಯವಸ್ಥೆಯನ್ನು ವಿಧಿಸಲಿಲ್ಲ. ಕ್ರೈಸ್ತರು ಈಸಾರನ್ನು ದೈವೀಕರಿಸಿದರು, ಯಹೂದಿಗಳು ತಮ್ಮನ್ನು ಮತ್ತು ತಾವು ಆಯ್ಕೆಮಾಡಿದ ಸ್ಥಾನವನ್ನು ದೈವೀಕರಿಸಿದರು. ಹೀಗೆ ತಾವು ಯಾವುದನ್ನಾದರೂ ಪೂಜಿಸುತ್ತಿರಬೇಕು ಅಥವಾ ಆರಾಧಿಸುತ್ತಿರಬೇಕೆಂಬುವುದು ಮಾನವನ ಒಂದು ದೌರ್ಬಲ್ಯವಾಗಿದೆ. ಸತ್ಯದ ಈ ಎರಡು ವಿಕೃತಿಗಳ ಸೋದರ ಸಂಬಂಧಿಗಳು ಅರಬೀ ಧಾರ್ಮಿಕರು ನಿರ್ಮಿಸಿದ ಧರ್ಮದಲ್ಲೂ ಇದ್ದಾರೆ. ಅವರು ಕೊನೆಯ ಪ್ರವಾದಿಗೆ ಮಾನವಕುಲಕ್ಕೆ ತಲುಪಿಸಲು ನೀಡಲಾಗಿರುವುದನ್ನು ತಿರುಚಿದಂತಹ ಅಲ್ಲಾಹನ ಹಾಗೂ ಸಂದೇಶವಾಹಕರ ಶತ್ರುಗಳಾಗಿದ್ದಾರೆ.

ಕುರ್‌ಆನಿನ ಪ್ರಕಾರ ಯಹೂದಿಯರು ಅಲ್ಲಾಹನ, ಮೂಸಾರ ಮತ್ತು ಈಸಾರ ವಿರುದ್ಧ ಸಂಚು ಹಾಕಿದರು. ಏಕೆಂದರೆ, ತಾವು 'ಆರಿಸಲ್ಪಟ್ಟ ಜನರಾಗಿದ್ದೇವೆ' ಎಂದು ವಾದಿಸುತ್ತಾ ಅವರು ಯಹೂದಿತ್ವದಲ್ಲಿ ಉಳಿಯಲು ಬಯಸಿದರು. ಸಹಜವಾಗಿ, ಯಹೂದಿ ಕುಟುಂಬದಲ್ಲಿ ಜನಿಸಿದ ಅಥವಾ ಇಸ್ರಾಯೀಲರ ಮಕ್ಕಳ ವಂಶಜರನ್ನು ಹೊರತು ಪಡಿಸಿ ಅವರು ಯಾರನ್ನೂ ಯಹೂದಿ ವರ್ಗವಾಗಿ ಸ್ವೀಕರಿಸಲು ಸಾಧ್ಯವಿಲ್ಲ. ನಿರೀಕ್ಷಿಸಲ್ಪಟ್ಟಂತಹ ಮಸೀಹನು ಮರ್ಯಮರ ಮಗ ಈಸಾರೆಂದು ಅವರಿಗೆ ಗೊತ್ತಿತ್ತು ಆದರೆ ಅವರನ್ನು ಬಹಿರಂಗವಾಗಿ ಖಂಡಿಸಲು ಅವರು ಒತ್ತಾಯಿಸಿದರು; ಯಹೂದಿಯೇತರ ಅಗತ್ಯವನ್ನು ಪೂರೈಸುವ ಸಲುವಾಗಿ, ಅವರು ಈಸಾರನ್ನು ಶಿಲುಬೆಗೇರಿಸಿದ ಮತ್ತು ಮರಣಹೊಂದಿದ ಮೂರು ದಿನಗಳ ಹಾಗೂ ಮೂರು ರಾತ್ರಿಗಳ ನಂತರ ಎದ್ದು ಮರಳಿ ಬಂದಂತಹ ಒಂದು ಕಾಲ್ಪನಿಕ ಕಥೆಯನ್ನು ಸೃಷ್ಟಿಸಿದರು. ಇತರರ ಪಾಪಗಳಿಗೆ ಈಸಾರು ಮರಣಹೊಂದಿದರು ಎಂಬ ಕಲ್ಪನೆಯನ್ನು ಉತ್ತೇಜಿಸಿವುದು .ಯಹೂದಿ ಧಾರ್ಮಿಕರ ಯೋಜನೆಯಾಗಿತ್ತು. ಕುತೂಹಲಕರವಾಗಿ, ಕ್ರೈಸ್ತರು ಅಥವಾ ಕ್ರೈಸ್ತ ಧರ್ಮ ಎಂಬ ಪದವು ಹೊಸ ಒಡಂಬಡಿಕೆಯ ನಾಲ್ಕು ಗ್ರಂಥಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಇಂದು, ಕ್ರೈಸ್ತ ಧರ್ಮದ ಅನುಯಾಯಿಗಳಿಗೆ, ಈಸಾರು ಮನುಷ್ಯನ

ಮಗನೋ ಅಥವಾ ದೇವನ ಮಗನೋ ಅಥವಾ ಸ್ವತಃ ದೇವನೋ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಆದರೆ, ಈ ವ್ಯಕ್ತಿಯ ಬಗ್ಗೆಗಿನ ಸತ್ಯಾಂಶಗಳು ಕುರ್‌ಆನಿನಲ್ಲಿ ನಮಗೆ ಕಾಣಬಹುದು:

> ಅವರು ಹೇಳಿದರು: "ಮರ್ಯಮರ ಮಗ ಹಾಗೂ ಅಲ್ಲಾಹನ ಸಂದೇಶವಾಹಕರಾದ ಮಸೀಹರನ್ನು ನಾವು ಕೊಂದೆವು". ಇಲ್ಲ, ಅವರು ಅವನನ್ನು ಕೊಂದೂ ಇಲ್ಲ, ಅವರು ಅವನನ್ನು ಶಿಲುಬೆಗೇರಿಸಲೂ ಇಲ್ಲ. ಆದರೆ ಅವರು ಹಾಗೆ ಮಾಡಿದ್ದರೆಂದು ನಂಬಿಸಲಾಗಿತ್ತು. ಈ ವಿಷಯದಲ್ಲಿ ವಿವಾದಿಸುವವರು ಸಂದೇಹದಲ್ಲೇ ಇದ್ದಾರೆ. ಅವರು ನಿಜವಾದ ಜ್ಞಾನ ಇಲ್ಲದೇ, ಕೇವಲ ಗುಮಾನೆಗಳನ್ನು ಅನುಸರಿಸುತ್ತಿದ್ದಾರೆ. ನಿಶ್ಚಯವಾಗಿಯೂ, ಅವರು ಅವನನ್ನು ಕೊಲ್ಲಲೇ ಇಲ್ಲ. (4:157)

ಈಸಾರನ್ನು ಕೊಂದು ಶಿಲುಬೆಗೇರಿಸಲಾಗಿದೆ ಎಂದು ಕ್ರೈಸ್ತ ಧರ್ಮದ ಅನುಯಾಯಿಗಳನ್ನು ನಂಬಿಸಲಾಗಿತ್ತು. ಎಲ್ಲಾ ನಾಲ್ಕು ಗೋಸ್ಪೆಲ್ (ಕ್ರಿಶ್ಚಿಯನ್ನರ ಪವಿತ್ರ ಗ್ರಂಥಗಳ ಭಾಗ) ಗಳ ಕೊನೆಯ ಅಧ್ಯಾಯವನ್ನು ಓದುವ ಯಾರಿಗೂ, ಈಸಾರ ಸಾವಿಗೆ ಕಾರಣವಾದ ಘಟನೆಯು ಅನೇಕ ಸಂದೇಹಗಳನ್ನು ಸೃಷ್ಟಿಸುವುದಾಗಿ ಕಂಡುಬರುತ್ತದೆ. ಅವರು ಎರಡನೇ ರಾತ್ರಿಯ ನಂತರ ಸಮಾಧಿಯಿಂದ ಕಾಣೆಯಾಗಿದ್ದರು, ಇದು ಈಸಾರು ತನ್ನ ಸಾವಿನ ನಿದರ್ಶನಗಳ ಬಗ್ಗೆ ಹೇಳಿದ್ದುದರ ವಿರುದ್ಧವಾಗಿದೆ. ಕ್ರೈಸ್ತ ಪಾದ್ರಿಗಳನ್ನು ಮುಖಾಮುಖಿಯಾಗಿ ಇದರ ಬಗ್ಗೆ ಕೇಳಿದಾಗ, ಅವರಿಗೆ ಹೇಳಲಿರುವುದು ಇಷ್ಟೆ: '*ನೀವು ನಂಬಿಕೆಯನ್ನು ಹೊಂದಿರಬೇಕು*'. ಆದರೆ, ವೈಪರೀತ್ಯವಾದ ಅಥವಾ ವಿವೇಕತೆಗೆ ವಿರುದ್ಧವಾದ ಅಥವಾ ಆಲಂಕಾರಿಕ ಪ್ರಚಾರದ ಮೇಲೆ ಆಧರಿತ ನಂಬಿಕೆಯು ಏನನ್ನೂ ಸಾಬೀತು ಮಾಡುವುದಿಲ್ಲ.

ಈಸಾರು ದೇವಾಲಯವನ್ನು ನಾಶ ಪಡಿಸುವೆನೆಂದು ಹೇಳಿದಾಗ, ಅವರ ನಿಜವಾದ ಧ್ಯೇಯವು ಪೌರೋಹಿತ್ಯ ವ್ಯವಸ್ಥೆಯನ್ನು ತೆಗೆದುಹಾಕುವುದಾಗಿತ್ತು. ಅವರು ಆ ಧ್ಯೇಯವನ್ನು ಕೈಗೊಳ್ಳಲು ಬದ್ಧರಾಗಿದ್ದರು ಮತ್ತು ಅದು ತನ್ನ ಪ್ರಭುವಿಗೆ ಅವರ ಸೇವೆಯಾಗಿತ್ತು. ಅವರು ಅಲ್ಲಾಹನನ್ನು ಹೇಗೆ ಆರಾಧನೆ ಮಾಡಬೇಕೆಂದು ಜನರಿಗೆ ಪ್ರದರ್ಶಿಸಲು ವಿಶ್ವಕ್ಕೆ ಬಂದಿರಲಿಲ್ಲ. ತಾವು ಈಸಾರ ನಿಜವಾದ ಅನುಯಾಯಿಗಳು ಎಂದು ವಾದಿಸುವವರು, ಅವರ ಕೆಲಸವನ್ನು ಪೂರ್ಣಗೊಳಿಸುವವರು ಆಗಬೇಕಿತ್ತು, ಕನಿಷ್ಠ ಪಕ್ಷ ಪೌರೋಹಿತ್ಯ ವ್ಯವಸ್ಥೆಯಿಂದ ತಮ್ಮನ್ನು ಬೇರ್ಪಡಿಸಬೇಕಿತ್ತು

ಕುರ್‌ಆನ್ ಅವತೀರ್ಣಗೊಂಡಾಗಲೂ ಅದು ಜನರಿಗೆ ಅಲ್ಲಾಹನನ್ನು ಹೇಗೆ ಆರಾಧಿಸಬೇಕೆಂದು ಕಲಿಸಲಿಲ್ಲ - ಆದರೆ ಇದು ಸ್ಪಷ್ಟವಾಗಿ '*ದೇವನನ್ನು ಮಾತ್ರ ಸೇವೆಮಾಡಿರಿ*' ಎಂದು ಹೇಳುತ್ತದೆ. ಆದ್ದರಿಂದ 'ಇಬಾದತ್'[27] ಎಂಬ ಪದವನ್ನು, ಕೆಲವು ಭೌತಿಕ ದೇಹಚಲನೆಗಳ ಕೂಟವನ್ನು ಒಳಗೊಂಡಂತಹ *ಆರಾಧನೆ ಅಥವಾ ಪೂಜೆ* ಎಂದು ವ್ಯಾಖ್ಯಾನಿಸುವುದು ದೇವದೂಷಣೆಯಲ್ಲ ಎಂದು ವಾದಿಸುವುದು ವಿಚಿತ್ರವೇ ಸರಿ. ಒಂದು ನಿರ್ದಿಷ್ಟ

[27] ಅರಬೀ ಧಾರ್ಮಿಕರು ಈ ಪದದ ಅರ್ಥವನ್ನು ಆರಾಧನೆ ಅಥವಾ ಪೂಜೆ ಎಂದು ಒತ್ತಾಯಿಸುತ್ತಾರೆ. ಆದರೂ ಕೆಲವು ಪ್ರಾಮಾಣಿಕ ಅನುವಾದಕರು ಈ ಪದವನ್ನು ಸೇವೆ ಎಂದು ವ್ಯಾಖ್ಯಾನಿಸಿದ್ದಾರೆ.

ದಿಕ್ಕಿಗೆ (ಅಥವಾ ಒಂದು ಪ್ರತಿಮೆಗೆ ಅಥವಾ ಒಂದು ಗೋಡೆಗೆ ಅಥವಾ ಒಂದು ಕಲ್ಲಿನ ಕಟ್ಟಡಕ್ಕೆ ಅಥವಾ ಒಂದು ಚಿತ್ರಕ್ಕೆ) ಮುಖಮಾಡುವುದು ಮತ್ತು ಒಂದು ಕಲ್ಲಿನ ಕಟ್ಟಡಕ್ಕೆ ಸುತ್ತು ಹೊಡೆಯುವುದು ಇತ್ಯಾದಿಗಳು ಭೌತಿಕ ಚಲನೆಗಳಾಗಿವೆ. ಇವುಗಳು, ಜನರು ತಮಗೆ ಗ್ರಹಿಸಲು ಸಾಧ್ಯವಾಗದ್ದನ್ನು ಸರಳಗೊಳಿಸುವ ಸಲುವಾಗಿ ಸೃಷ್ಟಿಸಲಾದ ಅನಾಚಾರಿಕ ಆರಾಧನೆಯ ಆಚರಣೆಗಳಾಗಿವೆ.

ಇಸ್ಲಾಮಿನ ಮಾದರಿ ಪರಿಕಲ್ಪನೆಯಲ್ಲಿ, ಒಬ್ಬ 'ಅಬ್ದ್' ಎಂದರೆ, ತನ್ನ ಬದ್ಧತೆಗಳ ಮೂಲಕ ನಿಗದಿತ ಕರಾರುಗಳನ್ನು ಈಡೇರಿಸಿಕೊಂಡು ತನ್ನ ಪ್ರಭುವಿನ ಸೇವೆಯನ್ನು ಮಾಡುವ ಒಬ್ಬ ಸೇವಕನಾಗಿದ್ದಾನೆ. ಅವನು ತಮ್ಮ ಬದ್ಧತೆಗಳನ್ನು ಆರಾಧನೆಯ ಮೂಲಕ ಈಡೇರಿಸುವುದಿಲ್ಲ. ಅವರ ಕಾರ್ಯಗಳೇ (ಅಮಲ್) ಸೇವೆಗಳು ಅಥವಾ *ಇಬಾದತ್* ಆಗಿದೆ. ಕ್ರಿಯಾಪದವಾದ ನ'ಅಬುದು ಎಂದರೆ 'ನಾವು ಸೇವೆಮಾಡುತ್ತೇವೆ' ಮತ್ತು *ಇಬಾದತ್* ಎಂಬುವುದು - ನಾವು ಸಮ್ಮತಿಸಿಕೊಂಡು ನಮ್ಮ ಬದ್ಧತೆಗಳನ್ನು ಎತ್ತಿಹಿಡಿಯುತ್ತಾ ಸೇವೆಯನ್ನು ಸಲ್ಲಿಸುವುದನ್ನು ಸೂಚಿಸುವ ನಾಮಪದವಾಗಿದೆ.

> ಅಲ್ಲಾಹನ ಧ್ಯೇಯಕ್ಕಾಗಿ ನಿಜವಾದ ಹೋರಾಟದೊಂದಿಗೆ ಹೋರಾಟವನ್ನು[28] ಮಾಡಿರಿ. ದೀನಿನಲ್ಲಿ ನಿಮ್ಮ ಮೇಲೆ ಸಂಕಷ್ಟವನ್ನು ಹೇರದೆ, ನಿಮ್ಮನ್ನು ಆಯ್ಕೆ ಮಾಡಿದವನು ಅವನಾಗಿದ್ದಾನೆ, ಅದುವೇ ನಿಮ್ಮ ತಂದೆ ಇಬ್ರಾಹೀಮರ ತತ್ವವೂ ಆಗಿತ್ತು. ಅವನು ನಿಮಗೆ ಮುಂಚಿನಿಂದಲೂ ಹಾಗೂ ಇದರಲ್ಲೂ ಮುಸ್ಲಿಮರು (ಶಾಂತಿಯಲ್ಲಿರುವವರು) ಎಂದು ಹೆಸರಿಟ್ಟಿದ್ದಾನೆ. ಹೀಗಾಗಿ, ಸಂದೇಶವಾಹಕರು ನಿಮಗೆ ಸಾಕ್ಷಿಯಾಗಿದ್ದಾರೆ ಮತ್ತು ನೀವು ಜನರಿಗೆ ಸಾಕ್ಷಿಯಾಗಿದ್ದೀರಿ. ಆದ್ದರಿಂದ, ಬದ್ಧತೆಗಳನ್ನು ಎತ್ತಿಹಿಡಿಯಿರಿ ಮತ್ತು ಅವುಗಳನ್ನು ನಿಷ್ಕಳಂಕವಾಗಿರಿಸಿ *(ಅಕೀಮು-ಸ್ಸಲಾತ-ವ-ಆತು-ಝ್ಝಕಾತ)* ಮತ್ತು ಅಲ್ಲಾಹನನ್ನು (ಅವನ ಆಜ್ಞೆಗಳನ್ನು) ಬಿಗಿಯಾಗಿ ಹಿಡಿದುಕೊಳ್ಳಿರಿ. ಅವನು ನಿಮ್ಮ ರಕ್ಷಕನಾಗಿದ್ದಾನೆ, ಅವನು ಅತ್ಯುತ್ತಮ ರಕ್ಷಕ ಮತ್ತು ಅತ್ಯುತ್ತಮ ಬೆಂಬಲಿಗನಾಗಿದ್ದಾನೆ. (22:78)

ಅಲ್ಲಾಹನ ಸೇವಕರು ಅವನನ್ನು ಸೇವೆ ಮಾಡಲು ಅವನಿಗೆ ಸಲ್ಲಿಸಬೇಕಾದ ಸೇವೆಯು ಇದಾಗಿದೆ. ನಿಜವಾದ ಹೋರಾಟದೊಂದಿಗೆ ಅವನ ಪಥದಲ್ಲಿ ಹೋರಾಡಬೇಕು. ಇಬ್ರಾಹೀಮರು ಎಲ್ಲಾ ಗ್ರಂಥಗಳಲ್ಲಿರುವ ಸಾಮಾನ್ಯ ಅಂಶವಾಗಿದ್ದಾರೆ ಮತ್ತು ಅವರು ಅಲ್ಲಾಹನ ದೀನಿಗೆ ಬದ್ಧರಾದಂತೆ, ಜನರು ಕೂಡ ಬದ್ಧರಾಗಬೇಕೆಂದು ನಿರೀಕ್ಷಿಸಲಾಗಿದೆ. ಯಹೂದಿಗಳು ಇಬ್ರಾಹೀಮರ ಸಂತತಿಗಳೆಂದು ಹೇಳಿ ನಟಿಸುತ್ತಿದ್ದಾಗ, 'ಅವರು ಸುಳ್ಳು ಹೇಳುತ್ತಿದ್ದಾರೆ ಏಕೆಂದರೆ ಇಬ್ರಾಹೀಮರು ಅಲ್ಲಾಹನನ್ನು ಆರಾಧಿಸಲಿಲ್ಲ' ಎಂದು ಈಸಾರು ಹೇಳಿದ್ದಾಗಿ ಹೊಸ ಒಡಂಬಡಿಕೆಯಲ್ಲಿದೆ. ಈ ನಿಗದಿತ ಕರಾರುಗಳನ್ನು ಈಡೇರಿಸುವಂತಹ ಮತ್ತು ಬದ್ಧತೆಗಳ ಮೂಲಕ ಅವನ ಧ್ಯೇಯವನ್ನು ಮುಂದುವರಿಸಲು ಪ್ರಯತ್ನಿಸುವಂತಹ ಮತ್ತು ಅವುಗಳನ್ನು ನಿಷ್ಕಳಂಕವಾಗಿರಿಸುವಂತಹ ಕ್ರಿಯೆಗಳಾಗಿವೆ, *ಅಕೀಮು-ಸ್ಸಲಾತ-ವ-ಆತು-ಝ್ಝಕಾತ.*

[28] ಕುರ್‌ಆನಿನಲ್ಲಿರುವ ಜಿಹಾದ್(ಹೋರಾಟ ಅಥವಾ ಪ್ರಯತ್ನ) ಎಂಬ ಪದವನ್ನು ಧಾರ್ಮಿಕರು ದುರುಪಯೋಗಗೊಳಿಸಿ, ಇತರರನ್ನು ಕೊಲ್ಲಲು ತಮ್ಮ ಅನುಯಾಯಿಗಳಿಗೆ ಪ್ರೇರೇಪಿಸುತ್ತಾರೆ.

ಆದ್ದರಿಂದ, *ಇಬಾದತ್* ಎಂದರೆ ಆರಾಧನೆ ಎಂದಲ್ಲ, ಸೇವೆ ಎಂದಾಗಿದೆ.

'ಧರ್ಮ'ವು ಮಾನವ ನಿರ್ಮಿತವಾಗಿದೆ

ಒಂದು ಧರ್ಮವು ನೆಲೆನಿಲ್ಲಬೇಕೆಂದು ಅಲ್ಲಾಹನು ಉದ್ದೇಶಿಸಿಲ್ಲ ಎಂಬವುದು, ಕುರ್'ಆನನ್ನು ಎಚ್ಚರಿಕೆಯಿಂದ ಓದುವ ವೇಳೆ ನಮಗೆ ಸ್ಪಷ್ಟವಾಗುತ್ತದೆ. ಜನರ ಯೋಗಕ್ಷೇಮವನ್ನು ಉತ್ತೇಜಿಸುವಂತಹ ಒಂದು ಜೀವನ ರೀತಿಯನ್ನು ಕುರ್'ಆನ್ ಉತ್ತೇಜಿಸುತ್ತದೆ. ಅದನ್ನು ಒಂದು ಧರ್ಮವೆಂದು ವ್ಯಾಖ್ಯಾನಿಸುವ ಅಗತ್ಯವಿಲ್ಲ. ಯಾವುದೇ ಪ್ರವಾದಿಗಳು ಅಥವಾ ಸಂದೇಶವಾಹಕರು ಅಲ್ಲಾಹನಿಂದ ಧರ್ಮವೊಂದನ್ನು ತರಲಿಲ್ಲ ಎಂದು ಕುರ್'ಆನಿನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಆದರೆ ಅಲ್ಲಾಹನು ಅವರಿಗೆ, ತಮ್ಮ ಸುತ್ತಲಿರುವ ಜನರು ಈ ಲೋಕದಲ್ಲಿ ಮತ್ತು ಮುಂದಿನ ಲೋಕದಲ್ಲಿ ಪ್ರತಿಫಲ ಪಡೆಯುದಕ್ಕಾಗಿ, ತಮ್ಮ ನಡುವೆ ಪರಸ್ಪರ ನ್ಯಾಯಯುತವಾದ ಕರ್ಮಗಳನ್ನು ನಿರ್ವಹಿಸುವ ಮೂಲಕ, ಕಾಣದ ದೇವನ ಸೇವೆ ಮಾಡಲೆಂದು ಒಂದು ದೀನನ್ನು ಅವತರಿಸಿದನು. ಹಾಗೆಯೇ, 'ಧರ್ಮ'ವನ್ನು ಪ್ರತಿಪಾದಿಸುವ ಹಾಗೂ ಅದನ್ನು ಅನುಸರಿಸುವ ಜನರ ಅಪವಿತ್ರ ಹಾಗೂ ಕಪಟತನದ ನಡವಳಿಕೆಯನ್ನು ಅರಿತು ಅವರ ಕ್ರಿಯೆಗಳಿಂದ ದೂರವಿರಲು ಮಾಹಿತಿಕೊಡಲಾಗಿದೆ. ನೂಹರ ಹೆಸರಿನಲ್ಲಿರುವ ಸೂರದಲ್ಲಿ ಕುರ್'ಆನ್ ಹೇಳುತ್ತದೆ, ಅವರು ರಾತ್ರಿ ಹಗಲು ಕೆಲಸ ಮಾಡಿ ಜನರಿಗೆ ಧರ್ಮವನ್ನು ತ್ಯಜಿಸಲು ಕರೆನೀಡುತ್ತಿದ್ದರು. ಅಲ್ಲಾಹನನ್ನು ಹೊರತುಪಡಿಸಿ ಯಾರನ್ನೂ ಅಥವಾ ಯಾವುದನ್ನೂ ಸೇವೆ ಮಾಡಬಾರದೆಂದೂ ನೂಹರು ಅವರಿಗೆ ಹೇಳಿದರು. ಅವರು ಅಲ್ಲಾಹನಿಗಾಗಿ ಒಂದು ಜೀವನ ರೀತಿಯನ್ನು ಪಾಲಿಸಬೇಕಾಗಿತ್ತು. ಆದರೆ ಅವರ ನೆರೆಹೊರೆಯವರು ಹಾಗೂ ಸ್ನೇಹಿತರು ಕೂಡ ಅವರ ಕರೆಗೆ ಲಕ್ಷ್ಯ ವಿಡಲಿಲ್ಲ.

> ನೂಹರು ಹೇಳಿದರು, "ಓ ನನ್ನ ಜನರೇ, ನಾನು ನಿಮ್ಮ ಕಡೆಗೆ ಒಬ್ಬ ಎಚ್ಚರಿಕೆಗಾರನಾಗಿ ಬಂದಿದ್ದೇನೆ. ನೀವು ಅಲ್ಲಾಹನ ಸೇವೆಯನ್ನು ಮಾಡಿರಿ ಹಾಗೂ ಅವನನ್ನು ಲಕ್ಷಿಸಿರಿ ಮತ್ತು ನನ್ನನ್ನು ಅನುಸರಿಸಿರಿ." (71:2-3)

ತನ್ನ ಸಮುದಾಯದ ಪ್ರತಿಕ್ರಿಯೆ ಹೀಗಿತ್ತು:

> ಅವರು (ತಮ್ಮವರಿಗೆ) ಹೇಳಿದರು. "ನಿಮ್ಮ ಮೂರ್ತಿಗಳನ್ನು ತ್ಯಜಿಸಬೇಡಿರಿ, ವದ್ದ್ ಅಥವಾ ಸುವಾ ಅಥವಾ ಯಾಗೂಸ ಅಥವಾ ಯಾವೂಕ ಮತ್ತು ನಸರ್'ಗಳನ್ನೂ ತ್ಯಜಿಸಿಬೇಡಿರಿ." (71:23)

ವದ್ದ್, ಸುವಾ, ಯಾಗೂತ, ಯಾವೂಕ, ನಸರ್'ಗಳು ಧಾರ್ಮಿಕ ಸಂತರ ಹೆಸರುಗಳಾಗಿತ್ತು, ಅವರು ತಮ್ಮ ಬೋಧನೆಗಳನ್ನು ಅನುಸರಿಸರಿಸುವವರಿಗೆ ದೇವರುಗಳಾಗಿದ್ದರು. ಅದೇ ರೀತಿ, ಬುಖಾರಿ, ಶಾಫಿ, ವಹಾಬ್, ಗುಲಾಮ್ ಅಹ್ಮದ್ ಅಥವಾ ಅಗಾ ಖಾನ್ ಎಂಬ ಹೆಸರುಗಳು ತಮಗೆ ಸಂಬಂಧಪಟ್ಟ ಪಂಥದ

ದೇವರುಗಳಾಗಿದ್ದಾರೆ. ಹಾಗೆಯೇ ಯಹೂದಿತ್ವಕ್ಕೆ ಉಝೈರ್ ಮತ್ತು ಕ್ರೈಸ್ತರಿಗೆ ಪಾಲ್ ದೇವರುಗಳಾಗಿದ್ದಾರೆ. ಜನಗತ್ತಿನಾದ್ಯಂತ ನಾವು ನೋಡಿದರೆ, ಮನುಕುಲದ ಬಹುಮತವು ಯಾವುದಾದರೂ ಒಂದು ಧರ್ಮವನ್ನು ಪಾಲಿಸುವವರಾಗಿ ಕಂಡುಬರುವುದು. ಆದಾಗ್ಯೂ, ಬಹುಮತವನ್ನು ಅನುಸರಿಸುವುದರ ಅಂತ್ಯವು ಕೆಟ್ಟದಾಗಿರುತ್ತದೆ ಎಂದು ಕುರ್‌ಆನ್ ನಮಗೆ ಕಲಿಸುತ್ತದೆ:

> ನೀವು ಭೂಮಿಯ ಮೇಲಿನ ಜನರಲ್ಲಿ ಬಹುಮತೀಯರನ್ನು ಅನುಸರಿಸಿದರೆ, ಅವರು ನಿಮ್ಮನ್ನು ಅಲ್ಲಾಹನ ಪಥದಿಂದ ದಿಕ್ಕುಗೆಡಿಸಿ ಬಿಡುತ್ತಾರೆ. ಅವರು ಕೇವಲ ಅಭಿಪ್ರಾಯಗಳನ್ನು ಅನುಸರಿಸುತ್ತಾರೆ ಮತ್ತು ಅವರು ಕೇವಲ ಊಹಿಸುತ್ತಾರೆ. (6:116)

ಮುಹಮ್ಮದರು ನೂಹರ ಅದೇ ಸಂದೇಶವನ್ನು ಸಮರ್ಥಿಸಿದರು. ಅವರು ಕೇವಲ ಅಲ್ಲಾಹನ ಸಂದೇಶವಾಹಕರಾಗಿದ್ದರು, ಅವರು ಒಂದು ಪೂಜಾರಿ ಅಥವಾ ಆರಾಧಕನಾಗಿರಲಿಲ್ಲ. ಅವರು ಅಲ್ಲಾಹನ ಪದಗಳನ್ನು ಹರಡಲು ಕೆಲಸ ಮಾಡಿದರು ಮತ್ತು ಧರ್ಮಗಳ ಬದಲಿಗೆ ಇದನ್ನು ಪ್ರಚಲಿತಗೊಳಿಸಲು ಇಚ್ಛಿಸಿದರು. ಕೊನೆಯ ಪ್ರವಾದಿಯನ್ನು ಅನುಕರಿಸಲು ಮತ್ತು ಅವರು ತಂದಂತಹ ಭೋಧನೆಗಳನ್ನು ಒಳಗೊಳ್ಳಲು ಜಗತ್ತಿನ ಮುಸ್ಲಿಮರು ಬಯಸುತ್ತಾರೆ ಎಂಬುವುದು ಒಬ್ಬನು ವೈಚಾರಿಕವಾಗಿ ಊಹಿಸಬಹುದಾದ ವಿಷಯವಾಗಿದೆ. ಅದನ್ನು ಸಂಬಂಧಿಸಿ, ಅವರು ಸ್ವೀಕರಿಸಿದಂತಹ ಈ ಸಂದೇಶವನ್ನು ಓದುವುದು ಅತಿಮುಖ್ಯವಾಗಿದೆ:

> ಅವನು ನೂಹರಿಗೆ ಆಜ್ಞಾಪಿಸಿದ ಅದೇ ಜೀವನ ರೀತಿಯನ್ನು ನಿಮಗಾಗಿಯೂ ನಿಶ್ಚಯಿಸಿಕೊಟ್ಟಿದ್ದಾನೆ ಮತ್ತು ಈಗ ನಾವು ಅದನ್ನೇ ನಿನಗೆ (ಮುಹಮ್ಮದರಿಗೆ) ಅವತರಿಸುತ್ತಿದ್ದೇವೆ. ಇದನ್ನೇ ನಾವು ಇಬ್ರಾಹೀಮರಿಗೂ, ಮೂಸಾ ಮತ್ತು ಈಸಾರಿಗೆ ಭೋಧಿಸಿದ್ದೆವು. ಈ ಜೀವನ ರೀತಿಯನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ಭಿನ್ನರಾಗದಿರಿ. ನೀವು ಕರೆ ನೀಡುತ್ತಿರುವ ಈ ವಿಷಯವು ಮೂರ್ತಿ ಆರಾಧಕರಿಗೆ (ಒಪ್ಪಲು) ಅತ್ಯಂತ ಕಠಿಣವಾಗಿದೆ. ಅಲ್ಲಾಹನು ತಾನಿಚ್ಛಿಸುವವರನ್ನು ತನ್ನವರನ್ನಾಗಿ ಮಾಡಿಕೊಳ್ಳುತ್ತಾನೆ ಮತ್ತು ತನ್ನ ಕಡೆ ಮರಳುವವರಿಗೆ ಮಾತ್ರ ತನ್ನ ಕಡೆಗೆ ಬರುವ ಮಾರ್ಗವನ್ನು ತೋರಿಸುತ್ತಾನೆ. (42:13)

ಇದನ್ನು ಮತ್ತೊಮ್ಮೆ ಓದಿರಿ: *"ನಿಮ್ಮ ಬೋಧನೆಯನ್ನು ಸ್ವೀಕರಿಸಲು ಮೂರ್ತಿ ಆರಾಧಕರಿಗೆ ಅತ್ಯಂತ ಕಠಿಣವಾಗಿದೆ"*.

ಆ ಹೇಳಿಕೆಯ ಸ್ವ-ವಿವರಣಾತ್ಮಕವಾಗಿದೆ: ಧರ್ಮವನ್ನು ಪ್ರತಿಪಾದಿಸುವವರು ಮೂರ್ತಿ ಆರಾಧಕರೆಂದು ಪರಿಗಣಿಸಲಾಗಿದೆ, ಅವರಿಗೆ (ಕೇವಲ ಕುರ್‌ಆನಿನಲ್ಲಿ ಪ್ರತಿಪಾದಿಸಲಾದ ಮತ್ತು ಈ ಪುಸ್ತಕದಲ್ಲಿ ಚರ್ಚಿಸಲಾದ) ಅಲ್ಲಾಹನ ನಿಜವಾದ ದೀನಿನ ಆಳವರಿಯಲು ಸಾಧ್ಯವಿಲ್ಲ.

ಇದರ ಜೊತೆಗೆ, ಈ ಪುಸ್ತಕದ ಬಗ್ಗೆ ಅವರ ಬಹುತೇಕ ಖಚಿತವಾದ ಪ್ರತಿಕೂಲ ಪ್ರತಿಕ್ರಿಯೆಯು, ಈ ಮೇಲಿನ ಹೇಳಿಕೆಯ ಸತ್ಯಶೀಲತೆಗೆ ಸಾಕ್ಷಿಯಾಗಿದೆ.

ಭಾಗ ಮೂರು

ಅರಬೀ ಧರ್ಮ

ಕುರ್‌ಆನಿನ ಅವತೀರ್ಣಕ್ಕೆ ಮುಂಚಿತವಾಗಿ, ಅರಬೀ ಜನಾಂಗದ ಬಗ್ಗೆ ಅವರು ಬರೆದ ಯಾವುದೇ ಐತಿಹಾಸಿಕ ದಾಖಲೆಗಳು ಇಲ್ಲ. ಆದಾಗ್ಯೂ, ತಮ್ಮ ಪೂರ್ವಜರಿಗೆ ಅಲ್ಲಾಹನ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಇಲ್ಲದಂತಹ ಜನಾಂಗವೊಂದಕ್ಕೆ ಈ ಸಂದೇಶವಾಹಕರನ್ನು ಕಳುಹಿಸಲಾಗಿದೆ ಎಂದು ಕುರ್‌ಆನ್ ಹೇಳುತ್ತಾರೆ. ಕೊನೆಯ ಪ್ರವಾದಿಯ ಸುತ್ತಲೂ ಇದ್ದ ಜನರು ಉಮ್ಮಿಗಳಾಗಿದ್ದರು (ಅಂದರೆ, ಅಲ್ಲಾಹನ ಗ್ರಂಥದ ಬಗ್ಗೆ ಯಾವುದೇ ಪೂರ್ವ ಜ್ಞಾನವಿಲ್ಲದವರು) - ಮತ್ತು ಅಲ್ಲಾಹನ ಮಾರ್ಗದರ್ಶನಕ್ಕೆ ಸಂಬಂಧಿಸಿದಂತೆ ಸಂಪೂರ್ಣ ನಷ್ಟದಲ್ಲಿದ್ದರು. (62:2)

ಕುರ್‌ಆನ್ ಕೊನೆಯ ಪ್ರವಾದಿಗೆ ಅವತರಿಸಲ್ಪಡುವ ತನಕ ತಾವು *ಜಾಹಿಲಿಯ್ಯ*[29] ವರ್ಗಕ್ಕೆ ಸೇರಿದವರಾಗಿದ್ದರೆಂದು ಆಧುನಿಕ ಅರಬರು ಅಂಗೀಕರಿಸುತ್ತಾರೆ. ಅದು ಅವರು ಮೂರ್ತಿಪೂಜಕರಾಗಿದ್ದರು ಎಂಬುವುದನ್ನು ಅಡಗಿಸಿಕೊಂಡು ಹೇಳುವ ಒಂದು ರೀತಿಯಾಗಿದೆ. 53:19-22 ರಲ್ಲಿ *ಅಲ್-ಮನಾತ್, ಅಲ್-ಉಝ್ಝ ಮತ್ತು ಅಲ್-ಲಾತ್* ಎಂಬ ಮೂರು ವಿಗ್ರಹಗಳ ಬಗ್ಗೆ ಅಲ್ಲಾಹನು ಅರಬರನ್ನು ಪ್ರಶ್ನಿಸುತ್ತಾನೆ, ಅವುಗಳು ಬಹುಶಃ ಕಲ್ಲಿನ ಮೂರ್ತಿಗೆ ಸಂಪರ್ಕಹೊಂದಿದವುಗಳು ಆಗಿರಬೇಕು. ಮುಹಮ್ಮದರು ಕುರ್‌ಆನಿನ ಸಂದೇಶವನ್ನು ತಲುಪಿಸಲು ಅವರ ಕಡೆಗೆ ಹೋಗುವ ಅನೇಕ ಶತಮಾನಗಳ ಮುಂಚೆ, ಅರಬರು ಸಾಮಾನ್ಯವಾಗಿ ಬಹುದೇವಾರಾಧಕರಾಗಿ ಅರಿಯಲ್ಪಟ್ಟಿದ್ದರು ಎಂದು ಅರಬೇತರ ಐತಿಹಾಸಿಕ ಮೂಲಗಳು ಸೂಚಿಸುತ್ತದೆ.

ಅರಬೀ ಧರ್ಮದ ಅನೇಕ ದೇವತೆಗಳಲ್ಲಿ, 'ಕಲ್ಲು' ಪ್ರಮುಖ ಪವಿತ್ರ ವಸ್ತುವಾಗಿತ್ತು, ಅದು ಒಂದಾ ಎದ್ದುಕಾಣುವಂತಹ ಬಂಡೆಕಲ್ಲು ಅಥವಾ ಒಂದು ದೊಡ್ಡ ಕಟ್ಟಡ, ಸಾಮಾನ್ಯವಾಗಿ ಆಯತಾಕಾರದ ಅಥವಾ ಅನಿಯಮಿತ ಕಪ್ಪು ಕಂದುಬಣ್ಣದ, ಕೆತ್ತನೆಯ ವಿವರವನ್ನು ನಿರೂಪಿಸದ ಶಿಲೆಯ ಕಲ್ಲಾಗಿರುತ್ತಿತ್ತು. ಇಂತಹ ಕಲ್ಲುಗಳು ಅಲ್ಲಾಹನ ನಿವಾಸಗಳು ಎಂದು ಭಾವಿಸಲಾಗಿತ್ತು. ಅಲೆಮಾರಿ ಬುಡಕಟ್ಟು ಜನರು ಈ ದೇವತೆಗಳನ್ನು *ಹಜರ್* ಅಥವಾ 'ಕಲ್ಲು' ಎಂದು ಉಲ್ಲೇಖಿಸುತ್ತಿದ್ದರು. ಹೆಚ್ಚಾಗಿ ಆ ಪರಿಸರದಲ್ಲಿ, ಶುದ್ಧೀಕರಣಕ್ಕಾಗಿ ಒಂದು ಬಾವಿ ಅಥವಾ ನೀರಿನ ಕೊಳವಿರುತ್ತಿತ್ತು, ಮತ್ತು ಅವರ ದೇವರುಗಳಿಗೆ ಕಾಣಿಕೆಗಳನ್ನು ಅರ್ಪಿಸಲು ಅಥವಾ ಯುದ್ಧದ ಪಾರಿತೋಷಕಗಳನ್ನು ನೇತಾಡಿಸಲು, ಒಂದು 'ಪವಿತ್ರ' ಮರವಿರುತ್ತಿತ್ತು.

[29] *ಜಾಹಿಲಿಯ್ಯ* ಎಂದರೆ ಅಜ್ಞಾನಿಗಳು ಅಥವಾ ಮೂರ್ಖರು

ಅರಬೀ ದೇವಸ್ಥಾನಗಳಲ್ಲಿ ದೇವತೆಯ ಪ್ರತಿಮೆಗಳು ಕೆಲವೊಮ್ಮೆ ಬಯಲು ಪ್ರದೇಶದಲ್ಲಿ ಮತ್ತು ಕೆಲವೊಮ್ಮೆ ಅದು *ಕುಬ್ಬ* ಎಂದು ಕರೆಯಲ್ಪಡುವ ಕಲ್ಲಿನಿಂದ ಕಟ್ಟಿದ ಗೂಡಿನಲ್ಲಿ ಸ್ಥಾಪಿಸಲಾಗುತ್ತಿತ್ತು. ಇಂತಹ ಗೂಡುಗಳು ಹೊತ್ತುಕೊಂಡು ಒಯ್ಯಬಹುದಾಗಿತ್ತು. *ಕುಬ್ಬ* ಎಂಬ ಪದವು ಕಾಬಾ ಎಂಬ ಪದದಿಂದ ಬೇರ್ಪಟ್ಟಿದೆ. ಕಾಬಾ ಪದವನ್ನು ಒಂದು ಚೌಕಾಕಾರದ ಗೋಡೆಯುಳ್ಳ ಕಟ್ಟಡ ಎಂಬ ಅರ್ಥ ಬರುವಂತೆ ಡೊಂಕುಗೊಳಿಸಲಾಯಿತು. ಆದರೆ ಕಾಬಾ ಪದದ ನೈಜ್ಯ ಅರ್ಥವು 'ಕಣಕಾಲು', 'ತಲಪಾದ' ಅಥವಾ 'ಪಾದದ ಕೀಲು' ಎಂದಾಗಿದೆ. ಇಂತಹ ಅಂದವಿಲ್ಲದ ಖಾಲಿ ಚೌಕ ಗೃಹವನ್ನು ಬಹುಶಃ ಒಂದು ಡೇರೆಯ ಆಕಾರದಲ್ಲಿ ನಿರ್ಮಿಸಲಾಗಿತ್ತು ಮತ್ತು ಅದು ಪವಿತ್ರ ಅರಬೀ ಕಪ್ಪು ಕಲ್ಲುಗಳ ಒಂದು ಆಶ್ರಯದಾಮವಾಗಿತ್ತು.

ಒಂದು ನಿರ್ದಿಷ್ಟ ದೇವತೆಯ ಆರಾಧನೆಯ ಮೂಲಕ ಸಾಮಾನ್ಯ ಬಂಧವನ್ನು ಹಂಚಿಕೊಂಡಂತಹ ಬುಡಕಟ್ಟು ಜನರು, ಒಂದು ನಿರ್ದಿಷ್ಟ ಆರಾಧನಾ ಮಂದಿರ ಅಥವಾ ನಿಲ್ದಾಣದಲ್ಲಿ ಒಟ್ಟುಗೂಡಿ ನಡೆಸುವ ವಾರ್ಷಿಕ ತೀರ್ಥಯಾತ್ರೆಯ ಸಾರ್ವಜನಿಕ ವಿಧಿವತ್ತಾದ ಆಚರಣೆಯು, ಆ ಅಲೆಮಾರಿ ಬುಡಕಟ್ಟು ಜನಾಂಗದ ಪ್ರಮುಖ ಆಚರಣೆಯಾಗಿತ್ತು. ಕಲ್ಲಿನ ವಿಗ್ರಹಗಳ ಸುತ್ತ ಔಪಚಾರಿಕ ಮೆರವಣಿಗೆಯ ಮಾದರಿಯು ಸಾಮಾನ್ಯವಾಗಿತ್ತು ಮತ್ತು ಆ ಮಾದರಿಯು ಮಕ್ಕಾದ ತೀರ್ಥಯಾತ್ರೆಯನ್ನು ನಡೆಸುವ ಅರಬೀ ಪದ್ಧತಿಯಲ್ಲಿ ಮುಂದುವರಿದಿರುವುದು ನಾವು ಇಂದು ಕೂಡಾ ಕಾಣಬಹುದು. ಆದರೆ, ಪ್ರಾಚೀನ ಅರೇಬಿಯಾದ ಬಗ್ಗೆ ಈಗ ಲಭ್ಯವಿರುವ ಪಾಂಡಿತ್ಯ ಜ್ಞಾನವು ಬಹಳ ಛಿದ್ರವಾಗಿದೆ ಮತ್ತು ನಮಗೆ ಬಂದು ತಲುಪಿದ ಚಿತ್ರಣದಲ್ಲಿ ಹಲವಾರು ಗಣನೀಯ ಅಂತರಗಳು ಇವೆ.

ಇತರ ಕೆಲವು ಗ್ರಂಥಗಳಿಗೆ ಭಿನ್ನವಾಗಿ, ಕುರ್‌ಆನ್ ಗ್ರಂಥವು ಸಂದೇಶವನ್ನು ತಲುಪಿಸಿದ ವ್ಯಕ್ತಿಯ ವೈಯಕ್ತಿಕ ಜೀವನದ ವಿವರಗಳನ್ನು ನೀಡುವುದಿಲ್ಲ. ಅದು ಸಂದೇಶದ ಪ್ರಾಮುಖ್ಯತೆಯನ್ನು ಹೆಚ್ಚಾಗಿ ಒತ್ತು ನೀಡುತ್ತದೆಯೇ ವಿನಹಃ, ಸಂದೇಶವಾಹಕರ ಬಗ್ಗೆ ಅಲ್ಲ. ಆದರೆ ಅರಬರು ಅದರ ವಿರುದ್ಧವಾದ ಒಲವನ್ನು ಪ್ರಚಾರ ಮಾಡಿದರು.

ಅವರ ಹೇಳುತ್ತಿರುವುದಕ್ಕೆ ವಿರುದ್ಧವಾಗಿ - ಅರಬೀ ಧರ್ಮದ ತಳಪಾಯವಾದ (ಪ್ರವಾದಿಯವರ ಜೀವನದ ಕುರಿತಾಗಿರುವುದೆಂದು ಹೇಳಲಾದ) ಒಂದು ಹಡಗಿನಲ್ಲಿ ಹಿಡಿಯುವಷ್ಟು ಗ್ರಂಥಗಳ ಅಸ್ಥಿತ್ವದ ಹೊರತಾಗಿಯೂ - 'ಕಥೆ ಹೇಳುವವರ ಅಭಿಪ್ರಾಯಗಳು ಮತ್ತು ಬುಡಕಟ್ಟು ಪುರಾಣಗಳ ತುಣುಕುಗಳಿಂದ ತಾವೇ ಜೋಡಿಸಿದವುಗಳ ವಿನಹಃ' - ಸಂದೇಶವಾಹಕರ ಪೀಳಿಗೆಯ ಮತ್ತು ಆರಂಭಿಕ ಜೀವನದ ಒಂದು ವಿಶ್ವಾಸಾರ್ಹ ಜೀವನಚರಿತ್ರೆಯು, ಅರಬೀ ಧಾರ್ಮಿಕರೊಂದಿಗೆ ಇಲ್ಲ ಎಂಬುವುದು ವಾಸ್ತವಿಕತೆಯಾಗಿದೆ. ಇಂದು ಅವರ ಕೈಯಲ್ಲಿರುವ ಮಾಹಿತಿಯು ವ್ಯವಸ್ಥಿತವಾಗಿ ಸಂಕಲನ ಮಾಡಲ್ಪಟ್ಟಂತಹ ಗ್ರಂಥಗಳು ಅಲ್ಲ. ಬದಲಿಗೆ, ಈ ಮನುಷ್ಯನನ್ನು 'ಅವೈಚಾರಿಕವಾಗಿ ಹಾಗೂ ವಿಚಿತ್ರ ರೀತಿಯಲ್ಲಿ ವರ್ತಿಸುವಂತಹ, ತನ್ನ ಹಿಂಬಾಲಕರಲ್ಲಿ ಧರ್ಮಾಂಧತೆಯನ್ನು ಪ್ರೋತ್ಸಾಹಿಸುವಂತಹ ಮತ್ತು ಅರಬೀ ಧರ್ಮವನ್ನು ತಿರಸ್ಕರಿಸುವವರ ವಿರುದ್ಧ ತೀಕ್ಷ್ಣ ಅಸಹಿಷ್ಣುತೆಯನ್ನು ಸ್ಫೂರ್ತೀಕರಿಸುವಂಹ ಒಂದು ಕಪಟ ವೇಷಧಾರಿಯಾಗಿ' ಚಿತ್ರೀಕರಿಸುತ್ತಾ ಉಪಾಯದಿಂದ ರೂಪಿಸಿಕೊಂಡು, ಅನೇಕ ವರ್ಷಗಳ ನಂತರ ತಯಾರಿಸಲ್ಪಟ್ಟಂತಹ ಗ್ರಂಥಗಳಾಗಿವೆ.

ಅರಬೀ ಧಾರ್ಮಿಕರು ಸ್ವತಃ ಒಪ್ಪಿಕೊಳ್ಳುವಂತೆ, ಈ 'ಮಾಹಿತಿ'ಗಳು ಬರವಣಿಗೆಯಲ್ಲಿ ಒಗ್ಗೂಡಿಸುವ ಮೊದಲು, ಒಂದು ಶತಮಾನಕ್ಕೂ ಹೆಚ್ಚು ಕಾಲ ಮಾತುಗಳ ಮೂಲಕ ಮಾತ್ರವೇ ಸಾಗಿ ಬಂದ್ದಿತ್ತು. ಅರಿಯಲ್ಪಡುವ ಮತ್ತು ಆದರಿಸಲ್ಪಡುವ ಜೀವನಚರಿತ್ರೆಕಾರರಲ್ಲಿ ಒಬ್ಬನಿಗೂ ಕೂಡಾ ಕೊನೆಯ ಪ್ರವಾದಿಯ ಯಾವುದೇ ವೈಯಕ್ತಿಕ ಪರಿಚಯ ಇರಲಿಲ್ಲ ಎಂಬುವುದು ಯಾರೂ ನಿರಾಕರಿಸುವುದಿಲ್ಲ. ಅದರ ಲಾಕ್ಷಣಿಕ ನಮೂನೆಯು ಹೀಗಿರುತ್ತದೆ: *"ಇಂತಿಂತವನ ಪ್ರಕಾರ, ಅವನು ಅದನ್ನು ಇಂತಿಂತವನಿಂದ ಕೇಳಿದ್ದ, ಅವನು ಇಂತಿಂತವನ ಸೋದರಳಿಯ ಅಥವಾ ಚಿಕ್ಕಪ್ಪನಾಗಿದ್ದ, ಅವನು ಇಂತಿಂತವನು ಆಕಸ್ಮಿಕವಾಗಿ ಇಂತಿಂತವನಿಗೆ ಹೇಳಿದ್ದನ್ನು ಕೇಳಿದ್ದನು, ಅದೇನೆಂದರೆ ಅಲ್ಲಾಹನ ಸಂದೇಶವಾಹಕರು ಹೀಗೆ-ಮತ್ತು-ಹೀಗೆ-ಮತ್ತು-ಹೀಗೆ ಹೇಳಿದ್ದರು."* ಈ ರೀತಿಯ 'ಪ್ರಸಾರ ಸರಪಳಿ'ಗಳ ಮೂಲಕ ಈ ಕುಟಿಲತನದ ವಂಚನೆಯನ್ನು ಯಶಸ್ಸುಪಡಿಸಲಾಯಿತು. ಬುಡಕಟ್ಟು ವಿನ್ಯಾಸದೊಳಗಿನ ತಮ್ಮ ಸ್ಥಳ ಮತ್ತು ತಮ್ಮ ಸಂಬಂಧಿಕರೊಂದಿಗಿರುವ ಭ್ರಾಂತಿಯ ಕಾರಣ ಈ 'ಪ್ರಸಾರ ಸರಪಳಿ'ಗಳು ಅರಬರ ಮನಸ್ಸಿನ ಮೇಲೆ ಅದ್ಭುತವಾಗಿ ಪರಿಣಾಮವನ್ನು ಬೀರುತ್ತದೆ.

ಈ ಎಲ್ಲಾ ಅನಿಶ್ಚಿತತೆಯ ಹೊರತಾಗಿಯೂ, ಸಂಕಲನಕಾರರು ಕೇಳಿದ್ದರೆಂದು ದಾವೆಮಾಡುವುದೆಲ್ಲವೂ (ಪ್ರವಾದಿಯರು ಹೇಳಿದರು ಎಂದು ಹೇಳಲಾಗುವ ಅಥವಾ ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ ಮಾಡಿದ) ಪ್ರತಿಬಾರಿಯೂ ತಮಗಿಂತ ಹಿಂದಿನ ಮೂಲಗಳಿಂದ ಪಡೆದಿರುವಂತಹದ್ದು ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ವ್ಯಕ್ತಿಗಳಿಂದ ಪಡೆದಿರುವುದು ಎಂಬುವುದು ತಿಳಿದಿರುವ ಸತ್ಯಾಂಶವಾಗಿದೆ. ಪ್ರವಾದಿಯವರ ಮರಣದ ಸುಮಾರು ಇನ್ನೂರು ವರ್ಷಗಳ ನಂತರ ಪ್ರಾರಂಭವಾಗಿ, ಮನೋವಿಕಲ್ಪ ಸಂಕಲನಕಾರರು ಪಟ್ಟಣದಿಂದ ಪಟ್ಟಣಕ್ಕೆ ಹೋಗಿ, ಪ್ರವಾದಿಯವರ ವೈಯಕ್ತಿಕ ವರ್ತನೆಯ ಬಗ್ಗೆ ಜನರನ್ನು ಕೇಳಲು ಆರಂಭಿಸಿದರು. ವಾಸ್ತವದಲ್ಲಿ, ಅವರು ಕೇವಲ ಆ ಸಂದೇಶವಾಹಕರು ನೀಡಿದ ಸಂದೇಶವನ್ನು ತಮ್ಮಲ್ಲಿ ಅನ್ವಯಿಸುತ್ತಿದ್ದರೆ ಒಂದು ಉತ್ತಮ ಸೇವೆಯಾಗಿರುತ್ತಿತ್ತು. ಹದೀಸುಗಳ ಸಂಗ್ರಹಗಳು, ಕಪಟತೆಯಲ್ಲಿ ಅತಿ-ಉತ್ತಮವಾದುದರಿಂದ ಮತ್ತು ದುಷ್ಟತೆಯಲ್ಲಿ ಅತಿ-ಕೆಟ್ಟದಾದುದರಿಂದ, ಪ್ರವಾದಿಯವರ ಆರಂಭಿಕ ಯೌವ್ವನವು ಮತ್ತು ವೈಯಕ್ತಿಕ ನಂಬಿಕೆಗಳ ಬಗೆಗಿನ ದಿನಾಂಕಗಳು ಮತ್ತು ವಿವರಗಳು ಅಜ್ಞಾತವಾಗಿದೆ ಎಂದು ನಾವು ಒಪ್ಪಿಕೊಳ್ಳಲೇ ಬೇಕು.

ಪ್ರವಾದಿಯರ ತಂದೆಯ ಬಗ್ಗೆ ಧಾರ್ಮಿಕರಿಗೆ ಯಾವುದೇ ವಿವರಗಳಿಲ್ಲ. ಮುಹಮ್ಮದರ ಮೊದಲ ಅವತೀರ್ಣದ ದಿನಾಂಕವು ಸಹ ಚರ್ಚಾಸ್ಪದವಾಗಿದೆ. ದಿವ್ಯವಾಣಿಯನ್ನು ಹರಡುವುದರ ಮತ್ತು ಅವರ ಮರಣದ ಸಂದರ್ಭಗಳ ಬಗ್ಗೆ ಸೇರಿದಂತೆ, ತನ್ನ ಜೀವನದ ಪ್ರಮುಖ ಹಂತಗಳನ್ನು ಸಂಬಂಧಿಸಿದ ಕಥೆಗಳು ಸಹ ನಾನಾ ವಿಧದಲ್ಲಿದೆ ಮತ್ತು ಪರಸ್ಪರ ವಿರೋಧಾತ್ಮಕವಾಗಿದೆ. ದಾಖಲಾದ ಘಟನೆಗಳಲ್ಲಿ ಬಹುಪಾಲು ಭಾಗವು, ಪ್ರಕರಣದ ದೌರ್ಬಲ್ಯವಿದೆ ಎಂದು ನಿರೂಪಕನು ಸ್ವತಃ ಒಪ್ಪಿಕೊಳ್ಳುವಂತಹ ವದಂತಿಗಳಾಗಿವೆ. ಅಂತಹ ದೌರ್ಬಲ್ಯವನ್ನು ಪಂಡಿತರು 'ಇದು ಸುಳ್ಳೋ ಅಥವಾ ನಿಜವೋ ಎಂಬುದನ್ನು ಉತ್ತಮವಾಗಿ ತಿಳಿದಿರುವುದು ಅಲ್ಲಾಹನು ಮಾತ್ರ' ಎಂಬ ಸೂತ್ರವನ್ನು ಬಳಸಿಕೊಂಡು ಅಂಗೀಕರಿಸುತ್ತಾರೆ.

ಅಂತಿಮವಾಗಿ ವದಂತಿಗಳಿಂದ ಪಡೆದ ಬೆಟ್ಟದಷ್ಟು ವಿಷಯಗಳಿಂದ ಯಾವುದನ್ನೆಲ್ಲಾ ಬರವಣಿಗೆಯಲ್ಲಿ ದಾಖಲಿಸಲು ಆಯ್ಕೆ ಮಾಡಬೇಕು ಎಂದು ಇಂದಿನ ಸುನ್ನಿಗಳ ತತ್ವ ಸಿದ್ಧಾಂತದ ನೇತೃತ್ವ ವಹಿಸಿದ ನಾಲ್ಕು ಪ್ರಮುಖ ಗುರುಗಳಿಂದ ನಿರ್ಧರಿಸಲ್ಪಟ್ಟಿತು. ಅವರ ಆಯ್ಕೆಗಳ ಸಮಂಜಸವಾದ ಭಾಗಗಳನ್ನು, ಅವುಗಳ ಇತರ ಸಂಘಟನೆಗಳು ತಮಗೆ ಸೂಕ್ತವೆನಿಸಿದ ಹಾಗೆ ಸ್ವೀಕರಿಸಿದರು ಅಥವಾ ತಿರಸ್ಕರಿಸಿದರು. ಪ್ರತಿ ಪುರೋಹಿತನು ಅವರಲ್ಲಿನ ತನ್ನ ಮುಂಖಂಡರಿಗಿಂತ ಹೆಚ್ಚಾಗಿ ಸುಧಾರಣೆಯನ್ನು ತರಲು ಮತ್ತು ಒಂದು ನಿರ್ದಿಷ್ಟ ದರ್ಜೆಯುಳ್ಳ ಅಧಿಕಾರಿಯಾಗಿ ಆ ಮುಂಖಂಡರನ್ನು ರದ್ದುಗೊಳಿಸಲು ಪ್ರಯತ್ನಿಸುತ್ತಿರುತ್ತಾರೆ. ಶಿಯಾ ಪಂಥೀಯವು ತಮ್ಮದೇ ಆದಂತಹ ಬೇರೆಯೇ ಕಥೆಗಳನ್ನು ಹೇಳುತ್ತಾರೆ.

ಪ್ರಸ್ತುತ 'ಕಾಬಾ'ದ ಬಗ್ಗೆ ಇರುವ ಅರಬೀ ಕಥೆಗಳು

ತಮ್ಮ ಅನೇಕ ಮೂರ್ತಿಪೂಜಕ ಸಂಬಂಧಗಳನ್ನು ಮುನ್ನಡೆಸಿಕೊಂಡು ಹೋಗುವ ಸಲುವಾಗಿ, *ಕಾಬಾ* ಎಂದು ಕರೆಯಲ್ಪಡುವ ಕಲ್ಲಿನ ಚೌಕ ಕಟ್ಟಡಕ್ಕೆ ಅದರದೇ ಆದ ಇತಿಹಾಸವನ್ನು ಅವರು ನೀಡಿದರು. ಕುರ್‌ಆನಿನಲ್ಲಿ *ಕಾಬಾ* ಎಂಬ ಪದವು, 5:6 ರಲ್ಲಿ ಒಬ್ಬನ ಕಾಲಿನ ಪಾದಗಳನ್ನು ತೊಳೆಯುವ ವಿಷಯಕ್ಕೆ ಮತ್ತು 5:95 ರಲ್ಲಿ ಅಪ್ರಾಪ್ತ ವಯಸ್ಸಿನ ಪ್ರಾಣಿಗಳ ಬೇಟೆಯ ನಿಷೇಧದ ವಿಷಯಕ್ಕೆ ಮಾತ್ರ ಸಂಬಂಧಪಟ್ಟಿದೆ. 5:95 ರ ಪ್ರಚಲಿತದಲ್ಲಿರುವ ಸಾಂಪ್ರದಾಯಿಕ ಮೂಲದ ವ್ಯಾಖ್ಯಾನವು, ಈ ಪದವನ್ನು ಮಕ್ಕಾದಲ್ಲಿರುವ ಕಲ್ಲಿನ ಕಟ್ಟಡ ಎಂದು ಅರ್ಥ ನೀಡುತ್ತದೆ. ಆ ಪದವನ್ನು ಆಧಾರಿಸಿದ ಅದರ ನೈಜ್ಯವಾದ ಸ್ಪಷ್ಟೀಕರಣವು, ಓದುಗರಿಗೆ ಒಂದು ಆಘಾತವಾಗಿ ಆಗಮಿಸಲಿದೆ. ಏನಾದರೂ ಸರಿ, ಈ ವಚನವು ವ್ಯವಹರಿಸುತ್ತಿರುವ ವಿಷಯವು ವನ್ಯಜೀವಿ ವಂಶಗಳ ಸಂರಕ್ಷಣೆಯಾಗಿದೆ. ನಿರ್ಬಂಧಿತ ಅವಧಿಯಲ್ಲಿ ಯಾರಾದರೂ ಉದ್ದೇಶಪೂರ್ವಕವಾಗಿ ವನ್ಯಜೀವಿಯನ್ನು ಕೊಂದರೆ, ಅವನು ದಂಡವನ್ನು ಪಾವತಿಸಲೇಬೇಕು.

ಇಲ್ಲಿನ ಪ್ರಮುಖ ವಾಸ್ತವವೆಂದರೆ, ಒಂದು ಬೇಟೆಗಾರನು ಬೇಟೆಯನ್ನು ಕೊಲ್ಲುವ ಮುಂಚೆ, ಅವುಗಳ ಚಲನೆಯನ್ನು ಗಮನಿಸುವುದರ ಮೂಲಕ ಪ್ರಾಣಿಗಳ ಪ್ರೌಢತೆಯ ವ್ಯತ್ಯಾಸವನ್ನು ಅರಿಯಬಹುದು. ನಾವು ಮುಂದೆ ಚರ್ಚಿಸಲಿರುವಂತೆ, ಪ್ರಾಣಿ ಸಂರಕ್ಷಣೆಯು ಅಲ್ಲಾಹನ ಆದೇಶಗಳ ಭಾಗವಾಗಿದೆ ಮತ್ತು ಜನರು ನಿರ್ಬಂಧಿತ ತಿಂಗಳಲ್ಲಿ ಪ್ರಾಣಿಗಳ ಬೇಟೆಯಾಡದೆ, ಈ ಶಾಸನವನ್ನು ಎತ್ತಿಹಿಡಿಯಬೇಕಾಗಿದೆ. ಪಾದದ ಕೀಲುಗಳು, ಪ್ರಾಣಿಯ ಪ್ರೌಢತೆಯ ಸ್ಥಿತಿಯನ್ನೂ ಮತ್ತು ಪ್ರಾಣಿಗಳು ಜೀವಿಸಿರುವಾಗ ಅವುಗಳು ಚಲಿಸುವ ರೀತಿಯನ್ನೂ (ಹಾಗೂ ಅವುಗಳು ಸತ್ತಾಗ, ನಿರ್ಣಾಯಕ ಮಾಹಿತಿಯನ್ನೂ) ಸೂಚಿಸುತ್ತದೆ. ಬಹಳ ಮುಖ್ಯವಾದ ಈ ಮಾಹಿತಿಯ ತುಣುಕನ್ನು 5:2 ರಲ್ಲಿ ಕಾಣಬಹುದಾಗಿದೆ ಹಾಗೂ 5:97 ರಲ್ಲಿ ಅದು ಪುನರಾವರ್ತಿಸಲಾಗುತ್ತದೆ. *ಕಾಬತ* ಎಂಬ ಪದವು ಸರಳವಾಗಿ ಪಾದ ಎಂದಾಗಿದೆ. ಭಾಗ ಹನ್ನೊಂದರಲ್ಲಿ ಇದರ ಬಗ್ಗೆ ಇನ್ನಷ್ಟು ಮಾಹಿತಿ ನೀಡಲಾಗಿದೆ.

ಆದಾಗ್ಯೂ, ಅರಬೀ ಧರ್ಮದ ಕಟ್ಟುಕಥೆಗಳಿಗೆ ಮರಳೋಣ: ತಮ್ಮ ಸಂಪ್ರದಾಯಗಳ ಪ್ರಕಾರ ಕೆಲವು ಮುಲ್ಲಾಗಳು (ಗುರುಗಳು) ಕಾಬಾವನ್ನು ದೇವದೂತರುಗಳು ನಿರ್ಮಿಸಿದರೆಂದು ನಂಬುತ್ತಾರೆ (ಇದು ಬೈಬಲಿನಿಂದ ಕದ್ದ ಒಂದು ಪುರಾಣವಾಗಿದೆ), ಆದರೆ ಕೆಲವು ಮುಲ್ಲಾಗಳು ಅದನ್ನು ಆದಮರು ನಿರ್ಮಿಸಿದರೆಂದೂ (ಇದು ಅರಬೀ ಧರ್ಮದಲ್ಲಿ ಸಾಮಾನ್ಯ ಅಭಿಪ್ರಾಯವಾಗಿದೆ), ನೂಹರ ಕಾಲದ ಪ್ರವಾಹದಲ್ಲಿ ನಾಶಗೊಂಡಿತೆಂದೂ, ನಂತರ ಇಬ್ರಾಹೀಮರು ಮತ್ತು ಅವರ ಪುತ್ರ ಇಸ್ಮಾಯೀಲರು ಅದನ್ನು ಪುನರ್ನಿರ್ಮಾಣ ಮಾಡಿದರೆಂದೂ ಹೇಳುತ್ತಾರೆ. ಕಲ್ಲಿನ ಮೂರ್ತಿಯೊಂದಿಗಿನ ಇಬ್ರಾಹೀಮರ ಸಂಬಂಧವು ಪೂರ್ವ ಕುರ್‌ಆನಿನ ಅವಧಿಯದ್ದಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಅವರದೇ ಸ್ವಂತ ಕಥೆಗಳ ಪ್ರಕಾರ, ಮುಹಮ್ಮದರು ಕಪ್ಪು ಕಲ್ಲನ್ನು ಹೊರತುಪಡಿಸಿ, ಅದರಲ್ಲಿ ಆಶ್ರಯಿಸಲಾಗಿದ್ದ ಎಲ್ಲಾ ವಿಗ್ರಹಗಳನ್ನು ನಾಶಪಡಿಸುವ ವರೆಗೆ ಕಾಬಾವು ಒಂದು ಮೂರ್ತಿಪೂಜಕ ದೇವತಾಗಣವಾಗಿ ಉಳಿದಿತ್ತು.

ಅವರದೇ ಆದ ಪುರಾವೆಗಳ ಪ್ರಕಾರ, ಈ ದೇವಸ್ಥಾನವು ಕೇವಲ ಆವರ್ತಕ ಪ್ರವಾಹಗಳಿಗೆ ಮಾತ್ರವಲ್ಲ, ಈ ಗುಡಿಯಲ್ಲಿ ದೀಪಗಳ ಬಳಕೆಯ ಕಾರಣ ಬೆಂಕಿಗೂ ಗುರಿಯಾಗುತ್ತಿತ್ತು. ಹಾನಿಗೊಳಗಾದ ಮತ್ತು ನಾಶವಾದ ಕಾರಣ ಅದನ್ನು ಅಡಿಪಾಯದಿಂದ ಅನೇಕ ಬಾರಿ ಪುನರ್ರಚನೆ ಗೊಳಿಸಲಾಗಿತ್ತು. ಮುಹಮ್ಮದರ ಮುಂಚಿನ ಮತ್ತು ನಂತರದ ಶತಮಾನಗಳಲ್ಲಿ, ಅದರ ಆಕಾರ ಮತ್ತು ಗಾತ್ರದಲ್ಲಿ ಹಲವು ಮಾರ್ಪಾಡುಗಳನ್ನು ಮಾಡಲಾಗಿದೆ. ಮುಲ್ಲಾಗಳು ಹೇಳುವುದು ಇದಾಗಿದೆ. ಈ ರೀತಿಯ ಉಲ್ಲೇಖವಿರುವ ಯಾವುದೇ ಕಥೆಗಳು ಕುರ್‌ಆನಿಲ್ಲಿ ನಮೂದಿಸಲಾಗಿಲ್ಲ.

ಕುರ್‌ಆನ್ ಎಲ್ಲಾ ರೀತಿಯ ಭೌತಿಕ ಆಚರಣೆಗಳನ್ನು ಮತ್ತು ಆರಾಧನೆಗಳನ್ನು ವಿರೋಧಿಸುವುದರಿಂದ, 'ಅಲ್ಲಾಹನ ಮನೆ' ಎಂಬ ಕಲ್ಪನೆಯು ಮತ್ತು ಮಕ್ಕಾದಲ್ಲಿರುವ ಕಪ್ಪು ಕಲ್ಲಿನ ಉಪಚರಣೆಯು, ಸ್ಪಷ್ಟವಾಗಿ ಧಾರ್ಮಿಕರಿಂದ ಸೃಷ್ಟಿಸಿರುವ ಕಟ್ಟುಕತೆಗಳೇ ಆಗಿವೆ. ಈ ಚೌಕ ಶಿಲಾ ರಚನೆಗೆ ನಡೆಸಲಾಗುವ ಇಂದಿನ ತೀರ್ಥಯಾತ್ರೆಗಳ ನಡುವೆಯೂ, ಹಳೆಯ ಧರ್ಮವಾದ ಹಿಂದುತ್ವದ ನಡುವೆಯೂ ಒಂದು ಉಜ್ವಲವಾದ ಹೋಲಿಕೆಯನ್ನು ಮಾಡಬಹುದು. ಹಿಂದೂ ಧರ್ಮವು ಭಾರತದಿಂದ ಅನೇಕ ರಾಷ್ಟ್ರಗಳಿಗೆ ಪ್ರಯಾಣಮಾಡಿದೆ. ಅದರ ಪ್ರಭಾವವು ದೂರದ ಇಂಡೋನೇಷ್ಯಾದ ಬಾಲಿ ಎಂಬಲ್ಲಿಯೂ ಕಾಣಬಹುದು. ಅರೇಬಿಯಾ ಭಾರತದ ತಕ್ಷಣ ನೆರೆಯ ರಾಜ್ಯವೆಂದು ಪರಿಗಣಿಸಲಾಗಿತ್ತು (ಅರಬೀ ಸಮುದ್ರದ ಮೂಲಕ ಅರೇಬಿಯಾ ತಲುಪಲು ಕೇವಲ ಒಂದು ಕಡಿಮೆ ಪ್ರಮಾಣದ ಯಾತ್ರೆಯ ಅಗತ್ಯವಿದೆ). ಇಂದಿನ ಅರಬೀ ಧರ್ಮವು ತಮ್ಮೊಂದಿಗೆ ಅನೇಕ ವಿಷಯಗಳಲ್ಲಿ ಸಮಾನತೆಗಳನ್ನು ಹೊಂದಿದ್ದಾರೆ ಎಂದು ಹಿಂದೂಗಳು ದಾವೆ ಮಾಡಿದ್ದೂ ಇದೆ. ಇತರ ವಿಷಯಗಳ ಪೈಕಿ ಅವರು ಹೇಳುವುದು:

- ಒಬ್ಬ ಯಾತ್ರಿಯು ಮಕ್ಕಾ ತೀರ್ಥಯಾತ್ರೆಗೆ ಹೊರಟಾಗ, ಒಂದು ವಿಶೇಷ ಪವಿತ್ರ ಉಡುಪಾದ ಜೋಡನೆಯಿಲ್ಲದ ಎರಡು ಬಿಳಿ ಬಟ್ಟೆಗಳ ಹಾಳೆಗಳನ್ನು ಧರಿಸಿಕೊಳ್ಳಬೇಕಾಗಿದೆ. ಒಂದು ಭುಜಗಳ ಮೇಲೆ ಮತ್ತೊಂದು ಸೊಂಟದ ಸುತ್ತಲು ಉಡಲಾಗುತ್ತದೆ ಮತ್ತು ಅಲ್ಲಿ ತನ್ನ ತಲೆಯನ್ನು

ಬೋಳಿಸಬೇಕಾಗಿದೆ. ಶುದ್ಧವಾದ ಹಾಗೂ ಜೋಡನೆಯಿಲ್ಲದ ಬಿಳಿ ಬಟ್ಟೆಗಳನ್ನು ಧರಿಸಿಕೊಂಡು ಹಿಂದೂ ದೇವಾಲಯಗಳಿಗೆ ಪ್ರವೇಶಿಸುವ ಮತ್ತು ತಮ್ಮ ತಲೆಯನ್ನು ಬೋಳಿಸಿಕೊಳ್ಳುವ ಈ ಎರಡೂ ವಿಧಿಗಳು, ಹಳೆಯ ವೇದ-ಆಚರಣೆಗಳ ಅವಶೇಷಗಳಾಗಿವೆ.

- ಕಾಬಾವನ್ನು ಭೇಟಿಮಾಡುವ ಮುಸ್ಲಿಂ ಯಾತ್ರಿಕರು ಆ ಶಿಲಾ ರಚನೆಗೆ ಏಳು ಬಾರಿ ಪ್ರದಕ್ಷಿಣೆ (ಸುತ್ತುಹೊಡೆಯುದು) ಮಾಡುತ್ತಾರೆ. ಬೇರೆ ಯಾವುದೇ ಮಸೀದಿಯಲ್ಲಿ ಇಂತಹ ಪ್ರದಕ್ಷಿಣೆಯು ಪ್ರಚಲಿತದಲ್ಲಿಲ್ಲ. ಹಿಂದೂಗಳು ಇದೇ ರೂಪದಲ್ಲಿ ತಮ್ಮ ದೇವಾಲಯಗಳಲ್ಲಿ ದೇವತೆಗಳನ್ನು ಸುತ್ತುಹೊಡೆಯುತ್ತಾರೆ. ಕಾಬಾ ದೇವಾಲಯವು ಭಾರತೀಯ ಶಿವ-ದೇವಾಲಯವನ್ನು ಹೋಲುವಂತಹ ಪೂರ್ವ ಕುರ್‌ಆನಿನ ಅವಧಿಯದ್ದು ಎಂಬುವುದಕ್ಕೆ ಇದು ಇನ್ನೊಂದು ಸೂಚನೆಯಾಗಿದೆ. ಪ್ರದಕ್ಷಿಣೆಯನ್ನು ಮಾಡುವ ಹಿಂದುಗಳ ಆಚರಣೆಯು ಅಲ್ಲಿ ಈಗಲೂ ನಿಖರವಾಗಿ ಪಾಲಿಸಲಾಗುತ್ತಿದೆ.

- ದಿನದ ಐದು ಬಾರಿಯ *ನಮಾಝಿನ* ಆಚರಣೆಯು, ಹಿಂದೂ ವೇದದ *ಪಂಚಮಹಾಯಗ್ನಕ್ಕೆ* (ಪಂಚ-ಮಹಾ-ಯಗ್ನ ಅಂದರೆ ದೈನಂದಿನ ಐದು ಪೂಜೆಗಳಿಗೆ) ಹೋಲುತ್ತದೆ. ವೇದಗಳಲ್ಲಿರುವ ಈ ಆಜ್ಞೆಯು ದೈನಂದಿನ ವೈದಿಕ ಆಚರಣೆಗಳ ಭಾಗವಾಗಿದೆ ಮತ್ತು ಅದು ಅವರಲ್ಲಿ ಎಲ್ಲಾ ವ್ಯಕ್ತಿಗಳಿಗೂ ಅನ್ವಯವಾಗಿದೆ.

ಹಿಂದೂಗಳ ದಾವೆಯ ಹೊರತಾಗಿಯೂ, ಮಕ್ಕಾ, ಮೀನಾ ಮತ್ತು ಅರಫಾತಿನಲ್ಲಿರುವ ಕಲ್ಲು ಹಾಗೂ ಶಿಲೆಗಳನ್ನು ಕೇಂದ್ರೀಕರಿಸುವ, ಪ್ರಾಚೀನ ಅನಾಚಾರಿಕ ಧಾರ್ಮಿಕ ಆಚರಣೆಗಳೂ ಮತ್ತು ಇಂದು ಅರಬರು ಪಾಲಿಸುವ ಮಕ್ಕಾದ ತೀರ್ಥಯಾತ್ರೆಯ ಆಚರಣೆಗಳು ಒಂದೇ ಆಗಿವೆ ಎಂಬುವುದು ನಿರಾಕರಿಸಲಾಗದ ಸತ್ಯವಾಗಿದೆ. ಇದು ಹತ್ತು ದಿನಗಳವರೆಗೆ ಇರುತ್ತದೆ ಮತ್ತು ಪುರಾತನ ಮೂರ್ತಿಪೂಜಕ ನಂಬಿಕೆಯಲ್ಲಿದ್ದ ಅನೇಕ ಅನಾಚಾರಗಳಿಂದ ಪ್ರಭಾವಗೊಂಡಿದೆ, ಅವುಗಳಲ್ಲಿ ಹಲವು ಇಂದಿನವರೆಗೂ ಉಳಿಸಿಕೊಳ್ಳಲಾಗಿದೆ. 'ನಿಲ್ದಾಣಗಳು' ಎಂದು ಸೂಚಿಸಲಾಗುವ ವಿವಿಧ ಸ್ಥಳಗಳಲ್ಲಿ ಪಾಲಿಸಲಾಗುವ ಆಚರಣೆಗಳು ಮತ್ತು ಉದ್ಗರಿಸುವ ಸೂತ್ರಗಳು ಹಾಗೂ ಸಮಾರಂಭಗಳು, ಪೂರ್ವ ಕುರ್‌ಆನಿನ ಅವಧಿಯಿಂದ ಬಂದಿರುವುದಾಗಿದೆ. ಕಾಬಾ ದೇವಾಲಯವನ್ನು ಪ್ರವೇಶಿಸುವ ಮೊದಲು ಯಾತ್ರಿಕರು ಎರಡು ಜೋಡನೆರಹಿತ ಬಿಳಿ ಬಟ್ಟೆಯ ಹಾಳೆಗಳನ್ನು ಧರಿಸುವುದರ ಮೂಲಕ ಪಾವಿತ್ರ್ಯತೆಯ ಒಂದು ಸ್ಥಿತಿಯಲ್ಲಿರಬೇಕು *(ಇಹ್ರಾಮ್)*, ಹೀಗೆ ಯಾತ್ರಿಕನು ಈ ಚೌಕ ಗೃಹದ ಪ್ರಭುವಿನೊಂದಿಗೆ ತನ್ನ ಸಿದ್ಧವಾಗುವಿಕೆಯನ್ನು ಪ್ರಕಟಿಸುತ್ತಾನೆ. ಇದನ್ನು *ತಲ್ಬಿಯ್ಯ* ಎಂದು ಕರೆಯಲಾಗುತ್ತದೆ. ಇದನ್ನು *ಇಹ್ಲಾಲ್* ಎಂಬ ಪ್ರಾಚೀನ ಸೂತ್ರವಾದ *ಲಬ್ಬೈಕ್* ಎಂಬ ಚೀರಾಟದ ಮೂಲಕ ಪ್ರದರ್ಶಿಸಲಾಗುತ್ತದೆ. ನಂತರ ಕೆಳಗಿನ ಆಚರಣೆಗಳು ಮುಂದುವರಿಯುತ್ತದೆ:

- ಚೌಕ ಶಿಲಾರಚನೆಗೆ ಏಳು ಬಾರಿ ಪ್ರದಕ್ಷಿಣೆಮಾಡುವುದು *(ತವಾಫ್)*.

- ಯಾತ್ರಿಕರು ಪ್ರತಿ ಸುತ್ತಿನಲ್ಲೂ ಅಂಡಾಕೃತಿಯ ಕಪ್ಪು ಕಲ್ಲನ್ನು *(ಹಜಾರ್-ಅಲ್-ಅಸ್ವದ್)* ಚುಂಬಿಸಬೇಕು (ಅದನ್ನು ಸಮೀಪಿಸಲು ನಡೆಯುವ ತಿಕ್ಕಾಟದ ಕಾರಣ, ಕೆಲವರು ದೂರದಿದಂದಲೇ ಹಾರಿಸುವ ಚುಂಬನ ನೀಡುತ್ತಾರೆ).

- ಏಳು ಸುತ್ತುಗಳನ್ನು ಪೂರ್ಣಗೊಳಿಸಿದ ನಂತರ ಯಾತ್ರಿಕರು ಕಲ್ಲಿನ ಮನೆಯಿಂದ ಕೆಲವು ಮೀಟರ್ ದೂರದಲ್ಲಿರುವ ಸ್ವರ್ಣ ಲೇಪನದ ಒಂದು ಪಂಜರದ ಹಿಂದೆ ದೇಹ ಚಲನೆಯ ಪ್ರಾರ್ಥನೆಯನ್ನು ನಿರ್ವಹಿಸುತ್ತಾರೆ.

- ನಂತರ *ಶಾ'ಎ* ಯನ್ನು ನಿರ್ವಹಿಸಲು ಮಸೀದಿಯ ಆವರಣದೊಳಗೆ ಮತ್ತೊಂದು ಸ್ಥಳಕ್ಕೆ ಮುಂದುವರೆಯಬೇಕು. ಇಲ್ಲಿ ಯಾತ್ರಿಕರು ಎರಡು ಪರ್ವತಗಳ ನಡುವೆ ಆಕಡೆ ಈಕಡೆ ಏಳು ಬಾರಿ ಓಡಬೇಕು.

- ಆರನೇ ದಿನದಂದು ಭಕ್ತರು ಕೆಲವು ಕಿಲೋಮೀಟರ್ ದೂರವಿರುವ ಅರಾಫತ್ (ಮತ್ತೊಂದು ಬಂಡೆಕಲ್ಲಿನ ಪರ್ವತ) ಎಂಬ ಇನ್ನೊಂದು ಸ್ಥಳಕ್ಕೆ ಪ್ರಯಾಣಿಸಬೇಕು. ಈ ಸ್ಥಳದಲ್ಲಿ ಯಾತ್ರಿಕರು ಮಧ್ಯಾಹ್ನದಿಂದ ಸೂರ್ಯಾಸ್ತದವರೆಗೆ ನಿಂತುಕೊಳ್ಳಬೇಕಾಗಿದೆ. ಇದನ್ನು *ಉಕೂಫ್* ಎನ್ನುತ್ತಾರೆ. ವಾಸ್ತವದಲ್ಲಿ ಇದು ಸೂರ್ಯನನ್ನು ಆರಾಧಿಸುವ ಅನಾಚಾರಿಕ ಆಚರಣೆಯ ಒಂದು ಅವಶೇಷವಾಗಿದೆ. ಈ ನಿಂತುಕೊಳ್ಳುವ ಅನಾಚಾರಿಕ ವಿಧಿಯು ತೀರ್ಥಯಾತ್ರೆಯ ಒಂದು ಅವಶ್ಯಕ ಭಾಗವಾಗಿದೆ.

- ಸೂರ್ಯನು ಅಸ್ತಮಿಸುತ್ತಲೇ, ಯಾತ್ರಿಕರು ಅರಫಾತಿನಿಂದ ಮುಝ್ದಲಿಫ ಎಂಬ ಮೀನದಿಂದ ಮೂರು ಮೈಲಿ ದೂರದ ಒಂದು ಬಯಲು ಪ್ರದೇಶಕ್ಕೆ ತಲುಪಲು ನೂಕುಬೀಲುತ್ತಾರೆ (ಇದು *ಇಫದಾ* ಎಂಬ ಮತ್ತೊಂದು ಆಚರಣೆಯ ರೂಪವಾಗಿದೆ). ಧಾರ್ಮಿಕರಿಂದ ಪವಿತ್ರವೆಂದು ಪರಿಗಣಿಸಲಾದ ಸಮೀಪದಲ್ಲಿರುವ ಮತ್ತೊಂದು ಬಂಡೆಕಲ್ಲಿನ ಗೋಪುರವನ್ನು ಬಹುತೇಕ ಅರಬೇತರರು ಗಮನಿಸುವುದಿಲ್ಲ. ಸಿನಿಮಾಗಳಲ್ಲಿರುವ ರೆಡ್ ಇಂಡಿಯನ್ ಯೋಧರರ ಹಾಗೆ ಕಾಲಕಾಲಕ್ಕೆ ಗಟ್ಟಿಯಾಗಿ ಕೂಗುತ್ತಾ, ಬೆಂಕಿಯ ದೀಪವನ್ನು ಹಚ್ಚಿ, ರಾತ್ರಿ ಇಡೀ ಜಾಗರಣೆ ಕೂರುವ ಮೂಲಕ ಪ್ರಾಚೀನ ಅನಾಚಾರಿಕ ಆಚರಣೆಗಳನ್ನು ಯಾತ್ರಿಕರು ಕಣ್ಣುಮುಚ್ಚಿ ಅನುಸರಿಸುತ್ತಾರೆ. ಇದು ಇಂದಿನವರೆಗೂ ನಡೆಯುತ್ತಲಿದೆ.

- ಹತ್ತನೇ ದಿನದಂದು ಮೀನಾದ ಕಣಿವೆಯಲ್ಲಿ ತೀರ್ಥಯಾತ್ರೆಯ ಮುಕ್ತಾಯ ವಿಧಿಯು ನಡೆಯುತ್ತದೆ. ಮಕ್ಕಾಗೆ ತಲುಪುವ ಅರ್ಧ ದಾರಿಯಲ್ಲಿರುವ ಈ ಸ್ಥಳವು ವಾಸ್ತವದಲ್ಲಿ ಪ್ರಾಚೀನ ಯಜ್ಞದ (ಬಲಿ ಅರ್ಪಿಸುವ) ತಾಣವಾಗಿದೆ. ಇಲ್ಲಿ ಯಾತ್ರಿಕರು ಕೆಲವು ಕಲ್ಲಿನ ಕಂಬಗಳಿಗೆ (ಇತ್ತೀಚೆಗೆ ಈ ಕಂಬಗಳನ್ನು ಗೋಡೆಗಳಾಗಿ ಮಾರ್ಪಡಿಸಲಾಗಿದೆ) ಶೈತಾನನ ಪ್ರತೀಕವೆಂದು ಭಾವಿಸಿಕೊಂಡು

ಕಲ್ಲುಗಳನ್ನು ಎಸೆಯಲು ಆರಂಭಿಸುತ್ತಾರೆ. ಈ ವಿಧಿಯು, ಪಾವಿತ್ರ್ಯ ಸ್ಥಿತಿಯ ಮುಕ್ತಾಯದ ಸಂಕೇತವಾಗಿದೆ. ಈಗ ಅವರು ಸಾಮಾನ್ಯ ಜೀವನಕ್ಕೆ ಹಿಂದಿರುಗಬಹುದು.

- ನಡಾವಳಿಗಳ ತುಟ್ಟತುದಿಯು ಪಾಣಿಬಲಿಯಾಗಿದೆ. ಇದು ತಾಬಿರ್ ಶಿಖರದ ಇಳಿಜಾರಿನಲ್ಲಿರುವ ಕಲ್ಲಿನ ಚೌಕಟ್ಟಿನ ಮೇಲೆ ಪ್ರಾಣಿಬಲಿಯನ್ನು ನಡೆಸುವ ಪ್ರಾಚೀನ ಅರಬೀ ಸಂಪ್ರದಾಯವಾಗಿದೆ, ಹಾಗೂ ಈ ಸ್ಥಳವನ್ನು ಇಬ್ರಾಹೀಮರು ತನ್ನ ಮಗನನ್ನು ಅರ್ಪಿಸಲು ಉದ್ದೇಶಿಸಿದ ಸ್ಥಳವೆಂದು ತಪ್ಪಾಗಿ ಹೇಳಿಕೊಳ್ಳಲಾಗಿದೆ. (ಕುರ್‌ಆನ್ ಪ್ರಾಣಿಬಲಿಯನ್ನು 6:136 ರಲ್ಲಿ ಖಂಡಿಸುತ್ತದೆ).

- ಪ್ರಾಣಿ ಬಲಿದಾನಗಳಲ್ಲಿ ಮುಖ್ಯವಾದ ಅಂಶವು ಮಾಂಸವಲ್ಲ, ರಕ್ತವಾಗಿದೆ. ತೀರ್ಥಯಾತ್ರೆಯ ಕೊನೆಯಲ್ಲಿನ, ಹನ್ನೊಂದರಿಂದ ಹದಿಮೂರನೇ ದಿನದ ವರೆಗಿನ ಮೂರು ದಿನಗಳ ಅವಧಿಯನ್ನು *'ತಶ್ರೀಕ್'* ಎಂದು ಕರೆಯಲಾಗುತ್ತದೆ, ಅದರ ಅಕ್ಷರಶಃ ಅರ್ಥ 'ಒಣ ರಕ್ತ' ವನ್ನು 'ಸಂಯೋಜಿಸುವುದು' ಎಂದಾಗಿದೆ. ರಕ್ತವು ಒಣಗುವುದು, ಆ ವರ್ಷದ ತಮ್ಮ ತೀರ್ಥಯಾತ್ರೆಯನ್ನು ಅವರ ದೇವರು ಪವಿತ್ರಗೊಳಿಸಿದನು ಎಂಬುವುದಕ್ಕೆ ಸಂಕೇತವಾಗಿದೆ.

ಇಹ್ರಾಮ್, ತಲ್ಬಿಯ್ಯ, ಇಹ್ಲಾಲ್, ಲಬ್ಬೈಕ್, ಹಜರುಲ್ ಅಸ್ವದ್, ಶಾ'ಎ, ಉಕೂಫ್ ಮತ್ತು ಇಫಾದ ಎಂಬ ಪದಗಳು ಕುರ್‌ಆನಿನಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಈ ಶಬ್ದಗಳು, ಇಸ್ಲಾಮಿನ ಒಳಗೆ ನುಸುಳಿದ ಪೂರ್ವ ಕುರ್‌ಆನಿನ ಅವಧಿಯ ಅನಾಚಾರಿ ಅರಬರು ಬಳಸಿದ ಪದಗಳಾಗಿದ್ದವು. 22:26 ರಲ್ಲಿ ಅಲ್ಲಾಹನು ಇಬ್ರಾಹೀಮರಿಗೆ ಹೇಳಿದರು: ನೀವು ಅಲ್ಲಾಹನೊಂದಿಗೆ ಯಾವುದನ್ನೂ ಸಂಯೋಜಿಸಬೇಡಿರಿ ಅಥವಾ *ಲಾ-ತುಶ್ರಿಕೂ.* ಆದರೆ ಧಾರ್ಮಿಕರು, ಅವರು ಪ್ರಾಣಿಗಳ ರಕ್ತವನ್ನು ಅಲ್ಲಾಹನಿಗೆ ಸಂಯೋಜನೆ (ತಶ್ರಿಕ್) ಮಾಡಲೇಬೇಕು ಎಂದು ಹೇಳುತ್ತಾರೆ.

ಕುರ್‌ಆನಿನ ಪ್ರಕಾರ, ಮಹಮ್ಮದರು ಎಲ್ಲಾ ರೀತಿಯ ಮೂರ್ತಿ ಪೂಜೆಯನ್ನು ಖಂಡಿಸಿದ್ದರು. ಆದ್ದರಿಂದ, ಒಂದು ದೇವಸ್ಥಾನದ ಸುತ್ತ ಆಚರಣೆಗಳ ಪ್ರದರ್ಶನವಾಗಲೀ ಅಥವಾ ಯಾವುದೇ ರೀತಿಯ ಕಲ್ಲು ಅಥವಾ ಶಿಲೆಗಳಿಗೆ ತಮ್ಮನ್ನು ಸಮರ್ಪಿಸುವುದಾಗಲೀ, ಅವರು ಪ್ರಚಾರ ಮಾಡಿದ *ಶಾಂತಿಪರತೆಯ* ಭಾಗವಾಗಿರಲೇ ಇಲ್ಲ. ಕಪ್ಪು ಕಲ್ಲನ್ನು ಚುಂಬಿಸಿದರು ಎಂದು ಕೊನೆಯ ಪ್ರವಾದಿಯರನ್ನು ಧಾರ್ಮಿಕರು ಚೇಷ್ಟೆಯಿಂದ ಚಿತ್ರೀಕರಿಸಿದ್ದಾರೆ. ಜನರಿಗೆ ಕಲ್ಲುಗಳ ಜೊತೆ ಮಾತನಾಡಲು ಸಾಧ್ಯವಿದೆ ಎಂದು ಧಾರ್ಮಿಕರು ನಂಬುತ್ತಾರೆ. ಖಲೀಫ ಉಮರ್ ಕಪ್ಪುಕಲ್ಲಿಗೆ ಹೀಗೆ ಪಿಸುಗುಟ್ಟಿದರೆಂದು ಹೇಳುತ್ತಾರೆ: *"ನೀನು ಯಾವುದೇ ಹಾನಿಯನ್ನು ಅಥವಾ ಸಹಾಯವನ್ನು ಮಾಡಲು ಅಸಾಧ್ಯವಾದ ಕೇವಲ ಒಂದು ಕಲ್ಲು ಎಂದು ನನಗೆ ತಿಳಿದಿದೆ... ಆದರೆ ಅಲ್ಲಾಹುವಿನ ಸಂದೇಶವಾಹಕರು ನಿನ್ನನ್ನು ಚುಂಬಿಸುವುದನ್ನು ನಾನು ನೋಡಿರದಿದ್ದರೆ, ನಾನು ನಿನ್ನನ್ನು ಎಂದಿಗೂ ಚುಂಬಿಸುತ್ತಿರಲಿಲ್ಲ."* ಈ ಹೇಳಿಕೆಯಲ್ಲಿ ಎರಡು ಕುತಂತ್ರಗಳಿವೆ. ಒಂದು - ಕೊನೆಯ ಪ್ರವಾದಿಯು ಸಹ ಕಪ್ಪು ಕಲ್ಲನ್ನು ಚುಂಬಿಸಿದ್ದರು, ಎರಡು – ಇಂತಹ ನಿರ್ಜೀವ ಮೂರ್ತಿಗಳೊಂದಿಗೆ ಮಾತನಾಡಬಹುದು, ಎಂಬ ಎರಡು ದುರುದ್ದೇಶಗಳನ್ನು ಹೊಂದಿರುವುದು ವ್ಯಕ್ತಗೊಳ್ಳುತ್ತದೆ. ಈ ತರಹದ ಮತ್ತು ಇತರ ವಿಧಾನಗಳ

ಮೂಲಕ, ಅವಿವೇಕಿತನ ಮತ್ತು ಅನಾಚಾರಗಳನ್ನು ಧಾರ್ಮಿಕರು ಕೊನೆಯ ಪ್ರವಾದಿಯವರ ಮೇಲೆ ಹೊರಿಸುತ್ತಾರೆ.

ಇಬ್ರಾಹೀಮರು ಉತ್ತೇಜಿಸಿದಂತಹ ಹಾಗೂ ಕೊನೆಯ ಪ್ರವಾದಿಯವರ ಮೂಲಕ ಬೋಧಿಸಲ್ಪಟ್ಟಂತಹ ಜೀವನ ರೀತಿಯು, 'ಏಕದೇವನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿರಿಸಲು ಮತ್ತು ಸತ್ಕರ್ಮಗಳನ್ನು ಮಾಡಲು ಜನರಿಗೆ ಕರೆ ನೀಡುವುದಾಗಿತ್ತು'. ಇದು ಜೀವನದ ನಿಗದಿತ ರೀತಿಯಲ್ಲಿನ ಅನಿವಾರ್ಯವಾದ ಅಂಶವಾಗಿದೆ. ಶಿಲಾಪೂಜೆ ಮತ್ತು ಮೂರ್ತಿಪೂಜೆಯ ಸ್ಥಳೀಯ ಪ್ರಾಚೀನ ಅನಾಚಾರಿಕ ತತ್ತ್ವವನ್ನು ಬದಲಿಸಲು ಮುಹಮ್ಮದ್ ಬಂದಿದ್ದರು. ಅವರು ಮೂಲ ಅರಬೀ ಅನಾಚಾರಿಕ ತತ್ತ್ವದ ಅಡಿಪಾಯವನ್ನೇ ದುರ್ಬಲಗೊಳಿಸಿದರು ಮತ್ತು ಅದರಲ್ಲಿ ಯಾವುದೇ ರಿಯಾಯಿತಿ ಅಥವಾ ರಾಜಿ ಮಾಡಲಿಲ್ಲ. ಅವರು ಅರಬರನ್ನು ಎಚ್ಚರಿಸಲು ಬಂದ ಮೊದಲ ಸಂದೇಶವಾಹಕರಾಗಿದ್ದರು. ಆ ಜನಾಂಗವು, ಇಬ್ರಾಹೀಮ್ ಮತ್ತು ಇಸ್ಮಾಯೀಲರು ಮುನ್ನಡೆಸಿದ, ಅಲ್ಲಾಹನು ತನ್ನ ವ್ಯವಸ್ಥೆಯಲ್ಲಿ ಆದೇಶಿಸಿದ ಏಕದೇವ ತತ್ವದ ಬದ್ಧತೆಯ ಬಗ್ಗೆ ಏನೂ ತಿಳಿದಿರಲಿಲ್ಲ. ಕುರ್‌ಆನ್ ಅರಬೀ ಬುಡಕಟ್ಟಿನ ಮೂರ್ತಿಪೂಜೆಯ ವಿವರಗಳ ಒಳಹೋಗದಿದ್ದರೂ, ಅದು ಆ ಸಮಯದ ಅರಬೀ ಜನಾಂಗದ ಮತ್ತು ಅವರ ಪೂರ್ವಜರ ಅಜ್ಞಾನವನ್ನು ಖಚಿತಪಡಿಸುತ್ತದೆ.

> ಇದು ತಮ್ಮ ಪೂರ್ವಜರಿಗೆ ಎಚ್ಚರಿಕೆ ನೀಡಲ್ಪಡದಂತಹ ಒಂದು ಜನಾಂಗವನ್ನು ಎಚ್ಚರಿಸಲು ಸರ್ವಶಕ್ತನೂ ಕರುಣಾಮಯನೂ ಆದವನಿಂದ ಬಂದಿರುವ ಅವತೀರ್ಣವಾಗಿದೆ ಮತ್ತು ಅವರು ಅಜ್ಞಾನಿಗಳಾಗಿದ್ದರು. ನಿಶ್ಚಯವಾಗಿಯೂ ಅವರಲ್ಲಿ ಬಹುಭಾಗವು ಸತ್ಯವನ್ನು ನಿಷೇಧಿಸುವರು ಎಂದು ಸತ್ಯನುಡಿಯಲಾಗಿದೆ (ಹಕ್ಕಲ್ ಕೌಲು). (36:4-6)

ಕೊನೆಯ ಪ್ರವಾದಿಯ ಸುತ್ತುಮುತ್ತಲೂ ಇದ್ದ ಅರಬೀ ಸಮುದಾಯವು, ತಮ್ಮ ಪೂರ್ವಜರ ಧರ್ಮವನ್ನು ಅನುಸರಿಸುತ್ತಿದ್ದ ಒಂದು ಅನಾಚಾರಿಕ ಸಮಾಜವಾಗಿತ್ತೆಂದು ಈ ವಚನವು ನಿರ್ದಿಷ್ಟ ಪದಗಳ ಉಪಯೋಗದಿಂದ ಸೂಚಿಸುತ್ತದೆ. ಕುರ್‌ಆನ್ ಸಂದೇಶವಾಹಕರಿಗೆ ಅವತರಿಸಿದ ನಂತರವೂ ಅವರಲ್ಲಿ ಬಹುಭಾಗವು (ಅರಬರು) ಅದರ ಮೇಲೆ ವಿಶ್ವಾಸವಿರಿಸುವುದಿಲ್ಲ ಎಂದೂ ಅದು ಹೇಳುತ್ತಾರೆ. ಇಂತಹ ಒಂದು ಅದ್ಭುತ ಹೇಳಿಕೆಯು 9:97 ರ ಈ ಹೇಳಿಕೆಯೊಂದಿಗೂ ಸುಸಂಬದ್ಧವಾಗಿದೆ: ಅರಬ್ಬರು ಅಪನಂಬಿಕೆಯಲ್ಲಿಯೂ ಮತ್ತು ಕಪಟತೆಯಲ್ಲಿಯೂ ಕಠೋರರಾಗಿದ್ದಾರೆ.

ಕುರ್‌ಆನಿನ ಪ್ರಕಾರ ಕೊನೆಯ ಪ್ರವಾದಿಯ ಜೀವನ ಚರಿತ್ರೆಯು ನಮಗೆ ಬಹಿರಂಗಪಡಿಸುವುದೇನೆಂದರೆ, ಅರಬರಿಗೆ ಕುರ್‌ಆನನ್ನು ಓದಿ ಕೇಳಿಸಿದ ಕೂಡಲೇ ಅವರನ್ನು ತಿರಸ್ಕರಿಸಿದರು. ಅರಬರು ಕುರ್‌ಆನನ್ನು ಸ್ವೀಕರಿಸಲು ನಿರಾಕರಿಸಿದರು. ಕುರ್‌ಆನ್ ಒಂದು ಕೃತ್ರಿಮ ಸುಳ್ಳುಗಾರಿಕೆ ಎಂದು ಹೇಳುವ ಹದ್ದಿನವರೆಗೆ ಅವರು ಹೋದರು. ಅಲ್ಲದೇ, ತಮ್ಮ ಪೂರ್ವಜರಿಂದ ಸೇವೆಮಾಡಲಾಗುತ್ತಿದ್ದ ವಿಗ್ರಹಗಳಿಂದ ತಮ್ಮನ್ನು ದಿಕ್ಕುಗೆಡಿಸಲು ಪ್ರಯತ್ನಿಸುತ್ತಿದ್ದಾನೆಂದು ಪ್ರವಾದಿಯವರನ್ನು ಆರೋಪಿಸಿದರು.

> ನಮ್ಮ ಅವತೀರ್ಣವನ್ನು ಅವರಿಗೆ ಓದಿಕೇಳಿಸಿದಾಗ ಅವರು ಹೇಳುತ್ತಾರೆ, "ಇವನು ನಮ್ಮ ಪೂರ್ವಜರು ಸೇವೆ ಮಾಡುತ್ತಿದ್ದವುಗಳಿಂದ ನಿಮ್ಮನ್ನು ದಿಕ್ಕುಗೆಡಿಸಲು ಬಯಸುವ ಒಬ್ಬ ಮನುಷ್ಯನಾಗಿದ್ದಾನೆ". ಮತ್ತು ಹೀಗೆಯೂ ಹೇಳುತ್ತಾರೆ, "ಇದು ಕೃತ್ರಿಮ ಸುಳ್ಳುಗಾರಿಕೆಯಾಗಿದೆ" (34:43)

ತಮ್ಮ ಪೂರ್ವಜರ ಕಲ್ಲಿನ ಮೂರ್ತಿಗಳನ್ನು ಉರುಳಿಸಲು ಹೇಳಿದಾಗ ತಿರಸ್ಕರಿಸಿದ ಅದೇ ಮನುಷ್ಯನನ್ನು, ಇಂದು ಅವರು ಹೊಗಳುತ್ತಿರುವುದನ್ನು, ಪ್ರೀತಿಸುತ್ತಿರುವುದನ್ನು ಹಾಗೂ ಗೌರವಿಸುತ್ತಿರುವುದನ್ನು ನಾವು ವೀಕ್ಷಿಸುತ್ತೇವೆ. ಸಂದೇಶವಾಹಕರನ್ನು ಮೂರ್ತೀಕರಿಸುತ್ತಿರುವವರ ನಂಬಿಕೆಗೆ ವಿರುದ್ಧವಾಗಿ, ಕೊನೆಯ ಪ್ರವಾದಿಯು ಅರಬರ ಜನಪ್ರಿಯ ವ್ಯಕ್ತಿಯಾಗಿರಲಿಲ್ಲ. ಅರಬರು ಅವರನ್ನು ದ್ವೇಷಿಸುತ್ತಿದ್ದರು ಮತ್ತು ಅವರು ಅಲ್ಲಾಹನ ಸಂದೇಶವಾಹಕರೆಂದು ಒಗ್ಗಟ್ಟಾಗಿ ಒಪ್ಪಿಕೊಳ್ಳಲೇ ಇಲ್ಲ. ಆ ಮನುಷ್ಯನನ್ನು ಅವರು ಕಡೆಗಣಿಸಿದರು, ಅವರ ಮೇಲೆ ದಬ್ಬಾಳಿಕೆ ನಡೆಸಿದರು ಮತ್ತು ಅವರನ್ನು ತನ್ನ ಮನೆಯಿಂದ ಉಚ್ಚಾಟಿಸಿದರು. ಇಂದು ವೈಭವೀಕರಿಸಲಾಗುತ್ತಿರುವ ಅದೇ ಮನುಷ್ಯನು ಅಂದು ಅವರ ಕೈಯಿಂದ ಸಾವಿನ ಬೆದರಿಕೆಯನ್ನು ತಪ್ಪಿಸಲು ಒಂದು ಗುಹೆಯಲ್ಲಿ ಆಶ್ರಯ ಪಡೆದುಕೊಳ್ಳಲು ನಿರ್ಬಂಧಿತರಾಗಿದ್ದರು.

ಕುರ್‌ಆನ್ ಕೊನೆಯ ಪ್ರವಾದಿಯ ಜೀವನದ ಬಗ್ಗೆ ಬಹಿರಂಗಪಡಿಸುವ ಮಾಹಿತಿಗಳು ಇದಾಗಿದೆ. ಪ್ರಸಿದ್ಧ ಅರಬೀ ಕಥೆಯಾದ, *ಮದೀನಾ* ಎಂಬ ಸ್ಥಳಕ್ಕೆ ಪ್ರವಾದಿಯ ಉದ್ದೇಶಿತ ವಲಸೆಯ ಬಗ್ಗೆ ಕುರ್‌ಆನ್ ಯಾವುದೇ ಸೂಚನೆಯನ್ನು ನೀಡಲಿಲ್ಲ. *ಮದೀನಾ* ಎಂದರೆ ಕೇವಲ ಒಂದು ನಗರ ಎಂದರ್ಥ. ಮೂಸಾರು ವಾಸಿಸುತ್ತಿದ್ದ ಈಜಿಪ್ಟಿನ ನಗರವನ್ನು ಉಲ್ಲೇಖಿಸಲು ಬಳಸಿರುವುದು ಅದೇ ಪದವಾಗಿದೆ. ಒಂದು ಕಾಲದಲ್ಲಿ, ಪ್ರವಾದಿಯ ಸುತ್ತಲಿದ್ದ ಎಲ್ಲಾ ಜನರ ಪೈಕಿ, ಕೇವಲ ಒಬ್ಬ ಮನುಷ್ಯನು ಮಾತ್ರ ಅವರ ಮೇಲೆ ವಿಶ್ವಾಸವಿರಿಸಿದ್ದನು.

> ನೀವು ಅವರನ್ನು (ಪ್ರವಾದಿಯನ್ನು) ಬೆಂಬಲಿಸದಿದ್ದಾಗ, ಅಲ್ಲಾಹನು ಅವರನ್ನು ಬೆಂಬಲಿಸಿದನು. ಸತ್ಯನಿಷೇಧಿಗಳು ಅವರನ್ನು ಉಚ್ಚಾಟಿಸಿದಾಗ, ಅವರು ಕೇವಲ ಇಬ್ಬರಲ್ಲಿ ಒಬ್ಬರಾಗಿದ್ದರು, ಅವರು ಒಂದು ಗುಹೆಯಲ್ಲಿ ತನ್ನ ಒಡನಾಡಿಗೆ ಹೇಳಿದರು "ಚಿಂತಿಸಬೇಡ, ಅಲ್ಲಾಹನು ನಮ್ಮೊಂದಿಗಿದ್ದಾನೆ." (9:40)

ಹೀಗೆ, ಅರಬರು ಸಂದೇಶವಾಹಕರಿಗೆ ಬೆಂಬಲ ನೀಡಲಿಲ್ಲ ಎಂಬುವುದು ಎದ್ದುಕಾಣುತ್ತದೆ. ಬದಲಾಗಿ, ಶಾಂತಿಯುತ ಅವಧಿಯಲ್ಲಿ ತನ್ನ ಜನರು ವಿಧೇಯತೆಯ ನಟನೆ ಮಾಡುತ್ತಾ ಅವರನ್ನು ದ್ರೋಹಿಸಿದರು. ಆದರೆ ನಂತರ ಅವರು ನಿಜವಾಗಿಯೂ ಹೇಳಿದ್ದನ್ನು ಬದಲಾಯಿಸಿ ಅವರ ವಿರುದ್ಧ ಸಂಚು ಹೂಡಿದರು. ಪ್ರತಿಯೊಂದು ಪ್ರವಾದಿಗಳಿಗೆ ಅಲ್ಲಾಹನು ಮಾನವ ಶೈತಾನರ ಮತ್ತು ಜಿನ್ನ್ ಶೈತಾನರ ಪೈಕಿ ಶತ್ರುಗಳನ್ನು ನೇಮಕಮಾಡಿದ್ದಾನೆಂದು ಹಾಗೂ ಅವರು ಜನರನ್ನು ಮೋಸಗೊಳಿಸುವ ಸಲುವಾಗಿ ಅಲಂಕಾರಿಕ ಪದಗಳ ಆವಿಷ್ಕಾರ ಮತ್ತು ನಿರೂಪಣೆ ಮಾಡುತ್ತಾರೆ ಎಂದು ಕುರ್‌ಆನ್ 6:112 ರಲ್ಲಿ ಹೇಳಿದೆ. ತರುವಾಯ ಅಂತಹ ಆವಿಷ್ಕಾರಗಳು ಅಲ್ಲಾಹನ ದೀನಿನ ಒಂದು ಅಂಗವಾಗಿ ಮಾರ್ಪಡುತ್ತದೆ.

> ಅವರು ತಾವು ವಿಧೇಯರು ಎಂದು ಹೇಳಿಕೊಳ್ಳುತ್ತಾರೆ. ಆದರೆ ನಿಮ್ಮನ್ನು ಬಿಟ್ಟು ಅಗಲಿದಾಗ - ಅವರಲ್ಲಿ ಒಂದು ಗುಂಪು ನಿಮ್ಮ ಮಾತುಗಳ ವಿರುದ್ಧ ವ್ಯವಸ್ಥಿತವಾಗಿ (ಬಯ್ಯತ) ಹೇಳುತ್ತಾರೆ. ಅಲ್ಲಾಹನು ಅವರು ವ್ಯವಸ್ಥಿತವಾಗಿ ರೂಪಿಸುವುದನ್ನು (ಮಾ-ಯುಬಯ್ಯಿತೂನ) ದಾಖಲೆಗೊಳಿಸುತ್ತಿದ್ದಾನೆ. ಆದ್ದರಿಂದ ನೀವು ಅವರನ್ನು ನಿರ್ಲಕ್ಷಿಸಿರಿ ಮತ್ತು ಅಲ್ಲಾಹನ ಮೇಲೆ ನಿಮ್ಮ ಭರವಸೆಯನ್ನಿಡಿರಿ. ಭರವಸೆಗೆ ಅಲ್ಲಾಹನು ಸಾಕು. (4:81)

ಕೊನೆಯ ಪ್ರವಾದಿಯ ಮರಣದ ನಂತರ, ಅವರಿಂದ ಪ್ರಚಾರಮಾಡಲಾದ ಶಾಂತಿಪರತೆಗೆ ಅನಾಚಾರಿಕ ಅರಬರು ಬದ್ಧರಾಗಲಿಲ್ಲ. ಬದಲಿಗೆ, ಕಪ್ಪು ಕಲ್ಲನ್ನು ಪೂಜೆಯ ಕೇಂದ್ರ ವಸ್ತುವಾಗಿ ಮರುನೇಮಕಗೊಳಿಸಲಾಯಿತು. ಅವರು ನಿಜವಾದ ಇಸ್ಲಾಮಿನಿಂದ ನಿರ್ಗಮಿಸಿದರು, ಕುರ್‌ಆನನ್ನು ತೊರೆದರು, ನಂತರ ಕಲ್ಲಿನ ಮೂರ್ತಿಯ ಮೇಲೆ ಕೇಂದ್ರೀಕೃತವಾದ ತಮ್ಮ ಪೂರ್ವಜರ ನಂಬಿಕೆಯನ್ನು ಪುನರ್ಜೀವಗೊಳಿಸಿದರು. ನಂತರ ಅವರು ಕಪಟಯುಕ್ತವಾಗಿ ಮುಹಮ್ಮದರಿಗೆ ತಮ್ಮ ಪೂರ್ವಜರ ಧರ್ಮದಲ್ಲಿ ಒಂದು ಪ್ರಮುಖ ಸ್ಥಾನವನ್ನು ನೀಡಿದರು. ಮುಹಮ್ಮದರು ಅವರ ರಹಸ್ಯ ವಿನ್ಯಾಸದ ಬಲಿಪಶುವಾದರು. ಅವರು ಹಿಂದಿನ ಪದ್ಧತಿಗೆ ಒಂದು ಹೊಸರೂಪ ಕೊಡಲು ಸಂದೇಶವನ್ನೂ ಸಂದೇಶವಾಹಕರನ್ನೂ ದುರುಪಯೋಗಗೊಳಿಸಿದರು.

ಪ್ರವಾದಿಯವರ ಪದ್ಧತಿ (ಸುನ್ನ)[30] ಎಂಬ ಕಪಟಕೃತಿಯ ಮೇಲಿನ ದಾಸ್ಯಾವಲಂಬನೆಯು ಅರಬೀ ಧರ್ಮದ ಬಹಳ ಮಹತ್ವದ ಸಂಗತಿಯಾಗಿದೆ. ಸಾಮಾನ್ಯವಾಗಿ 'ಪೂರ್ವಿಕರ ಬಳಕೆಯನ್ನು ಅಥವಾ ಬುಡಕಟ್ಟಿನ ಪೂರ್ವಜರು ಸ್ಥಾಪಿಸಿದ ವರ್ತನೆಯ ಮಾದರಿ ನಮೂನೆಗಳನ್ನು ವಿವರಿಸಲು' ಪ್ರಾಚೀನ ಅರಬರು *ಸುನ್ನ* ಎಂಬ ಪದವನ್ನು ಬಳಸಿದ್ದರು. ಇಡೀ ಸಮುದಾಯದ ನಂಬಿಕೆಗಳು ಮತ್ತು ಆಚರಣೆಗಳು ಅಂತಿಮವಾಗಿ ಒಟ್ಟುಗೂಡಿಸುವ, ಬುಡಕಟ್ಟಿಗೆ ಸಂಬಂಧಿಸಿದ ಒಕ್ಕೂಟ ಸಭೆಯನ್ನೂ *(ಇಜ್ಮಾ)*[31] ಅವರು ಪರಿಚಯಿಸಿದ್ದರು.

ತಮ್ಮ ಪೂರ್ವಜರ ತತ್ವಗಳು ಮತ್ತು ಅಭ್ಯಾಸಗಳನ್ನೊಳಗೊಂಡ ಮಾಹಿತಿಯನ್ನು ಕೊನೆಯ ಪ್ರವಾದಿಯ ಮೇಲೆ ತಪ್ಪಾಗಿ ಆರೋಪಿಸಿದರು, ಜೊತೆಗೆ ಅವುಗಳು ಅವರಿಗೆ ದಿವ್ಯವಾಗಿ ಸ್ಫೂರ್ತಿಗೊಂಡದ್ದಾಗಿದೆ ಎಂದು ಹೇಳಿಕೊಂಡರು. ಈ ವದಂತಿಗಳ ಚಿಂದಿಚೀಲವು ನಂತರ ಮೇಲೆ ವಿವರಿಸಿದಂತೆ ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರವಾದವು ಮತ್ತು ಅದೀಗ ಪ್ರವಾದಿಯವರ *ಹದೀಸ್* ಎಂಬ ಹೆಸರಿನಲ್ಲಿ ಅರಿಯಲ್ಪಡುತ್ತಿದೆ. ಈ ಅದ್ಭುತವಾದ ಮತ್ತು ವಿವೇಚನಾರಹಿತ ಪುರಾಣಗಳ ವಿಷಯಪಟ್ಟಿಯು - ವ್ಯಾಪಕ ಅಸಹಿಷ್ಣುತೆ, ಮತಾಂಧತೆ, ಭಯೋತ್ಪಾದನೆ, ಮತ್ತು ತೀವ್ರವಾದಕ್ಕೆ - ಮೂಲಧಾರವನ್ನು ರೂಪಿಸುತ್ತದೆ ಹಾಗೂ ಸಮರ್ಥಿಸುತ್ತದೆ - ಹಾಗೂ

---

[30] ಸುನ್ನ (ಅಥವಾ ಉದಾಹರಣೆ) ಎಂದು ಕರೆಯಲ್ಪಡುವಂತಹದ್ದು, ಅದು ಎಷ್ಟೇ ಅವೈಚಾರಿಕ, ಅಸಂಬದ್ಧ ಅಥವಾ ಕುರ್‌ಆನಿಗೆ ವಿರುದ್ಧವಾದರೂ ಸರಿ, ಅದನ್ನು 'ಇಸ್ಲಾಮಿನ' ಒಳಗೆ ಜೀವನದ ಮಾದರಿಯನ್ನು ಆಜ್ಞಾಪಿಸಲು ಎಷ್ಟರ ಮಟ್ಟಿಗೆ ಬಳಸಲಾಗುತ್ತಿದೆ ಎಂಬುವುದು ಮುಸ್ಲಿಮೇತರರಿಗೆ ಬಹುಶಃ ಗ್ರಹಿಸಲಾಗದು.

[31] *ಇಜ್ಮಾ* ವು ಯಹೂದಿಯರ *ಹಲಕಃ* ಕ್ಕೆ ಸಮನಾಗಿದೆ. ಅದು ಹೇಗೆ ಜೀವನವನ್ನು ನಡೆಸುವುದು, ಸಮಾಜವನ್ನು ಸಂಘಟಿಸಿವುದು, ದೇವನನ್ನು ಹೇಗೆ ಆರಾಧಿಸುವುದು ಎಂಬಿತ್ಯಾದಿಗಳ ಬಗ್ಗೆಗಿನ ರಬ್ಬಿಗಳ ಅಭಿಪ್ರಾಯಗಳ ಒಮ್ಮತವಾಗಿದೆ.

ಅದನ್ನು ಅಲ್ಲಾಹನ ಸಂದೇಶವಾಹಕರ ಮೇಲೆ ಹೇರಲಾಗಿದೆ. 'ವಿದ್ವಾಂಸರು' ಕುರ್‌ಆನಿನಿಂದ ಪಡೆದುಕೊಳ್ಳುವ ದುರಾಗ್ರಹಯುತ ಹಾಗೂ ವಿನಾಶಕಾರಿ ಅರ್ಥಕ್ಕೆ ಈ ಹದೀಸುಗಳೇ ನಿರ್ಣಾಯಕ ಅಂಶವಾಗಿದೆ. (ಮತ್ತು ಕುರ್‌ಆನಿನ ಎಲ್ಲಾ ಜನಪ್ರಿಯ ಅನುವಾದಗಳು ಹದೀಸುಗಳ ಮೇಲೆಯೇ ಆಧರಿತವಾಗಿದೆ). ಕುರ್‌ಆನ್ ಈ ಪರಿಸ್ಥಿತಿಯನ್ನು ಮೊದಲೇ ನಿರೀಕ್ಷಿಸಿ ಹೀಗೆ ಹೇಳಿದೆ:

> ಸ್ಥಿರತೆಯುಳ್ಳ ಹಾಗೂ ಸ್ವತಃ ಪುನರಾವರ್ತಿಸುವ ಅತ್ಯುತ್ತಮ ಸಂದೇಶವನ್ನು *(ಅಹ್ಸನಲ್ ಹದೀಸ್)*, ಒಂದು ಗ್ರಂಥದ ರೂಪದಲ್ಲಿ ಅಲ್ಲಾಹನು ಅವತರಿಸಿದ್ದಾನೆ. ತಮ್ಮ ಪ್ರಭುವನ್ನು ಲಕ್ಷಿಸುವವರು ಅವುಗಳಿಂದ ರೋಮಾಂಚನಗೊಳ್ಳುತ್ತಾರೆ ಮತ್ತು ಅವರ ಚರ್ಮ ಹಾಗೂ ಹೃದಯಗಳು ಅಲ್ಲಾಹನ ಸ್ಮರಣೆಯ ಕಡೆಗೆ ಮೆದುವಾಗುತ್ತದೆ. ಅದುವೇ *(ಅತ್ಯುತ್ತಮ ಸಂದೇಶ)* ಅಲ್ಲಾಹನ ಮಾರ್ಗದರ್ಶನವಾಗಿದೆ. ಅವನು ಇಚ್ಛಿಸುವವರಿಗೆ ಅದರ ಮೂಲಕ ಮಾರ್ಗದರ್ಶನವನ್ನು ನೀಡುತ್ತಾನೆ. ಆದರೆ ಅಲ್ಲಾಹನಿಂದ ದಾರಿ ತಪ್ಪಿಸಲ್ಪಟ್ಟವನು ಯಾವುದೇ ಮಾರ್ಗದರ್ಶನವನ್ನು ಪಡೆಯಲು ಸಾಧ್ಯವಿಲ್ಲ. (39:23)

> ಇವುಗಳು ನಾವು ನಿಮಗೆ ಸತ್ಯತೆಯೊಂದಿಗೆ ಓದಿಕೇಳಿಸುತ್ತಿರುವ ಅಲ್ಲಾಹನ ಅವತೀರ್ಣವಾಗಿದೆ; ಅಲ್ಲಾಹನ ಹಾಗೂ ಅವನ ವಚನಗಳ ಹೊರತು ಇತರ ಯಾವ ಹದೀಸುಗಳನ್ನು *(ಹದೀಸಿನ್)* ಅವರು ವಿಶ್ವಾಸವಿಡುತ್ತಾರೆ? ಪ್ರತಿ ಅಪರಾಧಿ ಸಂಶೋಧಕನಿಗೆ ವಿಪತ್ತು ಕಾದಿದೆ. ಅಲ್ಲಾಹನ ವಚನಗಳು ಅವನಿಗೆ ಓದಲಾಗುವುದನ್ನು ಅವನು ಕೇಳಿಸಿಕೊಳ್ಳುತ್ತಾನೆ, ಆನಂತರ ಅವುಗಳನ್ನು ಯಾವತ್ತೂ ಕೇಳಲೇ ಇಲ್ಲವೆಂಬಂತೆ, ಸೊಕ್ಕಿನಿಂದ ತನ್ನದೇ ದಾರಿಯನ್ನು ಸಮರ್ಥಿಸುತ್ತಾನೆ. ಅವನಿಗೆ ವೇದನಾಭರಿತ ಪ್ರತೀಕಾರದ ಭರವಸೆಯನ್ನು ನೀಡಿರಿ. (45:6-8)

ಕುರ್‌ಆನನ್ನು ಅವತರಿಸಿದ ಸೃಷ್ಟಿಕರ್ತನು ಅದರಲ್ಲಿ ಯಾವುದೇ ದೋಷಕ್ಕೆ ಅವಕಾಶ ನೀಡಲಿಲ್ಲ. ನಿಸ್ಸಂಶಯವಾಗಿ ಕುರ್‌ಆನ್ ಅವತೀರ್ಣಗೊಂಡ ನಂತರ ಅವನ ಶತ್ರುಗಳು ಹದೀಸ್ ಎಂಬ ಸುಳ್ಳನ್ನು ಅವಿಷ್ಕಾರ ಮಾಡುತ್ತಾರೆಂದು ಅವನು ಮುಂಚಿತವಾಗಿ ತಿಳಿದಿದ್ದನು. ಹಿಂದಿನ ಎಲ್ಲಾ ಸಂದೇಶವಾಹಕರ ಹಾಗೆ, ಕೊನೆಯ ಪ್ರವಾದಿಯ ಕರ್ತವ್ಯವೂ ಅಲ್ಲಾಹನ ಸಂದೇಶವನ್ನು ತಲುಪಿಸುವುದು ಆಗಿತ್ತು. ಅವರಿಗೆ ಅವತರಿಸಲ್ಪಟ್ಟ ಕುರ್‌ಆನಿನ ಹೊರತು ಇತರ ಹೇಳಿಕೆಗಳನ್ನು ಬೋಧಿಸುವ ಅಥವಾ ಬರೆಯಿಸುವ ಯಾವುದೇ ಅಧಿಕಾರವನ್ನು ಅವರು ಹೊಂದಿರಲಿಲ್ಲ. ಅವರ ಕೆಲಸವು - ಅಲ್ಲಾಹನ ಸಂದೇಶವನ್ನು ತಲುಪಿಸುವುದು, ಅದರಂತೆ ಜೀವಿಸಲು ಬದ್ಧನಾಗುವುದು ಹಾಗೂ ಅದರ ಪ್ರಕಾರ ತನ್ನ ದೈನಂದಿನ ಜೀವನವನ್ನು ನಡೆಸುವುದು – ಇವುಗಳಿಗೆ ಸೀಮಿತವಾಗಿತ್ತು. ಅವರ ಕರ್ತವ್ಯವು, ಜನರಿಗೆ ನೆನಪಿಸಿಕೊಡುವುದು, ಅಲ್ಲಾಹನ ಕಡೆಗೆ ಕರೆಯುವುದು ಮತ್ತು ತಮಗೆ ಅವತೀರ್ಣಗೊಂಡ ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು ಪ್ರಚಾರ ಮಾಡುವ ಸವಾಲು ತೆಗೆದುಕೊಳ್ಳುವುದು ಆಗಿತ್ತು. ಅವರು ಸಂದೇಶದಲ್ಲಿ ಹಸ್ತಕ್ಷೇಪ ಮಾಡಬಾರದೆಂದು

ಅಥವಾ ಅವತೀರ್ಣಕ್ಕೆ ಸಂಬಂಧಪಟ್ಟಂತೆ ಅಲ್ಲಾಹನ ಹೆಸರಿನಲ್ಲಿ ಯಾವುದೇ ವೈಯಕ್ತಿಕ ಅಭಿಪ್ರಾಯ ಉಚ್ಚರಿಸಬಾರದೆಂದು, ಅತಿ ಪ್ರಬಲ ಶಬ್ಧಗಳಲ್ಲಿ ಸಂದೇಶವಾಹಕರಿಗೆ ಎಚ್ಚರಿಕೆ ನೀಡಲಾಗಿದೆ.

> ಅವರು (ಸಂದೇಶವಾಹಕರು) ಇತರ ಯಾವುದೇ ಮಾತುಗಳನ್ನು ನುಡಿದರೆ ಮತ್ತು ಅದನ್ನು ನಮ್ಮ ಮೇಲೆ ಹೊರಿಸಿದರೆ, ನಾವು ಅವರ ಬಲಗೈಯನ್ನು ಹಿಡಿದು ಅವರ ಅಪಧಮನಿಯನ್ನು ಕತ್ತರಿಸುವೆವು. ಆಗ ನಿಮ್ಮಲ್ಲಿ ಯಾರೊಬ್ಬರಿಗೂ ಅವರನ್ನು ರಕ್ಷಿಸಲು ಸಾಧ್ಯವಿಲ್ಲ. (69:44-47)

ಪ್ರಸ್ತುತ ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ, ಕೊನೆಯ ಪ್ರವಾದಿಗೆ ಕುರ್‌ಆನಿನ ಹೊರಗೆ ಯಾವುದೇ ಪೂರಕ ಅಥವಾ ಹೆಚ್ಚಿನ ಮಾರ್ಗದರ್ಶನ ನೀಡುವುದನ್ನು ನಿಷೇಧಿಸಲಾಗಿತ್ತು. ಆದರೆ ಪ್ರವಾದಿಯವರ ಸಾವಿರಾರು ಮಾತುಗಳು, ತಮ್ಮ ಹತೋಟಿಯಲ್ಲಿದೆ ಎಂದು ಧಾರ್ಮಿಕರು ದಾವೆಮಾಡುತ್ತಾರೆ (ಪ್ರವಾದಿಯರದ್ದು ಎಂದುಕೊಳ್ಳುವ ಆ ಮಾತುಗಳು ಅಸಂಸ್ಕೃತ ಹಾಗೂ ಅನಾಗರಿಕ ಕಾನೂನುಗಳ ಕೂಟವಾಗಿದೆ). ಈ ಕುರ್‌ಆನಿನ-ಹೊರಗಿನ ಪುರಾಣವು, ಯಾವುದೇ ಸ್ವಯಂ ಗೌರವಿಸುವ 'ಧರ್ಮ'ಕ್ಕೆ ಸಾಕಾಗುವಂತಹ ಎಲ್ಲಾ ಪೋಷಾಕುಧಾರಣೆಯ ಬಗೆಗಿನ ವಿವರವಾದ ಸೂಚನೆಗಳನ್ನು ಒಳಗೊಂಡಿದೆ. ಉದಾಹರಣೆಗೆ,:

- ವಿಧ್ಯುಕ್ತ ಪ್ರಾರ್ಥನೆಗಳ ನಿರ್ವಹಣೆ
- ವಿವಿಧ ರೂಪಗಳ ಆರಾಧನೆ
- ತೀರ್ಥಯಾತ್ರೆಗಳು
- ಪ್ರಾಣಿ ಬಲಿ
- ತರ್ಕಬದ್ಧವಲ್ಲದ ಹಾಗೂ ಅಪ್ರಾಮಾಣಿಕ ಶಿಕ್ಷೆಗಳು (ಉದಾ: ವ್ಯಭಿಚಾರಿಯನ್ನು ಕಲ್ಲುಹೊಡೆದು ಕೊಲ್ಲುವುದು)
- ಶಾರೀರಿಕ ಊನಗೊಳಿಸುವಿಕೆ (ಉದಾ: ಗಂಡು ಮತ್ತು ಹೆಣ್ಣಿನ ಸುನತಿ)
- ಸದ್ಗುಣರ ವೈಯಕ್ತಿಕ ನೈರ್ಮಲ್ಯವನ್ನು ರೂಪಿಸಲು ಕ್ಷುಲ್ಲಕ ವಿಷಯಗಳ ಬಗ್ಗೆಯೂ ವಿವರವಾದ ಸೂಚನೆಗಳು
- ಕಾಯಿಲೆಗಳನ್ನು ಗುಣಪಡಿಸುವ ಆಚರಣೆಗಳು
- ಸಾವಿನ ವಿಧಿಗಳು ಮತ್ತು ಅಂತ್ಯಕ್ರಿಯೆಯ ವಿವರಗಳು

- ಮಹಿಳೆಗೆ ಮೌಲ್ಯ ಮತ್ತು ಸ್ವಾತಂತ್ರ್ಯದ ನಿರ್ಬಂಧನೆಗಳು (ಮಹಿಳೆಯರು ಕಡ್ಡಾಯವಾಗಿ ಶಿರವಸ್ತ್ರವನ್ನು ಹೊದಿಸಿಕೊಳ್ಳುವುದರಿಂದ ಆರಂಭವಾಗಿ, ಸಮಾಜದಿಂದ ಅವರನ್ನು ಪ್ರಾಯೋಗಿಕವಾಗಿ ಬೇರ್ಪಡಿಸುವುದರಲ್ಲಿ ಕೊನೆಗೊಳ್ಳುತ್ತದೆ).

ಸಹಜವಾಗಿಯೂ, ಇನ್ನಷ್ಟೂ ಮತ್ತಷ್ಟೂ ಇವೆ. ಆದರೆ ಈ ಬೋಧನೆಗಳಲ್ಲಿ ಒಂದೇ ಒಂದು ಕೂಡಾ ಕುರ್‌ಆನಿನಲ್ಲಿ ಕಂಡುಬರುವುದಿಲ್ಲ ಎಂಬ ವಾಸ್ತವಿಕತೆಯನ್ನು ಅರಿಯುವಾಗ, ಸತ್ಯದ ಅನ್ವೇಷಣೆ ನಡೆಸುತ್ತಿರುವ ಎಲ್ಲಾ ವಿವೇಕವುಳ್ಳ ಬುದ್ಧಿವಂತರಿಗೆ ಸಂತೋಷವಾಗುತ್ತದೆ.

ತಮ್ಮ ನಂಬಿಕೆಯ ಮೊದಲ ಕಂಬವಾದ ವಿಧ್ಯುಕ್ತ ಪ್ರಾರ್ಥನೆಯ ಬಗ್ಗೆ ಕುರ್‌ಆನಿನಲ್ಲಿ ಯಾವುದೇ ವಿವರಗಳು ಇಲ್ಲ ಎಂದು ಧಾರ್ಮಿಕರು ಸಹ ಒಪ್ಪುತ್ತಾರೆ. ಕೆಲವರು ಕುರ್‌ಆನಿನಲ್ಲಿರುವ ಅರ್ಥ ತಿರುಚಲ್ಪಟ್ಟ ಪದಗಳ ಮೂಲಕ ತಮ್ಮ ವಿಧ್ಯುಕ್ತ ಪ್ರಾರ್ಥನೆಯನ್ನು ರೂಪೀಕರಿಸಿ ಸಮರ್ಥಿಸುವುದರಲ್ಲಿ ನಿರತರಾಗಿದ್ದಾರೆ. ಅವರ ಧರ್ಮದ ಪ್ರಧಾನ ವಿಷಯವನ್ನು ಅಲ್ಲಾಹನು ಕುರ್‌ಆನಿನಲ್ಲಿ ವಿವರಿಸಲು ಹೇಗೆಯೋ ಮರೆತುಬಿಟ್ಟಿದ್ದಾನೆ ಎಂದು ತೋಚುತ್ತದೆ. ಇದು ಅವನಿಂದಾದ ಒಂದಷ್ಟು ಪ್ರಮಾದವಾಗಿದೆ, ಆದ್ದರಿಂದ ನಾವು ತಮ್ಮ ಪುರೋಹಿತರ, ಅಸ್ತವ್ಯಸ್ತವಾದ ಸಾವಿರಾರು ಅಜ್ಜಿಕಥೆಗಳಂತಹ ವ್ಯಾಖ್ಯಾನಕ್ಕೆ ಸಮ್ಮತಿಬೇಕಾದ ಅಗತ್ಯವಿದೆ, *ಇಲ್ಲದಿದ್ದರೆ, ಹೇಗೆ ಪ್ರಾರ್ಥಿಸಬೇಕೆಂದು ಬೇರೆ ಹೇಗೆ ಅರಿತುಕೊಳ್ಳುವುದು?* ಎಂದು ಅವರು ವಾದಿಸುತ್ತಾರೆ.

ಧರ್ಮವು ಅಲ್ಲಾಹನಿಂದ ಬಂದಿರುವುದಲ್ಲ

ಇತಿಹಾಸದುದ್ದಕ್ಕೂ ಎಲ್ಲಾ ಪ್ರವಾದಿಗಳ ಶತ್ರುಗಳ ಸರಳ ಉದ್ದೇಶವು ಜನರನ್ನು ಮೋಸಗೊಳಿಸುವುದು ಮತ್ತು ಅಧಿಕಾರವನ್ನು ಉಳಿಸಿಕೊಳ್ಳುವುದು ಆಗಿತ್ತು. ಇದು ಇಂದು ವಿಶ್ವದಲ್ಲಿರುವ ಎಲ್ಲಾ 'ಧರ್ಮಗಳ' ಬುನಾದಿಯಾಗಿದೆ. ಸಹಜವಾಗಿ, ಈ ಧರ್ಮಗಳಲ್ಲಿ ಪ್ರತಿಯೊಬ್ಬನೂ ಪ್ರಜ್ಞಾಪೂರ್ವಕವಾಗಿ ಈ ಕೆಲಸಗಳನ್ನು ಮಾಡುವುದಿಲ್ಲ. ಅನೇಕರು ಪ್ರಾಮಾಣಿಕರಾಗಿದ್ದಾರೆ. ಮರಳಾಗುವವರಿದ್ದರೆ ಉತ್ತಮ ವಂಚಕರೂ ಇರುತ್ತಾರೆ, ಏಕೆಂದರೆ ಅವರು ಪ್ರಾಮಾಣಿಕವಾಗಿ ಅವರ ಪ್ರಚಾರವನ್ನು ನಂಬುತ್ತಾರೆ. ಅಗ್ರ ಮಟ್ಟದಲ್ಲಿರುವ ನಾಯಕತ್ವವು ಈ ಆಟದ ಯೋಜನೆಯನ್ನು ಅರ್ಥಮಾಡಿಕೊಂಡಿರುತ್ತದೆ. ಅಲ್ಲಾಹನ ಮಾರ್ಗದರ್ಶನದಿಂದ ಜನರನ್ನು ದಿಕ್ಕುಗೆಡಿಸುವ ಸಲುವಾಗಿ ಸುಳ್ಳನ್ನು ಆವಿಷ್ಕಾರ ಮತ್ತು ನಿರೂಪಣೆ ಮಾಡಿ ಸುಳ್ಳುಗಾರಿಕೆಯನ್ನು ಹರಡಲು, ಸಾಮಾನ್ಯ ಶತ್ರುಗಳಾಗಿ ಮಾನವ ಶೈತಾನರು ಮತ್ತು *ಜಿನ್ನ್* ಶೈತಾನರು ಅಸ್ತಿತ್ವದಲ್ಲಿದ್ದಾರೆಂದು ಕುರ್‌ಆನ್ ವಿವರಿಸುತ್ತದೆ.

> ಪ್ರತಿಯೊಂದು ಪ್ರವಾದಿಗಳಿಗೆ ನಾವು ಮಾನವ ಶೈತಾನರ ಮತ್ತು ಜಿನ್ನ್ ಶೈತಾನರ ಪೈಕಿ ಶತ್ರುಗಳನ್ನು ನೇಮಕಮಾಡಿದ್ದೇವೆ ಹಾಗೂ ಅವರು ಜನರನ್ನು ಮೋಸಗೊಳಿಸುವ ಸಲುವಾಗಿ

> ಅಲಂಕಾರಿಕ ಪದಗಳ ಆವಿಷ್ಕಾರ ಮಾಡಿ ಪರಸ್ಪರ ಉತ್ತೇಜಿಸುತ್ತಾರೆ. ನಿಮ್ಮ ಪ್ರಭುವು ಇಚ್ಛಿಸುತ್ತಿದ್ದರೆ, ಅವರು ಇದನ್ನು ಮಾಡುತ್ತಿರಲಿಲ್ಲ. ನೀವು ಅವರನ್ನೂ ಮತ್ತು ಅವರ ಆವಿಷ್ಕಾರವನ್ನೂ ಕಡೆಗಣಿಸಿರಿ. (6:112)

ನಾವು ಇಂದು ವಿಶ್ವದಾದ್ಯಂತ ನೋಡಿದರೆ, ಈ ವಚನವು ಯಹೂದಿಗಳಿಗೆ, ಕ್ರೈಸ್ತರಿಗೆ, ಮತ್ತು ಅರಬೀ ಧರ್ಮದ ಅನುಯಾಯಿಗಳಿಗೆ ವಿಶೇಷವಾಗಿ ಹೊಂದಿಕೊಳ್ಳುತ್ತದೆ. (ಹೆಚ್ಚುವರಿ ಮಾಹಿತಿಯ ಆಧಾರದ ಮೇಲಿರುವ) ಸುಳ್ಳುಗಾರಿಕೆಗಳು ಈ ಧರ್ಮಗಳಲ್ಲಿ ತುಂಬಿವೆ. ಅಲ್ಲಾಹನ ಸಂದೇಶವು ಸಂಪೂರ್ಣ ಒಗಟು-ಭರಿತವಾಗಿದೆ ಹಾಗೂ ರಹಸ್ಯವಾದ ಅರ್ಥಗಳನ್ನು ಹೊಂದಿದೆ ಎಂಬಂತೆ, ಈ 'ಹೆಚ್ಚಿನ' ಒಕ್ಕಣೆಗಳು ಅಲ್ಲಾಹನ ಸಂದೇಶವನ್ನು ಮತ್ತಷ್ಟು ವಿವರಿಸುವ ಒಂದು ಸಹಾಯ ಹಸ್ತದ ಮುಖವಾಡವನ್ನು ಧರಿಸಿದೆ. ವಾಸ್ತವವಾಗಿ, ಅಲ್ಲಾಹನ ಗ್ರಂಥವನ್ನು ಅರ್ಥೈಸಲು, ಹೆಚ್ಚುವರಿ ವಿವರಣೆ ಅಥವಾ ಹೆಚ್ಚುವರಿ ಜ್ಞಾನದ ಅವಶ್ಯಕತೆಯೇ ಇಲ್ಲ. ಅಲ್ಲಾಹನು ಅವುಗಳನ್ನು ಅವತರಿಸಲಿಲ್ಲ ಹಾಗೂ ಅವನಿಂದ ಬಂದಂತಹ ಆಜ್ಞೆಗಳಂತೂ ಅಲ್ಲವೇ ಅಲ್ಲ. ಆದಾಗ್ಯೂ ಅವನು ಅವುಗಳನ್ನು ಅವತರಿಸಲು ಇಚ್ಛಿಸಿರುತ್ತಿದ್ದರೆ, ಅವುಗಳ ಅಸ್ತಿತ್ವದ ಪುರಾವೆಗಳು ತೌರಾತಿನಲ್ಲೂ ಮತ್ತು ಕುರ್'ಆನಿನಲ್ಲೂ ಸ್ಪಷ್ಟವಾಗಿ ಇರಬೇಕಿತ್ತು ಅಥವಾ ಆ ಸಂದೇಶವಾಹಕರು ಅದನ್ನು ದೇವಗ್ರಂಥದಂತೆಯೇ ಒಂದು ಗ್ರಂಥದ ರೂಪದಲ್ಲಿ ದಾಖಲೆಗೊಳಿಸಬೇಕಾಗಿತ್ತು. ವ್ಯತಿರಿಕ್ತವಾಗಿ, ಈ ಗ್ರಂಥಗಳಲ್ಲಿ ಈ ಪುರಾಣಗಳನ್ನು ಅನಸರಿಸಬೇಕಾದ ಉಲ್ಲೇಖವೂ ಇಲ್ಲ ಹಾಗೂ ಸಂದೇಶವಾಹಕರ ಜೀವನಾವಧಿಯಲ್ಲಿ ಅವುಗಳು ಕ್ರೋಡೀಕರಿಸಲ್ಪಡಲೂ ಇಲ್ಲ (ಬದಲಾಗಿ ಅವುಗಳ ಬಗ್ಗೆ 'ಎಚ್ಚರಿಕೆ' ನೀಡಲಾಗಿದೆ). ಹಾಗಾದರೆ, ಯಾರೋ ಹೊಸ ಸಂಪ್ರದಾಯವನ್ನು ಸೃಷ್ಟಿಸಿ ಅವುಗಳನ್ನು ಇಸ್ಲಾಮಿಗೆ ಸೇರಿಸಿದ್ದಾರೆ ಎಂಬುವುದು ಸ್ಫಟಿಕದಂತೆ ಸ್ಪಷ್ಟವಾಗಿದೆ.

ಅನಾಚಾರಕ್ಕೆ ಲಕ್ಷ್ಯವಿಡುವುದು ಅತ್ಯಂತ ಅವಿವೇಕತೆಯಾಗಿದೆ. ಈ ಮೊದಲು ಹೇಳಿದಂತೆ, ಇಸ್ಲಾಮನ್ನು ಹಿಡಿದಿಟ್ಟುಕೊಳ್ಳುವವರೆಂದು ಮತ್ತು ಅಲ್ಲಾಹನಲ್ಲಿ ವಿಶ್ವಾಸವಿರಿಸುವವರೆಂದು ಹೇಳಿಕೊಳ್ಳುವವರಿಗೆ, ಕೇವಲ ಕುರ್'ಆನ್ ಮಾತ್ರ ಭೂಮಿಯ ಮೇಲಿರುವ ಏಕೈಕ ಪ್ರಮಾಣಗ್ರಂಥವಾಗಿದೆ.

ಅಲ್ಲಾಹನ ಗ್ರಂಥವು ಮೂಸಾರಿಗೆ ಅವತೀರ್ಣಗೊಂಡ ನಂತರ, ಇಸ್ರಾಯೀಲರ ಮಕ್ಕಳು ಅವರ ವಿರುದ್ಧ ಸಂಚು ಹೂಡಿದರು. ಅವರು ಯಹೂದಿ ಧರ್ಮವನ್ನು ಅನುಸರಿಸಲು ಬೇಕಾಗಿ ಅಲ್ಲಾಹನ ಸಮ್ಮತಿಸಿದ ಆದೇಶಗಳನ್ನು ತ್ಯಜಿಸಿದರು. ಮೂಸಾರಿಗೆ ಈ ಯಹೂದಿ ಧರ್ಮದ ಬಗ್ಗೆ ಏನೂ ತಿಳಿದಿರಲಿಲ್ಲ. ಯಹೂದಿಗಳು ಕೇವಲ ತೌರಾತನ್ನು ಅನುಸರಿಸುವ ಬದಲಾಗಿ, ಅವರು ಪುಸ್ತಕಗಳ ಸಂಪುಟಗಳನ್ನು ತಮಗಾಗಿ ಬರೆದಿಟ್ಟಿದ್ದಾರೆ. ಕುರ್'ಆನ್ ನಿರ್ದಿಷ್ಟ ಪರಿಭಾಷೆಯಲ್ಲಿ ಇದನ್ನು ಖಂಡಿಸುತ್ತದೆ:

> ತೌರಾತನ್ನು ನೀಡಲ್ಪಟ್ಟ ನಂತರ ಅದನ್ನು ಅಧ್ಯಯನ ಮಾಡಲು ವಿಫಲವಾದವರ ಉದಾಹರಣೆಯು, ಪುಸ್ತಕಗಳನ್ನು ಹೊರುವ ಕತ್ತೆಯಂತಾಗಿದೆ. ಅಲ್ಲಾಹನ ಅವತೀರ್ಣವನ್ನು ತಿರಸ್ಕರಿಸುವವರ

ಉದಾಹರಣೆಯು ವಾಸ್ತವವಾಗಿ ಶೋಚನೀಯವಾಗಿದೆ. ಅಲ್ಲಾಹನು ದುಷ್ಟ ಜನರಿಗೆ ಮಾರ್ಗದರ್ಶನ ಕೊಡುವುದಿಲ್ಲ. (62:5)[32]

ತನ್ನ ಕರುಣೆಯಿಂದ, ಅಲ್ಲಾಹನು ಮೂಲ ಕಾನೂನನ್ನು ಮರು ಸ್ಥಾಪಿಸಲು ಅವರಲ್ಲಿಗೆ ಈಸಾರನ್ನು ಕಳುಹಿಸಿದನು. ಆದಾಗ್ಯೂ, ಈಸಾರು ಧರ್ಮವನ್ನು ನಾಶ ಮಾಡಲು ಬದ್ಧರಾಗಿದ್ದ ಕಾರಣ, ತಮ್ಮ ಅಧಿಕಾರದ ತಳಹದಿಯು ದುರ್ಬಲಗೊಳ್ಳಬಹುದಾದ ಭಯದಿಂದ, ಅವರನ್ನು ಒಪ್ಪಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಕೊನೆಯಲ್ಲಿ, ಅವರು ಈಸಾರ ವಿರುದ್ಧ ಒಳಸಂಚು ನಡೆಸಿದರು ಮತ್ತು ಯಹೂದಿತ್ವವನ್ನು ಉತ್ತೇಜಿಸಲು ಮುಂದುವರೆದರು ಮತ್ತು ಯಹೂದಿಯಾಗಿ ಜನಿಸುವ ಅನುಗ್ರಹ ಪಡೆಯದವರಿಗೆ ಅವರು ಕ್ರೈಸ್ತ ಎಂಬ ಒಂದು ಹೊಸ ಧರ್ಮವನ್ನು ರಚಿಸಿಕೊಟ್ಟರು. ತರುವಾಯ, ಅಲ್ಲಾಹನು ಮಹಮ್ಮದರಿಗೆ ಗ್ರಂಥವನ್ನು ಅವತರಿಸಿದನು. ಮತ್ತೊಮ್ಮೆ, ತನ್ನ ಶತ್ರುಗಳು ಅಲ್ಲಾಹನ ಶಾಸನವನ್ನು ತ್ಯಜಿಸಿ ಅರಬೀ ಧರ್ಮವನ್ನು ರೂಪಿಸಿದರು.

ಕುರ್‌ಆನನ್ನು ಹೊರತುಪಡಿಸಿ ಸೂರ್ಯನ ಕೆಳಗಿರುವ ಯಾವುದನ್ನೂ ಹಾಗೂ ಎಲ್ಲವನ್ನೂ ಅನುಸರಿಸುವಂತಹ ಸುನ್ನಿ, ಶಿಯಾ, ಅಹ್ಮದಿಯ್ಯಾ ಅಥವಾ ವಹಾಬಿತ್ವ ಇತ್ಯಾದಿ ಧಾರ್ಮಿಕ ಪಂಗಡಗಳ ಬಗ್ಗೆ, ನಿಸ್ಸಂಶಯವಾಗಿ ಮುಹಮ್ಮದರಿಗೆ ಯಾವ ಅರಿವೂ ಇರಲಿಲ್ಲ. ಮುಹಮ್ಮದರ ಅನುಯಾಯಿಗಳೆಂದು ಹೇಳಿಕೊಳ್ಳುವವರು, ಕೇವಲ ಕುರ್‌ಆನನ್ನು ಅನುಸರಿಸುವ ಬದಲಿಗೆ, ಯಹೂದಿಗಳ ಹಾಗೆ, ಪುಸ್ತಕಗಳ ಸಂಪುಟಗಳನ್ನು ಬರೆದು ಇಂದಿನವರೆಗೆ ಅವುಗಳನ್ನು ಹೊತ್ತುಕೊಂಡು ಬರುತ್ತಿದ್ದಾರೆ. 'ಜನರು ಇತಿಹಾಸದಿಂದ ಕಲಿಯುವ ಏಕೈಕ ಪಾಠವೇನೆಂದರೆ, ಜನರು ಇತಿಹಾಸದಿಂದ ಏನನ್ನೂ ಕಲಿಯುವುದಿಲ್ಲ', ಎಂದು ತೋಚುತ್ತದೆ:

ಇಂದು ಶತಕೋಟಿ ಜನರು ಧರ್ಮಗಳಿಗೆ ತಮ್ಮನ್ನು ಸಮರ್ಪಿಸಿದ್ದಾರೆ. ಎಲ್ಲಾ ಧರ್ಮಗಳು ಅನೇಕ ಸಾಮಾನ್ಯ ಲಕ್ಷಣಗಳನ್ನು ಹಂಚಿಕೊಳ್ಳುತ್ತವೆ. ವಿವರಗಳು ಏನೇ ಇರಲಿ, ಅವರ ಪ್ರಮುಖ ಅನುಶಾಸನಗಳು ಹೀಗಿವೆ:

1. ಪೂಜೆ ಅಥವಾ ಆರಾಧನೆಯನ್ನು ಮಾಡಬೇಕು.

2. ತಮ್ಮ ಪುರೋಹಿತರ ಬೋಧನೆಗಳ ಪ್ರಕಾರ ವಿಧಿವಿಧಾನಗಳಲ್ಲಿ ಪ್ರಾರ್ಥನೆಯನ್ನು ಮಾಡಬೇಕು.

3. ಧರ್ಮದ ಪರಿಪಾಲಕರಿಗೆ ಹಣ ಪಾವತಿ ಮಾಡಬೇಕು.

4. ಕೇವಲ ಪುರೋಹಿತರ ಬಳಿಯಲ್ಲೇ ಸತ್ಯವಿದೆ ಎಂದು ನಂಬಬೇಕು.

ಇನ್ನೂ ಮತ್ತಷ್ಟು ವಿವರಗಳ ಒಂದು ರಾಶಿಯೇ ಇದೆ, ಆದರೆ ಇವುಗಳು ಸಾಮಾನ್ಯ ಚಿತ್ರಣವಾಗಿದೆ.

[32] ಯಹೂದಿಗಳು ಹಾಗೂ ಕ್ರೈಸ್ತರು ತಮಗೆ ತಲುಪಿಸಲಾದ ತೌರಾತ್ ಮತ್ತು ಇಂಜೀಲ್ ಗ್ರಂಥಗಳನ್ನು ಭ್ರಷ್ಟಗೊಳಿಸಿದರು (2:59 ಮತ್ತು 15:12). ಅಲ್ಲಾಹನು ಅವನ ಈ ಜ್ಞಾಪನೆಯನ್ನು (ಕುರ್‌ಆನ್) ಅದರ ಮೂಲ ಭಾಷೆಯಲ್ಲಿ ಮಾತ್ರ ಸಂರಕ್ಷಿಸಲಾಗಿದೆ ಎಂದು ಖಚಿತಪಡಿಸಿದ್ದಾನೆ - ಅದರ ಅನುವಾದಗಳನ್ನಲ್ಲ (15:9).

ಪ್ರಪಂಚದ ಪ್ರಭುವು ಅವನ ಜ್ಞಾನದಿಂದ, ಧರ್ಮ ಮತ್ತು ಅದರ ಪರಿಪಾಲಕರ ಬಗ್ಗೆ ನಮಗೆ ಎಚ್ಚರಿಕೆ ನೀಡಿದ್ದಾನೆ. ಧರ್ಮದ ಉದ್ದೇಶವು, ಜನರನ್ನು ಮೋಸ ಮಾಡವುದೂ ಮತ್ತು ಅಲ್ಲಾಹನ ಪಥದಿಂದ ಮುಗ್ಧರನ್ನು ದಿಕ್ಕುಗೆಡಿಸುವುದೂ ಆಗಿದೆ. ಎಲ್ಲಾ ಧಾರ್ಮಿಕ ಶಿಕ್ಷಕರು ಒಂದು ಸಾಮಾನ್ಯ ಆಕಾಂಕ್ಷೆಯನ್ನು ಹಂಚಿಕೊಳ್ಳುತ್ತಾರೆ: ಅವರು ಒಂದು ಸುಳ್ಳು ವ್ಯವಸ್ಥೆಯನ್ನು ಪ್ರಚಾರ ಮಾಡುತ್ತಾರೆ ನಂತರ ಅವರ ಅನುಯಾಯಿಗಳಿಂದ ಹಣಕಾಸಿನ ಕಾಣಿಕೆಯನ್ನು ಸಂಗ್ರಹಿಸುತ್ತಾರೆ.

> ಓ ವಿಶ್ವಾಸಿಗಳೇ, ಪುರೋಹಿತರು ಮತ್ತು ಧಾರ್ಮಿಕ ಪಂಡಿತರಲ್ಲಿ ಹೆಚ್ಚಿನವರು ಜನರ ಹಣದಿಂದ ಅವರನ್ನೇ ಮೋಸಮಾಡುತ್ತಾರೆ ಮತ್ತು ಅವರು ಅಲ್ಲಾಹನ ಪಥದಿಂದ ಎಲ್ಲರನ್ನೂ ಪಥಭ್ರಷ್ಟರನ್ನಾಗಿ ಮಾಡುತ್ತಾರೆ. (9:34)

ಉದಾಹರಣೆಗೆ, ಅಂತ್ಯಕ್ರಿಯೆಯ ವಿಧಿಗಳಿಗೆ ಅನೇಕ ದೇಶಗಳಲ್ಲಿ ಸಾವಿರಾರು ರೂಪಾಯಿ (ಆಚರಣೆಗಳನ್ನು ಮಾಡಲು ನೀವು ತೊಡಗಿಸುವ ಧಾರ್ಮಿಕ ತಜ್ಞರ ದರ್ಜೆಯನ್ನು ಅವಲಂಬಿಸಿರುತ್ತದೆ) ವೆಚ್ಚಮಾಡಬೇಕಾಗಿರುವುದು ಬಹಳ ಸಾಮಾನ್ಯವಾಗಿದೆ. ಆದಾಗ್ಯೂ, ಈ ವಿಧಿಗಳನ್ನು ನಡೆಸುವುದರಿಂದ ಮರಣಹೊಂದಿದ ಮನುಷ್ಯನು ಸ್ವರ್ಗವನ್ನು ಪಡೆಯುತ್ತಾನೆಂದು ಈ ಪುರೋಹಿತರು ಮತ್ತು ಧಾರ್ಮಿಕ ಪಂಡಿತರಿಗೆ ಖಾತರಿಪಡಿಸಲು ಸಾಧ್ಯವಿಲ್ಲ (ಇದು ಎಲ್ಲಾ ಧರ್ಮಗಳಲ್ಲಿರುವ ತಪ್ಪಿಸಿಕೊಳ್ಳಲಾಗದ ವಾಸ್ತವವಾಗಿದೆ). ನವಜಾತ ಶಿಶುಗಳಿಗೂ ಧಾರ್ಮಿಕ ಆಚರಣೆಗಳ ಒಂದು ಶ್ರೇಣಿಯೇ ಇರುವುದನ್ನು ನಾವು ಕಾಣುತ್ತೇವೆ, ಆದರೂ ಹೀಗೆ 'ಧಾರ್ಮಿಕ'ವಾಗಿ ಹರಸಲ್ಪಟ್ಟ ಹಲವಾರು ಶಿಶುಗಳು ಬೆಳೆದು ಏನೇನೋ ಆಗುತ್ತಾರೆ ಎಂಬುವುದಕ್ಕೆ ನಮ್ಮ ಕಣ್ಣುಗಳೇ ಸಾಕ್ಷಿ. 'ಧಾರ್ಮಿಕ'ವಾಗಿ ಹರಸಲ್ಪಟ್ಟ ಮದುವೆಯು ವಿಚ್ಛೇದನದಲ್ಲಿ ಕೊನೆಗೊಳ್ಳುವುದಿಲ್ಲ ಎಂದು ಯಾವ ಪುರೋಹಿತನಿಗೂ ಅಥವಾ ವಿದ್ವಾಂಸನಿಗೂ ಖಚಿತಪಡಿಸಲು ಸಾಧ್ಯವಿಲ್ಲ. ಧರ್ಮವನ್ನು ಅನುಸರಿಸುವವರು, ನಿಶ್ಚಯವಾಗಿಯೂ ಆದಷ್ಟು ಬೇಗ ಅಥವಾ ನಿಧಾನವಾಗಿ ತಮ್ಮ ಸಂಪತ್ತಿಗೆ ಸಂಬಂಧಿಸಿದಂತೆ ಅವರ ಧಾರ್ಮಿಕ ಪುರೋಹಿತರ ವಿನ್ಯಾಸಗಳಿಗೆ ಬಲಿಯಾಗುತ್ತಾರೆ.

ಜನರು ಹಣಕ್ಕೆ ಮೌಲ್ಯವನ್ನು ನಿರೀಕ್ಷಿಸುತ್ತಾರೆ. ದುರದೃಷ್ಟವಶಾತ್ ಅವರು ಧರ್ಮವನ್ನು ಅನುಸರಿಸುವಾಗ ಅವರು ತಮ್ಮ ಧಾರ್ಮಿಕರ ಮುಖಾಂತರ ನರಕಕ್ಕೆ ಏಕಮುಖ ಟಿಕೇಟು ಖರೀದಿಸುತ್ತಾರೆ. ಪ್ರಪಂಚದ ಪ್ರಭುವನ್ನು ಸಂಬಂಧಿಸಿದಂತೆ, ನೇರ ಧರ್ಮ ಎಂಬ ವಿಷಯವೇ ಇಲ್ಲ. ಅವನಿಗೆ ಯಾವುದೇ ಧರ್ಮದಲ್ಲಿ ಆಸಕ್ತಿ ಇಲ್ಲ. ಬದಲಿಗೆ, ಉತ್ತಮ ಕಾರ್ಯಗಳನ್ನು ಆಧಾರಿಸಿದ ಜೀವನದ ಒಂದು ಕ್ರಮಬದ್ಧ ರೀತಿಯನ್ನು ಅವನು ಪದೇ ಪದೇ ಸಮರ್ಥಿಸುತ್ತಾನೆ.

ಕುರ್‌ಆನ್ ಮಾನವಕುಲಕ್ಕೆ ಪ್ರಬಲ ಸಂದೇಶವಾದ ಒಂದು ಸರಳ ಪರಿಹಾರವನ್ನು ನೀಡುತ್ತದೆ:

ಯಾವುದೇ ವೇತನವನ್ನು[33] ಕೇಳದಂತಹವರನ್ನು ಅನುಸರಿಸಿರಿ, ಅವರು ಸನ್ಮಾರ್ಗಿಗಳಾಗಿರುತ್ತಾರೆ. (36:21)

ಧರ್ಮವು ಒಂದು ದೊಡ್ಡ ಕಸುಬಾಗಿದೆ ಮತ್ತು ಅದರ ವ್ಯವಸ್ಥಾಪಕರಿಗೆ, ಅಲ್ಲಾಹನ ಹೆಸರಿನಲ್ಲಿ ಹೇಗೆ ಸುಳ್ಳುಗಳನ್ನು ಆವಿಷ್ಕಾರ ಮಾಡುವ ರೀತಿಯನ್ನು ಅರಿತಿರುವುದನ್ನು ಹೊರತುಪಡಿಸಿದರೆ, ಬೇರೆ ಯಾವುದೇ ವಿಶೇಷ ಪ್ರತಿಭೆಯನ್ನು ಹೊಂದಿರುವ ಅಗತ್ಯವಿಲ್ಲ. ಧರ್ಮದ ಹೆಸರಿನಲ್ಲಿ ಹಣವನ್ನು ಸಂಗ್ರಹಿಸುವ ಯಾರು ಕೂಡ ಮಾರ್ಗದರ್ಶನ ಹೊಂದಿದವರಲ್ಲ ಎಂದು ಕುರ್‌ಆನ್ ಹೇಳುತ್ತದೆ. ಜೀವನದ ಉತ್ತಮ ಮೌಲ್ಯಗಳನ್ನು ಪ್ರಚಾರಮಾಡುವ ಸುವಾರ್ತೆಯ ವಾಹಕರು, ಬಹಿರಂಗವಾಗಿ ಹೀಗೆ ಪ್ರಕಟಿಸುತ್ತಾರೆ: *'ನಾನು ನಿಮ್ಮೊಂದಿಗೆ ಯಾವುದೇ ಸಂಭಾವನೆಯನ್ನು ಕೇಳುವುದಿಲ್ಲ, ನನ್ನ ಪಾವತಿಯು ಪ್ರಪಂಚದ ಪ್ರಭುವಿನಿಂದ ಬರುತ್ತದೆ*[34]ಎಂದು ಕುರ್‌ಆನ್ ಅನೇಕ ಕಡೆಗಳಲ್ಲಿ ಪುನರಾವರ್ತಿಸುತ್ತದೆ. ನೂಹ್, ಇಬ್ರಾಹೀಮ್, ಇಸ್ಹಾಕ್, ಯಾಕೂಬ್, ಯೂಸುಫ್, ಮೂಸಾ, ಈಸಾ ಮತ್ತು ಇತರ ಎಲ್ಲಾ ಸಂದೇಶವಾಹಕರು ಜನರೊಂದಿಗೆ ಇದನ್ನೇ ಹೇಳಿದ್ದರು.

ಈ ಕೆಳಗಿನ ಮುಹಮ್ಮದರ ಸ್ಪಷ್ಟವಾದ ಹೇಳಿಕೆಯನ್ನು ಕುರ್‌ಆನ್ ಉಲ್ಲೇಖಿಸುವಾಗ, ಧಾರ್ಮಿಕರು ಮತ್ತು ಅವರ ವಿದ್ವಾಂಸರು ಅದನ್ನು ನಂಬುವುದಿಲ್ಲವೆಂದು ಅವರ ಕೃತ್ಯಗಳಲ್ಲಿ ವ್ಯಕ್ತವಾಗುತ್ತದೆ:

> "ನಾನು ನಿಮ್ಮೊಂದಿಗೆ ಯಾವುದೇ ವೇತನವನ್ನು ಕೇಳಲಿಲ್ಲ, ನನ್ನ ವೇತನವು ಅಲ್ಲಾಹನಿಂದ ಬರುತ್ತದೆ, ಅವನು ಎಲ್ಲಾದಕ್ಕೂ ಸಾಕ್ಷಿಯಾಗಿದ್ದಾನೆ." (34:47)

ವಿಪರ್ಯಾಸವೆಂದರೆ, ಸತ್ಯನಿಷೇಧ ಹಾಗೂ ಕಪಟತೆಯಲ್ಲಿ ಕಠೋರರಾದ ಗಣ್ಯರ ಸಂಘವು, ಎಲ್ಲರ ಮೇಲೆ 'ಪ್ರವಾದಿಯ ಉತ್ತಮ ಉದಾಹರಣೆ'ಯನ್ನು ಹೇರಿಸಿ, ತಾವು ಅದರ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಪುರೋಹಿತರು ಮತ್ತು ಧಾರ್ಮಿಕ ಪಂಡಿತರು ಜನರ ಹಣದಿಂದ ಅವರನ್ನೇ ವಂಚಿಸುತ್ತಾರೆ ಎಂದು ಹೇಳುವುದಕ್ಕೆ ಇದುವೇ ಕಾರಣವಾಗಿದೆ. ವೇತನವನ್ನು ಯಾಚಿಸುವವರನ್ನು ಅನುಸರಿಸಬೇಡಿರಿ ಎಂಬ ಕುರ್‌ಆನಿನ ತಡೆಯಾಜ್ಞೆಯನ್ನು, ಒಂದು ವೇಳೆ ಎಲ್ಲಾ ಜನರು ಪ್ರಾಮಾಣಿಕರಾಗಿ ಸಮ್ಮತಿಸಿದರೆ, ನಿಸ್ಸಂಶಯವಾಗಿಯೂ ತಮ್ಮನ್ನು ಬಂಧಿಸಿರುವ ಸಂಕೋಲೆಯಿಂದ ತಕ್ಷಣ ಮುಕ್ತಗೊಳ್ಳುತ್ತಾರೆ. ತಮ್ಮ ಉದ್ದೇಶಿತ ಆದಾಯವು ನಿಂತು ಹೋದ ತಕ್ಷಣ, ಪುರೋಹಿತರು ಮತ್ತು ಧಾರ್ಮಿಕ ವಿದ್ವಾಂಸರು ರಾತ್ರೋರಾತ್ರಿ ಮಾಯವಾಗುತ್ತಾರೆ.

---

[33] ಇದು ಅಲ್ಲಾಹನ ಪಥಕ್ಕೆ ಇತರರನ್ನು ಮಾರ್ಗದರ್ಶನ ಮಾಡುತ್ತಾರೆ ಎಂದು ಪ್ರತಿಪಾದಿಸುವ ಜನರಿಗೆ ಹಣಪಾವತಿ ಮಾಡುವುದಕ್ಕೆ ಸಂಬಂಧಿಸಿದ್ದಾಗಿದೆ. ಸ್ವತಃ ಅಲ್ಲಾಹನನ್ನು ಹೊರತುಪಡಿಸಿ ಯಾರನ್ನೂ ತನ್ನ ಕಡೆಗೆ ತರಲು ಯಾರಿಗೂ ಸಾಧ್ಯವಿಲ್ಲವೆಂದು 42:13 ರಲ್ಲಿ ಕುರಾನ್ ಹೇಳುತ್ತದೆ. ಪ್ರವಾದಿಯವರಿಗೂ ತನ್ನ ಪತ್ನಿ ಮತ್ತು ಮಕ್ಕಳು ಸೇರಿದಂತೆ ತಾವು ಪ್ರೀತಿಸುವವರಿಗೂ ಸಹಾ ಮಾರ್ಗದರ್ಶನ ನೀಡಲು ಸಾಧ್ಯವಿಲ್ಲ ಎಂದು 28:56 ರಲ್ಲಿ ಹೇಳಲಾಗಿದೆ.

[34] ಈ ಅಧ್ಯಾಯದ ಅನುಬಂಧ (Annex) ವನ್ನು ನೋಡಿ.

ಜನರು ಉತ್ತಮ ಕೆಲಸಗಳನ್ನು ಮಾಡುವುದಕ್ಕಾಗಿ ತಮ್ಮ ಸಂಪೂರ್ಣ ಗಮನವನ್ನು ಕೇಂದ್ರೀಕರಿಸಬೇಕು. ಕುರ್‌ಆನ್ ನಿರ್ದೇಶಿಸುವ ಹಾಗೆ - ಮಾತಾಪಿತರ, ನೆರೆಕರೆಯವರ, ಸಂಬಂಧಿಕರ, ಅನಾಥರ ಮತ್ತು ಬಡವರ ಶುಶ್ರೂಷೆ ಮಾಡುವುದಕ್ಕೆ, ವಿನಮ್ರತೆಯನ್ನು ಪಾಲಿಸುವುದಕ್ಕೆ ಮತ್ತು ಜನರೊಂದಿಗೆ ಸ್ನೇಹಭಾವದಿಂದ ಮಾತನಾಡುವುದಕ್ಕೆ ಹಾಗೂ ನಡೆದುಕೊಳ್ಳುವುದಕ್ಕೆ - ತಮ್ಮ ಹಣ ಮತ್ತು ಸಮಯವನ್ನು ಉತ್ತಮ ರೀತಿಯಲ್ಲಿ ಬಳಸಬಹುದು. ಜೀವನವೆಂದರೆ ಇದಾಗಿದೆ. ಇಸ್ಲಾಂ ಅಥವಾ ಶಾಂತಿಪರತೆ ಎಂಬುವುದು ಇದಾಗಿದೆ. ಇಸ್ಲಾಂ ಎಂಬುವುದು ಧರ್ಮದ ಕುರಿತಾಗಿ ಇರುವುದಲ್ಲ. ಜನರು ತಮ್ಮ ಕೃತ್ಯಗಳಿಂದ ಗುರುತಿಸಲ್ಪಡುತ್ತಾರೆ, 'ಧಾರ್ಮಿಕ ನಂಬಿಕೆ'ಯಿಂದಲ್ಲ.

ಅರಬೀ ಧಾರ್ಮಿಕ ಕಾನೂನುಗಳು

ಧರ್ಮವನ್ನು ಸಂಶೋಧಿಸಿದ ಧಾರ್ಮಿಕರು, ವಿಧ್ಯುಕ್ತ ಪ್ರಾರ್ಥನೆಗಳ ಮತ್ತು ವಿಧ್ಯುಕ್ತ ಆರಾಧನಾಚರಣೆಗಳ ಜೊತೆಗೆ, ಅಲ್ಲಾಹನ ಹಾಗೂ ಅವನ ಪ್ರವಾದಿಗಳೊಂದಿಗೆ ಯಾವುದೇ ಸಮಾನತೆಯಿಲ್ಲದ ಧಾರ್ಮಿಕ ಕಾನೂನುಗಳನ್ನೂ ಕಡ್ಡಾಯಗೊಳಿಸಿದ್ದಾರೆ.

ಅಲ್ಲಾಹನ ವ್ಯವಸ್ಥೆಯು ಭೂಮಿಯ ಮೇಲೆ ಒಂದು ಮಾನದಂಡವನ್ನು ಹೊಂದಿದೆ - ಅದಾಗಿದೆ ಕುರ್‌ಆನ್. ಅವನು ತನ್ನ ಗ್ರಂಥವನ್ನು ಅಳತೆಗೋಲು ಎಂದು ಕರೆದಿದ್ದಾನೆ. ಇದು ಇತರ ಎಲ್ಲವನ್ನೂ ಅಳೆಯಬಹುದಾದ ಒಂದು ಪ್ರಮಾಣವಾಗಿದೆ. ಈ ಮಾನದಂಡದ ಮೂಲಕ, ಯಾವುದೇ ಒಂದು ವಿಷಯವು ಅದು ಒಳ್ಳೆಯದೋ ಅಥವಾ ಕೆಟ್ಟದೋ, ಸರಿಯೋ ಅಥವಾ ತಪ್ಪೋ, ಪವಿತ್ರವೋ ಅಥವಾ ಅಪವಿತ್ರವೋ, ನಿಜವಾದದ್ದೋ ಅಥವಾ ಕಾಲ್ಪನಿಕವೋ ಎಂಬುದನ್ನು ಒಬ್ಬನು ನಿರ್ಣಾಯಕವಾಗಿ ಗ್ರಹಿಸಲು ಸಾಧ್ಯವಿದೆ. ಎಲ್ಲವನ್ನು ಅಳೆಯಬಹುದಾದ ಒಂದು ನಿಯಮವನ್ನು ನಮಗೆ ನೀಡಿರುವಾಗ, ವ್ಯಕ್ತಿಯು ಅಲ್ಲಾಹನ ಈ ನಿರ್ದಿಷ್ಟ ಮಾನದಂಡವನ್ನು ಆಗಾಗ್ಗೆ ಬಳಸಬೇಕಾಗಿದೆ. ಶೈತಾನನು, ಸಹಜವಾಗಿ ಅದರ ನಿಖರತೆಯನ್ನು ಕೆಡಿಸಲು ಪ್ರಯತ್ನಿಸುತ್ತಾನೆ. ಮಾನದಂಡದ ಮೂಲ ಆಶಯ ಹಾಗೂ ಮಿತಿಯನ್ನು ಮರೆಮಾಚಿ ಅವನು ಈಗಾಗಲೇ ಅದನ್ನು ಸಾಧಿಸಿದ್ದಾನೆ.

ಉದಾಹರಣೆಗೆ, 2:224-242 ರಲ್ಲಿ ಮದುವೆ ಮತ್ತು ವಿಚ್ಛೇದನ ವಿಷಯದ ಮೇಲೆ ಸೌಹಾರ್ದಯುತ ನ್ಯಾಯವನ್ನು ರೂಪರೇಖೆಗೊಳಿಸುವ ಹದಿನೆಂಟು ವಚನಗಳನ್ನು ನಾವು ಕಾಣಬಹುದು. ವೈವಾಹಿಕ ವಿವಾದಗಳನ್ನು ಬಗೆಹರಿಸುವ ಸಲುವಾಗಿ ಮತ್ತಷ್ಟು ಮಾರ್ಗದರ್ಶಿಗಳನ್ನು ಮತ್ತು ವಿಧಾನಗಳನ್ನು ಅವುಗಳು ವಿವರಿಸುತ್ತದೆ. ಆ ಮಾರ್ಗದರ್ಶಿ ಸೂತ್ರಗಳು ಸ್ವ-ವಿವರಣಾತ್ಮಕವಾಗಿದೆ ಮತ್ತು ಅವುಗಳು ಯಾರಿಂದಲೂ ಪಾಲಿಸಲು ಸಾಧಿಸುವಂತಹುದಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಯಾವುದೇ ಪುರೋಹಿತರು ಅಥವಾ ಧಾರ್ಮಿಕ ಮೇಲ್ವಿಚಾರಕರನ್ನು ಒಳಗೊಳ್ಳದ, ನಡವಳಿಕೆಯ ಒಂದು ಶಿಷ್ಟಾಚಾರವನ್ನು

ಅನ್ವಯಿಸುವಂತೆ ಅಲ್ಲಾಹನು ಜನರಿಗೆ ನಿರ್ದೇಶಿಸಿದ್ದಾನೆ. ಹೀಗಾಗಿ, ಮದುವೆ ಮತ್ತು ವಿಚ್ಛೇದನದ ಮೇಲೆ 'ಇಸ್ಲಾಮಿಕ್' ಧಾರ್ಮಿಕ ಕಾನೂನುಗಳನ್ನು ನಿರೂಪಿಸುವ ಯಾವುದೇ ಹೊಸ ಹಾಗೂ ಪ್ರತ್ಯೇಕ ಶಾಸಕರ ಅವಶ್ಯಕತೆ ಇಲ್ಲ.

ಅಲ್ಲಾಹನ ಪದಗಳನ್ನು 'ಹೆಚ್ಚಳ'ಗೊಳಿಸುವ ಮಾನವನ ಅಧಿಕ ಕಾನೂನುಗಳ ಅಸ್ತಿತ್ವವೇ ಗಾಭರಿಪಡಿಸುವಂತಹ ಅಹಂಕಾರವಾಗಿದೆ. ಅದು ಮಾನವರ ಕಾನೂನನ್ನು ಅಲ್ಲಾಹನ ಶಾಸನಗಳ ಅದೇ ಮಟ್ಟದಲ್ಲಿ ಇರಿಸುತ್ತದೆ.

ದೇಶೀಯ ಕಾನೂನುಗಳಲ್ಲಿ ಕೂಡ, ಕಾನೂನಿನ ಜೀವಾಳವು ಪ್ರಮುಖವಾಗಿದೆ. ನಿಗದಿಸಿದ ಮಿತಿಗಳನ್ನು ನಾವು ಮೀರಿ ಹೋಗಲು ಸಾಧ್ಯವಿಲ್ಲ. ಉದಾಹರಣೆಗೆ, ಒಬ್ಬ ಕಾರ್ಮಿಕನ ಕನಿಷ್ಠ ವೇತನವು ದಿನಕ್ಕೆ ನೂರು ರೂಪಾಯಿ ಆಗಿದ್ದರೆ, ಆ ಮೊತ್ತಕ್ಕಿಂತ ಕಡಿಮೆಯಾಗದೇ, ಅವನಿಗೆ ಎಷ್ಟು ಬೇಕಾದರೂ ಪಾವತಿಸಲು ನಾವು ಸ್ವತಂತ್ರರಾಗಿದ್ದೇವೆ. ಈ ಪರಿಕಲ್ಪನೆಯು ಮಾನವಕೃತವಾಗುವುದಿಲ್ಲ. ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ನಂಬುವ ಯಾವುದೇ ವ್ಯಕ್ತಿಯು, ಅಲ್ಲಾಹನ ನಿಗದಿತ ಮಿತಿಗಳನ್ನು ಮೀರದೇ ಇರುವ ತನಕ, ಅವನ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಲು ಸ್ವತಂತ್ರನಾಗಿದ್ದಾನೆ. ಯಾರು ಮಿತಿಗಳನ್ನು ಮೀರುತ್ತಾರೋ, ಅವರ ಬಗ್ಗೆ ಅಲ್ಲಾಹನು ತೀರ್ಮಾನಿಸುತ್ತಾನೆ. ಅಲ್ಲಾಹನು ನ್ಯಾಯಾಧೀಶನಾಗಿರುವಾಗ, ಅವನ ಮಾರ್ಗದರ್ಶನವು 'ಇಸ್ಲಾಮಿಕ್' ಕಾನೂನು, 'ಧಾರ್ಮಿಕ' ಕಾನೂನು ಅಥವಾ '*ಶರೀಅ*' ಕಾನೂನು ಎಂಬ ಶೀರ್ಷಿಕೆಗಳೊಂದಿಗೆ ಲೇಪಿತವಾಗಿದೆ ಎಂಬುವುದು ಅತಿಶಯವಾಗುತ್ತದೆ.

ಗ್ರಂಥದ ಉದ್ದೇಶವು ಧಾರ್ಮಿಕ ಕಾನೂನುಗಳನ್ನು ವಿಧಿಸುವುದಲ್ಲ ಆದರೆ ಅನ್ಯಾಯವಾದ ಮಾನವ ಕಾನೂನುಗಳನ್ನು ಬದಲಿಸುವುದಾಗಿದೆ. ಕುರ್‌ಆನ್ ಒಂದು ಸ್ವ-ಆಧರಿತ ಕಾನೂನಾಗಿದೆ. ಅದು ಸ್ವರೂಪ ಮತ್ತು ಕಾರ್ಯದಲ್ಲಿ ಪೂರ್ಣತೆಯನ್ನು ಹೊಂದಿದೆ.

> ನಾವು ಸ್ಪಷ್ಟ ಅವತೀರ್ಣಗಳೊಂದಿಗೆ ನಮ್ಮ ಸಂದೇಶವಾಹಕರನ್ನು ಕಳುಹಿಸಿದ್ದೇವೆ ಮತ್ತು ನಾವು ಜನರಲ್ಲಿ ನ್ಯಾಯವನ್ನು ಹರಡಲು ಅಳತೆಗೋಲಾಗಿ (ಮೀಝಾನ್) ಅವರಿಗೆ ಗ್ರಂಥವನ್ನು ಕಳುಹಿಸಿದ್ದೇವೆ. (57:25)

ಈ ಪರಿಕಲ್ಪನೆಯನ್ನು ಮತ್ತಷ್ಟು ಅವಲೋಕಿಸಲು ಕೆಳಗಿನವುಗಳನ್ನು ಪರಿಗಣಿಸೋಣ:

- ವ್ಯಭಿಚಾರಿಗೆ (ಪುರುಷನಾಗಿರಲಿ, ಮಹಿಳೆಯಾಗಿರಲಿ) ಮರಣದಂಡನೆ ವಿಧಿಸಬಾರದೆಂದು, ಯಾವುದೇ ನಾಗರೀಕ ಸರ್ಕಾರದ ಶಾಸಕರು (ಸಹಜವಾಗಿ, ಅರಬೀ ಧರ್ಮದ ಶಾಸಕರನ್ನು ಹೊರತುಪಡಿಸಿ) ಒಪ್ಪುತ್ತಾರೆ.

- ಒಬ್ಬ ವ್ಯಕ್ತಿಯು ಅಲ್ಲಾಹನನ್ನು ನಂಬಲು ಅಥವಾ ನಂಬದಿರಲು ಸ್ವತಂತ್ರನಾಗಿದ್ದಾನೆ ಮತ್ತು ಪುರೋಹಿತರಿಂದ (ಅಥವಾ ಯಾರಿಂದಲೂ) ಶಿಕ್ಷಿಸಲ್ಪಡದೆ ಅವನು ಅಥವಾ ಅವಳು ಯಾವುದೇ ಸಮಯದಲ್ಲಿ ಅವರ ನಂಬಿಕೆಯನ್ನು ಬದಲಿಸಲೂ ಸ್ವತಂತ್ರರಾಗಿದ್ದಾರೆ ಎಂದು ಯಾವುದೇ ದೇಶದ ಶಾಸಕರು ಒಪ್ಪುತ್ತಾರೆ.

- ಹಾಗೆಯೇ, ವಿಚ್ಛೇದಿತ ಮಹಿಳೆಯು ತನ್ನ ಸ್ವಾತಂತ್ರ್ಯದಿಂದ ವಂಚಿತಳಾಗಬಾರದು ಮತ್ತು ಆಕೆಗೆ ಬೇರೆ ಪರ್ಯಾಯ ಅಥವಾ ಸಮನ್ವಯವಾದ ಏರ್ಪಾಡುಗಳನ್ನು ಮಾಡಿಕೊಳ್ಳುವ ತನಕ ಆಕೆಗೆ ಸಮಂಜಸವಾದ ಅನುಕೂಲತೆಗಳನ್ನು ಒದಗಿಸಬೇಕು ಎಂದು ಅದೇ ಶಾಸಕರು (ಮೇಲೆ ಹೇಳಿದ ಅದೇ ಜನರನ್ನು ಹೊರತುಪಡಿಸಿ) ಒಪ್ಪುತ್ತಾರೆ.

ಇವುಗಳು ಕುರ್‌ಆನಿನಲ್ಲಿ ಹೇಳಲಾದ ಕೆಲವು ಕರುಣೆಯಿಂದ ಕೂಡಿದ ಸಂಧರ್ಭಗಳಾಗಿವೆ. ಅವುಗಳು ಸಮಾಜದ ಪ್ರಗತಿ ಮತ್ತು ಒಗ್ಗಟ್ಟಿಗಾಗಿ ಸಹಕರಿಸುವ ಸರಿಯಾದ ತತ್ವಗಳಾಗಿವೆ. ಅನೇಕ ವರ್ಷಗಳ ಪ್ರಯೋಗ ಮತ್ತು ವೀಕ್ಷಣೆಯ ನಂತರ ನಾಗರೀಕ ದೇಶಗಳು ಇವುಗಳನ್ನು ಕಾರ್ಯರೂಪಕ್ಕೆ ತಂದಿವೆ, ಏಕೆಂದರೆ ಅವುಗಳು ನ್ಯಾಯೋಚಿತ ಹಾಗೂ ಪ್ರಾಯೋಗಿಕವಾಗಿವೆ. ಕುರ್‌ಆನ್ ನಮಗೆ ಕಾನೂನಿನ ಫಲದಾಯಕ ನಿಯಮಗಳಿಗೆ ಒಂದು ಸರಳದಾರಿಯನ್ನು ತೋರಿಸುತ್ತದೆ. ಸಂದೇಶದ ತಳಹದಿಯು ಧರ್ಮವಲ್ಲ. ಸಂದೇಶದ ತಳಹದಿಯು ಜೀವನವಾಗಿದೆ. ಮಾನವ ಪರಿಸ್ಥಿತಿಗೆ ನಿಷ್ಪಕ್ಷವಾಗಿ ಮತ್ತು ದೃಢವಾಗಿ ಸರಿಹೊಂದುವ ಹಾಗೆ ವಿನ್ಯಾಸ ಮಾಡಲಾದ, ಒಂದು ಜೀವನ ರೀತಿಯ ಒಂದು ಯೋಜನೆಯನ್ನು ಒದಗಿಸುವುದರಲ್ಲಿ ಈ ತಳಹದಿಯು ಬೇರೂರಿದೆ. ಎಲ್ಲಾ ಪ್ರವಾದಿಗಳು ಇದನ್ನೇ ಕಲಿಸಿದ್ದರು.

ಇಲ್ಲೊಂದು ಪ್ರಶ್ನೆಯು ಉದ್ಭವವಾಗುತ್ತದೆ: ಅಲ್ಲಾಹನ ನಿಯಮಗಳನ್ನು 'ಕಾನೂನುಬದ್ಧ'ಗೊಳಿಸಲು, ಅರಬೀ ಶಾಸಕರು ಇಷ್ಟೊಂದು ಉತ್ಸುಕರಾಗಿದ್ದರೆ, ಕುರ್‌ಆನಿನ ಇತರ ಸಮಾನವಾದ ಪ್ರಮುಖ ಅಂಶಗಳಾದ ಸಭ್ಯತೆ, ವಿನಯತೆ, ಪರಿಗಣನೆ, ಮರ್ಯಾದೆ, ಅನುಭೂತಿ, ತಾಳ್ಮೆ, ನಮ್ರತೆ, ಮಾನವ ಕಲ್ಯಾಣಕ್ಕಾಗಿ ದಾನ ನೀಡುವಿಕೆ, ಆತ್ಮಸಂಯಮ ಹಾಗೂ ಕರುಣೆ ಇತ್ಯಾದಿ ಅಗತ್ಯಗಳನ್ನು ಏಕೆ ಕಾನೂನುಬದ್ಧಗೊಳಿಸಲಿಲ್ಲ? ಅಲ್ಲಾಹ ಕಾನೂನಿನ ಅರಬೀ ಆವೃತ್ತಿಯು, ಸ್ವರೂಪದಲ್ಲಿ ಕ್ರೂರತೆ ಹಾಗೂ ದಬ್ಬಾಳಿಕೆಯಾಗಿರುವ ಬದಲು ಅಲ್ಲಾಹನ-ಶೈಲಿಯನ್ನು ಹೋಲುವಂತದ್ದಾಗಿ ಇರಬೇಕಿತ್ತಲ್ಲವೇ? ಇಸ್ಲಾಮೀ ಕಾನೂನಿನ ಯಾವುದೇ ವಿದ್ಯಾರ್ಥಿಯು ಅಂತಿಮವಾಗಿ ತೀರ್ಮಾನಿಸಲು ಸಾಧ್ಯವಿರುವುದು ಏನೆಂದರೆ: ಧಾರ್ಮಿಕ ಮೂಲದ 'ಇಸ್ಲಾಮಿಕ್' ಕಾನೂನುಗಳು, ಕುರ್‌ಆನಿನಲ್ಲಿ ಕಂಡುಬರುವುದಿಲ್ಲ ಮತ್ತು ಅಲ್ಲಾಹನಿಂದ ಸ್ಫೂರ್ತಿಗೊಂಡಿರುವ ಸಾಧ್ಯತೆಯು ಶೂನ್ಯಕ್ಕೆ ಸಮವಾಗಿದೆ.

ಅರಬೀ ಲೋಕವು ಗೊಂದಲ ಮತ್ತು ಗಲಿಬಿಲಿಯಲ್ಲಿ ಇರುವದು ಆಶ್ಚರ್ಯಕರವೇನಲ್ಲ. ಅರಬೀ ಧರ್ಮದ ಧಾರ್ಮಿಕ ಕಾನೂನುಗಳು ದೇಶದಿಂದ ದೇಶಕ್ಕೆ ವ್ಯತ್ಯಸ್ತವಾಗಿದೆ: ಸೌದಿ ಅರೇಬಿಯಾ, ಈಜಿಪ್ಟ್, ಸಿರಿಯಾ, ಇರಾಕ್, ಇರಾನ್, ಸೂಡಾನ್, ಆಲ್ಜೀರಿಯಾ, ಓಮನ್, ಪಾಕಿಸ್ತಾನ, ಅಫ್ಘಾನಿಸ್ಥಾನ, ಮಲೇಷ್ಯಾ,

ಇಂಡೋನೇಷ್ಯಾ ಮತ್ತು ಅನೇಕ ಇತರ ಸ್ಥಳಗಳಲ್ಲಿ ವಿವಿಧ ಕಾನೂನುಗಳಿವೆ ಹಾಗೂ ಇವುಗಳೆಲ್ಲವೂ ಅಲ್ಲಾಹನಿಂದ ಸ್ಫೂರ್ತಿಗೊಂಡದ್ದಾಗಿದೆ ಎಂದು ಅವರು ದಾವೆಹೂಡುತ್ತಾರೆ. ಭೌಗೋಳಿಕ ಸ್ಥಳಗಳೊಂದಿಗೆ ಅಲ್ಲಾಹನಿಂದ ಸ್ಫೂರ್ತಿಗೊಂಡ ಕಾನೂನುಗಳೂ ಅಷ್ಟೊಂದು ಮಟ್ಟಿಗೆ ಬದಲಾಗುವುದು ಹೇಗೆ? ಪ್ರತಿಯೊಂದು ಸ್ಥಳದಲ್ಲಿಯೂ ಒಂದು ಪ್ರತ್ಯೇಕ 'ಧಾರ್ಮಿಕ ದೇವನು' ಚುಕ್ಕಾಣಿ ಹಿಡಿದುಕೊಂಡಿದ್ದಾನೆಂದೇ ಅರ್ಥೈಸಬೇಕಾಗಿದೆ. ಇದು ಇಸ್ಲಾಮೀ '*ಶರೀಅ*' ಕಾನೂನನ್ನು[35] ಒಂದು ಹಾಸ್ಯಮಯ ಸ್ಥಾನಕ್ಕೆ ಇಳಿಸುತ್ತದೆ. ಯಾವುದೇ ಎರಡು 'ಇಸ್ಲಾಮೀ' ದೇಶಗಳು ಒಂದೇ 'ಇಸ್ಲಾಮೀ' ಕಾನೂನುಗಳನ್ನು ಹೊಂದಿಲ್ಲ. ಇದು ವಿಷಾದಕರ ವಿಷಯವಲ್ಲದಿರುತ್ತಿದ್ದರೆ ಉಲ್ಲಾಸಕರವಾಗುತಿತ್ತು.

ಜನರು ಮಧ್ಯ ಪ್ರವೇಶಿಸುವ ಮುಂಚೆ, ಅಲ್ಲಾಹನ ಸಂದೇಶದ ಉದ್ದೇಶವು ಏನಾಗಿತ್ತೆಂದು ಪರೀಕ್ಷಿಸೋಣ.

ಉದಾಹರಣೆ ಒಂದು:

> ನಿಮ್ಮಲ್ಲಿ ಯಾರಿಗಾದರೂ ಮರಣವು ಸನ್ನಿಹಿತವಾದರೆ, ಅವನು ತಮ್ಮ ಹೆತ್ತವರು ಮತ್ತು ಅವನ ಸಂಬಂಧಿಕರಿಗಾಗಿ ಉಯಿಲಿನ ಉಪಯೋಗವನ್ನು ತೋರ್ಪಡುವಂತೆ ಬಿಟ್ಟು ಹೋಗುವುದು, ಲಕ್ಷ್ಯತೆಯುಳ್ಳವರ ಮೇಲಿರುವ ಕಡ್ಡಾಯವಾದ ಕರ್ತವ್ಯವಾಗಿದೆ (2:180-182).

ಇದು ಸಾಮಾನ್ಯ ಜ್ಞಾನವಿರುವ ಹೆಚ್ಚಿನ ಜನರು ಪಾಲಿಸುವಂತಹ ಒಂದು ಸರಳ ಆದೇಶವಾಗಿದೆ. ಇದು ಯೋಜನೆ ಮತ್ತು ಪೂರ್ವ-ಧ್ಯಾನವನ್ನು ಪ್ರೋತ್ಸಾಹಿಸುತ್ತದೆ. ಇದು ಸಮಸ್ಯೆಗಳು ಉದ್ಭವಿಸುವ ಮುನ್ನವೇ ಅವುಗಳನ್ನು ಬಗೆಹರಿಸುತ್ತದೆ. ಇದು ದುಃಖವನ್ನು ನಿವಾರಿಸಲು ಸ್ಪಂದನೆಕೊಡುತ್ತದೆ. ಇದು ಸರಳ ನಾಗರಿಕತೆಯಾಗಿದೆ.

ಅರಬೀ ಧರ್ಮದಲ್ಲಿ ಉಯಿಲನ್ನು ಮಾಡುವುದು ನಿಷಿದ್ಧವಾಗಿದೆ (ಅಥವಾ ಹರಮ್) ಎಂದು ಧಾರ್ಮಿಕರು ಮತ್ತು ಅವರ ನ್ಯಾಯಾಲಯಗಳು ನಮಗೆ ಹೇಳುತ್ತದೆ. ಮರಣಹೊಂದಿದ ವ್ಯಕ್ತಿಯ ಸೊತ್ತುಗಳಲ್ಲಿ ಯಾವುದನ್ನು, ಯಾರಿಗೆ ಮತ್ತು ಹೇಗೆ ವಿತರಣೆ ಮಾಡಬೇಕೆಂದು ಧಾರ್ಮಿಕ ಪುರೋಹಿತರು ಅಥವಾ ಧಾರ್ಮಿಕ ಮುಖಂಡರು ನಿರ್ಧರಿಸುತ್ತಾರೆ. ಮತ್ತು ಸಹಜವಾಗಿ, ಅಂತಹ ಸೊತ್ತುಗಳ ಒಂದು ನಿರ್ದಿಷ್ಟ ಭಾಗವನ್ನು ಕೆಲವು ಆವಿಷ್ಕಾರಿತ ಧಾರ್ಮಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲಾಗುತ್ತದೆ.

ಉದಾಹರಣೆ ಎರಡು:

---

[35] ಯಾವುದೇ ಧಾರ್ಮಿಕ ಕಾನೂನುಗಳ ಸ್ಥಾಪನೆಯನ್ನು 42:21 ನಿಷೇಧಿಸುತ್ತದೆ. ಪ್ರತಿ ಮನುಷ್ಯನು ಜೀವನವನ್ನು ತನ್ನ ವೈಯಕ್ತಿಕ ರೀತಿಯಲ್ಲಿ ನಡೆಸಲು ಸಂಪೂರ್ಣ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಹೊಂದಿದ್ದಾನೆ. ನ್ಯಾಯದ ಕಾನೂನುಗಳು, ಅಪರಾಧಗಳ ಮತ್ತು ದೇಶದ ಭದ್ರತೆಯ ವಿಷಯಗಳು, ಪ್ರತಿ ಕ್ಷೇತ್ರದ ಕಾನೂನು ಪರಿಣಿತರ ಒಮ್ಮತದ ಮೂಲಕ ರೂಪಿಸಬೇಕಾಗಿದೆ ಹಾಗೂ ಅವುಗಳು ಸಂದರ್ಭಕ್ಕನುಸಾರವಾಗಿ ತಿದ್ದುಪಡಿ ಮಾಡಬಹುದಾಗಿದೆ.

> ಅಲ್ಲಾಹನಲ್ಲಿ ವಿಶ್ವಾಸವಿರುವ ಯಾವುದೇ ವ್ಯಕ್ತಿಯು, ನಂತರ ತಿರಸ್ಕರಿಸಿದರೆ, ತದನಂತರ ವಿಶ್ವಾಸ ತಂದು ನಂತರ ತಿರಸ್ಕರಿಸಿದರೆ ಮತ್ತು ತಿರಸ್ಕಾರದಲ್ಲಿ ದೃಢವಾಗಿ ನಿಂತರೆ, ಅಲ್ಲಾಹನು ಅವನನ್ನು ಕ್ಷಮಿಸುವುದಿಲ್ಲ (4:137)

ಅಲ್ಲಾಹನಲ್ಲಿ ವಿಶ್ವಾಸವಿಡಲು ಅಥವಾ ತಿರಸ್ಕರಿಸಲು ಜನರಿಗೆ ಸಂಪೂರ್ಣ ಹಕ್ಕನ್ನು ನೀಡಲಾಗಿದೆ. ಅವರು ವಿಶ್ವಾಸವನ್ನು ತಿರಸ್ಕರಿಸಿದರೆ ಮತ್ತು ಅದರಲ್ಲಿ ದೃಢವಾಗಿ ನಿಂತರೆ, ಅವರನ್ನು ಅಲ್ಲಾಹನು ಕ್ಷಮಿಸುವುದಿಲ್ಲ. ಅಷ್ಟೇ.

> ದೀನಿನಲ್ಲಿ ಯಾವುದೇ ಬಲವಂತಿಕೆ ಇಲ್ಲ. ಸತ್ಯ ಈಗ ಸುಳ್ಳುಗಾರಿಕೆಯಿಂದ ಪ್ರತ್ಯೇಕಿಸಲ್ಪಟ್ಟಿದೆ. ಹೀಗಾಗಿ, ಯಾರು ಮೂರ್ತಿ ಆರಾಧನೆಯನ್ನು ತಿರಸ್ಕರಿಸುತ್ತಾನೆ ಮತ್ತು ಅಲ್ಲಾಹನಲ್ಲಿ ವಿಶ್ವಾಸವಿಡುತ್ತಾನೆ, ಅವನು ಎಂದಿಗೂ ಮುರಿಯದಂತಹ ಒಂದು ಪ್ರಬಲ ಬಂಧವನ್ನು ತನ್ನದಾಗಿಸಿಕೊಂಡಿದ್ದಾನೆ. ಅಲ್ಲಾಹನು, ಸರ್ವಜ್ಞನೂ, ಸರ್ವಶ್ರುತನೂ ಆಗಿದ್ದಾನೆ. (2:256)

ಅಲ್ಲಾಹನ ಅವತೀರ್ಣವನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಜನರು ತಮ್ಮ ಹಕ್ಕನ್ನು ಮತ್ತು ಸ್ವಾತಂತ್ರ್ಯವನ್ನು ಚಲಾವಣೆ ಮಾಡಬಹುದು.[36] ಹಾಗೆ ಅವರು ಅಲ್ಲಾಹನ ಅವತೀರ್ಣವನ್ನು ತಿರಸ್ಕರಿಸಲು ಆಯ್ಕೆಮಾಡಿದರೆ, ಅಲ್ಲಾಹನು ಅವರನ್ನು ಈ ಜಗತ್ತಿನಲ್ಲಿ ಶಿಕ್ಷಿಸುವುದಿಲ್ಲ:

> ನೀವು ಅದರಲ್ಲಿ ವಿಶ್ವಾಸವಿಡಬಹುದು ಅಥವಾ ತಿರಸ್ಕಾರ ಮಾಡಬಹುದು. (17:107)

ಧಾರ್ಮಿಕರು ತಮ್ಮ ವಕ್ರೀಕರಿಸಿದ ಜ್ಞಾನದ ಮುಖಾಂತರ, 'ಧರ್ಮ'ವನ್ನು ತಿರಸ್ಕರಿಸುವವರು ಮರಣದಂಡನೆಗೆ ವಿಧಿಯಾಗಲೇಬೇಕು ಎಂದು ಘೋಷಿಸಿದ್ದಾರೆ. ಇದು ಯಹೂದಿಗಳ ಪ್ರಕೃತಿಯಾಗಿದೆ.

ಉದಾಹರಣೆ ಮೂರು:

ಒಬ್ಬ ವ್ಯಕ್ತಿಯು ತನ್ನ ಬುದ್ಧಿಶಕ್ತಿ ಮತ್ತು ವಿವೇಕತೆಯನ್ನು ಬಳಸಲು ನಿರೀಕ್ಷಿಸಲಾಗಿದೆ.

> ತಮ್ಮ ಸಾಮಾನ್ಯ ಜ್ಞಾನವನ್ನು (ತಮ್ಮ ಬುದ್ಧಿಶಕ್ತಿಯನ್ನು) ಬಳಸದವರಿಗೆ ಅಲ್ಲಾಹನು ಮಾರ್ಗದರ್ಶನ ನೀಡುವುದಿಲ್ಲ. (10:100)

ಆದರೂ, ಅರಬೀ ಧಾರ್ಮಿಕರು ತಮ್ಮ ಅನುಯಾಯಿಗಳಿಗೆ ಬೋಧಿಸುವುದನ್ನು ಚಾಚುತಪ್ಪದೇ ಅನುಸರಿಸಬೇಕಾಗಿದೆ. ಸಾಮಾನ್ಯ ಜ್ಞಾನವನ್ನು ಬಳಸಿಕೊಂಡು ಅವರು ಹೇಳುವುದಕ್ಕೆ ವಿರುದ್ಧವಾಗಿ ಸಂಶಯವನ್ನು ವ್ಯಕ್ತಪಡಿಸಿದನ್ನು ಅಥವಾ ಮರುಪ್ರಶ್ನೆಗಳನ್ನು ಕೇಳುವುದನ್ನು ಅವರು ಕಿಂಚಿತ್ತೂ

[36] ನಂಬಿಕೆಯ ವಿಷಯಗಳಲ್ಲಿ ವ್ಯಕ್ತಿಯ ಹಕ್ಕನ್ನು ಅಲ್ಲಗಳೆಯಲು ಯಾವುದೇ ನ್ಯಾಯಾಲಯವು ಇರಲೇಬಾರದು.

ಸಹಿಸಲಾರರು. ತಮ್ಮ ಕಠೋರವಾದ 'ಶರೀಅ' ಕಾನೂನು ಜಾರಿಯಲ್ಲಿರುವ ದೇಶದಲ್ಲಂತೂ ಅಂತಹ ಪ್ರಶ್ನೆಗಳನ್ನು ಕೇಳುವವರಿಗೆ ಮರಣದಂಡನೆ ಅಥವಾ ಗಡಿಪಾರು ಉತ್ತರವಾಗಿ ನೀಡಲಾಗುವುದು.

ಅರಬೀ ಧರ್ಮದಲ್ಲಿರುವ ಈ ಅನೇಕ 'ಹೊಸ' ಶಾಸನಗಳು ಕುರ್‌ಆನಿನ ಬುದ್ಧಿವಂತಿಕೆಗೆ ನೇರ ವಿರುದ್ಧವಾಗಿದೆ. ಈ ವ್ಯವಸ್ಥೆಯು ಹೇಗೆ ಇಷ್ಟರ ಮಟ್ಟಿಗೆ ದೋಷಯುಕ್ತವಾಯಿತು? ಧಾರ್ಮಿಕ ಸ್ವಾರ್ಥ ಮತ್ತು ಅಭದ್ರತೆಯು ಈ ಆಂದೋಲನದ ಪ್ರಾಥಮಿಕ ಚಾಲಕವಾಗಿರಬೇಕೆಂದು ನಮಗೆ ಊಹಿಸಬಹುದು. ಏನೇ ಆದರೂ, ಕೇವಲ ದಿಟ್ಟತನವುಳ್ಳ ಪರಮಶ್ರೇಷ್ಠನಿಗೆ ಮಾತ್ರ ಜನರಿಗೆ ಆಯ್ಕೆಯ ಸಂಪೂರ್ಣ ಸ್ವಾತಂತ್ರ್ಯದ ಅವಕಾಶವನ್ನು ನೀಡಲು ಸಾಧ್ಯವಾಗುತ್ತದೆ. ಆದರೆ ಜನರು, ನಿಯಂತ್ರಣವನ್ನು ವಿಧಿಸಲು ನೋಡುತ್ತಾರೆ ಮತ್ತು ನಿಯಮಗಳ ಮೂಲಕ ಅವುಗಳನ್ನು ನಡೆಸಲು ಬಯಸುತ್ತಾರೆ. ನಿಯಂತ್ರಣವು 'ಧಾರ್ಮಿಕ' ಉಡುಪಿನೊಂದಿಗೆ ಕಾಣಿಸಿಕೊಂಡರೆ ಇನ್ನೂ ಉತ್ತಮವಾಗಿರುತ್ತದೆ ಮತ್ತು ಈ ಕಾನೂನುಗಳು ವಿವಾದಾಸ್ಪದವಲ್ಲ ಎಂದಾಗುತ್ತದೆ.

ಸ್ವಲಾತ್ ಎಂದರೆ ಸತ್ಕರ್ಮಗಳ ಮೂಲಕ ಬದ್ಧತೆಗಳನ್ನು ಈಡೇರಿಸಿಕೊಳ್ಳುವುದು ಎಂದು ಅಲ್ಲಾಹನು ನಮಗೆ ಹೇಳುತ್ತಾನೆ. ಆದಾಗ್ಯೂ ಅರಬೀ ಧರ್ಮದ ಪ್ರಕಾರ, *ಸ್ವಲಾತ್* ಎಂದರೆ, ತಮ್ಮ ದೇವರು ವಾಸಿಸುವಂತಹ ತಮ್ಮ ತಾಯ್ನಾಡಿನ ನಿಗದಿತ ದಿಕ್ಕಿನಲ್ಲಿ ದಿನಕ್ಕೆ ಐದು ಬಾರಿ ವ್ಯವಸ್ಥಿತವಾಗಿ ಪ್ರಾರ್ಥಿಸುವುದಾಗಿದೆ. ಸಹಜವಾಗಿ, ಅಲ್ಲಾಹನೊಂದಿಗೆ ಮಾತನಾಡಲು ಬಯಸುವವರು, ಮೊದಲು ಈ ವಿಧ್ಯುಕ್ತ ಪ್ರಾರ್ಥನೆಯ 'ಪ್ರಕ್ರಿಯೆಗಳ' ಹಾಗೂ ಚಲನೆಗಳ ಕಲೆಯಲ್ಲಿ ನಿಪುಣರಾದ ಅರಬೀ ವರಿಷ್ಠರನ್ನು ಸಂಪರ್ಕಿಸಬೇಕಾಗಿದೆ. ಲೇಖಕರು ಉಲ್ಲೇಖಿಸುತ್ತಿರುವಂತಹ ಅರಬೀ ವಿಧ್ಯುಕ್ತ ಪ್ರಾರ್ಥನೆಯ ಬಗ್ಗೆ ಅರಿವಿಲ್ಲದ ಭೂಮಿಯ ಮೇಲಿನ ಸುಮಾರು ಐದು ಶತಕೋಟಿಗೂ ಹೆಚ್ಚಿನ ಜನರ ಪ್ರಯೋಜನಕ್ಕಾಗಿ, ಅದರ ಮುಖ್ಯ ಅಂಶಗಳನ್ನು ಕೆಳಗೆ ನೀಡಲಾಗಿದೆ.

ಅರಬೀ ವಿಧ್ಯುಕ್ತ ಪ್ರಾರ್ಥನೆ

ಈ ಕೆಳಗಿನ ಸರಳೀಕೃತ ಸೂಚನೆಗಳಿಂದ ಯಾರಿಗೂ ಅರಬೀ ಪ್ರಾರ್ಥನೆಯ ಆಚರಣೆಗಳ ನೃತ್ಯವನ್ನು ಸಂಪೂರ್ಣವಾಗಿ ಕ್ರಿಯಾತ್ಮಕಗೊಳಿಸಬಹುದು. ಮುಸ್ಲಿಂ ಕುಟುಂಬಕ್ಕೆ ಜನಿಸಿದ ಕಾರಣ, ಲೇಖಕರು ಅನೇಕ ವರ್ಷಗಳ ಹಿಂದೆ ಅದನ್ನು ತ್ಯಜಿಸುವುದಕ್ಕಿಂತ ಮುಂಚೆ, ವೈಯಕ್ತಿಕವಾಗಿ ತನ್ನ ಜೀವನದುದ್ದಕ್ಕೂ ಈ ಆಚಾರವನ್ನು ಲೆಕ್ಕವಿಲ್ಲದಷ್ಟು ಬಾರಿ ನಿರ್ವಹಿಸಿದ್ದರು. ಈ ಅರಬೀ ವಿಧ್ಯುಕ್ತ ಪ್ರಾರ್ಥನೆಯ ಪ್ರತಿ ಉಚ್ಚರಣೆಯು ಅರಬಿಯಲ್ಲೇ ಆಗಿರಬೇಕೆಂಬುವುದು ಅತ್ಯಗತ್ಯವಾಗಿದೆ. ಅರಬೀ ಭಾಷೆ ಮಾತನಾಡದ ಮುಸ್ಲಿಮರು, ತಮ್ಮ ಸ್ವಂತ ಭಾಷೆಯಲ್ಲಿ "ಎಲ್ಲಾ ಪ್ರಸಂಶೆಗಳು ನನ್ನ ಪ್ರಭುವಿಗಾಗಿದೆ" ಎಂಬ ಸರಳ ನುಡಿಗಟ್ಟನ್ನು ಕೂಡ ಹೇಳಲು ಸಾಧ್ಯವಿಲ್ಲ.

ಅರಬೀ ವಿಧ್ಯುಕ್ತ ಪ್ರಾರ್ಥನೆಯ ಬಗ್ಗೆ ಅರಿವಿಲ್ಲದವರಿಗೆ, ಅದರ ಮೂಲಭೂತ ವಿಧಾನದ ಸಾರಾಂಶವು ಇಲ್ಲಿದೆ:

- ಮೊದಲು, ನೀರಿನಿಂದ ಬಾಯಿ, ಮೂಗು, ಮುಖ, ಕೈಗಳು, ಹಣೆ, ಕಿವಿಗಳು, ಕುತ್ತಿಗೆ ಮತ್ತು ಕಾಲುಗಳನ್ನು ತೊಳೆಯಬೇಕು, ನಂತರ ತಾನು ವಿಧಿವಿಧಾನಗಳಲ್ಲಿ ಪ್ರಾರ್ಥಿಸಲು ಹೋಗುತ್ತಿದ್ದೇನೆಂದು ಅಲ್ಲಾಹನೊಂದಿಗೆ ಅರಬಿಯಲ್ಲಿ ಹೇಳಬೇಕು.

- ಒಂದು ಸ್ಥಾನವನ್ನು ಕಂಡು ಹಿಡಿಯಬೇಕು ಮತ್ತು ಮಕ್ಕಾದ ಕಲ್ಲಿನ ಮೂರ್ತಿಗೆ ಮುಖ ಮಾಡಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಜಪಾನ್ನಲ್ಲಿರುವವರು ಪಶ್ಚಿಮಾಭಿಮುಖವಾಗಿ, ಯುರೋಪಿನಲ್ಲಿರುವವರು ಪೂರ್ವದಿಕ್ಕಿನೆಡೆಗೆ ಮುಖಮಾಡಿ ನಿಲ್ಲಬೇಕು.

- ನಂತರ, ಹೊಟ್ಟೆಯ ಮೇಲೆ ಕೈಗಳನ್ನು ಕಟ್ಟುತ್ತಾ ಸರಿಯಾಗಿ ನಿಲ್ಲಬೇಕು. ವಿವಿಧ ಪಂಥಗಳು ತಮ್ಮದೇ ಆದ ನಿರ್ದಿಷ್ಟ ರೀತಿಯಲ್ಲಿ ಕೈಗಳನ್ನು ಕಟ್ಟುತ್ತಾರೆ, ಕಲಿತಿರುವ ಕಣ್ಣಿಗೆ ಕೇವಲ ಅವರ ಕೈಕಟ್ಟುವ ರೀತಿಯನ್ನು ಗಮನಿಸಿದರೆ, ಅವರ ಸಿದ್ಧಾಂತದ ಬಗ್ಗೆ ಬಹಳಷ್ಟು ತಿಳಿಯಬಹುದು ಮತ್ತು ಈ ವ್ಯತ್ಯಾಸಗಳು ವಿಶ್ವದ ಎಲ್ಲಾ ಮಸೀದಿಗಳಲ್ಲಿ ಕಾಣಬಹುದು.

- ನಂತರ '*ಅಲ್ಲಾಹು ಅಕ್ಬರ್*'[37] ಎಂದು ಉಚ್ಚರಿಸಬೇಕು. ಅದರ ಅರ್ಥವು: 'ಅಲ್ಲಾಹನು ದೊಡ್ಡವನು' ಎಂದಾಗುತ್ತದೆ. (ಕುತೂಹಲಕರ ವಿಷಯವೆಂದರೆ, ಈ ಅಲ್ಲಾಹು ಅಕ್ಬರ್ ಎಂಬ ನುಡಿಗಟ್ಟು ಕುರ್ಆನಿನಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ). ನಂತರ, ಕೆಲವು ಅರಬೀ ವಚನಗಳನ್ನು (ಅರ್ಥೈಸಿಕೊಂಡೋ ಅಥವಾ ಅರ್ಥೈಸದೆಯೋ) ಓದಬೇಕು.

ಪ್ರಾರ್ಥನೆಯು, ಧಾರ್ಮಿಕರು ರೂಪಿಸಿದ[38] ಕೆಲವು ನುಡಿಗಳ ಕೂಟವನ್ನು ಪಠಿಸುವುದರೊಂದಿಗೆ ಆರಂಭವಾಗುತ್ತದೆ. ನಂತರ *ಅಲ್-ಫಾತಿಹಾ* (ಏಳು ವಚನಗಳನ್ನೊಳಗೊಂಡ ಕುರ್ಆನಿನ ಮೊದಲ ಅಧ್ಯಾಯ) ವನ್ನು ಕಡ್ಡಾಯವಾಗಿ ಓದಬೇಕು. ನಂತರ, ಕುರ್ಆನಿನ ಕೊನೆಯಲ್ಲಿರುವ ಕೆಲವು ಸಣ್ಣ ಅಧ್ಯಾಯಗಳಲ್ಲಿ ಒಂದನ್ನು ಸಾಮಾನ್ಯವಾಗಿ ಓದಲಾಗುತ್ತದೆ. ಹೆಚ್ಚಿನವರ ನೆಚ್ಚಿನ ಅಧ್ಯಾಯಗಳು 111, 112, 113, 114 ಆಗಿವೆ, ಏಕೆಂದರೆ ಅವುಗಳು ಬಹಳ ಚಿಕ್ಕದಾಗಿದೆ ಹಾಗೂ ಇವುಗಳನ್ನು (*ಅಲ್-ಫಾತಿಹಾದ*

[37] ಅಲ್ಲಾಹು ಅಕ್ಬರ್ ಎಂಬ ಹೇಳಿಕೆಯು ದೇಹದ ಪ್ರತಿ ಚಲನೆಯ ಸಂದರ್ಭದಲ್ಲಿ ಮಾಡಲಾಗುತ್ತದೆ ಮತ್ತು ಒಂದು ಗುಂಪಿನಲ್ಲಿ ಪ್ರಾರ್ಥನೆಯನ್ನು ಸಲ್ಲಿಸುವಾಗ, ಈ ವ್ಯಾಯಾಮದ ಮುಂದಾಲು, ಯಾವಾಗ ಒಂದು ಸ್ಥಾನದಲ್ಲಿ ಮತ್ತೊಂದಕ್ಕೆ ಸರಿಯಬೇಕೆಂದು ಜನರಿಗೆ ಸೂಚಿಸಲು ಇದನ್ನು ಒಂದು ಸಂಕೇತದಂತೆ ಉಪಯೋಗಿಸುತ್ತಾರೆ.

[38] ಪಠನೆಯಲ್ಲಿ ಒಂದು ಪಂಥವು ಮತ್ತೊಂದರಿಂದ ಭಿನ್ನವಾಗಿರುತ್ತದೆ. ಪ್ರಾರ್ಥನೆಯ ಆರಂಭಿಕ ವಾಕ್ಯವೃಂದವು, 6:79, 6:161-162 ವಚನಗಳ ಒಂದು ಭಾಗವನ್ನು ಉಚ್ಚರಿಸುವುದನ್ನು ಹೊರತುಪಡಿಸಿದರೆ, ಸಂಪೂರ್ಣವಾಗಿ ಕುರ್ಆನಿನಿಂದ ಬಂದಿರುವುದಲ್ಲ. ಈ ವಚನಗಳನ್ನು ಇಬ್ರಾಹೀಮರು ಮತ್ತು ಮುಹಮ್ಮದರು ಜನರಿಗೆ ಉಚ್ಚರಿಸಿದರು ಆದರೆ ಅರಬರು ಅವುಗಳನ್ನು ಅಲ್ಲಾಹನಿಗೆ ಸಂಬೋಧಿಸಿದರು.

ಜೊತೆಗೆ) ಒಬ್ಬ ಮುಸ್ಲಿಮನು ಕನಿಷ್ಠವಾಗಿ ಬಾಯಿಪಾಠ ಮಾಡಬೇಕಾಗಿದೆ[39] ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ತಾವು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಿದ್ದೇವೆಂದು ಧಾರ್ಮಿಕರು ಹೇಳುತ್ತಾರೆ. ಆದರೂ ಈ ಪ್ರತಿಯೊಂದು ಕೊನೆಯ ಅಧ್ಯಾಯಗಳು *ಖುಲ್* ಅಥವಾ 'ಹೇಳಿರಿ' ಎಂಬ ಪ್ರವಾದಿಯನ್ನು ಉದ್ದೇಶಿಸಿರುವ ಸೂಚನೆಗಳಿಂದ ಆರಂಭವಾಗುತ್ತದೆ ಹಾಗೂ ಅವರು ಮನುಕುಲವನ್ನು ಉದ್ದೇಶಿಸಿ ಹೇಳಬೇಕಾಗಿದ್ದ ಮಾತುಗಳೊಂದಿಗೆ ಮುಂದುವರಿಯುತ್ತದೆ. ಆದಾಗ್ಯೂ, ನೇರ ಸೂಚನಗಳೊಂದಿಗೆ ಆರಂಭವಾಗುವ ಈ ವಚನಗಳನ್ನು ದಿನಂಪ್ರತಿ ಅರಬೀ ವಿಧ್ಯುಕ್ತ ಪ್ರಾರ್ಥನೆಗಳಲ್ಲಿ ತಿರುಗಿಸಿ ಅಲ್ಲಾಹನಿಗೇ ಸಂಬೋಧಿಸಲಾಗುತ್ತದೆ. ಉದಾಹರಣೆಗೆ:

> ಹೇಳಿರಿ: ಅವನು ಅಲ್ಲಾಹನು, ಅವನು ಏಕೈಕನು. ಅವನು ನಿರಪೇಕ್ಷನು. ಅವನು ಪಿತನೂ ಅಲ್ಲ ಪುತ್ರನೂ ಅಲ್ಲ. ಅವನಿಗೆ ಸರಿಸಾಟಿ ಯಾರೂ ಇಲ್ಲ. (ಸುರಾ 111)

ಎರಡನೇ ವ್ಯಕ್ತಿಯನ್ನು ಉದ್ದೇಶಿಸಿ ಮೂರನೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಹೇಳಲು ಆಜ್ಞಾಪಿಸುವ ಇಂತಹ ವಿಧಿರೂಪದ ಅನೇಕ ವಚನಗಳು ಕುರ್‌ಆನಿನಲ್ಲಿವೆ. ಅದು ದೇವವಾಣಿಯ ಪ್ರಕೃತಿಯಾಗಿದೆ. ಆದರೆ, ಧಾರ್ಮಿಕರು ಈ ಆದೇಶಗಳನ್ನು ತಮ್ಮ ವಿಧ್ಯುಕ್ತ ಪ್ರಾರ್ಥನೆಗಳಲ್ಲಿ ಅಲ್ಲಾಹನಿಗೆ ತಿರುಗಿ ಪಠಿಸುವಂತೆ ತಮ್ಮ ಅನುಯಾಯಿಗಳಿಗೆ ಬೋಧಿಸುತ್ತಾರೆ. ಈ ಪಠನೆಗಾಗಿ ಮೀಸಲಿಟ್ಟ ತಮ್ಮ ನೆಚ್ಚಿನ ಸೂರಗಳಲ್ಲಿ ಒಂದಾದ ಈ ಸೂರದಲ್ಲಿ ಅವರು ಅಲ್ಲಾಹನಿಗೆ ಹೇಳುತ್ತಾರೆ:

> ಹೇಳಿರಿ: ಓ ಸತ್ಯ ನಿಷೇಧಿಗಳೇ, ನಾನು ಸೇವೆ ಮಾಡುವುದನ್ನು ನೀವು ಸೇವೆ ಮಾಡುವುದಿಲ್ಲ ಹಾಗೂ ನೀವು ಸೇವೆ ಮಾಡುವುದನ್ನು ನಾನು ಸೇವೆ ಮಾಡುವುದಿಲ್ಲ. ನಾನು ಸೇವೆ ಮಾಡುವುದನ್ನು ನೀವು ಎಂದಿಗೂ ಸೇವೆ ಮಾಡುವುದಿಲ್ಲ ಹಾಗೂ ನೀವು ಸೇವೆ ಮಾಡುವುದನ್ನು ನಾನು ಎಂದಿಗೂ ಸೇವೆ ಮಾಡುವುದಿಲ್ಲ. ನಿಮಗೆ ನಿಮ್ಮ ಸ್ವಂತ ರೀತಿ ಮತ್ತು ನನಗೆ ನನ್ನ ಸ್ವಂತ ರೀತಿ. (ಸೂರ 109)

ಆದಾಗ್ಯೂ, ಅವರು ತಮ್ಮ ಪ್ರಾರ್ಥನೆಯಲ್ಲಿ ಸುರಾ 108 ಪಠಿಸಲು ಆಯ್ದರೆ, ಅವರು ಅಲ್ಲಾಹನಿಗೆ ಹೇಳುತ್ತಾರೆ:

> ನಾವು ನಿಮಗೆ ಅನೇಕ ಔದಾರ್ಯಗಳನ್ನು ನೀಡಿದ್ದೇವೆ. ಮೆಚ್ಚುಗೆ ವ್ಯಕ್ತಪಡಿಸುವ ಸಲುವಾಗಿ, ನೀವು ನಿಮ್ಮ ಪ್ರಭುವನ್ನು ಸೇವೆ ಮಾಡಿರಿ ಮತ್ತು ದಾನಶೀಲರಾಗಿರಿ. ನಿಮ್ಮ ಶತ್ರುಗಳು ಇನ್ನು ಮುಂದೆ ನಷ್ಟಹೊಂದುವವರಾಗಿದ್ದಾರೆ. (ಸೂರ 108)

[39] ಜನರು ಅರ್ಥೈಸದೆ ಬಾಯಪಾಠಮಾಡಲು ಸಿದ್ಧರಾಗುವುದು, ತಮ್ಮ ಚಿಂತನಾಶಕ್ತಿಯನ್ನು ಬಳಸದೆ ಸಂಕೋಲೆಗಳಿಂದ ತಮ್ಮನ್ನು ಬಂಧಿಸಲ್ಪಡಲು ಆಗ್ರಹವನ್ನು ತೋರ್ಪಡಿಸುವುದಕ್ಕಿರುವ ಒಂದು ಸಂಕೇತವಾಗಿದೆ. ನಾವು ಒಂದು ಗಿಳಿಗೆ 'ಶುಭೋದಯ' ಎಂದು ಹೇಳಲು ಕಲಿಸಿಕೊಟ್ಟರೆ, ಅದು ಜನರಿಗೆ 'ಶುಭೋದಯ' ಎಂದು ಹೇಳುತ್ತದೆ, ರಾತ್ರಿ ಸಮಯದಲ್ಲಿಯು ಕೂಡ.

ನಿಸ್ಸಂಶಯವಾಗಿ, ತಮ್ಮ ವಿಧ್ಯುಕ್ತ ಪ್ರಾರ್ಥನೆಗಳಲ್ಲಿ ಅಲ್ಲಾಹನೊಂದಿಗೆ ಏನು ಹೇಳುತ್ತಿದ್ದೇವೆಂದು ಎಲ್ಲಾ ಅರಬೇತರರಿಗೂ ತಿಳಿದಿಲ್ಲ (ಬಹುಶಃ ಕೆಲವರನ್ನು ಹೊರತು ಪಡಿಸಬಹುದು). ಆದರೆ ಧಾರ್ಮಿಕರು ಮತ್ತು ಅರಬೀ ವಿದ್ವಾಂಸರು ಸೇರಿದಂತೆ, ಸ್ಥಳೀಯ ಅರಬೀ ಭಾಷೆಯನ್ನು ಮಾತನಾಡುವ ಅರಬರು ಸಹ ಈ ವಿಷಯಗಳನ್ನು ಪ್ರತಿದಿನ ಅಲ್ಲಾಹನಿಗೆ ಹೇಳುತ್ತಾರೆ!

(ಸೂಕ್ತವಲ್ಲದ) ಈ ವಚನಗಳ ಪಾರಾಯಣ ಪೂರ್ಣಗೊಂಡ ನಂತರ, ಎರಡೂ ಕೈಗಳನ್ನು ಮೇಲಕ್ಕೆತ್ತಿ *'ಅಲ್ಲಾಹು ಅಕ್ಬರ್'* ಅಥವಾ 'ಅಲ್ಲಾಹನು ದೊಡ್ಡವನು' ಎಂದು ಹೇಳಬೇಕು.

ನಂತರ ಕೆಲವು ಸೆಕೆಂಡುಗಳ ಕಾಲ ಮುಂದಕ್ಕೆ ಬಾಗಿ ಕೆಲವು ಅರಬೀ ಪದಗಳನ್ನು ಹೇಳಬೇಕು ನಂತರ 'ಅಲ್ಲಾಹನು ದೊಡ್ಡವನು' ಎಂದು ಇನ್ನೊಮ್ಮೆ ಹೇಳುತ್ತಾ ನೆಟ್ಟಗೆ ನಿಲ್ಲಬೇಕು. ನಂತರ (ನೆಲದ ಮೇಲೆ ಹಣೆಯನ್ನು ಇರಿಸುವ) ಸಾಷ್ಟಾಂಗವನ್ನು ಮಾಡಿ ಇನ್ನೂ ಕೆಲವು ಅರಬೀ ಪದಗಳು ಉಚ್ಚರಿಸಬೇಕು. ನಂತರ ಕುಳಿತುಕೊಂಡು ಪುನಃ ಸಾಷ್ಟಾಂಗವೆಸಗಬೇಕು. ಮತ್ತು ಮೊದಲು ನಿಂತ ಸ್ಥಿತಿಗೆ ಮರಳಬೇಕು. ಎಲ್ಲಾ ಸ್ಥಿತಿಬದಲಾವಣೆಗಳ ವೇಳೆ 'ಅಲ್ಲಾಹನು ದೊಡ್ಡವನು' ಎಂದು ಪುನರಾವರ್ತಿಸುತ್ತಾ ಇರಬೇಕು. ಇಷ್ಟು ಪ್ರಕ್ರಿಯೆಗಳು ಪ್ರಾರ್ಥನೆಯ ಒಂದು ಘಟಕವನ್ನು ಪ್ರತಿನಿಧಿಸುತ್ತದೆ. ಘಟಕಗಳ ಒಟ್ಟು ಸಂಖ್ಯೆ ಮತ್ತು ಹೇಳಿಕೆಗಳು ಉಚ್ಚಸ್ವರದಲ್ಲಿ ಅಥವಾ ಮೌನತೆಯಲ್ಲಿ ಆಗಿರಬೇಕೋ ಎಂಬುವುದೆಲ್ಲವೂ, ಆ ಪ್ರಾರ್ಥನೆಯ 'ನಮೂನೆ' ಹಾಗೂ ಪ್ರಾರ್ಥನೆಯ 'ಸಮಯ', ಹೀಗೆ ಧಾರ್ಮಿಕರು ರಚಿಸಿದಂತಹ ಅನೇಕ ಅಂಶಗಳನ್ನು ಆಧರಿಸಿದೆ. ಸಾಮಾನ್ಯವಾಗಿ, (ಹೆಚ್ಚುವರಿ ಪ್ರಾರ್ಥನೆಗಳನ್ನು ಹೊರತುಪಡಿಸಿ) ಮುಸ್ಲಿಮರು ಇಪ್ಪತ್ತ ನಾಲ್ಕು ಗಂಟೆಯ ಅವಧಿಯಲ್ಲಿ, ಹದಿನೇಳು ಬಾರಿ ಬಾಗುವುದು, ಮೂವತ್ತನಾಲ್ಕು ಬಾರಿ ಸಾಷ್ಟಾಂಗವೆಸಗುವುದು ಕಡ್ಡಾಯವಾಗಿದೆ.

ಘಟಕಗಳ ಒಂದು ಕೂಟದ ಕೊನೆಯಲ್ಲಿ, ಕುಳಿತುಕೊಂಡು ಪ್ರವಾದಿ ಇಬ್ರಾಹೀಮ್ ಮತ್ತು ಮುಹಮ್ಮದರಿಗೆ ಮತ್ತು ಅವರ ಕುಟುಂಬಗಳಿಗೆ ಶುಭಾಶಯಗಳನ್ನು ಹೇಳಬೇಕು (ಆದರೆ, ಅವರ ಪ್ರತಿಯುತ್ತರವನ್ನು ಕಾಯುವ ಅಗತ್ಯವಿಲ್ಲ). ನಂತರ ತಮ್ಮ *ಎರಡೂ ಭುಜಗಳ ಮೇಲೆ ಕುಳಿತಿದ್ದಾರೆನ್ನಲಾಗುವ 'ಎರಡು ದೇವದೂತ'ರಿಗೂ* ಶುಭಾಶಯಗಳನ್ನು ಹೇಳಬೇಕು (ಇಲ್ಲೂ ಯಾವುದೇ ಪ್ರತ್ಯುತ್ತರವನ್ನು ನಿರೀಕ್ಷಿಸಬೇಕಾಗಿಲ್ಲ).

ಕುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ:

> *ಸಮಾಧಿಗಳಲ್ಲಿರುವವರು ನಿಮ್ಮನ್ನು ಆಲಿಸಲು ಸಾಧ್ಯವಿಲ್ಲ.* (35:22)

ಆದರೂ, ಅರಬೀ ಧರ್ಮ-ಜಗತ್ತಿನ ಅನುಯಾಯಿಗಳು ಮರಣಹೊಂದಿರುವ ಪ್ರವಾದಿ ಮುಹಮ್ಮದ್ ಮತ್ತು ಅವರ ಕುಟುಂಬಗಳಿಗೆ ದಿನಕ್ಕೆ ಐದು ಬಾರಿ ಶುಭಾಶಯಗಳನ್ನು ಹೇಳುತ್ತಾರೆ! ನಾವು ಪ್ರವಾದಿಗಳ ನಡುವೆ

ಯಾವುದೇ ತಾರತಮ್ಯವನ್ನು ಮಾಡಲೇ ಕೂಡದು[40] - ಆದರೆ ಇಸ್ಹಾಕ್, ಯಾಕೂಬ್, ಇಸ್ಮಾಯೀಲ್, ಯೂಸುಫ್, ದಾವೂದ್, ಸುಲೈಮಾನ್, ಮೂಸಾ, ಈಸಾ, ಹಾರೂನ್, ಝಕರಿಯ್ಯಾ, ಯಹ್ಯಾ - ಇವರನ್ನೆಲ್ಲಾ ಈ ಖಾಸಗಿ ಸಂಘದಿಂದ ಹೊರಗಿಡಲಾಗಿದೆ. ಇದು ಬಹಳ ಅನುಚಿತವಾಗಿದೆ.

[40] ಅಲ್ಲಾಹನಲ್ಲಿ ಹಾಗೂ ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಡುವವರು, ಅವರ ನಡುವೆ ಯಾವುದೇ ತಾರತಮ್ಯವನ್ನು ಮಾಡಕೂಡದು. ಅವರಿಗೆ ಅಲ್ಲಾಹನಿಂದ ಪ್ರತಿಫಲವಿದೆ. ಅಲ್ಲಾಹನು ಕ್ಷಮಾಶೀಲನೂ ಕರುಣಾಮಯನೂ ಆಗಿರುತ್ತಾನೆ. (4:152)

ಅನುಬಂಧ (Annex)

ತಾವು ಯಾವುದೇ ವೇತನೆಯನ್ನು ಯಾಚಿಸುವುದಿಲ್ಲವೆಂದು ಎಲ್ಲಾ ಪ್ರವಾದಿಗಳು ಘೋಷಿಸಿದ್ದಾರೆ.

ನೂಹರ ಜನಾಂಗವು ತಮ್ಮ ಸಂದೇಶವಾಹಕರನ್ನು ನಂಬಲಿಲ್ಲ. ಅವರ ಸಹೋದರ ನೂಹರು ಅವರಿಗೆ ಹೇಳಿದರು, "ನೀವು ಸದ್ಗುಣರಾಗುವುದಿಲ್ಲವೇ? ನಾನು ನಿಮಗಾಗಿ ಬಂದಿರುವ ಒಬ್ಬ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ. ಅಲ್ಲಾಹನನ್ನು ಲಕ್ಷಿಸಿರಿ ಮತ್ತು ನನ್ನನ್ನು ಪಾಲಿಸಿರಿ. ನಾನು ನಿಮ್ಮಲ್ಲಿ ಯಾವುದೇ ವೇತನವನ್ನು ಕೇಳುವುದಿಲ್ಲ, ನನ್ನ ವೇತನವು ಸರ್ವಲೋಕಪಾಲಕನಾದ ಅಲ್ಲಾಹನಿಂದಾಗಿದೆ". (26:105-109)

ಆದ್ ಸಮುದಾಯವು ಸಂದೇಶವಾಹಕರನ್ನು ನಂಬಲಿಲ್ಲ. ಅವರ ಸಹೋದರ ಹೂದ್ ಅವರಿಗೆ ಹೇಳಿದರು "ನೀವು ಸದ್ಗುಣರಾಗುವುದಿಲ್ಲವೇ? ನಾನು ನಿಮಗಾಗಿ ಬಂದಿರುವ ಒಬ್ಬ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ. ಅಲ್ಲಾಹನನ್ನು ಲಕ್ಷಿಸಿರಿ ಮತ್ತು ನನ್ನನ್ನು ಪಾಲಿಸಿರಿ. ನಾನು ನಿಮ್ಮಲ್ಲಿ ಯಾವುದೇ ವೇತನವನ್ನು ಕೇಳುವುದಿಲ್ಲ, ನನ್ನ ವೇತನವು ಸರ್ವಲೋಕಪಾಲಕನಾದ ಅಲ್ಲಾಹನಿಂದಾಗಿದೆ". (26:123-127)

ಸಮೂದ್ ಸಮುದಾಯವು ಸಂದೇಶವಾಹಕರನ್ನು ನಂಬಲಿಲ್ಲ. ಅವರ ಸಹೋದರ ಸಾಲೆಹ್ ಅವರಿಗೆ ಹೇಳಿದರು "ನೀವು ಸದ್ಗುಣರಾಗುವುದಿಲ್ಲವೇ? ನಾನು ನಿಮಗಾಗಿ ಬಂದಿರುವ ಒಬ್ಬ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ. ಅಲ್ಲಾಹನನ್ನು ಲಕ್ಷಿಸಿರಿ ಮತ್ತು ನನ್ನನ್ನು ಪಾಲಿಸಿರಿ. ನಾನು ನಿಮ್ಮಲ್ಲಿ ಯಾವುದೇ ವೇತನವನ್ನು ಕೇಳುವುದಿಲ್ಲ, ನನ್ನ ವೇತನವು ಸರ್ವಲೋಕಪಾಲಕನಾದ ಅಲ್ಲಾಹನಿಂದಾಗಿದೆ". (26:141-145)

ಲೂತರ ಜನಾಂಗವು ಸಂದೇಶವಾಹಕರನ್ನು ನಂಬಲಿಲ್ಲ. ಅವರ ಸಹೋದರ ಲೂತರು ಅವರಿಗೆ ಹೇಳಿದರು "ನೀವು ಸದ್ಗುಣರಾಗುವುದಿಲ್ಲವೇ? ನಾನು ನಿಮಗಾಗಿ ಬಂದಿರುವ ಒಬ್ಬ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ. ಅಲ್ಲಾಹನನ್ನು ಲಕ್ಷಿಸಿರಿ ಮತ್ತು ನನ್ನನ್ನು ಪಾಲಿಸಿರಿ. ನಾನು ನಿಮ್ಮಲ್ಲಿ ಯಾವುದೇ ವೇತನವನ್ನು ಕೇಳುವುದಿಲ್ಲ, ನನ್ನ ವೇತನವು ಸರ್ವಲೋಕಪಾಲಕನಾದ ಅಲ್ಲಾಹನಿಂದಾಗಿದೆ". (26:160-164)

ಮಿದಿಯನದ ಜನಾಂಗವು ತಮ್ಮ ಸಂದೇಶವಾಹಕರನ್ನು ನಂಬಿರಲಿಲ್ಲ. ಅವರ ಸಹೋದರ ಶುಐಬ್ ಅವರಿಗೆ ಹೇಳಿದರು, "ನೀವು ಸದ್ಗುಣರಾಗುವುದಿಲ್ಲವೇ? ನಾನು ನಿಮಗಾಗಿ ಬಂದಿರುವ ಒಬ್ಬ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ. ಅಲ್ಲಾಹನನ್ನು ಲಕ್ಷಿಸಿರಿ ಮತ್ತು ನನ್ನನ್ನು ಪಾಲಿಸಿರಿ. ನಾನು ನಿಮ್ಮಲ್ಲಿ ಯಾವುದೇ ವೇತನವನ್ನು ಕೇಳುವುದಿಲ್ಲ, ನನ್ನ ವೇತನವು ಸರ್ವಲೋಕಪಾಲಕನಾದ ಅಲ್ಲಾಹನಿಂದಾಗಿದೆ". (26:176-180)

ಭಾಗ ನಾಲ್ಕು

ಸ್ವಲಾತ್ ಎಂದರೆ 'ಬದ್ಧತೆ' ಎಂದಾಗಿದೆ, 'ವಿಧ್ಯುಕ್ತ ಪ್ರಾರ್ಥನೆ' ಎಂದಲ್ಲ

ಕುರ್‌ಆನಿನ ಸನ್ನಿವೇಶಗಳಲ್ಲಿ, ಅರ್ಥವು ತಿರುಚಿ ಹೋಗಲ್ಪಟ್ಟ ಇತರ ಪದಗಳನ್ನು ನೋಡುವಾಗ, ಆಧುನಿಕ ಅರಬೀ ಭಾಷೆಯಲ್ಲಿ ಅವುಗಳ ಮೂಲಪದದ ಸುತ್ತಮುತ್ತಲಿನ ಉಪಲಬ್ಧ ಪದಗಳನ್ನು ಗಮನಿಸುವ ಮೂಲಕ, ಸಾಮಾನ್ಯವಾಗಿ ನಾವು ಅವುಗಳ ನಿಜವಾದ ಅರ್ಥವನ್ನು ಹಿಂದಕ್ಕೆ ಪಡೆಯಬಹುದು. *ಝಕಾತ್* ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. *ಝಕಾತ್* ಪದದ ಎಲ್ಲಾ ಮೂಲ ಅರ್ಥಗಳು, ಶುದ್ಧತೆ ಮತ್ತು ಪ್ರಾಮಾಣಿಕತೆಯನ್ನು ಉಲ್ಲೇಖಿಸುತ್ತದೆ. ಇದನ್ನು ಯಾವುದೇ ಒಂದು ಒಳ್ಳೆಯ ನಿಘಂಟನ್ನು ನೋಡಿ ಪರಿಶೀಲಿಸಬಹುದು. ನಾವು ಮುಂದೆ ಕಾಣಲಿರುವಂತೆ - ಅರಬೀ ಧರ್ಮವು, ಕುರ್‌ಆನಿಗೆ ವಿರುದ್ಧವಾದ ದಶಾಂಶ ತೆರಿಗೆಯನ್ನು ರಚಿಸಿ, ಅದನ್ನು *ಝಕಾತ್* ಪದಕ್ಕೆ ಹೊರಿಸಿಬಿಟ್ಟರು. *ಝಕಾತ್* ಪದದ ಪ್ರಮುಖ ಅರ್ಥಗಳು ಯಥಾಸ್ಥಿತಿಯಲ್ಲಿ ಉಳಿದಿರುವ ಕಾರಣ, ಈ ವಂಚನೆಯನ್ನು ಗುರುತಿಸಲು ಸುಲಭವಾಗಿದೆ.

ಸ್ವಲಾತ್ ಎಂಬ ಪದವು ಸಹ ಅದೇ ತರಹವಾಗಿದೆ. ಧಾರ್ಮಿಕ ಗಣ್ಯರು ಈ ಪದಕ್ಕೆ ತನ್ನದೇ ಆದ ಅರ್ಥವನ್ನು ಹೊರಿಸಿದರು ಹಾಗೂ ಈ ಅರ್ಥವು ಕೆಲವು ಕುರ್‌ಆನಿನ ಸನ್ನಿವೇಶಗಳಲ್ಲಿ ದಿಗಿಲುಗೊಳಿಸುವಂತೆ ವಿಫಲವಾಗುತ್ತದೆ.

ಸ್ವಲಾತ್ ಎಂಬುವುದು ಸ್ವಾದ್-ಲಾಮ್-ವಾವ್ (ಸ್ವಲಾ) ಎಂಬ ಮೂಲದ ಉತ್ಪನ್ನವಾಗಿದೆ. ಗಮನಯೋಗ್ಯವಾದ ವಿಷಯವೇನೆಂದರೆ, ಅರಬೀ ಧರ್ಮದಲ್ಲಿ ಈ ಮೂಲಪದಕ್ಕೆ ನೇರವಾಗಿ ***'ವಿಧ್ಯುಕ್ತ ಅಥವಾ ವಿಧಿವತ್ತಾದ ಪ್ರಾರ್ಥನೆ'*** ಎಂಬ ಅರ್ಥವನ್ನಲ್ಲದೇ ಬೇರೆ ಯಾವುದೇ ಅರ್ಥವನ್ನು ಕೊಡಲಾಗಿಲ್ಲ. ಕುರ್‌ಆನಿನ ಬಹುತೇಕ ಎಲ್ಲಾ ಪ್ರಮುಖ ಶಬ್ದಗಳು, ಆ ಭಾಷೆಯ ಪರಿಚಲನೆ ಮತ್ತು ಶಬ್ದಜಾಲಕ್ಕೆ ಸಮತೋಲಿಸುವ ಮತ್ತು ಸಂಯೋಜಿಸುವ ಇತರ ಅರ್ಥಗಳನ್ನು ಹೊಂದಿರುತ್ತದೆ. ಇದರಿಂದ ಆ ಶಬ್ದಗಳೊಂದಿಗೆ ಕುತಂತ್ರಗಳು ನಡೆದಾಗ, ನಾವು ಅದನ್ನು ಗ್ರಹಿಸಬಹುದು. ಆದರೆ ಸ್ವಲಾತ್ ಎಂಬ ಅತಿಮುಖ್ಯವಾದ ಕುರ್‌ಆನಿನ ಪರಿಕಲ್ಪನೆಗೆ, ಅರಬೀ ಭಾಷೆಯಲ್ಲಿ ಲಭ್ಯವಿರುವ ಯಾವುದೇ ಶಬ್ದಕೋಶ, ನಿಘಂಟು, ಜ್ಞಾನಕೋಶಗಳಲ್ಲೂ ಇತರ 'ಅರ್ಥಾನ್ವಯ'ವು ಕಾಣಸಿಗುವುದಿಲ್ಲ. ಅದು ಇರುತ್ತಿದ್ದರೆ ಅರಬೀ ಧಾರ್ಮಿಕರು ತಾವೇ ಅದಕ್ಕೆ ರೂಪಿಸಿದ ಅರ್ಥದೊಂದಿಗೆ ನಡೆಸುವ ದಾವೆಯನ್ನು ಸುಲಭವಾಗಿ ಪರಿಶೀಲಿಸಬಹುದಿತ್ತು.

ಸ್ವಲಾತ್ ಪದದ ಅರ್ಥವು ಇಂತಿಂತಹದ್ದಾಗಿದೆ, ಏಕೆಂದರೆ ಅದು ನಾವು ಆ ಪದದಿಂದ ಪಡೆಯುವ ಅರ್ಥದ ಆಧಾರದ ಮೇಲೆ ಭಾಷೆಗೆ ಹೀಗೀಗೆ ಸಂಯೋಜನೆಗೊಳ್ಳುತ್ತದೆ, ಎಂದು ಸೂಚಿಸಿ ಹೇಳಲು ಅದಕ್ಕೆ ಯಾವುದೇ

ಸಂಬಂಧಿತ ಅರ್ಥಗಳು ಲಭ್ಯವಿಲ್ಲ. ಏಕೆಂದರೆ, ನಾವು ತಿಳಿದಿರುವಂತೆ ಈ ಪದಕ್ಕೆ ಅರಬರ ಧರ್ಮದ ಭಾಷಾಶಾಸ್ತ್ರದಲ್ಲಿ ಯಾವುದೇ ಅರ್ಥಾನ್ವಯವಿಲ್ಲ.

ಈ ಪದವು ಕೇವಲ ಒಂದೇ ಅರ್ಥವನ್ನು ಹೊಂದಿದೆ ಎಂದೂ, ಇದು ಅರಬೀ ಭಾಷಾಶಾಸ್ತ್ರದ ವಿಶಾಲ ಮತ್ತು ಪರಸ್ಪರ-ಸಂಬಂಧಿಸಿದ ಭಾಷಾಜಾಲದಲ್ಲಿ ಯಾವುದಕ್ಕೂ ಸಂಬಂಧವಿರದಂತಹ ಪದವೆಂದೂ, ಅರಬೀ ಧಾರ್ಮಿಕರು ಇದಕ್ಕೆ ಹೊರಿಸಿದ ಅರ್ಥವೇ ಸರಿಯಾಗಿದೆ ಎಂದೂ ವಾದಿಸುತ್ತಾರೆ. ಧಾರ್ಮಿಕರು ಸ್ವತಃ ಒಪ್ಪಿಕೊಳ್ಳುವಂತೆ, ಅವರ ವಿಧ್ಯುಕ್ತ ಪ್ರಾರ್ಥನೆಯ ವಿವರಣೆಗಳು ಕುರ್‌ಆನಿನಲ್ಲಿ ಇಲ್ಲವೇ ಇಲ್ಲ. ಆದುದರಿಂದ, ಅವರು ಸ್ವಲಾತ್ ಎಂಬ ಪದಕ್ಕೆ ನೀಡಿರುವ ತಮ್ಮದೇ ಆದ ವ್ಯಾಖ್ಯಾನವು ಯಾವುದೇ ವಿಶೇಷ ಮಹತ್ವವನ್ನು ಹೊಂದಿಲ್ಲ ಎಂದು ಸೂಚಿಸುವ ಮೂಲಕ ನಾವು ಈ ಸಂದರ್ಭದಲ್ಲಿ ಪ್ರತಿಕ್ರಯಿಸಬಹುದು.

ಇಲ್ಲಿ ನಾವು ನಮ್ಮನ್ನು ಈ ಪರಿಸ್ಥಿತಿಯಲ್ಲಿ ಕಾಣುತ್ತೇವೆ: ಭಾಷಾರ್ಥದ ಶೂನ್ಯತೆಯಲ್ಲಿ *ಸ್ವಲಾತ್* ಎಂಬ ಒಂದು ಪದವು ಒಂಟಿಯಾಗಿ ಅಸ್ತಿತ್ವದಲ್ಲಿದೆ ಮತ್ತು ಅದಕ್ಕೆ ಇಂತಿಂತಹ ಅರ್ಥವಿದೆ ಎಂದು ಧಾರ್ಮಿಕ ವ್ಯವಸ್ಥೆಯ ನಾಯಕರು ಕುರ್‌ಆನ್-ಬಾಹಿರ ಬರಹಗಳ *(ಹದೀಸ್)* ಆಧಾರದಲ್ಲಿ ಹೇಳುತ್ತಾರೆ. ತಮ್ಮ ಒಡೆತನದಲ್ಲಿರುವ ಈ ಕುರ್‌ಆನ್-ಬಾಹಿರ ಬರಹಗಳು ಕೆಲವು ವ್ಯಕ್ತವಾದ ಹಾಸ್ಯಾಸ್ಪದ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದರೂ, ಅವುಗಳು ಈ ಗಣ್ಯ ಧಾರ್ಮಿಕರಿಗೆ ಅನುಕೂಲಕರವಾಗಿರುವ ಗುರಿಗಳನ್ನು ಸಾಧಿಸುತ್ತಿರುವ ಕಾರಣ, ಅವರು ಈ ಕುರ್‌ಆನ್-ಬಾಹಿರ ಮೂಲಗಳನ್ನು ಉತ್ತೇಜಿಸುತ್ತಾರೆ. ಆದುದರಿಂದ, **'ಸ್ವಲಾತ್ ಪದಕ್ಕೆ ಅವರು ಹೊರಿಸಿರುವ ವ್ಯಾಖ್ಯಾನವು, ಧಾರ್ಮಿಕರನ್ನು ಹೊರತುಪಡಿಸಿ ಇತರರಿಗೆ ಯಾವುದೇ ಉಪಯುಕ್ತತೆಯ ಸಾಧ್ಯತೆಯನ್ನು ನೀಡುವುದಿಲ್ಲ'**, ಎಂಬುವುದು ಚಿಂತನಾಯುಕ್ತ ವ್ಯಕ್ತಿಯನ್ನು ಚುರುಕುಗೊಳಿಸುತ್ತದೆ.

ಈ ಪದದ ನಿಜವಾದ ಅರ್ಥವನ್ನು ಕೇವಲ ಕುರ್‌ಆನ್ ಮಾತ್ರ ಅರಿತಿರುವುದರಿಂದ, ನಾವು ಈ ಪದವನ್ನು ಕುರ್‌ಆನ್ ಯಾವ ರೀತಿಯಲ್ಲಿ ಬಳಸಿದೆ ಹಾಗೂ ವಿವಿಧ ಸನ್ನಿವೇಶಗಳಲ್ಲಿ ಅವುಗಳ ಬಳಕೆಯು ಹೇಗಿದೆ ಎಂದು ನೋಡುವುದರ ಮೂಲಕ ಅದರ ಅರ್ಥವನ್ನು ಪಡೆಯಬಹುದು. ಅಲ್ಲಾಹನು ತನ್ನ ಗ್ರಂಥದ ಅರಬೀ ಭಾಷೆಯು ಪರಿಪೂರ್ಣವಾಗಿದೆ ಎಂದು ಹೇಳುತ್ತಾನೆ. ಆದ್ದರಿಂದ, ಯಾರೂ ಅದರ ಪದಗಳ ರಚನೆ, ಕಾಗುಣಿತ ಮತ್ತು ವ್ಯಾಕರಣ ರೂಪಗಳನ್ನು ಬದಲಾಯಿಸಲು ಯತ್ನಿಸಬಾರದು.

> ಇದು ಅರಬೀ ಭಾಷೆಯಲ್ಲಿರುವ ಒಂದು ಗ್ರಂಥವಾಗಿದೆ, ಇದರಲ್ಲಿ ಯಾವುದೇ ವಕ್ರತೆಯಿಲ್ಲ, ಅವರು ಲಕ್ಷಿಸುವ (ಗಮನಿಸುವ) ಸಲುವಾಗಿ. (39:28)

ಸ್ವಲಾತ್ ಪದವು ಅಥವಾ ಅದರ ಮೂಲಪದದಿಂದ ಬರುವ ಇತರ ಉಪಪದಗಳು, ಯಾವುದೇ ರೀತಿಯ ಆರಾಧನೆ ಅಥವಾ ದೇಹ-ಚಲನೆಯ ಕ್ರಿಯೆಯನ್ನು ಸೂಚಿಸುವ ಸಲುವಾಗಿ, ಕುರ್‌ಆನಿನಲ್ಲಿ ಎಲ್ಲಿಯೂ ಬಳಸಲಾಗಲಿಲ್ಲ.

‘*ಅಕೀಮು*’ ಎಂಬ ಜಾನ್ನುಡಿಯೊಂದಿಗೆ *ಸ್ವಲಾತ್* ಪದವು ಬಳಕೆಯಾದಾಗಲೆಲ್ಲಾ, ಅದು - ಸಮ್ಮತಿಸಿಕೊಳ್ಳುವ ಅಥವಾ ಒಪ್ಪಿಕೊಳ್ಳುವ ವ್ಯಕ್ತಿ ಅಥವಾ ವ್ಯಕ್ತಿಗಳಿಂದ - ಗೌರವಿಸುವಂತಹ, ಎತ್ತಿಹಿಡಿಯುವಂತಹ, ಸಮರ್ಪಿಸುವಂತಹ ಅಥವಾ ಪಾಲಿಸುವಂತಹ – ‘ಬದ್ಧತೆಗಳು, ಕರ್ತವ್ಯಗಳು, ಹೊಣೆಗಾರಿಕೆಗಳು, ಜವಾಬ್ದಾರಿಗಳು’ ಎಂಬಿತ್ಯಾದಿ ಕ್ರಿಯೆಗಳಾಗಿವೆ. ಅಕ್ಷರಶಃ *ಸ್ವಲಾತ್* ಪದದ ಅರ್ಥವು ‘ಬದ್ಧತೆ’ ಎಂದಾಗಿದೆ.

ಈ ಮೂಲಪದವು (ಅರಬೀ ಭಾಷೆಯ ಇತರ ಮೂಲಪದಗಳಂತೆ) ಸ್ವರಗಳು, ಪೂರ್ವಪ್ರತ್ಯಯಗಳು ಮತ್ತು ಅಂತ್ಯ ಪ್ರತ್ಯಯಗಳನ್ನು ಬಳಸಿಕೊಂಡು ತನ್ನ ವಿವಿಧ ಪಾತ್ರಗಳನ್ನು ರೂಪಿಸುತ್ತದೆ. ‘ಇ’ ಅಥವಾ ‘ಉ’ ಎಂಬ ಸಣ್ಣ ಸ್ವರಗಳ ಸೇರ್ಪಡೆಯಿಂದ, ಪದದ ಮೂಲಾಧಾರವು ಹಾಗೂ ಮೂಲಭೂತ ಅರ್ಥವು ಬದಲಾಗದೆ ‘*ಸ್ವಲ್ಲೀ*’ ಅಥವಾ ‘*ಸ್ವಲ್ಲೂ*’ ಆಗಿ ಪರಿಣಮಿಸುತ್ತದೆ (9:103, 108:2 ಮತ್ತು 33:56). ಮತ್ತು ‘ಅ’ ಎಂಬ ಸಣ್ಣ ಸ್ವರದ ಜೊತೆ ಬಳಕೆಯಾಗಿರುವುದು 75:31 ಮತ್ತು 96:10 ರಲ್ಲಿ ಕ್ರಮವಾಗಿ ಎರಡು ಬಾರಿ ಕುರ್‌ಆನಿನಲ್ಲಿ ಕಾಣಬಹುದು.

96:10 ರಲ್ಲಿ ಇದು “*ಬದ್ಧನಾದ ಓರ್ವ ಸೇವಕ*” ಎಂಬರ್ಥದಲ್ಲಿ “*ಅಬ್ದನ್ ಇಝಾ ಸ್ವಲ್ಲಾ*” ಎಂದು ಕಾಣಿಸಿಕೊಳ್ಳುತ್ತದೆ. ಈ ವಚನದ ಪ್ರಸಂಗವು 96:8-12 ರಿಂದ ಆರಂಭವಾಗುತ್ತದೆ, ಅದರ ಸಂದೇಶವು ಹೀಗಿದೆ: “*ನಿಶ್ಚಯವಾಗಿ, ನಿಮ್ಮ ಮರಳಿಕೆಯು ನಿಮ್ಮ ಪ್ರಭುವಿನ ಕಡೆಗಾಗಿದೆ. ಬದ್ಧನಾದ ಓರ್ವ ಸೇವಕನನ್ನು ತಡೆಯುವವರ ಬಗ್ಗೆ ಏನು ಯೋಚಿಸುತ್ತೀರಿ? ಒಂದು ವೇಳೆ ಅವನು ಜನರಿಗೆ ಲಕ್ಷತೆಯನ್ನು ವಹಿಸಲು ಪ್ರತಿಪಾದಿಸುತ್ತಾ ವಾಸ್ತವದಲ್ಲಿ ಸನ್ಮಾರ್ಗದಲ್ಲಿ ಇರುವವನಾಗಿದ್ದರೆ?*”. ಆದರೆ ಅನುವಾದಕರು, ಅವರಿಗೆ ಮಾತ್ರ ತಿಳಿದಿರುವ ಕಾರಣಗಳ ಆಧಾರದಲ್ಲಿ, ಈ ಪದಕ್ಕೆ ಬೇರೆ ಬೇರೆ ಅರ್ಥಗಳನ್ನು ಕೊಡುತ್ತಾರೆ. 75:31 ರಲ್ಲಿ *ಫಲಾ ಸದ್ದಕ ವಲಾ ಸ್ವಲ್ಲಾ* ಎಂದು ಕಾಣಬಹುದು. ಈ ಎರಡೂ ವಚನಗಳಲ್ಲಿಯೂ *ಸ್ವಲ್ಲಾ* ಎಂಬ ಪದವು ವಿಧ್ಯುಕ್ತ ಪ್ರಾರ್ಥನೆಗಳನ್ನು ಸೂಚಿಸುತ್ತದೆ ಎಂದು ಅನುವಾದಕರು ವಾದಿಸುತ್ತಾರೆ. ನಾವು ಆ ವಚನಗಳ ಸನ್ನಿವೇಶವನ್ನು ಗಮನಿಸುವಾಗ, ನಿಸ್ಸಂಶಯವಾಗಿ ಅವರ ವಾದವು ವಿವೇಕಹೀನತೆಯನ್ನು ತೋರಿಸುತ್ತದೆ.

ಈ ಪದವು ವಿವಿಧ ಸ್ವರಗಳ ಅಥವಾ ಪೂರ್ವಪ್ರತ್ಯಯಗಳ ಜೊತೆಗೆ ಕುರ್‌ಆನಿನ ಇತರ ವಾಕ್ಯವೃಂದಗಳಲ್ಲಿಯೂ ಕಾಣಿಸಿಕೊಂಡಿವೆ. ಇಂತಹ ಸನ್ನಿವೇಶಗಳಲ್ಲಿ ಯಾವುದೇ ಧಾರ್ಮಿಕರಿಗೆ ಅಥವಾ ಅರಬೀ ಭಾಷೆಯ ವಿದ್ವಾಂಸರಿಗೆ ಇದನ್ನು ‘ವಿಧ್ಯುಕ್ತ ಪ್ರಾರ್ಥನೆ’ ಎಂದು ಭಾಷಾಂತರಿಸಲು ಸಾಧ್ಯವಾಗಲಿಲ್ಲ, ಏಕೆಂದರೆ ಅಲ್ಲಿ ಅವರ ಭ್ರಷ್ಟ ಅರ್ಥವನ್ನು, ಯಾವುದೇ ತರಹದಲ್ಲಿ ಹೊಂದಿಸಿಕೊಳ್ಳಲು ಅವರಿಗೆ ಸಾಧಿಸುವುದಿಲ್ಲ. ಅರಬೀ ಧರ್ಮದ ಮುಖಂಡರು ವಿವಿಧ ರೀತಿಗಳಲ್ಲಿ ಈ ಮೂಲ ಪರಿಕಲ್ಪನೆಯ ಅರ್ಥವಿವರಣೆಯನ್ನು ನೀಡಿರುವುದರಿಂದ, ಸಾಮರಸ್ಯವು ಅಸ್ತಿತ್ವದಲ್ಲಿದೆ ಎಂದು ಕೌಶಲ್ಯದಿಂದ ಅವರು ಹೇಳಬಹುದು. ಆದಾಗ್ಯೂ, ಕೆಳಗಿನ ಚರಣಗಳಲ್ಲಿ ಈ ನಿರ್ದಿಷ್ಟ ವೈಚಿತ್ರ್ಯವನ್ನು ವಿವರಿಸಲು ಪ್ರಯತ್ನಿಸಲಾಗಿದೆ.

ಮೇಲೆ ಹೇಳಿದಂತೆ, ಅರಬೀ ಭಾಷೆಯು, ಅದರ ಮೂಲಪದಗಳಿಂದ ಅದರ ಶಬ್ದಸಂಗ್ರಹವನ್ನು ಪಡೆಯುತ್ತದೆ. ಮೂಲ ಪದದ ಧಾತು ಪ್ರಕ್ರಿಯೆ ನಡೆಸುವುದರ ಮೂಲಕ, ಹೊಸ ಉತ್ಪನ್ನಗಳನ್ನು ರಚಿಸಲಾಗುತ್ತದೆ.

ಸಾಮಾನ್ಯವಾಗಿ, ಈ ಉತ್ಪನ್ನಗಳು ಸ್ಥಿರವಾದ ಸ್ವರದ ಆಕೃತಿಗಳ ಅಥವಾ ನಮೂನೆಗಳ ಪ್ರಕಾರ, ಕೆಲವು ಪೂರ್ವಪ್ರತ್ಯಯಗಳ ಅಥವಾ ಅಂತ್ಯಪ್ರತ್ಯಯಗಳ ಸೇರ್ಪಡೆಯಿಂದ ರಚಿಸಲಾಗುತ್ತದೆ. ಕರ್ತರಿ ಪ್ರಯೋಗ ಮತ್ತು ಕರ್ಮಣಿ ಪ್ರಯೋಗ ಎಂಬ ಎರಡು ರೀತಿಯ 'ಪ್ರಯೋಗಗಳು' ಅರಬೀ ಕ್ರಿಯಾಪದಗಳು ಹೊಂದಿವೆ.

ಶಬ್ದವ್ಯುತ್ಪತ್ತಿ ಮತ್ತು ರೂಪನಿಷ್ಪತ್ತಿಯ ರೂಪಗಳು ಅರಬೀ ಭಾಷೆಯನ್ನು ವಿಸ್ತಾರಗೊಳಿಸಿದೆ. ಈ ಸಂಕೀರ್ಣತೆಯು, ಸ್ವರೂಪದ ಕ್ರಮಬದ್ಧತೆ ಹಾಗೂ ಸಮರೂಪತೆಯ ಮೂಲಕ ಸರಿಜೋಡಿಸಲಾಗುತ್ತದೆ ಮತ್ತು ಅವುಗಳು ವೈಚಾರಿಕವೂ ಮತ್ತು ಕ್ರಮಬದ್ಧವೂ ಆಗಿರುತ್ತದೆ. ಪರಿಪೂರ್ಣ ಮತ್ತು ಅಪೂರ್ಣ ಎಂಬ ಎರಡು ಕ್ರಿಯಾರೂಪಗಳ ಜೊತೆಗೆ, ಕರ್ತರಿ, ಕರ್ಮಣಿ ಹಾಗೂ ಶಕ್ತಿಯುತ ಪ್ರಕಾರಗಳೂ ಇವೆ. ಉದಾಹರಣೆಗೆ, *ಸ್ಲಾತ್* ಎಂಬ ಪದವು ಅದೇ ಛಾಯೆಯ ಅರ್ಥಗಳನ್ನು ಕೊಡುವಂತಹ ಕರ್ತವ್ಯ, ಕಟ್ಟುಪಾಡು, ಕಡ್ಡಾಯ, ವಾಗ್ದಾನ ಅಥವಾ ಭರವಸೆ ಇತ್ಯಾದಿ ಪದಗಳನ್ನು ರೂಪಿಸುವ ಅನೇಕ ಉತ್ಪನ್ನಗಳನ್ನು ಹೊಂದಿದೆ.

ಚೊಕ್ಕವಾಗಿ ಹೇಳುವುದಾದರೆ, ಕುರ್‌ಆನಿನ ಅರಬೀ ಭಾಷೆಯು, ಸಂಕೀರ್ಣ ವ್ಯಾಕರಣವನ್ನು ಹೊಂದಿರುವ ಬಲು ಅಭಿವೃದ್ಧಿಗೊಂಡ ಭಾಷೆಯಾಗಿದೆ. ಅದರ ಮೂಲಕ ಉನ್ನತ ಮಟ್ಟದ ನಿಖರತೆಯೊಂದಿಗೆ ಪರಿಕಲ್ಪನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಲ್ಯಾಟಿನ್, ಹಳೆಯ ಅರಮಿಕ್, ಗ್ರೀಕ್ ಅಥವಾ ಸಂಸ್ಕೃತಕ್ಕಿಂತ ಭಿನ್ನವಾಗಿ ಅರಬೀ ಭಾಷೆಯು ಜಗತ್ತಿನಾದ್ಯಂತ ಲಕ್ಷಾಂತರ ಜನರು ಇಂದಿಗೂ ಮಾತಾಡುವ, ಬರೆಯುವ ಮತ್ತು ಅರ್ಥ ಮಾಡಿಕೊಳ್ಳುವ ಜೀವಂತ ಭಾಷೆಯಾಗಿದೆ. ಕುರ್‌ಆನಿನ ಅರಬೀ ಭಾಷೆಯಲ್ಲಿ, ನಿಖರವಾಗಿ ವ್ಯಾಖ್ಯಾನಿಸುವ ಸಾಮರ್ಥ್ಯ ಕೊರತೆಯಿದೆ ಎಂದು ವಾದಿಸುವ ಪಂಡಿತರೂ ಮತ್ತು ಧಾರ್ಮಿಕರೂ ಇದ್ದಾರೆ, ಏಕೆಂದರೆ – ಕುರ್‌ಆನಿನ ಸಂದೇಶವು ಒಮ್ಮೆ ಜನರಿಗೆ ಸ್ಪಷ್ಟವಾಗಿ ಬಿಟ್ಟರೆ, ತಮ್ಮ ನಂಬಿಕೆ ಮತ್ತು ಉಪದೇಶಗಳೆಲ್ಲವೂ ಹುರುಳಿಲ್ಲದಾಗಿ ಹೋಗುತ್ತದೆ, ಎಂದು ಅವರು ಅರಿತಿದ್ದಾರೆ. ಉದಾಹರಣೆಗೆ, *ಸ್ಲಾತ್* ಎಂಬ ಪದವನ್ನು ಮುಸ್ಲಿಮ್ ಜನರಿಂದ ಮಾತ್ರ ಪಾಲಿಸಬೇಕಾದ ಕಡ್ಡಾಯ ಅರಬೀ ವಿಧ್ಯುಕ್ತ ಪ್ರಾರ್ಥನೆಯೆಂದು ಅವರು ಅನುವಾದ ಮಾಡಿದ್ದಾರೆ. ಆದರೆ ಕುರ್‌ಆನ್ ಇದೇ ಪದವನ್ನು ಇಬ್ರಾಹೀಮರ, ಮೂಸಾರ, ಮತ್ತು ಈಸಾರ ಜನರನ್ನು, ಸತ್ಯನಿಷೇಧಿಗಳನ್ನು, ಅಪರಿಚಿತರನ್ನು ಸೇರಿದಂತೆ ಪ್ರಾಣಿ ಸಾಮ್ರಾಜ್ಯವನ್ನು ಸಂಭೋದಿಸಿ ಬಳಸಿದೆ. ಅವರು ಅಸಂಬದ್ಧ ಅರ್ಥಗಳನ್ನು ರಚಿಸುವ ಮೂಲಕ ಈ ಪದವನ್ನು ಹೇಗೆ ಪಲ್ಲಟಗೊಳಿಸಿದರೆಂದು ನಾನು ಮುಂದಿನ ಭಾಗದಲ್ಲಿ ವಿವರಿಸುತ್ತೇನೆ.

ಕುರ್‌ಆನಿನಲ್ಲಿ ಕಲಿಯಲು ಅನೇಕ ಪಾಠಗಳಿವೆ, ವಿಶೇಷವಾಗಿ, ದೇವವಾಣಿಯನ್ನು ಸ್ವೀಕರಿಸಿದ ಹಿಂದಿನ ಜನರ ಬಗ್ಗೆ. ಅಂತಹ ಒಂದು ಸಮುದಾಯವಾಗಿತ್ತು ಇಸ್ರಾಯೀಲರ ಸಂತತಿಗಳು. ಅವರು ಅಲ್ಲಾಹನ ಒಪ್ಪಂದವನ್ನು ಪಡೆದ ನಂತರ ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವಂತೆ ಒಪ್ಪಿಕೊಂಡಿದ್ದರು. ಆದರೆ, ಅವರು ಯಹೂದಿತ್ವ ಎಂಬ ಹೊಸ ಧರ್ಮವನ್ನು ರಚಿಸುವ ಸಲುವಾಗಿ, ಗ್ರಂಥಗಳಲ್ಲಿರುವ 'ಅವನ ಪದಗಳನ್ನು' ವಿಕೃತಗೊಳಿಸುವ ಮೂಲಕ (2:59) ಅವರ ಒಪ್ಪಂದವನ್ನು ಉಲ್ಲಂಘಿಸಿದರು. ಕುರ್‌ಆನಿನ ಅರಬೀ ಪದಗಳನ್ನು ಇತರ ಭಾಷೆಗಳಿಗೆ ಭಾಷಾಂತರಿಸುವಾಗ ಅರಬೀ ಧಾರ್ಮಿಕರು ಸಹ ಇದನ್ನೇ ಮಾಡುತ್ತಿರುವುದನ್ನು ನಾವು

ನೋಡುತ್ತಿದ್ದೇವೆ. ಅವರು ಕುಟಿಲತೆಯ ಅರ್ಥಗಳನ್ನು ಕುರ್‌ಆನಿನ ಅನುವಾದಗಳೊಳಗೆ ಯಶಸ್ವಿಯಾಗಿ ಪರಿಚಯಿಸಿದರೂ, ಎಷ್ಟೇ ಪ್ರಯತ್ನಪಟ್ಟರೂ ಅವರಿಗೆ ಕುರ್‌ಆನಿನ ಮೂಲ ಅರಬೀ ಭಾಷೆಯಲ್ಲಿ ಯಾವುದೇ ಬದಲಾವಣೆಯನ್ನು ತರಲು ಸಾಧ್ಯವಿಲ್ಲ. ಅವನ ಬುದ್ಧಿವಂತಿಕೆಯಿಂದ ಅಲ್ಲಾಹನು ನಮಗೆ "ಅವನು ಅವತರಿಸಿದ್ದನ್ನು ಅವನು ಸಂರಕ್ಷಿಸುತ್ತಾನೆ" ಎಂದು 15:9 ರಲ್ಲಿ ಭರವಸೆ ನೀಡಿದ್ದಾನೆ. ಅದರ ಪದಗಳನ್ನು, ಕಾಗುಣಿತಗಳನ್ನು ಬದಲಾಯಿಸುವ ಅಥವಾ ಅದರ ವ್ಯಾಕರಣವನ್ನು ಮಾರ್ಪಡಿಸುವ ಯಾವುದೇ ಪ್ರಯತ್ನವು, ವೈರುಧ್ಯಗಳಿಂದ ಜಟಿಲವಾದ ಹಾಗೂ ಎಲ್ಲಾ ತರಹದ ವಿವೇಕತೆಯನ್ನು ಉಲ್ಲಂಘಿಸುವ ಅನುವಾದಗಳಾಗಿ ಪರಿಣಮಿಸುತ್ತದೆ.

ಆದಾಗ್ಯೂ, ಮೂಲ ಅರಬೀ ಕುರ್‌ಆನಿನ ಅರ್ಥಗಳನ್ನು, ಪೂರ್ವ ನಿಗದಿತ ಸ್ವರೂಪಗಳಾಗಿ ಬಲವಂತಗೊಳಿಸುವವರು ನಡೆಸಿದ ತಿರುವುಗಳು, ಗ್ರಂಥವನ್ನು ಓದುವ ರೀತಿಯನ್ನೇ ವಿರೂಪಗೊಳಿಸಿದೆ. ಉದಾಹರಣೆಗೆ, 75:31 ಹೀಗಿದೆ: *ಫಲಾ ಸ್ವದ್ದಕ ವಲಾ ಸ್ವಲ್ಲಾ*. ಅರಬೀ ಧರ್ಮದ ಪೋಷಕರು ಇದನ್ನು ಹೀಗೆ ಅನುವಾದಿಸುತ್ತಾರೆ, "ಅವನು ಸತ್ಯಸಂಧನಾಗಿರಲಿಲ್ಲ ಮತ್ತು ವಿಧಿವತ್ತಾಗಿ ಪ್ರಾರ್ಥಿಸಲಿಲ್ಲ". ಆದರೆ, ಅದರ ನಿಜವಾದ ಅರ್ಥವು "ಅವನು ಸತ್ಯಸಂಧನಾಗಿರಲಿಲ್ಲ ಮತ್ತು ಬದ್ಧನಾಗಿರಲಿಲ್ಲ" ಎಂದಾಗಿದೆ. ಕುರ್‌ಆನಿನ ಇತರ ಭಾಗಗಳಲ್ಲಿರುವ ಸ್ವಲಾತ್ ಪದದ ಬಳಕೆಗಳನ್ನು, ಪರಿಶೀಲನೆ ಮಾಡೋಣ.

ಉದಾಹರಣೆಗೆ, 2:43 ರಲ್ಲಿ ಅಲ್ಲಾಹನು ಇಸ್ರಾಯೀಲರ ಸಂತತಿಗೊಂದು ಸೂಚನೆ ನೀಡುತ್ತಾನೆ: *ಅಕೀಮು ಸ್ವಲಾತ ವ ಆತು-ಝ್ಝಕಾತ*. ಧಾರ್ಮಿಕರು, ಇದರ ಅರ್ಥ: 'ವಿಧ್ಯುಕ್ತ ಪ್ರಾರ್ಥನೆಗಳನ್ನು ನೆಲೆನಿಲ್ಲಿಸಿರಿ ಮತ್ತು ಧಾರ್ಮಿಕ ದಶಾಂಶ ತೆರಿಗೆಯನ್ನು ಪಾವತಿಮಾಡಿರಿ' ಎಂದೆನ್ನುತ್ತಾರೆ. ಈ ಸೂಚನೆಯನ್ನು 'ವರ್ತಮಾನಕಾಲ'ದಲ್ಲಿ ಉಪಯೋಗಿಸಲಾಗಿದೆ ಮತ್ತು ನಾವು 2:40 ರಿಂದ 2:43 ವರೆಗಿರುವ ಸಂದರ್ಭವನ್ನು ಓದಿದರೆ, ಇಸ್ರಾಯೀಲರ ಮಕ್ಕಳು ಈ ಮುಂಚೆ ಮಾಡಿದಂತಹ ಕರಾರಿಗೆ ಬದ್ಧರಾಗಿರಲು ಅಲ್ಲಾಹನು ಅವರನ್ನು ಜ್ಞಾಪಿಸುತ್ತಿದ್ದಾನೆಂದು ನಮಗೆ ಮನವರಿಕೆಯಾಗುತ್ತದೆ - ಅಂದರೆ, ತಮ್ಮ ಒಪ್ಪಂದವನ್ನು ಎತ್ತಿಹಿಡಿಯುವುದು ಹಾಗೂ ತಮ್ಮ ನಂಬಿಕೆಗಳಲ್ಲಿ ಪರಿಶುದ್ಧತೆಯನ್ನು ಕಾಪಾಡುವುದು. ಅವರೊಂದಿಗಿರುವುದನ್ನು ದೃಢೀಕರಿಸುವಂತಹ, ಕುರ್‌ಆನಿನಲ್ಲಿ ಅವತೀರ್ಣಗೊಂಡವುಗಳ ಮೇಲೆ ವಿಶ್ವಾಸವಿಡಲು ಮತ್ತು ಅವುಗಳ ಬದಲಿಗೆ ಅಗ್ಗದ ಸಂಪಾದನೆಯ ವ್ಯವಹಾರವನ್ನು ಮಾಡದಿರಲು, ಅಲ್ಲಾಹನು ಅವರಿಗೆ ಕರೆ ನೀಡುತ್ತಿದ್ದಾನೆ. ಸಂದೇಶವು ಸರಳವೂ ಮತ್ತು ದಿಟ್ಟವೂ ಆಗಿದೆ. ಧಾರ್ಮಿಕರ ಸಲಹೆಯಂತೆ, ಇಸ್ರಾಯೀಲರ ಸಂತತಿಗೆ ವಿಧ್ಯುಕ್ತ ಪ್ರಾರ್ಥನೆಯನ್ನು ಮಾಡಲು ಅಲ್ಲಾಹನು ಎಂದಿಗೂ ಹೇಳಲಿಲ್ಲ. ವಾಸ್ತವದಲ್ಲಿ, ನೀವು ದೈನಂದಿನ ಐದು ವಿಧ್ಯುಕ್ತ ಪ್ರಾರ್ಥನೆಗಳನ್ನು ಇತಿಹಾಸದ ಯಾವುದೇ ಸಮಯದಲ್ಲಿ ನಿರ್ವಹಿಸಿರುವಿರಾ? ಎಂದು ನಾವು ಯಹೂದಿಯರನ್ನು ಕೇಳಿದರೆ, ಅವರ ಉತ್ತರವು ನಕಾರಾತ್ಮಕವಾಗಿರುತ್ತದೆ. ಐದು ವಿಧ್ಯುಕ್ತ ಪ್ರಾರ್ಥನೆಯು ಅಲ್ಲಾಹನು ಅವತರಿಸಿದ ದೀನಿನ ಭಾಗವಾಗಿರಲಿಲ್ಲ ಎಂದು, ಹಿಂದಿನ ಗ್ರಂಥವನ್ನು ಸ್ವೀಕರಿಸಿದ ಯಹೂದಿಗಳೂ ತಿಳಿದಿದ್ದಾರೆ. ಇದು ತೌರಾತಿನಲ್ಲೂ ಇಲ್ಲ ಮತ್ತು ಕುರ್‌ಆನಿನಲ್ಲೂ ಇಲ್ಲ. ಈ ನಿರ್ದಿಷ್ಟ ವಾಕ್ಯದ ನಿಜವಾದ ಅರ್ಥವು 'ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ ಮತ್ತು

ಅವುಗಳನ್ನು ನಿಷ್ಕಳಂಕವಾಗಿರಿಸಿ' ಎಂಬುವುದಾಗಿದೆ ಎಂದು ನಮಗೆ ನಮ್ಮ ಸಾಮಾನ್ಯ ಜ್ಞಾನವು ಹೇಳುತ್ತದೆ. ಇಸ್ರಾಯೀಲರ ಮಕ್ಕಳು ಈ ಸೂಚನೆಯನ್ನು ತುಂಬಾ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ ಏಕೆಂದರೆ ಕುರ್‌ಆನ್ ಅವತೀರ್ಣಗೊಳ್ಳುವ ದೀರ್ಘ ಕಾಲದ ಮುಂಚೆ, ಅವರು ತೌರಾತಿನ ಮೂಲಕ ಅಲ್ಲಾಹನ ದೀನಿಗೆ ತಮ್ಮನ್ನು ಬದ್ಧರಾಗಿಸಿದ್ದರು.

6:162 ರಲ್ಲಿ, ಪ್ರವಾದಿಯು ಮತ್ತು ಅಲ್ಲಾಹನಿಗೆ ತಮ್ಮನ್ನು ಸಮ್ಮತಿಸಿದವರು, ಅಲ್ಲಾಹನ ಸೇವಕರಾಗಿ ತಮ್ಮ ಬದ್ಧತೆಗಳನ್ನು ಜ್ಞಾಪಿಸುತ್ತಿರಲು ಪ್ರೋತ್ಸಾಹಿಸಲಾಗಿದೆ: *ಇನ್ನ ಸ್ವಲಾತೀ ವನುಸುಕೀ ವಮಹಿಯಾಯ ವಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್.* ಇದರ ಅರ್ಥವು: ನನ್ನ ಬದ್ಧತೆಗಳು ಮತ್ತು ನನ್ನ ತ್ಯಾಗಗಳು ಮತ್ತು ನನ್ನ ಜೀವನ ಮತ್ತು ನನ್ನ ಮರಣ, ಸರ್ವಲೋಕ ಪ್ರಭುವಾದ ಅಲ್ಲಾಹನಿಗಾಗಿದೆ. ಧಾರ್ಮಿಕರು ತಮ್ಮ ನಾಲಿಗೆಯನ್ನು ತಿರುಚಿ, ಈ ವಚನಕ್ಕೆ ಹೀಗೆ ಅರ್ಥ ಕೊಡುತ್ತಾರೆ: 'ನನ್ನ ವಿಧ್ಯುಕ್ತ ಪ್ರಾರ್ಥನೆಗಳು ಮತ್ತು ನನ್ನ ತ್ಯಾಗಗಳು ಮತ್ತು ನನ್ನ ಜೀವನ ಮತ್ತು ನನ್ನ ಮರಣ, ಸರ್ವಲೋಕ ಪ್ರಭುವಾದ ಅಲ್ಲಾಹನಿಗಾಗಿದೆ.

ಹಿಂದಿನ ಕಾಲದ ಶುಐಬರ ಜನರೂ ಸ್ವಲಾತ್ ಎಂಬ ಪದವನ್ನು ಬಳಸಿರುವುದಾಗಿ ಕುರ್‌ಆನಿನಲ್ಲಿ ಕಾಣಬಹುದು. 11:87 ರಲ್ಲಿ, '*ಯಾ ಶುಐಬು ಅ-ಸ್ವಲಾತುಕ..*' ಅಂದರೆ, '*ಓ ಶುಐಬರೇ, ನಿಮ್ಮ ಬಾಧ್ಯತೆಯು...?*' ಎಂದು ಶುಐಬರ ಜನರು ಹೇಳುತ್ತಾರೆ. ಪರಸ್ಪರ ಮೋಸವನ್ನು ಮಾಡದೆ ನ್ಯಾಯೋಚಿತವಾದ ವ್ಯಾಪಾರವನ್ನು ನಡೆಸಲು ಶುಐಬರು ತನ್ನ ಜನರಿಗೆ ಕರೆ ನೀಡುವುದಾಗಿ, ಆ ವಾಕ್ಯದ ಪ್ರಸಂಗವು ತಿಳಿಸುತ್ತದಾದರೂ, ಅರಬೀ ಧರ್ಮದಲ್ಲಿ ಅವರು ಹೇಳುತ್ತಾರೆ, ಶುಐಬರ ಜನರು ಹೇಳಿದರು, '*ಓ ಶುಐಬರೇ, ನಿಮ್ಮ ವಿಧ್ಯುಕ್ತ ಪ್ರಾರ್ಥನೆಯು...?*'.

ಶತಮಾನಗಳ ಅವಧಿಯಲ್ಲಿ ಜನರು ತಮ್ಮ ಬದ್ಧತೆಗಳನ್ನು ಅಥವಾ ಕರ್ತವ್ಯಗಳನ್ನು ಎತ್ತಿಹಿಡಿಯುವಂತೆ ಕರೆ ನೀಡಲು, ಪ್ರವಾದಿಗಳು ವಿವಿಧ ಭಾಷೆಗಳಲ್ಲಿ ವಿವಿಧ ಪದಗಳನ್ನು ಬಳಸಿದ್ದರು. ಕೊನೆಯ ಪ್ರವಾದಿಯ ಭಾಷೆಯಲ್ಲಿ ಇದು ಸ್ವಲಾತ್ ಎಂದು ಕರೆಯಲಾಗುತ್ತದೆ. ಇಬ್ರಾಹೀಮ್, ಮದಿಯನದ ಜನರು, ಇಸ್ರಾಯೀಲರ ಸಂತತಿ ಮತ್ತು ಈಸಾರು, ಇವರೆಲ್ಲರೂ ಅರಬರಾಗಿರಲಿಲ್ಲ. ಆದರೆ ಕುರ್‌ಆನ್ ಅರಬೀ ಭಾಷೆಯಲ್ಲಿದ್ದ ಕಾರಣ, ಅವರ ಸ್ವಂತ ಭಾಷೆಯಲ್ಲಿನ ಸಮಾನ ಪದದ ಆಧಾರದ ಮೇಲೆ ಅವರೊಂದಿಗಿನ ಸಂಭಾಷಣೆಗಳನ್ನು, ಕುರ್‌ಆನ್ *ಸ್ವಲಾತ್* ಎಂದು ಉಲ್ಲೇಖಿಸುತ್ತದೆ. ಉದಾಹರಣೆಗೆ 21:23 ರಲ್ಲಿ, ಅಲ್ಲಾಹನು ಅದೇ ಪದದೊಂದಿಗೆ ಇಸ್ಹಾಕ್ ಮತ್ತು ಯಾಕೂಬರಿಗೆ ಅವರ ತಂದೆ ಇಬ್ರಾಹೀಮರ ನಂತರ ನಿರ್ದೇಶಿಸುತ್ತಾನೆ, '*ವ ಇಖಾಮ ಸ್ವಲಾ-ತಿ ವ ಈತಾಇ ಝ್ಝಕಾ-ತಿ*', ಅಂದರೆ: *ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸಿ.*

ಮುಹಮ್ಮದರಿಗಿಂತ ಮುಂಚಿನ ಯಾವುದೇ ಪ್ರವಾದಿಗಳೂ ತಮ್ಮ ಸ್ವಂತ ಭಾಷೆಯಲ್ಲಿ ಸ್ವಲಾತ್'ಗೆ ಸಮಾನ ಪದವನ್ನು ಉಚ್ಚರಿಸಿದಾಗ, ಅವರು ವಿಧ್ಯುಕ್ತ ಪ್ರಾರ್ಥನೆಗಳ ಬಗ್ಗೆ ಮಾತನಾಡಲಿಲ್ಲ. ಆದ್ದರಿಂದ, ಸ್ವಲಾತ್ ಪದವನ್ನು ಅಥವಾ ಅದರ ಇತರ ಉತ್ಪನ್ನಗಳನ್ನು, ವಿಧ್ಯುಕ್ತ ಪ್ರಾರ್ಥನೆಯೆಂದು ಅರ್ಥಕೊಡುವಂತೆ

ಅನುವಾದಿಸಲು ಸಾಧ್ಯವಿಲ್ಲ. ಹಾಗೆ ಯೋಚಿಸುವುದು, ಪ್ರಾಸಂಗಿಕವಾಗಿ ಬೃಹತ್ ಪ್ರಮಾಣದ ತಪ್ಪು ಎಸಗಿದಂತಾಗುತ್ತದೆ. *ಸ್ವಲಾತ್* ಪದ ಅಥವಾ ಅದರ ಇತರ ಉತ್ಪನ್ನಗಳು ಕುರ್‌ಆನಿನ ಅನೇಕ ವಚನಗಳಲ್ಲಿ ಕಾಣಿಸಿಕೊಳ್ಳುತ್ತವೆ. ವಿವಿಧ ವಚನಗಳಲ್ಲಿ ಅದೇ ಪದವು ವಿವಿಧ ಅರ್ಥಗಳನ್ನು ಹೊಂದಿವೆ ಎಂದು, ಆಧುನಿಕ ಅರಬೀ 'ಅನುವಾದಗಳು' ನಮ್ಮನ್ನು ನಂಬಿಸಲು ಶ್ರಮಿಸುತ್ತದೆ.

ಈ ಸಂದಿಗ್ಧತೆಯು ಹೆಚ್ಚು ಗೊಂದಲಕ್ಕೆ ಈಡುಮಾಡಿದೆ. ಪರಿಣಾಮವಾಗಿ, ವಿಧಿವತ್ತಾದ ಭೌತಿಕ ಚಲನೆಗಳ ಜೊತೆಗೆ, ಒಂದು ದೈನಂದಿನ ವೇಳಾಪಟ್ಟಿಯ ಪ್ರಕಾರ ನಿರ್ವಹಿಸಲ್ಪಡುವ ವಿಧಿಯುತವಾದ ಪ್ರಾರ್ಥನೆಯ ಸುತ್ತಲೂ *ಸ್ವಲಾತ್* ಎಂಬ ಪದವು ಸುತ್ತುತ್ತದೆ. ಇಂತಹ ಬರೇ ಐಹಿಕವಾದ ಆಚರಣೆಯನ್ನು, ಅಲ್ಲಾಹನು ನಮಗೆ ಆಜ್ಞಾಪಿಸಿದ್ದಾನೆಂಬುವುದನ್ನು ಯೋಚಿಸುವುದೇ ದುರಹಂಕಾರವಾಗಿದೆ.

ಅರಬೀ ಧರ್ಮದ ಪುರೋಹಿತರು ಕೇಳುತ್ತಾರೆ: *ನಾವು ಕೇವಲ ಕುರ್‌ಆನಿನ ಮೇಲೆ ಅವಲಂಬಿತರಾದರೆ, ನಾವು ವಿಧಿವತ್ತಾಗಿ ಪ್ರಾರ್ಥನೆಯನ್ನು ಮಾಡುವುದು ಹೇಗೆ?* ಇದು ಸಂಪೂರ್ಣ ನಿಲುವು ರಹಿತವಾಗಿದೆ. **ಕುರ್‌ಆನಿಗಿಂತ ಹೆಚ್ಚಾಗಿ ನಮಗೆ ಏನಾದರೂ ಅಗತ್ಯವಿದೆ ಎಂಬ ಪ್ರಶ್ನೆಯಿತ್ತೇ?**

ಧಾರ್ಮಿಕ ವಿಷಯಗಳಲ್ಲಿ, ಪುರೋಹಿತರಿಗೆ ತಮ್ಮ ಅನುಯಾಯಿಗಳನ್ನು ಪ್ರಶ್ನಿಸುವ ಹಕ್ಕು ಇದೆ, ಆದರೆ ಅನುಯಾಯಿಗಳಿಗೆ ತಮ್ಮ ಪುರೋಹಿತರನ್ನು ಪ್ರಶ್ನಿಸುವ ಹಕ್ಕು ಇಲ್ಲ ಎಂಬ ವಾಸ್ತವವು, ಜಗತ್ತಿನ ಹಲವು ಧರ್ಮಗಳಲ್ಲಿನ ಸಾಮಾನ್ಯವಾದ ಅಂಶವಾಗಿದೆ.

'ತನ್ನನ್ನು ಸೃಷ್ಟಿಸಿದ ದೇವನನ್ನು ಯೇಸುವು ಸೇವೆ ಮಾಡುತ್ತಿದ್ದರು ಎಂದು ಬೈಬಲ್ ಹೇಳುವಾಗ, ನೀವೇಕೆ ಯೇಸುವನ್ನೇ ದೇವರೆನ್ನುತ್ತೀರಿ?' ಎಂದು ಒರ್ವ ಕ್ರೈಸ್ತ ಪುರೋಹಿತನನ್ನು ಪ್ರಶ್ನಿಸಿದರೆ, ಅವರು ಕುದಿದು ಬಿಡುತ್ತಾರೆ. ಹಾಗೆಯೇ, 'ಕುರ್‌ಆನಿನಲ್ಲಿ ವಿವರಿಸಲ್ಪಡದಂತಹ, ವಿಧ್ಯುಕ್ತ ಪ್ರಾರ್ಥನೆಯನ್ನು ನೀವು ದಿನಕ್ಕೆ ಐದು ಬಾರಿ ಏಕೆ ನಿರ್ವಹಿಸುತ್ತಿದ್ದೀರಿ?' ಎಂದು ಒರ್ವ ಅರಬೀ ಪುರೋಹಿತನನ್ನು ಕೇಳಿದರೆ, ಅವರು ಅದೇ ರೀತಿಯಲ್ಲಿ ತಮ್ಮ ಹಿಂಗಾಲಲ್ಲಿ ನಿಲ್ಲುತ್ತಾರೆ.

ಕುರ್‌ಆನಿನಲ್ಲಿ ವಿಧ್ಯುಕ್ತ ಪ್ರಾರ್ಥನೆ ಎಂಬುವುದೇ ಇಲ್ಲ ಎಂದು ಇಂತಹ ಸನ್ನಿವೇಶಗಳಲ್ಲಿ ಅರಬೀ ಧರ್ಮದ ಪುರೋಹಿತರು ಒಪ್ಪಿಕೊಳ್ಳಲು ಆರಂಭಿಸುತ್ತಾರೆ (ಆದರೆ, ಶೀಘ್ರದಲ್ಲೇ ಇತರ 'ವಿಶ್ವಾಸಾರ್ಹ' ಎನ್ನಲಾದ ಮೂಲಗಳ ಮೂಲಕ ಅದನ್ನು ಸರಿಪಡಿಸಲು ತೊಡಗುತ್ತಾರೆ). ಸತ್ಯವೇನೆಂದರೆ, ಅವರ ವಿಧ್ಯುಕ್ತ ಪ್ರಾರ್ಥನೆಯು, ಅಲ್ಲಾಹನು ನಿರ್ದೇಶಿಸಿದ ಜೀವನ ರೀತಿಯಲ್ಲಿ (ದೀನಿನಲ್ಲಿ) ಕೊನೆಯ ಪ್ರವಾದಿಗೆ ಅವತರಿಸಲ್ಪಡಲೇ ಇಲ್ಲ. ನಾವು ಕುರ್‌ಆನ್ ಓದುವುದರಿಂದ ನಮಗೆ ಇದು ತಿಳಿದಿದೆ. ಕುರ್‌ಆನಿನಲ್ಲಿ ಕಾಣಿಸಿಕೊಳ್ಳುವಂತೆ, *ಸ್ವಲಾತ್* ಎಂದರೆ 'ಕುರ್‌ಆನಿನಲ್ಲಿ ಸೂಚಿಸಲ್ಪಟ್ಟ ತನ್ನ ಜವಾಬ್ದಾರಿಗಳನ್ನು ಪಾಲಿಸುವ ಒಬ್ಬ ವ್ಯಕ್ತಿಯ ಬದ್ಧತೆಯಾಗಿದೆ'. ಮಾನವರು *ಅಲ್ಲಾಹನಿಗೆ* ಯಾವುದೇ ವಿಧ್ಯುಕ್ತ ಪ್ರಾರ್ಥನೆಯನ್ನು

ನಿರ್ವಹಿಸಬೇಕೆಂದು ಕುರ್‌ಆನ್ ಎಲ್ಲಿಯೂ ಪ್ರಸ್ತಾಪಿಸಲಿಲ್ಲ. ಇದು ಮುಸ್ಲಿಮರು ಮನಗಾಣಬೇಕಾದ ಸತ್ಯವಾಗಿದೆ.

ಜನರ ನಡುವಿನ ಸ್ವಲಾತ್

ಕುರ್‌ಆನಿನ ವಿವಿಧ ಸನ್ನಿವೇಶಗಳಲ್ಲಿ, ಸ್ವಲಾತ್ ಪದದ ಮತ್ತು ಅದರ ಉತ್ಪನ್ನಗಳ ವಿಭಿನ್ನ ಬಳಕೆಯನ್ನು ಪರಿಶೀಲಿಸುವ ಮೂಲಕ ಇವುಗಳು ವಿಧ್ಯುಕ್ತ ಪ್ರಾರ್ಥನೆ ಎಂಬ ಅರ್ಥವನ್ನು ಕೊಡುವುದಿಲ್ಲವೆಂಬ ವಾಸ್ತವಿಕತೆಯನ್ನು ನಮಗೆ ಬೆಂಬಲಿಸಬಹುದು. ಅವಿಶ್ವಾಸಿಗಳು, ಮೂರ್ತಿಪೂಜಕರು ಸಹ ಸೇರಿದಂತೆ ಎಲ್ಲರೂ ಸ್ವಲಾತನ್ನು ಪಾಲಿಸಬೇಕೆಂಬುವುದು ತಿಳಿದು ಬರುವ ಸಂಗತಿಯಾಗಿದೆ.

ಅಪರಿಚಿತರು ಉಯಿಲನ್ನು ಸಾಕ್ಷಿಯಾಗುವುದನ್ನು ಸಂಬಂಧಿಸಿರುವ ಈ ಕೆಳಗಿನ ವಚನವು, ಒಂದು ಅತ್ಯಂತ ಸ್ಪಷ್ಟವಾದ ಉದಾಹರಣೆಯಾಗಿದೆ:

> ಓ ಸತ್ಯವಿಶ್ವಾಸಿಗಳೇ, ನಿಮ್ಮಲ್ಲಿ ಯಾರಿಗಾದರೂ ಮರಣವು ಸಮೀಪಿಸಿದರೆ, ಅವನ ಉಯಿಲನ್ನು ಬರೆಯಲು, ನಿಮ್ಮಲ್ಲಿ ಇಬ್ಬರು ನ್ಯಾಯವಂತರು ಸಾಕ್ಷಿಗಳಾಗಿ ಹಾಜರಿರಬೇಕು. ಅಥವಾ ಭೂಮಿಯ ಮೇಲೆ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ, ನಿಮ್ಮ ಜೀವನಕ್ಕೆ ಒಂದು ಹಠಾತ್ ಅಪಾಯವೆರಗಿದರೆ, ಅಪರಿಚಿತ ವ್ಯಕ್ತಿಗಳೂ ಆಗಬಹುದು. ಆದರೆ, ನೀವು ಅವರ ಬಗ್ಗೆ ಖಚಿತತೆ ಇಲ್ಲದಿದ್ದರೆ, ಅಲ್ಲಾಹನ ಪ್ರತಿಜ್ಞೆಯೊಂದಿಗೆ, "ಹತ್ತಿರದ ಸಂಬಂಧಿಗಳೂ ಸೇರಿದಂತೆ ಯಾರ ಪರವನ್ನು ವಹಿಸುವ ದುರುಪಯೋಗವನ್ನು ಮಾಡಲಾರೆವು, ಯಾವುದೇ ಪುರಾವೆಗಳನ್ನು ಮುಚ್ಚಿಡಲಾರೆವು. ಹಾಗೆ ಮಾಡಿದರೆ, ನಾವೇ ದೋಷಗಾರರು" ಎಂದು ಹೇಳಲು ಅವರಿಬ್ಬರೂ ಬದ್ಧರಾದರೆ *(ಸ್ವಲಾತ್)* ಅವರನ್ನು ನಿಲ್ಲಿಸಿಕೊಳ್ಳಬಹುದು.[41] (5:106)

ಈ ವಚನವು ಹೇಳುತ್ತದೆ: *ಇಬ್ಬರು ಅಪರಿಚಿತರು* [ಗಮನಿಸಿ: ಅವರು ಯಹೂದಿಗಳೂ ಅಥವಾ ಕ್ರೈಸ್ತರೂ ಆಗಿರಬಹುದು] *ಬದ್ಧರಾದ ನಂತರ (ಸ್ವಲಾತ್) ಇಬ್ಬರೂ ಅಲ್ಲಾಹನ ಮುಂದೆ ಪ್ರತಿಜ್ಞೆ ಮಾಡಲಿ.* ಇಲ್ಲಿ ಸಾಯುತ್ತಿರುವವನ ಹಾಜರಿಯಲ್ಲಿ ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸಲು ಹೇಳಿರುವುದಲ್ಲ. ಬದಲಾಗಿ, ಅವರು ಅಲ್ಲಾಹನ ಮುಂದೆ ಆ ವ್ಯಕ್ತಿಗೆ ಒಂದು ಪ್ರಾಮಾಣಿಕ ವಾಗ್ದಾನವನ್ನು ಕೊಡುವ ಮೂಲಕ ಅವನ ಉಯಿಲಿಗೆ

[41] ಇವರಿಬ್ಬರೂ, ಸಾಯುತ್ತಿರುವ ವ್ಯಕ್ತಿಗೆ ಅಪರಿಚಿತರಾಗಿದ್ದಾರೆ, ಆದರೂ ಈ ವಚನವು ಅವರು ದೇವನ ಮುಂದೆ ಪ್ರಮಾಣ ಮಾಡಲು ಅರ್ಹತೆ ಕೊಡುತ್ತದೆ. ಉಯಿಲನ್ನು ಬರೆಯುವ ಹಾಗೂ ಸಾಕ್ಷಿಯಾಗುವ ಅವರ ಇಚ್ಛೆಯು ಅವರ ಬದ್ಧತೆ (ಸ್ವಲಾತಿ) ಆಗಿದೆ.
ಯಹೂದಿಗಳ ಹಾಗೆ, ಅರಬೀ ಧಾರ್ಮಿಕರು ಅವರ ಅನುಯಾಯಿಗಳಿಂದ ಈ ವಚನವನ್ನು ಅಡಗಿಸಿದ್ದಾರೆ.

ಸಾಕ್ಷಿಗಳಾಗುವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಾಗಿದೆ. ಇದು ಜನರ ನಡುವೆ ಇರುವ ಸ್ವಲಾತಿನ ಒಂದು ಉದಾಹರಣೆಯಾಗಿದೆ.

ಜನರ ನಡುವೆ ಬದ್ಧತೆಯೆಂದರೆ, ಏಕದೇವನ ಮುಂದೆ ಇಂತಹ ಅನಿವಾರ್ಯತೆಗಳನ್ನು ಪೂರೈಸುವುದಾಗಿದೆ. ಇದು ಇಷ್ಟೇ ಸರಳವಾಗಿದೆ.

ಕೇವಲ ಅಪರಿಚಿತರ ಜೊತೆಗೆ ಅಲ್ಲದೇ, ಅವಿಶ್ವಾಸಿಗಳೊಂದಿಗೂ, ಮೂರ್ತಿಪೂಜಕರೊಂದಿಗೂ ಸಹ ವಿಶ್ವಾಸಿಗಳು ಸ್ವಲಾತನ್ನು ಎತ್ತಿಹಿಡಿಯಬಹುದು. ನಿಶ್ಚಯವಾಗಿ, ಈ ಕೆಳಗಿನ ವಚನವೃಂದವು ಬಹುದೇವಾರಾಧಕರಿಗೆ ವಿಧ್ಯುಕ್ತ ಪ್ರಾರ್ಥನೆಗಳ ಸಲಹೆ ನೀಡುವ ಉದ್ದೇಶವನ್ನು ಹೊಂದಿಲ್ಲ:

> ಮೂರ್ತಿ ಆರಾಧಕರಲ್ಲಿ ನಿಮ್ಮೊಂದಿಗೆ ಒಪ್ಪಂದವಿರುವವರು ಮತ್ತು ಅವುಗಳಲ್ಲಿ ಯಾವುದನ್ನೂ ಉಲ್ಲಂಘನೆ ಮಾಡದವರು ಮತ್ತು ನಿಮ್ಮ ವಿರುದ್ಧವಾಗಿ ಯಾರಿಗೂ ಸಹಾಯ ಮಾಡದವರನ್ನು ಹೊರತು ಪಡಿಸಿ, ಅಂತಹವರೊಂದಿಗೆ ನಿಮ್ಮ ಒಪ್ಪಂದವನ್ನು ಅದರ ಅವಧಿಯ ತನಕ ಪೂರ್ಣಗೊಳಿಸಿರಿ. ನಿಶ್ಚಯವಾಗಿಯೂ, ಅಲ್ಲಾಹನು (ತನನ್ನು) ಭಯಪಡುವವರನ್ನು ಪ್ರೀತಿಸುತ್ತಾನೆ. (9:4)
>
> ಒಮ್ಮೆ ನಿರ್ಬಂಧಿತ ತಿಂಗಳುಗಳು ಗತಿಸಿದರೆ, ನೀವು ಮೂರ್ತಿ ಆರಾಧಕರ ಎದುರು ಬಿದ್ದಾಗಲೆಲ್ಲಾ ಅವರನ್ನು ಪ್ರತಿಭಟಿಸಿರಿ, ತಳಮಳಗೊಳಿಸಿರಿ, ಉದ್ರೇಕಿಸಿರಿ ಮತ್ತು ಅವರ ಮೇಲೆ ಒಂದು ದೃಷ್ಟಿಯನ್ನಿಡಿರಿ. ಆದಾಗ್ಯೂ, ಅವರು ಪಶ್ಚಾತ್ತಾಪ ಪಟ್ಟರೆ ಮತ್ತು ತಮ್ಮ ಬದ್ಧತೆಗಳನ್ನು ಪಾಲಿಸಿದರೆ ಮತ್ತು ಅವುಗಳನ್ನು ಶುದ್ಧವಾಗಿರಿಸಿದರೆ *(ಅಖಾಮು-ಸ್ವಲಾತ ವ ಆತವು-ಝ್ಝಕಾತ)*, ನೀವು ಅವರನ್ನು ಕ್ಷಮಿಸಬೇಕು. ಅಲ್ಲಾಹನು ಕ್ಷಮಾಶೀಲನೂ ಮತ್ತು ಕರುಣಾಮಯನೂ ಆಗಿದ್ದಾನೆ. (9:5)
>
> ಇನ್ನು ಮೂರ್ತಿ ಆರಾಧಕರಲ್ಲಿ ಯಾರಾದರೊಬ್ಬನು ನಿಮ್ಮಲ್ಲಿ ಸಹಾಯ ಯಾಚಿಸಿದರೆ, ಅವನನ್ನು ರಕ್ಷಿಸಿರಿ, ನಂತರ ಅವನಿಗೆ ಅಲ್ಲಾಹನ ಪದಗಳನ್ನು ಕೇಳಲು ಅವಕಾಶ ನೀಡಿರಿ, ನಂತರ ಅವನಿಗೆ ಸುರಕ್ಷಿತವಾದ ತಾಣವನ್ನು ಒದಗಿಸಿರಿ. ಏಕೆಂದರೆ, ಅವರು ಏನೂ ತಿಳಿದಿರದ ಜನರಾಗಿದ್ದಾರೆ. (9:6)

9:4-6 ರಲ್ಲಿ ಮೂರ್ತಿ ಆರಾಧಕರನ್ನು ಉತ್ತಮ ರೀತಿಯಲ್ಲಿ ಆದರಿಸಲು ಹಾಗೂ ಅವರನ್ನು ಸುರಕ್ಷಿತವಾದ ಸ್ಥಳಕ್ಕೆ ಮುಟ್ಟಿಸಲು ನಮಗೆ ನಿರ್ದೇಶಿಸಲಾಗಿದೆ. ಅಂತಹ ರಕ್ಷಣೆ ಕೋರಿ ಬರುವವರು, ಅವರು ಇಚ್ಛಿಸಿದರೆ *ಮೂರ್ತಿ ಆರಾಧಕರಾಗಿಯೇ ಉಳಿಯಬಹುದು.* ಪೂರ್ವಕಲ್ಪಿತ ಅಭಿಪ್ರಾಯದ ಆಧಾರದ ಮೇಲೆ ಪಕ್ಷಪಾತ ಮಾಡಬಾರದೆಂಬುವುದನ್ನು ನಮಗೆ ಸಾರಲಾಗಿದೆ. ಬದಲಿಗೆ, ನಾವು ಉಜ್ವಲತೆಯ ಮತ್ತು ಕರುಣೆಯದ ಒಂದು ಸಂಕೇತವಾಗಿರಲು ನಮಗೆ ಆದೇಶಿಸಲಾಗಿದೆ. ಕೇವಲ ಈ ವಚನವನ್ನು ಅರ್ಥೈಸಿಕೊಂಡು, ಈ ಅಪ್ಪಣೆಯನ್ನು ಕಾರ್ಯರೂಪಗಳಿಸಿದರೆ ಸಾಕು, ನಾವು ತಿಳಿದಿರುವ ಇಸ್ಲಾಮಿನ ದೃಶ್ಯವೇ ಸಂಪೂರ್ಣವಾಗಿ ಬದಲಾಗುವುದು.

ಮೂರ್ತಿ ಆರಾಧಕರು ಪಶ್ಚಾತ್ತಾಪ ಪಟ್ಟು, ಶಾಂತಿಗೆ ಒಪ್ಪಿಕೊಂಡರೆ, ಆ ಶಾಂತಿಯನ್ನು ಎತ್ತಿಹಿಡಿದು ಅವರಿಗೆ ಸ್ವಾತಂತ್ರ್ಯವನ್ನು ನೀಡುವುದು, ಮುಸ್ಲಿಮರ ಅಥವಾ ಶಾಂತಿವಂತರ ಕರ್ತವ್ಯವಾಗಿದೆ ಎಂದು ನಾವು ಮನಗಾಣುತ್ತೇವೆ. ಪ್ರತಿಕೂಲಾವಸ್ಥೆಯಲ್ಲೂ ಕೂಡ, ಕುರ್‌ಆನ್ ಮತ್ತೊಮ್ಮೆ ಸೌಜನ್ಯ ಮತ್ತು ದಯೆಯನ್ನು ಆಜ್ಞಾಪಿಸುತ್ತದೆ. ನಮ್ಮ ಅಧಿಕಾರದಲ್ಲಿ ಅಥವಾ ಹತೋಟಿಯಲ್ಲಿ ಇರುವವರೊಂದಿಗೂ ಅಯೋಗ್ಯವಾದ ವರ್ತನೆಯನ್ನು ಇಸ್ಲಾಂ ಕ್ಷಮಿಸುವುದಿಲ್ಲ (9:5). ಅಂತಿಮವಾಗಿ, ಈ ಸನ್ನಿವೇಶದಲ್ಲಿ, ಸ್ವಲಾತ್ ಎಂದರೆ, ಮೂರ್ತಿಪೂಜಕರು ಒಪ್ಪಂದದ ತಮ್ಮ ಭಾಗವವನ್ನು 'ಅನುಸರಿಸಲು ಒಪ್ಪಿಕೊಳ್ಳುವುದು' ಎಂದಾಗಿದೆ.

ಸ್ವಲಾತ್ ಪದವು, 'ಬದ್ಧತೆಗಳನ್ನು' ಸ್ಪಷ್ಟವಾಗಿ ಸೂಚಿಸುವಂತಹ ಮತ್ತೊಂದು ಉದಾಹರಣೆಯನ್ನು ಪ್ರವಾದಿ ಶುಐಬರು ನೀಡುತ್ತಾರೆ. ಅವರು ತನ್ನ ಜನರನ್ನು ಸುಧಾರಿಸಲು ತಮ್ಮನ್ನು ಬದ್ಧರಾಗಿಸಿದ್ದರು. ಅವರ ಬದ್ಧತೆಗಳನ್ನು ತಿರಸ್ಕರಿಸಿದವರು ಅವರೊಂದಿಗೆ ಪಣತೊಟ್ಟರು.

ಶುಐಬರು ಆರಂಭಿಸುತ್ತಾರೆ:

> "ಓ ನನ್ನ ಜನರೇ! (ವ್ಯಾಪಾರದಲ್ಲಿ) ನ್ಯಾಯದೊಂದಿಗೆ ಪೂರ್ತಿಯಾಗಿ ಅಳತೆ ಮತ್ತು ತೂಕವನ್ನು ಮಾಡಿಕೊಡಿರಿ. ಜನರಿಗೆ ಅವರ ವಸ್ತುಗಳನ್ನು ಕಡಿಮೆ ಮಾಡಕೊಡಬೇಡಿರಿ, ಮತ್ತು ಭೂಮಿಯ ಮೇಲೆ ಭ್ರಷ್ಟತೆಯನ್ನು ಹರಡುತ್ತಾ ನಡೆಯಬೇಡಿರಿ. ನೀವು ವಿಶ್ವಾಸಿಗಳಾಗಿರುವಿರಾದರೆ, ಅಲ್ಲಾಹನು ನೀಡುವ ಸಣ್ಣ ಅನುಗ್ರಹವೇ ನಿಮಗೆ ಉತ್ತಮವಾಗಿದೆ. ಅಂತು ನಾನೇನು ನಿಮ್ಮ ಕಾವಲುಗಾರನಲ್ಲ. ಅವರು ಉತ್ತರಿಸಿದರು, "ಓ ಶುಐಬ್, ನಮ್ಮ ಪೂರ್ವಿಕರು ಮೂರ್ತೀಕರಿಸುತ್ತಿದ್ದನ್ನು ಆರಾಧಿಸದಂತೆ, ನಮ್ಮ ಹಣವನ್ನು ನಮಗೆ ಬೇಕಾದಂತೆ ಬಳಸದಂತೆ, ನಿಮ್ಮ *ಸ್ವಲಾತ್* (ಬದ್ಧತೆಯು) ನಮ್ಮನ್ನು ತಡೆಯುತ್ತದೆಯೇ? ನಿಶ್ಚಯವಾಗಿಯೂ, ನೀನು ಮಿತಿಮೀರಿದಂತಹ ಮೃದು ಸ್ವಭಾವಿಯೂ, ಜ್ಞಾನಿಯೂ ಆಗಿರುವೆ." (11:85-87)

ಶುಐಬರು ತನ್ನ ಜನರ ಮೇಲೆ ನಿರ್ಬಂಧಿಸಲು ಶ್ರಮಿಸುತ್ತಿದ್ದ ಬದ್ಧತೆಯು, ಅವರು ಮೋಸ ಮಾಡಬಾರದು ಹಾಗೂ ಭೂಮಿಯಲ್ಲಿ ಭ್ರಷ್ಟತೆಯನ್ನು ಹರಡಬಾರದೆಂದಾಗಿತ್ತು. ಇದೊಂದು ಸರಳ ನಿಯಮವಾಗಿತ್ತು ಆದರೂ ಅವರ ಜನರು ಅದನ್ನು ಸ್ವೀಕರಿಸಲಿಲ್ಲ. ಆದ್ದರಿಂದ, ಅವರು ಶುಐಬರಿಗೆ ಹೇಳಿದರು:

> "ಓ ಶುಐಬ್, ನಮ್ಮ ಪೂರ್ವಿಕರು ಮೂರ್ತೀಕರಿಸುತ್ತಿದ್ದನ್ನು ಆರಾಧಿಸದಂತೆ, ನಮ್ಮ ಹಣವನ್ನು ನಮಗೆ ಬೇಕಾದಂತೆ ಬಳಸದಂತೆ, ನಿಮ್ಮ *ಸ್ವಲಾತ್* (ಬದ್ಧತೆಯು) ನಮ್ಮನ್ನು ತಡೆಯುತ್ತದೆಯೇ?[42]

ಇಲ್ಲಿ ಸ್ವಲಾತ್ ಎಂಬುವುದು ಸ್ಪಷ್ಟವಾಗಿ 'ಉತ್ತಮ ಕಾರ್ಯಗಳಿಗೆ ಬದ್ಧರಾಗುವ ಮತ್ತು ಒಂದು ಒಳ್ಳೆಯ ನೈತಿಕ ವ್ಯವಸ್ಥೆಯನ್ನು ಎತ್ತಿಹಿಡಿಯುವುದನ್ನು' ಸೂಚಿಸುತ್ತದೆ. ಜನರಿಗೆ ನಿರ್ಬಂಧಿಸಲಾದ ಬದ್ಧತೆಯು, ಭೂಮಿಯ

[42] ಇಲ್ಲಿ ಸ್ವಲಾತ್ ಎಂದರೆ ವಿಧ್ಯುಕ್ತ ಪ್ರಾರ್ಥನೆಯಲ್ಲ ಎಂದು ಸ್ಪಷ್ಟವಾಗಿದೆ.

ಮೇಲೆ ಭ್ರಷ್ಟತೆಯನ್ನು ಹರಡದೇ ಇರುವುದು, ಮೋಸ ಮಾಡದೇ ಇರುವುದು ಮತ್ತು ನಿಷ್ಪಕ್ಷವಾಗಿರುವುದು ಆಗಿತ್ತು. ನಂಬಿಕೆಯ ವಿಷಯವನ್ನು ಹೊರತು ಪಡಿಸಿ, ಈ ಪಠ್ಯದ ಸಾರಾಂಶವನ್ನು ದುರುಪಯೋಗಪಡಿಸದೇ, ಅದರಿಂದ ಬೇರೆ ಯಾವುದೇ ರೀತಿಯ ಸೂಚನೆಯನ್ನು ಪಡೆಯಲು ಸಾಧ್ಯವಿಲ್ಲ.

ಹೀಗಾಗಿ, ಅರಬೀ ಪುರೋಹಿತರು, ಕುರ್‌ಆನಿನಲ್ಲಿ ದೈನಂದಿನ ಐದು ವಿಧ್ಯುಕ್ತ ಪ್ರಾರ್ಥನೆಗಳ ಬಗ್ಗೆ ಯಾವುದೇ ಮಾಹಿತಿಯು ಇಲ್ಲ ಎಂದು ಕಡಾಖಂಡಿತವಾಗಿ ಘೋಷಿಸುವುದು ಏಕೆ, ಎಂದು ಸ್ಪಷ್ಟವಾಗಿ ತಿಳಿಯುತ್ತದೆ (ಹೀಗಿರುವಾಗ, ಅವರು ಅದನ್ನು ಇಸ್ಲಾಂ ಧರ್ಮದ ಮೊದಲ ನಿರಂಕುಶ ಕಂಬ ಎಂದು ಸಾರುವುದು ಅನನ್ವಯವಾಗುತ್ತದೆ). ಅವರು ಹೇಳುವುದು ಸರಿಯಾಗಿದೆ! ಅವರ ಸ್ವಂತ ತುಟಿಗಳೇ ಅವರನ್ನು ಖಂಡಿಸುತ್ತವೆ. ದೈನಂದಿನ ಐದು ಪ್ರಾರ್ಥನೆಗಳೆಂಬ ವಿಷಯವೇ ಇಲ್ಲ. ಒಂದೇ ಸಮಯದಲ್ಲಿ ಅವರು ಸರಿಯಾಗಿಯೂ, ತಪ್ಪಾಗಿಯೂ ಇರುವುದು ಎಷ್ಟು ಶೋಚನೀಯವಾಗಿದೆ.

ಸ್ವಂತಕ್ಕೆ ಸ್ವಲಾತ್

ನಮ್ಮ ಸ್ವಂತದ ಒಳಿತಿಗಾಗಿ ನಮ್ಮಿಂದಲೇ ಪಾಲಿಸಬೇಕಾದ ಸ್ವಲಾತ್, ಕುರ್‌ಆನಿನ ಇನ್ನೊಂದು ಸ್ಪಷ್ಟ ಉದಾಹರಣೆಯಾಗಿದೆ. ಈ ಸಂದರ್ಭದಲ್ಲಿ ನಾವು ವಿಪರೀತ ಲಾಭಬಡುಕತನದ ಅಭ್ಯಾಸದಿಂದ ದೂರವಿರುವ ಮೂಲಕ ಉತ್ತಮ ಮೌಲ್ಯಗಳಿಗೆ ಬದ್ಧರಾಗಿರಲು ಹೇಳಲಾಗಿದೆ.

> ಅಲ್ಲಾಹನು ಲಾಭಬಡುಕತನವನ್ನು (ರಿಬಾ) ಕುಂದಿಸುತ್ತಾನೆ ಆದರೆ ದಾನವನ್ನು ಪ್ರೋತ್ಸಾಹಿಸುತ್ತಾನೆ ಮತ್ತು ಅಲ್ಲಾಹನು ಅಪರಾಧಿಯಾದ ಅವಿಶ್ವಾಸಿಯನ್ನು ಇಷ್ಟಪಡುವುದಿಲ್ಲ. ನಿಶ್ಚಯವಾಗಿಯೂ, ಪ್ರಾಮಾಣಿಕತೆಯನ್ನು ಪಾಲಿಸುವವರು, ಬದ್ಧತೆಗಳನ್ನು ಎತ್ತಿಹಿಡಿಯುವವರು ಹಾಗೂ ಅವುಗಳನ್ನು ನಿಷ್ಕಳಂಕವಾಗಿರಿಸುವವರಿಗೆ ಅವರ ಪ್ರತಿಫಲವು ಅವರ ಪ್ರಭುವಿನಿಂದಾಗಿದೆ. ಅವರಿಗೆ ಯಾವುದೇ ಭಯವೂ ವ್ಯಥೆಯೂ ಇರಲಾರದು. ಓ ವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ. ನೀವು ನಿಜವಾಗಿಯೂ ಅಲ್ಲಾಹನ ವಿಶ್ವಾಸಿಗಳಾಗಿದ್ದರೆ, ಲಾಭಬಡುಕತನದಿಂದ (ಏನಾದರೂ) ಬಾಕಿ ಉಳಿದಿದ್ದರೆ ಅದನ್ನು ಹಿಂದಕ್ಕೆ ಪಡೆದುಕೊಳ್ಳಬೇಡಿರಿ. (2:276-278)

ರಿಬಾ[43] (ಅಥವಾ ಲಾಭಬಡುಕತನ)ದ ವಿಷಯವು 2:275 ರಿಂದ ಆರಂಭಗೊಳ್ಳುತ್ತದೆ ಮತ್ತು 2:281 ರಲ್ಲಿ ಕೊನೆಗೊಳ್ಳುತ್ತದೆ. ಲಾಭಬಡುಕತನವು ನಿಷೇಧಿಸಲ್ಪಟ್ಟ ಅಭ್ಯಾಸವಾಗಿದೆ ಮತ್ತು ಅದರಲ್ಲಿ ನಮ್ಮನ್ನು ತೊಡಗಿಸಿಕೊಳ್ಳದಂತೆ ಆಜ್ಞಾಪಿಸಲಾಗಿದೆ. ಅಲ್ಲಾಹನು ಲಾಭಬಡುಕತನವನ್ನು ಹೀನೈಸುತ್ತಾನೆ ಮತ್ತು ದಾನವನ್ನು ಪ್ರೋತ್ಸಾಹಿಸುತ್ತಾನೆ ಮತ್ತು ಅಲ್ಲಾಹನು ಅಪರಾಧಿಯಾದ ಅವಿಶ್ವಾಸಿಯನ್ನು ಇಷ್ಟಪಡುವುದಿಲ್ಲ (2:276). ಬದಲಿಗೆ, ಬದ್ಧತೆಗಳನ್ನು ಪಾಲಿಸಲು ಮತ್ತು ಶುದ್ಧವಾಗಿಡಲು ಅವನು ಸದ್ಗುಣಶೀಲರಿಗೆ ಆಜ್ಞಾಪಿಸುತ್ತಾನೆ (2:277). ಇನ್ನು ಪಡೆಯಬೇಕಿದ್ದ ಯಾವುದೇ ಬಾಕಿಗಳಿದ್ದರೂ ಸರಿ, ಲಾಭಬಡುಕತನದಲ್ಲಿ ಯಾವುದೇ ಭಾಗವಹಿಸುವಿಕೆಯನ್ನು ತಕ್ಷಣವೇ ನಿಲ್ಲಿಸಬೇಕು (2:278). ಒಂದು ವೇಳೆ ಹಾಗೆ ಮಾಡದಿದ್ದರೆ, ಅಲ್ಲಾಹನು ಹಾಗೂ ಸಂದೇಶವಾಹಕರು ಯುದ್ಧವನ್ನು ಸಾರುತ್ತಾರೆ (2:279). ಸಾಲಗಾರನು ಕಷ್ಟದಲ್ಲಿದ್ದರೆ, ಅವನಿಗೆ ಸಮಯಾವಕಾಶವನ್ನು ಕೊಡಬೇಕು ಅಥವಾ (ಸಾಧ್ಯವಿದ್ದರೆ) ಸಾಲವನ್ನು ದಾನವನ್ನಾಗಿ ಪರಿಗಣಿಸಬೇಕು (2:280). ನಾವು ಮಾಡುವುದೆಲ್ಲವನ್ನೂ ಅಲ್ಲಾಹನು ಅರಿಯುತ್ತಾನೆ ಹಾಗೂ ನಾವು ಕೊನೆಯ ದಿನದ ಬಗ್ಗೆ ಜಾಗೃತರಾಗಿರಬೇಕು (2:281).

2:277 ರಲ್ಲಿ ಉಲ್ಲೇಖಿಸಿರುವ ಸ್ವಲಾತ್, ಲಾಭಬಡುಕತನದ (ರಿಬಾ) ಮೂಲಕ ಆದಾಯವನ್ನು ಗಳಿಸುವುದನ್ನು ನಿಲ್ಲಿಸಲು ನಾವು ಬದ್ಧರಾಗುವುದು ಮತ್ತು ಅಂತಹ ಪದ್ಧತಿಗಳಿಂದ ದೂರವಿರುವ ಮೂಲಕ ನಮ್ಮ ಬದ್ಧತೆಯನ್ನು ನಿರ್ವಹಿಸುವುದಾಗಿದೆ. ನಾವು ಲಾಭಬಡುಕತನದ ದೂರವಿರಲು ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸುವುದಿಲ್ಲ; ಬದಲಿಗೆ ನಾವು ಅಲ್ಲಾಹನು ನಿಗದಿ ಪಡಿಸಿರುವ ಪ್ರಾಯೋಗಿಕ ಹಾಗೂ ಉತ್ತಮ ಕಾರ್ಯಗಳನ್ನು ಮಾಡುವ ಮೂಲಕ, ನಮ್ಮ ದುರಾಶೆಯನ್ನು ತ್ಯಾಗಮಾಡುವುದರ ಮೂಲಕ, ನಮ್ಮನ್ನು ಪ್ರತಿಬದ್ಧರನ್ನಾಗಿಸುವುದು (ಸ್ವಲಾತ) ಮತ್ತು ನಮಗಾಗಿಯೇ ನಮ್ಮ ಬದ್ಧತೆಗಳನ್ನು ಪೂರೈಸುವುದು ಆಗಿದೆ.

'ವ ಅಖಾಮ-ಸ್ವಲಾತ ವಆತವು-ಝ್ಝಕಾತ' ಅಥವಾ ಬದ್ಧತೆಗಳನ್ನು ಪಾಲಿಸುವವರು ಮತ್ತು ಅವುಗಳನ್ನು ಪರಿಶುದ್ಧವಾಗಿ ಇಡುವವರು, ಎಂಬ ನುಡಿಗಟ್ಟು ಲಾಭಬಡುಕತನದ ವಿಷಯದ ಮಧ್ಯದಲ್ಲಿ ಕಾಣಿಸಿಕೊಂಡಿದೆ.

[43] ಕೆಲವು ಮೂರ್ಖ ವಿದ್ವಾಂಸರು, ಬ್ಯಾಂಕ್ ಬಡ್ಡಿಯನ್ನು *ರಿಬಾ* ಎಂದು ಹೇಳುತ್ತಾರೆ. ಅವರು ಇಸ್ಲಾಮಿಕ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ರಚಿಸಿದರು ಮತ್ತು ಇತರ ವಾಣಿಜ್ಯ ಬ್ಯಾಂಕುಗಳ ಹಾಗೆ ಸಾಲಕೊಡುವಿಕೆಯ ಅದೇ ವಿಧಾನವನ್ನು ಬಳಸಿದರು. ವಾಸ್ತವವಾಗಿ ಅವರು ಮಾಡಿರುವುದು - ಅವರ ಎಲ್ಲಾ ವ್ಯವಹಾರಗಳಿಗೆ ಅರಬೀ ಪದವನ್ನು ಬಳಸಿ, ಅದನ್ನು ಇಸ್ಲಾಮಿಕ್ ಎಂದು ಕರೆದರು ಅಷ್ಟೆ. ಇಂದು ಅನೇಕ ವಾಣಿಜ್ಯ ಬ್ಯಾಂಕುಗಳು ಈ ವ್ಯವಸ್ಥೆಯ ಮೂಲಕ ಹೆಚ್ಚು ಬಡ್ಡಿಯನ್ನು ಗಳಿಸುತ್ತಿದ್ದಾರೆ ಹಾಗೂ ಅರೆಬಿಕ್'ನಲ್ಲಿ ಹಣದ ಸಾಲ ಪಡೆಯಲು ಇಚ್ಛಿಸುವ ತಮ್ಮ ಮುಸ್ಲಿಮ್ ಗ್ರಾಹಕರಿಗಾಗಿ, ವಿಶೇಷ ಸೇವಾ ಘಟಕಗಳನ್ನು ಪ್ರಾರಂಭಿಸಿದ್ದಾರೆ. ಮೂರ್ಖರಿಗೆ ಅರಬಿಕ್ ಎಂದರೆ ಇಸ್ಲಾಮಿಕ್ ಎಂದರ್ಥವಾಗಿದೆ.

ಸ್ವಲಾತ್ ಎಂಬುವುದು ಕ್ರಿಯೆಗಳನ್ನು ಮಾಡುವುದರ ಬಗ್ಗೆಯಾಗಿದೆ

ಓರ್ವ ವ್ಯಕ್ತಿಯು ಮಾಡುವುದೆಲ್ಲವೂ ಅಲ್ಲಾಹನಿಗಾಗಿರಬೇಕು. ಯಾವುದೇ ಕ್ರಿಯಾವಿಧಗಳ ಅನುಷ್ಠಾನವನ್ನು, ಧಾರ್ಮಿಕ ಸಂಸ್ಕಾರಗಳನ್ನು ಮಾಡಲು, ಅವನನ್ನು ಪ್ರಾರ್ಥಿಸಲು, ಅವನನ್ನು ಆರಾಧಿಸಲು ನಮಗೆ ಹೇಳಲಾಗಲಿಲ್ಲ. ನಮಗೆ ನಿರ್ದೇಶಿಸಿಲಾಗಿರುವುದು ಬರೇ, ಅಲ್ಲಾಹನ ಮೇಲೆ ವಿಶ್ವಾಸವಿರುಸುವುದು, ನಮ್ಮ ಬದ್ಧತೆಗಳನ್ನು ಎತ್ತಿಹಿಡಿಯುತ್ತಾ ಅವನನ್ನು ಪ್ರಾಮಾಣಿಕವಾಗಿ ಸೇವೆ ಮಾಡುವುದು ಮತ್ತು ಉತ್ತಮ ಕೆಲಸಗಳನ್ನು ಮಾಡುವುದು ಆಗಿದೆ. ವಿಧ್ಯುಕ್ತ ಪ್ರಾರ್ಥನೆಗಳು, ಆರಾಧನೆಗಳು ಎಂಬುವುದು, ಅಲ್ಲಾಹನ ಪರವಾಗಿ ತಮ್ಮ ಜವಾಬ್ದಾರಿಗಳನ್ನು ತೀರಿಸಿದೆವು ಎಂಬ ತೃಪ್ತಿಕರ ಭಾವನೆಯನ್ನು ಮಾರ್ತಿ ಆರಾಧಕರಿಗೆ ನೀಡುವ ಸಲುವಾಗಿ, ಅನಾಚಾರಿಗಳಿಂದ ರಚಿಸಲ್ಪಟ್ಟ ಒಳದಾರಿ (ಶಾರ್ಟ್-ಕಟ್) ಆಗಿದೆ. ಆದರೆ ಅವರು ನಿಜವಾಗಿ ಮಾಡಬೇಕಾಗಿರುವುದು, ಇತರ ಜನರೊಂದಿಗೆ ಮತ್ತು ತಮ್ಮೊಳಗೆ, ತಮ್ಮ ಸ್ವಲಾತನ್ನು ನಿರ್ವಹಿಸುವುದಾಗಿದೆ.

ಕುರ್‌ಆನಿನ ಪ್ರಕಾರ, ಇಬ್ರಾಹೀಮರಿಗೂ, ಮೂಸಾರಿಗೂ ಅವತೀರ್ಣಗೊಂಡ ಸಂದೇಶದ ಮುಖ್ಯ ಸಾರಾಂಶವು ಹೀಗಿದೆ:

> ಹೊರೆಯನ್ನು ಹೊರುವ ಯಾವುದೇ ಆತ್ಮವು ಇನ್ನೊಂದರ ಹೊರೆಯನ್ನು ಹೊರಲಾರದು ಮತ್ತು ಪ್ರತಿ ವ್ಯಕ್ತಿಯು ಅವನ ಅಥವಾ ಅವಳ ಕರ್ಮಗಳಿಗೆ ಹೊಣೆಗಾರರಾಗಿದ್ದಾರೆ. ಅವರ ಪ್ರತಿಯೊಂದು ಕ್ರಿಯೆಯನ್ನು ವೀಕ್ಷಿಸಲಾಗುತ್ತಿದೆ ಮತ್ತು ಅವರು ಸಂಪೂರ್ಣವಾಗಿ ಮರುಪಾವತಿಸಲ್ಪಡುವರು. (53:36-41)

ಅಂದರೆ, ಪ್ರತಿಯೊಂದು ಸೂಕ್ಷ್ಮ ಚಿಂತನೆಯೂ ಮತ್ತು ಕ್ರಿಯೆಯೂ ಗಣನೆಗೆ ತೆಗೆದುಕೊಳ್ಳಲಾಗುತ್ತದೆ ಮತ್ತು ದಾಖಲಿಸಲಾಗುತ್ತದೆ. ಅಲ್ಲಾಹನು ತನ್ನ ಸೇವಕರ ಪ್ರತಿಯೊಂದು ಕ್ರಿಯೆಗಳನ್ನು ದಾಖಲಿಸಿಕೊಳ್ಳುತ್ತಿದ್ದಾನೆಯೇ ಹೊರತು ವ್ಯವಸ್ಥಿತವಾದ ಗೊಣಗಾಟಿಕೆಯನ್ನಲ್ಲ.

> ಮಾನವನನ್ನು ಸೃಷ್ಟಿಸಿರುವುದು ನಾವೇ ಆಗಿರುವ ಕಾರಣ, ಅವನ ಅಂತರಾಳದ ಚಿಂತನೆಗಳನ್ನು ಸಂಪೂರ್ಣವಾಗಿ ನಾವು ಅರಿಯುತ್ತೇವೆ. ನಾವು ಅವನ ಕಂಠನಾಡಿಗಿಂತಲೂ ಹೆಚ್ಚು ಸನಿಹದಲ್ಲಿದ್ದೇವೆ. ಅವನ ಬಲಗಡೆ ಮತ್ತು ಎಡಗಡೆಯಲ್ಲಿ ಎರಡು ದಾಖಲೆಗಾರರು ಅವನ ಎಲ್ಲಾ ಕರ್ಮಗಳನ್ನು ದಾಖಲಿಸುತ್ತಾರೆ. ಅವನ ಯಾವುದೇ ಒಂದು ಉಚ್ಚರಣೆಯು ಸಹ, ಸನ್ನದ್ಧನಾಗಿರುವ ಒಬ್ಬ ಕಾವಲುಗಾರನಿಂದ ದಾಖಲಿಸಲ್ಪಡದೇ ಇರುವುದಿಲ್ಲ. (50:16-18)

ಅಲ್ಲಾಹನು ಸರ್ವವ್ಯಾಪಿಯಾಗಿದ್ದಾನೆಂದೂ, ದಿನಕ್ಕೆ ಇಪ್ಪತ್ತನಾಲ್ಕು ಗಂಟೆಯೂ ಪ್ರತಿಯೊಬ್ಬನೊಂದಿಗೆ ಸಾರ್ವಕಾಲಿಕವಾಗಿ ಇರುತ್ತಾನೆಂದೂ ಹೆಚ್ಚಿನ ಜನರು ನಂಬುವುದಿಲ್ಲ. ಅಂತೂ, ಅವನ ಅಂತರಾಳದ

ಚಿಂತನೆಯನ್ನು ಸೇರಿದಂತೆ, ಪ್ರತಿಯೊಬ್ಬನು ಮಾಡುವ ಪ್ರತಿಯೊಂದನ್ನು ಅವನು ಅರಿಯುತ್ತಾನೆ. ಯಾವುದೇ ವ್ಯಕ್ತಿಯು ಸರ್ವಶಕ್ತನಿಂದ ಯಾವುದನ್ನು ಮರೆಮಾಚಲು ಸಾಧ್ಯವಿಲ್ಲ. ಎಲ್ಲವೂ ದಾಖಲಿಸಲಾಗುತ್ತಿದೆ. ನಾವು ಮಾಡಿರುವಂತಹ ಕರ್ಮಗಳ ದಾಖಲೆಯನ್ನು ಓದಲು, ಮುಂದಿನ ಜೀವನದಲ್ಲಿ ನಮಗೆ ಹೇಳಲಾಗುವುದು:

> (ಅಂದಿನ ದಿನ) ಪ್ರತಿಯೊಂದು ಸಮುದಾಯವೂ ವಿನಮ್ರರಾಗಿವುದನ್ನು ನೀವು ಕಾಣುವಿರಿ. ಪ್ರತಿಯೊಂದು ಸಮುದಾಯವು ತನ್ನ ದಾಖಲೆಯನ್ನು ವೀಕ್ಷಿಸಲು ಆಮಂತ್ರಿಸಲಾಗುವುದು. ಇಂದು ನಿಮ್ಮ *ಕಾರ್ಯಗಳಿಗೆ* ಪಾವತಿ ಸಿಗಲಾಗುವುದು. ಇದು ನಿಮ್ಮ ಬಗ್ಗೆ ಸತ್ಯವನ್ನು ಉಚ್ಚರಿಸುವ ದಾಖಲೆಯಾಗಿದೆ. ವಾಸ್ತವವಾಗಿ, ನಾವು ನಿಮ್ಮ ಎಲ್ಲಾ ಕಾರ್ಯಗಳನ್ನು ದಾಖಲಿಸಿದ್ದೇವೆ. (45:28-29)

ದುರದೃಷ್ಟವಶಾತ್ ವಿಧ್ಯುಕ್ತ ಪ್ರಾರ್ಥನೆಯು, ಒಳ್ಳೆಯ ಕರ್ಮಗಳ ವರ್ಗದಲ್ಲಿ ಒಳಪಡುವುದಿಲ್ಲ. ಅದು ದೇವವಾಣಿಯ ಜೀವಾಳಕ್ಕೆ ವಿರುದ್ಧವಾಗಿರುವಂತಹ, ಕೇವಲ ಮಿಥ್ಯ-ಆರಾಧನೆಯ ಒಂದು ರೂಪವಾಗಿದೆ.

ಉತ್ತಮ ಕಾರ್ಯಗಳಿಗಿಂತ ಮೇಲಾಗಿ, ವ್ಯವಸ್ಥಿತವಾದ ಪ್ರಾರ್ಥನೆಗಳಿಗೆ ಹೆಚ್ಚಿನ ನೈತಿಕ ಪ್ರಾಧಾನ್ಯತೆಯನ್ನು ನೀಡಿರುವಂತಹ ಒಂದು ಲೋಕವನ್ನು ಕಲ್ಪಿಸುವುದು ಕೂಡಾ ಅಸಂಬದ್ಧವಾಗಿದೆ. ಜೊತೆಗೆ, ಒಬ್ಬನು ವಿಶ್ವದ ಸುತ್ತಲೂ ನೋಡಿದರೆ, ವಿಧ್ಯುಕ್ತ ಪ್ರಾರ್ಥನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತಹ ಸ್ಥಳಗಳಲ್ಲಿ, ಗಂಭೀರ ಅಪರಾಧಗಳಾದಂತಹ - ಅತ್ಯಾಚಾರ, ಲೈಂಗಿಕ ದೌರ್ಜನ್ಯ, ವಂಚನೆ, ಕಳ್ಳತನ ಮತ್ತು ಭ್ರಷ್ಟಾಚಾರಗಳು ಭದ್ರವಾಗಿರುವುದನ್ನು ವೀಕ್ಷಿಸಬಹುದು. ಈ ಜನರು ನಿಜವಾದ ಆದ್ಯತೆಗಳನ್ನು ನಿರ್ಲಕ್ಷಿಸಿದ ಕಾರಣ ಇವುಗಳು ಹೇರಳವಾಗಿ ಚಾಲ್ತಿಯಲ್ಲಿದೆ:

> ನೀವೂ ಹಾಗೂ ನಿಮ್ಮ ಜೊತೆಗೆ ಪ್ರಶ್ಚಾತಾಪಪಟ್ಟವರು, ನಿಮಗೆ ನಿರ್ದೇಶಿಸಲಾಗಿರುವುದನ್ನು ಎತ್ತಿಹಿಡಿಯಿರಿ ಮತ್ತು ಮಿತಿಯನ್ನು ಮೀರಬೇಡಿರಿ. ವಾಸ್ತವವಾಗಿ, ನಿಮ್ಮ ಪ್ರಭು ನಿಮ್ಮ ಕಾರ್ಯಗಳನ್ನೆಲ್ಲಾ ನೋಡುತ್ತಿದ್ದಾನೆ. ಅಕ್ರಮಿಗಳ ಕಡೆಗೆ ವಾಲಬೇಡಿರಿ, ಅನ್ಯಥಾ ಅವರು ನಿಮಗೆ ನರಕಾಗ್ನಿಯ ಸವಿಯುನ್ನುವಂತೆ ಮಾಡಿಬಿಡುವರು ಮತ್ತು ರಕ್ಷಕನಾಗಿ ಅಲ್ಲಾಹನನ್ನು ಹೊರತುಪಡಿಸಿ ನಿಮಗೆ ಬೇರೆ ಯಾರೂ ಸಿಗಲಾರರು, ನಂತರ ನಿಮಗೆ ಎಲ್ಲಿಂದಲೂ ಸಹಾಯವು ಒದಗದು. ಮತ್ತು ಹಗಲಿನ ಎರಡು ತುದಿಗಳ ಮುಖಾಂತರ ಹಾಗೂ ರಾತ್ರಿಯ ಭಾಗಗಳಲ್ಲಿ ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ *(ಅಖಿಮಿ ಸ್ಪಲಾತ)*. ವಾಸ್ತವವಾಗಿ, ಉತ್ತಮ ಕಾರ್ಯಗಳು ಕೆಟ್ಟವುಗಳನ್ನು ರದ್ದುಮಾಡುತ್ತದೆ. ಇದು ನೆನಪಿಸಲು ಬಯಸುವವರಿಗೆ ಒಂದು ಸ್ಮರಣೆಯಾಗಿದೆ. ನೀವು ದೃಢಸಂಕಲ್ಪರಾಗಿರಿ. ಅಲ್ಲಾಹನು ಸದ್ಗುಣರಿಗೆ ಪ್ರತಿಫಲ ಕೊಡುವುದರಲ್ಲಿ ವಿಫಲನಾಗುವುದಿಲ್ಲ. (11:112-115)

ಈ ವಚನವು, ನಮಗೆ ನಿರ್ದೇಶಿಸಿರುವುದನ್ನು ಎತ್ತಿಹಿಡಿಯಲು ಮತ್ತು ಮೇರೆಯನ್ನು ಮೀರದಿರಲು ಸ್ಪಷ್ಟವಾಗಿ ಶಿಫಾರಸು ಮಾಡುತ್ತದೆ. ಅಲ್ಲಾಹನು ಎಲ್ಲಾ *ಕಾರ್ಯಗಳನ್ನು* ದಾಖಲಿಸಿಕೊಳ್ಳುತ್ತಿದ್ದಾನೆ. ಜನರು ಹಗಲಿನ

ಕೊನೆಗಳ ಮುಖಾಂತರ (ತುದಿಯಿಂದ ತುದಿತನಕ) ಮತ್ತು ರಾತ್ರಿಯ ಭಾಗಗಳಲ್ಲಿ ಸತ್ಕಾರ್ಯಗಳನ್ನು ಮಾಡುತ್ತಾ, ತಮ್ಮ ಬದ್ಧತೆಯನ್ನು ಪೂರೈಸಬೇಕು. ಈ ಪರಿಕಲ್ಪನೆಯು ಸರಳವಾಗಿದೆ. ಉತ್ತಮ ಕಾರ್ಯಗಳು ಕೆಡುಕುಗಳನ್ನು ರದ್ದುಮಾಡುತ್ತದೆ ಮತ್ತು ಇದು ಅಲ್ಲಾಹನನ್ನು ಜ್ಞಾಪಿಸುವ ಒಂದು ರೀತಿಯಾಗಿದೆ. ಕೆಲವು ನಿಶ್ಚಿತ ಸಂಖ್ಯೆಯ ವಿಧ್ಯುಕ್ತ ಪ್ರಾರ್ಥನೆಗಳ ಮೂಲಕ ಸತ್ಕಾರ್ಯಗಳನ್ನು ಪೂರೈಸಲು ಎಂದಿಗೂ ಸಾಧ್ಯವಿಲ್ಲ. ದೀನಿನ ಪರಿಕಲ್ಪನೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಈ ಸೂಚನೆಗಳಿಗೆ ಬದ್ಧನಾಗಿ ಅವುಗಳನ್ನು ಎತ್ತಿಹಿಡಿಯುವುದು ಹಾಗೂ ಪಾಲಿಸುವುದು ಅವನ ಮೇಲೆ ಕಡ್ಡಾಯವಾಗಿದೆ ಎಂದು ಒಂದು ನಿಷ್ಠಾವಂತ ಮುಸ್ಲಿಮನಿಗೆ ಸ್ಪಷ್ಟವಾಗುತ್ತದೆ. ಪುಣ್ಯ ಕರ್ಮಗಳ ಸರಳ ವ್ಯಾಖ್ಯಾನವು ಕುರ್‌ಆನಿನಲ್ಲಿ ಸ್ಪಷ್ಟವಾಗಿ ನಿರೂಪಿಸಿದೆ ಮತ್ತು ಅವುಗಳು ಆರಾಧನೆ ಅಥವಾ ಧಾರ್ಮಿಕ ಆಚರಣೆಗಳ ಪ್ರದರ್ಶನಾ-ಕ್ರಿಯೆಯನ್ನು ಒಳಗೊಂಡಿಲ್ಲ.

> ನಿಮ್ಮ ಮುಖಗಳನ್ನು ಪೂರ್ವ ಅಥವಾ ಪಶ್ಚಿಮದ ಕಡೆಗೆ ತಿರುಗಿಸುವುದರಲ್ಲಿ ಯಾವುದೇ ಪುಣ್ಯಶೀಲತೆ ಇಲ್ಲ. ಆದರೆ ಪುಣ್ಯವು ಇವುಗಳಲ್ಲಿದೆ - ಅಲ್ಲಾಹನಲ್ಲಿ, ಮುಂದಿನ ಜೀವನದಲ್ಲಿ, ಶಕ್ತಿಗಳಲ್ಲಿ, ಗ್ರಂಥಗಳಲ್ಲಿ ಮತ್ತು ಪ್ರವಾದಿಗಳಲ್ಲಿ ವಿಶ್ವಾಸವಿಡುವುದು; ತಮ್ಮ ಸಂಪ್ರೀತಿಯ ಸಂಪತ್ತನ್ನು ಬಂಧುಗಳಿಗೆ, ಅನಾಥರಿಗೆ, ಬಡವರಿಗೆ, ಸಂಕಷ್ಟಗಳನ್ನು ಎದುರಿಸುತ್ತಿರುವವರಿಗೆ, ಯಾಚಿಸುವವರಿಗೆ ದಾನಮಾಡುವುದು; ಬದ್ಧತೆಗಳನ್ನು ಎತ್ತಿಹಿಡಿಯುವುದು ಹಾಗೂ ಅವುಗಳನ್ನು ಶುದ್ಧವಾಗಿ ಇಟ್ಟುಕೊಳ್ಳುವುದರಿಂದ ಮಾನಸಿಕ ಗುಲಾಮಗಿರಿಯನ್ನು ಸ್ವತಂತ್ರಗೊಳಿಸುವುದು; ಮತ್ತು ನೀಡಿದ ವಾಗ್ದಾನಗಳನ್ನು ಉಳಿಸಿಕೊಳ್ಳುವುದು; ಮತ್ತು ಪ್ರತಿಕೂಲದ, ಸಂಕಷ್ಟದ ಮತ್ತು ಆಪತ್ತಿನ ಸಂಧರ್ಭದಲ್ಲಿ ದೃಢಕಾಯರಾಗಿ ನಿಲ್ಲುವುದು - ಇವರೇ ಸತ್ಯಸಂಧರು, ಇವರೇ ಸದ್ಗುಣರು. (2:177)

ವ್ಯಕ್ತಿಯ ಮನಸ್ಸಿನಲ್ಲಿ ಸ್ವಲಾತ್ ಎಂದರೆ ವಿಧ್ಯುಕ್ತ ಪ್ರಾರ್ಥನೆ ಎಂಬುವುದು ಪೂರ್ವ ಗ್ರಹಿತವಾಗಿದ್ದರೆ ಮಾತ್ರ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಹೀಗಾಗಿ, ಪುಣ್ಯಕರ್ಮಗಳು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಸ್ವಲಾತ್ ಎಂದರೆ ವಿಧ್ಯುಕ್ತ ಪ್ರಾರ್ಥನೆ ಎಂದು ನಿಯಮಾಧೀನನು ವಾದಿಸುತ್ತಾರಾದರೂ, ವಿಷಯದ ಸಂದರ್ಭೋಚಿತ ಅಧ್ಯಯನದ ಆಧಾರದಲ್ಲಿ ಇಂತಹ ನಿಲುವು ಯಾವುದೇ ವಿವೇಕತೆಯನ್ನು ಹೊಂದಿಲ್ಲ ಎಂಬುದಾಗಿ ಸ್ಪಷ್ಟವಾಗುತ್ತದೆ.

ಸೂರ 107, ಕೇವಲ ಏಳು ವಚನಗಳನ್ನೊಳಗೊಂಡ *ದಾನ* ಎಂಬ ಹೆಸರಿರುವ ಒಂದು ಸಣ್ಣ ಅಧ್ಯಾಯವಾಗಿದೆ. ನಿಗದಿತ ದೀನಿಗೆ ತನ್ನನ್ನು ಬದ್ಧನಾಗಿಸಿದ ಒಬ್ಬ ವ್ಯಕ್ತಿಯು, ಜೀವನ ರೀತಿಯ ಭಾಗವಾಗಿ, ದಾನವನ್ನು ಕೊಡುವುದಕ್ಕೆ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೆ ತನ್ನನ್ನು ಬದ್ಧನಾಗಿಸುವುದರಲ್ಲಿ ಅಲಕ್ಷ್ಯತೆಯನ್ನು ತೋರಿಸಬಾರದು.

> ನೀವು ದೀನಿನ ಜೊತೆಗೆ ಸುಳ್ಳು ಹೇಳುವವರನ್ನು ಗಮನಿಸುತ್ತಿಲ್ಲವೇ? ಅವರು ಅನಾಥರನ್ನು ನಿರ್ಲಕ್ಷಿಸುತ್ತಾರೆ. ಅವರು ಬಡವರಿಗೆ ಆಹಾರ ನೀಡುವುದನ್ನು ಸಮರ್ಥಿಸುವುದಿಲ್ಲ. ಆದ್ದರಿಂದ ತಮ್ಮ

> ಬದ್ಧತೆಗಳ ಬಗ್ಗೆ ನಿರ್ಲಕ್ಷರಾದಂತಹ ಬದ್ಧರಾದವರಿಗೆ ನಾಶವಿದೆ. ಅವರು ಕೇವಲ ಬಾಹ್ಯ ಪ್ರದರ್ಶನ ಮಾಡುತ್ತಾರೆ ಮತ್ತು ಅವರು ದಾನಮಾಡುವುದರಿಂದ ವಿಮುಖರಾಗುತ್ತಾರೆ. (107:1-7)

ಅಲ್ಲಾಹನು ವಿಧಿವತ್ತಾಗಿ ಪ್ರಾರ್ಥಿಸುವವರನ್ನು ಶಪಿಸುತ್ತಿದ್ದಾನೆಂದು, ಧಾರ್ಮಿಕರು ಮತ್ತು ಉಲೆಮಾಗಳು ನಂಬಿದ್ದಾರೆ[44]. ನಂತರ ಅವರನ್ನು ಪ್ರಶ್ನಿಸದೇ ಅನುಸರಿಸುವ ಜನರಿಗೆ, ತಮ್ಮ ಮೌಲ್ಯಗಳನ್ನು ಕಲಿಸುತ್ತಾರೆ. ಧಾರ್ಮಿಕರ ತಿರುಚುವ ಸಂಸ್ಕೃತಿಯಿಂದ ಮಂಜೂರಾದ, ಮಾಪಿಸಲಾದಂತಹ ಈ ಚಿತ್ರಣವನ್ನು ಹೋಲಿಸಿ ನೋಡಿರಿ:

> ವಿಶ್ವಾಸವನ್ನು ತಿರಸ್ಕರಿಸುವವರು ಯಾರು ಗೊತ್ತೇನೋ? ಅವರು ಅನಾಥರನ್ನು ನಿರ್ಲಕ್ಷಿಸುತ್ತಾರೆ. ಅವರು ಬಡವರಿಗೆ ಆಹಾರ ನೀಡುವುದನ್ನು ಸಮರ್ಥಿಸುವುದಿಲ್ಲ. ಆದ್ದರಿಂದ, ತಮ್ಮ ವಿಧ್ಯುಕ್ತ ಪ್ರಾರ್ಥನೆಯನ್ನು ಆಧರಿಸದೇ ಪ್ರಾರ್ಥಿಸುವವರಿಗೆ ಶಾಪವಿದೆ. ಅವರು ಕೇವಲ ಬಾಹ್ಯ ಪ್ರದರ್ಶನ ಮಾಡುತ್ತಾರೆ ಮತ್ತು ಅವರು ದಾನಮಾಡುವುದರಿಂದ ವಿಮುಖರಾಗುತ್ತಾರೆ. (107:1-7)

ಎಲ್ಲಾ ಏಳು ವಚನಗಳು ಪರಸ್ಪರ ಸಂಬಂಧಿತವಾಗಿದೆ: ಅನಾಥರ ಯೋಗಕ್ಷೇಮವನ್ನು ನೋಡಿಕೊಳ್ಳುವುದು, ಬಡವರಿಗೆ ಆಹಾರ ನೀಡುವುದು ಮತ್ತು ದಾನಕರ್ಮಗಳನ್ನು ನಡೆಸುವುದುದೆಲ್ಲವೂ, ಓರ್ವ ಬದ್ಧನಾದ ವ್ಯಕ್ತಿಯ ಕ್ರಿಯೆಗಳಿಂದ ಮಾತ್ರ ಈಡೇರಿಸಬಹುದು. ತಮ್ಮ ಪ್ರಾರ್ಥನೆಗಳಲ್ಲಿ ಗಮನವಿಲ್ಲದೆ ಪ್ರಾರ್ಥಿಸುವವರನ್ನು ಅಲ್ಲಾಹನು ಶಪಿಸುತ್ತಾನೆ ಎಂದು ಧಾರ್ಮಿಕರು ಹೇಳುತ್ತಾರೆ. ಅನಾಥರ, ಬಡವರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಉದಾರತೆಯ ಕಾರ್ಯಗಳ ಬದಲಿಗೆ ಅವರು ತಮ್ಮ ಅನುಯಾಯಿಗಳಿಗೆ ವಿಧಿವಿಧಾನಗಳಲ್ಲಿ ಪ್ರಾರ್ಥಿಸಲು ಪ್ರೋತ್ಸಾಹಿಸುತ್ತಾರೆ. ಅನಾಥರಿಗೆ ಮತ್ತು ಬಡವರಿಗೆ ಸ್ಪಂದಿಸಲು ಹಾಗೂ ತಮ್ಮ ಸಂಪಾದನೆಗಳಿಂದ ದಾನ ಮಾಡಲು, ವೈಯುಕ್ತಿಕವಾಗಿಯೂ ಮತ್ತು ಸಾಮೂಹಿಕವಾಗಿಯೂ ತಮ್ಮನ್ನು ಬದ್ಧರಾಗಿಸುವ ಬದಲು - ಅವರು ತಮ್ಮ ಪುರೋಹಿತರ ಆದಾಯ ಮೂಲವಾಗಿ ಬಿಡುವಂತೆ ತರಬೇತಿ ನೀಡಲ್ಪಟ್ಟಿದ್ದಾರೆ. ಅವರು ಕುರ್‌ಆನಿನ *ಝಕಾತ್* ಎಂಬ ಪದವನ್ನು ಭ್ರಷ್ಟಗೊಳಿಸಿ, ಅದಕ್ಕೆ *ಧಾರ್ಮಿಕ ದಶಾಂಶ ತೆರಿಗೆ* ಎಂದು ಅರ್ಥ ಕೊಡುವ ಮೂಲಕ, ಜನರಿಂದ ಅಕ್ರಮವಾಗಿ ಸಂಪತ್ತನ್ನು ಸಂಗ್ರಹಿಸುತ್ತಾರೆ.[45] ಅಲ್ಲಾಹನಿಂದಿರುವ ಜೀವನದ ನಿರ್ದೇಶಿತ ರೀತಿಗೆ ಬದ್ಧರಾಗಿರುವವರು ಪಾಲಿಸಬೇಕಾದ, ಉತ್ತಮ ಕಾರ್ಯಗಳ ಇತರ ಉದಾಹರಣೆಗಳನ್ನು ಕುರ್‌ಆನ್ ಪ್ರಸ್ತಾಪಿಸಿದೆ:

> ವಾಸ್ತವದಲ್ಲಿ ಯಶಸ್ಸಿಹೊಂದುವ ವಿಶ್ವಾಸಿಗಳು ಯಾರೆಂದರೆ, ಅವರು ತಮ್ಮ ಬದ್ಧತೆಗಳಲ್ಲಿ *(ಸ್ವಲಾತಿಹಿಮ್)* ಪ್ರಾಮಾಣಿಕರಾಗಿರುತ್ತಾರೆ, ಅವರು ವ್ಯರ್ಥ ಮಾತುಗಳಿಂದ ದೂರವಿರುತ್ತಾರೆ, ಅವರು ಶುದ್ಧತೆಗಾಗಿ ಶ್ರಮಿಸುತ್ತಾರೆ, ಅವರು ತಮ್ಮ ಪತ್ನಿಯರೊಂದಿಗೆ ಮತ್ತು ತಮಗೆ

[44] ಇದು ಬಲು ಹಾಸ್ಯಾಸ್ಪದ ಚಿಂತನಾ ರೀತಿಯಾಗಿದೆ – ಸಹಜವಾಗಿ ಅರಬೀ ಧರ್ಮದ ಪುರೋಹಿತರನ್ನು ಹೊರತುಪಡಿಸಿ.

[45] ಅಧ್ಯಾಯ ಆರು ನೋಡಿರಿ.

ನ್ಯಾಯಸಮ್ಮತವಾಗಿ ಸೇರಿದವರೊಂದಿಗೆ ಹೊರತು ಪಡಿಸಿ, ತಮ್ಮ ಮಾನವನ್ನು ಕಾಪಾಡುತ್ತಾರೆ. (23:1-6)

ಅಮಾನತುಗಳನ್ನು ಅವರಿಗೆ ಒಪ್ಪಿಸುವ ಅಥವಾ ತಾವು ನೀಡುವ ಭರವಸೆಯ ಸಂಧರ್ಭದಲ್ಲಿ, ಅವರು ವಿಶ್ವಾಸಾರ್ಹರಾಗಿರುತ್ತಾರೆ. ಅವರು ನಿರಂತರವಾಗಿ ತಮ್ಮ ಬದ್ಧತೆಗಳನ್ನು *(ಸ್ವಲವಾತಿಹಿಮ್)* ಎತ್ತಿಹಿಡಿಯುತ್ತಾರೆ (23:8-9)

ವ್ಯರ್ಥ ಮಾತುಗಳಿಂದ ದೂರವಿರುವವರು, ತಮ್ಮ ಮಾನವನ್ನು ಕಾಪಾಡುವವರು ಹಾಗೂ ಜೀವನ ರೀತಿಯಾಗಿ ಈ ಮೌಲ್ಯಗಳಿಗೆ ತಮ್ಮನ್ನು ಬದ್ಧರಾಗಿಸುವವರು ಯಶಸ್ವಿ ವಿಶ್ವಾಸಿಗಳಾಗಿದ್ದಾರೆ ಎಂದು ಈ ವಚನವು ಸ್ಪಷ್ಟವಾಗಿ ಹೇಳುತ್ತದೆ. ಇದರ ಜೊತೆಗೆ, ಅವರು ಭರವಸೆಗಳನ್ನು ಈಡೇರಿಸಿಕೊಂಡು, ಅಮಾನತುಗಳನ್ನು ಒಪ್ಪಿಸಿದರೆ ಅವುಗಳನ್ನು ವಿಶ್ವಾಸಾರ್ಹವಾಗಿ ನಿರ್ವಹಿಸಿಕೊಂಡು, ತಮ್ಮ ಬದ್ಧತೆಗಳನ್ನು ಅವರು ಅತಿ ಸೂಕ್ಷತೆಯಿಂದ ಎತ್ತಿಹಿಡಿಯುತ್ತಾರೆ. ಅಂದರೆ, ಕರ್ಮಗಳ ಮೂಲಕ ನಿಷ್ಕಪಟತೆ ಮತ್ತು ಪ್ರಾಮಾಣಿಕತೆಗೆ ಕುರ್‌ಆನ್ ಮಹತ್ವವನ್ನು ನೀಡುತ್ತದೆಯೇ ವಿನಹಃ ವಿಧ್ಯುಕ್ತ ಪ್ರಾರ್ಥನೆಗಳ ಮೂಲಕವಲ್ಲ. ದುರದೃಷ್ಟವಶಾತ್, ನಾವು ಅರಬೀ ಧರ್ಮದಲ್ಲಿ ಬಹಳ ವಿರಳವಾಗಿ ಈ ಉತ್ತಮ ಮೌಲ್ಯಗಳನ್ನು ಕಾಣುತ್ತೇವೆ. ಏನೇ ಇರಲಿ, ಸ್ವಲಾತ್ ಪದ ಅಥವಾ ಅದರ ಮೂಲಪದದ ಇತರ ಉತ್ಪನ್ನಗಳು ಕುರ್‌ಆನಿನಲ್ಲಿ ಕಾಣಿಸಿಕೊಳ್ಳುವ ಪ್ರತಿ ಬಾರಿಯು, ಜನರು ಎತ್ತಿಹಿಡಿಯಲು ಪ್ರೋತ್ಸಾಹಿಸಲಾದಂತಹ ಒಳ್ಳೆಯ ಕಾರ್ಯಗಳ ಸನ್ನಿವೇಶಗಳಾಗಿವೆ.

ಮತ್ತಷ್ಟು ಉದಾಹರಣೆಗಳು:

ಅವರು ಅಲ್ಲಾಹನಿಗಾಗಿ ತಮ್ಮ ಭರವಸೆಗಳನ್ನು ಈಡೇರಿಸುತ್ತಾರೆ, ತಮ್ಮ ಒಪ್ಪಂದವನ್ನು ಉಲ್ಲಂಘಿಸುವುದಿಲ್ಲ. ಅವರು ತಮ್ಮ ಪ್ರಭುವಿನ ಬಗ್ಗೆ ಕಾತರಿಯುಳ್ಳವರಾದ ಕಾರಣ, ಆಜ್ಞಾಪಿಸಲಾಗಿರುವುದನ್ನು ಬಿಗಿಗೊಳಿಸುವ ಸಲುವಾಗಿ *(ಯೂಸ್ಫಲ)* ತಮ್ಮನ್ನು ಅವುಗಳಿಗೆ ಅನುಬಂಧಿಸಿಕೊಳ್ಳುತ್ತಾರೆ *(ಯಸ್ಫಿಲು)* ಮತ್ತು ಶೋಚನೀಯವಾದ ತೀರ್ಪಿನ ಬಗ್ಗೆ ಭಯಪಡುತ್ತಾರೆ ಮತ್ತು ತಮ್ಮ ಪ್ರಭುವಿನ ಒಲವನ್ನು ಕೋರುವುದರಲ್ಲಿ ದೃಢ ಸಂಕಲ್ಪರಾಗಿರುತ್ತಾರೆ. ಅವರು ಬದ್ಧತೆಗಳನ್ನು ಎತ್ತಿಹಿಡಿಯುತ್ತಾರೆ *(ಸ್ವಲಾತ)* ಮತ್ತು ನಾವು ಅವರಿಗೆ ನೀಡಿದ ಅನುಗ್ರಹದಿಂದ ಅವರು ರಹಸ್ಯವಾಗಿಯೂ, ಬಹಿರಂಗವಾಗಿಯೂ ದಾನವನ್ನು ನೀಡುತ್ತಾರೆ. ಅವರು ಕೆಡುಕನ್ನು ಒಳಿತಿನೊಂದಿಗೆ ಎದುರಿಸುತ್ತಾರೆ. ಸರ್ವಶ್ರೇಷ್ಠ ನೆಲೆಗೆ ಅರ್ಹರು ಅವರಾಗಿದ್ದಾರೆ. (13:21-22)

ಇಲ್ಲಿ *ಯಸ್ಫಿಲು* ಪದವು ಸ್ವ-ಲ-ವ ಎಂಬ ಮೂಲಪದದ ಉಪಪದವೇ ಆಗಿದೆ ಹಾಗೂ ಅದು 'ಅನುಬಂಧನೆ' ಅಥವಾ 'ಸಂಪರ್ಕ' ಎಂಬ ಮೂಲಭೂತ ಅರ್ಥವನ್ನು ಸಂಕೇತಿಸುತ್ತದೆ, ಹಾಗೆಯೇ *ಯೂಸ್ಫಲ* ಎಂಬ ಪದವು 'ಬಿಗಿಗೊಳಿಸು' ಅಥವಾ 'ನಿರ್ಬಂಧಿಸು' ಎಂಬ ಅರ್ಥವನ್ನು ಸೂಚಿಸುತ್ತದೆ ಮತ್ತು *ಸ್ವಲಾತ್* ಪೂರ್ವಭಾವಿಯಾಗಿ 'ಬದ್ಧತೆ' ಎಂದಾಗಿದೆ. ಒರ್ವ ಮುಸ್ಲಿಮನು ತನಗೆ ಆಜ್ಞಾಪಿಸಲಾದ ಕಾರ್ಯಗಳನ್ನು

ಬದ್ಧತೆಯಿಂದ ನಿರ್ವಹಿಸುವ ಸಲುವಾಗಿ ತನ್ನನ್ನು ನಿರ್ಬಂಧಗೊಳಿಸುವ ಮೂಲಕ ಅಲ್ಲಾಹನ ಜೊತೆಗಿನ ತನ್ನ ಒಪ್ಪಂದವನ್ನು ಎತ್ತಿಹಿಡಿಯುತ್ತಾನೆ. ಈ ಪ್ರಸಂಗದಲ್ಲಿ '*ಅಖಾಮು ಸ್ವಲಾತ*'ದ ಅರ್ಥವು, ಒಪ್ಪಂದದ 'ಬದ್ಧತೆಯನ್ನು ಎತ್ತಿಹಿಡಿಯುವುದು' ಎಂದಾಗಿದೆ. ನಾವು ದೈನಂದಿನ ವಿಧ್ಯುಕ್ತ ಪ್ರಾರ್ಥನೆಗಳ ಮೂಲಕ ಅಲ್ಲಾಹನೊಂದಿಗಿನ ನಮ್ಮ ಒಪ್ಪಂದವನ್ನು ಎತ್ತಿಹಿಡಿಯುತ್ತೇವೆ ಎಂದು ಅರ್ಥೈಸುವುದು ಹಾಸ್ಯಾಸ್ಪದವಾಗಿದೆ.

23:1-9 ರಲ್ಲಿ ಹಿಂದೆ ಉಲ್ಲೇಖಿಸಿದಂತೆ, 'ವಿಧ್ಯುಕ್ತ ಪ್ರಾರ್ಥನೆ' ಎಂಬ ಅರ್ಥಕೊಡಲು, ಧಾರ್ಮಿಕರು ಉದ್ದೇಶಪೂರ್ವಕವಾಗಿ ಈ ವಚನಗಳಲ್ಲಿನ '*ಸ್ವಲಾತಿ*' ಮತ್ತು '*ಸ್ವಲವಾತಿ*' ಎಂಬ ಪದಗಳ ಅರ್ಥಗಳನ್ನು ಭ್ರಷ್ಟಗೊಳಿಸಿದರು. ಅವರು ವಿಷಯದ ಸನ್ನಿವೇಶವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವಂತೆ ತಮ್ಮ ಕುರುಡು ಅನುಯಾಯಿಗಳನ್ನು ತರಬೇತಿಗೊಳಿಸಿದರು ಹಾಗೂ ತಮ್ಮ ಅನುಯಾಯಿಗಳಿಗೆ ವಿಧ್ಯುಕ್ತ ಪ್ರಾರ್ಥನೆಗಳ ಮೇಲೆ ಗಮನನೀಡಲು ಪ್ರೋತ್ಸಾಹಿಸಿದರು.

ಇಬ್ರಾಹೀಮರ ಬದ್ಧತೆಗಳು

ಕುರ್‌ಆನಿನಲ್ಲಿರುವಂತೆ, ಅಲ್ಲಾಹನಿಂದ ಸೂಚಿಸಲ್ಪಟ್ಟ ಜೀವನ ರೀತಿಯಲ್ಲಿ, ಉತ್ತಮ ಕಾರ್ಯಗಳನ್ನು ಮಾಡಲು ಬದ್ಧರಾಗಿರುವುದರಲ್ಲಿ ಯಾವುದೇ ಹೊಸತನವಿಲ್ಲ. ಇದು ಕೊನೆಯ ಪ್ರವಾದಿಯ ಅವಿಷ್ಕಾರವಲ್ಲ. ಮಾನವರು ಇಬ್ರಾಹೀಮರ ಸಮಯದಲ್ಲೂ, ತಮ್ಮ ಬದ್ಧತೆಗಳನ್ನು ಪಾಲಿಸಲು ನಿರ್ದೇಶಿಸಲ್ಪಟ್ಟಿದ್ದರು. ಅಲ್ಲಾಹನು ಇಬ್ರಾಹೀಮರನ್ನು 'ಬದ್ಧನಾದ ಮನುಷ್ಯ' ಎಂದು ಕರೆದಿದ್ದಾನೆ. ಅವರು ಅಲ್ಲಾಹನು ನಿರ್ದೇಶಿಸಿದ ಜೀವನ ರೀತಿಯ *(ದೀನಿಲ್ಲಾಹ್)* ಮೂಲಕ ತನ್ನ ಕರ್ತವ್ಯಗಳನ್ನು ಎತ್ತಿಹಿಡಿಯುತ್ತಾ ಅಲ್ಲಾಹನಿಗೆ ಸೇವೆಯನ್ನು ಸಲ್ಲಿಸಿದರು.

> *ವತ್ತಹಿಝೂ ಮಿನ್ ಮಕಾಮಿ ಇಬ್ರಾಹೀಮ ಮುಸಲ್ಲನ್.* (2:125)
>
> ಬದ್ಧನಾದ ಇಬ್ರಾಹೀಮರ ದರ್ಜೆಯನ್ನು ಪರಿಗಣಿಸಿರಿ (2:125)

ಈ ವಚನದ *ಮುಸಲ್ಲನ್* ಎಂಬ ಪದವನ್ನು ಗಮನಿಸಿ. ಇದು ಒಂದು ಸಕ್ರಿಯ ಕೃದಂತದ ಸ್ಥಿತಿಯನ್ನು ಸೂಚಿಸುತ್ತದೆ. ಉದಾಹರಣೆಗೆ, *ಸಲಾಮ್* ಎಂದರೆ ಶಾಂತಿ, *ಮುಸ್ಲಿಂ* ಎಂಬುವುದು ಸಕ್ರಿಯ ಕೃದಂತದ ಸ್ಥಿತಿಯಾಗಿದೆ, ಹಾಗೆಯೇ *ಮುಸ್ಲಿಮೀನ್* ಅದರ ಪುಲ್ಲಿಂಗ ಬಹುವಚನವಾಗಿದೆ, *ಮುಸ್ಲಿಮಾತ್* ಸ್ತ್ರೀಲಿಂಗ ಬಹುವಚನವಾಗಿದೆ. ಅದೇ ರೀತಿ, *ಸ್ವಲಾತ್* ಎಂದರೆ ಬದ್ಧನಾಗುವುದು ಎಂದಾಗಿದೆ, *ಮುಸಲ್ಲನ್* ಎಂಬುವುದು ಅದರ ಏಕವಚನ ಅಂಕಿತನಾಮವಾಗಿದೆ, *ಮುಸಲ್ಲೀನ್* ಅದರ ಪುಲ್ಲಿಂಗ ಬಹುವಚನ, *ಮುಸಲ್ಲಿಮಾತ್* ಅದರ ಸ್ತ್ರೀಲಿಂಗ ಬಹುವಚನವಾಗಿದೆ.

ತನ್ನ ಸಂತತಿಯು ಸಹ ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುತ್ತಾ ಅಲ್ಲಾಹನಿಂದ ನಿಗದಿತವಾದ ನಿರ್ಬಂಧಗಳ ವ್ಯವಸ್ಥೆಯ ಪ್ರಕಾರ ಜೀವಿಸಲಿ ಎಂಬ ಇಚ್ಛೆಯಿಂದ ಇಬ್ರಾಹೀಮರು ಅವರನ್ನು ಒಂದು ಬಂಜರು ಕಣಿವೆಯಲ್ಲಿ ವಾಸ್ತವ್ಯಗೊಳಿಸಿದರು.

> *ರಬ್ಬನಾ ಇನ್ನೀ ಅಸ್ಕನ್ತು ಮಿನ್ ದ್ದುರ್ರಿಯತೀ ಬಿವಾದಿನ್ ಗೈರಿ ಝೀ-ಝುರ್‌ಇನ್ ಇಂದ ಬೈತಿಕಲ್ ಮುಹರ್ರಮಿ, ರಬ್ಬನಾ ಲಿಯುಕೀಮು-ಸ್ಸಲಾತ (14:37)*
>
> ನನ್ನ ಪ್ರಭುವೇ, ಬೆಳವಣಿಯಿಲ್ಲದೆ ಹೊಂದಿಕೊಂಡಿರುವ ನಿನ್ನ ನಿರ್ಬಂಧಿತ ವ್ಯವಸ್ಥೆಯ ಕಡೆಗೆ ನನ್ನ ವಂಶಸ್ಥರನ್ನು ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವ ಸಲುವಾಗಿ ನೆಲೆಯೂರಿಸಿರಿವೆನು. ಆದುದರಿಂದ ಜನಮನಗಳು ಇವರ ಬಳಿಗೆ ಒಲಿಯುವಂತೆ ಮಾಡು. (14:37)

ಅಲ್ಲಾಹನೊಂದಿಗೆ ಸಮಜಾಯಿಸಿಕೊಂಡು ನಡೆಯಲು ಬಯಸುವವರಿಗೆ, ಇದೇ ರೀತಿಯಲ್ಲಿ ಬದ್ಧರಾಗಲು ಹೇಳಲಾಗಿದೆ:

> ಹೇಳಿರಿ, ಸತ್ಯವು ಅಲ್ಲಾಹನ ಕಡೆಯಿಂದ ಬಂದಿದೆ ಮತ್ತು ನೀವು ಒಂದು ಪ್ರಾಮಾಣಿಕ ಏಕದೇವವಿಶ್ವಾಸಿಯಾದ ಇಬ್ರಾಹೀಮರ ತತ್ವವನ್ನು ಅನುಸರಿಸಿರಿ, ಅವರು ಅಲ್ಲಾಹನೊಂದಿಗೆ ಯಾವುದೇ ಮೂರ್ತಿಗಳನ್ನು ಸಂಯೋಜಿಸಿಲ್ಲ. (3:95)

ಮುಹಮ್ಮದರಿಗೆ ಹೀಗೆ ಹೇಳಲು ಕಲ್ಪಿಸಲಾಗಿತ್ತು:

> "ನಿಶ್ಚಯವಾಗಿಯೂ, ನನ್ನ ಪ್ರಭುವು ನನ್ನನ್ನು ನೇರ ಮಾರ್ಗಕ್ಕೆ ಮಾರ್ಗದರ್ಶನ ಮಾಡಿದ್ದಾನೆ, ಅದು ಪ್ರಾಮಾಣಿಕನಾದ ಇಬ್ರಾಹೀಮರ ತತ್ವವೂ ಆಗಿತ್ತು. ಅವರು ಯಾವತ್ತೂ ಮೂರ್ತಿ ಆರಾಧಕರಾಗಿರಲಿಲ್ಲ." (6:160)

ಧಾರ್ಮಿಕರು ಮತ್ತು ಉಲೆಮಾಗಳು, ಸರಳ ಅರಬೀ ಭಾಷೆಯಲ್ಲಿರುವ ಈ ಹೇಳಿಕೆಯಲ್ಲೂ ಮಧ್ಯಸ್ಥಿಕೆಯನ್ನು ವಹಿಸಿದರು. ಇಂತಹ ಘೋಷಣೆಯ ನಂತರ, ಯಾವುದೇ ರೂಪದ ಮೂರ್ತಿ ಆರಾಧನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮೂಸಾರ ಬದ್ಧತೆಗಳು

ಇಸ್ರಾಯೀಲರ ಸಂತತಿಯನ್ನು ಫಿರ್‌ಔನಿನ ದಬ್ಬಾಳಿಕೆಯಿಂದ ಮುಕ್ತಗೊಳಿಸುವ ಅವರ ಪೈಕಿಯಿಂದಲೇ ಮೂಸಾರನ್ನು ಆಯ್ಕೆ ಮಾಡಲಾಯಿತು. ಅವರು ಈಜಿಪ್ಟಿನಿಂದ ಹೊರಡುವ ಮುಂಚೆ, ವಿನಮ್ರರಾಗಿರಲು ಮತ್ತು

ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯಲು ಮೂಲತಾಣವಾಗಿ ತಮ್ಮ ಮನೆಗಳನ್ನೇ ಬಳಸಲು ಹೇಳಲಾಗಿತ್ತು. ಮತ್ತೊಮ್ಮೆ, ಸ್ವಲಾತ್ ಪದವನ್ನು ಬದ್ಧತೆ ಎಂದು ಸೂಚಿಸಲು ಬಳಸಲಾಗಿದೆ.

> ನಾವು ಮೂಸಾ ಮತ್ತು ಅವರ ಸಹೋದರರಿಗೆ ದೇವವಾಣಿಯ ಮೂಲಕ ಹೇಳಿದೆವು, "ನಿಮ್ಮ ಜನರು ಈಜಿಪ್ಟಿನ ತಮ್ಮ ಮನೆಗಳಿಗೆ ತಮ್ಮನ್ನು ಸೀಮಿತಗೊಳಿಸಲಿ, ಮತ್ತು ಅವರು ತಮ್ಮ ಮನೆಗಳನ್ನು ತಮ್ಮ ಮೂಲತಾಣವಾಗಿ ಪರಿಗಣಿಸಲಿ, ಮತ್ತು ಅವರು ತಮ್ಮ ಬದ್ಧತೆಗಳನ್ನು *(ಸ್ವಲಾತ)* ಎತ್ತಿಹಿಡಿಯಲಿ ಮತ್ತು ವಿಶ್ವಾಸಿಗಳಿಗೆ ಸುವಾರ್ತೆಯನ್ನು ನೀಡಿರಿ." (10:87)

ಮೂಸಾರು ಮತ್ತು ಅವರೊಂದಿಗೆ ಇದ್ದ ವಿಶ್ವಾಸಿಗಳು ಸುವಾರ್ತೆಯನ್ನು ಹರಡಲು ಬದ್ಧರಾಗಿದ್ದರು. ಅವರು ಈಜಿಪ್ಟಿನಿಂದ ಸಂರಕ್ಷಿಸಲ್ಪಟ್ಟ ನಂತರ, ತಮ್ಮ ಬದ್ಧತೆಗಳನ್ನು ಎತ್ತಿಹಿಡಿದು ಅವುಗಳನ್ನು ಶುದ್ಧವಾಗಿರಿಸುವುದರ ಮೂಲಕ ಒಪ್ಪಂದವನ್ನು ಪೂರೈಸುವುದನ್ನು ಮುಂದುವರಿಸಲು ಮೂಸಾ ಹಾಗೂ ಅವರ ಜನರಿಗೆ ಆಜ್ಞಾಪಿಸಲಾಗಿತ್ತು. ಸ್ವಲಾತ್ ಮತ್ತು ಝಕಾತ್ ಎಂಬ ಪದಗಳನ್ನು ಈ ಸಂದರ್ಭದಲ್ಲಿಯೂ ಬಳಸಲಾಗಿರುವುದನ್ನು ನಾವು ನೋಡಬಹುದು:

> *ವ ಇಝ್ ಅಹದ್ನಾ ಮೀಸಾಕ ಬನೀ ಇಸ್ರಾಯೀಲ, ಲಾ ತಅಬುದು ಇಲ್ಲಲ್ಲಾಹ, ವಬಿಲ್ ವಾಲಿದೈನಿ ಇಹ್ಸಾನನ್, ವಧಿಲ್ ಖುರ್ಬಾ ವಲ್ ಯತಾಮ ವಲ್ ಮಸಾಕೀನಿ ವ ಖೂಲೂ ಲಿನ್ನಾಸಿ ಹುಸ್ನನ್, ವ-ಅಖೀಮು-ಸ್ವಲಾತ ವ-ಆತು-ಝ್ಝಕಾತ. (2:83)*
>
> ನಾವು ಇಸ್ರಾಯೀಲರ ಮಕ್ಕಳ ಜೊತೆ ಒಂದು ಒಪ್ಪಂದವನ್ನು ಮಾಡಿದೆವು: ನೀವು ಅಲ್ಲಾಹನನ್ನು ಹೊರತುಪಡಿಸಿ ಇತರರ ಸೇವೆಯನ್ನು ಮಾಡಬಾರದು, ಮತ್ತು ನಿಮ್ಮ ಮಾತಾಪಿತರು, ನಿಮ್ಮ ಸಂಬಂಧಿಕರು, ಅನಾಥರು ಹಾಗೂ ಬಡವರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಮತ್ತು ಸ್ನೇಹ ಭಾವದಿಂದ ಜನರೊಂದಿಗೆ ಮಾತನಾಡಬೇಕು, ಮತ್ತು ಬದ್ಧತೆಗಳನ್ನು ಎತ್ತಿಹಿಡಿಯಬೇಕು ಹಾಗೂ ಅವುಗಳನ್ನು ಶುದ್ಧವಾಗಿರಿಸಬೇಕು *(ವ-ಅಖೀಮು-ಸ್ವಲಾತ ವ-ಆತು-ಝ್ಝಕಾತ)*. (2:83)

ಇಸ್ರಾಯೀಲರ ಸಂತತಿಯು, ತಮ್ಮ ಮಾತಾಪಿತರು ಮತ್ತು ಸಂಬಂಧಿಕರು ಹಾಗೂ ಅನಾಥರು ಮತ್ತು ಬಡವರನ್ನು ಗೌರವಿಸುತ್ತಾ, ಜನರೊಂದಿಗೆ ಸ್ನೇಹ ಭಾವದಿಂದ ಮಾತನಾಡುತ್ತಾ ಅಲ್ಲಾಹನ ಸೇವೆಯನ್ನು ಮಾಡಬೇಕಾಗಿತ್ತು. ಇವುಗಳು ಅವರ ಬದ್ಧತೆಗಳಾಗಿತ್ತು. ಅಲ್ಲಾಹನು ವಿಧ್ಯುಕ್ತ ಪ್ರಾರ್ಥನೆ ಮತ್ತು ಧಾರ್ಮಿಕ ದಶಾಂಶ ತೆರಿಗೆಯ ಬಗ್ಗೆ ಹೇಳಿರುವುದು ಅಲ್ಲ.

ಈಸಾರ ಬದ್ಧತೆಗಳು

ಮೂಸಾರಿಗೆ ಅವತೀರ್ಣಗೊಂಡ ಗ್ರಂಥವನ್ನು ತಿರುಚಿದ ನಂತರ, ಇಸ್ರಾಯೀಲರ ಮಕ್ಕಳು ಯಹೂದಿ ಧರ್ಮವನ್ನು ಸೃಷ್ಟಿಸಿದರು. ಈ ಕೆಳಗಿನ ವಚನವು ಹೀಗೆ ಹೇಳುತ್ತದೆ: ಅವರು ಅಲ್ಲಾಹನ ಜೊತೆ ಮಾಡಿರುವ ಒಪ್ಪಂದವನ್ನು ಎತ್ತಿಹಿಡಿಯುವ ಮೂಲಕ, ಅವನ ಮೇಲೆ ಹಾಗೂ ಅವನ ಸಂದೇಶವಾಹಕರ ಮೇಲೆ ನಂಬಿಕೆಯನ್ನಿಡುವುದಕ್ಕೆ ಹಾಗೂ ಅಲ್ಲಾಹನಿಗೆ ಸದ್ಗುಣದ ಸಾಲವನ್ನು ನೀಡುವುದಕ್ಕೆ ತಮ್ಮನ್ನು ಬದ್ಧರಾಗಿಸುವ ತನಕ (ಸ್ವಲಾತ), ಅಲ್ಲಾಹನು ಅವರ ಜೊತೆಗಿದ್ದಾನೆ.

> ಅಲ್ಲಾಹನು ಇಸ್ರಾಯೀಲರ ಮಕ್ಕಳಿಂದ ಒಂದು ಕರಾರನ್ನು ಪಡೆದಿದ್ದನು ಮತ್ತು ನಾವು ಅವರಿಗೆ ಹನ್ನೆರಡು ಮೇಲ್ವಿಚಾರಕರನ್ನು ನೇಮಕ ಮಾಡಿದೆವು; ಮತ್ತು "ನೀವು ನಿಮ್ಮ ಬದ್ಧತೆಗಳನ್ನು ಪಾಲಿಸುವ, ಅವುಗಳ ನಿಷ್ಕಳಂಕತೆಯನ್ನು ಕಾಪಾಡುವ *(ಅಖಂತುಮು-ಸ್ವಲಾತ ವ ಆತೈತುಮು-ಝ್ಝಕಾತ)* ಮತ್ತು ನನ್ನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿ ಅವರನ್ನು ಬೆಂಬಲಿಸುವ ತನಕ ನಾನು ನಿಮ್ಮೊಂದಿಗಿದ್ದೇನೆ", ಎಂದು ನಾವು ಘೋಷಿಸಿದೆವು. ಮತ್ತು ಅಲ್ಲಾಹನಿಗೆ ಸಚ್ಚಾರಿತ್ರತೆಯ ಸಾಲವನ್ನು ನೀಡಿರಿ. ನಾನು ನಿಮ್ಮ ದೋಷಗಳನ್ನು ಕ್ಷಮಿಸಿಬಿಡುತ್ತೇನೆ, ಮತ್ತು ಹೊಳೆಯು ಹರಿಯುವ ಉದ್ಯಾನಗಳೊಳಗೆ ಪ್ರವೇಶ ಮಾಡಿಸುತ್ತೇನೆ. ಈ ನಂತರ ಯಾರು ಸತ್ಯವನ್ನು ನಿಷೇಧಿಸುತ್ತಾನೆ, ಅವನು ನಿಶ್ಚಯವಾಗಿಯೂ ನೇರ ಮಾರ್ಗದಿಂದ ಪಥಭ್ರಷ್ಟಗೊಂಡಿದ್ದಾನೆ. ಏಕೆಂದರೆ, ಅವರು ತಮ್ಮ ಕರಾರನ್ನು ಉಲ್ಲಂಘಿಸಿದರು, ನಾವು ಅವರ ಮೇಲೆ ಶಾಪವನ್ನು ನೀಡಿದೆವು ಮತ್ತು ನಾವು ಅವರ ಹೃದಯಗಳನ್ನು ಕಠೋರಗೊಳಿಸಿದೆವು. ಪರಿಣಾಮವಾಗಿ, ಅವರಿಗೆ ನೀಡಲಾದ ಗ್ರಂಥವನ್ನು ಅವರು ವಿಕಾರಗೊಳಿಸಿದರು, ಮತ್ತು ಅದರ ಕೆಲವು ಭಾಗಗಳನ್ನು ಉಪೇಕ್ಷಿಸಿದರು. ಅವರಲ್ಲಿ ಕೆಲವರನ್ನು ಹೊರತುಪಡಿಸಿ, ನೀವು ಯಾವಾಗಲೂ ಅವರಿಂದ ವಂಚನೆಯನ್ನೇ ಕಾಣುತ್ತೀರಿ. ಆದುದರಿಂದ ನೀವು ಅವರನ್ನು ಕ್ಷಮಿಸಿರಿ ಮತ್ತು ನಿರ್ಲಕ್ಷಿಸಿರಿ, ಅಲ್ಲಾಹನು ಸಹಾನುಭೂತಿಯರನ್ನು ಪ್ರೀತಿಸುತ್ತಾನೆ. (5:12-13)

ಮರ್ಯಮರ ಮಗ ಈಸಾರು, ಈ ಕೃತಕ ಯಹೂದಿ ಧರ್ಮವನ್ನು ನಾಶ ಪಡಿಸುವ ಉದ್ದೇಶದೊಂದಿಗೆ ಕಳುಹಿಸಲಾಗಿದ್ದರು. ಅವರನ್ನು ಪವಿತ್ರ ಆತ್ಮದ ಜೊತೆಗೆ ಶಕ್ತಗೊಳಿಸಲಾಗಿತ್ತು ಮತ್ತು ಅಲ್ಲಾಹನ ಪವಾಡಗಳನ್ನು ನಿರ್ದೇಶನಗಳಾಗಿ ಪ್ರದರ್ಶನ ಮಾಡಿದರು. ತಾನು ತೌರಾತಿನ ನಿಯಮಗಳನ್ನು ಪುನರ್-ಸ್ಥಾಪಿಸುವ ಕಾರ್ಯಕ್ಕೆ ತನ್ನನ್ನು ಬದ್ಧನಾಗಿಸಲು ನಿರ್ದೇಶಿಸಲ್ಪಟ್ಟಿರುವೆನೆಂದು ಅವರು ಜನರಿಗೆ ಹೇಳಿದರು. ಅವರು ತನ್ನ ಸ್ವಂತ ಭಾಷೆಯಲ್ಲೇ ಆ ಮಾತುಗಳನ್ನು ಆಡಿದ್ದಾರೆಂಬುವುದು ವಾಸ್ತವವಾಗಿದೆ (ಅದನ್ನು ಕುರ್‌ಆನಿನಲ್ಲಿ ಅರಬೀ ಭಾಷೆಯಲ್ಲಿ ಉಲ್ಲೇಖಿಸಲಾಗಿದೆ). ಅವರು ಹೇಳಿದ *ಸ್ವಲಾತಿ ವ ಝಕಾತಿ* ಕುರ್‌ಆನಿನಲ್ಲಿ ಕಂಡುಬರುತ್ತದೆ. ಕೆಳಗಿನ ಹೇಳಿಕೆಯು ಅವರು ತೊಟ್ಟಿಲಿನಲ್ಲಿರುವಾಗ ಹೇಳಿರುವುದಾಗಿದೆ:

ವ-ಜಅಲನೀ ಮುಬಾರಕನ್ ಐನ ಮಾ ಕುಂತು, ವ ಔಸ್ಸಾನೀ ಬಿ-ಸ್ವಲಾತಿ ವ-ಝ್ಝಕಾತಿ, ಮಾ ದುಮ್ತು ಹಯ್ಯಾ (19:31)

ಮತ್ತು (ಅಲ್ಲಾಹನು) ನಾನೆಲ್ಲಿದ್ದರೂ ನನ್ನನ್ನು ಅನುಗ್ರಹೀತನಾಗಿರುವಂತೆ ಮಾಡಿದನು ಮತ್ತು ನನ್ನ ಬದುಕಿನುದ್ದಕ್ಕೂ ಕರ್ತವ್ಯಗಳನ್ನು ಹಾಗೂ ಶುದ್ಧತೆಯನ್ನು ಪಾಲಿಸುತ್ತಿರಲು ಆಜ್ಞೆಯಿತ್ತನು. (19:31)

ಮರ್ಯಮರ ಮಗ ಈಸಾರು, *ವ ಔಸ್ಸಾನೀ ಬಿ-ಸ್ವಲಾತಿ ವ-ಝ್ಝಕಾತಿ* ಎಂದು ಹೇಳಿದಾಗ, ತಾನು ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸಲು ಆಜ್ಞಾಪಿತನಾಗಿದ್ದೇನೆ, ಎಂಬುವುದು ಅದರ ಅರ್ಥವಲ್ಲ ಆದರೆ, ಇಸ್ರಾಯೀಲರ ಸಂತತಿಯನ್ನು ಮೂಸಾರಿಗೆ ನೀಡಲಾದ ಮೂಲತತ್ವಕ್ಕೆ ಮರಳುವಂತೆ ಕರೆ ನೀಡಿ, ಅವರನ್ನು ಸುಧಾರಿಸುದಕ್ಕೆ ಬದ್ಧನಾಗಲು ನಿರ್ದೇಶಿಸಲಾಗಿದ್ದೇನೆ ಎಂದಾಗಿದೆ. ಯಹೂದಿ ಧರ್ಮವನ್ನು ನಾಶಗೊಳಿಸಲು ಅವರಿಗೆ ಕಲ್ಪಿಸಿದರು. ಅದು ಅವರ ಬದ್ಧತೆಯಾಗಿತ್ತು. ಅಲ್ಲಾಹನು ಅವರು ಹುಟ್ಟಿದ ದಿನದಿಂದಲೇ ಅವರಿಗೆ ಗ್ರಂಥದ ಜ್ಞಾನವನ್ನು ಮತ್ತು ಬುದ್ಧಿವಂತಿಕೆಯನ್ನು ನೀಡಿದ್ದನು.

ಮುಹಮ್ಮದರ ಬದ್ಧತೆಗಳು

ಮುಹಮ್ಮದರು ಇಬ್ರಾಹೀಮರ ಅದೇ ಕ್ರಮವನ್ನು ಅನುಸರಿಸುತ್ತಿದ್ದರು ಎಂದು ಮೇಲಿನ 6:160 ರಲ್ಲಿ ನಾವು ಕಂಡೆವು. ಕುರ್‌ಆನ್ ಒಂದು ಹೊಸ ಅವತೀರ್ಣವೋ ಅಥವಾ ಅಲ್ಲಾಹನ ಹೊಸ ಮಾರ್ಗದರ್ಶನವೋ ಅಲ್ಲ. ಅದು ಇಬ್ರಾಹೀಮ್ ಮತ್ತು ಮೂಸಾರಿಗೆ ನಿರ್ದೇಶಿಸಲಾದ ಶಾಸನಗಳ ಅದೇ ಶ್ರೇಣಿಯಾಗಿದೆ. ಎಲ್ಲಾ ಗ್ರಂಥಗಳ ಸತ್ವವು ಒಂದೇ ಆಗಿದೆ.

ಇನ್ನ ಹಾಧಾ ಲಫೀ ಸುಹುಫಿಲ್ ಊಲಾ, ಸುಹುಫಿ ಇಬ್ರಾಹೀಮ ವ ಮೂಸಾ. (87:18-19)

ಖಂಡಿತವಾಗಿಯೂ, ಇದು (ಕುರ್‌ಆನ್), ಇಬ್ರಾಹೀಮರ ಮತ್ತು ಮೂಸಾರ ಗ್ರಂಥವು ಸೇರಿದಂತೆ, ಹಿಂದಿನ ಗ್ರಂಥಗಳಲ್ಲಿದ್ದವುಗಳೇ ಆಗಿದೆ. (87:18-19)

ನಾವು ಇಬ್ರಾಹೀಮರು ತನ್ನ ಭಾಷೆಯಲ್ಲೇ ಸ್ವಲಾತ್ ಪದವನ್ನು ಬಳಸಿದ್ದರು ಎಂದು ನೋಡಿದೆವು, ಹಾಗೆಯೇ ಮೂಸಾರು ಮತ್ತು ಈಸಾರು ತಮ್ಮ ಭಾಷೆಯಲ್ಲೇ ಬಳಸಿದ್ದರು. ಕುರ್‌ಆನಿನಲ್ಲಿ ಸ್ವಲಾತ್ ಪದದ ಮೊದಲ ಪ್ರಯೋಗ 2:2-3 ರಲ್ಲಿ ಕಂಡುಬರುತ್ತದೆ:

ಆ ಗ್ರಂಥವು ಸಂಶಯರಹಿತವಾಗಿದೆ, ಅದು ಅನುಸರಿಸುವವರಿಗೆ ಒಂದು ಮಾರ್ಗದರ್ಶಿಯಾಗಿದೆ, ಅವರು ಅದೃಶ್ಯತೆಯಲ್ಲಿ ವಿಶ್ವಾಸವಿಡುತ್ತಾರೆ ಮತ್ತು ಬದ್ಧತೆಗಳನ್ನು ಎತ್ತಿಹಿಡಿಯುತ್ತಾರೆ (ಸ್ವಲಾತ) ಮತ್ತು ನಾವು ಅವರಿಗೆ ನೀಡಿದ ಸೌಕರ್ಯಗಳಿಂದ ಅವರು ವ್ಯಯಿಸುತ್ತಾರೆ. (2:2-3)

ಸೂರ 2 ಆರಂಭದಲ್ಲಿರುವ ಸ್ವಲಾತ್ ಪದವು, ಅದೃಷ್ಯನಾದ ಅಲ್ಲಾಹನಲ್ಲಿ ವಿಶ್ವಾಸವಿಡುವವರನ್ನು ಮತ್ತು ಅವನನ್ನು ಅನುಸರಿಸುವವರನ್ನು ಸೂಚಿಸುತ್ತದೆ. ಅವರು ಕುರ್‌ಆನಿನ ಸಿದ್ಧಾಂತಗಳಿಗೆ ಬದ್ಧರಾಗಿದ್ದಾರೆ ಮತ್ತು ಇತರರಿಗೆ ದಾನಶೀಲರಾಗಿದ್ದಾರೆ. ಇದು ಅವರ ಬದ್ಧತೆಯ ಭಾಗವಾಗಿದೆ. ಮತ್ತಷ್ಟು ಓದುವಾಗ, ಹೆಚ್ಚುವರಿ ಬದ್ಧತೆಗಳ ವಿವರವನ್ನು ನೀಡುವ ವಚನಗಳನ್ನು ಕಾಣಬಹುದು. 2:4 ಹೇಳುತ್ತದೆ, '*ಅವರು ನಿಮಗೆ ನಿಮ್ಮ ಪ್ರಭುವಿನಿಂದ ಅವತೀರ್ಣವಾದುದರಲ್ಲಿ ಮತ್ತು ನಿಮಗಿಂತ ಮುಂಚೆ ಅವತೀರ್ಣವಾದುದರಲ್ಲಿ ವಿಶ್ವಾಸವಿಡುತ್ತಾರೆ. ಮತ್ತು ಮುಂದಿನ ಜೀವನದ ಬಗ್ಗೆ ಸಕರಾತ್ಮಕವಾಗಿ ಖಚಿತರಾಗಿದ್ದಾರೆ*'. ಇಲ್ಲಿ '*ಅವರು ಹಿಂದಿನ ಗ್ರಂಥದಲ್ಲೂ ವಿಶ್ವಾಸವಿಡುತ್ತಾರೆ*' ಎಂದು ಹೇಳಿರುವಾಗ, ಅದರ ಅರ್ಥವು - ಕುರ್‌ಆನಿಗೂ, ಹಿಂದೆ ಅವತೀರ್ಣವಾದ ಗ್ರಂಥಗಳಿಗೂ ನಡುವೆ ಸಂಪರ್ಕವಿದೆ ಎಂಬುವುದನ್ನೂ ನಾವು ಗಮನಿಸಬೇಕಾಗಿದೆ.

ಕುರ್‌ಆನ್ ಅಲ್ಲಾಹನಿಂದ ಬಂದಿರುವುದು ಎಂದು ವಿಶ್ವಾಸವಿರಿಸುವವರು, ಅದನ್ನು ಸಂಪೂರ್ಣವಾಗಿ ಸ್ವೀಕರಿಸಲು ಬದ್ಧರಾಗಿರುತ್ತಾರೆ. ನಾವು ವಿಧ್ಯುಕ್ತ ಪ್ರಾರ್ಥನೆಯ ಮೂಲಕ ದಾನವನ್ನು ಮಾಡಲು ಸಾಧ್ಯವಿಲ್ಲ, ನಾವು ವಿಧ್ಯುಕ್ತ ಪ್ರಾರ್ಥನೆಯ ಮೂಲಕ ಅಲ್ಲಾಹನ ಗ್ರಂಥಗಳಲ್ಲಿ ವಿಶ್ವಾಸವಿಡಲು ಸಾಧ್ಯವಿಲ್ಲ, ಆದ್ದರಿಂದ 2:3 ರಲ್ಲಿನ ಸ್ವಲಾತ್ ಪದವು ವಿಧ್ಯುಕ್ತ ಪ್ರಾರ್ಥನೆ ಎಂದು ಅರ್ಥಕೊಡಲು ಸಾಧ್ಯವಿಲ್ಲ.

ನಾವು ಗ್ರಂಥದಲ್ಲಿ ವಿಶ್ವಾಸವಿಟ್ಟರೆ, ಎಲ್ಲಾ ನಿರ್ದೇಶಿತ ಆದೇಶಗಳನ್ನು ಅದರಲ್ಲಿ ಕಾಣಬಹುದು. 'ನಾವು ಆಲಿಸಿದೆವು, ಮತ್ತು ಅನುಸರಣೆಯನ್ನು ಸ್ವೀಕರಿಸಿದೆವು' *(ಸಮಿ'ನಾ ವ-ಅಥ'ನ)* ಎಂದು ನಾವು ಹೃದಯದಾಳದಿಂದ ಹೇಳಿದರೆ, ಅಲ್ಲಾಹನು ತನ್ನ ಕೃಪೆಯಿಂದ ನಮ್ಮ ಹೃದಯಗಳನ್ನು ಶಾಂತಿಪರತೆಗೆ ತೆರೆದು ಕೊಡುತ್ತಾನೆ, ನಾವು ಅಲ್ಲಾಹನೊಂದಿಗೆ ಒಪ್ಪಂದಕ್ಕೆ ಪ್ರವೇಶಿಸುವುದು ಆ ಕ್ಷಣವಾಗಿದೆ:

> ನಿಮ್ಮ ಮೇಲೆ ಅಲ್ಲಾಹನ ಅನುಗ್ರಹಗಳನ್ನು ಮತ್ತು ಅವನೊಂದಿಗಿರುವ ಕರಾರನ್ನು ನೀವು ಸ್ಮರಿಸಿರಿ. ಮತ್ತು 'ನಾವು ಆಲಿಸಿದೆವು, ಮತ್ತು ಅನುಸರಣೆಯನ್ನು ಸ್ವೀಕರಿಸಿದೆವು' ನೀವು ಹೇಳಿದ ಕ್ಷಣದಲ್ಲಿ ಅವನು ನಿಮ್ಮೊಂದಿಗೆ ಮಾಡಿದ ಒಪ್ಪಂದವನ್ನು ಎತ್ತಿಹಿಡಿಯಬೇಕು. ನೀವು ಅಲ್ಲಾಹನನ್ನು ಲಕ್ಷಿಸಿರಿ. ಅಲ್ಲಾಹನು ನಿಮ್ಮ ಅಂತರಾಳದ ಚಿಂತನೆಗಳನ್ನು ಸಂಪೂರ್ಣವಾಗಿ ಅರಿತಿರುವವನಾಗಿದ್ದಾನೆ. (5:7)

ನಮ್ಮ ಸೃಷ್ಟಿಕರ್ತನನ್ನು ಕಣ್ಣಾರೆ ಕಾಣಲು ನಮಗೆ ಸಾಧ್ಯವಿಲ್ಲ, ಆದರೆ ಅವನಿಗೆ ನಮ್ಮ ಅಂತರಾಳದ ಆಲೋಚನೆಗಳನ್ನು ಕೂಡಾ ತಿಳಿಯಲು ಸಾಧ್ಯವಿದೆ ಎಂದು ಕುರ್‌ಆನ್ ಹೇಳುತ್ತದೆ. ಅವನ ನಿರ್ದೇಶಿತ ರೀತಿಗೆ, ನಮ್ಮ ಹೃದಯವು 'ನಾವು ಆಲಿಸಿದೆವು, ಮತ್ತು ಅನುಸರಣೆಯನ್ನು ಸ್ವೀಕರಿಸಿದೆವು' ಎಂದು ಹೇಳುವ ಕ್ಷಣದಲ್ಲೇ, ನಾವು ನಮ್ಮ ಸ್ವಲಾತನ್ನು ಎತ್ತಿಹಿಡಿಯುವಂತೆ ಒಪ್ಪಿಕೊಂಡಿದ್ದೇವೆ.

> ಗ್ರಂಥದಲ್ಲಿ ನಿಮ್ಮ ಮೇಲೆ ಅವತರಿಸಿದ್ದನ್ನು ಪಠಿಸಿರಿ ಮತ್ತು ಬದ್ಧತೆಗಳನ್ನು (ಅಥವಾ ನೀವು ಬದ್ಧರಾಗಿರುವುದನ್ನು, ಅಂದರೆ, ನೀವು ಗ್ರಂಥದಲ್ಲಿ ಓದಿಕೇಳಿಸುತ್ತಿರುವ ಅವತೀರ್ಣಗೊಂಡಂತಹ ಆದೇಶಗಳನ್ನು) ಎತ್ತಿಹಿಡಿಯಿರಿ. ನಿಶ್ಯಯವಾಗಿಯೂ, ನಿಮ್ಮ ಬದ್ಧತೆಗಳು, ನಿಮ್ಮನ್ನು ಕೆಡುಕುಗಳಿಂದ

> ದೂರ ಇರಿಸಿಕೊಳ್ಳುತ್ತದೆ ಮತ್ತು ಅದು ಅಲ್ಲಾಹನ ಸ್ಮರಣೆಯೂ ಆಗಿದೆ. ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಅರಿಯುತ್ತಾನೆ. (29:45)

ಮೇಲಿನ ವಚನದಲ್ಲಿ ಆವರ್ಣ ಚಿಹ್ನೆಯ (ಬ್ರಾಕೆಟ್) ಒಳಗಡೆ ಕೊಟ್ಟಿರುವುದು ನನ್ನ ಸ್ವಂತ ವಿವರಣೆಯಾಗಿದೆ. 29:45 ರಲ್ಲಿ ಅಲ್ಲಾಹನು ಭರವಸೆಯನ್ನು ನೀಡುತ್ತಾನೇನೆಂದರೆ, ನಾವು ಗ್ರಂಥವನ್ನು ಪಠಿಸಿದರೆ ಮತ್ತು ಅವನಿಂದ ನಿರೂಪಿಸಲಾದ ಮೌಲ್ಯಗಳಿಗೆ ನಮ್ಮನ್ನು ಬದ್ಧರನ್ನಾಗಿಸಿದರೆ, ಅದು ನಮ್ಮನ್ನು ಕೆಟ್ಟ ಸಂಗತಿಗಳಿಂದ ಅಥವಾ ನಮ್ಮನ್ನು ದುಷ್ಟ ಕೃತಿಗಳಲ್ಲಿ ತೊಡಗಿಸಿಕೊಳ್ಳದಂತೆ ಅವುಗಳಿಂದ ದೂರವಿರಿಸುತ್ತದೆ. ಇದು ಅವನನ್ನು ನೆನಪಿಸುವ ಒಂದು ವಿಧಾನವಾಗಿದೆ ಹಾಗೂ ಇದೊಂದು ಮಹಾ-ಸಾಧನೆಯಾಗಿದೆ. ಅಂದರೆ, ಕುರ್‌ಆನಿನ ಬೋಧನೆಗಳಲ್ಲಿರುವ ನಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವುದು ಮತ್ತು ಎಲ್ಲ ಸಮಯದಲ್ಲಿಯೂ ಆ ಬೋಧನೆಗಳನ್ನು ಪರಿಶುದ್ಧವಾಗಿಡುವುದು, ಅಲ್ಲಾಹನನ್ನು ಸ್ಮರಿಸುವ ಒಂದು ರೀತಿಯಾಗಿದೆ – **ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಹಾಗೂ ರಾತ್ರಿಯ ಭಾಗಗಳಲ್ಲಿ ಈ ನಿಲುವನ್ನು, ಜೀವನದ ಒಂದು ರೀತಿಯಾಗಿ ಹಾಗೂ ನಿರಂತರ ಪ್ರಕ್ರಿಯೆಯಾಗಿ ನೆಲೆನಿಲ್ಲಿಸಬೇಕಾಗಿದೆ.** ನಾವು ಅವನನ್ನು ಜ್ಞಾಪಿಸುತ್ತಿರುವವರೆಗೆ ನಾವು ನಮ್ಮ ಜೀವನದಲ್ಲಿ ಉತ್ತಮ ಕಾರ್ಯಗಳನ್ನು ಮಾಡಲು ಬದ್ಧರಾಗಿರುತ್ತೇವೆ.

> ನೀವೂ ಹಾಗೂ ನಿಮ್ಮ ಜೊತೆಗೆ ಪ್ರಶ್ಚಾತಾಪಪಟ್ಟವರೂ, ನಿಮಗೆ ನಿರ್ದೇಶಿಸಲಾಗಿರುವುದನ್ನು ಎತ್ತಿಹಿಡಿಯಿರಿ ಮತ್ತು ಮಿತಿಮೀರಬೇಡಿರಿ. ವಾಸ್ತವವಾಗಿ, ನಿಮ್ಮ ಪ್ರಭು ನಿಮ್ಮ ಕಾರ್ಯಗಳನ್ನೆಲ್ಲಾ ನೋಡುತ್ತಿದ್ದಾನೆ. ಅಕ್ರಮಿಗಳ ಕಡೆಗೆ ವಾಲಬೇಡಿರಿ, ಅನ್ಯಥಾ ಅವರು ನಿಮಗೆ ನರಕಾಗ್ನಿಯ ಸವಿಯುನ್ನುವಂತೆ ಮಾಡಿಬಿಡುವರು ಮತ್ತು ರಕ್ಷಕನಾಗಿ ಅಲ್ಲಾಹನನ್ನು ಹೊರತುಪಡಿಸಿ ನಿಮಗೆ ಬೇರೆ ಯಾರೂ ಸಿಗಲಾರರು ನಂತರ ನಿಮಗೆ ಎಲ್ಲಿಂದಲೂ ಸಹಾಯವು ಒದಗದು. ಮತ್ತು ಹಗಲಿನ ಎರಡು ತುದಿಗಳ ಮುಖಾಂತರ ಹಾಗೂ ರಾತ್ರಿಯ ಭಾಗಗಳಲ್ಲಿ ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ *(ಅಖಿಮಿ ಸ್ವಲಾತ)*. ನಿಶ್ಚಯವಾಗಿಯೂ, ಉತ್ತಮ ಕಾರ್ಯಗಳು ಕೆಟ್ಟವುಗಳನ್ನು ರದ್ದುಮಾಡುತ್ತದೆ. ಇದು ನೆನಪಿಸ ಬಯಸುವವರಿಗೆ ಒಂದು ಸ್ಮರಣೆಯಾಗಿದೆ. ನೀವು ದೃಢಸಂಕಲ್ಪರಾಗಿರಿ. ಅಲ್ಲಾಹನು ಸದ್ಗುಣರಿಗೆ ಪ್ರತಿಫಲ ಕೊಡುವುದರಲ್ಲಿ ವಿಫಲನಾಗುವುದಿಲ್ಲ. (11:112-115)

ಮೇಲಿನ ವಚನಗಳಲ್ಲಿ ಸ್ವಲಾತಿನ ಅರ್ಥವು ಸ್ಫಟಿಕದಂತೆ ಸ್ಪಷ್ಟವಾಗಿದೆ. ಇಲ್ಲಿ ವಿಧ್ಯುಕ್ತ ಪ್ರಾರ್ಥನೆ ಎಂಬುವುದು ಅರ್ಥಹೀನವಾಗಿದೆ. ಸೃಷ್ಟಿಕರ್ತನನ್ನು ನೆನಪಿಸುವ ಮತ್ತು ಸತ್ಕಾರ್ಯಗಳನ್ನು ಮಾಡಲು ನಮ್ಮನ್ನು ಬದ್ಧಗೊಳಿಸುವ ಮಾಧ್ಯಮದಂತೆ ಸ್ವಲಾತನ್ನು ಪರಿಗಣಿಸಬೇಕಾಗಿದೆ. ಅವುಗಳು ನಿಸ್ಸಂಶಯವಾಗಿಯೂ ನಮ್ಮ ಜೀವನದ ಎಲ್ಲಾ ಋಣಾತ್ಮಕ ಅಂಶಗಳನ್ನು ರದ್ದುಪಡಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಗುಪ್ತವಿಧ್ಯೆಯೇನೂ ಇಲ್ಲ.

ಆಚರಣೆಗಳಿಲ್ಲದೆ ಅಲ್ಲಾಹನ ಸಹಾಯ ಯಾಚನೆ

ಅಲ್ಲಾಹನು ಯಾವಾಗಲೂ ಸನಿಹದಲ್ಲಿರುತ್ತಾನೆ. ನಾವು ನೇರವಾಗಿ ಅವನ ನೆರವನ್ನು ಯಾಚಿಸಬೇಕೆಂದು ಹೇಳಲಾಗಿದೆ. ನಾವು ಅಲ್ಲಾಹನಿಂದ ನಿಗದಿತವಾದ ನಿರ್ಬಂಧಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಲು ಮತ್ತು ಉತ್ತಮ ಕಾರ್ಯಗಳನ್ನು ಮಾಡಲು ನಿರಂತರವಾಗಿ ಬದ್ಧರಾಗುತ್ತಾ ನಾವು ತಾಳ್ಮೆಯನ್ನು ವಾಡಿಕೆಮಾಡಿಕೊಳ್ಳಬೇಕು.

> ನನ್ನ ಸೇವಕರು ನನ್ನ ಬಗ್ಗೆ ಕೇಳಿದರೆ, ಹೀಗೆ ಹೇಳಿರಿ, "ನಾನು ತುಂಬಾ ಸನಿಹದಲ್ಲಿದ್ದೇನೆ. ನನ್ನನ್ನು ಕರೆಯುವ *ಯಾವುದೇ* ಕರೆನೀಡುವವನ ಕರೆಗೆ ನಾನು ಪ್ರತಿಕ್ರಿಯೆ ನೀಡುತ್ತೇನೆ." ಆದ್ದರಿಂದ, ಅವರು ಮಾರ್ಗದರ್ಶನ ಹೊಂದುವ ಸಲುವಾಗಿ, ನನಗೆ ಪ್ರತಿಕ್ರಿಯೆ ನೀಡಲಿ ಮತ್ತು ನನ್ನಲ್ಲಿ ವಿಶ್ವಾಸವಿಡಲಿ. (2:186)
>
> ತಾಳ್ಮೆಯೊಂದಿಗೆ ಸಹಾಯವನ್ನು ಯಾಚಿಸಿರಿ ಮತ್ತು ಬದ್ಧರಾಗಿರಿ. ವಿನಯಶೀಲರನ್ನು ಮತ್ತು ತಾವು ತಮ್ಮ ಪ್ರಭುವನ್ನು ಭೇಟಿಮಾಡಲಿದೆ ಎಂದು ತಿಳಿದುಕೊಳ್ಳುವವರನ್ನು ಹೊರತು ಪಡಿಸಿ, ಇದು ನಿಶ್ಚಯವಾಗಿಯೂ ಕಷ್ಟಕರ ಕಾರ್ಯವಾಗಿದೆ. ಅವರ ಮರಳಿಕೆಯು ಅವನ ಕಡೆಗಾಗಿದೆ. (2:45-46)

ನಾವು ಅವನನ್ನು ನೋಡಿಲ್ಲವಾದರೂ ನಾವು ಸರ್ವಾಂತರ್ಯಾಮಿ (ಸರ್ವವ್ಯಾಪ್ತಿ) ಯಾದ ಅಲ್ಲಾಹನ ಮೇಲೆ ನಮ್ಮ ಭರವಸೆಯನ್ನು ಇಡಬೇಕು. ವಿನಮ್ರರಾಗಿರುವವರಿಗೆ ಮತ್ತು ಅಂತಿಮವಾಗಿ ಅವನನ್ನು ಭೇಟಿ ಮಾಡಲಿದೆ ಎಂದು ತಿಳಿದಿರುವವರನ್ನು ಹೊರತು ಪಡಿಸಿದರೆ, ಇದು ಕಷ್ಟಕರವಾದ ಸಂಗತಿಯೆಂದು ಅಲ್ಲಾಹನು ಸ್ವತಃ ಹೇಳುತ್ತಾನೆ. ಆದರೆ ಮನುಷ್ಯರು ಚಂಚಲತೆಯ ಮತ್ತು ಅಭದ್ರತೆಯ ಭಾವನೆಯಿಂದ ತುಂಬಿದ ಸ್ವಭಾವದವರಾಗಿದ್ದಾರೆ[46]. ಆಚಾರಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳು ಅವರಿಗೆ ಹಿತವಾದ ಮತ್ತು ಧೈರ್ಯಕೊಡುವ ಆಕರ್ಷಣೆಗಳಾಗಿವೆ. ಅವುಗಳು ಅವರಿಗೆ ತೃಪ್ತಿಯನ್ನು ಕೊಡುವ ಕಾರ್ಯವನ್ನು ನಿರ್ವಹಿಸುತ್ತವೆ. ಅವುಗಳು ಆರಾಧನೆಗೆ ದಾರಿತೋರಿಸುತ್ತದೆ. ಅವರಲ್ಲಿನ ನಿಷ್ಠಾವಂತರು ನಂತರ ಭೌತಿಕವಾದ ಅಥವಾ ಸ್ಪರ್ಶಿಸಲಾಗುವಂತಹ ಯಾವುದಾದರೊಂದರ ಮೇಲೆ ತಮ್ಮ ಆತಂಕಗಳು, ನಿರೀಕ್ಷೆಗಳು, ಕನಸುಗಳು, ಮತ್ತು ಆಸೆಗಳನ್ನು ಬಾಹ್ಯಗೊಳಿಸುತ್ತಾರೆ. ನೇರವಾದ ಮತ್ತು ಮುಚ್ಚುಮರೆಯಿಲ್ಲದ ಸಂಭಾಷಣೆಗಿಂತ, ವಿಧಿವತ್ತಾದ ಪ್ರಾರ್ಥನೆಗಳ ಮೂಲಕ ಅಲ್ಲಾಹನೊಂದಿಗೆ ಮಾತನಾಡಲು ಅವರಿಗೆ ಬಹಳಷ್ಟು ಸರಳವಾಗಿದೆ.

ಮರದ ತುಂಡು, ಶಿಲುಬೆ, ಒಂದು ನಕ್ಷತ್ರನೊಂದಿಗಿರುವ ನವಚಂದಿರ, ಶಿಲೆ, ಬಂಡೆ, ಗೋಡೆ, ಕಲ್ಲಿನ ಮನೆ, ಮಸೀದಿ ಇತ್ಯಾದಿ ವಸ್ತುಗಳ ಮೇಲೆ ಮೂರ್ತಿ ಆರಾಧಕರು ತಮ್ಮ ಭರವಸೆಯನ್ನು ಇಡುತ್ತಾರೆ. ಈ ವಸ್ತುಗಳು ಒಂದು ಸಾಮೂಹಿಕ ವಿಚಾರದ ಮೇಲೆ ಕೇಂದ್ರೀಕರಿಸಲು ಸಹಾಯ ಮಾಡುತ್ತವೆ. ಮನುಷ್ಯರ ಮೇಲೆ ತಮ್ಮ

[46] ಮನುಷ್ಯರು ಸ್ವಭಾವದಲ್ಲಿ ದುರ್ಬಲರಾದ ಕಾರಣ, ಅಲ್ಲಾಹನು ಸಂಗತಿಗಳನ್ನು ಸುಲಭಗೊಳಿಸಲು ಇಚ್ಛಿಸುತ್ತಾನೆ. (4:28)

ಭರವಸೆಯನ್ನಿಡುವ ಜನರೂ ಇದ್ದಾರೆ. ಆರಾಧನೆಯ ದೈಹಿಕ ಚಟುವಟಿಕೆಗಳ ಮೂಲಕ ತಮ್ಮ ಅರ್ಧ-ದೇವರುಗಳು ಮತ್ತು ಮೂರ್ತಿಗಳನ್ನು ಹೊಗಳುತ್ತಾರೆ. ಆದಾಗ್ಯೂ, ಕಾಣದ ಅಲ್ಲಾಹನನ್ನು ಹೊಗಳಲು ಮತ್ತು ಸಾಕ್ಷಿಗಳಾಗಿರಲು ಆಯ್ಕೆಮಾಡುವವರು, ಕೇವಲ ಉತ್ತಮ ಕಾರ್ಯಗಳನ್ನು ಮಾಡುತ್ತಾ ತನ್ನ ಬದ್ಧತೆಯನ್ನು ಎತ್ತಿಹಿಡಿಯಬೇಕಾಗಿದೆ. ಇಂತಹ ಸರಳ ಸತ್ಯವು ಇಷ್ಟೊಂದು ಜನರನ್ನು ಅಚ್ಚರಿಗೊಳಿಸುತ್ತದೆ ಎಂದು ಯೋಚಿಸಿವುದು ವಿಚಿತ್ರವಾಗಿದೆ. ಉತ್ತಮ ಕಾರ್ಯಗಳನ್ನು ಮಾಡುವುದರ ಮೂಲಕ ಅಲ್ಲಾಹನಿಗೆ ಒಂದು ಸಾಕ್ಷಿಯಾಗಿ ಇರುವುದಕ್ಕಿಂತ ಸರಳ ಸಾಧ್ಯವಾಗಿರುವುದು ಬೇರೇನಿದೆ! ಆದರ್ಶದೊಂದಿಗೆ ಮುನ್ನಡೆಯುತ್ತಾ ಸಾಕ್ಷಿಗಳಾಗಿರಬೇಕು. ಅದರ ಬಗ್ಗೆ ಮಾತನಾಡುವ ಅಗತ್ಯವಿಲ್ಲ. ಕೇವಲ ಮಾಡಿದರೆ ಸಾಕು.

ಮಾನವರಿಗೆ ಅಲ್ಲಾಹನನ್ನು ಕರೆಯುವ ಅಗತ್ಯ ಬಂದರೆ, ಅವರು ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಅವನನ್ನು ಕರೆಯಬಹುದು. ವಿಧಿವತ್ತಾದ ವುಝೂ (ಶುದ್ಧೀಕರಣ) ಮತ್ತು ಅದರ ಸಹವರ್ತಿ ಪ್ರಕ್ರಿಯೆಗಳು ಅನಗತ್ಯವಾಗಿದೆ. ವಾಸ್ತವವಾಗಿ, ಅಲ್ಲಾಹನನ್ನು ಕರೆಯಲು ತುಂಬಾ ದುರಾಭಿಮಾನ ಪಡುವವರು, ನರಕದಲ್ಲಿ ಸುಡಲ್ಪಡುವರು ಎಂದು ಕುರ್‌ಆನ್ ನಮಗೆ ನೆನಪಿಸುತ್ತದೆ. ನಾವು ಅಲ್ಲಾಹನನ್ನು ನೆನಪಿಸಿದರೆ, ಅವನು ನಮ್ಮನ್ನು ನೆನಪಿಸುತ್ತಾನೆ. ಇದೊಂದು ಅನ್ಯೋನ್ಯವಾದ ಸಂಬಂಧವಾಗಿದೆ.

> ನಿಮ್ಮ ಪ್ರಭುವು ಹೇಳುತ್ತಾನೆ, “ನನ್ನನ್ನು ಕರೆಯಿರಿ, ಮತ್ತು ನಾನು ನಿಮ್ಮ ಕರೆಗೆ ಉತ್ತರವನ್ನು ನೀಡುತ್ತೇನೆ. ನನ್ನನ್ನು ಸೇವೆ ಮಾಡಲು ದುರಹಂಕಾರ ತೋರಿಸುವವರು, ಅವಮಾನಿತರಾಗಿ ನರಕಕ್ಕೆ ಪ್ರವೇಶಿಸುವರು.” (40:60)

> ಆದ್ದರಿಂದ, ನೀವು ನನ್ನನ್ನು ಸ್ಮರಿಸಿರಿ[47], ನಾನು ನಿಮ್ಮನ್ನು ಸ್ಮರಿಸುತ್ತೇನೆ. ಮತ್ತು ನನಗೆ ಕೃತಜ್ಞರಾಗಿರಿ ಮತ್ತು ತಿರಸ್ಕರಿಸದಿರಿ. (2:152)

ಸಹಾಯ, ಬುದ್ಧಿವಂತಿಕೆ, ದೃಢನಿಷ್ಠೆ, ಬೆಂಬಲ, ಹಣ, ಮಾರ್ಗದರ್ಶನ ಅಥವಾ ಯಾವುದಕ್ಕೂ ಹಾಗೂ ಎಲ್ಲಾದಕ್ಕೂ ಅಲ್ಲಾಹನನ್ನು ಯಾಚಿಸಬೇಕಾಗಿರುವುದು ಅಲ್ಲಾಹನ ಸೇವೆ ಮಾಡುವ ವ್ಯಕ್ತಿಗೆ ಕಾರ್ಯಗತಗೊಳಿಸಲಾದ ಪರತ್ತಾಗಿದೆ. ಅಲ್ಲಾಹನು ನೆರವು ಮತ್ತು ಮಾರ್ಗದರ್ಶನದ ಆಶ್ವಾಸನೆಯನ್ನು ನೀಡಿದ್ದಾನೆ, ಆದರೂ ಅವರು ತಮ್ಮ ಸಂದೇಶವಾಹಕರು, ಸಂತರು ಮತ್ತು ಸಮಾಧಿಗಳಲ್ಲಿರುವ ತಮ್ಮ ಸತ್ತ ಮೂರ್ತಿಗಳೊಂದಿಗೆ ಮೊರೆಯಿಡುತ್ತಾರೆ, ಮತ್ತು ಕೆಲವರು *ಜಿನ್ನ್*ಗಳನ್ನು ಯಾಚಿಸುತ್ತಾರೆ.

---

[47] ಅಲ್ಲಾಹನನ್ನು ಸ್ಮರಿಸಲು, ಜೀವನದ ಕ್ರಮಬದ್ಧ ರೀತಿಗೆ ಬದ್ಧರಾಗಿರಬೇಕು ಎಂದು 29:45 ರಲ್ಲಿ ಹೇಳಲಾಗಿದೆ. ಸೃಷ್ಟಿಕರ್ತನ ಜೊತೆಗೆ ನಮ್ಮ ಸಂಬಂಧವು, ಅವನನ್ನು ‘ಸ್ಮರಿಸುವ’ ಮೂಲಕವಾಗಿದೆಯೇ ಹೊರತು ವಿಧಿವತ್ತಾದ ಪ್ರಾರ್ಥನೆಗಳ ಮೂಲಕವಲ್ಲ. ಅವನು ಭೂಮಿ-ಆಕಾಶಗಳಲ್ಲಿ ಬಹಳಷ್ಟು ನಿದರ್ಶನಗಳನ್ನು ನಮಗೆ ಒದಗಿಸಿದ್ದಾನೆ. ಒಂದು ಉತ್ತಮ ಉದಾಹರಣೆಯು 3:190-194 ನೀಡಲಾಗಿದೆ.

ನಾಣ್ಯದ ಇನ್ನೊಂದು ಬದಿಯು, ಅಲ್ಲಾಹನನ್ನು ಜ್ಞಾಪಿಸುವ ನಮ್ಮ ರೀತಿಯಾಗಿದೆ. ಅಲ್ಲಾಹನ ಅದ್ಭುತಗಳ ಮೇಲೆ ಪರ್ಯಾಲೋಚನೆ ನಡೆಸಲು, ಬುದ್ಧಿವಂತ ಹಾಗೂ ಪ್ರಜ್ಞೆಯುಳ್ಳ ಜೀವಿಗಳಿಗೆ ದೇಹ-ಚಲನೆಯ ಕ್ರಿಯೆಗಳ ಅಗತ್ಯವಿಲ್ಲ:

> ಭೂಮಿ-ಆಕಾಶಗಳ ಸೃಷ್ಟಿಯಲ್ಲೂ ಮತ್ತು ರಾತ್ರಿ ಹಗಲುಗಳ ಬದಲಾವಣೆಯಲ್ಲೂ ಬುದ್ಧಿವಂತರಿಗೆ ನಿದರ್ಶನಗಳಿವೆ. ಅವರು ಎದ್ದಾಗಲೂ, ಕುಳಿತಾಗಲೂ ಮಲಗಿದಾಗಲೂ ಅಲ್ಲಾಹನನ್ನು ಸ್ಮರಿಸುತ್ತಾರೆ ಮತ್ತು ಭೂಮಿ-ಆಕಾಶಗಳ ಸೃಷ್ಟಿಯ ಬಗ್ಗೆ ಪರ್ಯಾಲೋಚಿಸುತ್ತಾರೆ, (ಮತ್ತು ಹೀಗೆ ಹೇಳುತ್ತಾರೆ,) "ನಮ್ಮ ಪ್ರಭೂ, ನೀನು ಇವುಗಳನ್ನೆಲ್ಲಾ ವ್ಯರ್ಥ (ಅಥವಾ ಉದ್ದೇಶರಹಿತ)ವಾಗಿ ಸೃಷ್ಟಿಸಲಿಲ್ಲ. ನೀನು ಪರಿಶುದ್ಧನು. ಆದ್ದರಿಂದ ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು." (3:190-191)
>
> ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಇರುವುದೆಲ್ಲವೂ ಅವನಿಗೆ ಸೇರಿದ್ದಾಗಿದೆ, ಮತ್ತು ಅವನೊಂದಿಗಿರುವವರು ಅವನ ಸೇವೆಯನ್ನು ಮಾಡುವುದರಲ್ಲಿ ದುರಹಂಕಾರ ಪಡುವುದಿಲ್ಲ ಹಾಗೂ ದಣಿಯುವುದೂ ಇಲ್ಲ. ಅವರು ಹಗಲು ರಾತ್ರಿ ಅವನನ್ನು ವೈಭವೀಕರಿಸುತ್ತಾರೆ. (21: 19-20)

ಎಲ್ಲವನ್ನೂ ಪರಿಪೂರ್ಣ ಸಮತೋಲನದಲ್ಲಿ ಸೃಷ್ಟಿಸಲಾಯಿತು. ಅವನಿಗೆ ಹತ್ತಿರವಾದವರು ಅವನನ್ನು ಹಗಲು ರಾತ್ರಿ ವೈಭವೀಕರಿಸುತ್ತಾರೆ. ಇದು ಗೊತ್ತುಗುರಿಯಿಲ್ಲದ ಮೂಕನಾಟಕದ ಚಲನೆಗಳ ಪ್ರದರ್ಶನದ ನೆರವಿನಿಂದ ಸಾಧಿಸಬೇಕಾದುದಲ್ಲ. ಬದಲಿಗೆ, ಅವರು ಇದನ್ನು ಉನ್ನತ ಮಟ್ಟದ ನಡವಳಿಕೆಯ ನಿಯಮಾವಳಿಗೆ ತಮ್ಮನ್ನು ಹೊಂದಿಸಿಕೊಳ್ಳುವುದರಿಂದ ಸಾಧಿಸುತ್ತಾರೆ.

ಝಕರಿಯ್ಯಾರು ಅಲ್ಲಾಹನೊಂದಿಗೆ, ತನಗೊಂದು ಮಗನನ್ನು ಅನುದಾನ ಮಾಡಲು ವಿಶೇಷ ವಿನಂತಿಯನ್ನು ಮಾಡಿದರು. ಅವರ ವಿನಂತಿಯನ್ನು ಅಂಗೀಕರಿಸಿದ ಸುವಾರ್ತೆಯನ್ನು ಹಾಗೂ ಅಲ್ಲಾಹನನ್ನು ಹಗಲು ರಾತ್ರಿ ವೈಭವೀಕರಿಸುವ ಆಜ್ಞೆಯನ್ನು ತಲುಪಿಸಿದ ಒಂದು ಶಕ್ತಿಯು ಅವರಿಗೆ ಹೇಳಿತು. ಅಲ್ಲಾಹನು ಅವರಿಗೆ ವಿಧಿವತ್ತಾಗಿ ಪ್ರಾರ್ಥನೆ ಸಲ್ಲಿಸುತ್ತಿರಲು ಹೇಳಲಿಲ್ಲ. 3:41 ರಲ್ಲಿ ಝಕರಿಯ್ಯಾರು ಅಲ್ಲಾಹನೊಂದಿಗೆ ನೇರವಾಗಿ ಮಾತುಕತೆಯನ್ನು ಪ್ರಾರಂಭಿಸಿದ್ದನ್ನು ಕಾಣಬಹುದು, ಅವರು ಹೇಳಿದರು, "ಪ್ರಭುವೇ, ನನಗೆ ಒಂದು ನಿದರ್ಶನವನ್ನು ನೀಡು", ಶುಭವಾರ್ತೆಯನ್ನು ತಲುಪಿಸಲು ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಒಂದು ಅಜ್ಞಾತ ಶಕ್ತಿಯು ಅವರಿಗೆ ಹೇಳಿತು, "ನಿಮ್ಮ ನಿದರ್ಶನವು, ನಿಮಗೆ ಮೂರು ದಿನಗಳ ಕಾಲ, ಜನರೊಂದಿಗೆ ಸಂಕೇತಗಳ ಮೂಲಕವಲ್ಲದೆ ಮಾತನಾಡುವ ಹಾಗಿಲ್ಲ. ನೀವು ನಿಮ್ಮ ಪ್ರಭುವನ್ನು ಪದೇ ಪದೇ ಜ್ಞಾಪಿಸಬೇಕು ಮತ್ತು ಹಗಲು ರಾತ್ರಿ ಅವನನ್ನು ವೈಭವೀಕರಿಸುತ್ತಿರಬೇಕು."

ನಮ್ಮ ದೈನಂದಿನ ದಿನಚರಿಯಲ್ಲಿ, ಅವನ ಸೇವೆಯನ್ನು ಮಾಡುವ ಮಾಧ್ಯಮವಾಗಿ ನಾವು ಅಲ್ಲಾಹನನ್ನು ಹೊಗಳುತ್ತಿರಬೇಕು. ನಾವು ಉದಾಹರಣೆಗೆ, ನಮ್ಮ ಶತ್ರುಗಳಿಂದ ಸುಳ್ಳಾರೋಪಗಳ, ದೂಷಣೆಗಳ ಅಥವಾ ಬೀದಿಮಾತುಗಳಿಗೆ ಎದುರಾಗಿ ತಾಳ್ಮೆವಹಿಸಲು ನಮಗೆ ಉಪದೇಶಿಸಲಾಗಿದೆ. 20:130 ನಮಗೆ

ಹೇಳಲಾಗಿದೆ, “ಆದ್ದರಿಂದ, ನೀವು ಅವರ ಹೇಳಿಕೆಗಳಿಗೆ ಎದುರಾಗಿ ತಾಳ್ಮೆವಹಿಸಿರಿ, ಮತ್ತು ಸೂರ್ಯೋದಯ ಹಾಗೂ ಸೂರ್ಯಾಸ್ತದ ಮೊದಲು ಮತ್ತು ರಾತ್ರಿಯ ಭಾಗಗಳಲ್ಲಿ ಮತ್ತು ಹಗಲಿನ ಎರಡು ತುದಿಗಳ ಮುಖಾಂತರ, ನಿಮ್ಮ ಪ್ರಭುವಿನ ಘನತೆಯ ಗುಣಗಾನವನ್ನು ಮಾಡಿರಿ, ನೀವು ಆನಂದವನ್ನು ಪಡೆಯುವಿರಿ.”

ನಾವು ಕರೆಯುವ, ಯಾಚಿಸುವ, ಹೊಗಳುವ, ವೈಭವೀಕರಿಸುವ, ಗುಣಗಾನಿಸುವ ಅಥವಾ ಜ್ಞಾಪಿಸುವ ವಿಧಾನವನ್ನು ವಿಧಿಯುತಗೊಳಿಸುವ ಅಗತ್ಯವಿಲ್ಲ. ನಾವು ನಮ್ಮ ಹೃದಯದಲ್ಲಿ ಅವನನ್ನು ನಿರಂತರವಾಗಿ ಹೊಗಳುತ್ತಾ ಅಥವಾ ಮೆದುವಾಗಿ ಅವನೊಂದಿಗೆ ಮಾತಾಡುತ್ತಾ ಇವುಗಳನ್ನು ಸಾಧಿಸುತ್ತೇವೆ. ವಾಹನವನ್ನು ಓಡಿಸುವಾಗ, ನಡೆಯುವಾಗ, ನಿಂತಿರುವಾಗ, ಕುಳಿತಿರುವಾಗ ಅಥವಾ ಮಲಗಿರುವಾಗಲೂ, ಯಾವ ಸಮಯದಲ್ಲೂ ನಾವು ಅವನನ್ನು ಸ್ಮರಿಸಬಹುದು.

ಬದ್ಧತೆಗಳ ಮೂಲಕ ಅಲ್ಲಾಹನ ವೈಭವೀಕರಣ

> ಭೂಮಿ ಆಕಾಶಗಳಲ್ಲಿರುವುದೆಲ್ಲವೂ ಸಾಮ್ರಾಟನೂ, ಪರಿಶುದ್ಧನೂ, ಪ್ರಬಲನೂ, ಮತ್ತು ಯುಕ್ತಿಪೂರ್ಣನೂ ಆದ ಅಲ್ಲಾಹನನ್ನು ವೈಭವೀಕರಿಸುತ್ತಿದೆ. (62:1)

ಇದರ ಜೊತೆಗೆ, **ಈ ಪ್ರಪಂಚದಲ್ಲಿ ಅಸ್ತಿತ್ವವಿರುವ ಪ್ರತಿಯೊಂದೂ ತನ್ನ ಸ್ವಲಾತನ್ನು ನಿರ್ವಹಿಸುತ್ತಿದೆ. ಅವುಗಳು ಯಾವುದೇ ಪ್ರವಾದಿಗಳ ಅಥವಾ ಸಂದೇಶವಾಹಕರ ನೆರವಿಲ್ಲದೆ ತಮ್ಮ ಸ್ವಲಾತನ್ನು ಎತ್ತಿಹಿಡಿಯುವುದು ಹೇಗೆ ಎಂದು ತಿಳಿದಿದೆ.**

> ಭೂಮಿ ಆಕಾಶಗಳಲ್ಲಿರುವುದೆಲ್ಲವೂ, ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳೂ ಅಲ್ಲಾಹನನ್ನು ವೈಭವೀಕರಿಸುತ್ತಿರುವುದನ್ನು ನೀವು ನೋಡುತ್ತಿಲ್ಲವೇ? ನಿಶ್ಚಯವಾಗಿಯೂ, ಪ್ರತಿಯೊಂದಕ್ಕೂ ತಮ್ಮ ಬದ್ಧತೆಗಳನ್ನು *(ಸ್ವಲಾತುಹು)* ಮತ್ತು ವೈಭವೀಕರಣೆಯನ್ನು ತಿಳಿದಿದೆ. ಇವೆಲ್ಲವೂ ಮಾಡುತ್ತಿರುವುದನ್ನು ಅಲ್ಲಾಹನು ಅರಿತಿರುತ್ತಾನೆ. (24:41)

> ಸಪ್ತಗಗನಗಳೂ ಭೂಮಿಯೂ ಹಾಗೂ ಅವುಗಳಲ್ಲಿರುವ ಸಕಲ ವಸ್ತುಗಳೂ ಅವನನ್ನು ವೈಭವೀಕರಿಸುತ್ತದೆ. ಅವನ ಮಹಿಮೆಯನ್ನು ಗುಣಗಾನ ಮಾಡದ ಯಾವ ವಸ್ತುವೂ ಇಲ್ಲ, ಆದರೆ ನೀವು ಅವುಗಳು ವೈಭವೀಕರಿಸುವುದನ್ನು ಗ್ರಹಿಸುವುದಿಲ್ಲ. ಅವನು ಸಹನಶೀಲನೂ, ಕ್ಷಾಮಾದಾನಿಯೂ ಆಗಿದ್ದಾನೆ. (17:44)

ಅವನ ಮಹಿಮೆಯನ್ನು ಗುಣಗಾನ ಮಾಡದ ಯಾವ ವಸ್ತುವೂ ಇಲ್ಲ ಎಂದು ಈ ವಚನವು ಸ್ಪಷ್ಟವಾಗಿ ಹೇಳುತ್ತದೆ. ಅಂದರೆ, ಬಾಹ್ಯಾಕಾಶದ ಎಲ್ಲಾ ಗ್ರಹಗಳು, ಗಾಳಿ, ವಿದ್ಯುತ್ಕಾಂತ ಶಕ್ತಿಗಳು ಮತ್ತು ಮಾನವನ ಗ್ರಹಣಶಕ್ತಿಗೂ ನಿಲುಕದೇ ಅಸ್ತಿತ್ವದಲ್ಲಿರುವಂತಹ ಎಲ್ಲವೂ, ಅಲ್ಲಾಹನ ವೈಭವವನ್ನು ಸಾರ್ವಕಾಲಿಕವಾಗಿ ಹೊಗಳಿತ್ತಿದೆ. ತಾವು ಅಲ್ಲಾಹನಿಗೆ ಭೌತಿಕವಾಗಿ ಬಾಗುವದೂ, ಸಾಷ್ಟಾಂಗವೆಸಗುವುದೂ ಅಗತ್ಯವಿದೆ ಎಂದು ವಿವಿಧ ಕಾರಣಗಳಿಗಾಗಿ ಜನರನ್ನು ನಂಬಿಸಲಾಗಿದೆ.

ಇಲ್ಲಿ, ಧಾರ್ಮಿಕರು ತಮ್ಮನ್ನು ಅತಿಯಾಗಿ ಹಿಗ್ಗಿಸಿದ್ದಾರೆ. ಅವರು ನಮಗೆ ಕುರ್‌ಆನಿನಲ್ಲಿರುವ *ಸುಜೂದ್* ಎಂಬ ಪದದ ಅರ್ಥವು 'ಸಾಷ್ಟಾಂಗ' ಎಂದು ನಂಬಿಸಿದ್ದಾರೆ. ಆದರೆ, ಈ ಪದದ ಪ್ರಯೋಗಗಳ ವೈಚಾರಿಕ ಪರಿಶೋಧನೆಯನ್ನು ಮತ್ತು ಸಂಬಂಧಿತ ವಚನಗಳಲ್ಲಿ ಸಮರೂಪದ ಹಾಗೂ ಅದೇ ಮೂಲಪದವನ್ನು ಹೊಂದಿದ ಪದಗಳ ಮಿಶ್ರ ಪರಾಮರ್ಶೆಯನ್ನು ನಡೆಸಿದಾಗ ಬಹಿರಂಗಪಡಿಸುವುದೇನೆಂದರೆ, *ಸುಜೂದ್* ಎಂಬ ಪದವು, ಭೌತಿಕ ಸಾಷ್ಟಾಂಗ ಎಂಬ ಅರ್ಥವನ್ನು ನೀಡುವುದೂ ಇಲ್ಲ ಮತ್ತು ನೀಡಲು ಸಾಧ್ಯವೂ ಇಲ್ಲ. *ಸುಜೂದ್* ಪದವು 'ಅಧೀನನಾಗುವುದು' ಎಂಬ ಸರಳ ಅರ್ಥವನ್ನು ನೀಡುತ್ತದೆ.

ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಣೆಸುವ ಪರಿಕಲ್ಪನೆಯು, ಪರಮಾತ್ಮನ ಗಣ್ಯತೆಯನ್ನು ಸ್ಥಳೀಯ ದೇವತೆಯಾಗಿ ಮೊಟಕುಗೊಳಿಸಲು, ಅನಾಚಾರಿ ಅರಬರು ಪರಿಚಯಿಸಿದ ತಪ್ಪು ಬೋಧನೆಗಳ ಪರಿಣಾಮವಾಗಿದೆ. ಕ್ರಿಯೆಗಳ ಮೂಲಕ ಅವನನ್ನು ಸೇವೆಮಾಡುವ ಬದಲಾಗಿ ಅವರು ಎಲ್ಲರನ್ನೂ ಆರಾಧನೆಯನ್ನು ನಡೆಸಲು ಕರೆನೀಡುತ್ತಾರೆ.

ವಿಧ್ಯುಕ್ತ ಪ್ರಾರ್ಥನೆಯು ಕುರ್‌ಆನಿನಲ್ಲಿಲ್ಲ

ಕೊನೆಯ ಪ್ರವಾದಿಗೂ ಅಥವಾ ಅವರಿಗಿಂತ ಮುಂಚಿನ ಪ್ರವಾದಿಗಳಿಗೂ ಅಲ್ಲಾಹನು ಯಾವುದೇ ಒಂದು ವಿಧ್ಯುಕ್ತ ಪ್ರಾರ್ಥನೆಯನ್ನು ಆದೇಶಿಸಲಿಲ್ಲ.

ಕುರ್‌ಆನ್ ಒಟ್ಟು 6348 ವಚನಗಳನ್ನು ಒಳಗೊಂಡ 114 ಅಧ್ಯಾಯಗಳನ್ನು ಹೊಂದಿದೆ. ಒಂದೇ ಒಂದು ವಚನವು *'ನೀವು ಅಲ್ಲಾಹನಿಗೆ ವಿಧಿವತ್ತಾಗಿ ಪ್ರಾರ್ಥಿಸಬೇಕು'* ಎಂದು ಜನರಿಗೆ ಹೇಳುವುದಿಲ್ಲ.

- ವಿಧ್ಯುಕ್ತ ಪ್ರಾರ್ಥನೆಯು ಆರಾಧನೆಯ ಒಂದು ಕ್ರಿಯೆಯಾಗಿದೆ. ಅಲ್ಲಾಹನು ತನ್ನ ಸೇವಕರಿಗೆ, ತನ್ನನ್ನು ಆರಾಧಿಸಲು ಯಾವತ್ತೂ ಹೇಳುವುದಿಲ್ಲ.

- ಕೊನೆಯ ಪ್ರವಾದಿಗೆ ಬಂದ ಅವತೀರ್ಣವು, ಅಲ್ಲಾಹನಿಂದ ಬಂದಂತಹ ಒಂದು ಹೊಸ ಅವತೀರ್ಣವಲ್ಲ.

- ಕುರ್‌ಆನ್ ಗ್ರಂಥವು ಧರ್ಮದ ಅಥವಾ ಅಲ್ಲಾಹನ ಆರಾಧನೆಯ ಬಗ್ಗೆ ಇರುವುದಲ್ಲ.

- ತಮ್ಮ ವಿಧ್ಯುಕ್ತ ಪ್ರಾರ್ಥನೆಗಳ ವಿವರಗಳನ್ನು ಕುರ್‌ಆನಿನಲ್ಲಿ ಕಾಣಬಹುದು ಎಂದು ಯಾವುದೇ ಅರಬೀ ಧರ್ಮದ ಪುರೋಹಿತನು ಇದುವರೆಗೆ ಹೇಳಲು ಸಾಧ್ಯವಾಗಲಿಲ್ಲ. ಕುರ್‌ಆನ್ ವಿಧ್ಯುಕ್ತ ಪ್ರಾರ್ಥನೆಯ ಬೇಡಿಕೆಯನ್ನೂ ಮಾಡದ ಕಾರಣ ಮತ್ತು ಅದನ್ನು ಹೇಗೆ ನಿರ್ವಹಿಸಬೇಕೆಂಬ ವಿವರವನ್ನೂ ನೀಡದ ಕಾರಣ, ಕೇವಲ ಕುರ್‌ಆನಿನ ಆಧಾರದಲ್ಲಿ ಒಬ್ಬನು ದಿನಕ್ಕೆ ಐದು ಬಾರಿ ಪ್ರಾರ್ಥನೆ ನಿರ್ವಹಿಸಲು ಸಾಧ್ಯವಿಲ್ಲ ಎಂದು ಘೋಷಿಸುತ್ತಾ, 'ಕೇವಲ ಕುರ್‌ಆನನ್ನು ಅನುಸರಿಸುವುದು ಸಾಕಾಗುವುದಿಲ್ಲ' ಎಂಬುವುದು ಅವರ ವಾದವಾಗಿದೆ. ಇದು ಅರಬೀ ಪುರೋಹಿತರ ತಮ್ಮದೇ ಆದ ರುಜುವಾತಾಗಿದೆ. ಕಲ್ಲಿನ ಮೂರ್ತಿಗೆ ಬಾಗುವುದರಲ್ಲಿ ಮತ್ತು ಸಾಷ್ಟಾಂಗವೆಸಗುವುದರಲ್ಲಿ ಅವರಿಗೆ ಬಹಳ ಹೆಮ್ಮೆಯಿದೆ. ತಾವು ಪ್ರಚಾರಮಾಡುತ್ತಿರುವ ಆವಿಷ್ಕಾರಿತ ಧರ್ಮದ ಬಗ್ಗೆಯೂ ಅವರಿಗೆ ಬಹಳ ಸ್ವಾಭಿಮಾನವಿದೆ.

ವಿಧ್ಯುಕ್ತ ಪ್ರಾರ್ಥನೆಯು ಒಂದು ಒಳಸಂಚಾಗಿದೆ

ಅಲ್ಲಾಹನ ಮತ್ತು ಮಾನವಕುಲದ ನಡುವಿನ ನಿಗದಿತ ಕರಾರುಗಳ ಮೂಲಾಧಾರವಾದ ಅವತೀರ್ಣವನ್ನು ಭ್ರಷ್ಟಗೊಳಿಸುವ ಮೂಲಕ, ನೈಸರ್ಗಿಕ ಶಾಂತಿಪರತೆಯ ಅಥವಾ ಇಸ್ಲಾಮಿನ ವಿರುದ್ಧ ಧಾರ್ಮಿಕರು ಸಂಚು ನಡೆಸಿದರು. ಅವರು ಅದನ್ನು (ಸಹಜವಾಗಿ, ಯಾವುದೇ ಪ್ರಾಯೋಗಿಕವಾದ ಹಾಗೂ ಉತ್ತಮ ಕಾರ್ಯಗಳನ್ನು ಮಾಡದೇ) ತಮ್ಮ ಜವಾಬ್ದಾರಿಗಳನ್ನು ಪೂರೈಸಿದೆವು ಎಂಬ ತಪ್ಪು ಭಾವನೆಯನ್ನು ಜನರಿಗೆ ತರಿಸುವಂತಹ, ಅನಾಚಾರಿಕ ವಿಧಿಗಳೊಂದಿಗೆ ಬದಲಾಯಿಸಿದರು. ದಿನಕ್ಕೆ ಐದು, ನಾಲ್ಕು, ಮೂರು, ಎರಡು ಅಥವಾ ಒಂದು ಬಾರಿ ವಿಧ್ಯುಕ್ತ ಪ್ರಾರ್ಥನೆಯನ್ನು ಪಾಲಿಸುವವರು, ಅದನ್ನು ಧಾರ್ಮಿಕರಿಗಾಗಿ ಮಾಡುತ್ತಿದ್ದಾರೆಯೇ ಹೊರತು ಅಲ್ಲಾಹನಿಗಾಗಿ ಅಲ್ಲ.

ಇಸ್ಲಾಂ ಒಂದು ಸರಳ ಜೀವನ ರೀತಿಯಾಗಿದೆ ಮತ್ತು ಕುರ್‌ಆನ್, ಬಣ್ಣ ಅಥವಾ ಜನಾಂಗದ ಭೇದವಿಲ್ಲದೆ, ವಿಶ್ವದ ಎಲ್ಲಾ ಮಾನವಕುಲಕ್ಕಾಗಿ ಬಂದಿರುವುದಾಗಿದೆ ಎಂದು ಈ ನನ್ನ ಪುಸ್ತಕವು ಪ್ರತಿಪಾದಿಸುತ್ತದೆ. ಏಕದೇವನಿಗೆ ಸಮ್ಮತಿಸುವುದು ಸುಲಭವಾಗಿದೆ ಎಂಬ ನಿರ್ಣಯಕ್ಕೆ ಬರಲು ಓದುಗರು ಸ್ವಲ್ಪ ನಿಧಾನಿಸಬೇಕು. ಸರಳ ಎಂದರೆ ಸುಲಭ ಎಂದರ್ಥವಲ್ಲ. 67:2 ಹೇಳಲಾಗಿದೆ, "ನಿಮ್ಮಲ್ಲಿ ಯಾರು ಸಜ್ಜನರು ಎಂದು ಪ್ರತ್ಯೇಕಿಸುವ ಸಲುವಾಗಿ, ಅಲ್ಲಾಹನು ಜೀವನ ಮತ್ತು ಮರಣವನ್ನು ರಚಿಸಿದನು." ಅರ್ಹರಾಗುವ ಸಲುವಾಗಿ, ನಾವು ಅಲ್ಲಾಹನ ವ್ಯವಸ್ಥೆಗಿರುವ ಹಾದಿಯನ್ನು ಕಂಡುಹಿಡಿಯುವ ಸವಾಲನ್ನು ತೆಗೆದುಕೊಳ್ಳುವ ಮೂಲಕ, ನಮ್ಮನ್ನು ಸಂಕೋಲೆಯಿಂದ ಬಂಧಿಸಿರುವ ಚಿಂತನಾ ರೀತಿಯನ್ನು ಬದಲಾವಣೆ ಮಾಡಿಕೊಂಡು, ನಮ್ಮನ್ನು ಮುಕ್ತಗೊಳಿಸಬೇಕು. ನಾವು ಅವನ ವ್ಯವಸ್ಥೆಯ ಭಾಗವಾದ ನಂತರ, ಅವನನ್ನು ಸಂತೋಷಪಡಿಸುವಂತಹ ನಮ್ಮ ಜೀವನ ರೀತಿಯನ್ನು ನಡೆಸುವುದರಲ್ಲಿ ಇರುವ ಸರಳತೆಯನ್ನು ಮನಗಾಣುತ್ತೇವೆ.

ಅಲ್ಲಾಹನು, ಕೊನೆಯ ಪ್ರವಾದಿಯನ್ನು 'ಪ್ರಾರ್ಥನೆ'ಯ ಬಗ್ಗೆ ಮಾತನಾಡಲು, ಏಳನೇ ಆಕಾಶಕ್ಕೆ ಕರೆಯಿಸಿದನು, ಎಂದು ಅರಬೀ ಸಂಪ್ರದಾಯಗಳು ದಿವ್ಯಗ್ರಂಥದ ಯಾವುದೇ ಆಧಾರವಿಲ್ಲದೆ ಹೇಳುತ್ತಾರೆ. ಸಮರ್ಪಕವಾಗಿ ಹೇಳಬೇಕಾದರೆ, ಈ ಭೇಟಿಯು ಚರ್ಚೆಯ ಮೂಲಕ ಸಂಧಾನಮಾಡಿಕೊಳ್ಳುವ ಸಲುವಾಗಿತ್ತು ಎಂದು ಹೇಳಿದರೆ ಹೆಚ್ಚು ನಿಖರವಾಗಬಹುದು. ಮುಸ್ಲಿಮರು ದಿನಕ್ಕೆ ಐವತ್ತು ಬಾರಿ ಪ್ರಾರ್ಥನೆ ಮಾಡಬೇಕೆಂದು ಅಲ್ಲಾಹನು ಬಯಸಿದ್ದನು, ಆದರೆ ಮುಹಮ್ಮದರು ಅದನ್ನು ಐದು ಬಾರಿಯಾಗಿ ಖಡಿತಗೊಳಿಸುವುದರಲ್ಲಿ ಸಫಲರಾದರು. ಅಲ್ಲಾಹನ ಸಂದೇಶವಾಹಕರು, ಅಲ್ಲಾಹನ ಸಂದೇಶದ ವಿಷಯದಲ್ಲಿ ಅವನನ್ನು ಪ್ರಶ್ನಿಸಿದರು, ಎಂಬುವುದು ವಿಲಕ್ಷಣವಾಗಿ ತೋರುತ್ತದೆ. ಸಂದೇಶದ ಸಂಬೋಧಿತರ ಪರವಾಗಿ ಒಂದು ಸಂದೇಶವಾಹಕರು ಮಧ್ಯಸ್ಥಿಕೆವಹಿಸಲು ಆಯ್ಕೆಮಾಡಿದರು ಎಂಬುವುದೂ ವಿಚಿತ್ರವೆನಿಸುತ್ತದೆ. ಅಲ್ಲಾಹನ ಇಚ್ಛೆಗೆ ಸವಾಲು ಹಾಕುವುದು ಅಧಿಕಪ್ರಸಂಗಿತನವೆಂದು ಸಾಮಾನ್ಯ ಜ್ಞಾನವಿರುವವರಿಗೆ ಭಾಸವಾಗುತ್ತದೆ.

ಒಂದು ವೇಳೆ ಅವರ ಚರ್ಚೆಯು ಪ್ರಾರಂಭವಾದಲ್ಲಿಯೇ ಮುಕ್ತಾಯಗೊಂಡಿರುತ್ತಿದ್ದರೆ, ದಿನದಲ್ಲಿ 16 ಗಂಟೆಗಳ ಕಾಲವನ್ನು ಪ್ರಾರ್ಥನೆಗೆ ಮೀಸಲಿರಿಸಿದರೂ, ನಾವು ಪ್ರತಿ 19 ನಿಮಿಷಗಳಿಗೊಮ್ಮೆ ಪ್ರಾರ್ಥನೆ ಮಾಡಬೇಕಾದ ಅಗತ್ಯವಿತ್ತು. ಐದು ಪ್ರಾರ್ಥನೆಗಳ ಒಂದು ಕೂಟವು ಹದಿನೇಳು ಬಾರಿ ಬಾಗುವ, ಸಾಷ್ಟಾಂಗವನ್ನು ಒಳಗೊಂಡಿರುವ ಲೆಕ್ಕಾಚಾರದಲ್ಲಿ, ಅದನ್ನು ನಿರ್ವಹಿಸಬೇಕಿದ್ದವರು ದಿನಕ್ಕೆ 850 ಬಾರಿ ಬಾಗುವಿಕೆ ಮತ್ತು ಸಾಷ್ಟಾಂಗಗಳ ಚಲನೆಯನ್ನು ಮಾಡಬೇಕಾಗಿತ್ತು. ಏರೋಬಿಕ್ಸ್'ನ (ಸಂಗೀತಕ್ಕೆ ಹೊಂದಿಸಿದ ದೈಹಿಕ ವ್ಯಾಯಾಮದ) ಸಂಶೋಧಕರು ಧಾರ್ಮಿಕರೇ ಆಗಿರಬೇಕು ಎಂದು ತೋಚುತ್ತದೆ. ಅವಿವೇಕತನದ ವಿಷಾದಕರವಾದ ಈ ಅವಸ್ಥೆಯ ಕಾರಣ, ನೈಸರ್ಗಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿದ್ದರೂ, ಅನೇಕ ಮುಸ್ಲಿಂ ರಾಷ್ಟ್ರಗಳಿಗೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪೈಕಿ ತಮ್ಮ ಸ್ಥಾನವನ್ನು ಪಡೆಯಲು ಇನ್ನೂ ಸಾಧ್ಯವಾಗಲಿಲ್ಲ ಎಂಬುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಅವರು ಪ್ರಾರ್ಥನೆಗಳ ಹೊಸ ವಿಧಾನಗಳನ್ನು ಕಂಡುಕೊಳ್ಳುವ ಯತ್ನದಲ್ಲಿ ಬಹಳ ನಿರತರಾಗಿದ್ದಾರೆ.

ಈ ತಿಳಿಗೇಡಿತನಕ್ಕೆ 17:1 ರ ದುರ್ಬಳಕೆಯ ಮೂಲಕ ಕುರ್'ಆನಿನ ನ್ಯಾಯಸಮ್ಮತತೆಯನ್ನು ಒದಗಿಸಲಾಗಿದೆ. ಒಂಟಿಯಾಗಿ ತೆಗೆದುಕೊಂಡರೆ, ತಪ್ಪೆಂದು ತೋರುತ್ತದೆ. ಸನ್ನಿವೇಶದ ಜೊತೆಗೆ ತೆಗೆದುಕೊಂಡರೆ ವಿಭಿನ್ನ ಚಿತ್ರವು ಹೊರಹೊಮ್ಮುತ್ತದೆ. ಸರಳವಾದ ಹಾಗೂ ಪರಿಶೀಲಿಸಬಹುದಾದ ಸತ್ಯವೇನೆಂದರೆ, 17:1-7 ವಚನಗಳು, ಇಸ್ರಾಯೀಲರ ಸಂತತಿಯ ಇತಿಹಾಸ ಮತ್ತು ಅಲ್ಲಾಹನ ನಿರ್ದೇಶನಗಳನ್ನು ಕಣ್ಣಾರೆ ನೋಡಲು ಒಂದು ರಾತ್ರಿ ಅಲ್ಲಾಹನನ್ನು ಭೇಟಿ ನೀಡಿದ ಮೂಸಾರ ವಿಷಯವಾಗಿದೆ.[48] (ಭಾಗ ಒಂಬತ್ತು ನೋಡಿರಿ).

ಆದಾಗ್ಯೂ, ಈ ವಚನದಲ್ಲಿ ಸ್ವಲಾತ್ ಎಂಬ ಪದವು ಉಲ್ಲೇಖಿಸಿಲೇ ಇಲ್ಲ ಎಂಬುವುದನ್ನು ಧಾರ್ಮಿಕರು ಒಪ್ಪಿಕೊಳ್ಳದೇ ಇರಲು ಸಾಧ್ಯವಿಲ್ಲ. ಮಕ್ಕಳು ಮಲಗುವ ವೇಳೆ ಹೇಳಲು ಸೂಕ್ತವಾದಂತಹ ಆಕಾಶ ಪ್ರಯಾಣದ ಬಗ್ಗೆ ಇರುವ ಈ ಹಾಸ್ಯಾಸ್ಪದವಾದ ಕಥೆಯನ್ನು, ಅರಬೀ ಪುರೋಹಿತರು ಹೇಗೆ ಹೆಣೆದಿದ್ದಾರೆಂದು ನಾವು ನೋಡೋಣ.

ಒಂದು ರಾತ್ರಿ ಮುಹಮ್ಮದರು ನಿದ್ರೆ ಹಾಗೂ ಪ್ರಜ್ಞೆಯ ನಡುವಿನ ಸ್ಥಿತಿಯಲ್ಲಿರುವ ಸಂದರ್ಭದಲ್ಲಿ, ಒಂದು ದೇವದೂತರು ಬುರಾಕ್ ಎಂಬ ಬಿಳಿ ಕುದುರೆಯೊಂದಿಗೆ ಪ್ರತ್ಯಕ್ಷಗೊಂಡರು. ಆ ಕುದುರೆಯು, ಮಹಿಳೆಯ ಮುಖವನ್ನು ಹಾಗೂ ನವಿಲಿನ ಬಾಲವನ್ನು ಹೊಂದಿತ್ತು. ಅದರ ಪ್ರತಿಯೊಂದು ಹೆಜ್ಜೆಯು, ಮನುಷ್ಯನ ಬರಿಗಣ್ಣಿನಿಂದ ನೋಡಲು ಸಾಧ್ಯವಿರುವ ದೂರಕ್ಕೆ ಸಮವಾಗಿತ್ತು. ಆ ಜೀವಿಯು, ಮುಹಮ್ಮದರನ್ನು ಮೊದಲು ಜೆರುಸೆಲಮಿಗೆ ಕೊಂಡೊಯ್ಯಿತು, ಅಲ್ಲಿ ಅವರು ಆದಮರಿಂದ ಈಸಾರ ಕಾಲದವರೆಗಿನ ಎಲ್ಲಾ

[48] ವಿಧ್ಯುಕ್ತ ಪ್ರಾರ್ಥನೆಯ ನಿರ್ವಹನೆಯ 'ವಿಧಾನ'ಗಳ ಬಗ್ಗೆ ಮಾಹಿತಿಯು ಕುರ್'ಆನಿನಲ್ಲಿ ಇಲ್ಲ. ಕೊನೆಯ ಪ್ರವಾದಿಯು, ಇದರ ಬಗ್ಗೆ ಚರ್ಚೆನಡೆಸಿ ಸಂಧಾನ ಮಾಡಿಕೊಳ್ಳಲು, ಒಂದು ರಾತ್ರಿಯಲ್ಲಿ, ಏಳನೇ ಆಕಾಶಕ್ಕೆ ಹಾರಿಹೋಗಿ ಮತ್ತೆ ತಿರುಗಿ ಭೂಮಿಯ ಮೇಲೆ ಬಂದಿಳಿದರು ಎಂಬ ಕಾಲ್ಪನಿಕ ಕಥೆಯನ್ನು ಹೇಳುವ ಮೂಲಕ ಧಾರ್ಮಿಕರು ಜನರನ್ನು ವಂಚಿಸಿದರು. ಅಲ್ಲಾಹನೊಂದಿಗೆ ದಿನಕ್ಕೆ 50 ಪ್ರಾರ್ಥನೆಗಳಿಂದ ರಿಯಾಯಿತಿ ಕೇಳಲು, ಮುಹಮ್ಮದರನ್ನು ಪ್ರೇರೇಪಿಸಿರುವುದು ಮೂಸರಾಗಿದ್ದರು ಎಂದು ಅವರು ಹೇಳುತ್ತಾರೆ. ಆದರೂ, ಕೊನೆಯ ಪ್ರವಾದಿಗೆ ಅದರ ವಿಧಾನಗಳನ್ನು ಹೇಳಿಕೊಡಲು ಅಲ್ಲಾಹನು ಬಹುಶಃ ಮರೆತುಬಿಟ್ಟಿದ್ದಾನೆ.

ಮರಣಹೊಂದಿದ ಪ್ರವಾದಿಗಳಿಗೆ ಇಮಾಮ್ (ಮುಂದಾಲಾಗಿ) ಆಗಿ ಒಂದು ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸಿದರು. ಸಾವಿರಾರು ವರ್ಷಗಳ ಹಿಂದೆ ಮರಣಹೊಂದಿದ ಈ ಪ್ರವಾದಿಗಳು ಹೇಗೆ ಮತ್ತು ಯಾವಾಗ ಜೆರುಸೆಲಮಿನಲ್ಲಿ ಕಾಣಿಸಿಕೊಂಡರು ಎಂದು ಯಾರೂ ತಿಳಿಯಲು ಇಚ್ಛಿಸುವುದಿಲ್ಲ. ಆದಾಗ್ಯೂ, ಏಳನೇ ಆಕಾಶಕ್ಕೆ ಏರುತ್ತಿರುವಾಗ, ಅವರು ಆದಮ್, ಇದ್ರೀಸ್, ಇಬ್ರಾಹೀಮ್, ಯೂಸುಫ್, ಮೂಸಾ, ಹಾರೂನ್ ಮತ್ತು ಈಸಾರನ್ನು ಮೊದಲ ಆಕಾಶದಿಂದ ಆರಂಭಿಸಿ, ಪ್ರತಿ ಆಕಾಶದ ಗೇಟುಗಳಲ್ಲಿ ತಮಗಾಗಿ ಕಾಯುತ್ತಿರುವುದನ್ನು ಕಂಡರು. ಜೆರುಸೆಲಮಿನಿಂದ, ಮಹಮ್ಮದರಿಗಿಂತ ಮೊದಲು ತಮ್ಮ ತಮ್ಮ ಗೇಟುಗಳಿಗೆ ಅವರು ಹೇಗೆ ತಲುಪಿದರು ಎಂದು ಯಾರೂ ಪ್ರಶ್ನಿಸುವುದಿಲ್ಲ.

ಹೀಗಿರುವಾಗ, ಈ ರೀತಿಯ ಒಂದು ಅಸಂಬದ್ಧ ಕಥೆಯ ಬಗ್ಗೆ ನಾವು ಚರ್ಚಿಸುತ್ತಾ ಮುಂದುವರಿಯುವುದು ಹೇಗೆ? ಮುಹಮ್ಮದರ ಜೊತೆ ಪ್ರಾರ್ಥಿಸಲು, ಹಳೆಯ ಪ್ರವಾದಿಗಳನ್ನು ಜೀವನಕ್ಕೆ ಹೇಗೆ ಮರಳಿ ತರಲಾಯಿತು ಎಂದು ಯಾವುದೇ ವಿದ್ವಾಂಸರು ಖಚಿತವಾಗಿ ಹೇಳಲು ಸಾಧ್ಯವಿಲ್ಲ – ಆದರೂ, ಅನೇಕ 'ಬುದ್ಧಿಜೀವಿಗಳು' ಎಂದು ಕರೆಯಲ್ಪಡುವ ಜನರು ಸಹ, ವಿಧ್ಯುಕ್ತ ಪ್ರಾರ್ಥನೆಯ ಬಗೆಗಿನ ಈ ಈ ಪ್ರಯಾಣವು ಸತ್ಯವಾಗಿದೆ ಎಂದು ಬಹಳ ಖಚಿತವಾಗಿ ನಂಬಿದ್ದಾರೆ. ಏಕೆಂದರೆ, ವಿಧ್ಯುಕ್ತ ಪ್ರಾರ್ಥನೆಯ ವಿವರಗಳನ್ನು ಕುರ್‌ಆನ್ ಆಜ್ಞಾಪಿಸಲಾಗದಿದ್ದರೂ, ಹೇಗಾದರೂ ಸರಿ, ಅವರಿಗೆ ವಿಧ್ಯುಕ್ತ ಪ್ರಾರ್ಥನೆಗಳನ್ನು ಮಾಡಲೇಬೇಕಾಗಿದೆ.

ನೂತನ ಹದೀಸುವಾದಿಗಳು

ಧಾರ್ಮಿಕ ಕ್ರಿಯಾವಿಧಿಗಳನ್ನು ಕುರ್‌ಆನ್ ವಿವರಿಸುವುದಿಲ್ಲ ಎಂಬುವುದನ್ನು ಬಹುತೇಕ ಎಲ್ಲಾ ಮುಸ್ಲಿಮರು ಒಪ್ಪಿಕೊಳ್ಳುತ್ತಾರೆ. ಆದಾಗ್ಯೂ, ಪ್ರವಾದಿ ಮುಹಮ್ಮದರ ಹೆಸರಲ್ಲಿ ಹೆಣೆದಿರುವ ಈ ಕಟ್ಟುಕಥೆಗಳನ್ನು (ಹದೀಸ್ ಹಾಗೂ ಸುನ್ನ) ತಾವು ತಿರಸ್ಕರಿಸುತ್ತೇವೆ ಮತ್ತು ಕುರ್‌ಆನನ್ನು ಮಾತ್ರ ಅನುಸರಿಸುತೇವೆ ಎಂದು ಹೇಳಿಕೊಳ್ಳುವ ಒಂದು ಪಂಗಡವು, ಈ ವಿಧಿವತ್ತಾದ ಆಚರಣೆಗಳ ಬಗ್ಗೆ ಕುರ್‌ಆನಿನ ಬೆಳಕಿನಲ್ಲಿ ಪುನರ್-ವಿಮರ್ಶಿಸಲು ಸನ್ನದ್ಧರಾಗುವ ಬದಲಿಗೆ ಅವುಗಳನ್ನು ಸಮರ್ಥಿಸುವ ಸಲುವಾಗಿ ಇನ್ನೊಂದು ರೀತಿಯ ವಾದವನ್ನು ಮುಂದಿಡುತ್ತಾರೆ.

ಅದೇನೆಂದರೆ, ಆಚರಣಾ ವಿಧಿಗಳನ್ನು ಮೊದಲು ಇಬ್ರಾಹೀಮರಿಗೆ ನೀಡಲಾಗಿತ್ತು - ಅದು ಯುಗಯುಗಾಂತರವಾಗಿ ಇಂದಿನ ವರೆಗೆ ಮುಂದುವರೆದು ಬಂದಿದೆ. ಕುರ್‌ಆನ್ ನಮಗೆ ಇಬ್ರಾಹೀಮರ 'ಮಿಲ್ಲತ'ನ್ನು ಅನುಸರಿಸಲು ಆಜ್ಞಾಪಿಸಿದೆ - ಅಂದರೆ, ಅವರಿಗೆ ನೀಡಲಾದ ವಿಧಿಗಳನ್ನು (ಕುರ್‌ಆನಿನಲ್ಲಿ ವಿವರಿಸದಿದ್ದರೂ ಸರಿ) ಪ್ರಸ್ತುತ ವಿಧಾನದಲ್ಲಿ ಯಥಾರ್ಥವಾಗಿ ಅನುಸರಿಸಬೇಕಾಗಿದೆ!!!

ಆದಾಗ್ಯೂ, ಅವರ ಈ ವಾದವು ಕುರ್‌ಆನಿನ ಆಶಯಕ್ಕೆ ಸ್ಪಷ್ಟ ವಿರುದ್ಧವಾಗಿದೆ. ಕುರ್‌ಆನ್ ಇಂತಹ ಆಚರಣೆಗಳ ವಿಧಾನಗಳನ್ನೂ, ವಿವರಗಳನ್ನೂ ನೀಡುವುದಿಲ್ಲ ಎಂಬುವುದು ಸತ್ಯಾಂಶವಾಗಿದೆ. ಅಲ್ಲಾಹನು 6:114 ರಲ್ಲಿ ಈ ಕುರ್‌ಆನ್ ಸಂಪೂರ್ಣವಾಗಿದೆ ಎಂದೂ, 6:38 ರಲ್ಲಿ ಈ ಗ್ರಂಥದಲ್ಲಿ ಯಾವುದೂ ಬಿಟ್ಟುಹೋಗಿಲ್ಲ ಎಂದೂ ಹೇಳುತ್ತಿರುವಾಗ, ಅಲ್ಲಾಹನು ಈ ವಚನಗಳಲ್ಲಿ ಯಾವುದೇ ವಿನಾಯಿತಿಯನ್ನು ನೀಡಿದ್ದಾನೆಯೇ?. 'ನಾವು ಸ್ವೀಕರಿಸಲೇಬೇಕಾದಂತಹ ಕೆಲವು ಮಾಹಿತಿಗಳು ಕುರ್‌ಆನಿನ ಹೊರಗಿನಿಂದ - ಅಂದರೆ ಇಬ್ರಾಹೀಮರ ಮೂಲದಿಂದ ಪರಂಪರಾಗತವಾಗಿ ಸಾಗುತ್ತಾ ಬಂದಿದೆ' ಎಂಬ ನೆಪವು 'ಕುರ್‌ಆನಿನ ಸಂಪೂರ್ಣತೆ'ಯನ್ನು ಒಡೆದು ಹಾಕುತ್ತದೆ. ಅಲ್ಲಾಹನು 6:114 ರಲ್ಲಿ 'ಇದು ಸಂಪೂರ್ಣವಾಗಿದೆ, ಇಬ್ರಾಹೀಮರಿಂದ ಬಂದಿರುವುದನ್ನು ಹೊರತು ಪಡಿಸಿ' ಎಂದೂ, 6:38 ರಲ್ಲಿ 'ಇದರಲ್ಲಿ ಯಾವುದೂ ಬಿಟ್ಟುಹೋಗಿಲ್ಲ, ಇಬ್ರಾಹೀಮರಿಂದ ಬಂದಿರುವುದನ್ನು ಹೊರತು ಪಡಿಸಿ' ಎಂದು ಹೇಳಿದ್ದಾನೆಯೇ? ಇಬ್ರಾಹೀಮರಿಗೆ ಆಜ್ಞಾಪಿಸಲಾಗಿರುವುದನ್ನೂ ಒಳಗೊಂಡಂತೆ, ಈ ಗ್ರಂಥವು ಸಂಪೂರ್ಣವಾಗಿದೆ, ಅದರಲ್ಲಿ ಯಾವುದೂ ಬಿಟ್ಟುಹೋಗಿಲ್ಲ ಎಂದು ನಿಸ್ಸಂದೇಹಕವಾಗಿ ವಿಶ್ವಾಸವಿಡುವವರು ಮಾತ್ರ ಅವನ ಗ್ರಂಥದ ದೃಢ ವಿಶ್ವಾಸಿಗಳಾಗಿದ್ದಾರೆ.

ಇಲ್ಲಿ ಚಿಂತಿಸಬೇಕಾದ ಇನ್ನೊಂದು ಸಂಗತಿಯೇನೆಂದರೆ, ಈ ವಿಧಿಗಳು ಮೊದಲು ಇಬ್ರಾಹೀಮರಿಗೆ ನೀಡಿರುವುದಾಗಿದ್ದರೆ ಅವುಗಳು ಪೀಳಿಗೆಯ ವರೆಗೆ ಹೇಗೆ ತಲುಪಿತು? ಕುರ್‌ಆನಿನ ಮೂಲಕ ಅಲ್ಲವೆಂದಿರುವಾಗ, ಅವುಗಳು ತಲೆಮಾರಿನಿಂದ ತಲೆಮಾರಿಗೆ, ಪೂರ್ವಜರಿಂದ ಪರಂಪರಾಗತವಾಗಿ ನಮ್ಮ ಮಾತಾಪಿತರ ಮುಖಾಂತರ ನಮಗೆ ತಲುಪಿರಬೇಕಾಗಿದೆ. ವಂಶಪಾರಂಪರ್ಯವಾಗಿ, ತಲೆಮಾರುಗಳಿಂದ ಸಾಗುತ್ತಾ ಪೂರ್ವಜರ ಮುಖಾಂತರ ಬಂದಿರುವ ಹೇಳಿಕೆಗಳು, ಬೋಧನೆಗಳು, ಆಚರಣೆಗಳು, ವಿಧಿಗಳಿಗೆ ಇನ್ನೊಂದು ಹೆಸರು 'ಹದೀಸ್ ಅಥವಾ ಸುನ್ನ' ಎಂದಾಗಿದೆ. 45:6 ರಲ್ಲಿ, ನಾವು ಎಲ್ಲಾ ತರಹದ ಹದೀಸುಗಳನ್ನು ತಿರಸ್ಕರಿಸಬೇಕೆಂಬ ಕುರ್‌ಆನಿನ ಮುನ್ನೆಚ್ಚರಿಕೆಯನ್ನು ತಾವು ಪಾಲಿಸುತ್ತಿದ್ದೇವೆಂದು ಇವರು ಹೇಗೆ ವಾದಿಸುತ್ತಾರೆ?

'ಇಬ್ರಾಹೀಮರ ಮಿಲ್ಲತನ್ನು ಅನುಸರಿಸಿರಿ' ಎಂದು ಕುರ್‌ಆನ್ ಅನೇಕ ಬಾರಿ ಪುನರಾವರ್ತಿಸಿದೆ. ಹಾಗಾದರೆ, 'ಮಿಲ್ಲತ್' ಎಂದರೇನು? ಕುರ್‌ಆನನ್ನು ಸ್ವತಃ ಕುರ್‌ಆನೇ ವಿವರಿಸುತ್ತದೆ. ಮಿಲ್ಲತ್ ಎಂದರೆ ಚಾಲನೆಯಲ್ಲಿರುವ ವಿಧ್ಯುಕ್ತ ಆಚರಣೆಗಳಾಗಿವೆ ಎಂದು ಅರ್ಥೈಸುವುದು ಕುರ್‌ಆನಿನ ತಿರುಳನ್ನು ಅರಿತುಕೊಳ್ಳುವುದರಲ್ಲಿ ವಿಫಲಗೊಂಡಿರುವುದರ ಫಲವಾಗಿದೆ. 'ಮಿಲ್ಲತ್' ಎಂಬ ಪದದ ಅರ್ಥವಿವರಣೆಯನ್ನು, 'ಇಬ್ರಾಹೀಮರ ಮಿಲ್ಲತನ್ನು ಅನುಸರಿಸಿರಿ' ಎಂದು ಆಜ್ಞಾಪಿಸುವ ಪ್ರತಿಯೊಂದು ವಚನದ ಕೊನೆಯಲ್ಲಿಯೂ ಸ್ಪಷ್ಟವಾಗಿ ನಮಗೆ ಕಾಣಬಹುದು. 2:135, 3: 95, 4:125, 6:161, 16:123, 12:38 ವಚನಗಳನ್ನು ನೋಡಿದರೆ, *'ಇಬ್ರಾಹೀಮರ ಮಿಲ್ಲತನ್ನು ಅನುಸರಿಸಿರಿ - ಅವರು ಏಕದೇವ ವಿಶ್ವಾಸಿಯಾಗಿದ್ದರು ಹಾಗೂ ಮೂರ್ತಿ ಆರಾಧಕರಲ್ಲಾಗಿರಲಿಲ್ಲ'* ಎಂದು ಕಾಣಬಹುದು. 'ಏಕದೇವನಾದ ಅಲ್ಲಾಹನಲ್ಲಿ ವಿಶ್ವಾಸವಿರಿಸುವುದು ಹಾಗೂ ಇತರ ಮೂರ್ತಿಗಳನ್ನು ತಿರಸ್ಕರಿಸುವುದೇ - ಇಬ್ರಾಹೀಮರ ಮಿಲ್ಲತ್ ಆಗಿದೆ - ಅದನ್ನು ನೀವು ಅನುಸರಿಸಿರಿ' ಎಂದು ಸ್ಪಟಿಕ-

ಸ್ಪಷ್ಟವಾಗಿ ಕುರ್‌ಆನ್ ನಮಗೆ ಕಲಿಸುತ್ತಿದೆ. ಇಬ್ರಾಹೀಮರ ಮಿಲ್ಲತನ್ನು ಅನುಸರಿಸಿರಿ ಎಂದು ಆಜ್ಞಾಪಿಸುವ ಮೇಲಿನ ಎಲ್ಲಾ ವಚನದಲ್ಲೂ ಸ್ಥಿರವಾಗಿ *'ಅವರು ಏಕದೇವ ವಿಶ್ವಾಸಿಯಾಗಿದ್ದರು ಹಾಗೂ ಮೂರ್ತಿ ಆರಾಧಕರಾಗಿರಲಿಲ್ಲ'* ಎಂದು ಕಂಡುಬಂದಿರುವುದು ಬರೇ ಕಾಕತಾಲಿಯವೇ??? ಸಾಧ್ಯವೇ ಇಲ್ಲ. ಇಬ್ರಾಹೀಮರ 'ಮಿಲ್ಲತ್' ಎಂದರೆ, ಇಬ್ರಾಹೀಮರ 'ಸಿದ್ಧಾಂತ'ವಾಗಿದೆ, ಅದು 'ಕೇವಲ ಅಲ್ಲಾಹನನ್ನು ಸೇವೆಮಾಡುವ ಹಾಗೂ ಇತರ ಎಲ್ಲಾ ರೀತಿಯ ಮೂರ್ತಿಗಳನ್ನು ತಿರಸ್ಕರಿಸುವಂತಹ ಏಕದೇವ ವಿಶ್ವಾಸ'ವಾಗಿತ್ತು.

ಕುರ್‌ಆನನ್ನು ಮಾತ್ರ ಪಾಲಿಸುವವರೆಂದು ಹೇಳಿಕೊಳ್ಳುವ ಇಂತಹ ಜನರು, ಚಾಲನೆಯಲ್ಲಿರುವಂತಹ ಆಚರಣೆಗಳಿಗೆ ಮನ್ನಣೆಯನ್ನು ನೀಡುವ ಸಲುವಾಗಿ, ಕುರ್‌ಆನಿನಲ್ಲಿ ಅವುಗಳ ಸಂಪೂರ್ಣ ರೂಪವನ್ನು ಸಕಲ ರೀತಿಯಲ್ಲಿ ಅರಸಿ ನೋಡಿ ವಿಫಲಗೊಂಡ ನಂತರ ಈ ಮೇಲಿನ ವಾದವನ್ನು ಮುಂದಿಡುತ್ತಾರೆ. ಅವುಗಳು ಕುರ್‌ಆನಿನಲ್ಲಿ ಸಿಗುವುದಾದರೂ ಹೇಗೆ?

'ಅಡುಗೆ' ಹೇಗೆ ಮಾಡುವುದೆಂಬುವುದನ್ನು ಒಂದು ವಿಜ್ಞಾನದ ಪುಸ್ತಕದಲ್ಲಿ ಹುಡುಕಿದರೆ ಅದು ಸಿಗುವುದೇ? ಕುರ್‌ಆನಿನೊಂದಿಗೆ ನಡೆಯುತ್ತಿರುವುದು ನಿಖರವಾಗಿ ಇದೇ ಸನ್ನಿವೇಶವಾಗಿದೆ. ಕುರ್‌ಆನಿನ ಹಲವು ಪದಗಳ ತಿರುಳನ್ನು ಚಿವುಟಿ ಹಾಕಿ ಧರ್ಮಾಂಧ ಆಚರಣೆಗಳಾಗಿ ವಿಕೃತಗೊಳಿಸಿದ್ದಾರೆ. ಉದಾಹರಣೆಗೆ, ಕುರ್‌ಆನಿನಲ್ಲಿ 'ಸ್ವಲಾತ್' ಎಂಬ ಪದವು ಬಳಕೆಯಾದ ಬಹುತೇಕ ವಚನಗಳಲ್ಲಿ 'ವಿಧ್ಯುಕ್ತ ಪ್ರಾರ್ಥನೆ ಅಥವಾ ನಮಾಝ್' ಎಂದು ದುರ್ವಾಖ್ಯಾನ ಮಾಡಿದರು. (ಕೆಲವು ಕಡೆಯಲ್ಲಿ ಅವರ ಈ ಅಪಾರ್ಥವು ಅಸಂಬದ್ಧಗೊಳ್ಳುವ ಸಂದರ್ಭದಲ್ಲಿ ವಿಭಿನ್ನ ಅರ್ಥವನ್ನು ನೀಡಿದರು). ಆದರೆ, ವಿಧ್ಯುಕ್ತ ಪ್ರಾರ್ಥನೆಯ ಸಂಪೂರ್ಣ ವಿವರವನ್ನು ನೀಡುವಂತೆ ಕುರ್‌ಆನಿನ ವಚನಗಳ ಅರ್ಥಗಳನ್ನು ತಿರುಚಲು ಅವರಿಗೆ ಸಾಧ್ಯವಾಗಲಿಲ್ಲ. ಈ ಕಾರಣದಿಂದ, ಅವುಗಳ ವಿವರಣೆಯ ಮೂಲವು ಕುರ್‌ಆನಿನ ಹೊರಗಿದೆ ಎಂಬ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. ಕುರ್‌ಆನ್-ಬಾಹಿರ ಮೂಲವು ನಮಗೆ ಅಗತ್ಯವಿದೆಯೇ?

ಈ ನೂತನ ಪಂಗಡವು ಮಾಡಿಕೊಂಡಿರುವ ಏಕೈಕ ಬದಲಾವಣೆಯು ಏನೆಂದರೆ, 'ವಿವರಣೆಗಳು ಹದೀಸ್ ಹಾಗೂ ಸುನ್ನಗಳಲ್ಲಿವೆ' ಎಂಬುವುದನ್ನು 'ವಿವರಣೆಗಳು ಇಬ್ರಾಹೀಮರಿಂದ ವಂಶಪಾರಂಪರ್ಯವಾಗಿ ಬಂದಿದೆ' ಎಂದಾಗಿದೆ.

> ನಾವು ಗ್ರಂಥದ ಹೊರಗೆ ಯಾವುದನ್ನೂ ಬಿಟ್ಟುಬಿಡಲಿಲ್ಲ. (6:38)

ಭಾಗ ಐದು

ಸ್ವಲಾತಿನ ಪದ ಪಲ್ಲಟ

ಕುರ್‌ಆನಿನ ಒಂದು ಸರಳವಾದ ಹಾಗೆಯೇ ನಿರ್ಣಾಯಕವೂ ಆದ ಒಂದು ಪದವನ್ನು ಹೇಗೆ ದುರುಪಯೋಗ ಪಡಿಸಲಾಯಿತು ಎಂದು, ನಾನು ಈ ಭಾಗದಲ್ಲಿ ಪ್ರದರ್ಶಿಸುತ್ತೇನೆ. ಅರಬೀ ಪದಗಳು ತಮ್ಮ ಶಬ್ದ ಭಂಡಾರವನ್ನು ಅದರ ಮೂಲಪದದಿಂದ ಪಡೆಯುತ್ತವೆ ಎಂದು ನಾವು ಈಗಾಗಲೇ ನೋಡಿದೆವು. ಈ ಮೂಲಪದಗಳು, ಎರಡು, ಮೂರು ಅಥವಾ ನಾಲ್ಕು ವ್ಯಂಜನಗಳ ಸಮೂಹವಾಗಿರಬಹುದು, ಹಾಗೂ ಇವುಗಳಿಂದ ಇತರ ಉಪಪದಗಳು ಉತ್ಪತ್ತಿಗೊಳ್ಳುತ್ತದೆ. ಬಹುತೇಕ ಸಂದರ್ಭಗಳಲ್ಲಿ, ಸಂಘಟಿತ ಸ್ವರಾಕೃತಿಗಳಿಗೆ ಅಥವಾ ಮಾದರಿಗಳಿಗೆ, ಕೆಲವೊಂದು ಪೂರ್ವ-ಪ್ರತ್ಯಯ, ಉತ್ತರ-ಪ್ರತ್ಯಯಗಳನ್ನು ಸೇರಿಸುವುದರ ಮೂಲಕ ಈ ಉತ್ಪನ್ನಗಳನ್ನು ನಿರ್ಮಿಸಲಾಗುತ್ತದೆ. ಇದು ಅರಬೀ ವ್ಯಾಕರಣದ ಮೂಲ ತಳಹದಿಯಾಗಿದೆ.

ಭಾಷಾ ಸಿದ್ಧಾಂತದ ಪ್ರಕಾರ, ಮೂಲ ವ್ಯಂಜನದ ನಂತರ 'ಅ' 'ಇ' ಅಥವಾ 'ಉ' ಎಂಬ ಸಣ್ಣ ಸ್ವರಗಳನ್ನು ಸೇರಿಸುವುದರ ಮೂಲಕ, ಆ ಭಾಷೆಯ ಯಾವುದೇ ವ್ಯಂಜನಗಳ ಸಮೂಹದಿಂದ, ಮೂಲಪದಗಳ 'ಮೂಲರೂಪವನ್ನು' ರೂಪಿಸಬಹುದು. ಈ ಕ್ರಿಯಾಪದದ ಅರ್ಥವು, ಬಳಸಲ್ಪಟ್ಟ ವ್ಯಂಜನಗಳಿಂದ ನಿರ್ಧರಿಸಲ್ಪಡುತ್ತದೆ. ಇತರ ವಾಚಕ ನಾಮಪದಗಳನ್ನು, ಅದೇ ಮೂಲ ಪದದಿಂದ ಅಭಿವೃದ್ಧಿಪಡಿಸಬಹುದಾಗಿದೆ.

ಒಂದು ಕ್ರಿಯಾಪದವು, ಮೂರು ಸ್ಥಿತಿಗಳನ್ನು ಹೊಂದಿವೆ: ಪರಿಪೂರ್ಣರೂಪ ಮತ್ತು ಅಪೂರ್ಣರೂಪ (ಇವುಗಳು ಕಾಲಗಳಾಗಿವೆ) ಮತ್ತು ವಿಧಿರೂಪ (ಇದು ಒಂದು ಕ್ರಿಯಾರೂಪವಾಗಿದೆ). ಪರಿಪೂರ್ಣರೂಪವು, ಸಾಮಾನ್ಯವಾಗಿ ಮಾತನಾಡುವ ಸಮಯದಲ್ಲಿ ನಡೆದ ಅಥವಾ ಮುಗಿದ ಒಂದು ಕ್ರಿಯೆಯನ್ನು ಸೂಚಿಸುತ್ತದೆ (ಉದಾ: *ಅವರು ಮಾಡಿದ್ದಾನೆ*). ಅಪೂರ್ಣರೂಪವು, ನಡೆಯುತ್ತಿರುವ ಅಥವಾ ನಡೆಯಲಿರುವ ಒಂದು ಕ್ರಿಯೆಯನ್ನು ಸೂಚಿಸುತ್ತದೆ (ಉದಾ: *ಅವನು ಮಾಡುತ್ತಿದ್ದಾನೆ ಅಥವಾ ಮಾಡುವನು*). ವಿಧಿರೂಪವು, ಒಂದು ಆದೇಶ ಅಥವಾ ಆಜ್ಞೆಯಾಗಿದೆ (ಉದಾ: *ಮಾಡು*).

ಕರ್ತರಿ ಪರಿಪೂರ್ಣರೂಪ, ಕರ್ತರಿ ಅಪೂರ್ಣರೂಪ, ವಿಧಿರೂಪ, ಕರ್ಮಣಿ ಪರಿಪೂರ್ಣರೂಪ, ಕರ್ಮಣಿ ಅಪೂರ್ಣರೂಪ, ವಾಚಕ ನಾಮಪದ, ಕರ್ತರಿ ಕೃದಂತ ಮತ್ತು ಕರ್ಮಣಿ ಕೃದಂತಗಳನ್ನು ಸೂಚಿಸುವುದಕ್ಕಾಗಿ, ಹಲವಾರು ವ್ಯಾಕರಣದ ರೂಪಗಳು, ಮೂಲ ಪದಗಳಿಂದ ರೂಪುಗೊಳ್ಳುತ್ತವೆ.

ಏಕವಚನ, ದ್ವಿವಚನ ಮತ್ತು ಬಹುವಚನ ಎಂಬ ಮೂರು ವಚನಗಳ ಹೊರತಾಗಿ, ಅರಬೀ ಭಾಷೆಯು ಸ್ವಪುರುಷ (ಮಾತನಾಡುವವ), ಮಧ್ಯಪುರುಷ (ಮಾತನ್ನು ಆಲಿಸುತ್ತಿರುವ ವ್ಯಕ್ತಿ) ಮತ್ತು ಅನ್ಯಪುರುಷ (ಯಾರ ಬಗ್ಗೆ ಮಾತನಾಡಲ್ಪಟ್ಟಿದೆ ಆ ವ್ಯಕ್ತಿ) ಎಂಬ ಮೂರು ಪುರುಷವನ್ನು ಗುರುತಿಸುತ್ತದೆ.

ಅರಬೀ ಭಾಷೆಯಲ್ಲಿ ಎರಡೇ ಲಿಂಗಗಳಿವೆ: ಪುಲ್ಲಿಂಗ ಮತ್ತು ಸ್ತ್ರೀಲಿಂಗ. 'ಇದು ಅಥವಾ ಅದು' ಎಂಬುವುದಿಲ್ಲ. ಆದ್ದರಿಂದ, ಅಲ್ಲಾಹನನ್ನು, 'ಅವನು' ಎಂದು ಅನ್ಯಪುರುಷದಲ್ಲಿ ಉಲ್ಲೇಖಿಸಲಾಗುತ್ತದೆ, ಅದರರ್ಥ, ಅಲ್ಲಾಹನು ಗಂಡು ಎಂದು ವ್ಯಕ್ತೀಕರಿಸಿರುವುದಲ್ಲ.

ಒಂದು ಮೂಲಪದವು ಒಂದ್ದಕ್ಕಿಂತ ಹೆಚ್ಚು ಅರ್ಥವನ್ನು ಹೊಂದಿರುವ ಕಾರಣ, ಅರ್ಥಗಳನ್ನು ಸಮೀಪಿಸುವ ರೀತಿಯ ಮೂಲಭೂತದ ತಿರುಳಿನಲ್ಲಿ, ಕೆಲವು ಸ್ಥಿರತೆಯ ಅಗತ್ಯವಿದೆ. ಅರಬೀ ಭಾಷೆಯು ಒಂದು ಸ್ಪಷ್ಟವಾದ ಭಾಷೆಯಾಗಿದೆ. ಅದರ ನಿರ್ಮಾಣ ಶೈಲಿಯು, ತನ್ನ ಮೂಲತತ್ವ ಅಥವಾ ರಚನೆಯಲ್ಲಿ ಯಾವುದೇ ರೀತಿಯ ದುರ್ಬಳಕೆಯು ನಡೆದರೆ, ಅದನ್ನು ಸ್ವತಃ ಅದುವೇ ಬಹಿರಂಗಗೊಳಿಸುತ್ತದೆ. ಅಂತಹ ಒಂದು ದುರ್ಬಳಕೆಯನ್ನು, ಧಾರ್ಮಿಕರು ಸ್ವಲಾತ್ ಪದದ ಮೇಲೆ ನಡೆಸಿದ್ದಾರೆ.

ಸ್ವಲಾತಿನ ಪದ ಪಲ್ಲಟ – ಅರಬರ ರೀತಿ

ಅನುವಾದಕರು, ಒಂದೇ ಪದಕ್ಕೆ ಅಥವಾ ಅದರ ಉತ್ಪನ್ನಗಳಿಗೆ, ಒಂದು ಅರ್ಥದಿಂದ ಇನ್ನೊಂದಕ್ಕೆ ಕುದಿಯಲು ಹೇಗೆ ನಿರ್ಬಂಧಿತರಾಗಿದ್ದಾರೆಂದು ನಾವು ನೋಡೋಣ. ನಾನು ಇದನ್ನು *ಸ್ವಲಾತಿನ ಪದ ಪಲ್ಲಟ* ಎಂದು ಕರೆಯುತ್ತೇನೆ.

ರೂಪ	**ಒಟ್ಟು ಬಳಕೆ**	**ವಿವರಣೆ**
ಸ್ವಲ್ಲಾ	2	75:31 ಮತ್ತು 96:10 ರಲ್ಲಿ *ವಿಧ್ಯುಕ್ತ ಪ್ರಾರ್ಥನೆ* ಎಂದು ಹೇಳುತ್ತಾರೆ.
ಫಸ್ವಲ್ಲಾ	1	87:15 ರಲ್ಲಿ *ವಿಧ್ಯುಕ್ತ ಪ್ರಾರ್ಥನೆ* ಎಂದು ಹೇಳುತ್ತಾರೆ.
ಯುಸ್ವಲ್ಲಾ	3	2:27, 13:21 ಮತ್ತು 13:25 ರಲ್ಲಿ, ಅಲ್ಲಾಹನೊಂದಿಗೆ, *ಸಂಬಂಧವನ್ನು ಜೋಡಿಸುವುದು* ಎಂದು ಹೇಳುತ್ತಾರೆ.

ಸ್ವಲ್ಲೀ	1	9:103 ರಲ್ಲಿ (ಪ್ರವಾದಿಯವರು) ಜನರಿಗಾಗಿ *ಪ್ರಾರ್ಥಿಸಿದರು ಅಥವಾ ಬೇಡಿದರು* ಎಂದು ಹೇಳುತ್ತಾರೆ. ಇಲ್ಲಿ ವಿಧ್ಯುಕ್ತ ಪ್ರಾರ್ಥನೆ ಎಂದು ಅವರು ಅರ್ಥಕೊಡುವುದಿಲ್ಲ.
ತುಸ್ವಲ್ಲೀ	1	9:84 ರಲ್ಲಿ *ವಿಧ್ಯುಕ್ತ ಪ್ರಾರ್ಥನೆ* ಎಂದು ಹೇಳುತ್ತಾರೆ.
ಫಸ್ವಲ್ಲೀ	1	108:2 ರಲ್ಲಿ ನಿಮ್ಮ ಪ್ರಭುವಿಗೆ *ವಿಧ್ಯುಕ್ತವಾಗಿ ಪ್ರಾರ್ಥಿಸಿರಿ* ಎಂದು ಹೇಳುತ್ತಾರೆ. (ಆದರೆ, ಅರಬೀ ಭಾಷೆಯಲ್ಲಿ *ಫಸ್ವಲ್ಲಿ ಲಿರಬ್ಬಿಕ* ಎಂದರೆ, 'ನಿಮ್ಮ ಪ್ರಭುವಿಗಾಗಿ, *ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ*')
ಯುಸ್ವಲ್ಲೀ	2	3:39 ಮತ್ತು 33:43 ರಲ್ಲಿ (ಎ) 33:43 ರಲ್ಲಿ ಅಲ್ಲಾಹನು ಮತ್ತು ದೇವದೂತರು ವಿಶ್ವಾಸಿಗಳನ್ನು '*ಹರಸಿದರು*' ಎಂದು ಹೇಳುತ್ತಾರೆ. ಇಲ್ಲಿ ವಿಧ್ಯುಕ್ತ ಪ್ರಾರ್ಥನೆ ಎಂದು ಅವರು ಹೇಳುವುದಿಲ್ಲ. ಏಕೆಂದರೆ, ಅಲ್ಲಾಹನು ಹಾಗೂ ದೇವದೂತರು ಹೇಗೆ ಪ್ರಾರ್ಥಿಸುವುದು ಎಂದು ಉತ್ತರಿಸಲು ಅವರಿಗೆ ಸಾಧ್ಯವಿಲ್ಲ. (ಬಿ) ಆದರೆ 3:39 ರಲ್ಲಿ ಅದೇ ಪದಕ್ಕೆ ಝಕರಿಯ್ಯಾರು *ವಿಧ್ಯುಕ್ತವಾಗಿ ಪ್ರಾರ್ಥಿಸುತ್ತಿದ್ದರು* ಎಂಬ ಅರ್ಥ ಕೊಡಲಾಗಿದೆ.
ಸ್ವಲ್ಲೂ	1	33:56 ರಲ್ಲಿ ಜನರು ಪ್ರವಾದಿಯರನ್ನು *ಗೌರವಿಸಬೇಕು* ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. ಇಲ್ಲಿಯೂ ವಿಧ್ಯುಕ್ತ ಪ್ರಾರ್ಥನೆಯೆಂದು ಅವರು ಹೇಳುವುದಿಲ್ಲ.
ಯುಸ್ಲಲ್ಲೂ	3	ಒಮ್ಮೆ 33:56 ರಲ್ಲಿ, ಎರಡು ಬಾರಿ 4:102 ರಲ್ಲಿ. (ಎ) 33:56 ರಲ್ಲಿ ಅಲ್ಲಾಹನು ಹಾಗೂ ದೇವದೂತರು, ಪ್ರವಾದಿಗೆ *ಆಶೀರ್ವದಿಸಿದರು* ಎಂದು ಹೇಳುತ್ತಾರೆ. (ಬಿ) 4:102 ಅದೇ ಪದಕ್ಕೆ *ವಿಧ್ಯುಕ್ತ ಪ್ರಾರ್ಥನೆ* ಎಂದು ಅರ್ಥ ಕೊಡಲಾಗಿದೆ.

ಯಸ್ಫಿಲು	5	4:90, 6:136 (2), 11:81, ಮತ್ತು 13:21 ರಲ್ಲಿ ಅಲ್ಲಾಹನೊಂದಿಗೆ *ಸಂಬಂಧವನ್ನು ಜೋಡಿಸಬೇಕು* ಎಂದು ಹೇಳುತ್ತಾರೆ.
ತಸ್ಫಿಲು	1	11:70 ರಲ್ಲಿ ಅಲ್ಲಾಹನೊಂದಿಗೆ *ಸಂಬಂಧವನ್ನು ಜೋಡಿಸಬೇಕು* ಎಂದು ಹೇಳುತ್ತಾರೆ.
ಮುಸ್ಫಲ್ಲನ್ (ಏಕವಚನ)	1	2:125 ರಲ್ಲಿ, *ಆರಾಧನಾ ಸ್ಥಾನ* ಎಂದು ಹೇಳುತ್ತಾರೆ. ವಿಧ್ಯುಕ್ತ ಪ್ರಾರ್ಥನೆ ನಿರ್ವಹಿಸುವ ವ್ಯಕ್ತಿ ಎಂದು ಹೇಳುವುದಿಲ್ಲ.
ಮುಸ್ಫಲ್ಲೀನ್ (ಬಹುವಚನ)	3	70:22, 74:43 ಮತ್ತು 107:4 ರಲ್ಲಿ *ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸುವವರು* ಎಂದು ಹೇಳುತ್ತಾರೆ. ಇಲ್ಲಿ ಆರಾಧನಾ ಸ್ಥಾನವೆಂದು ಅವರು ಹೇಳುವುದಿಲ್ಲ.
ಸ್ಫಲಾತ	46	ಈ ಎಲ್ಲಾ ಕಡೆಗಳಲ್ಲಿ, *ವಿಧ್ಯುಕ್ತ ಪ್ರಾರ್ಥನೆ* ಎಂದು ಅರ್ಥೈಸಲಾಗಿದೆ. ಈ 46 ವಚನಗಳ ಮುಂದೆಯೂ ಹಿಂದೆಯೂ ನೋಡಿದರೆ, ಎಲ್ಲಿಯೂ ವಿಧ್ಯುಕ್ತ ಪ್ರಾರ್ಥನೆಯ ವಿಧಾನಗಳು ಕಂಡುಬರುವುದಿಲ್ಲ.
ಸ್ಫಲಾತೀ	20	*ವಿಧ್ಯುಕ್ತ ಪ್ರಾರ್ಥನೆ* ಎಂದು ಅರ್ಥೈಸಲಾಗಿದೆ. ಈ 20 ವಚನಗಳ ಮುಂದೆಯೂ ಹಿಂದೆಯೂ ನೋಡಿದರೆ, ಎಲ್ಲಿಯೂ ವಿಧ್ಯುಕ್ತ ಪ್ರಾರ್ಥನೆಯ ವಿಧಾನಗಳು ಕಂಡುಬರುವುದಿಲ್ಲ.
ಸ್ಫಲಾತು	1	62:10 ರಲ್ಲಿ *ವಿಧ್ಯುಕ್ತ ಪ್ರಾರ್ಥನೆ* ಎಂದು ಹೇಳುತ್ತಾರೆ.
ಸ್ಫಲಾತಕ	1	9:103 ರಲ್ಲಿ ಪ್ರವಾದಿಯ *ವಿಧ್ಯುಕ್ತ ಪ್ರಾರ್ಥನೆಯು* ಜನರನ್ನು ಸಂತೋಷಪಡಿಸುತ್ತದೆ ಎಂಬ ಅರ್ಥವನ್ನು ಕೊಟ್ಟಿದ್ದಾರೆ.
ಸ್ಫಲಾತಿಕ	1	17:110 ರಲ್ಲಿ ನಿಮ್ಮ *ವಿಧ್ಯುಕ್ತ ಪ್ರಾರ್ಥನೆಯನ್ನು* ಮಧ್ಯಮ ಧ್ವನಿಯಲ್ಲಿ ನಿರ್ವಹಿಸಿರಿ ಎಂಬ ಅರ್ಥವನ್ನು ಕೊಟ್ಟಿದ್ದಾರೆ. ಆದರೆ ಇಂದು, ಅರಬೀ ಧರ್ಮದಲ್ಲಿ ಮಧ್ಯಾಹ್ನ ಮತ್ತು ಸಂಜೆಯ ಪ್ರಾರ್ಥನೆಯ ಪಠಣೆಗಳು ಮೌನತೆಯಲ್ಲಿ ನಿರ್ವಹಿಸಲಾಗುತ್ತದೆ.

ಸ್ವಲಾತುಕ	1	11:87 ರಲ್ಲಿ ಪ್ರವಾದಿ ಶುಐಬರ *ವಿಧ್ಯುಕ್ತ ಪ್ರಾರ್ಥನೆ* ಎಂದು ಹೇಳುತ್ತಾರೆ (ಆದರೆ, ಆ ವಚನದ ಪ್ರಸಂಗವು, ಆರ್ಥಿಕ ವ್ಯವಸ್ಥೆಯನ್ನು ಬದಲಿಸುವ ಬಗ್ಗೆಯಾಗಿದೆ).
ಸ್ವಲಾತಹು	1	24:41 ರಲ್ಲಿ ಪಕ್ಷಿಗಳು *ವಿಧ್ಯುಕ್ತವಾಗಿ ಪ್ರಾರ್ಥಿಸುತ್ತದೆ* ಎಂದು ಅರಬೀ ಧರ್ಮವು ಹೇಳುತ್ತದೆ. ಅದರ ಬಗ್ಗೆ ಒಮ್ಮೆ ಆಲೋಚಿಸಿರಿ...
ಸ್ವಲಾತಿಹಿಮ್	5	6:92, 23:2, 70:23, 70:34 ಮತ್ತು 107:5 ರಲ್ಲಿ *ವಿಧ್ಯುಕ್ತವಾಗಿ ಪ್ರಾರ್ಥಿಸುವವರ* ಮೇಲೆ ನೀವು ಭರವಸೆಯನ್ನಿಡಬಹುದು ಎಂದೂ, 70:32-35 ರಲ್ಲಿ *ವಿಧ್ಯುಕ್ತವಾಗಿ ಪ್ರಾರ್ಥಿಸುವವರು* ಯಾವಾಗಲೂ ತಮ್ಮ ಭರವಸೆಗಳನ್ನು ಈಡೇರಿಸುವವರು ಎಂದೂ ಅವರು ವ್ಯಾಖ್ಯಾನಿಸುತ್ತಾರೆ. ನಮ್ಮ ಅನುಭವವು ಇದಕ್ಕೆ ವಿರುದ್ಧವಾಗಿದೆ.
ಸ್ವಲಾತುಹುಮ್	1	8:35 ರಲ್ಲಿ *ವಿಧ್ಯುಕ್ತ ಪ್ರಾರ್ಥನೆ* ಎಂದು ಹೇಳುತ್ತಾರೆ.
ಸ್ವಲಾವಾತೀ	3	9:99, 2:238 ಮತ್ತು 23:9 ರಲ್ಲಿ: (ಎ) 9:99 ರಲ್ಲಿ: *ಅವರ ಉತ್ತಮ ಕಾರ್ಯಗಳು ಅವರನ್ನು ಅಲ್ಲಾಹನ ಮತ್ತು ಪ್ರವಾದಿಯವರ ವಿಧ್ಯುಕ್ತ ಪ್ರಾರ್ಥನೆಗಳ ಹತ್ತಿರ ಕೊಂಡೊಯ್ಯುತ್ತವೆ* ಎಂದು ಅವರು ಅನುವಾದಿಸಿದ್ದಾರೆ. ಇದು ಮತ್ತೊಂದು ಅತಾರ್ತಿಕವಾದ ಹೇಳಿಕೆಯಾಗಿದೆ. ನಾವು ಹಸಿದ ಒಬ್ಬ ಮನುಷ್ಯನಿಗೆ ಆಹಾರ ನೀಡಿದರೆ, ಅದು ನಮ್ಮನ್ನು ಪ್ರವಾದಿಯ 'ವಿಧ್ಯುಕ್ತ ಪ್ರಾರ್ಥನೆ'ಯ ಹತ್ತಿರ ಹೇಗೆ ಕೊಂಡೊಯ್ಯಬಹುದು? (ಬಿ) 2:238 ರಲ್ಲಿ ನಾವು ನಮ್ಮ *'ವಿಧ್ಯುಕ್ತ ಪ್ರಾರ್ಥನೆಗಳನ್ನು'* ಸಂರಕ್ಷಿಸಬೇಕೆಂದು ಅರ್ಥ ಕೊಟ್ಟಿದ್ದಾರೆ. (ಸಿ) 23:9 ರಲ್ಲಿ, *"ಅವರು ತಮ್ಮ ವಿಧ್ಯುಕ್ತ ಪ್ರಾರ್ಥನೆಗಳನ್ನು ಪಾಲಿಸುತ್ತಾರೆ"* ಎಂದು ಹೇಳುತ್ತಾರೆ. ವಿಧ್ಯುಕ್ತ ಪ್ರಾರ್ಥನೆ ನಿರ್ವಹಿಸುವುದರ ಮೂಲಕ ಅವರು ವಾಗ್ದಾನಗಳನ್ನು ಈಡೇರಿಸಬಹುದು ಎಂದು ಧಾರ್ಮಿಕರು ಮತ್ತು ಉಲೆಮಾಗಳು

		ಹೇಳುತ್ತಾರೆ ಮತ್ತು ವಿಧಿವತ್ತಾಗಿ ಪ್ರಾರ್ಥಿಸುವುದರಿಂದ ಅವರು ವಿಶ್ವಾಸಾರ್ಹರಾಗಬಹುದು ಎಂದೂ ಅವರು ಹೇಳುತ್ತಾರೆ. ಇದರ ಬಗ್ಗೆ ನೀವೇನು ಚಿಂತಿಸುತ್ತೀರಿ?
ಸ್ವಲವಾತುನ್	2	2:157 ಮತ್ತು 22:40 ಕಂಡು ಬಂದಿದೆ. ಅವರ ಅರ್ಥಗಳಲ್ಲಿ ಯಾವುದೇ ಸ್ಥಿರತೆ ಇರುತ್ತಿದ್ದರೆ, 2:157 ರಲ್ಲಿ '*ಅವರ ಮೇಲೆ ಅವರ ಅಲ್ಲಾಹನಿಂದ ವಿಧ್ಯುಕ್ತ ಪ್ರಾರ್ಥನೆಗಳಿವೆ*' ಎಂದು ಹೇಳಬೇಕಾಗಿತ್ತು. ಆದರೆ 22:40 ರಲ್ಲಿ ಈ ಪದವನ್ನು 'ಚರ್ಚುಗಳು' ಎಂದು ಅನುವಾದಿಸಲಾಗಿದೆ. ಕೆಲವು ಅರಬೀ ತಜ್ಞರು ಈ ಸಂದರ್ಭದಲ್ಲಿ ಈ ಪದದ ಅರ್ಥ 'ವಾಕ್ಚಾತುರ್ಯ'ಎಂದು ಹೇಳುತ್ತಾರೆ!

ಕುರ್‌ಆನಿನ ಒಂದು ಪದದ ತಿರುಚುವಿಕೆಯು, ವೈವಿಧ್ಯಕರ ವ್ಯಾಖ್ಯಾನಗಳನ್ನು ಉತ್ಪತ್ತಿಗೊಳಿಸುತ್ತದೆ, ಅವುಗಳಲ್ಲಿ ಕೆಲವು ಅರ್ಥಗಳು ಮೂಲಪದಕ್ಕೆ ಸಂಪೂರ್ಣವಾಗಿ ಅಸಂಬದ್ಧವಾಗಿವೆ. ಇಂದು ಅರಬೀ ಪುರೋಹಿತರಿಗೆ, ಈ ಅಸಮಂಜಸತೆಗೆ ಯಾವುದೇ ವೈಚಾರಿಕ ವಿವರಣೆಯನ್ನು ನೀಡಲು ಸಾಧ್ಯವಾಗಿಲ್ಲ. ಈ ವಿಷಯದ ಬಗ್ಗೆ ಯಾವುದೇ ಸವಾಲು ಕೇಳಿದರೆ, ಅವರು ಮಂಡಿಸೆಳೆತದ ಪ್ರತಿಕ್ರಿಯೆಯಂತೆ, ಕೇವಲ ತಮ್ಮ *ಸ್ವಲಾತ್ ಪದ ಪಲ್ಲಟವನ್ನು* ಪುನರಾವರ್ತಿಸುತ್ತಾರೆ.

ಪದೇ ಪದೇ ಕೇಳಲಾಗುವ ಪ್ರಶ್ನೆಗಳು

ಈ ಮೂಲ ಕ್ರಿಯಾಪದವು ಕಾಣಿಸಿಕೊಳ್ಳುವ ಕೆಲವು ವಚನಗಳು, ವಿಧ್ಯುಕ್ತ ಪ್ರಾರ್ಥನೆಯ ಅಸ್ತಿತ್ವವನ್ನು ಸಾಬೀತು ಪಡಿಸುತ್ತದೆ ಎಂದು ವಿಧ್ಯುಕ್ತ ಪ್ರಾರ್ಥನೆಯ ಪ್ರತಿಪಾದಕರು ವಾದಿಸಲು ಇಚ್ಛಿಸುತ್ತಾರೆ. ಅವರ ವಾದಗಳು ಈ ಕೆಳಗಿನ ರೀತಿಯಲ್ಲಿವೆ:

1. 5:6 ರಲ್ಲಿ ವಿಧ್ಯುಕ್ತ ಪ್ರಾರ್ಥನೆಗೆ ಮುಂಚಿತವಾಗಿ, ವಿಧಿವತ್ತಾದ ಶುದ್ಧೀಕರಣವನ್ನು (ಅವರು ಅದನ್ನು *ವುಝೂ* ಎಂದು ಕರೆಯುತ್ತಾರೆ) ಮಾಡಲು ಹೇಳಲಾಗಿದೆಯಲ್ಲವೇ? ನಿಶ್ಚಯವಾಗಿ, ಇದು ವಿಧ್ಯುಕ್ತ ಪ್ರಾರ್ಥನೆಯು ಅಗತ್ಯವಿದೆ ಎಂದು ಸಾಬೀತು ಪಡಿಸುವುದಿಲ್ಲವೇ?

   ಸೂರ 5 ನ್ನು, 1 ನೇ ವಚನದಿಂದ 7 ರ ವರೆಗೆ ಓದಬೇಕಾಗಿದೆ. ವಚನ 6, ನೈರ್ಮಲ್ಯಕರವಾಗಿ ಇರುದಕ್ಕೆ ಸಂಬಂಧಿಸಿದೆ. ಮೊದಲ ಎರಡು ವಚನಗಳು, ಆಹಾರದ ಬಗ್ಗೆ ಚರ್ಚಿಸುತ್ತದೆ. ಅಲ್ಲಾಹನು ತನ್ನ ವ್ಯವಸ್ಥೆಯಲ್ಲಿ ಸಮ್ಮತಿಸಿರುವ ಸಾಮರಸ್ಯವನ್ನು ಪಾಲನೆ ಮಾಡಬೇಕಾಗಿದೆ. ಮೂರನೇ

ವಚನವು ಆಹಾರದ ಬಗ್ಗೆ ಹೆಚ್ಚಿನ ವಿವರಗಳನ್ನು ಹೊಂದಿದೆ. ಅನಾರೋಗ್ಯಕರವಾದ ಆಹಾರದ ವಿವರವನ್ನು ನೀಡಿದ ನಂತರ, *'ಇಂದು ಜೀವನದ ರೀತಿಯು (ಅಥವಾ ದೀನ್) ಪರಿಪೂರ್ಣತೆಗೊಂಡಿತು'* ಎಂದು ಹೇಳುತ್ತದೆ. ನಾಲ್ಕನೇ ಮತ್ತು ಐದನೇ ವಚನಗಳು ಕೂಡಾ ಆಹಾರದ ಬಗ್ಗೆ ಚರ್ಚಿಸುತ್ತದೆ, ಜೊತೆಗೆ ಮುಸ್ಲಿಮರು ಹಿಂದಿನ ಗ್ರಂಥದವರನ್ನು ಮದುವೆಯಾಗಬಹುದು ಎಂಬ ಆದೇಶವನ್ನೂ ಹೊಂದಿವೆ. ಅವರ ಕಣ್ಣನ್ನು ತೆರೆಸಲು ಕೇವಲ ಇದುವೇ ಸಾಕು.

ನಂತರದ ವಚನವು, ನಮ್ಮನ್ನು ಶುದ್ಧವಾಗಿರಿಸಿಕೊಳ್ಳುತ್ತಾ, ನಾವು ನಮ್ಮ ಬದ್ಧತೆಗಳನ್ನು ಎತ್ತಿಹಿಡಿಯಬೇಕಾಗಿದೆ ಎಂದು ಹೇಳುತ್ತದೆ. 7 ನೇ ವಚನದಲ್ಲಿ, ನಾವು ನಮ್ಮ ಮೇಲಿನ ಅಲ್ಲಾಹನ ಅನುಗ್ರಹಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಬೇಕೆಂದು ಮತ್ತು *'ನಾವು ಆಲಿಸಿದೆವು, ಮತ್ತು ಅನುಸರಣೆಯನ್ನು ಸ್ವೀಕರಿಸಿದೆವು'* ಎಂದು ನಾವು ಹೇಳಿದ ಕ್ಷಣದಲ್ಲಿ ಅವನು ನಮ್ಮೊಂದಿಗೆ ಮಾಡಿದ ಒಪ್ಪಂದವನ್ನು ಎತ್ತಿಹಿಡಿಯಬೇಕು ಎಂದು ಹೇಳಲಾಗಿದೆ.

ನೈರ್ಮಲ್ಯತೆಯು ನಮ್ಮ ಬದ್ಧತೆಗಳ ಭಾಗವಾಗಿದೆ. ಮತ್ತು ತೊಳೆಯಲು ನೀರು ಇಲ್ಲವಾದಲ್ಲಿ, ಸ್ವಚ್ಛಗೊಳಿಸಲು ಬಳಸುವಂತಹ ವಸ್ತುವಿನಿಂದ ನಮ್ಮ ಅಂಗಾಗಗಳನ್ನು ಶುದ್ಧಗೊಳಿಸುವಂತೆ ಅಲ್ಲಾಹನು ನಮಗೆ ಒಂದು ಪರ್ಯಾಯ ಅವಕಾಶವನ್ನೂ ನೀಡಿದ್ದಾನೆ. ಸಾರಾಂಶವೇನೆಂದರೆ, ನಾವು ನಮಗೆ ಸಾಧ್ಯವಾದಷ್ಟು ಮಟ್ಟಿಗೆ ಸ್ವಚ್ಛತೆಯನ್ನು ಕಾಪಾಡಲು ಆಜ್ಞಾಪಿಸಲ್ಪಟ್ಟಿದ್ದೇವೆ ಮತ್ತು ಇಲ್ಲಿ ಪರಿಹಾರದೊಂದಿಗೆ ತೀವ್ರ ಸಂದರ್ಭಗಳ ಮಿತಿಗಳನ್ನೂ ವಿವರಿಸಲಾಗಿದೆ.

ವಿಧಿವತ್ತಾದ ಶುದ್ಧೀಕರಣ ಅಥವಾ *ವುಝೂ* ಎಂಬ ವಿಷಯವೇ ಇಲ್ಲ (ಹೆಚ್ಚಿನ ಮುಸ್ಲಿಮರು ಬಳಸುವ *ವುಝೂ* ಎಂಬ ಸಾಮಾನ್ಯ ಪದವು ಕುರ್‌ಆನಿನಲ್ಲಿ ಎಲ್ಲಿಯೂ ಕಾಣಲು ಸಾಧ್ಯವಿಲ್ಲ). 5:6 ರಲ್ಲಿ, ನಾವು ಮೊಣಕೈಗಳವರೆಗೆ ಮತ್ತು ಮುಖವನ್ನು ತೊಳೆಯುವುದು, ತಲೆ ಮತ್ತು ಪಾದದ ತೊಡೆಯುವುದು ಒಳ್ಳೆಯದು ಎಂದು ಹೇಳಲಾಗಿದೆ. ನಾವು ನಮ್ಮನ್ನು ಸ್ವಚ್ಛವಾಗಿರಿಸಬೇಕು. ಈ ವಚನವು ಸ್ವಲಾತ್ ಎಂಬುವುದು ಒಂದು ವಿಧ್ಯುಕ್ತ ಪ್ರಾರ್ಥನೆ ಎಂದು ಹೇಳುವುದಿಲ್ಲ. ವಿಧಿವಿಧಾನಗಳಲ್ಲಿ ನಮ್ಮನ್ನು ಸ್ವಚ್ಛಗೊಳಿಸಿದ ನಂತರ ನಾವು ವಿಧಿವಿಧಾನಗಳಲ್ಲಿ ಪ್ರಾರ್ಥಿಸಲು ಆರಂಭವಾಗಬೇಕು ಎಂದೂ ಈ ವಚನವು ಹೇಳುವುದಿಲ್ಲ.

2. ನಾವು ಹಗಲಿನ ಎರಡು ತುದಿಗಳಲ್ಲಿ ಮತ್ತು ರಾತ್ರಿಯ ಭಾಗಗಳಲ್ಲಿ ಸ್ವಲಾತನ್ನು ಎತ್ತಿಹಿಡಿಯುವಂತೆ 11:114 ರಲ್ಲಿ ಹೇಳಲಾಗಿದೆಯಲ್ಲವೇ?

ಸನ್ನಿವೇಶವನ್ನು ಕಡೆಗಣಿಸಿ ಆ ವಚನವನ್ನು ಉಲ್ಲೇಖಿಸುವುದು ಒಂದು ಪ್ರಮಾದವಾಗಿದೆ. ಇಲ್ಲಿ, ಸೂರ 11 ನ್ನು 112 ನೇ ವಚನದಿಂದ 115 ರ ವರೆಗೆ ಓದಬೇಕು. ಈ ವಚನವು, ಹಗಲಿನ ಎರಡು

ತುದಿಗಳಲ್ಲಿ ಮತ್ತು ರಾತ್ರಿಯ ಭಾಗಗಳಲ್ಲಿ ಸ್ವಲಾತನ್ನು ಮಾಡಬೇಕು ಎಂದು ಹೇಳುವುದಿಲ್ಲ. ವಾಸ್ತವವಾಗಿ, ಹಗಲಿನ ಎರಡು ತುದಿಗಳ ಮುಖಾಂತರ (ತುದಿಯಿಂದ ತುದಿತನಕ) ಮತ್ತು ರಾತ್ರಿಯು ಸಮೀಪಿಸುವ ಭಾಗದಲ್ಲಿ (*ಝುಲ್ಫನ್* ಅಂದರೆ ಸಮೀಪ) ಎಂದು ಈ ವಚನವು ಹೇಳುತ್ತದೆ. ವಚನದ ಪೂರ್ಣ ಸನ್ನಿವೇಶವು ಇಲ್ಲಿದೆ:

> ನೀವೂ ಹಾಗೂ ನಿಮ್ಮ ಜೊತೆಗೆ ಪ್ರಶ್ಚಾತಾಪಪಟ್ಟವರು, ನಿಮಗೆ ನಿರ್ದೇಶಿಸಲಾಗಿರುವುದನ್ನು ಎತ್ತಿಹಿಡಿಯಿರಿ ಮತ್ತು ಮಿತಿಯನ್ನು ಮೀರಬೇಡಿರಿ. ವಾಸ್ತವವಾಗಿ, ನಿಮ್ಮ ಪ್ರಭು ನಿಮ್ಮ ಕಾರ್ಯಗಳನ್ನೆಲ್ಲಾ ನೋಡುತ್ತಿದ್ದಾನೆ. ಅಕ್ರಮಿಗಳ ಕಡೆಗೆ ವಾಲಬೇಡಿರಿ, ಅನ್ಯಥಾ ಅವರು ನಿಮಗೆ ನರಕಾಗ್ನಿಯ ಸವಿಯುನ್ನುವಂತೆ ಮಾಡಿಬಿಡುವರು ಮತ್ತು ರಕ್ಷಕನಾಗಿ ಅಲ್ಲಾಹನನ್ನು ಹೊರತುಪಡಿಸಿ ನಿಮಗೆ ಬೇರೆ ಯಾರೂ ಸಿಗಲಾರರು ನಂತರ ನಿಮಗೆ ಎಲ್ಲಿಂದಲೂ ಸಹಾಯವು ಒದಗದು. ಮತ್ತು ಹಗಲಿನ ಎರಡು ತುದಿಗಳ ಮುಖಾಂತರ ಹಾಗೂ ರಾತ್ರಿಯ ಸಮೀಪದ ಭಾಗದಲ್ಲಿ, ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ *(ಅಖಿಮಿ ಸ್ವಲಾತ)*. ವಾಸ್ತವವಾಗಿ, ಉತ್ತಮ ಕಾರ್ಯಗಳು ಕೆಟ್ಟವುಗಳನ್ನು ರದ್ದುಮಾಡುತ್ತದೆ. ಇದು ನೆನಪಿಸ ಬಯಸುವವರಿಗೆ ಒಂದು ಸ್ಮರಣೆಯಾಗಿದೆ. ನೀವು ದೃಢಸಂಕಲ್ಪರಾಗಿರಿ. ಅಲ್ಲಾಹನು ಸದ್ಗುಣರಿಗೆ ಪ್ರತಿಫಲ ಕೊಡುವುದರಲ್ಲಿ ವಿಫಲನಾಗುವುದಿಲ್ಲ. (11:112-115)

ಬದ್ಧತೆಗಳ ಪಾಲನೆಯು ಹಗಲಿನುದ್ದಕ್ಕೂ ಹಾಗೂ ರಾತ್ರಿಯು ಸಮೀಪಿಸುವ ಭಾಗದಲ್ಲೂ ನಿರಂತರವಾಗಿ ನಡೆಯುತ್ತಿರಬೇಕಾಗಿದೆ ಎಂದು ಈ ವಚನವು ತಿಳಿಸಿದೆ. 11:112-115 ರ ವಚನಗಳು, ಅಲ್ಲಾಹನ ನಿರ್ದೇಶಿತ ಆದೇಶಗಳಲ್ಲಿ ಕಲಿಸಲ್ಪಟ್ಟ ಪ್ರಕಾರ ಇರುವ ದಿನಚರಿಗಳಿಗೆ ಕೇಂದ್ರೀಕರಿಸಿ, ಹಗಲಿನುದ್ದಕ್ಕೂ ಹಾಗೂ ರಾತ್ರಿಯ ಭಾಗಗಳಲ್ಲೂ ಉತ್ತಮ ಕಾರ್ಯಗಳನ್ನು ಮಾಡುವುದರ ಮಹತ್ವಕ್ಕೆ ಪ್ರಾಧಾನ್ಯಕೊಡಲಾಗಿದೆ. ಇದೊಂದು ಸರಳವಾದ ಸೂಚನೆಯಾಗಿದೆ.

3. 24:58 ರಲ್ಲಿ *ಸ್ವಲಾತಿಲ್ ಫಜ್ರ್* ಮತ್ತು *ಸ್ವಲಾತಿಲ್ ಇಶಾ* ಎಂದು ಎರಡು ಸ್ವಲಾತಿನ ಹೆಸರನ್ನು ಉಲ್ಲೇಖಿಸಲಾಗಿದೆಯಲ್ಲವೇ?[49]

ಈ ವಚನವು, ನಾವು ರಾತ್ರಿಯಲ್ಲಿ ನಮ್ಮ ಬದ್ಧತೆಗಳನ್ನು ಮುಗಿಸಿಕೊಂಡು, ನಮ್ಮ ಕೊಠಡಿಗೆ ಸೇರುವ ಸಮಯದಿಂದ, ಬೆಳಗ್ಗೆ ನಾವು ತಮ್ಮ ಬದ್ಧತೆಗಳನ್ನು ಮುಂದುವರಿಸಲು ಹೊರಬರುವ ತನಕ, ಮತ್ತು ಮಧ್ಯಾಹ್ನದ ಹೊತ್ತಿಗೆ ವಿಶ್ರಾಂತಿ ಪಡೆಯುವ ಸಮಯವನ್ನು ಉಲ್ಲೇಖಿಸಿ - ನಾವು ವಿವಸ್ತ್ರಗೊಳ್ಳುವ ಅವಧಿಯನ್ನು ಸೂಚಿಸುತ್ತಾ - ಆ ಸಮಯದಲ್ಲಿ ಪ್ರಾಯಪೂರ್ತಿಯಾಗದವರು ನಮ್ಮ ಕೊಠಡಿಗೆ

[49] ಅಂದರೆ, ಮುಂಜಾನೆಯ ಪ್ರಾರ್ಥನೆ ಮತ್ತು ರಾತ್ರಿಯ ಪ್ರಾರ್ಥನೆ. ವಿಚಿತ್ರವೆಂದರೆ, ಅವರ ಪ್ರಕಾರ ಮುಂಜಾನೆಯ ಪ್ರಾರ್ಥನೆಯನ್ನು ಕುರ್‌ಆನ್ *ಸ್ವಲಾತಿಲ್ ಫಜ್ರ್* ಎಂದು ಕರೆದಿರಲೂ, ಮುಸ್ಲಿಮರು ಅದನ್ನು *ಸ್ವಲಾತಿಲ್ ಸುಬ್ಹಿ* ಎಂದು ಕರೆಯುತ್ತಾರೆ.

ಪ್ರವೇಶಿಸುವ ಮೊದಲು ಅನುಮತಿ ಪಡೆಯಬೇಕೆಂದು ತಿಳಿಸಿದೆ. ಇವು ಮೂರು ಸಮಯಗಳು ನಮಗಿರುವ ಖಾಸಗಿ ವೇಳೆಯಾಗಿದೆ ಎಂದು ಪ್ರಸ್ತಾಪಿಸಲಾಗಿದೆ. ಇಂತಹ ಸೂಕ್ಷ್ಮ ವಿಷಯಗಳ ಬಗ್ಗೆಯೂ ಅಲ್ಲಾಹನು ಇಷ್ಟೊಂದು ಕಾಳಜಿಯಿಂದ ವಿವರಣೆ ನೀಡಿರುವಾಗ, ಇವರು ವಾದಿಸುತ್ತಿರುವ ವಿಧ್ಯುಕ್ತ ಪ್ರಾರ್ಥನೆಯ ವಿವರಣೆಯನ್ನು ನೀಡದಿರುವುದು ಏಕೆ ಎಂದು ಇವರು ಚಿಂತನೆ ನಡೆಸುವುದಿಲ್ಲ.

ಸ್ವಲಾತಿಲ್ ಫಜ್ರ್ ಮತ್ತು *ಸ್ವಲಾತಿಲ್ ಇಶಾ* ಯಾವುದೇ ವಿಧ್ಯುಕ್ತ ಪ್ರಾರ್ಥನೆಗಳಿಗೆ ಇಟ್ಟ ಹೆಸರುಗಳಲ್ಲ, ಬದಲಾಗಿ ಅವುಗಳು ಬರೇ ನಿರ್ದಿಷ್ಟ ಸಮಯವನ್ನು ಸೂಚಿಸುತ್ತದೆ. ಹಾಗೆಯೇ, ಮಾತಾಪಿತರು ತಮ್ಮ ಮಕ್ಕಳ ಕೊಠಡಿಗೆ ಅನುಮತಿಯ ವಿನಹಃ ಪ್ರವೇಶಿಸುವುದೂ ಸರಿಯಲ್ಲ. ಈ ವಚನವು, ಕುಟುಂಬ ಶಿಷ್ಟಾಚಾರವನ್ನು ಮತ್ತು ಮಾತಾಪಿತರ ಏಕಾಂತತೆಯನ್ನು ಗೌರವಿಸುವುದನ್ನು ಕಲಿಸುತ್ತದೆ. ಇಲ್ಲಿ ಯಾವುದೇ ವಿಧ್ಯುಕ್ತ ಪ್ರಾರ್ಥನೆಯ ಪ್ರಸ್ತಾವನೆಯು ಇಲ್ಲ.

4. *ಸ್ವಲಾತ್* ನಿಗದಿತ ಸಮಯದಲ್ಲಿ ನಿರ್ವಹಿಸಬೇಕು ಎಂದು ಅಲ್ಲಾಹನು 4:103 ರಲ್ಲಿ ಹೇಳಿದ್ದಾನಲ್ಲವೇ?

ಹಗಲಿನುದ್ದಕ್ಕೂ, ಮುಂಜಾನೆಯಿಂದ ರಾತ್ರಿಯವರಗೂ, ಸೂರ್ಯನು ಕುಸಿಯಲು ತೊಡಗುವ ಸಮಯದಿಂದ ಕತ್ತಲಾಗುವ ತನಕ, ಕೆಲವು ನಿರ್ದಿಷ್ಟ ಕ್ರಿಯೆಗಳನ್ನು ಅವುಗಳ ನಿಗದಿತ ಸಮಯಗಳಲ್ಲಿ ಮಾಡಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ಅಂದರೆ, 24X7. ಕೆಲವು ಕೆಲಸಗಳನ್ನು ನಿಗದಿತ ಸಮಯದಲ್ಲಿ ಮಾಡುವುದಕ್ಕೆ ನಾವು ಬದ್ಧವಾಗಿರುತ್ತೇವೆ ಎಂದು ಈ ವಚನವು ಹೇಳುತ್ತದೆ. ಅವುಗಳನ್ನು ಮಾಡಬೇಕಾದ ಸಮಯದಲ್ಲಿ ನಾವು ಅವುಗಳನ್ನು ಮಾಡಲೇಬೇಕು ಮತ್ತು ಸತತವಾಗಿ ಮಾಡುತ್ತಿರಬೇಕು.

ನಾವು ವ್ಯಾಪಾರಿಗಳಾಗಿದ್ದರೆ, ಮೋಸವನ್ನು ಮಾಡದೆ ಅಥವಾ ವಿಪರೀತ ಲಾಭಬಡುಕತನದ ಮೂಲಕ ಸಂಪಾದಿಸಿಕೊಳ್ಳದೆ, ನಮ್ಮ ಬದ್ಧತೆಗಳನ್ನು ನಿರ್ವಹಿಸಬೇಕು. ಒಬ್ಬ ಬಿಕ್ಷುಕ ಅಥವಾ ಬಡವ ಬೆಳಿಗ್ಗೆ ಒಂಬತ್ತಕ್ಕೆ ನಮ್ಮ ಬಳಿ ಬಂದರೆ, ನಾವು ಅವನನ್ನು 1 ಗಂಟೆಗೆ ತಿರುಗಿ ಬರಲು ಹೇಳಬಾರದು. ನಮ್ಮ ಕೆಲಸಗಾರರು ನಮಗಾಗಿ ಕೆಲಸ ಮಾಡಿದ್ದರೆ, ಅವರ ವೇತನವನ್ನು ವಿಳಂಬಿಸಬಾರದು ಅಥವಾ ಮುಂದೂಡಬಾರದು. ನಾವು ಯಾರಿಗಾದರೂ 3.00 ಗಂಟೆಗೆ ಭೇಟಿಮಾಡುವ ಭರವಸೆ ನೀಡಿದ್ದರೆ, ನಿಖರ 3.00 ಗಂಟೆಗೇ ಭೇಟಿಮಾಡಿ ಆ ವ್ಯಕ್ತಿಗೆ ನಮ್ಮ ಆ ಬದ್ಧತೆಯನ್ನು ಎತ್ತಿಹಿಡಿಯಬೇಕು, ಏಕೆಂದರೆ ಅಲ್ಲಾಹನು ಹೇಳುತ್ತಾನೆ, '*ಅವರು ಭರವಸೆಯನ್ನು ನೀಡಿದರೆ, ಅವರು ತಮ್ಮ ಭರವಸೆಗಳನ್ನು ಈಡೇರಿಸುತ್ತಾರೆ*'. ಭರವಸೆಯನ್ನು ಈಡೇರಿಸುವುದು ನಮ್ಮ ಬದ್ಧತೆಯ ಭಾಗವಾಗಿದೆ.

5. ಸ್ವಲಾತಿನಲ್ಲಿ ಒಂದು ಮಧ್ಯಮ ಧ್ವನಿಯನ್ನು ಬಳಸಿರಿ ಎಂದು 17:110 ರಲ್ಲಿ ಹೇಳಲಿಲ್ಲವೇ?

ಮೊದಲನೆಯದಾಗಿ, ಈ ವಿಷಯದ ಸನ್ನಿವೇಶವನ್ನು ತಿಳಿಯಬೇಕಾದರೆ, ನಾವು ಅಧ್ಯಾಯ 17 ನ್ನು ವಚನ 105 ರಿಂದ 111 ರ ತನಕ ಓದಬೇಕಾಗಿದೆ. 17:110 ವಚನವು, ನಮ್ಮ ಬದ್ಧತೆಗಳನ್ನು ನಾವು ಸಾರ್ವಜನಿಕವಾಗಿ ಘೋಷಿಸುವ ಮತ್ತು ಜನರನ್ನು ದೇವನ ಕಡೆಗೆ ಕರೆಯಬೇಕಾದ ರೀತಿಯ ಬಗ್ಗೆ ಆಗಿದೆ. ನಾವು ನಮ್ಮ ಬದ್ಧತೆಗಳನ್ನು, ಧ್ವನಿವರ್ಧಕದೊಂದಿಗೆ ಘೋಷಿಸುವುದೂ ಅಥವಾ ಯಾರಿಗೂ ಕೇಳಿಸದಂತೆ ನಿಶ್ಯಬ್ಧವಾಗಿರಿಸುವುದೂ ಮಾಡಬಾರದು.

17:110 ರಲ್ಲಿ ನಿರ್ದಿಷ್ಟವಾಗಿ ಪ್ರವಾದಿಗೆ, ಜನರನ್ನು ಅಲ್ಲಾಹನ ಕಡೆಗೆ ಕರೆಯುವಾಗ, ಒಂದು ಮಧ್ಯಮ ಧ್ವನಿಯನ್ನು ಬಳಸಲು ಹೇಳಲಾಗಿದೆ.

> ಹೇಳಿರಿ, ನೀವು ಅವನನ್ನು ಅಲ್ಲಾಹನೆಂದು ಕರೆಯಿರಿ ಅಥವಾ ಪರಮ ದಯಾಮಯನೆಂದು ಕರೆಯಿರಿ. ಹೇಗೆ ಬೇಕಾದರೂ ಅವನನ್ನು ಕರೆಯಬಹುದು, ಅವನಿಗೆ ಅತ್ಯಂತ ಸುಂದರ ಹೆಸರುಗಳಿವೆ. ನಿಮ್ಮ ಬದ್ಧತೆಗಳನ್ನು ಸಾರ್ವಜನಿಕವಾಗಿ ಜೋರಾಗಿಯೂ ಘೋಷಿಸಬಾರದು ಅಥವಾ ಅವುಗಳ ಬಗ್ಗೆ ನಿಶ್ಯಬ್ಧವಾಗಿಯೂ ಇರಬಾರದು. ಆದರೆ ಒಂದು ಮಧ್ಯಮ ಗತಿಯನ್ನು ತಮ್ಮದಾಗಿಸಬೇಕು. (17:110)

ಧಾರ್ಮಿಕರಿಗೆ ಉತ್ತರಿಸಲು ಸಾಧ್ಯವಿಲ್ಲದ ಪ್ರಶ್ನೆಗಳು

ವಿಧ್ಯುಕ್ತ ಪ್ರಾರ್ಥನೆಯ ಪ್ರತಿಪಾದಕರು, ಕುರ್‌ಆನಿನ ಕೇವಲ ಐದು ವಚನಗಳನ್ನು ಮಾತ್ರ ಆರಿಸಿ, ಅವುಗಳನ್ನು ಸನ್ನಿವೇಶಬಾಹಿರವಾಗಿ ಉಲ್ಲೇಖಿಸುವುದರ ಮೂಲಕ - ಅವುಗಳ ಆಧಾರದ ಮೇಲೆ - ಅವರು ವಿಧ್ಯುಕ್ತ ಪ್ರಾರ್ಥನೆಯು ಕಡ್ಡಾಯವಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಆದರೆ, ಅಂತಹ ಆಚರಣೆಗಳ ವಿಧಾನಗಳನ್ನು ತೋರಿಸುವ ಸಲುವಾಗಿ, ಯಾವುದೇ ಒಂದು ವಚನವನ್ನು ಉಲ್ಲೇಖಿಸಲು ಅವರಿಗೆ ಸಾಧ್ಯವಿಲ್ಲ.

ಬಹುಶಃ ಈಗ ಅವರು ಕೆಲವು ಪ್ರಶ್ನೆಗಳನ್ನು ಉತ್ತರಿಸಬೇಕಾದ ಸಮಯವಾಗಿದೆ:

- ತಾವು ಮೂರ್ತಿಪೂಜಕರಾಗಿಯೇ ಉಳಿಯಲು ಇಚ್ಛಿಸುವಾಗ ಹಾಗೂ ಅವರು ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸಿದಾಗಲೂ, ಅಂತಹ ಮೂರ್ತಿಪೂಜಕರನ್ನು ನೀವು ಕ್ಷಮಿಸುವುದು ಹೇಗೆ? (9:4-6)
- ಮೂರ್ತಿಪೂಜಕರು ಹೇಗೆ ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸುತ್ತಾರೆ?
- (ನೀವು ಓದುವ ಪ್ರಕಾರ) 4:101-102 ರಲ್ಲಿ ಪ್ರವಾದಿಯು ಅವಿಶ್ವಾಸಿಗಳಿಗೆ, ಹೇಗೆ ವಿಧ್ಯುಕ್ತ ಪ್ರಾರ್ಥನೆಗಳಿಗೆ ಮುಂದಾಳತ್ವ ವಹಿಸಿದರು?

ಇನ್ನಲ್ ಕಾಫಿರೀನ ಕಾನೂ ಲಕುಮ್ ಅದುವ್ವನ್ ಮುಬೀನ, ವಯಿಝೂ ಕುಂತ ಫೀಹಿಮ್, ಫ ಅಕಮ್ತ ಲಕುಮು-ಸ್ವಲಾತ (4:101-102)

ನಿಶ್ಚಯವಾಗಿಯೂ, ಅವಿಶ್ವಾಸಿಗಳು ನಿಮ್ಮ ಪ್ರತ್ಯಕ್ಷ ಶತ್ರುಗಳಾಗಿದ್ದಾರೆ, ಮತ್ತು ನೀವು (ಪ್ರವಾದಿ) ಅವರ ಮಧ್ಯದಲ್ಲಿದ್ದರೆ, ನೀವು ಅವರಿಗೆ *ಸ್ವಲಾತನಲ್ಲಿ* (ವಿಧ್ಯುಕ್ತ ಪ್ರಾರ್ಥನೆ?) ಮುಂದಾಳತ್ವ ವಹಿಸಿರಿ. (4:101-102)

- ಪ್ರವಾದಿಯವರ ವಿಧ್ಯುಕ್ತ ಪ್ರಾರ್ಥನೆಯು, ಜನರನ್ನು ಹೇಗೆ ಸಾಂತ್ವನ ಅಥವಾ ಸಂತೋಷ ಪಡಿಸಲು ಸಾಧ್ಯ? (9:103)

- ನಿಮಗೆ ಹಠಾತ್ ದುರಂತವು ಅಥವಾ ಆಕಸ್ಮಿಕ ಸಾವು ಎದುರಾದರೆ, ಸಾಕ್ಷಿಗಳಾಗಬೇಕಾದ ಇಬ್ಬರು ಅಪರಿಚಿತರು (ಅವರು ಒಂದು ವೇಳೆ ಅರಬೀ ಧರ್ಮದ ಬಗ್ಗೆ ಯಾವುದೇ ತಿಳುವಳಿಕೆ ಇಲ್ಲದವರಾಗಿದ್ದರೆ), ತಾವು ಸತ್ಯಸಂಧರು ಎಂದು ಅಲ್ಲಾಹನ ಮುಂದೆ ಶಪಥ ಮಾಡುವ ಮೊದಲು, ವಿಧ್ಯುಕ್ತ ಪ್ರಾರ್ಥನೆಯನ್ನು ಹೇಗೆ ನಿರ್ವಹಿಸಬಹುದು? (5:106)

- ಕುರ್‌ಆನಿನ ಸಂದೇಶವನ್ನು ಆಲಿಸಿದ ಕೂಡಲೇ, ಒಂದು ಪಟ್ಟಣದಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ಜನರು, ತಮ್ಮ ವಿಧ್ಯುಕ್ತ ಪ್ರಾರ್ಥನೆಯನ್ನು ಹೇಗೆ ನಿರ್ವಹಿಸಿದರು *(ವಹುಮ್ ಅಲಾ ಸ್ವಲಾತಿಹಿಮ್ ಯುಹಾಫಿಧೂನ್)* (6:92)? ಅವರಲ್ಲಿ ಅವಿಶ್ವಾಸಿಗಳು, ಕ್ರೈಸ್ತರು ಅಥವಾ ಯಹೂದಿಗಳೂ ಒಳಗೊಂಡಿರಬಹುದು.

- *ಯುಸ್ವಲ್ಲೂ* ಎಂಬುವುದು 4:102 ರಲ್ಲಿ *ವಿಧ್ಯುಕ್ತ ಪ್ರಾರ್ಥನೆ* ಎಂದಾದರೆ, ಅದು 33:56 ರಲ್ಲಿ *ಗೌರವ ಮತ್ತು ಬೆಂಬಲ* ಎಂದಾಗುವುದು ಹೇಗೆ?

- ಅಂತೆಯೇ, *ಯುಸ್ವಲ್ಲೀ* ಎಂಬ ಪದವು 3:39 ರಲ್ಲಿ *ವಿಧ್ಯುಕ್ತ ಪ್ರಾರ್ಥನೆ* ಎಂದಾಗಿರುವಾಗ, ಅದು 33:43 ರಲ್ಲಿ *ಗೌರವ* ಎಂದಾಗುವುದು ಹೇಗೆ?

- 33:56 ರಲ್ಲಿ *ಸ್ವಲ್ಲೂ*, 9:103 ರಲ್ಲಿ *ಸ್ವಲ್ಲೀ* ಎಂಬ ಪದಗಳು *ಗೌರವ* ಮತ್ತು *ಬೇಡುವುದು* ಎಂಬ ಅರ್ಥವನ್ನು ಕೊಡುವಾಗ, 75:31 ರಲ್ಲಿ ಮತ್ತು 96:10 ರಲ್ಲಿ *ಸ್ವಲ್ಲಾ* ಎಂಬ ಪದವು *ವಿಧ್ಯುಕ್ತ ಪ್ರಾರ್ಥನೆ* ಎಂದು ಹೇಳಲಾಗುತ್ತದೆ. ಹೀಗಾಗುವುದು ಹೇಗೆ?

- ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳು ಹಾಗೂ ಆಕಾಶ ಮತ್ತು ಭೂಮಿಯಲ್ಲಿ ಇರುವಂತಹ ಎಲ್ಲವೂ (ಉದಾಹರಣೆಗೆ ಪ್ರಾಣಿಗಳು, ಪರ್ವತಗಳು ಮತ್ತು ಮರಗಳು ಸೇರಿದಂತೆ) *ನಿರ್ದಿಷ್ಟ ದೈಹಿಕ ಚಲನೆಯುಳ್ಳ ಆಚರಣೆ* ಎಂದು ಅರ್ಥಕೊಡಲಾದ *ವಿಧ್ಯುಕ್ತ ಪ್ರಾರ್ಥನೆಯನ್ನು*, ಹೇಗೆ ನಿರ್ವಹಿಸುವುದು? (24:41)

- 11:87 ರಲ್ಲಿ ಶುಐಬರ ವಿಧ್ಯುಕ್ತ ಪ್ರಾರ್ಥನೆಯು *(ಸ್ವಲಾತುಕ)* ಜನರ ಆರ್ಥಿಕ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಹೇಗೆ ಸಾಧ್ಯ?

- 2:238 ರಲ್ಲಿರುವ *(ನೀವು '<u>ಸ್ವಲವಾತಿ</u>'ಯನ್ನು ಸಂರಕ್ಷಿಸಿರಿ)* ಮತ್ತು 9:99 ರಲ್ಲಿರುವ *(ಸಂದೇಶವಾಹಕರ '<u>ಸ್ವಲವಾತಿ</u>')* ಏಕರೂಪದ ಪದವನ್ನು, ವಿಭಿನ್ನವಾಗಿ ಅರ್ಥೈಸಿರುವುದಕ್ಕೆ ಕಾರಣವೇನು?

- 2:157 ರಲ್ಲಿ "*ಉಲಾಯಿಕ ಅಲೈಹಿಮ್ <u>ಸ್ವಲವಾತುನ್</u>*" ಮತ್ತು 22:40 ರಲ್ಲಿ "*<u>ಸ್ವಲಾತುನ್</u> ವ ಮಸಾಜಿದು*", ಈ ಎರಡೂ ಕಡೆಗಳಲ್ಲಿನ ಏಕರೂಪದ ಪದಕ್ಕೆ ವಿವಿಧ ಅರ್ಥಗಳನ್ನು ಏಕೆ ಕೊಡಲಾಗಿದೆ?

- 'ವಿವಾದಾತ್ಮಕ ಮಾತುಕತೆ ಮತ್ತು ಪ್ರತಿಭಟನೆ'ಯೊಂದಿಗೆ ವಿಧಿವತ್ತಾಗಿ ಪ್ರಾರ್ಥನೆ ಸಲ್ಲಿಸಲು ಸಾಧ್ಯವಿದೆಯೇ? ಇದೆಯೆಂದಾದರೆ, ಅದು ಹೇಗೆ? *(ಸ್ವಲಾತುಹುಮ್ ಇಂದಲ್ ಬೈತಿ ಇಲ್ಲಾ ಮುಕಾಅನ್ ವತಸ್ದೀಯನ್)* (8:35)

- 2:125 ರಲ್ಲಿ *ಮುಸಲ್ಲನ್* (ಏಕವಚನ) ಎಂಬ ಪದವು, *ವಿಧ್ಯುಕ್ತ ಪ್ರಾರ್ಥನೆಯನ್ನು* ನಿರ್ವಹಿಸುವ *ಸ್ಥಳ* ಎಂದೂ, 107:4 ರಲ್ಲಿ ಅದೇ ಪದ *ಮುಸಲ್ಲೀನ್* (ಬಹುವಚನ) *ವಿಧ್ಯುಕ್ತ ಪ್ರಾರ್ಥನೆ* ನಿರ್ವಹಿಸುವ *ಜನರು* ಎಂದು ಏಕೆ ಅರ್ಥೈಸಲಾಗುತ್ತದೆ?

ಸ್ವಲಾತ್ ಎಂಬ ಪದಕ್ಕೆ ಅಥವಾ (ಅದೇ ಪದದಿಂದ ಉತ್ಪತ್ತಿಯಾದ) ಅವುಗಳ ಉಪಪದಗಳಿಗೆ, ಜನರಿಂದ ಅಲ್ಲಾಹನಿಗೆ ನಿರ್ವಹಿಸುವಂತಹ ಒಂದು ಆಚರಣಾ ವಿಧಿ ಎಂದು ನಿರೂಪಿಸುವುದು ಸೂಕ್ತವಲ್ಲ. ಬದಲಿಗೆ, ಅದರ ಅರ್ಥವು, ಉದ್ದೇಶಪೂರ್ವಕವಾದ ತಮ್ಮ ಕರ್ಮಗಳ ಮೂಲಕ ಮಾನವನನ್ನು ಅಲ್ಲಾಹನೊಂದಿಗೆ ಜೋಡಿಸುವ ಬದ್ಧತೆಗಳನ್ನು ಸಂಬಂಧಿಸಿವೆ.

ಸ್ವಲಾತ್ ಎಂದರೆ, ನಿಗದಿತ ಕರಾರುಗಳನ್ನು ಪಾಲಿಸುವ ಬದ್ಧತೆಯಾಗಿದೆ. ಅದು ಕುರ್‌ಆನಿನಲ್ಲಿ ಜನರಿಗಿರುವ ಅಲ್ಲಾಹನ ಸಂಪೂರ್ಣ ಅನುಶಾಸನಗಳನ್ನು ಒಳಗೊಳ್ಳುತ್ತದೆ. ಅದು ಜವಾಬ್ದಾರಿಗಳನ್ನು, ಸಂಬಂಧಗಳನ್ನು, ಜನರ ನಡುವಿನ ಒಪ್ಪಂದಗಳು, ಒಬ್ಬ ವ್ಯಕ್ತಿಯ ಸ್ವಂತದ ಮೇಲಿರುವ ಕಟ್ಟುಪಾಡುಗಳು ಮತ್ತು ಶುಚಿತ್ವ ಮತ್ತು ಆಹಾರ ವಿಷಯಗಳನ್ನು ಸುತ್ತುವರಿದಿದೆ. ಅದು ಭರವಸೆಗಳು, ವ್ಯವಹಾರಗಳು, ಕುಟುಂಬಗಳ ವಿಷಯಕ್ಕೂ ವಿಸ್ತರಿಸಿದೆ. ಅದರಲ್ಲಿ ಯಾವುದೇ 'ಧಾರ್ಮಿಕತೆ' ಎಂಬುವುದು ಇಲ್ಲ.

ಭಾಗ ಆರು

ಧಾರ್ಮಿಕ ದಶಾಂಶ ತೆರಿಗೆಯ ಸಂಗ್ರಹಣೆಯು ಒಂದು ಹಗರಣವಾಗಿದೆ

ಫಲದಾಯಕ ಜೀವನದ ಪ್ರಾಯೋಗಿಕ ಕ್ರಮವನ್ನು ಉದ್ದೇಶಿಸುವ ಪದಗಳನ್ನು - ಬೇಜವಾಬ್ದಾರರಾದ ಜನರು ತಿರುಚಿದಾಗ – ಅವುಗಳು ಒಂದು ಧರ್ಮದ ರಚನೆಗಾಗಿ ಹೇಗೆ ಬಳಕೆಯಾಯಿತು ಎಂದು ನಾವು ಕಂಡೆವು. ಕುರ್‌ಆನಿನಲ್ಲಿರುವ ಅರಬೀ ಪಠ್ಯದ ಒಂದು ವಿಮರ್ಶಾತ್ಮಕ ಅಧ್ಯಯನವು ಬಹಿರಂಗಪಡಿಸುವುದೇನೆಂದರೆ:

- 'ಧರ್ಮ' ಎಂಬುವುದು ಮಾನವ-ನಿರ್ಮಿತವಾಗಿದೆ ಮತ್ತು ಅವತೀರ್ಣಗೊಂಡ ಗ್ರಂಥಗಳನ್ನು ಭ್ರಷ್ಟಗೊಳಿಸುವ ವಿಧಾನದ ಮೂಲಕವಲ್ಲದೇ, ಇದು ಯಾವುದೇ ಸಮರ್ಥನೆಯನ್ನು ಹೊಂದಿಲ್ಲ.

- 'ಆರಾಧನೆ ಅಥವಾ ಪೂಜೆ' ಎಂಬುವುದು, ಮಾನವ-ನಿರ್ಮಿತ ದೇವತೆಗಳಿಗೆ ಅಥವಾ ಮೂರ್ತಿಗಳಿಗೆ ಮಾತ್ರ ಸೂಕ್ತವಾದ ಧಾರ್ಮಿಕ ಚಟುವಟಿಕೆಯ ಒಂದು ರೂಪವಾಗಿದೆ.

- 'ವಿಧ್ಯುಕ್ತ ಪ್ರಾರ್ಥನೆ'ಯು, ಮೂರ್ತಿಗಳನ್ನು ಆರಾಧಿಸುವ ಒಂದು ಕ್ರಿಯೆಯಾಗಿದೆ.

ಇವು ಯಾವುವೂ ಕುರ್‌ಆನಿನಿಂದ ಅಂಗೀಕರಿಸಲ್ಪಟ್ಟವುಗಳಲ್ಲ. ಒಂದು ಧರ್ಮಕ್ಕೆ ಹಣದ ಅವಶ್ಯಕತೆ ಇರುತ್ತದೆ ಹಾಗೂ ಧರ್ಮದ ನಿರ್ಮಾಪಕರು ಮತ್ತು ಪಾಲಕರು ಅದನ್ನು ಎಲ್ಲಿಂದಲ್ಲಾದರೂ ಸಂಗ್ರಹಿಸಲೇಬೇಕಾಗುತ್ತದೆ. ವ್ಯಾಟಿಕನ್ (ಕ್ಯಾಥೋಲಿಕ್ ಚರ್ಚುಗಳ ಕೇಂದ್ರ ಆಡಳಿತ ಸಂಘ) ತನ್ನ ಜನಸಮೂಹದ ಜೊತೆಗೆ ಇದನ್ನು ಬಹಳ ಚೆನ್ನಾಗಿ ನಿರ್ವಹಿಸುತ್ತದೆ, ಹಾಗೆಯೇ ಅರಬೀ ಧರ್ಮವೂ ಕೂಡ. *ಇಸ್ಲಾಂ* ಎಂದು ಕರೆಯಲ್ಪಡುವ ಧರ್ಮವು, ಒಂದು ದಶಾಂಶ ರೂಪದಲ್ಲಿ (2.5%), ಕಡ್ಡಾಯ ಧಾರ್ಮಿಕ ತೆರಿಗೆಯನ್ನು ವಿಧಿಸಿದೆ. ಮತ್ತೊಮ್ಮೆ, ಅಲ್ಲಾಹನ ಪದಗಳ ಅರ್ಥಕ್ಕೆ ಸಂಬಂಧಿಸಿದ ಭಾಷಾಶಾಸ್ತ್ರವನ್ನು ಭ್ರಷ್ಟಗೊಳಿಸುವ ಮೂಲಕ ಮತ್ತು ಕುರ್‌ಆನ್-ಬಾಹಿರ ಹೇಳಿಕೇಳಿದ ಹಾಗೂ ಊಹೆಗಳ ದೊಡ್ಡ ಕಂತೆಯನ್ನು ಜೊತೆಗೂಡಿಸುವ ಮೂಲಕ ಇದನ್ನು ಸಾಧಿಸಲಾಗಿದೆ. ಈ ಭಾಗವು ಮತ್ತು ಇದರ ನಂತರದವುಗಳು, ಮುಗ್ಧ ಮುಸ್ಲಿಮರ ಮತ್ತು ಕೊನೆಯ ಪ್ರವಾದಿಯ ಹೆಸರಿನ ವಿರುದ್ಧ ನಡೆಸಿದ ಒಳಸಂಚಿನ ಹಿಂದಿರುವ ಸತ್ಯವನ್ನು ದಾಖಲೆ ಮಾಡುತ್ತವೆ.

ಈ ದುರುದ್ದೇಶಗಳನ್ನು ಸಾಧಿಸಲು, ಈಗಾಗಲೇ ಸೂಚಿಸಿದಂತೆ, ಕುರ್‌ಆನಿನಲ್ಲಿ ಪದೇ ಪದೇ ಕಾಣಿಸುವಂತಹ ಕೆಲವು ಪದಗಳ ಅರ್ಥಗಳು ವಿರೂಪಗೊಳಿಸಲ್ಪಟ್ಟಿವೆ. ಈಗ ಕೈಯಲ್ಲಿರುವ ವಿಷಯಕ್ಕೆ ಸಂಬಂಧಿಸಿದ ಪ್ರಮುಖ ನುಡಿಗಟ್ಟು *ಅಖೀಮು-ಸ್ಸಲಾತ ವಆತು-ಝ್ಝಕಾತ* ಆಗಿದೆ. ಮೂಲಗ್ರಂಥದ ಮೂಲಪಾಠವನ್ನೂ, ಅರ್ಥಕ್ಕೆ ಸಂಬಂಧಿಸಿದ ಭಾಷಾಶಾಸ್ತ್ರವನ್ನೂ ಮತ್ತು ಸಂದರ್ಭೋಚಿತ ಅಧ್ಯಯನವನ್ನೂ ಅವಲೋಕಿಸಿದರೆ, ಈ ನುಡಿಗಟ್ಟು *'ನಿಮ್ಮ ಬದ್ಧತೆಗಳನ್ನು ಪಾಲಿಸಿರಿ ಮತ್ತು ಅವುಗಳನ್ನು ಶುದ್ಧವಾಗಿರಿಸಿ'* ಎಂಬ ಅರ್ಥವನ್ನು ಸೂಚಿಸುತ್ತದೆ. ಆದರೆ, ಈ ವಿಚಾರವನ್ನು, *'ನಿಮ್ಮ ವಿಧ್ಯುಕ್ತ ಪ್ರಾರ್ಥನೆಗಳನ್ನು ಪಾಲಿಸಿರಿ ಮತ್ತು ಧಾರ್ಮಿಕ*

ದಶಾಂಶ ತೆರಿಗೆಯನ್ನು ಪಾವತಿಸಿರಿ' ಎಂಬ ಅರ್ಥ ಬರುವಂತೆ ಮಾಪಿಸಲಾಗಿದೆ. ಅದು ಪ್ರತಿಯೊಬ್ಬರೂ ಮಸೀದಿಗೆ ಬರುತ್ತಿರುವುದನ್ನು, ಭಾಗ್ಯಕ್ಕಾಗಿ ಹಣವನ್ನು ಪಾವತಿ ಮಾಡುತ್ತಿರುವುದನ್ನು ಮುಂದುವರಿಸಿಕೊಂಡು ಬಂದಿದೆ. ಇದು ಇವರಿಗೆ ಎಷ್ಟು ಸಂತೋಷಭರಿತ ಸೌಕರ್ಯವಾಗಿದೆ.

ಮೇಲಿನ ನುಡಿಗಟ್ಟು ಕುರ್‌ಆನಿನಲ್ಲಿ ಹಲವಾರು ಸ್ಥಳಗಳಲ್ಲಿ ಕಂಡುಬರುತ್ತದೆ. ಯಾವಾಗಲೂ, ವಿಷಯದ ಸನ್ನಿವೇಶವನ್ನು ತಿಳಿಯುವುದು ಅರಿವಿನ ಕೀಲಿಕೈಯಾಗಿದೆ.

> ವಿಪರೀತ ಲಾಭ ತಿನ್ನುವವನು ಶೈತಾನನ ಭಾದೆಯಿಂದಲ್ಲದೆ ಎದ್ದು ನಿಲ್ಲಲಾರನು. ಏಕೆಂದರೆ, 'ವಿಪರೀತ ಲಾಭವು ವ್ಯಾಪಾರದ ಒಂದು ರೀತಿಯೇ ಆಗಿದೆ' ಎಂದು ಅವನು ಹೇಳುವನು. ಆದರೆ ಅಲ್ಲಾಹನು ವ್ಯಾಪಾರವನ್ನು ಅನುಮತಿಸಿದ್ದಾನೆ, ವಿಪರೀತ ಲಾಭಬುಡುಕುತನವನ್ನು ನಿಷಿದ್ಧಗೊಳಿಸಿದ್ದಾನೆ... ಅಲ್ಲಾಹನು ವಿಪರೀತ ಲಾಭಬುಡುಕುತನವನ್ನು ನಾಶಪಡಿಸುತ್ತಾ, ದಾನವನ್ನು ವೃದ್ಧಿಗೊಳಿಸಲು ಇಚ್ಛಿಸುತ್ತಾನೆ... ಇದು ವಿಶ್ವಾಸವಿರಿಸುವವರಿಗೆ, ಉತ್ತಮ ಕಾರ್ಯಗಳನ್ನು ಮಾಡುವವರಿಗೆ, ಬದ್ಧತೆಗಳನ್ನು ನೆರವೇರಿಸುವವರಿಗೆ, ಅವುಗಳನ್ನು ನಿಷ್ಕಲಂಕವಾಗಿಸುವವರಿಗಾಗಿದೆ *(ಅಖೀಮು-ಸ್ವಲಾತ ವಆತು-ಝ್ಝುಕಾತ)*. ಅವರ ಪ್ರಭುವು ಅವರಿಗೆ ಪ್ರತಿಫಲವನ್ನು ನೀಡುತ್ತಾನೆ. ಅವರಿಗೆ ಯಾವ ಭಯವೂ ಮತ್ತು ವ್ಯಥೆಯೂ ಇಲ್ಲ. (2:275-277)

'ಅಖೀಮು-ಸ್ವಲಾತ ವಆತು-ಝ್ಝುಕಾತ' ಎಂಬ ವಾಕ್ಯವನ್ನು ಪ್ರತ್ಯೇಕವಾಗಿ ಓದಿದರೆ, ಅದು ಯಾವುದೇ ಅರ್ಥವನ್ನು ಕೊಡುವುದಿಲ್ಲ. ಬದಲಿಗೆ ಆ ವಾಕ್ಯದ ಸನ್ನಿವೇಶವು ಸೂಚಿಸುವಂತಹ ಸಾರಾಂಶಕ್ಕೆ ಓದುಗರು ಸಮ್ಮತಿಸಬೇಕೆಂದು ಅದು ಕರೆ ನೀಡುತ್ತದೆ. ಈ ವಾಕ್ಯಕ್ಕೆ ಹೋಲುವ ಕನ್ನಡ ವಾಕ್ಯವು ಹೀಗಿರುತ್ತದೆ, *'ಮಾಡಿರಿ, ಚೆನ್ನಾಗಿ ಮಾಡಿರಿ!'*. ಏನನ್ನು ಮಾಡಬೇಕು ಎಂಬುವುದು, ಸನ್ನಿವೇಶದ ಅಥವಾ ಸಂದರ್ಭದ ಬಗ್ಗೆ ಚುರುಕಾದ ಚಿಂತನೆಯನ್ನು ಮಾಡುವುದರ ಮೂಲಕ ಮಾತ್ರ ಗ್ರಹಿಸಬಹುದು. ಆದಾಗ್ಯೂ, ಧಾರ್ಮಿಕರು ಮತ್ತು ಉಲೆಮಾಗಳು, ಸಂಪೂರ್ಣವಾಗಿ ತಮ್ಮದೇ ಆದ ಅರ್ಥವನ್ನು ಈ ನಿರ್ದಿಷ್ಟ ವಾಕ್ಯದ ಮೇಲೆ ಹೊರಿಸಿ, ಜನರನ್ನು ತಮ್ಮ ಆಜ್ಞಾಪಾಲಕರಾಗಿಯೂ ಮತ್ತು ಚಿಂತನೆಯನ್ನು ಉಪಯೋಗಿಸದವರಾಗಿಯೂ ಮತ್ತು ತಮಗೆ ಆರ್ಥಿಕವಾಗಿ ಉಪಯುಕ್ತರಾಗಿಯೂ ಇರಿಸಿಕೊಳ್ಳಲು ಅವರು ಅದನ್ನು ಬಳಸಿಕೊಂಡಿದ್ದಾರೆ.

ಝ್ಝುಕಾತ್ ಎಂದರೆ ಧಾರ್ಮಿಕ ದಶಾಂಶ ತೆರಿಗೆ ಎಂದರ್ಥವಲ್ಲ

ಧಾರ್ಮಿಕರು ಪ್ರಚಾರ ಮಾಡುವ ವಿಧ್ಯುಕ್ತ ಪ್ರಾರ್ಥನೆಗಳು ಮತ್ತು ದಶಾಂಶ ತೆರಿಗೆಯು ತಮ್ಮ ಕರ್ತವ್ಯವಾಗಿದೆ ಎಂದು ನಂಬುವಂತೆ, ಹೆಚ್ಚಿನ ಮುಸ್ಲಿಮರು ತಮ್ಮ ಧಾರ್ಮಿಕ ಮುಖಂಡರಿಂದ ವಂಚಿಸಲ್ಪಟ್ಟಿದ್ದಾರೆ. *'ಅಖೀಮು-ಸ್ವಲಾತ ವಆತು-ಝ್ಝುಕಾತ'* ಎಂಬ ಈ ಪದಗುಚ್ಛದ ಮೊದಲಿನ ಭಾಗದ ಅರ್ಥವು *'ವಿಧ್ಯುಕ್ತ ಪ್ರಾರ್ಥನೆಯನ್ನು*

ನಿರ್ವಹಿಸಿರಿ' ಮತ್ತು ಎರಡನೇ ಭಾಗದ ಅರ್ಥವು *'ದಶಾಂಶ ತೆರಿಗೆಯ ಪಾವತಿಯನ್ನು ಮಾಡಿರಿ'* ಎಂಬುವುದಾಗಿದೆ ಎಂದು ಅವರಿಗೆ ಹೇಳಲಾಗುತ್ತದೆ. ಅವರು ಇದಕ್ಕೆ ಮುಗ್ಗರಿಸಿ ಬೀಳಲು ಎರಡು ಕಾರಣಗಳಿವೆ:

- ಅವರು ಅಲ್ಲಾಹನ ಗ್ರಂಥದ ಬಗ್ಗೆ ತಿಳಿವಳಿಕೆ ಇಲ್ಲದವರಾಗಿದ್ದಾರೆ.
- ಈ ಮಾನವ ಶೈತಾನರು ಈ ವಿಷಯದಲ್ಲಿ ವಿಶೇಷ ಜ್ಞಾನವನ್ನು ಹೊಂದಿದ್ದಾರೆಂದು ಅವರು ನಂಬುತ್ತಾರೆ. (ಅಜ್ಞಾನಿಗಳನ್ನು ಮೋಸಮಾಡುವುದೂ, ಮುಗ್ಧರ ರಕ್ತವನ್ನು ಹೀರುವುದೂ ಈ ಮಾನವ ದೆವ್ವಗಳ ವೃತ್ತಿಯಾಗಿದೆ.)

ಆದಾಗ್ಯೂ,ನಾವು ಜಾಗರೂಕರಾಗಿರಬೇಕು. ಏಕೆಂದರೆ:

- ನಾವು ಯಾವುದೇ ವಿಷಯವನ್ನು ಪರಿಶೀಲಿಸದೇ ಅದನ್ನು ನಂಬುವುದು ತಪ್ಪಾಗಿದೆ, (17:36 ನ್ನು ನೋಡಿ). ಯಾವುದೇ ಒಂದು ವಿಷಯದ ಸತ್ಯಾಂಶದ ಬಗ್ಗೆ ನಮಗೆ ತಿಳಿವಿಲ್ಲದಿದ್ದರೆ, ನಾವು ಅದನ್ನು ಸ್ವೀಕರಿಸಬಾರದು ಅಥವಾ ಮಾಡಬಾರದು.
- ಕೇವಲ ಹೇಳಿಕೇಳಿದ ಮಾತುಗಳ ಆಧಾರದಲ್ಲಿ ಪ್ರಸ್ತಾವಿಸಲಾದವುಗಳನ್ನು ಅಲ್ಲಾಹನ ಮೇಲೆ ಹೊರಿಸುವುದು ಅಪಾಯಕರವಾಗಿದೆ.

ಅಜ್ಞಾನವು ಕ್ಷಮಾರ್ಹವಲ್ಲ ಎಂದು ನಾವು ಮನದಟ್ಟು ಮಾಡಿಕೊಳ್ಳಬೇಕು. ಈ ಜಗತ್ತಿನಲ್ಲಿ ನಮ್ಮ ಕಾರ್ಯಗಳಿಗೆ ನಾವೇ ಜವಾಬ್ದಾರರಾಗಿದ್ದೇವೆ. ಅಲ್ಲಾಹನ ಹೊರತು ಇತರ ಗಣ್ಯರ ಸೇವೆಯನ್ನು ಮಾಡುವುದು ಬಹಳ ಗಂಭೀರ ಅಪರಾಧವಾಗಿದೆ ಮತ್ತು ಇದನ್ನು ಬಹಳ ಆಳವಾದ ಮಟ್ಟದಲ್ಲಿ ನಾವು ತಿಳಿದಿದ್ದೇವೆ. ಈ ವಾಸ್ತವಿಕತೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಮೂಲಭೂತ ಸಾರ್ವತ್ರಿಕ ಮೌಲ್ಯಗಳು

'ಅಜ್ಞಾನದಿಂದ ಸಂಭವಿಸಿದೆ' ಎಂಬ ಒಂದು ಮನವಿಯ ಮೇಲೆ, ವಿಶ್ವದ ಯಾವುದೇ ನ್ಯಾಯಾಲಯವು ಆರೋಪಿಯನ್ನು ದೋಷಮುಕ್ತಗೊಳಿಸುವುದಿಲ್ಲ. ಕಾನೂನಿನ ಕುರಿತ ಅಜ್ಞಾನವು, ಯಾವ ರೀತಿಯಲ್ಲೂ ಕ್ಷಮಾರ್ಹವಲ್ಲ. ಹಾಗೆಯೇ, ತೀರ್ಪಿನ ದಿನದಂದು ನಾವು ಅಜ್ಞಾನವನ್ನು ಸಮರ್ಥಿಸಿಕೊಳ್ಳಲು ಅಥವಾ ನಾವು ಮಾಡಿರುವ ತಪ್ಪುಗಳನ್ನು ಬೇರೆಯವರ ಮೇಲೆ ಹೊರಿಸಲು ಸಾಧ್ಯವಿಲ್ಲ. ಕುರ್‌ಆನಿನ ಈ ಕೆಳಗಿನ ಹೇಳಿಕೆಗಿಂತ ಹೆಚ್ಚು ಸ್ಪಷ್ಟವಾಗಿ ಬೇರೆ ಏನಿದೆ?

ಅನ್ ತಖೂಲೂ ಯೌಮಲ್ ಖಿಯಾಮತಿ, ಇನ್ನಾ ಕುನ್ನಾ ಅನ್ ಹಾಧಾ ಘಾಫಿಲೀನ್ (7:172)

ಇದು, ನೀವು ತೀರ್ಪಿನ ದಿನದಿಂದು **"ನಿಜವಾಗಿಯೂ ನಮಗೆ ಇದರ ಬಗ್ಗೆ ಗೊತ್ತಿರಲಿಲ್ಲ."** ಎಂದು ಹೇಳಬಾರದೆಂಬ ಕಾರಣಕ್ಕಾಗಿದೆ (7:172)

ಸಮಸ್ತ ಮುಸ್ಲಿಮರು - ಮತ್ತು ವಿಶೇಷವಾಗಿ ಆಧುನಿಕ ಅರಬರು - ಕುರ್‌ಆನಿನಲ್ಲಿರುವ ಅಲ್ಲಾಹನ ಸಂದೇಶದ ಬಗ್ಗೆ ತೀರಾ ತಿಳುವಳಿಕೆ ಇಲ್ಲದವರಾಗಿದ್ದಾರೆ. ಅರಬೀ ವಚನಗಳನ್ನು ಕೇವಲ ಗಟ್ಟಿಯಾಗಿ ಓದಿಕೊಳ್ಳುವುದು ಅವರಿಗೆ ಪುಣ್ಯವನ್ನು ದೊರಕಿಸುತ್ತದೆ ಎಂದು ಅವರು ನಂಬಿರುವ ಕಾರಣ, ಅವರು ಕುರ್‌ಆನನ್ನು ಅರ್ಥಮಾಡಿಕೊಳ್ಳದೇ ಓದುತ್ತಿರುತ್ತಾರೆ. ಅರ್ಥಮಾಡಿಕೊಳ್ಳುವುದನ್ನು ಅವರು ಉಲೆಮಾಗಳಿಗೆ ಬಿಟ್ಟುಬಿಟ್ಟಿದ್ದಾರೆ. ಒಟ್ಟಿನಲ್ಲಿ, ಅವರು ತಮ್ಮ ಪ್ರಭುವಿನ ಸೇವೆ ಮಾಡಿಕೊಂಡು, ಸದಾಚಾರದ ಜೀವನವನ್ನು ನಡೆಸುವ ಅಗತ್ಯವಿದೆ ಎಂದು ಭಾವಿಸಿರುವ ಪ್ರಾಮಾಣಿಕ ಮತ್ತು ಸರಳ ಜನರಾಗಿದ್ದಾರೆ. ಅವರು ಉಸಿರುಗಟ್ಟಿಸುವಂತಹ ಧರ್ಮದ ಪರಂಪರೆಯಲ್ಲಿ ಜನಿಸಿದವರಾಗಿದ್ದಾರೆ. ಈ ಪರಿಸ್ಥಿತಿಯ ಕಡೆಗೆ ಅನುಭೂತಿ ವ್ಯಕ್ತಪಡಿಸುವುದು ಸುಲಭವಾಗಿದೆ, ಆದರೆ ನಾವು ಮಾಡುತ್ತಿರುವುದರ ಮೇಲೆ, ನಾವೆಲ್ಲರೂ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿದೆ. ತೀರ್ಪಿನ ದಿನದಂದು ನಾವು ನಮ್ಮ ಮಾತಾಪಿತರನ್ನು ಒಟ್ಟಾರೆ ದೂಷಿಸಲು ಸಾಧ್ಯವಿಲ್ಲ.

> ಅಥವಾ ನೀವು ಹೇಳಬಹುದು, "ಮೂರ್ತಿಗಳನ್ನು ನೆಲೆಗೊಳಿಸಿದವರು ನಮ್ಮ ಮಾತಾಪಿತರಾಗಿದ್ದಾರೆ, ಮತ್ತು ಸಂತತಿಗಳಾಗಿ ನಾವು ಅವರ ಹಾದಿಯನ್ನೇ ಅನುಸರಿಸಿದೆವು. ನಮ್ಮನ್ನು ಅವರು ದಾರಿತಪ್ಪಿಸಿದ ಕಾರಣಕ್ಕಾಗಿ, ನಮ್ಮನ್ನು ನೀನು ಶಿಕ್ಷಿಸುವೆಯಾ?" (7:173)

ಇಂದು, ಜನರು ತಮ್ಮ ಮಾರ್ಗದರ್ಶನಕ್ಕಾಗಿ ಉಲೆಮಾರನ್ನು ಅವಲಂಬಿಸಿದ್ದಾರೆ, ಆದರೆ ಹೆಚ್ಚಿನ ಸನ್ನಿವೇಶದಲ್ಲಿ ಉಲೆಮಾಗಳು ಅವರಿಗೆ ತಪ್ಪಾದ ದಾರಿಯನ್ನೇ ತೋರಿಸುತ್ತಾರೆ. ಉಲೆಮಾಗಳ ಮಾತುಗಳು ಹಾಗೂ ಕೃತ್ಯಗಳ ಆಧಾರದಲ್ಲಿ, ಅವರು ಅರಬೀ ಧರ್ಮವನ್ನು ಸೃಷ್ಟಿಸಿದ ಅದೇ ದುಷ್ಟ ಧಾರ್ಮಿಕರ ದಳ್ಳಾಳಿಗಳಾಗಿದ್ದಾರೆಂದು ನಾವು ತಿಳಿದಿದ್ದೇವೆ. ಈ ದುರಾಗ್ರಹಿಗಳು *ದೀನ್*, *ಅಬ್ದ್* ಮತ್ತು *ಸ್ವಲಾತ್* ಎಂಬ ಪದಗಳ ಅರ್ಥವನ್ನು ಹೇಗೆ ತಿರುಚಿದರು ಎಂದು ನಾವು ಕಂಡೆವು. ಅವರು (ಸ್ವಲಾತ್ ಪದದೊಂದಿಗೆ ಹಲವು ಬಾರಿ ಉಲ್ಲೇಖಿಸಲಾದ) *ಝಕಾತ್* ಎಂಬ ಪದವನ್ನೂ ತಿರುಚಿದರು.

ಉಲೆಮಾಗಳಿಗೆ ಅರಬೀ ಭಾಷೆಯ ಜ್ಞಾನವು ಇದ್ದೂ ಕೂಡ, ಕುರ್‌ಆನಿನ ಸಂದೇಶದ ಪರಿಣಾಮವನ್ನು ಅಪಾರ್ಥಗೊಳಿಸಲು, ಸತ್ಯನಿಷೇಧಿಗಳಿಗೆ ಮತ್ತು ಕಪಟವಿಶ್ವಾಸಿಗಳಿಗೆ ಉತ್ತೇಜನಕೊಡುತ್ತಾರೆ. ಅವರು ಕುರ್‌ಆನಿನ ನಿಜವಾದ ಬೋಧನೆಗಳಿಂದ ವಂಚಿತರಾಗಿದ್ದಾರೆ ಮತ್ತು ಗ್ರಂಥದ ಸಂದೇಶದ ಅರ್ಥಗಳನ್ನು ತಿಳಿಯಬಾರದೆಂದು ತಮ್ಮ ಅನುಯಾಯಿಗಳಿಗೆ ಶಿಕ್ಷಣ ನೀಡಲು ಮುಂದುವರಿಸಿದ್ದಾರೆ. ಅದೂ ಸಾಕಗದಿದ್ದಲ್ಲಿ, ತಮ್ಮ ಸಾಮಾನ್ಯ ಜ್ಞಾನವನ್ನು ಬಳಸದೇ ಇರುವವರಿಗೆ ಅಥವಾ ಧಾರ್ಮಿಕರನ್ನು ಪ್ರಶ್ನಿಸದೇ ಇರುವವರಿಗೆ,

ಮೋಕ್ಷವು ಕಟ್ಟಿಟ್ಟ ಬುತ್ತಿ ಎಂದು ತಮ್ಮ ಅನುಯಾಯಿಗಳ ಮೇಲೆ ಅಚ್ಚೊತ್ತಿ ಬಿಡುತ್ತಾರೆ. ಕುರ್‌ಆನಿನಲ್ಲಿನ ಅಲ್ಲಾಹನು ಉತ್ತೇಜಿಸಿರುವ ಪ್ರಕಾರ, ದಾನ ನೀಡುವ ಕಾರ್ಯಗಳನ್ನು ನಿರ್ವಹಿಸಲು, ಉಲೆಮಾಗಳು ತಮ್ಮ ಅನುಯಾಯಿಗಳಿಗೆ ಬಹಳ ಅಪರೂಪವಾಗಿ ಪ್ರೋತ್ಸಾಹಿಸುತ್ತಾರೆ ಎಂಬುವುದು ತುಂಬಾ ವಿಚಿತ್ರವೆನಿಸುತ್ತದೆ. ಇದು ಅಲ್ಲಾಹನ ದೀನಿನ ಮೂಲಾಧಾರವಾಗಿರಬೇಕಿತ್ತು. ಬದಲಿಗೆ, ಧಾರ್ಮಿಕ ದಶಾಂಶ ತೆರಿಗೆ ಎಂದು ತೋರಿಸಿಕೊಳ್ಳುವ, *ಝಕಾತನ್ನು*[50] ಸಂಗ್ರಹಿಸುವ ವಿಷಯದಲ್ಲಿ ಅವರು ಅತ್ಯಂತ ಪರಿಶ್ರಮಿತರಾಗಿದ್ದಾರೆ. ಅವರು ಆ ಹಣವನ್ನು ಏನು ಮಾಡುತ್ತಾರೆಂದು, ಪಾವತಿಮಾಡುವವರು ಪ್ರಶ್ನಿಸುವಂತಿಲ್ಲ. ಅರಬೀ ಸಂಸ್ಕೃತಿಯ ಪ್ರಕಾರ, ಉಲೆಮಾರನ್ನು ಪ್ರಶ್ನಿಸುವುದು ಒಂದು ಗಂಭೀರ ಪಾಪವಾಗಿದೆ.

ಝಕಾತ್ ಎಂಬುವುದು ಹಣದ ಪಾವತಿ ಮಾಡುವುದನ್ನು ಸೂಚಿಸುತ್ತದೆ ಎಂಬುವುದಕ್ಕೆ ಯಾವುದೇ ದೃಢವಾದ ಆಧಾರವಿಲ್ಲವೆಂದು, ಅರಬೀ ಭಾಷೆಯ ಪ್ರಾಥಮಿಕ ಜ್ಞಾನವಿರುವವರು ಕೂಡ ಒಪ್ಪಲೇಬೇಕಾಗಿದೆ. ಈ ರೀತಿಯ ಯಾವುದೇ ಆರ್ಥಿಕ ಕೊಡುಗೆ ಅಥವಾ ಕಾಣಿಕೆಗಳ ಬಗ್ಗೆ ಕುರ್‌ಆನಿನಲ್ಲಿ ಒಂದೇ ಒಂದು ಉಲ್ಲೇಖವೂ ಇಲ್ಲ ಎಂಬುವುದು ವಾಸ್ತವಿಕತೆಯಾಗಿದೆ. ಬದಲಿಗೆ ಇದಕ್ಕೆ ತದ್ವಿರುದ್ಧವಾಗಿ, ಪುರುಷರು ಮತ್ತು ಮಹಿಳೆಯರು ಸಮಾಜದಲ್ಲಿರುವ ತಮ್ಮ ಜನರಿಗೆ, ಸ್ವಯಂ ತ್ಯಾಗ-ಕ್ರಿಯೆಯಾಗಿ, ಪೂರ್ವನಿಶ್ಚಿತವಲ್ಲದ ದಾನ ಮತ್ತು ನೆರವನ್ನು ನೀಡಲು ಪ್ರತಿಪಾದಿಸುತ್ತದೆ.

ದಾನವು ವಿಧಿಸಲಾಗಿದೆ

ಅಲ್ಲಾಹನು ನೀಡಿದ ಅನುಗ್ರಹದಿಂದ ಒಂದು ಭಾಗವನ್ನು ದಾನ ನೀಡುವುದು ಮಾನವಕುಲದ ಮೇಲೆ ವಿಧಿಸಲ್ಪಟ್ಟ ಒಂದು ಬದ್ಧತೆಯಾಗಿದೆ. ಎಲ್ಲರ ಪ್ರಯೋಜನಕ್ಕಾಗಿ, ಸ್ವಯಂ-ತ್ಯಾಗದ ಈ ಕ್ರಿಯೆಯನ್ನು ಅವನ ಸೇವಕರಿಂದ ನಿರೀಕ್ಷಿಸಲಾಗಿದೆ. ಬಲವಂತವಿಲ್ಲದೇ ಅಥವಾ ಯಾವುದೇ ಹೊಗಳಿಕೆಯ ನಿರೀಕ್ಷೆಯಿಲ್ಲದೇ, ದೀನಿನ ಪರಿಮಿತಿಗಳ ಒಳಗೆ ಅಥವಾ ಹೊರಗೆ ದಾನವನ್ನು ನೀಡುವುದನ್ನು ಪ್ರತಿಯೊಂದು ಮಟ್ಟದಲ್ಲೂ ಪ್ರೋತ್ಸಾಹಿಸಬೇಕು. ಅವರು ಅಲ್ಲಾಹನು ಅನುಗ್ರಹಿಸಿದಂತಹ ತಮ್ಮ ಆದಾಯ ಅಥವಾ ತಮ್ಮ ಬೆಳೆಯ ಅಥವಾ ತಮ್ಮ ಜಾನುವಾರುಗಳ ಒಂದು ಭಾಗವನ್ನು ತ್ಯಾಗಮಾಡುವ ಬದಲು, ಅಲ್ಲಾಹನ ಅನುಗ್ರಹಗಳನ್ನು ಸಂಗ್ರಹ ಮಾಡಿ ತಮ್ಮ ಅಂತರಾತ್ಮವನ್ನು ದುರಾಶೆಗೆ ಬಲಿಕೊಡುತ್ತಾರೆ. ಮತ್ತೊಮ್ಮೆ, ಕುರ್‌ಆನ್ ನಮಗೆ ಇಂತಹ ನಡವಳಿಕೆಯು ಸ್ವೀಕಾರಾರ್ಹವಲ್ಲ ಎಂದು ಎಚ್ಚರಿಸುತ್ತದೆ.

[50] ಅನೇಕ ದೇಶಗಳಲ್ಲಿ, ಕಾರ್ಮಿಕರ ಸಂಬಳದಿಂದ ಪ್ರತಿತಿಂಗಳು ಕಡಿತಗೊಳಿಸುವ ಮೂಲಕವೂ ಮತ್ತು ಉದ್ಯಮಿಗಳಿಂದ ಅವರಿಗೆ ಉದ್ಯಮ ಪರವಾನಿಗೆಯನ್ನು ನೀಡುವ ವೇಳೆ ಬಲವಂತವಾಗಿ ಪಡೆಯುವ ಮೂಲಕವೂ ಈ ಸಂಗ್ರಹವನ್ನು ಕಡ್ಡಾಯಗೊಳಿಸಿದ್ದಾರೆ. 'ವೆಟಿಕನ್' ಇಂತಹ ವ್ಯವಸ್ಥೆಯ ಮೇಲೆಯೇ ನೆಲೆನಿಂತಿದೆ. ಮುಸ್ಲಿಂ ರಾಷ್ಟ್ರವೆಂದು ಹೇಳಿಕೊಳ್ಳುವವರೂ ಇದನ್ನೇ ಮಾಡುತ್ತಿದ್ದಾರೆ.

ಇಲ್ಲಿ ನಡೆದಿರುವುದೇನೆಂದರೆ, ಎಲ್ಲರ ಯೋಗಕ್ಷೇಮವನ್ನು ಉತ್ತೇಜಿಸುವ ಜೀವನದ ಒಂದು ಕ್ರಮಬದ್ಧ ರೀತಿಯು, ಒಂದು ಸುಲಿಗೆ ಮಾಡುವ ಅಲ್ಪಜನಾಧಿಪತ್ಯವಾಗಿ ಮಾರ್ಪಟ್ಟು, ಕೆಲವರಿಗೆ ಮಾತ್ರ ಅನಕೂಲಕರವಾಗುವಂತೆ ಬುಡಮೇಲು ಮಾಡಲಾಗಿದೆ.

ದಾನ ಕ್ರಿಯೆಗಳನ್ನು ನಿರ್ವಹಿಸಲು ಜನರಿಗೆ ಕರೆನೀಡುವ ವಚನಗಳು ಕುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿವೆ ಮತ್ತು ನಾವು ಈ ಮೌಲ್ಯಗಳಿಗೆ ಬದ್ಧರಾಗಲು ಅಲ್ಲಾಹನು ನಿರೀಕ್ಷಿಸುತ್ತಾನೆ.

> ನಿಮ್ಮನ್ನು ಸೃಷ್ಟಿಸಿದವನು ಅಲ್ಲಾಹನಾಗಿದ್ದಾನೆ. ನಂತರ ನಿಮಗೆ ಜೀವನಾಧಾರವನ್ನು ಒದಗಿಸುವವನು ಅವನೇ ಆಗಿದ್ದಾನೆ. ನಂತರ ಅವನು ನಿಮಗೆ ಮರಣಕ್ಕೀಡುಮಾಡುತ್ತಾನೆ ನಂತರ ನಿಮ್ಮನ್ನು ಪುನರ್ಜೀವಿತಗೊಳಿಸುತ್ತಾನೆ. ನೀವು ರಚಿಸಿರುವ ಯಾವುದೇ ಮೂರ್ತಿಗಳು ಈ ಕಾರ್ಯಗಳಲ್ಲಿ ಯಾವುದನ್ನಾದರೂ ಮಾಡಲು ಸಾಧ್ಯವಿದೆಯೇ? (30:40)
>
> ಓ ವಿಶ್ವಾಸಿಗಳೇ, ವ್ಯಾಪಾರ ವಿನಿಮಯಗಳು ನಡೆಯದ, ಗೆಳೆತನಗಳೂ ಶಿಫಾರಸುಗಳೂ ಫಲಕಾರಿಯಾಗದ ಆ ದಿನವು ಬರುವುದಕ್ಕಿಂತ ಮೊದಲು, ನಾವು ನೀಡಿರುವ ಅನುಗ್ರಹದಿಂದ ದಾನವನ್ನು ಕೊಡಿರಿ, ನಿರಾಕರಿಸುವವರು ದುಷ್ಟರಾಗಿದ್ದಾರೆ. (2:254)
>
> ನಿಮ್ಮ ಪ್ರಭುವಿನ ಕ್ಷಮೆಯ ಕಡೆಗೆ ಮತ್ತು ಭೂಮಿ-ಆಕಾಶಗಳಷ್ಟು ವಿಶಾಲವಾಗಿರುವ ಸ್ವರ್ಗದ ಕಡೆಗೆ ಧಾವಿಸಿರಿ, ಅವುಗಳು, ಲಕ್ಷ್ಯತೆ ಉಳ್ಳವರಿಗಾಗಿ ಸಿದ್ಧಗೊಳಿಸಲ್ಪಟ್ಟಿದೆ. ಅವರು ಸ್ಥಿತಿವಂತರಾಗಿರುವಾಗಲೂ, ದುಸ್ಥಿತಿಯಲ್ಲಿರುವಾಗಲೂ ತಮ್ಮ ಸಂಪತ್ತನ್ನು ಖರ್ಚುಮಾಡುತ್ತಾರೆ. ಅವರು ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ಅಪರಾಧಗಳನ್ನು ಕ್ಷಮಿಸುತ್ತಾರೆ. ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯುಳ್ಳವರಾಗಿರುತ್ತಾರೆ. (3:133-134)
>
> ಅಲ್ಲಾಹನ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿಡುತ್ತಿದ್ದರೆ ಮತ್ತು ಅಲ್ಲಾಹನು ಇವರಿಗೆ ನೀಡುವುದರಿಂದ ಖರ್ಚು ಮಾಡುತ್ತಿದ್ದರೆ ಇವರಿಗೇನಾಗುತ್ತಿತ್ತು? ಅಲ್ಲಾಹನು ಎಲ್ಲವನ್ನೂ ಸಂಪೂರ್ಣವಾಗಿ ತಿಳಿದಿರುತ್ತಾನೆ. (4:39)
>
> ನೀವು ಯಾರಿಗೂ ಮಾರ್ಗದರ್ಶನ ನೀಡಲು ಸಾಧ್ಯವಿಲ್ಲ. ಅಲ್ಲಾಹನು ತಾನಿಚ್ಛಿಸಿದವರಿಗೆ ಸನ್ಮಾರ್ಗ ನೀಡುತ್ತಾನೆ. ನೀವು ನೀಡುವ ಯಾವುದೇ ದಾನವು, ನಿಮ್ಮ ಸ್ವಂತದ ಒಳಿತಿಗಾಗಿ ಮಾತ್ರ. ಅಲ್ಲಾಹನ ಸಂಪ್ರೀತಿಯನ್ನು ಮಾತ್ರ ಬಯಸಿಕೊಂಡು ನೀವು ದಾನ ಮಾಡಬೇಕು. ನೀವು ನೀಡುವ ಎಲ್ಲಾ ದಾನಗಳ ಸಂಪೂರ್ಣ ಪ್ರತಿಫಲವು ನಿಮಗೆ ಕೊಡಲಾಗುವುದು. ನಿಮ್ಮ ಹಕ್ಕುಚ್ಯುತಿಯು ಖಂಡಿತಾವಾಗಿಯೂ ಸಂಭವಿಸದು. (2:272)

ಇವುಗಳು ಅಲ್ಲಾಹನು ವಿಧಿಸಲಾದ ರೀತಿಯಾಗಿವೆ. ನಾವು ಈ ಆದರ್ಶಕ್ಕೆ ನಮ್ಮನ್ನು ಬದ್ಧರಾಗಿಸಬೇಕು. ಇದು ವ್ಯಕ್ತಿಯ ಮತ್ತು ಅವನ ಅಥವಾ ಅವಳ ಸೃಷ್ಟಿಕರ್ತನ ನಡುವಿನ ವೈಯಕ್ತಿಕ ಬದ್ಧತೆಯಾಗಿದೆ. ಇನ್ನೊಬ್ಬನ ಬಾಧ್ಯತೆಗಳನ್ನು ಯಾರೂ ಮೇಲ್ವಿಚಾರಣೆ ಮಾಡುವಂತಿಲ್ಲ. ದಾನವನ್ನು ಸ್ವೀಕರಿಸಲು ಅರ್ಹರಾದವನ್ನು ಸಹ ಅಲ್ಲಾಹನು ವಿವರಿಸಿದ್ದಾನೆ. ಯಾವುದೇ ಊಹಾಪೋಹಗಳಿಗೆ ಅವಕಾಶವನ್ನು ನೀಡಲಿಲ್ಲ. ಅವನು ತನ್ನ ಯುಕ್ತಿಯಿಂದ, ತನ್ನ ಸೇವಕರಿಗೆ ತಮ್ಮ ದಾನದ ನಿರ್ಬಂಧನೆಗಳನ್ನು ಪೂರೈಸಲು ಸುಲಭ ಮಾಡಿಕೊಡುತ್ತಾನೆ:

> ಅವರು ದಾನದ ಬಗ್ಗೆ ನಿಮ್ಮನ್ನು ಕೇಳುತ್ತಾರೆ. 'ದಾನವು ನಿಮ್ಮ ಮಾತಾಪಿತರು, ಸಂಬಂಧಿಕರು, ಅನಾಥರು, ಬಡವರು ಮತ್ತು ಸತ್ಪಥದಲ್ಲಿರುವವರಿಗೆ ಸಲ್ಲಬೇಕಾದುದಾಗಿದೆ' ಎಂದೂ, 'ನೀವು ಮಾಡುವ ಎಲ್ಲe ಸತ್ಕಾರ್ಯಗಳನ್ನು ಅಲ್ಲಾಹನು ಸಂಪೂರ್ಣವಾಗಿ ಅರಿಯುತ್ತಿರುವವನು ಆಗಿರುತ್ತಾನೆ' ಎಂದೂ ಉತ್ತರ ನೀಡಿರಿ. (2:215)

> ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ದಾನ ಮಾಡುವವರ ಉಪಮೆಯು, ಒಂದು ಕಾಳನ್ನು ಬಿತ್ತಿ, ಅದರಿಂದ ಏಳು ತೆನೆಗಳು ಹೊರಟು, ಪ್ರತಿಯೊಂದು ತೆನೆಯಲ್ಲಿ ನೂರು ತೆನೆಗಳಿರುವಂತಿದೆ. ಇದೇ ರೀತಿಯಲ್ಲಿ ಅಲ್ಲಾಹನು ತಾನುದ್ದೇಶಿಸಿದವನ ಕರ್ಮಗಳಿಗೆ ವೃದ್ಧಿಯನ್ನು ದಯಪಾಲಿಸುತ್ತಾನೆ. ಅವನು ಅತ್ಯಂತ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ. (2:262)

ದಾನದ ವಿಷಯಕ್ಕೆ ಸಂಬಂಧಪಟ್ಟ ಕುರ್‌ಆನಿನಲ್ಲಿರುವ ಸುಮಾರು ಅರವತ್ತಕ್ಕಿಂತಲೂ ಹೆಚ್ಚಿನ ವಚನಗಳಲ್ಲಿ, ಇವುಗಳೂ ಸೇರಿವೆ. ದಾನಕ್ಕೆ ಬಳಸಲಾದ ಪದವು *ಅನ್ಫಕ್* ಆಗಿದೆ *ಝಕಾತ್* ಅಲ್ಲ.

ಅನ್ಫಕ್ ಎಂಬ ಪದವು ವಿಶ್ವದ ಎಲ್ಲಾ ಮುಗ್ಧ 'ಮುಸ್ಲಿಮರಿಗೆ' ಅನ್ಯಗ್ರಹ ಜೀವಿಯ ಹೆಸರಿನಂತೆ ತೋಚಬಹುದು. ಕೆಲವರು ಮಾತ್ರ ತಮ್ಮ ಜೀವನದಲ್ಲಿ ಈ ಪದವನ್ನು ಕೇಳಿರಬಹುದು. ಧಾರ್ಮಿಕರು ಕುರ್‌ಆನಿನ ಇನ್ನೊಂದು ಪ್ರಮುಖ ಪದವನ್ನು ಮುಚ್ಚಿಹಾಕಿದರು ಮತ್ತು ಉಲೆಮಾ ಅಥವಾ ಅರಬೀ ಪುರೋಹಿತರು ಈ ಕುತಂತ್ರಕ್ಕೆ ಸಹಾಯ ನೀಡಿದರು. ಅವರು ನಿಜವಾದ ದಾನವನ್ನು, ತಾವು ಭ್ರಷ್ಟಗೊಳಿಸಿದ ಝಕಾತಿನ ಪರಿಕಲ್ಪನೆಯೊಂದಿಗೆ ಬದಲಿ ಮಾಡಿದರು. *ಝಕಾತ್* ಎಂಬ ಪದವು ವಾಸ್ತವವಾಗಿ ಶುದ್ಧೀಕರಣ ಎಂಬ ಅರ್ಥವನ್ನು ನೀಡುತ್ತದೆ. *ಝಕಾತ್* ಎಂದು ಬಳಕೆಯಾದ ಎಲ್ಲಾ ವಚನಗಳಲ್ಲಿ ಈ ಅರ್ಥವನ್ನು ಬದಲಿಗೊಳಿಸಿದರೆ, ಸಂದರ್ಭೋಚಿತವಾಗಿ ಹೇಗೆ ಕಾಣುತ್ತದೆ ಎಂದು ನೀವಾಗಿಯೇ ನೋಡಲು ಪ್ರಯತ್ನಿಸಿ.

ಧಾರ್ಮಿಕ ದಶಾಂಶ ತೆರಿಗೆಯು ಧಾರ್ಮಿಕರ ಆವಿಷ್ಕಾರವಾಗಿದೆ

ಝಕಾತನ್ನು ಪಾವತಿ ಮಾಡುವ ಪರಿಕಲ್ಪನೆಯು ಶಾಶ್ವತವಾಗಿ ಪ್ರತಿಯೊಂದು ಮುಸ್ಲಿಮನ ಮನಸ್ಸಿನಲ್ಲಿ ದಾಖಲೆಯಾಗಿದೆ. ಏಕೆಂದರೆ ಧಾರ್ಮಿಕರು ಮತ್ತು ಉಲೆಮಾಗಳು ಇದನ್ನು ವಿಶ್ವಾಸದ ಅವಿಭಾಜ್ಯ

ಅಂಗವಾಗಿದೆ ಎಂದು ಬೋಧಿಸುತ್ತಾರೆ. ಆದಾಗ್ಯೂ, ಪ್ರಾಥಮಿಕ ಅರಬೀ ಭಾಷೆಯನ್ನು ಓದಲು ಸಾಧ್ಯವಿರುವ ಯಾರಿಗೂ ಈ ಅಸ್ಪಷ್ಟತೆಯನ್ನು ಗುರುತಿಸಬಹುದು. ಝಕಾತ್ ಪದವು ಕುರ್‌ಆನಿನಲ್ಲಿ ಹಲವು ಬಾರಿ ಕಾಣಿಸಿಕೊಂಡಿದೆ. ಆಶ್ಚರ್ಯಕರವಲ್ಲದೇ, ಅನುವಾದಕರಿಗೂ ಸಹ ಅನೇಕ ಸನ್ನಿವೇಶಗಳಲ್ಲಿ ಝಕಾತನ್ನು ಅದರ ನಿಜವಾದ ಅರ್ಥದಲ್ಲೇ ಭಾಷಾಂತರಿಸುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ, ಏಕೆಂದರೆ, ಆ ಸನ್ನಿವೇಶವು ಬೇರೆ ಯಾವುದೇ ರೀತಿಯಲ್ಲಿ ಅದನ್ನು ನಿರೂಪಿಸಲು ಅವಕಾಶ ನೀಡುವುದಿಲ್ಲ, ಮತ್ತು ಹಾಗೆ ಮಾಡದಿದ್ದಲ್ಲಿ, ಅವರಿಗೆ ಅಂತಿಮವಾಗಿ ದೊರಕುವುದು ಹೊಂದಿಸಿಕೊಳ್ಳಲು ಅಸಾಧ್ಯವಾದ ಹಾಗೂ ಹಾಸ್ಯಾಸ್ಪದವಾದ ಅರ್ಥವಾಗಿರುತ್ತದೆ.

ಈ ಕೆಳಗಿನ ಉಲ್ಲೇಖವು, ಝಕಾತ್ ಪದದ ಅರ್ಥವು ವಿರೂಪಗೊಳಿಸಲ್ಪಟ್ಟಿರುವುದನ್ನು ಬಹಿರಂಗ ಪಡಿಸುತ್ತದೆ. ಇಲ್ಲಿ, ಕುತೂಹಲಕರವೇನೆಂದರೆ, ಶೈತಾನನ ಪದಗಳನ್ನು ಅನುಸರಿಸಬಾರದೆಂದು ನಮಗೆ ಅದು ನೆನಪಿಸುತ್ತದೆ. ಇಲ್ಲಿ ಝಕಾತಿನ ಮೂಲಪದವನ್ನು ಮತ್ತು ಅದರ ಉತ್ಪನ್ನದನ್ನು ಅಲ್ಲಾಹನು ಒಂದೇ ವಚನದಲ್ಲಿ ಬಳಸಿದ್ದಾನೆ. ಇದರ ಬಳಕೆಯು ಧಾರ್ಮಿಕರ ಮತ್ತು ಉಲೆಮಾಗಳ ತಿರುಚುವಿಕೆಯನ್ನು ದಿಕ್ಕುಗೆಡಿಸುತ್ತದೆ:

> *ಯಾ ಅಯ್ಯುಹಲ್ಲಧೀನ ಆಮನೂ, ಲಾ ತತ್ತಬಿಊ ಹುತುವಾತಿ-ಶೈತಾನಿ, ವಮನ್ ಯತ್ತಬಿಅ' ಹುತವಾತಿ-ಶೈತಾನಿ, ಫಇನ್ನಹೂ ಯಾಅ'ಮುರು ಬಿಲ್ ಫಹ್'ಶಾಇ ವಲ್ ಮುಂಕರಿ, ವಲವ್ಲಾ ಫಧುಲುಲ್ಲಾಹಿ ಅಲೈಕುಮ್ ವರಹ್ಮತುಹೂ ಮಾ ಝುಕಾ ಮಿನ್ಕುಮ್ ಮಿನ್ ಅಹದಿನ್ ಅಬದನ್, ವಲಾಕಿನ್ನಲ್ಲಾಹ ಯುಝುಕ್ಕೀ ಮನ್ ಯಶಾಉ, ವಲ್ಲಾಹು ಸಮೀಉನ್ ಅಲೀಮ್.* (24:21)
>
> ಓ ವಿಶ್ವಾಸಿಗಳೇ, ಶೈತಾನನ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆಯಬೇಡಿರಿ. ಯಾರಾದರೂ ಅವನನ್ನು ಅನುಸರಿಸಿದರೆ, ಅವನು ಆತನಿಗೆ ಅಶ್ಲೀಲ ಮತ್ತು ಪಾಪದ ಆಜ್ಞೆಯನ್ನೇ ಕೊಡುವನು. ನಿಮ್ಮ ಮೇಲೆ ಅಲ್ಲಾಹನ ಅನುಗ್ರಹ ಮತ್ತು ಕೃಪೆಯು ಇಲ್ಲದಿದ್ದರೆ, ನಿಮ್ಮ ಪೈಕಿ ಒಬ್ಬನೂ ಯಾವತ್ತೂ ಪರಿಶುದ್ಧನಾಗಲಾರ *(ಝಕಾ)*. ಆದರೆ ಅಲ್ಲಾಹನು ತಾನಿಚ್ಛಿಸಿದವರನ್ನು ಪರಿಶುದ್ಧಗೊಳಿಸುತ್ತಾನೆ *(ಯು-ಝುಕ್ಕೀ)* ಮತ್ತು ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ. (24:21)

ಆ ವಾಕ್ಯವನ್ನು ಬೇರ್ಪಡಿಸಿ ನೋಡೋಣ:

ಮಾ	ಅಲ್ಲ
ಝುಕಾ	ಪರಿಶುದ್ಧ
ಮಿನ್ಕುಮ್	ನಿಮ್ಮ ಪೈಕಿ
ಮಿನ್ ಅಹದಿನ್	ಯಾರೊಬ್ಬನೂ

ಅಬದನ್	ಯಾವತ್ತೂ
ವ ಲಾಕಿನ್	ಮತ್ತು ಆದರೆ
ಅಲ್ಲಾಹ	ಅಲ್ಲಾಹನು
ಯು-ಝಕ್ಕೀ	ಪರಿಶುದ್ಧಗೊಳಿಸುತ್ತಾನೆ
ಮನ್ ಯಶಾಉ	ತಾನಿಚ್ಛಿಸುವವರನ್ನು

ಝಕಾತ್ ಎಂಬ ಪದವು ಶುದ್ಧ ಅಥವಾ ಪರಿಶುದ್ಧ ಎಂಬ ಅರ್ಥವನ್ನಲ್ಲದೇ ಬೇರಾವುದೇ ಅರ್ಥವನ್ನು ಹೊಂದಿಲ್ಲ. ಈ ನಿರ್ದಿಷ್ಟ ವಚನದಲ್ಲಿ, ನಾವು ಶೈತಾನನ ಬಗ್ಗೆ ಜಾಗರೂಕರಾಗಿರಲು ಹೇಳಲಾಗಿದೆ, ಅದರೂ ಜನರು (ಉಲೆಮಾರನ್ನು ಸೇರಿದಂತೆ) ಇದಕ್ಕೆ ಗಮನವನ್ನು ನೀಡುವುದಿಲ್ಲ ಹಾಗೂ ಎಚ್ಚರಿಕೆಯನ್ನು ವಹಿಸುವುದಿಲ್ಲ. ಅರಬರು ಅನಾಚಾರಿಗಳು ಮತ್ತು ಕಪಟವೇಷದಾರಿಗಳು ಎಂದು ನಮಗೆ ಸ್ಪಷ್ಟವಾಗಿ ಎಚ್ಚರಿಸಲಾಗಿದೆಯಾದರೂ ಉಲೆಮಾಗಳು ಅರಬರ ಮೇಲೆ ವಿಶ್ವಾಸವಿರಿಸಿದ್ದಾರೆ. ನಾವು ಮತ್ತೊಂದು ವಚನವನ್ನು ಪರಿಶೀಲಿಸೋಣ. ಇಲ್ಲಿ *ತಝುಕ್ಕಾ* ಎಂಬ ಪದಕ್ಕೆ, ಕಂದಾಯದ ಪಾವತಿ ಅಥವಾ ಧಾರ್ಮಿಕ ದಶಾಂಶ ತೆರಿಗೆಯ ಪಾವತಿ ಎಂದು ಯಾರು ಕೂಡ ಅನುವಾದಿಸಲಿಲ್ಲ.

79:17 ರಲ್ಲಿ ಅಲ್ಲಾಹನು ಮೂಸಾರೊಂದಿಗೆ ಮಾತಾಡುತ್ತಾನೆ, *"ಫಿರ್‌ಔನಿನ ಕಡೆಗೆ ಹೋಗಿರಿ, ವಾಸ್ತವವಾಗಿ ಅವನು ಅತಿಕ್ರಮಿಸಿದ್ದಾನೆ ಮತ್ತು ಅವನಿಗೆ ಹೇಳಿರಿ – ನೀನು ನಿನ್ನನ್ನು ಪರಿಶುದ್ಧಗೊಳಿಸುವುದಿಲ್ಲವೇನು?" (ಹಲ್-ಲಕ ಇಲ್ಲಾ ತ-ಝುಕ್ಕಾ).*

ಇಲ್ಲಿನ ಮುಖ್ಯ ಪದಗುಚ್ಛವನ್ನು ಬೇರ್ಪಡಿಸಿದರೆ:

ಹಲ್-ಲಕ	ಏನು ನೀನು
ಇಲ್ಲಾ	ಇಲ್ಲ
ತ-ಝುಕ್ಕಾ	ನಿನ್ನನ್ನು ಪರಿಶುದ್ಧಗೊಳಿಸುವುದು

ಮೂಸಾರು ಫಿರ್‌ಔನಿನ ಬಳಿ ಹೋಗಿ ಹೀಗೆ ಹೇಳಲಿಲ್ಲ, *'ನೀನು ನಿನ್ನ ಧಾರ್ಮಿಕ ದಶಾಂಶ ತೆರಿಗೆಯನ್ನು ಪಾವತಿ ಮಾಡುವುದಿಲ್ಲವೇ'*. ಇಲ್ಲಿ ಆ ವಾಕ್ಯಕ್ಕೆ *'ನೀನು ನಿನ್ನನ್ನು ಪರಿಶುದ್ಧಗೊಳಿಸುವುದಿಲ್ಲವೇನು?'* ಎಂಬ ಅರ್ಥವನ್ನಲ್ಲದೇ ಬೇರೆ ಯಾವುದೇ ಅರ್ಥವನ್ನು ಕೊಡಲು ಸಾಧ್ಯವಿಲ್ಲ ಎಂದು ಧಾರ್ಮಿಕರು ಬೇರೆ ಉಪಾಯವಿಲ್ಲದೆ, ತಾವೇ ಒಪ್ಪಿಕೊಳ್ಳುತ್ತಾರೆ.

ಹೀಗಾಗಿ, ಝಕಾತ್ ಪದವು ಅಥವಾ ಅದರ ಉತ್ಪನ್ನಗಳು, ಪರಿಶುದ್ಧತೆ ಎಂಬ ಅರ್ಥವನ್ನು ಪ್ರತಿನಿಧಿಸುತ್ತದೆ. ಪುರೋಹಿತರಿಗೆ ನೀಡಬೇಕಾದ ಧಾರ್ಮಿಕ ದಶಾಂಶ ತೆರಿಗೆಗಳು, ಕರಗಳು ಅಥವಾ ಧಾರ್ಮಿಕ ಕಂದಾಯಗಳು ಎಂಬುವುದೇ ಇಲ್ಲ. ವಾಸ್ತವದಲ್ಲಿ, ಪುರೋಹಿತ-ಶಾಹಿತ್ವವು ಸಂಪೂರ್ಣವಾಗಿ ರದ್ದುಗೊಳ್ಳಬೇಕಾದುದಾಗಿದೆ. ಜನರು ತಮ್ಮ ಹಣವನ್ನು ಮತ್ತು ಯುಕ್ತಿಯನ್ನು, ಅಲ್ಲಾಹನು ತಮಗೆ ಆಜ್ಞಾಪಿಸಿದಂತಹ ವಿಷಯಗಳಿಗೆ ಉಪಯೋಗಿಸಲು ಮತ್ತೊಮ್ಮೆ ಪ್ರಾರಂಭಿಸಬೇಕಾಗಿದೆ ಮತ್ತು ಮಹತ್ವವುಳ್ಳಂತೆ ತೋರುವ ಈ ಪರಾವಲಂಬಿ ಜಾತಿಯನ್ನು ಬೆಂಬಲಿಸಲು ತಮ್ಮ ಹಣ ಮತ್ತು ಯುಕ್ತಿಯ ತ್ಯಾಗವನ್ನು ಸಮಾಪ್ತಿಗೊಳಿಸಬೇಕಾಗಿದೆ.

ಧಾರ್ಮಿಕರು ಈ ಪದವನ್ನು ಹೇಗೆ ದುರುಪಯೋಗಗೊಳಿಸಿದ್ದಾರೆಂದು, 19:19 ಮತ್ತು 19:30 ರನ್ನು ಹೋಲಿಸುವುದರ ಮೂಲಕ ಕಂಡುಹಿಡಿಯಬಹುದು. ಮಾನವನನ್ನು ಹೋಲುವ ಒಂದು ಶಕ್ತಿಯು, ಮರ್ಯಮರ ಮುಂದೆ ಪ್ರತ್ಯಕ್ಷಗೊಂಡು ಹೀಗೆ ಹೇಳುತ್ತದೆ:

> *ಇನ್ನಮಾ ಅನ ರಸೂಲು ರಬ್ಬಿಕಿ, ಲಿಅಹಬ ಲಕಿ ಘುಲಾಮನ್ ಝಕಿ-ಯ್ಯಾ. (19:19)*
>
> "ವಾಸ್ತವವಾಗಿ, ನಿಮಗೆ ಪರಿಶುದ್ಧನಾದ ಒಬ್ಬ ಮಗನನ್ನು ಅನುದಾನ ಮಾಡಲು, ನಾನು ನಿನ್ನ ಪ್ರಭುವಿನಿಂದ ಬಂದ ಸಂದೇಶವಾಹಕನಾಗಿದ್ದೇನೆ." (19:19)

ಝಕಿ ಮತ್ತು *ಝಕಾ* ಎರಡಕ್ಕೂ ಪರಿಶುದ್ಧ ಎಂದೇ ಅರ್ಥವಾಗಿದೆ. ಮಾನವನಂತೆ ಕಾಣುವ ಒಂದು ಶಕ್ತಿಯು, ಅವರು ಒಬ್ಬ ಪರಿಶುದ್ಧ ಮಗನನ್ನು ಗರ್ಭಧರಿಸಲಿರುವರು ಎಂಬ ಸಂದೇಶವನ್ನು ಮರ್ಯಮರಿಗೆ ತಲುಪಿಸಿದರು. ಈಸಾರು ತನ್ನ ತಾಯಿಯ ಜೊತೆಗೆ ಮಾತನಾಡಿದರು. ನಂತರ ಅವರಿಬ್ಬರೂ ಕೆಲವು ಜನರನ್ನು ಭೇಟಿಯಾದರು. ಅವರು ಮರ್ಯಮರನ್ನು ದೂಷಿಸಿದರು. ಈಸಾರು ತನ್ನ ತಾಯಿಗೆ ಸಮರ್ಥನೆಯನ್ನು ನೀಡುತ್ತಾ ಹೀಗೆಂದರು:

> *ವ ಜಅಲನೀ ಮುಬಾರಕನ್ ಐನಮಾ ಕುನ್ತು ವ ಔಸಾನೀ ಬಿ-ಸ್ವಲಾತಿ ವ-ಝ್ಝಕಾತಿ ಮಾ ದುಮ್ತು ಹಯ್ಯಾ*. (19:31)
>
> ಮತ್ತು ಅವನು ನಾನೆಲ್ಲಿದ್ದರೂ ನನ್ನನ್ನು ಅನುಗ್ರಹೀತನಾಗಿರುವಂತೆ ಮಾಡಿದನು ಮತ್ತು ನನ್ನ ಬಾಳಿನುದ್ದಕ್ಕೂ, ನನ್ನ ಮೇಲೆ ಬದ್ಧತೆಗಳನ್ನು ಮತ್ತು *ಶುದ್ಧತೆ*ಯನ್ನು ಆಜ್ಞಾಪಿಸಿದ್ದಾನೆ. (19:31)

ಝಕಾತ್ ಹಣದ ಬಗ್ಗೆ ಇರುವುದಲ್ಲ

ಹಣವನ್ನು ಕುರ್‌ಆನಿನ ಝಕಾತಿಗೆ ಸಂಬಂಧಿಸಲು *ಸಾಧ್ಯವಿಲ್ಲ*. ದಾನವನ್ನು ರೂಢಿ ಮಾಡುವುದು ಎಲ್ಲರ ಕಡ್ಡಾಯವಾದ ಕರ್ತವ್ಯವಾಗಿದೆ. ಅಲ್ಲಾಹನು ಇದನ್ನು *ಝಕಾತ್* ಎಂದು ಕರೆಯುವುದಿಲ್ಲ. ದಾನಕ್ಕೆ ಅಥವಾ ದೇಣಿಗೆಗೆ, ಅಲ್ಲಾಹನು *ಅನ್ಫಕ್* ಅಥವಾ *ಸದಕ* ಎಂಬ ಪ್ರತ್ಯೇಕ ಪದಗಳನ್ನು ಮತ್ತು ಅದಕ್ಕೆ ಸಂಪರ್ಕವಿರುವ ಉತ್ಪನ್ನಗಳನ್ನು ಬಳಿಸಿದ್ದಾನೆ.

ಆದ್ದರಿಂದ ಇದರಲ್ಲಿ ದೊಡ್ಡ ವಿಷಯವೇನಿದೆ? ನೀವು ಯಾವ ಪದವನ್ನು ಬಳಸುತ್ತಿದ್ದೀರಿ ಎಂಬುವುದರಲ್ಲಿ ಏನಿದೆ? ಇಲ್ಲಿರುವ ಮುಖ್ಯವಾದ ಅಂಶವೇನೆಂದರೆ, ಧಾರ್ಮಿಕರು ಯಾವುದೇ ಆಧಾರದವಿಲ್ಲದೆ ಜನರಿಗೆ ಒಂದು ಹೊಚ್ಚ ಹೊಸ ಧಾರ್ಮಿಕ ಕಟ್ಟುಪಾಡನ್ನು ರಚಿಸಿದರು, ಅದರ ಪ್ರಯೋಜನವು, ಕೇವಲ ಧಾರ್ಮಿಕ ಪಂಡಿತರ ಖಝಾನೆಯನ್ನು ತುಂಬುವುದಾಗಿದೆ.

ದಾನ ಅಥವಾ ದೇಣಿಗೆಯೆಂಬ *(ಅನ್ಫಕ್, ಸದಕ)* ಕರ್ತವ್ಯದ ಕಲ್ಪನೆಯು, ವಿತರಣೆಯ ಒಂದು ಮುಕ್ತವಾದ ಇಚ್ಛೆಯಾಗಿದೆ, ಹಾಗೂ ಇದನ್ನು ಉಲೆಮಾಗಳಿಂದ ಮುಚ್ಚಿಡಲ್ಪಟ್ಟಿದೆ. ಆರ್ಥಿಕ ಬೆಂಬಲವನ್ನು ಜನರ ಮೇಲೆ ಕಡ್ಡಾಯಗೊಳಿಸುವದಕ್ಕಿಂತ ಮತ್ತು ಸ್ವರ್ಗವನ್ನು ಪಡೆಯಲು ಪೂರ್ವಾಪೇಕ್ಷಿತ ಪರತ್ತಾಗಿ ಇದನ್ನು ತೋರ್ಪಡಿಸುವುದಕ್ಕಿಂತ ಮಿಗಿಲಾಗಿ ಬೇರೆ ಯಾವ ಹಾದಿಯಿಂದ ಅವರು ತಮ್ಮ ಈ ಪರಾವಲಂಬಿ ಅಸ್ತಿತ್ವವನ್ನು ಖಾತ್ರಿಗೊಳಿಸಲು ಸಾಧ್ಯವಿದೆ?

ಫಲಿತಾಂಶವೇನೆಂದರೆ, ಮೋಕ್ಷದ ಪ್ರಮುಖ ಕಂಬವೆಂದು ಪ್ರಚಾರ ಮಾಡಲ್ಪಡುವಂತಹ 2.5% ಧಾರ್ಮಿಕ ದಶಾಂಶ ತೆರಿಗೆಯಲ್ಲಿ ಅವರಿಗೆ ತಮ್ಮ ಭಾಗವು ದೊರಕುತ್ತದೆ. ಮುಸ್ಲಿಮರು ದಾನ ಮತ್ತು ದೇಣಿಗೆಯ ಪರಿಕಲ್ಪನೆಗೆ ಸಂಪೂರ್ಣವಾಗಿ ಪರಕೀಯರಾಗಿದ್ದಾರೆ ಅಥವಾ ಕ್ಷುಲ್ಲಕವಾಗಿ ಪರಿಗಣಿಸಿದ್ದಾರೆ.

ಝಕಾತ್ ಎಂಬ ಪದದ ಅರ್ಥ

ಝಕಾತ್ ಮತ್ತು ಅದರ ಉತ್ಪನ್ನಗಳು, ಶುದ್ಧೀಕರಣ, ಪರಿಶುದ್ಧ ಅಥವಾ ಶುದ್ಧಗೊಳಿಸುವುದು ಎಂಬ ಅರ್ಥವನ್ನು ಮಾತ್ರ ಕೊಡುತ್ತವೆ. ಅವುಗಳು ಕುರ್‌ಆನಿನಲ್ಲಿ ಹೇಗೆ ಬಳಸಲಾಗಿದೆಯೆಂದು ಕೆಳಗಿನ ಪದಗಳಿಂದ ನಮಗೆ ತಿಳಿಯಬಹುದು. *ಝಕ್ಕಾ* (ಅವನು ಶುದ್ಧೀಕರಿಸಿದನು), *ಯು-ಝಕ್ಕಿ* (ಅವನು ಶುದ್ಧಗೊಳಿಸುತ್ತಾನೆ), *ತು-ಝಕ್ಕಿ* (ನೀನು ಶುದ್ಧೀಕರಿಸುವೆ), *ಯು-ಝಕ್ಕೂನ* (ಅವರು ಶುದ್ಧೀಕರಿಸುವರು), *ಲಾ-ತುಝಕ್ಕು* (ನಿಮ್ಮನ್ನು ಶುದ್ಧೀಕರಿಸುವುದಿಲ್ಲ), *ತ-ಝಕ್ಕಾ* (ಅವನು ತನ್ನನ್ನು ಶುದ್ಧೀಕರಿಸಿದನು), *ಯ-ತಝಕ್ಕಾ* (ಅವನು ತನ್ನನ್ನು

ಶುದ್ಧೀಕರಿಸುವನು), *ಯು-ಝಕ್ಕಾ* (ತನ್ನನ್ನು ಶುದ್ಧೀಕರಿಸುವುದು), *ಝಕಿಯ್ಯನ್* (ಅತ್ಯಂತ ಪರಿಶುದ್ಧ), *ಝಕಿಯ್ಯತನ್* (ಮುಗ್ಧ) ಮತ್ತು *ಅಝ್-ಕಾ* (ಪರಿಶುದ್ಧವಾದ).

ಸರ್ವಶಕ್ತನ ವಿರುದ್ಧ ಕುತಂತ್ರವೆಸಗಿಕೊಂಡು, ತಾವು ಹೇಗಾದರೂ ತಪ್ಪಿಸಿಕೊಳ್ಳಬಹುದೆಂದು ಬಹಳಷ್ಟು ಧಾರ್ಮಿಕರು ಭಾವಿಸಿರಬಹುದು. ಆದರೂ ಕುರ್‌ಆನಿನ ಅನೇಕ ವಚನಗಳಲ್ಲಿ ಝಕಾತ್ ಪದದ ಅರ್ಥವನ್ನು ಬದಲಿಸಲು ಸಾಧ್ಯವಿಲ್ಲ ಎಂಬ ವಾಸ್ತವವನ್ನು ಅವರು ಎದುರಿಸಲೇಬೇಕಾಗಿದೆ:

> *ಖದ್ ಅಫ್ಲಹ ಮನ್ ಝಕ್ಕಾಹಾ.* (91:9)
>
> ನಿಶ್ಚಯವಾಗಿಯೂ, ವಿಜಯವು ಅದನ್ನು ಶುದ್ಧಗೊಳಿಸುವವರಿಗಾಗಿದೆ. (91:9)

ತಮ್ಮ ಸುತ್ತಲಿರುವ ಜನರನ್ನು ಮತ್ತು ತಮ್ಮನ್ನು ಅನುಸರಿಸುವವರನ್ನು ಶುದ್ಧೀಕರಿಸುವ ಸಲುವಾಗಿ ಪ್ರವಾದಿಗಳಿಗೆ ಗ್ರಂಥಗಳನ್ನು ಅವತೀರ್ಣಿಸಲಾಗಿತ್ತು. (ಶುದ್ಧೀಕರಣವನ್ನು ಸೂಚಿಸುವ) *ಯುಝಕ್ಕಿ* ಎಂಬ ಪದವು 'ಗ್ರಂಥ'ಮತ್ತು 'ಯುಕ್ತಿ' ಎಂಬ ಪದಗಳ ಜೊತೆಗೆ ಅನೇಕ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುತ್ತದೆ.

> *ರಬ್ಬನಾ ವಬ್‌ಅಸ್ ಫೀಹಿಮ್ ರಸೂಲನ್ ಮಿನ್ಹುಮ್, ಯತ್ಲೂ ಅಲೈಹಿಮ್, ಆಯಾತಿಕ ವ ಯುಅಲ್ಲಿಮುಹುಮುಲ್ ಕಿತಾಬ ವಲ್ ಹಿಕ್ಮತ ವ-ಯುಝಕ್ಕೀ-ಹಿಮ್, ಇನ್ನಕ ಅಂತಲ್ ಅಝೀಝುಲ್ ಹಕೀಮ್. (2:129)*
>
> ನಮ್ಮ ಪ್ರಭುವೇ, ಅವರಿಗೆ ನಿನ್ನ ವಚನಗಳನ್ನು ಪಠಿಸಿ ಹೇಳುವ ಮತ್ತು ಅವರಿಗೆ ಗ್ರಂಥವನ್ನೂ ಯುಕ್ತಿಯನ್ನೂ ಬೋಧಿಸುವ ಹಾಗೂ ಅವರನ್ನು ಶುದ್ಧಗೊಳಿಸುವ ಓರ್ವ ಸಂದೇಶವಾಹಕರನ್ನು ಅವರ ಪೈಕಿಯಿಂದಲೇ ನಿಯೋಜಿಸು. ನಿಶ್ಚಯವಾಗಿಯೂ, ನೀನು ಮಹಾಪ್ರತಾಪಿಯೂ, ಯುಕ್ತಿಪೂರ್ಣನೂ ಆಗಿರುವೆ. (2:129)
>
> *ಕಮಾ ಅರ್ಸಲ್ನಾ ಫೀಕುಮ್ ರಸೂಲನ್ ಮಿನ್ಕುಮ್ ಯತ್ಲೂ ಅಲೈಕುಮ್ ಆಯಾತಿನಾ ವ-ಯುಝಕ್ಕೀ-ಕುಮ್ ವಯುಅಲ್ಲಿಮುಕುಮುಲ್-ಕಿತಾಬ ವಲ್-ಹಿಕ್ಮತ ವಯುಅಲ್ಲಿಮುಕುಮ್ ಮಾ ಲಮ್ ತಕೂನೂ ತಅ'ಲಮೂನ್ (2:151)*
>
> ನಾವು ನಿಮ್ಮೊಳಗಿಂದಲೇ ಓರ್ವ ಸಂದೇಶವಾಹಕರನ್ನು ಕಳುಹಿಸಿದಂತೆ. ಅವರು ನಿಮಗೆ ನನ್ನ ವಚನಗಳನ್ನು ಓದಿ ಹೇಳುತ್ತಾರೆ. ನಿಮ್ಮನ್ನು ಶುದ್ಧಗೊಳಿಸುತ್ತಾರೆ. ನಿಮಗೆ ಗ್ರಂಥ ಮತ್ತು ಯುಕ್ತಿಯ ಶಿಕ್ಷಣವನ್ನು ನೀಡುತ್ತಾರೆ ಮತ್ತು ನೀವು ಇಷ್ಟರ ತನಕ ತಿಳಿಯದೇ ಇದ್ದ ಸಂಗತಿಗಳನ್ನು ಬೋಧಿಸುತ್ತಾರೆ. (2:151)

2:151 ರಲ್ಲಿನ *ಝಕ್ಕೀ-ಕುಮ್* ಎಂಬ ಪದದ ಅರ್ಥವು ನಿಮ್ಮನ್ನು ಶುದ್ಧಗೊಳಿಸುತ್ತಾರೆ ಎಂದಾಗಿದೆ.

ಮುಂದಿನ ವಚನದಲ್ಲಿ ಶುದ್ಧೀಕರಣದ ಅರ್ಥವನ್ನು ನೀಡುವ ಪೂರ್ವಪ್ರತ್ಯಯಗಳೊಂದಿಗೆ ಬಳಕೆಯಾದ ಇದರ ಇತರ ಉತ್ಪನ್ನಗಳು ನೋಡೋಣ. ಸ್ವಲಾತ್ ಎಂಬ ಪದವು ಝಕ್ಕಾತ್ ಎಂಬ ಪದದ ಜೊತೆಯೇ ಕಾಣಿಸಿಕೊಂಡಿದ್ದರೂ, ಧಾರ್ಮಿಕರು ಇಲ್ಲಿ ಝಕ್ಕಾತ್ ಎಂಬ ಪದವು ಧಾರ್ಮಿಕ ದಶಾಂಶ ತೆರಿಗೆಯಾಗಿದೆಯೆಂದು ವಾದಿಸುವುದಿಲ್ಲ, ಏಕೆಂದರೆ, ಸನ್ನಿವೇಶವು ಅದಕ್ಕೆ ಹೊಂದಿಕೊಳ್ಳುವುದಿಲ್ಲ.

> *ವಲಾ ತಝಿರು ವಾಝಿರತುನ್ ವಿಝ್ರ ಉಹ್ರಾ, ವಇನ್ ತದುಉ, ಮುಸ್ಕಲತುನ್ ಇಲಾ ಹಿಮ್ಲಿಹಾ ಲಾ ಯುಹ್ಮಲು ಮಿನ್ಹು ಶೈಉನ್ ವಲವ್ ಕಾನ ಝಾ-ಕುರ್ಬಾ ಇನ್ನಮಾ ತುಂಝಿರು-ಲ್ಲಝೀನ ಯಹ್-ಶೌನ ರಬ್ಬಹುಮ್ ಬಿಲ್ ಘೈಬಿ ವ ಅಖಾಮು-ಸ್ವಲಾತ ವ ಮನ್ ತ-ಝಕ್ಕಾ, ಫ ಇನ್ನಮಾ ಯತ-ಝಕ್ಕಾ ಲಿನಫ್ಸಿಹೀ, ವಇಲಲ್ಲಾಹಿಲ್ ಮಸೀರ್. (35:18)*
>
> ಯಾವ ಹೊರೆ ಹೊರುವವನೂ ಇನ್ನೊಬ್ಬನ ಹೊರೆಯನ್ನು ಹೊರಲಾರನು. ಹೊರೆ ಹೊತ್ತ ವ್ಯಕ್ತಿಯು ತನ್ನ ಹೊರೆಯನ್ನು ಹೊರಲು ಕೂಗುವಾಗ, ಅವನ ನಿಕಟ ಬಂಧುವೇ ಆಗಿದ್ದರೂ ಅವನ ಹೊರೆಯ ಅಲ್ಪಾಂಶವನ್ನು ಕೂಡ ಹಂಚಿಕೊಳ್ಳಲು ಬರಲಾರನು. ನಿಶ್ಚಯವಾಗಿಯೂ, ತಮ್ಮ ಪ್ರಭುವನ್ನು ಭಯಪಡುವವರಿಗೆ ಮತ್ತು ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವವರಿಗೆ ಮಾತ್ರ ನೀವು ಎಚ್ಚರಿಕೆ ಕೊಡಬಲ್ಲಿರಿ. ಮತ್ತು ಯಾರು ಶುದ್ಧಗೊಳ್ಳುತ್ತಾರೆ *(ತ-ಝಕ್ಕಾ)* ಅವರು ನಿಶ್ಚಯವಾಗಿಯೂ ತಮ್ಮ ಆತ್ಮವನ್ನೇ ಶುದ್ಧಗೊಳಿಸುತ್ತಿದ್ದಾರೆ *(ಯತ-ಝಕ್ಕಾ)*. ಮತ್ತು ಅಂತಿಮ ಮರಳಿಕೆಯು, ಅಲ್ಲಾಹನ ಕಡೆಗಾಗಿದೆ. (35:18)

ಝಕಾತ್ ಎಂಬ ಪದಕ್ಕೆ ಪರಿಶುದ್ಧ ಅಥವಾ ಶುದ್ಧೀಕರಣ ಎಂಬ ಅರ್ಥವಾಗಿದೆ ಎಂದು ಈ ವಚನವು (ಹಾಗೂ ಇತರ ಹಲವು ವಚನಗಳು) ಅಂಗೀಕರಿಸುತ್ತದೆ. ಸ್ವಲಾತ್ ಪದದ ಒಡನೆಯೇ ಝಕಾತ್ ಪದವು ಕಾಣಿಸಿಕೊಳ್ಳುವ ಇತರ ಎಲ್ಲಾ ವಚನಗಳಲ್ಲಿ, ಝಕಾತ್ ಪದದ ಅರ್ಥವು ಧಾರ್ಮಿಕ ದಶಾಂಶ ತೆರಿಗೆ ಎಂದು ಧಾರ್ಮಿಕರು ವಾದಿಸುತ್ತಾರೆ. ಧಾರ್ಮಿಕರ ಮತ್ತು ಅವರ ಅನುವಾದಕರ ಇಂತಹ ತಿರುಚುವಿಕೆಗಳನ್ನು, ಅರಬೀ ಕುರ್‌ಆನಿನ ಸರಳವಾದ ಸಂದರ್ಭೋಚಿತ ಪಠಣೆಯ ಮೂಲಕ ಸುಲಭವಾಗಿ ಬಹಿರಂಗಗೊಳಿಸಬಹುದು.

ಝಕಾತ್ ಪದವು, ಇಸ್ರಾಯೀಲರ ಸಂತತಿಗೆ ನೀಡಲಾದ ಸಾಮಾನ್ಯ ಸೂಚನೆಯಾಗಿದೆ. ತಮ್ಮ ಸಮಯದಲ್ಲಿ ಅವರು ಕೊನೆಯ ಪ್ರವಾದಿಗೆ ನೀಡಲಾದ ಅದೇ ಸೂಚನೆಗಳನ್ನು ಪಡೆದಿದ್ದರು:

> *ವ ಅಖೀಮು-ಸ್ವಲಾತ ವ ಆತು-ಝ್ಝಕಾತ, ವರ್ಕಉ ಮಅ-ರ್ರಾಕಿಈನ್. (2: 43)*
>
> ಮತ್ತು ಬದ್ಧತೆಗಳನ್ನು ಪಾಲಿಸಿರಿ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸಿರಿ ಮತ್ತು ವಿನಮ್ರರಾಗಿರುವವರ ಜೊತೆ ನೀವೂ ವಿನಮ್ರರಾಗಿರಿ. (2: 43)

ಬದ್ಧತೆಗಳನ್ನು ಪಾಲಿಸಿರಿ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸಿರಿ ಎಂಬ ಆದೇಶವು ಕುರ್‌ಆನಿನುದ್ದಕ್ಕೂ ಕಂಡುಬರುತ್ತದೆ ಹಾಗೂ ಸೃಷ್ಟಿಕರ್ತನಿಂದ ನಮಗಾಗಿ ನಿಗದಿಸಲ್ಪಟ್ಟ ಕ್ರಿಯಾತ್ಮಕ ಜೀವನದ ರೀತಿಯ ಮೇರೆಯ ಪರಿಧಿಯೊಳಗಡೆ ಹೇಗೆ ಜೀವಿಸಬೇಕು ಎಂದು ಅವುಗಳು ನಮಗೆ ನಿರ್ದೇಶಿಸುತ್ತದೆ.

ಭಾಗ ಏಳು

ಇಬ್ರಾಹೀಮರು ಪ್ರಧಾನ ಗುರಿಯಾದರು

ಶಾಂತಿಯಲ್ಲಿರುವವರಿಗೆ, ಇಬ್ರಾಹೀಮರು ಏಕದೇವವಿಶ್ವಾಸದ ವ್ಯವಸ್ಥೆಯಲ್ಲಿ ಮುಂಚೂಣಿಯ ಒಂದು ಗೌರವಾನ್ವಿತ ಸ್ಥಾನವನ್ನು ಹೊಂದಿದ್ದಾರೆ. ಅವತೀರ್ಣಗೊಂಡ ಎಲ್ಲಾ ಗ್ರಂಥಗಳಲ್ಲಿ, ಒಬ್ಬ ಮಾದರಿ ಪುರುಷನಾಗುವ ಭಾಗ್ಯವನ್ನು ಅವರು ಗಳಿಸಿಕೊಂಡಿದ್ದಾರೆ. ಮೂರ್ತಿ ಆರಾಧನೆಯಿಂದ ಅಲ್ಲಾಹನ ವ್ಯವಸ್ಥೆಯನ್ನು ಸ್ವಚ್ಚಗೊಳಿಸುವ ಸಲುವಾಗಿ, ನಿಷ್ಠಾವಂತರಾದಂತಹ ಹಾಗೂ ತಮ್ಮನ್ನು ವಿನಮ್ರವಾಗಿ ಸಮ್ಮತಿಸುವಂತಹ ಜನಸಮೂಹಕ್ಕಾಗಿ, ಅಲ್ಲಾಹನು ಇಬ್ರಾಹೀಮರನ್ನು ಅವರ ಮಗ ಇಸ್ಮಾಯೀಲರ ಜೊತೆಗೆ ಆರಿಸಿದನೆಂದು ಕುರ್‌ಆನಿನಲ್ಲಿ ನಾವು ಕಾಣುತ್ತೇವೆ. ದುರದೃಷ್ಟವಶಾತ್, ಅವರು ಯಹೂದಿಗಳ ಮತ್ತು ಅರಬರ ಅವಮಾನಕ್ಕೆ ಗುರಿಯಾದರು.

ಅವರು ಒಂದು ಶ್ರೇಷ್ಠ ನಾಮ, ಶ್ರೇಷ್ಠ ಜನಾಂಗದೊಂದಿಗೆ ಅನುಗ್ರಹಿಸಲ್ಪಡುವರೆಂದು, ಅಲ್ಲಾಹನು ಅವರೊಂದಿಗೆ ಒಂದು ಒಪ್ಪಂದವನ್ನು ಮಾಡಿರುವುದು, ನಾವು 'ಹಳೆಯ ಒಡಂಬಡಿಕೆ'ಯಲ್ಲಿ ಕಾಣಬಹುದು. ಅವರನ್ನು ಅನುಸರಿಸುವವರನ್ನು ಅಲ್ಲಾಹನು ಹರಸುತ್ತಾನೆ, ಅವರನ್ನು ಶಪಿಸುವವರನ್ನು ಅಲ್ಲಾಹನು ಶಪಿಸುತ್ತಾನೆ. ದುರದೃಷ್ಟವಶಾತ್, ಅವರ ಬಗ್ಗೆ ಒಳ್ಳೆಯ ವಿಷಯಗಳನ್ನು ಓದಿದ ತಕ್ಷಣ, ಅವರು ಯಹೂದಿಗಳ ಗುರಿಯಾದರು. ಯಹೂದಿಗಳು ಹೇಳಿದರು, ಈಜಿಪ್ಟ್ ಪ್ರವೇಶಿಸಿದ ಮೇಲೆ ಅವರು ತನ್ನ ಪತ್ನಿಯನ್ನು ಅಂದಿನ ಈಜಿಪ್ಟಿನ ರಾಜನ ವಶಕ್ಕೆ ಕೊಟ್ಟರು, ಏಕೆಂದರೆ ಆ ಮಹಿಳೆಯು ಬಹಳ ಸುಂದರವಾಗಿದ್ದರಿಂದ ತನ್ನ ಪತ್ನಿಯೆಂದು ಒಪ್ಪಿಕೊಳ್ಳಲು ಅವರು ಭಯಪಟ್ಟಿದ್ದರು. ಅವಳೊಂದಿಗೆ ಹಲವು ರಾತ್ರಿಗಳನ್ನು ಕಳೆದ ನಂತರ, ರಾಜನು ಇದ್ದಕ್ಕಿದ್ದಂತೆ ಆಕೆಯು ಇಬ್ರಾಹೀಮರ ಪತ್ನಿಯೆಂದು ಅರಿತುಕೊಂಡನು. ನಂತರ ಅವಳನ್ನು ಮರಳಿ ಒಪ್ಪಿಸಿದನು,[51] ಜೊತೆಗೆ ಪರಿಹಾರದಂತೆ ಅನೇಕ ಜಾನುವಾರಗಳನ್ನೂ ನೀಡಿದನು. ಯಹೂದಿಗಳು ಇನ್ನೊಂದು ಕಥೆಯನ್ನು ಸಹ ಸೃಷ್ಟಿಸಿದರು, ನಾನು ಅದನ್ನು ಒಂದು ಕುಚೇಷ್ಟೆಯೆಂದು ಕರೆಯುತ್ತೇನೆ, ಅದೇನೆಂದರೆ, ಇಬ್ರಾಹೀಮರು ಅಲ್ಲಾಹ1ನೊಂದಿಗೆ ತನ್ನ ಒಪ್ಪಂದದ ಒಂದು ಸಂಕೇತವಾಗಿ, ತನ್ನ ತೊಂಬತ್ತೊಂಬತ್ತನೇ ವಯಸ್ಸಿನಲ್ಲಿ ಸುನತಿ ಮಾಡಿಸಿಕೊಂಡರು. ಈ ಯಹೂದಿ ವಂಚನೆಯ ಕಾರಣವಾಗಿ, ಕೋಟ್ಯಾಂತರ ಜನರು, ಸಹಿಸಲಾಗದಂತಹ ನೋವಿನ ಮೂಲಕ ತಮ್ಮ ಅತ್ಯಂತ ಸೂಕ್ಷ್ಮ ಅಂಗದ ಸಣ್ಣ ಭಾಗವನ್ನು ತ್ಯಾಗ ಮಾಡಲೇಬೇಕು ಎಂದು ನಂಬಿಕೊಂಡಿದ್ದಾರೆ. ಅರಬೀ ಧಾರ್ಮಿಕರು ಈ ಯಹೂದಿ ಅವಿವೇಕಿತನವನ್ನು ಅನುಸರಿಸಿದರು, ನಂತರ ಗಂಡು ಮಾತ್ರವಲ್ಲದೆ ಹೆಣ್ಣು ಕೂಡಾ ಈ ಸಂಕಟವನ್ನು ಅನುಭವಿಸುವಂತೆ ಮಾಡಿದರು. ಈ ಅತ್ಯಾಚಾರವು ಹೆಣ್ಣಿನ ಮೇಲೆ ಕೆಲವು ದೇಶಗಳಲ್ಲಿ ಇತ್ತೀಚಿನ ಕಾಲದಲ್ಲಿ ನಿಷೇಧಿಸಲಾಗಿದ್ದರೂ, ಅನೇಕ ದೇಶಗಳಲ್ಲಿ ಇಂದಿಗೂ ಇದು ಚಾಲ್ತಿಯಲ್ಲಿದೆ ಹಾಗೂ ಮಹಿಳಾ ಕಲ್ಯಾಣ

[51] ಹಳೆಯ ಒಡಂಬಡಿಕೆ (Old Testament Genesis) - 12:1-20

ಸಂಘಗಳು ಇದನ್ನು ತಡೆಯಲು ಬಹಳ ಶ್ರಮಪಡುತ್ತಿದ್ದಾರೆ. ಆದರೆ ಗಂಡಿನ ಮೇಲೆ ಈ ಅತ್ಯಾಚಾರವು ವಿಶ್ವದಾತ್ಯಂತ ಇಂದಿಗೂ ಬಹಳ ಮಾನ್ಯತೆಯಿಂದ ನಡೆಯುತ್ತಿದೆ. ಈ ಸುನತಿ ಆಚರಣೆಯ ಹಿಂದೆ ಏನಾದರೂ ಯುಕ್ತಿಯಿದೆಯೇ ಎಂದು ಕೇಳಿದರೆ, ಯಾವುದೇ ಮುಸ್ಲಿಮನಿಗೂ ಉತ್ತರಿಸಲಾಗದು. 'ಈ ಕ್ರಿಯೆಯು ಶರೀರದ ಆ ಅಂಗದಲ್ಲಿ ಮಲಿನತೆಯು ಶೇಖರವಾಗದೆ ಸ್ವಚ್ಚವಾಗಿರಿಸಲು ಸಹಾಯಕರವಾಗಿದೆ' ಎಂದು ಕೆಲವರು ವಾದಿಸುತ್ತಾರೆ. ಹಾಗಿದ್ದರೆ, ಹಲ್ಲುಗಳಲ್ಲಿಯೂ ಮಲಿನತೆಯು ಶೇಖರವಾಗುತ್ತದೆ. ಅದಕ್ಕಾಗಿ ನಾವು ನಿಯತವಾಗಿ ಹಲ್ಲುಜ್ಜುತ್ತೇವೆಯೇ ಹೊರತು, ಅದಕ್ಕೆ ನಮ್ಮ ಸೃಷ್ಟಿಕರ್ತನು ಕವಚವಾಗಿ ನೀಡಿರುವ ಎರಡು ತುಟಿಗಳನ್ನು ಕತ್ತರಿಸಿ ತೆಗೆಯುವುದಿಲ್ಲ. ಹಾಗೆಯೇ, ಮಲದ್ವಾರವೂ ಮಲಿನತೆಯ ಅಂಗವಾಗಿದೆ. ಅದನ್ನು ಸ್ವಚ್ಚಗೊಳಿಸುವ ರೀತಿಯನ್ನು ನಾವೆಲ್ಲರೂ ಅರಿತಿದ್ದಾರೆ. ಅಂತೂ, ಸಹಜವಾಗಿ ಹೆಚ್ಚಿನವರು "ಇದು ಪ್ರವಾದಿ ಮುಹಮ್ಮದರ ಸಂಪ್ರದಾಯವಾಗಿದೆ", ಎಂದು ಹೇಳುವ ಸುಲಭವಾದ ತಪ್ಪಿಸಿಕೊಳ್ಳುವ ಮಾರ್ಗವನ್ನು ಬಳಸಿಕೊಳ್ಳುತ್ತಾರೆ. ಆಶ್ಚರ್ಯಕರವಲ್ಲದೆ, ಇತರ ಅಸಂಖ್ಯಾತ ಅನಾಚಾರಿಕ ವಿಧಿಗಳ ಜೊತೆಗೆ, ಇದೂ ಕೂಡ 'ಪ್ರವಾದಿಯ ಸಂಪ್ರದಾಯ' ಎಂದು ಕರೆಯಲ್ಪಡುವ ಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿದೆ. ಪ್ರವಾದಿಯು ಒಬ್ಬ ಪುರುಷರಾಗಿದ್ದರು, ಹಾಗಾದರೆ ಮಹಿಳೆಯರು ಯಾಕೆ ಊನರನ್ನಾಗಿ ಮಾಡಲ್ಪಡುತ್ತಾರೆ? ವಾಸ್ತವವೇನೆಂದರೆ, ಇದು ಯಹೂದಿಗಳಿಂದ ಕದ್ದ ಸಂಪ್ರದಾಯವಾಗಿದೆ.

ಆದಾಗ್ಯೂ, ಅಲ್ಲಾಹನ ವ್ಯವಸ್ಥೆಯಲ್ಲಿ ಇಬ್ರಾಹೀಮರ ಉನ್ನತ ದರ್ಜೆಯ ಬಗ್ಗೆ ಮರ್ಯಮರ ಮಗ ಈಸಾರಿಗೆ ಪೂರ್ಣ ಜ್ಞಾನವಿತ್ತು. ಅಲ್ಲಾಹನು ಈಸಾರಿಗೆ ಗ್ರಂಥವನ್ನು ಕಲಿಸಿದನು ಹಾಗೂ ಬುದ್ಧಿವಂತಿಕೆಯನ್ನೂ, ತೌರಾತಿನ ಅರಿವನ್ನೂ ಅವರಿಗೆ ನೀಡಿದ್ದನು. ಅವರು ಯಹೂದಿಗಳ ಕಡೆಗೆ ಹೋದರು. ಯಹೂದಿಗಳು ತಮ್ಮನ್ನು ಇಬ್ರಾಹೀಮರ ಸಿದ್ಧಾಂತದ ಅನುಯಾಯಿಗಳೆಂದು ತಪ್ಪಾಗಿ ದಾವೆಮಾಡುತ್ತಿದ್ದರು. ಆದರೆ ಈಸಾರು ಹೇಳಿದರು, ಅವರು ಇಬ್ರಾಹೀಮರ ಸಿದ್ಧಾಂತವನ್ನು ಅನುಸರಿಸುವವರಾಗಿರುತ್ತಿದ್ದರೆ, ಅವರು ಇಬ್ರಾಹೀಮರನ್ನು ಕೊಲ್ಲಲು ಶ್ರಮಿಸುವುದಕ್ಕೆ ಬದಲು, ಅವರ ಮಾತುಗಳನ್ನು ಸ್ವೀಕರಿಸಬೇಕಾಗಿತ್ತು. ಮತ್ತು ಅವರು ಬರೇ ತಮ್ಮ ಪೂರ್ವಜರು ಮಾಡುವ ಹಾಗೆಯೇ ಮಾಡುತ್ತಿದ್ದರು (ತಮ್ಮ ಪೂರ್ವಜರ ಹಾಗೆ ಅಲ್ಲಾಹನನ್ನು ತಿರಸ್ಕರಿಸುತ್ತಿದ್ದರು). ಯಹೂದಿ ಧರ್ಮವನ್ನು ಆವಿಷ್ಕರಿಸಿದ ಅವರ ಪೂರ್ವಜರನ್ನು ಈಸಾರು ನೈಜ ಶೈತಾನರು[52] ಎಂದು ಕರೆದಿದ್ದಾರೆ. (ಬಹುಶಃ ಇಂದಿನವರೆಗೂ ಅವರು ಶೈತಾನರೇ ಆಗಿದ್ದಾರೆ).

ಹಳೆಯ ಮತ್ತು ಹೊಸ ಒಡಂಬಡಿಕೆಯನ್ನು ಮತ್ತು ಕುರ್'ಆನನ್ನು ಓದುವವರು, ಅಲ್ಲಾಹನ ವ್ಯವಸ್ಥೆಯಲ್ಲಿ ಇಬ್ರಾಹೀಮರ ಉನ್ನತ ದರ್ಜೆಯನ್ನು ಕಾಣುತ್ತಾರೆ. ಈ ಗ್ರಂಥವು ಹಿಂದಿನ ಗ್ರಂಥವನ್ನು ದೃಢಪಡಿಸುತ್ತದೆ ಹಾಗೂ ಮಾನದಂಡದಂತೆ ಕಾರ್ಯ ನಿರ್ವಹಿಸುತ್ತದೆ ಎಂದು ಕುರ್'ಆನ್ ಪದೇ ಪದೇ ಹೇಳುವುದರಲ್ಲಿ ಆಶ್ಚರ್ಯವೇನಿಲ್ಲ. ನಾವು ಹಳೆಯ ಮತ್ತು ಹೊಸ ಒಡಂಬಡಿಕೆಯನ್ನು ಓದಿದರೆ, ಆ ಪುಸ್ತಕದಲ್ಲಿರುವ ಚರಣಗಳು ಹಲವು ಸ್ಥಳಗಳಲ್ಲಿ ಪರಸ್ಪರ ವಿರೋಧವಾಗಿದೆ. ಸತ್ಯದ ಸ್ಥಿರತೆಯು, ಸತ್ಯವನ್ನು ಪರಿಶೀಲಿಸುವ ಒಂದು

[52] ಹೊಸ ಒಡಂಬಡಿಕೆ (New Testament John) - 8: 39-58

ಮಾನದಂಡವಾಗಿದೆ. ಆದ್ದರಿಂದ ಯಾವುದೇ ಒಂದು ವಿಷಯವು (ವಿಶೇಷವಾಗಿ ಅದೇ ಅಧ್ಯಾಯದೊಳಗೆ ಪುನರಾವರ್ತಿಸಲಾದಾಗ) ಹಲವಾರು ವೈರುಧ್ಯಗಳನ್ನು ಸಾಬೀತು ಪಡಿಸುವುದು, ಹಳೆಯ ಮತ್ತು ಹೊಸ ಒಡಂಬಡಿಕೆಯ ಬಗ್ಗೆ ಒಂದು ವಿಮರ್ಶಾತ್ಮಕ ಅಧ್ಯಯನದಿಂದ ತಿಳಿಯುತ್ತದೆ. ಅದು ಅವರ ಪೂರ್ವ ಧಾರ್ಮಿಕರ ಹಸ್ತಕ್ಷೇಪದ ಕಾರಣವಾಗಿದೆ. ಅವರ ಪುರೋಹಿತರನ್ನು ಈ ವೈರುಧ್ಯಗಳ ಬಗ್ಗೆ ಪ್ರಶ್ನಿಸಿದರೆ, ಅವರಲ್ಲಿ ಕೆಲವರು ಭರತನಾಟ್ಯದಂತೆ ಕುಣಿಯುತ್ತಾರೆ, ಕೆಲವರು ಯಕ್ಷಗಾನದಂತೆ ಕಿರಿಚಾಡುತ್ತಾರೆ. (ಇದು ಎಲ್ಲಾ ಧಾರ್ಮಿಕರು ನರಳುವ ಸಾಮಾನ್ಯ ರೋಗವಾಗಿದೆ). 4:82 ರಲ್ಲಿ ಕುರ್‌ಆನ್ ಹೇಳುತ್ತದೆ, '*ಇದು ಅಲ್ಲಾಹನ ಹೊರತು ಇತರರ ಕಡೆಯಿಂದಿರುವುದಾಗಿದ್ದರೆ, ನಿಶ್ಚಯವಾಗಿಯೂ ಅವರು ಅದರಲ್ಲಿ ಹಲವಾರು ವೈರುಧ್ಯಗಳನ್ನು ಕಾಣುತ್ತಿದ್ದರು*'.

ತಮ್ಮ ಸಮೂಹಗಳು ಮಾತ್ರ ಅಲ್ಲಾಹನ ಗ್ರಂಥಗಳನ್ನು ಸ್ವೀಕರಿಸಿರುವುದರ ಕಾರಣವಾಗಿ, ಸನ್ಮಾರ್ಗಕ್ಕಿರುವ ಏಕೈಕ ಮಾರ್ಗವು ಯಹೂದಿ ಮತ್ತು ಕ್ರೈಸ್ತ ಧರ್ಮವನ್ನು ಅನುಸರಿಸುವುದು ಎಂದು ಯಹೂದಿಗಳು ಮತ್ತು ಕ್ರೈಸ್ತರು ವಾದಿಸುತ್ತಾರೆ. ತಮ್ಮ ಗ್ರಂಥಗಳ ನಂತರದ ಯಾವುದೇ ಗ್ರಂಥವನ್ನು ಅವರು ಅಂಗೀಕರಿಸುವುದಿಲ್ಲ, ವಿಶೇಷವಾಗಿ, ಅದು ಗ್ರಂಥದ ಬಗ್ಗೆ ಪೂರ್ವಜ್ಞಾನವಿಲ್ಲದಂತಹ ವ್ಯಕ್ತಿಗೆ ಅವತೀರ್ಣಿಸಲ್ಪಟ್ಟಾಗ. ಯಾವುದೇ ಯಹೂದಿಯಲ್ಲದವರೊಂದಿಗೆ ಅಹಂಭಾವದಿಂದ ವರ್ತಿಸಲು ತಮ್ಮ ಅನುಯಾಯಿಗಳಿಗೆ ಯಹೂದಿ ಋಷಿಗಳು ತರಬೇತಿ ನೀಡುತ್ತಾರೆ. ಆದ್ದರಿಂದ, ಈಸಾರ ಮೇಲೆ ನಂಬಿದ ಜನರಿಗೆ ಅವರು ಕ್ರೈಸ್ತ ಧರ್ಮವನ್ನು ಸೃಷ್ಟಿಸಿದರು. ಆದರೆ ಈಸಾರು, ಯಹೂದಿಯರನ್ನು ಶೈತಾನನ ಬೀಜಗಳು ಎಂದು ಕರೆದಿದ್ದರು. ಯಹೂದಿ ಮತ್ತು ಕ್ರೈಸ್ತ ಧರ್ಮದ ಮೂಲಕ ಮಾತ್ರವೇ ಸನ್ಮಾರ್ಗವನ್ನು ಪಡೆಯಲು ಸಾಧ್ಯವಾಗಿದೆ ಎಂದು ಹೇಳುವಾಗ, ಕುರ್‌ಆನ್ ಹೀಗೆ ಉತ್ತರಿಸಲು ಜನರಿಗೆ ಕಲಿಸುತ್ತದೆ: "*ಏಕದೇವ ವಿಶ್ವಾಸಿಯಾದ ಹಾಗೂ ಮೂರ್ತಿ ಆರಾಧಕರಲ್ಲದ ಇಬ್ರಾಹೀಮರ ಸಿದ್ಧಾಂತವನ್ನು ನಾವು ಅನುಸರಿಸುತ್ತೇವೆ*" (2:135). ನಂತರ ಕುರ್‌ಆನನ್ನು ವಿಶ್ವಾಸವಿರಿಸುವವರು ಹೀಗೆ ದೃಢೀಕರಿಸಬೇಕಾಗಿದೆ, "*ನಾವು ಅಲ್ಲಾಹನಲ್ಲಿ ವಿಶ್ವಾವಿರಿಸುತ್ತೇವೆ, ಮತ್ತು ನಮ್ಮ ಮೇಲೆ ಅವತೀರ್ಣಗೊಂಡವುಗಳಲ್ಲಿ, ಮತ್ತು ಇಬ್ರಾಹೀಮರ, ಇಸ್ಮಾಯೀಲರ, ಇಸ್ಹಾಕರ, ಯಾಕೂಬರ ಹಾಗೂ ಅವರ ಸಂತತಿಗಳಿಗೆ ಅವತೀರ್ಣಗೊಂಡವುಗಳಲ್ಲಿ, ಮತ್ತು ಮೂಸಾರಿಗೆ ಹಾಗೂ ಈಸಾರಿಗೆ ನೀಡಲ್ಪಟ್ಟವುಗಳಲ್ಲಿ ಮತ್ತು ಎಲ್ಲಾ ಪ್ರವಾದಿಗಳಿಗೂ ತಮ್ಮ ಪ್ರಭುವಿನಿಂದ ನೀಡಲ್ಪಟ್ಟವುಗಳಲ್ಲಿ ನಾವು ವಿಶ್ವಾಸವಿರಿಸುತ್ತೇವೆ. <u>ನಾವು ಅವರಲ್ಲಿ ಯಾವೊಬ್ಬರ ನಡುವೆಯೂ ತಾರತಮ್ಯವನ್ನು ಮಾಡುವುದಿಲ್ಲ</u>, ಮತ್ತು ನಾವು ಅಲ್ಲಾಹನಿಗಾಗಿ ಶಾಂತಿಯಲ್ಲಿದ್ದೇವೆ.*" (2:136).

ಬಹುತೇಕ ಮುಸ್ಲಿಮರು ಮೇಲಿನ ಈ ವಚನವನ್ನು ಅಂಗೀಕರಿಸುವುದಿಲ್ಲ. ಅವರು ವಿಶ್ವಾಸವಿರಿಸುವ ಏಕೈಕ ಸಂದೇಶವಾಹಕರು, ಮುಹಮ್ಮದರಾಗಿದ್ದಾರೆ. ಇಬ್ರಾಹೀಮರ ಸಿದ್ಧಾಂತವನ್ನು ಅನುಸರಿಸಲು ಸೂಚಿಸುವವರನ್ನು ಅಥವಾ ಸಂದೇಶವಾಹಕರ ನಡುವೆ ತಾರತಮ್ಯ ತೋರಿಸಕೂಡದು ಎಂದು ಹೇಳವವರನ್ನು ಅವರು ಶಪಿಸುತ್ತಾರೆ. ಅವರನ್ನು ಸಂಬಂಧಿಸಿದಂತೆ, ಇಬ್ರಾಹೀಮರು ಮತ್ತು ಇತರ ಸಂದೇಶವಾಹಕರು ಅವರ ಧರ್ಮದಲ್ಲಿ ಪರಕೀಯರಾಗಿದ್ದಾರೆ.

ಅಲ್ಲಾಹನ ದೀನಿನ ಜೊತೆ ಇಬ್ರಾಹೀಮರ ಸಂಬಂಧದ ಬಗ್ಗೆ ಯಹೂದಿಗಳು ಮತ್ತು ಕ್ರೈಸ್ತರು ಇಬ್ಬರೂ ತಿಳಿದಿರುವ ಕಾರಣ, ಕುರ್‌ಆನಿನಲ್ಲಿರುವ ಇಬ್ರಾಹೀಮರ ಬಗೆಗಿನ ಮಾಹಿತಿಯನ್ನು ಅವರು ನಿರಾಕರಿಸಲು ಸಾಧ್ಯವಿಲ್ಲ. ವಾಸ್ತವದಲ್ಲಿ, ಮೂಸಾ ಮತ್ತು ಈಸಾರು ಈ ಮನುಷ್ಯನ ಬಗ್ಗೆ ಮಾನ್ಯತೆಯೊಂದಿಗೆ ಮಾತನಾಡಿರುವಾಗ, ತಾವು ಇಬ್ರಾಹೀಮರ ಸಿದ್ಧಾಂತವನ್ನು ಅನುಸರಿಸುವವರಲ್ಲಿ ಎಣಿಸಲ್ಪಡಬೇಕೋ, ಬೇಡವೋ ಎಂಬುವುದು ಅವರಿಗೆ ಬಿಟ್ಟಿದೆ. ಅದೇ ರೀತಿ, *"ಹೇಳಿರಿ, ಅಲ್ಲಾಹನು ಸತ್ಯವನ್ನು ನುಡಿದಿದ್ದಾನೆ, ಆದ್ದರಿಂದ ನೀವು ಏಕದೇವ ವಿಶ್ವಾಸಿಯಾದ ಇಬ್ರಾಹೀಮರ ಸಿದ್ಧಾಂತವನ್ನು ಅನುಸರಿಸಿರಿ, ಹಾಗೂ ಅವರು ಮೂರ್ತಿ-ಆರಾಧಕರಾಗಿರಲಿಲ್ಲ" (3:95)* ಎಂದು ಎಲ್ಲರೊಂದಿಗೆ ಹೇಳುವಂತೆ ಮುಹಮ್ಮದರಿಗೆ ನಿರ್ದೇಶಿಸಲಾಗಿದೆ. ಆದರೆ ಇಂದಿನವರೆಗೂ, ಯಾವುದೇ ಬಹುತೇಕ ಎಲ್ಲಾ ಮುಸ್ಲಿಮರು ಅವರಿಗೆ ಕಿವಿಗೊಡಲು ಬಯಸಲಿಲ್ಲ.

ಇಬ್ರಾಹೀಮರು, ಇಸ್ಮಾಯೀಲರು, ಇಸ್ಹಾಕರು, ಯಾಕೂಬರು, ಮತ್ತು ಅವರ ಕುಲಜನರೆಲ್ಲರೂ ಯಹೂದಿ ಅಥವಾ ಕ್ರೈಸ್ತರಾಗಿದ್ದರು ಎಂದು ಹಿಂದಿನ ಗ್ರಂಥಗಳ ಅನೇಕ ಜನರು ವಾದಿಸುತ್ತಾರೆ - ಆದರೆ *"ಇಬ್ರಾಹೀಮರು ಒಬ್ಬ ಯಹೂದಿಯೋ ಅಥವಾ ಕ್ರೈಸ್ತನೋ ಆಗಿರಲಿಲ್ಲ. ಅವರು ಶಾಂತಿಯಲ್ಲಿದ್ದ ಏಕದೇವ ವಿಶ್ವಾಸಿಯಾಗಿದ್ದರು, ಮತ್ತು ಅವರು ಮೂರ್ತಿ ಆರಾಧಕರಲ್ಲಾಗಿರಲಿಲ್ಲ" (3:67)* ಎಂದು ಹೇಳುವ ಮೂಲಕ ಕುರ್‌ಆನ್ ಈ ಗೊಂದಲವನ್ನು ಸ್ಪಷ್ಟಪಡಿಸುತ್ತದೆ. ಅವರು ಇನ್ನೂ ಪಟ್ಟುಹಿಡಿದರೆ, ಅವರಿಗೆ ತಮ್ಮ ಸಾಮಾನ್ಯ ಜ್ಞಾನವನ್ನು ಬಳಸುವಂತೆ ಸುಲಭವಾಗಿ ಹೇಳಬಹುದು, *"ಓ ಗ್ರಂಥದ ಜನರೇ, ನೀವು ಇಬ್ರಾಹೀಮರ ಬಗ್ಗೆ ಏಕೆ ವಾದಿಸುತ್ತೀರಿ? ತೌರಾತ್ ಮತ್ತು ಇಂಜೀಲ್ ಅವರ ಅನಂತರವೇ ಅವತೀರ್ಣಗೊಂಡಿವೆಯಷ್ಟೆ. ನೀವು ನಿಮ್ಮ ಸಾಮಾನ್ಯ ಜ್ಞಾನವನ್ನೂ ಬಳಸುವುದಿಲ್ಲವೇ?"* (3:65). ಕುರ್‌ಆನ್ ಒಂದು ಸರಳ ಉತ್ತರವನ್ನು ನೀಡುತ್ತದೆ – ತೌರಾತ್ ಮತ್ತು ಇಂಜೀಲ್ ಇಬ್ರಾಹೀಮರ ನಂತರ ದೀರ್ಘ ಕಾಲದ ಬಳಿಕವೇ ಅವತೀರ್ಣಗೊಳಿಸಲ್ಪಟ್ಟಿವೆ - ಹೀಗಾಗಿ ಅವರನ್ನು ಯಹೂದಿ ಮತ್ತು ಕ್ರೈಸ್ತ ಧರ್ಮಕ್ಕೆ ಸಂಯೋಜಿಸಲು ಯಾರಿಗೂ ಸಾಧ್ಯವಿಲ್ಲ – ಈ ಎರಡು ಸಾಂಪ್ರದಾಯಿಕ ಘಟಕಗಳು, ಮೂಸಾ ಮತ್ತು ಈಸಾರ ನಂತರ ದೀರ್ಘಕಾಲದ ಬಳಿಕ ರಚಿಸಲಾಗಿದೆ.

ಈ ಆರಿಸಲ್ಪಟ್ಟ ಮನುಷ್ಯನ ಹೆಸರು ಹಳೆಯ ಒಡಂಬಡಿಕೆಯಲ್ಲಿ ಕಾಣಿಸಿಕೊಂಡಾಗ, ಅವರು ಯಹೂದಿಗಳ ಗುರಿಯಾದರು. ಅದೇ ರೀತಿ, ಕುರ್‌ಆನಿನಲ್ಲಿ ಈ ಶ್ರೇಷ್ಠ ಮನುಷ್ಯನ ಬಗ್ಗೆ ಅಲ್ಲಾಹನು ಮಾತನಾಡಿರುವಾಗ, ಅವರು ಮಕ್ಕಾದಲ್ಲಿರುವ ಕಲ್ಲಿನ ಮೂರ್ತಿಯ ಸಂಸ್ಥಾಪಕರು ಎಂದು ಆರೋಪಿಸಲ್ಪಡುವ ಮೂಲಕ ಅರಬೀ ಧಾರ್ಮಿಕರ ಗುರಿಯಾದರು.

ಇಬ್ರಾಹೀಮರು ಶಾಂತಿಯಲ್ಲಿರುವವರಿಗೆ ಮುಖಂಡರಾಗಿ ಅರ್ಹಗೊಳ್ಳುವ ಮುಂಚಿತವಾಗಿ, ಅಲ್ಲಾಹನ ಪದಗಳೊಂದಿಗಿನ ಪರೀಕ್ಷಿಸಲ್ಪಟ್ಟಿದ್ದರು. ನಂತರ ಅವರಿಗೆ ಅಲ್ಲಾಹನ ವ್ಯವಸ್ಥೆಯಲ್ಲಿ ನಿಯಮಗಳನ್ನು ನೀಡಲಾಯಿತು ಮತ್ತು ಅವರು ಅದರಲ್ಲೇ ಉಳಿಯಲು ನಿರ್ಧರಿಸಿದರು ಮತ್ತು ಎಲ್ಲಾ ರೀತಿಯ ಮೂರ್ತಿಪೂಜೆ, ಧರ್ಮ, ಆಚರಣೆ ಮತ್ತು ಅನಾಚಾರಿಕ ಆರಾಧನಾ ವಿಧಿಗಳನ್ನು ತಿರಸ್ಕರಿಸಿ, ತನ್ನನ್ನು ಅವುಗಳಿಂದ

ಶುದ್ಧವಾಗಿರಿಸಲು ಸ್ವತಃ ಬದ್ಧರಾಗಿದ್ದರು. ಯಾರಾದರೂ ಅವರ ಹೆಜ್ಜೆಯನ್ನು ಅನುಸರಿಸಲು ನಿರ್ಧರಿಸಿದರೆ, ಅವರು ಅದೇ ರೀತಿಯಲ್ಲಿ ಆ ನಿಯಮಗಳಿಗೆ ವಿನಮ್ರವಾಗಿ ಸಮ್ಮತಿಸುತ್ತಾ ಅಲ್ಲಾಹನ ವ್ಯವಸ್ಥೆಗೆ ಸಮರ್ಪಿತರಾಗಬೇಕು. ಇಬ್ರಾಹೀಮರು ಅಲ್ಲಾಹನ ಜೊತೆ ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವಾಗ ಯಾವುದೇ ಪಿರಮಿಡನ್ನೋ ಅಥವಾ ಆಯತಾಕಾರದ ಮನೆಯನ್ನೋ ಕಟ್ಟಲಿಲ್ಲ, ಅಂತೆಯೇ ಯಾವುದೇ ಧರ್ಮವನ್ನೂ ಸೃಷ್ಟಿಸಲಿಲ್ಲ. ಬದಲಾಗಿ, ಸಂಪ್ರದಾಯದಲ್ಲಿ ಮುಳುಗಿ ಹೋಗಿದ್ದ ಮತಾಂಧ ಆಚರಣೆಗಳನ್ನು ಎದುರಿಸಿದಾಗ, ಅವರು ತನ್ನ ಯುಕ್ತಿ ಮತ್ತು ಸಾಮಾನ್ಯ ಜ್ಞಾನವನ್ನು ಬಳಸಿದರು. ಅವರು ತನ್ನ ತಂದೆ ಮತ್ತು ತನ್ನ ಜನರು ಮೂರ್ತಿಗಳಿಗೆ ತಮ್ಮನ್ನು ಸಮರ್ಪಿಸುವುದನ್ನು ಕಂಡಾಗ, ಅವರಿಗೆ ನಿಜವಾದ ಪ್ರಭುವನ್ನು ಲಕ್ಷಿಸಲು ಕರೆ ನೀಡುವ ಸವಾಲನ್ನು ತೆಗೆದುಕೊಂಡರು. ಅವರು ಕಲ್ಲನ್ನು ಪೂಜಿಸುವ ಪರಿಕಲ್ಪನೆಯನ್ನು ತಿರಸ್ಕರಿಸಿದರು, ಏಕೆಂದರೆ ಅದರಲ್ಲಿ ಅವರಿಗೆ ಯಾವುದೇ ವಿವೇಕವು ಕಾಣಲಿಲ್ಲ. ಅವರು ಜನರೊಂದಿಗೆ ಇದರ ಬಗ್ಗೆ ಚರ್ಚಿಸುವಾಗ, ಮತ್ತೊಮ್ಮೆ, ಅವರು ತಮ್ಮ ಸಾಮಾನ್ಯ ಜ್ಞಾನವನ್ನು ಬಳಸಿದರು. ಜನರು ತಮ್ಮ ದೇವರುಗಳನ್ನು ಸೂಚಿಸಿ ಅವರಿಗೆ ಬೆದರಿಕೆಯನ್ನು ನೀಡಿದಾಗ, ಇಬ್ರಾಹೀಮರು ಹೇಳಿದರು:

> ನೀವು ಕೆತ್ತಿದ ವಸ್ತುಗಳಿಗೆ ನೀವೇ ಸೇವೆಮಾಡುತ್ತೀರಾ? ನಿಮ್ಮನ್ನೂ ಮತ್ತು ನೀವು ರೂಪಕೊಡುವ ಈ ವಸ್ತುಗಳನ್ನು ಸೃಷ್ಟಿಸಿರುವುದು ಅಲ್ಲಾಹನಾಗಿದ್ದಾನೆ. (37:95-96)

ಸಾಂಪ್ರದಾಯಿಕ ಆಚರಣೆಗಳನ್ನು ತಿರಸ್ಕರಿಸಿದಂತಹ ಅದೇ ಇಬ್ರಾಹೀಮರು, ಅರಬೀ ಕುತಂತ್ರದ ಪ್ರಧಾನ ಗುರಿಯಾದರು. ಅರಬೀ ಧಾರ್ಮಿಕರು, ಒಂದು ತಾಮ್ರದ ಬ್ಲಾಕಿನಿಂದ ಒಂದು ಜೊತೆ ಹೆಜ್ಜೆಗುರುತನ್ನು ಕೆತ್ತಿ ಮತ್ತು ಅದನ್ನು ಮಕ್ಕಾದ ಚದರ ಶಿಲಾಮೂರ್ತಿಯ ಪಕ್ಕದಲ್ಲಿ ಸ್ಥಾಪಿಸಿ, ಅದು ಇಬ್ರಾಹೀಮರದ್ದು ಎಂದು ಘೋಷಿಸಿದರು. ಇದು ತಮಗಾಗಿ ಶಿಲಾಮೂರ್ತಿಯನ್ನು ಕಟ್ಟಿದ ಆ ಮನುಷ್ಯನನ್ನು ಗೌರವಿಸುವ ಸಲುವಾಗಿದೆ ಎಂದು ಅವರು ಹೇಳುತ್ತಾರೆ. ವಿಧ್ಯುಕ್ತ ಪ್ರಾರ್ಥನೆಯ ಮೂಲಕ ಈ ಕಲ್ಲಿನ ಮನೆಯನ್ನು ಆರಾಧಿಸಿದ ಮೊದಲ ಮಾನವನು ಇಬ್ರಾಹೀಮರಾಗಿದ್ದಾರೆಂದು ಅವರು ಹೇಳುತ್ತಾರೆ. ಅವರ ಮಸೀದಿಯಲ್ಲಿರುವ ಆ ಕಲ್ಲಿನ ವಿಗ್ರಹದ ಮುಂದೆ ಸ್ಥಾಪಿಸಲಾದ, ಒಂದು ಚಿನ್ನದ ಲೇಪ ಹಚ್ಚಿದ ಗೂಡಿನೊಳಗೆ ಇರಿಸಲ್ಪಟ್ಟಂತಹ ಈ ತಾಮ್ರದ ಹೆಜ್ಜೆಗುರುತುಗಳು, ಇಬ್ರಾಹೀಮರ ದರ್ಜೆಯ ಅಥವಾ ನಿಲುವಿನ *(ಮಕಾಮಿ ಇಬ್ರಾಹೀಮ್)* ಸಂಕೇತವಾಗಿದೆ ಎಂದು ಧಾರ್ಮಿಕರು ಹೇಳುತ್ತಾರೆ.

ನಂತರ, ಬದ್ಧರಾದ ಇಬ್ರಾಹೀಮರು (ಅರಬಿಯಲ್ಲಿ - *ಇಬ್ರಾಹೀಮ ಮುಸಲ್ಲನ್*) ಎಂಬುವುದು, ಪ್ರಾರ್ಥನೆಯ *ಸ್ಥಳವನ್ನು* ಸೂಚಿಸುತ್ತದೆ ಎಂದು ಹೇಳುತ್ತಾರೆ. ಸಹಜವಾಗಿ, ಅದು ಅರಬರ ವಿಶೇಷ ಪೂಜಾ ಸ್ಥಳವಾಗಿದೆ.

ಇಂತಹ ಮುಟ್ಠಾಳತನದ ಸ್ವರೂಪವು, *"ಸತ್ಯನಿಷೇಧದಲ್ಲಿ ಮತ್ತು ಕಪಟತನದಲ್ಲಿ ಕಠೋರರು"* ಎಂದು ಅಲ್ಲಾಹನು ಘೋಷಿಸಿದ ಜನಾಂಗವು ಗ್ರಂಥವನ್ನು ತಿರುಚಿದ ಪರಿಣಾಮವಾಗಿ ಸಂಭವಿಸಿದೆ.

ಇಬ್ರಾಹೀಮರ ದರ್ಜೆಯ ಮಹತ್ವ

ಈ ಮನುಷ್ಯನ ಮಹತ್ವವನ್ನು ಕುರ್‌ಆನಿನ ವಾಕ್ಯವೃಂದಗಳಲ್ಲಿ ನೋಡೋಣ.

> ಉತ್ತಮ ಕಾರ್ಯಗಳನ್ನು ಮಾಡುತ್ತಾ, ಶಾಂತಿಯುತವಾಗಿ ಅಲ್ಲಾಹನಿಗೆ ನಿಷ್ಠರಾದ ಮತ್ತು ಏಕದೇವ ವಿಶ್ವಾಸಿಯಾದ ಇಬ್ರಾಹೀಮರ ತತ್ವವನ್ನು ಅನುಸರಿಸುವವನಿಗಿಂತ ಉತ್ತಮವಾದ ಜೀವನ ಪದ್ಧತಿ ಇನ್ನಾರದ್ದಾಗಿರಲು ಸಾಧ್ಯ? ಅಲ್ಲಾಹನು ಇಬ್ರಾಹೀಮರನ್ನು ತನ್ನ ಆತ್ಮೀಯ ಗೆಳೆಯನನ್ನಾಗಿಸಿದ್ದಾನೆ. (4:125)
>
> ವಾಸ್ತವದಲ್ಲಿ, ಇಬ್ರಾಹೀಮರು ಸ್ವಯಂ ಒಂದು ಸಮುದಾಯವಾಗಿದ್ದರು. ಅಲ್ಲಾಹನಿಗೆ ನಿಷ್ಠಾವಂತರಾಗಿ ಮತ್ತು ಏಕದೇವ ವಿಶ್ವಾಸಿಯಾಗಿ ಇದ್ದರು. ಅವರು ಮೂರ್ತಿ ಆರಾಧಕರಲ್ಲಾಗಿರಲಿಲ್ಲ. ಅವರು ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸುವವರಾಗಿದ್ದರು. ಅಲ್ಲಾಹನು ಅವರನ್ನು ಸನ್ಮಾರ್ಗಕ್ಕೆ ಮಾರ್ಗದರ್ಶನ ಮಾಡಿದನು. ನಾವು ಅವರಿಗೆ ಈ ಜೀವನದಲ್ಲಿ ಒಳ್ಳೆಯತನವನ್ನು ದಯಪಾಲಿಸಿದೆವು ಮತ್ತು ಮುಂದಿನ ಲೋಕದಲ್ಲಿ ಅವರು ನಿಶ್ಚಯವಾಗಿಯೂ ಸಜ್ಜನರಲ್ಲಾಗಿರುವರು. (16:120-122)
>
> ತನ್ನನ್ನು ತಾನೇ ಮುರ್ಖತನದಲ್ಲಿ ಸಿಲುಕಿಸಿಕೊಂಡಾತನ ಹೊರತು, ಇಬ್ರಾಹೀಮರ ಸಿದ್ಧಾಂತವನ್ನು ತಿರಸ್ಕರಿಸುವವನಾರು? ಈ ಲೋಕದಲ್ಲೂ ಮತ್ತು ಇನ್ನು ಮುಂದಿನ ಲೋಕದಲ್ಲೂ ನಾವು ಅವರನ್ನು ಆಯ್ಕೆ ಮಾಡಿದ್ದೇವೆ. ತನ್ನ ಪ್ರಭು ಅವರೊಡನೆ, "ಶಾಂತಿವಂತನಾಗು" ಎಂದಾಗ, ಅವರು ತಕ್ಷಣ "ವಿಶ್ವನೊಡೆಯನಿಗೆ ನಾನು ಶಾಂತಿವಂತನಾಗಿದ್ದೇನೆ" ಎಂದು ಹೇಳಿದರು (2:130-131)
>
> ಇಬ್ರಾಹೀಮರನ್ನು ಅವರ ಪ್ರಭು ಕೆಲವು ಪದಗಳೊಂದಿಗೆ ಪರೀಕ್ಷಿಸಿದಾಗ, ಅವರು ಅವುಗಳನ್ನೆಲ್ಲಾ ಕಾರ್ಯಾನ್ವಿತಗೊಳಿಸಿದರು. ಅಲ್ಲಾಹನು ನಂತರ "ನಾನು ನಿನ್ನನ್ನು ಸರ್ವ ಜನರ ಮುಖಂಡನನ್ನಾಗಿ *(ಇಮಾಮ್)* ನೇಮಿಸುತ್ತಿದ್ದೇನೆ" ಎಂದು ಹೇಳಿದನು (2:124)
>
> ನಿಮಗೆ ಇಬ್ರಾಹೀಮರಲ್ಲಿ ಮತ್ತು ಅವರ ಸಂಗಾತಿಗಳಲ್ಲಿ ಒಂದು ಉತ್ತಮ ಆದರ್ಶವಿದೆ. ಅವರು ತಮ್ಮ ಜನಾಂಗದೊಡನೆ ಹೇಳಿದರು, "ನಾವು ನಿಮ್ಮಿಂದ ಮತ್ತು ನೀವು ಅಲ್ಲಾಹನನ್ನು ಬಿಟ್ಟು ಪೂಜಿಸುತ್ತಿರುವ ಮೂರ್ತಿಗಳಿಂದ ನಮ್ಮ ಸಂಬಂಧವನ್ನು ಕಡಿದೆವು. ನಾವು ನಿಮ್ಮನ್ನು ಧಿಕ್ಕರಿಸಿದೆವು ಮತ್ತು ನೀವು ಏಕೈಕನಾದ ಅಲ್ಲಾಹನ ಮೇಲೆ ವಿಶ್ವಾಸವಿರಿಸುವ ತನಕ ನಮ್ಮ ನಿಮ್ಮೊಳಗೆ ಶಾಶ್ವತವಾಗಿ ದ್ವೇಷ ಮತ್ತು ವೈರತ್ವವನ್ನು ಪ್ರಕಟಗೊಂಡಿದೆ." (60:4)

ಇಬ್ರಾಹೀಮರು ಅಲ್ಲಾಹನ ಕಾನೂನುಗಳನ್ನು ಪಾಲಿಸುವ ತನ್ನ ಬದ್ಧತೆಯಲ್ಲಿ ಪ್ರಾಮಾಣಿಕರಾಗಿದ್ದರು ಮತ್ತು ಮೂರ್ತಿ ಆರಾಧನೆಯನ್ನು ತನ್ನ ಶತ್ರುವೆಂದು ಪರಿಗಣಿಸಿದ್ದರು. ಜನರನ್ನು ಯಾವುದೇ ಮಧ್ಯವರ್ತಿಗಳಿಲ್ಲದೆ

ಅಲ್ಲಾಹನ ಜೊತೆಗೆ ಸಂಬಂಧಿಸಿಕೊಡುವುದು ಇಬ್ರಾಹೀಮರ ಧ್ಯೇಯವಾಗಿತ್ತು. ಅಲ್ಲಾಹನು ಇಬ್ರಾಹೀಮರನ್ನು ವಿಧ್ಯುಕ್ತ ಪ್ರಾರ್ಥನೆ ಮತ್ತು ಆರಾಧನೆಯನ್ನು ಮುನ್ನಡೆಸಲು *ಇಮಾಮ್* ಆಗಿ ನೇಮಿಸಲಿಲ್ಲ. ಕೇವಲ ಅಲ್ಲಾಹನನ್ನು ಸೇವೆ ಮಾಡಲು ಬದ್ಧರಾದ ವ್ಯಕ್ತಿಯ ಉದಾಹರಣೆಯಾಗಿ ಅವರನ್ನು ನೇಮಿಸಲಾಗಿತ್ತು. ಕುರ್‌ಆನಿನ ಸನ್ನಿವೇಶದಲ್ಲಿ, *ಇಮಾಮ್* ಎಂಬ ಪದವು 'ಅಲ್ಲಾಹನ ವ್ಯವಸ್ಥೆಯಲ್ಲಿ ನಿರ್ಬಂಧಗಳ ಮಿತಿಗಳನ್ನು ಗಮನಿಸುವುದರ ಮೂಲಕ, ಜನರನ್ನು ಸಾಮೂಹಿಕ ಯೋಗಕ್ಷೇಮದ ಒಂದು ಸ್ಥಿತಿಯ ಕಡೆಗೆ, ಅವರ ಯುಕ್ತಿಯನ್ನು ಉತ್ತೇಜಿಸುತ್ತಾ ಮುನ್ನಡೆಸಲು ಸಾಧ್ಯವಿರುವಂತಹ ಒಬ್ಬ ಸ್ವತಂತ್ರ ಮತ್ತು ಪ್ರಗತಿಪರ ನಾಯಕ' ಎಂಬ ಅರ್ಥವನ್ನು ಮಾತ್ರ ನೀಡುತ್ತದೆ. ಆ ನಾಯಕನು ತನ್ನ ಯುಕ್ತಿ ಅಥವಾ ಸಾಮರ್ಥ್ಯದಿಂದ ಜನರ ಮೇಲೆ ದೃಢವಾದ ಪ್ರಭಾವನ್ನು ಬೀರಲು ಸಾಧ್ಯವಿರುವವನಾಗಿರುತ್ತಾನೆ.

ಇಬ್ರಾಹೀಮರು ತಮ್ಮ ಸಂತತಿಯನ್ನು ಒಂದು ಬಂಜರು ಭೂಮಿಯಲ್ಲಿ ಅಭಿವೃದ್ಧಿಹೊಂದುವಂತೆ ಮುನ್ನಡೆಸಿದರು, ಹಾಗೂ ಅವರು ಅದನ್ನು ಫಲಪ್ರದಗೊಳಿಸಿದರು. ಅವರು ಎಲ್ಲಾ ರೀತಿಯ ಮೂರ್ತಿ ಆರಾಧನೆ ಮತ್ತು ಆಚರಣೆಗಳಿಗೆ ವಿರುದ್ಧವಾಗಿದ್ದರು ಮತ್ತು ಜನರನ್ನು ಧಾರ್ಮಿಕ ಹಾಗೂ ಮತೀಯ ಸಿದ್ಧಾಂತದ ಬಂಧನದಿಂದ ವಿಮುಕ್ತಗೊಳಿಸಲು ಬಯಸಿದ್ದರು. ಅವರು ಮೂರ್ತಿಪೂಜೆಯ ವಿರುದ್ಧ ನಿಲುವು ತೆಗೆದುಕೊಳ್ಳುವ ಸಲುವಾಗಿ, ತನ್ನ ಜೀವನವನ್ನೂ ತ್ಯಾಗ ಮಾಡಲು ತಯಾರಾಗಿದ್ದರು. ಆದರೆ, ಈ ಪ್ರಕ್ರಿಯೆಯನ್ನು ತಲೆಕೆಳಗೆ ಮಾಡಿದ ಅರಬೀ ಸಂಸ್ಕೃತಿಯನ್ನು ಇಂದು ನಾವು ಕಾಣುತ್ತಿದ್ದೇವೆ.

ಕುತಂತ್ರಗಳನ್ನು ಬಲಪಡಿಸುವ ಕಟ್ಟು ಕಥೆಗಳು

ಇಬ್ರಾಹೀಮರು ಎಲ್ಲಿ ಜನಿಸಿದರು ಹಾಗೂ ಎಲ್ಲಿ ಬೆಳೆದರು ಎಂದು ಕುರ್‌ಆನ್ ಹೇಳುವುದಿಲ್ಲ. ಆದರೇ, ತೌರಾತ್ ಮತ್ತು ಇಂಜೀಲ್ ಅವರ ನಂತರ ದೀರ್ಘಕಾಲದ ಬಳಿಕವೇ ಅವತೀರ್ಣಗೊಂಡಿವೆ ಎಂದು ಹೇಳಿದೆ. ಮುಹಮ್ಮದರಿಗೆ ಮುಂಚಿತವಾಗಿ ಯಾವುದೇ ಸಂದೇಶವಾಹಕರನ್ನು ಅಥವಾ ಪ್ರವಾದಿಗಳನ್ನು ಅರಬೀ ಜನಾಂಗಕ್ಕೆ ಕಳುಹಿಸಲಿಲ್ಲ ಎಂದು ಕುರ್‌ಆನ್ ಅದೇ ಸಮಯದಲ್ಲಿ ಸ್ಪಷ್ಟಪಡಿಸಿದೆ. ಹೀಗಾಗಿ, ಇಬ್ರಾಹೀಮರು ಇಸ್ಮಾಯೀಲರ ಜೊತೆ ಮಕ್ಕಾಗೆ ಹೋಗಿರಲೇ ಇಲ್ಲ ಎಂಬುವುದನ್ನು ಸರಳ ವಿವೇಚನೆಯು ಸಾರುತ್ತದೆ *(ಉಮ್ರಾ ಮತ್ತು ಹಜ್ಜಿನ ನಿಯಮಗಳ ಭಾಗವನ್ನು ಓದಿ)*. ಈ ಸರಳ ಅರಿವಿನ ಜೊತೆಗೆ, ಧಾರ್ಮಿಕರು ನಮ್ಮನ್ನು ನಂಬಿಸಲು ಹೆಣೆದಿರುವ ಸಂಪೂರ್ಣ ಹುಸಿ-ನಂಬಿಕೆಯು ಧೂಳು ಸೇರುತ್ತದೆ.

ಇಬ್ರಾಹೀಮರು ತನ್ನ ಪತ್ನಿ ಮತ್ತು ಮಗ ಇಸ್ಮಾಯೀಲರ ಜೊತೆ ಅರಬಿ ಮಣ್ಣಿನ ಮೇಲೆ ಪ್ರಯಾಣಿಸುತ್ತಿದ್ದರು ಎಂದು ಧಾರ್ಮಿಕರು ವಾದಿಸುತ್ತಾರೆ. ಅವರು ತನ್ನ ಪತ್ನಿ ಮತ್ತು ಮಗುವನ್ನು ಮರುಭೂಮಿಯ ಮಧ್ಯದಲ್ಲಿ ಕೈಬಿಟ್ಟು ದೂರ ಹೋದರು ಎಂದು ಅವರು ಹೇಳುತ್ತಾರೆ – ಇದು ಅಲ್ಲಾಹನು ನೇಮಕ ಮಾಡಿರುವ ಜನರ 'ಇಮಾಮಿ'ಗೆ ಸೂಕ್ತವಾದ ಗುಣವಲ್ಲ.

ಕಥೆಯು ಹೀಗೆ ಮುಂದುವರಿಯುತ್ತದೆ: ಇಬ್ರಾಹೀಮರ ಮಗು ಅಳುತ್ತಿರುವಾಗ, ಅದರ ತಾಯಿಯು ಅದನ್ನು ಮರುಭೂಮಿಯಲ್ಲಿ ಬಿಟ್ಟು, ಎರಡು ಬೆಟ್ಟಗಳ ಶಿಖರಗಳ ನಡುವೆ ಎಡಗಡೆ ಮತ್ತು ಬಲಗಡೆಗೆ ಓಡಲಾರಂಭಿಸಿದರು. ಮಗು ನೆಲದ ಮೇಲೆ ತನ್ನ ಕಾಲುಗಳನ್ನು ಹೊಡೆಯುತ್ತಿರುವಾಗ, ಇದ್ದಕ್ಕಿದ್ದಂತೆ ನೆಲದಿಂದ ನೀರು ಚಿಮ್ಮಿ ಹರಿಯಲಾರಂಭಿಸಿತು.

ಧಾರ್ಮಿಕರು ಈ ಸ್ಥಳವನ್ನು *ಸಫಾ* ಮತ್ತು *ಮರ್ವಾ* ಎಂದು ಹೆಸರಿಸಿದ್ದಾರೆ - ವಾಸ್ತವವಾಗಿ ಕಲ್ಲುಬಂಡೆಗಳ ಇಂತಹ ಬಹಿರ್ಗತ ಶಿಲಾಸ್ತರ ದೇವತೆಗಳು, ಈ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಂಡುಬರುತ್ತದೆ. ಅರಬರಿಗೆ ಕಲ್ಲುಬಂಡೆಗಳನ್ನು ಪೂಜಿಸುವುದೆಂದರೆ ಬಹಳ ಪ್ರಿಯಕರವಾದ ವಿಷಯವಾಗಿದೆ ಎಂದು ವಿಶ್ವದ ಮುಸ್ಲಿಮರಲ್ಲಿ ಅನೇಕರಿಗೆ ತಿಳಿದಿಲ್ಲ.

ಇಂದು, ಚೌಕ ಕಲ್ಲು ಬಂಡೆಯ ಮೂರ್ತಿಗೆ ಗೌರವಾರ್ಪಣೆಯಾದ ತೀರ್ಥಯಾತ್ರೆಯ ಸಂದರ್ಭದಲ್ಲಿ, ಅವುಗಳ ನಡುವೆ ಏಳು ಬಾರಿ ಕಡ್ಡಾಯವಾಗಿ ಸಂಚರಿಸುವ ಮೂಲಕ, ಈ ಎರಡು ಪರ್ವತಗಳ ಆರಾಧನೆಯನ್ನು ಧಾರ್ಮಿಕರು ಮುಸ್ಲಿಮರಿಂದ ಮಾಡಿಸುತ್ತಾರೆ. ಅವರು ಈ ವಿಧಿಯನ್ನು *ಶಾಎ* ಎಂದು ಕರೆಯುತ್ತಾರೆ - ಇದು ಪ್ರಾಚೀನ ಅನಾಚಾರಿಕ ಅರಬರ ಮತ್ತೊಂದು ಧಾರ್ಮಿಕ ವಿಧಿಯಾಗಿದೆ. ಈ ವಿಚಿತ್ರ ಪದವು ಕುರ್‌ಆನಿನಲ್ಲಿ ಎಲ್ಲಿಯೂ ಕಂಡುಬಂದಿಲ್ಲ ಎಂಬುವುದು ಗಮನಾರ್ಹವಾಗಿದೆ.

ನೆಲದಿಂದ ಹೊರಚಿಮ್ಮಿದ ನೀರು ಪವಿತ್ರವಾದುದಾಗಿದೆ ಎಂದು ಹೇಳುತ್ತಾರೆ ಮತ್ತು ಇದನ್ನು *ಝಮ್-ಝಮ್* ನೀರು ಎಂದು ಕರೆಯುತ್ತಾರೆ. ಕುರ್‌ಆನ್ ನಮಗೆ ಇವು ಯಾವುದನ್ನೂ ಕಲಿಸಿಕೊಡಲಿಲ್ಲ. ಇಂದು, ಈ ಚದರಗೃಹ ಮೂರ್ತಿಯ ಅಡಿಭಾಗದಲ್ಲಿ ಅಳವಡಿಸಲಾದ ನೀರನ್ನು ಎಲೆಯುವ ಯಂತ್ರವು, ನಗರದ ಇತರ ಭಾಗಗಳಿಂದ ನೀರನ್ನು ಸೆಲೆದು, 'ರಿವರ್ಸ್ ಓಸ್ಮೋಸಿಸ್' ಎಂಬ ವಿಧಾನದ ಮೂಲಕ ಶುದ್ಧೀಕರಿಸಿ, ವ್ಯವಸ್ಥಿತವಾಗಿ ಈ ಮಸೀದಿಗೆ ನೀರನ್ನು ಪೂರೈಕೆ ಮಾಡುವುದನ್ನು ನಾವು ನೋಡಬಹುದು.

ಧಾರ್ಮಿಕರು ಮತ್ತೊಂದು ಕಥೆಯೊಂದಿಗೆ ತಮ್ಮ ವಂಚನೆಯನ್ನು ಮುಂದುವರಿಸುತ್ತಾರೆ. ನೀರು ಚಿಮ್ಮಿ ಹರಿದ ಆ ಸ್ಥಾನದಲ್ಲೇ, ಇಬ್ರಾಹೀಮರು ಅಲ್ಲಾಹನ ಮನೆಯನ್ನು ಕಟ್ಟಿದರು ಎಂದು ಹೇಳಲಾಗಿದೆ. ಈ ಕಾಲ್ಪನಿಕ ಕಥೆಯನ್ನು ಬಲಪಡಿಸಲು 2:125 ಮತ್ತು 22:26 ವಚನಗಳನ್ನು ಅವರು ಭ್ರಷ್ಟಗೊಳಿಸಿದರು. ಅರಬೀ ಧರ್ಮದ ಜೀವನ ಮತ್ತು ಮರಣವು, ವಿರೂಪಗೊಳಿಸಲಾದ 2:125 ರನ್ನು ಓದುವುದರ ಮೇಲೆ ಅವಲಂಬಿಸಿದೆ. **ಸತ್ಯವು ಈಗ ಬಯಲಾಗದಿದ್ದರೂ, ಆದಷ್ಟು ಬೇಗನೇ ಅಥವಾ ವಿಳಂಬವಾಗಿ ಜನರು ತಿಳಿದುಕೊಳ್ಳಲಿದ್ದಾರೆ. ಅಲ್ಲಾಹನ ವ್ಯವಸ್ಥೆಯು ಎಂದಿಗೂ ಬದಲಾಯಿಸಲು ಸಾಧ್ಯವಿಲ್ಲ ಮತ್ತು ಸತ್ಯ ಯಾವಾಗಲೂ ಪ್ರಚಲಿತವಿರುತ್ತದೆ.**

2:125 ಮತ್ತು 22:26 ವಚನಗಳನ್ನು ಓದಿದಾಗ ನಮಗೆ ಕಂಡುಬರುವುದು ಏನೆಂದರೆ:

> *ವ ಅ'ಇದ್ನಾ ಇಲಾ ಇಬ್ರಾಹೀಮ ವ ಇಸ್ಮಾಯೀಲ ಅನ್ ಥ್ಥಹ್ಹಿರಾ <u>ಬೈತಿಯ</u> <u>ಲಿಥ್ವಾಇಫೀನ</u> ವಲ್ <u>ಆಕಿಫೀನ</u> ವ-<u>ರ್ರುಕ್ಕ-ಇ-ಸ್ಸುಜೂದ್.* (2:125)*

ಜನಸಮೂಹಕ್ಕಾಗಿ ಮತ್ತು ನಿಷ್ಠಾವಂತರಿಗಾಗಿ ಮತ್ತು ವಿನಮ್ರವಾಗಿ ಸಮ್ಮತಿಸುವವರಿಗಾಗಿ, ನನ್ನ ವ್ಯವಸ್ಥೆಯನ್ನು ಶುದ್ಧೀಕರಿಸಲು ನಾವು ಇಬ್ರಾಹೀಮರಿಗೆ ಮತ್ತು ಇಸ್ಮಾಯೀಲರಿಗೆ ಸೂಚಿಸಿದೆವು (2:125)

ವ-ಇಥ್ ಬವ್ವ'ನಾ ಲಿ-ಇಬ್ರಾಹೀಮ ಮಕಾನಲ್ ಬೈತಿ ಅನ್ ಲಾ ತುಶ್ರಿಕ್ ಬೀ ಶೈಅನ್ ವ ಥ್ಹಹ್ಹಿರ್ ಬೈತಿಯ ಲಿ-ಥ್ವಾಇಫೀನ ವಲ್ ಖಾಇಮೀನ ವ-ರುಕ್ಕ-ಇ-ಸ್ಸುಜೂದ್. (22:26)

ಮತ್ತು ನಾವು ಇಬ್ರಾಹೀಮರಿಗೆ ವ್ಯವಸ್ಥೆಯಲ್ಲಿ ಒಂದು ಸ್ಥಾನವನ್ನು ನೇಮಿಸಿದಾಗ: ನೀವು ನನ್ನೊಂದಿಗೆ ಯಾವುದನ್ನೂ ಸಂಯೋಜಿಸಬೇಡಿರಿ ಮತ್ತು ನನ್ನ ವ್ಯವಸ್ಥೆಯನ್ನು ಜನಸಮೂಹಕ್ಕಾಗಿ ಮತ್ತು ಬೆಂಬಲಿಸುವವರಿಗಾಗಿ ಮತ್ತು ವಿನಮ್ರವಾಗಿ ಸಮ್ಮತಿಸುವವರಿಗಾಗಿ ಶುದ್ಧೀಕರಿಸಿರಿ. (22:26)

2:125 ರಲ್ಲಿ ಅನೇಕ ಪದಗಳು ಭ್ರಷ್ಟಗೊಳಿಸಲಾಗಿದೆಯಾದರೂ ಸಹ, 22:26 ರಲ್ಲಿ ಪುನರಾವರ್ತನೆಯಾದವುಗಳನ್ನು ತೋರಿಸಲು ಈ ವಚನಗಳ ಕೇವಲ ಮೂರು ಪದಗಳನ್ನು ಮಾತ್ರ ನಾನು ಎತ್ತಿ ತೋರಿಸುತ್ತೇನೆ. ಈ ಪದಗಳು ಉದ್ದೇಶಿಸಿರುವ ನೈಜ್ಯ ಅರ್ಥವನ್ನು ಧಾರ್ಮಿಕರು ಹೇಗೆ ಬದಲಿಸಿದರು ಎಂಬ ವಾಸ್ತವವನ್ನು ನಾನು ಮುಂದಿನ ಎರಡು ಭಾಗಗಳಲ್ಲಿ ಪ್ರದರ್ಶಿಸುತ್ತೇನೆ. ಇತರ ವಚನಗಳಲ್ಲಿ ಅದೇ ಪದಗಳ ಬಳಕೆಯನ್ನು ಅವುಗಳ ಜೊತೆ ಹೋಲಿಸುವುದರ ಮೂಲಕ ನಾನು ಇದನ್ನು ವಿವರಿಸುತ್ತೇನೆ. ಮೊದಲು ಇವುಗಳ ಬಗ್ಗೆ ಪ್ರಾರ್ಥಮಿಕವಾಗಿ ತಿಳಿದುಕೊಳ್ಳಬೇಕಾಗಿರುವುದನ್ನು ನೋಡೋಣ. ಅರಬೀ ಧರ್ಮದ ಪ್ರಕಾರ:

1. ಈ ಎರಡು ವಚನಗಳಲ್ಲಿರುವ *ಬೈತಿಯ* ಎಂಬ ಪದವು ಅಲ್ಲಾಹನ ಮನೆಯ ಸಂಕೇತವಾಗಿದೆ. ಅಂದರೆ, ಮಕ್ಕಾದಲ್ಲಿರುವ 627 ಚದರ ಅಡಿಯ ಕಲ್ಲಿನ ಮನೆಯು ಅಲ್ಲಾಹನಿಗೆ ಸೇರಿದ್ದಾಗಿದೆ ಹಾಗೂ ಅದು ಅವನು ವಾಸಿಸುವ ಒಂದು ಸ್ಥಳವಾಗಿದೆ.

2. ಈ ಎರಡು ವಚನಗಳಲ್ಲಿರುವ *ಲಿ-ಥ್ವಾಇಫೀನ* ಎಂಬ ಪದದ ಅರ್ಥವು *ಅದರ ಸುತ್ತಲೂ ನಡೆಯುವವರು* ಎಂದಾಗಿದೆ. ಅಂದರೆ ಅದರ (ಚದರ ಗೃಹದ) ಸುತ್ತಲೂ ಗಡಿಯಾರದ ಮುಳ್ಳು ತಿರುಗುವ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಾರೆ.

3. ಈ ಎರಡು ವಚನಗಳಲ್ಲಿರುವ *ರುಕ್ಕ-ಇ-ಸ್ಸುಜೂದ್* ಎಂಬ ಪದಗಳ ಅರ್ಥವು *ಬಾಗುವವರು ಮತ್ತು ಸಾಷ್ಟಾಂಗವೆಸಗುವವರು* ಎಂದಾಗಿದೆ. ಅಲ್ಲಾಹನ ಜನರಲ್ಲಿ ಸೇರಬೇಕಾದರೆ, ನಿಷ್ಠಾವಂತರು ಇವುಗಳನ್ನು ತಮ್ಮ ಪ್ರಾರ್ಥನೆಗಳಲ್ಲಿ ಅಳವಡಿಸಬೇಕಾಗಿದೆ.

ಈ ಸಮರ್ಥನೆಗಳನ್ನು ದೃಢೀಕರಿಸುವ ಯಾವುದೇ ವಚನಗಳು ಕುರ್'ಆನಿನಲ್ಲಿಲ್ಲ. ಈ ವಿಕೃತಿಯು, ವಿಶ್ವದ ಶತಕೋಟಿ ಜನರ ಜೀವನದ ಮೇಲೆ ಭಾರೀ ಪ್ರಭಾವವನ್ನು ಸೃಷ್ಟಿಸಿದೆ. ಮುಸ್ಲಿಮರು ತಮ್ಮ ಪ್ರಜ್ಞೆಯ ಕಡೆಗೆ ಮರಳಬೇಕು ಹಾಗೂ ಈ ಕುತಂತ್ರದ ಗಂಭೀರತೆಯನ್ನು ಅರಿಯಬೇಕಾಗಿದೆ ಮತ್ತು ಅಲ್ಲಾಹನ ಗ್ರಂಥದ ಬಗ್ಗೆ

ಅಲಕ್ಷರಾಗಿರುದಕ್ಕೆ ಹಾಗೂ ಧಾರ್ಮಿಕರನ್ನು ಕಣ್ಣುಮುಚ್ಚಿ ಅನುಸರಿಸುವುದಕ್ಕಾಗಿ ತೆರಬೇಕಾದ ಬೆಲೆಯನ್ನು ತಿಳಿದುಕೊಳ್ಳಬೇಕಾಗಿದೆ. ಇದು ನನ್ನ ಇಚ್ಛೆಯಾಗಿದೆ. ಬಹುಶಃ ಹೃದಯದ ಕುರುಡುತನದ ಬಗ್ಗೆ ಕುರ್‌ಆನ್ ಏನು ಹೇಳುತ್ತದೆ ಎಂದು ಅವರು ವಿಮರ್ಶಿಸಬೇಕು:

> ಕುರುಡಾಗುವುದು ಕಣ್ಣುಗಳಲ್ಲ, ಬದಲಿಗೆ ಕುರುಡಾಗುವುದು ಎದೆಯೊಳಗಿರುವ ಹೃದಯವಾಗಿದೆ. (22:46)

ಪ್ರತಿಯೊಂದು ವ್ಯಕ್ತಿಗೂ, ತನ್ನ ಜೀವನವನ್ನು ಪ್ರಭಾವಿಸುವ ಪ್ರತಿಯೊಂದು ವಿಷಯಗಳನ್ನು ಪ್ರಶ್ನಿಸುವ ಸ್ವಾತಂತ್ರ್ಯವನ್ನು ನೀಡಲಾಗಿದೆ. ಅದು ಅಲ್ಲಾಹನು ಎಲ್ಲರಿಗೂ ನೀಡಿರುವ ಮೂಲಭೂತ ಹಕ್ಕಾಗಿದೆ. ಧಾರ್ಮಿಕರು ತಮ್ಮ ಬೋಧನೆಗಳನ್ನು ಪಾಲಿಸುವವರಿಂದ ಈ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಾರೆ. ಎಲ್ಲಿಯವರೆಗೆ ಮುಸ್ಲಿಮರು ಅಲ್ಲಾಹನು ತಮಗೆ ನೀಡಿರುವ ವಿಶೇಷ ಕೊಡುಗೆಯಾದ ಈ ಸ್ವಾತಂತ್ರ್ಯವನ್ನು ಉಪಯೋಗಿಸದೆ, ತಮ್ಮ ಧಾರ್ಮಿಕ ಪ್ರವೀಣರ ಅಧೀನದಲ್ಲಿ ಮುಂದುವರೆಯುತ್ತಾರೋ – ಅಲ್ಲಿಯವರೆಗೆ ಅವರು ತಮ್ಮ ಇಂದಿನ ಅವಸ್ಥೆಯಲ್ಲೇ ಉಳಿಯಲಿದ್ದಾರೆ. ಪ್ರಶ್ನೆಯನ್ನು ಕೇಳುವುದರಲ್ಲಿ ಏನು ತಪ್ಪಿದೆ? ಅದೊಂದು ಅಪರಾಧವೇ? ಯಾವುದೇ ಒಬ್ಬ ವ್ಯಕ್ತಿಯು, ಪ್ರಪಂಚದಲ್ಲಿನ ಅತಿ ದೊಡ್ಡ ರಬ್ಬಿ, ಪೋಪ್, ಆಯತುಲ್ಲಾಗಳು, ಪಂಡಿತರು, ಆಧ್ಯಾತ್ಮಿಕ ನಾಯಕರು, ಸಂತರು, ಪುರೋಹಿತರು, ಸನ್ಯಾಸಿಗಳು ಮತ್ತು ಮುಲ್ಲಾಗಳನ್ನು, ವಸ್ತುನಿಷ್ಠೆಯ ಪ್ರಶ್ನೆಗಳೊಂದಿಗೆ ಎದುರಿಸಿದರೆ, ಅವರಲ್ಲಿ ಯಾವೊಬ್ಬನಿಗೂ ಅದನ್ನು ನಿಭಾಯಿಸಲು ಸಾಧ್ಯವಿಲ್ಲ. ನಿಮ್ಮ ಗ್ರಂಥಗಳನ್ನು ವಿಮರ್ಶಾತ್ಮಕವಾಗಿ ಓದಿಕೊಂಡು, ಇದನ್ನು ಇಂದೇ ಪ್ರಯತ್ನಿಸಿ ನೋಡಿ!

ಪ್ರಾಮಾಣಿಕ ಮುಸ್ಲಿಮರಿಗೆ, ಕುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ:

> ಅವನು <u>ಸಂಪೂರ್ಣ ವಿವರಗಳನ್ನೊಳಗೊಂಡ ಗ್ರಂಥವನ್ನು</u> ನಿಮ್ಮ ಕಡೆಗೆ ಅವತೀರ್ಣಗೊಳಿಸಿರುವಾಗ, <u>ಕಾನೂನಿನ ಮೂಲವಾಗಿ ಅಲ್ಲಾಹನನ್ನು ಹೊರತು ಪಡಿಸಿ ಬೇರೆ ಯಾವುದನ್ನಾದರೂ ನಾನು ಹುಡುಕಬೇಕೆ?</u> ಹಿಂದಿನ ಗ್ರಂಥವನ್ನು ನೀಡಲ್ಪಟ್ಟವರು ಸಹ, ಇದು ನಿಮ್ಮ ಪ್ರಭುವಿನಿಂದ ಅವತರಿಸಲ್ಪಟ್ಟಿರುವುದೆಂದು ತಿಳಿದಿರುತ್ತಾರೆ. ಆದ್ದರಿಂದ ಸಂಶಯಗ್ರಸ್ತರಾದವರಲ್ಲಿ ಆಗಬೇಡಿರಿ. (6:114)
>
> ನಿಮ್ಮ ಪ್ರಭುವಿನ ವಚನವು ಸತ್ಯ ಮತ್ತು ನ್ಯಾಯದೊಂದಿಗೆ <u>ಪರಿಪೂರ್ಣವಾಗಿದೆ</u>. ಅವನ ಆದೇಶಗಳನ್ನು ಬದಲಾವಣೆಗೊಳಿಸಲು ಸಾಧ್ಯವಿಲ್ಲ. ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ. (6:115) ನೀವು ಭೂಮಿಯ ಮೇಲಿನ ಜನರಲ್ಲಿ <u>ಬಹುಮತೀಯರನ್ನು</u> ಅನುಸರಿಸಿದರೆ - ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿ ಬಿಡುವರು. ಅವರಂತು ಕೇವಲ <u>ಗುಮಾನಿಯನ್ನನುಸರಿಸಿ ಊಹಾಪೋಹೆಗಳ</u> ಪ್ರಕಾರ ವರ್ತಿಸುತ್ತಾರೆ. (6:116)

ಮೇಲಿನ ವಚನಗಳನ್ನು ಓದಿದ ನಂತರ – ಅರಬೀ ಧರ್ಮದ ಯಾವುದೇ ಪುರೋಹಿತ ಅಥವಾ ಉಲೆಮಾಗೆ ಈ ಪ್ರಶ್ನೆಗಳನ್ನು ಕೇಳಲು ಪ್ರಯತ್ನಿಸಿರಿ – ಇಸ್ಲಾಮಿನಲ್ಲಿ ಕುರ್‌ಆನಿನ ಹೊರತಾಗಿ ಇತರ ಕಾನೂನುಗಳು ಏಕೆ ಬೇಕು? ಅವರು ಕುರ್‌ಆನಿನ ಕೆಲವು ವಚನಗಳನ್ನು ಆಯ್ಕೆಮಾಡಿ ಅದನ್ನು ಸಂದರ್ಭ-ಬಾಹಿರವಾಗಿ ಉಲ್ಲೇಖಿಸಿ, '*ಅಲ್ಲಾಹನನ್ನು ಅನುಸರಿಸಿರಿ ಮತ್ತು ಸಂದೇಶವಾಹಕರನ್ನು ಅನುಸರಿಸಿರಿ*' ಎಂದೂ, ಅಲ್ಲಾಹನನ್ನು ಅನುಸರಿಸುವುದೆಂದರೆ ಕುರ್‌ಆನನ್ನು ಅನುಸರಿಸುವುದು ಹಾಗೂ ಸಂದೇಶವಾಹಕರನ್ನು ಅನುಸರಿಸುವುದೆಂದರೆ, ಸಂದೇಶವಾಹಕರ ಮರಣದ ಸುಮಾರು 250 ವರ್ಷಗಳ ನಂತರ ಪ್ರತ್ಯಕ್ಷವಾದ ತಮ್ಮ ಇಮಾಮುಗಳು ಬರೆದಂತಹ ಸಂದೇಶವಾಹಕರ ಹೇಳಿಕೆಗಳನ್ನು (ಹದೀಸ್) ಅನುಸರಿಸುವುದಾಗಿದೆ ಎಂದು ಉತ್ತರಿಸುತ್ತಾರೆ. ಈ ಇಮಾಮುಗಳು, 'ತಾವು ಈ ಕಥೆಗಳನ್ನು ಇತರರಿಂದ ಕೇಳಿದೆವು ಎಂದು ಹೇಳುವ ಜನರ ಮೂಲದಿಂದ' ಈ ಹೇಳಿಕೆಗಳನ್ನು ಸಂಗ್ರಹಿಸಿರುವೆವು ಎಂದು ಒಪ್ಪಿಕೊಳ್ಳುತ್ತಾರೆ. ಇಸ್ಲಾಮೀ ದೇಶಗಳಲ್ಲಿರುವ ಎಲ್ಲಾ *ಶರೀಯಾ* ಕಾನೂನುಗಳು, ಈ ಕುರ್‌ಆನ್-ಬಾಹಿರ ಬರಹಗಳ ಆಧಾರದಲ್ಲಿ ಹೆಣೆಯಲಾಗಿದೆ ಮತ್ತು ಇವುಗಳು ಕುರ್‌ಆನಿನಲ್ಲಿ ಎಲ್ಲಿಯೂ ಕಾಣಸಿಗದು.

ನಮ್ಮ ಸ್ವಾತಂತ್ರ್ಯವು,

ನಾವು ಯಾರು ಮತ್ತು ನಾವು ಏನಾಗಲು ಬಯಸುತ್ತೇವೆ

ಎಂಬುವುದನ್ನು ನಿರ್ಧರಿಸುತ್ತದೆ.

ನಾವು ಏನಾಗಿದ್ದೆವೋ

ಹಾಗೆಯೇ ಇರಬೇಕೆಂದೇನಿಲ್ಲ

ವಿಭಿನ್ನವಾದ ಆಯ್ಕೆಯನ್ನು ಮಾಡುವ ಜನರೇ

ಒಂದು ವಿಭಿನ್ನ ಜಗತ್ತನ್ನು ನಿರ್ಮಿಸುತ್ತಾರೆ.

ಭಾಗ ಎಂಟು

ಕಲ್ಲಿನ ಮನೆಯ ಆರಾಧನೆ

ಮುಂದಿನ ಭಾಗಗಳು ಅನೇಕ ಅರಬೀ ಪದಗಳ ವಿಶ್ಲೇಷಣೆಗೆ ಕೇಂದ್ರಿತವಾಗಿದೆ. ಈ ಪದಗಳನ್ನು ಅವುಗಳ ಉಚ್ಚಾರಣೆಯ ಧ್ವನಿಯ ಪ್ರಕಾರ ಬರೆಯಲಾಗಿದೆ. ಅರಬೀ ಭಾಷೆಯನ್ನು ಚೆನ್ನಾಗಿ ತಿಳಿದಿಲ್ಲದ ಓದುಗರು ನನ್ನೊಂದಿಗೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಂತಹ ಪದಗಳನ್ನು ಉಲ್ಲೇಖಿಸುವುದು ಬಹಳ ಮುಖ್ಯವಾಗಿದೆ ಏಕೆಂದರೆ, ಹೆಚ್ಚಿನ ಸಂದರ್ಭದಲ್ಲಿ, ಅಲ್ಲಾಹನ ಹಾಗೂ ಅವನ ಸಂದೇಶವಾಹಕರ ಶತ್ರುಗಳು, ಒಂದಕ್ಕೊಂದು ಹೋಲುವಂತಹ (ವಾಸ್ತವದಲ್ಲಿ ವಿಭಿನ್ನವಾದ) ಪದಗಳನ್ನು ತಿರುಚುತ್ತಾರೆ.

> ಅವನೇ ಈ ಗ್ರಂಥವನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿದನು. ಅವುಗಳಲ್ಲಿ ಗ್ರಂಥದ ಜೀವಾಳವಾದ ಪರಿಪೂರ್ಣಗೊಂಡ ವಚನಗಳಿವೆ ಮತ್ತು ಉಳಿದವುಗಳು ಸಮಂಜಸವಿರುವವುಗಳಾಗಿವೆ (ಹೊಂದಿಕೆಯಿರುವಂತಹುದಾಗಿದೆ). ಹೃದಯಗಳಲ್ಲಿ ಕೊಂಕುಳ್ಳವರು, ಅವುಗಳನ್ನು ಹೀನೈಸುವ ಹಾಗೂ ವ್ಯಾಖ್ಯಾನಿಸುವ ಉದ್ದೇಶದಿಂದ ಅದರಿಂದ ಸಮಂಜಸವಲ್ಲದವುಗಳ ಬೆನ್ನು ಹತ್ತುತ್ತಾರೆ. ಅವುಗಳ ಅರ್ಥವನ್ನು ಅಲ್ಲಾಹನ ಹೊರತುಪಡಿಸಿ ಬೇರಾರಿಗೂ ತಿಳಿದಿಲ್ಲ. ಜ್ಞಾನದಲ್ಲಿ ಪರಿಪಕ್ವತೆ ಹೊಂದಿದವರು, "ನಾವು ಇವುಗಳ ಬಗ್ಗೆ ವಿಶ್ವಾಸವಿರಿಸಿದ್ದೇವೆ, ಇವೆಲ್ಲವೂ ನಮ್ಮ ಪ್ರಭುವಿನ ಕಡೆಯಿಂದಲೇ ಆಗಿರುತ್ತದೆ" ಎನ್ನುತ್ತಾರೆ. ಬುದ್ಧಿಜೀವಿಗಳು ಮಾತ್ರವೇ ಇದನ್ನು ಲಕ್ಷಿಸುವರು. (3:7)

ವಚನಗಳ ಪರಿಪೂರ್ಣತೆಯು ಗ್ರಂಥದ ಜೀವಾಳವಾಗಿದೆ. ಪರಿಪೂರ್ಣವೆಂದರೆ, ನ್ಯೂನತೆ ರಹಿತವಾದುದು. ನಮಗೆ ಗ್ರಂಥದಲ್ಲಿ ಯಾವುದೇ ವ್ಯತಿರಿಕ್ತವು ಕಂಡು ಬಂದಲ್ಲಿ, ಅದು ಗ್ರಂಥದ ತಪ್ಪಲ್ಲ, ಅದು ಬಹುಶಃ ನಮ್ಮ ತಿಳುವಳಿಕೆಯಲ್ಲಿ ಕೊರತೆಯಿದೆ ಅಥವಾ ಸಂದೇಶದ ಬಗ್ಗೆಗಿನ ನಮ್ಮ ಗ್ರಹಿಕೆಯಲ್ಲಿ ಅಭಾವವಿದೆ ಎಂದು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು.

> ಇವರು ಕುರ್‌ಆನನ್ನು ಎಚ್ಚರಿಕೆಯಿಂದ ಏಕೆ ಅಧ್ಯಯನ ಮಾಡುವುದಿಲ್ಲ? ಇದು ಅಲ್ಲಾಹನ ಕಡೆಯಿಂದ ಬಂದಿರದಿದ್ದರೆ, ಅವರು ಅದರಲ್ಲಿ ಹಲವಾರು ವ್ಯತಿರಿಕ್ತಗಳನ್ನು ಕಾಣುತ್ತಿದ್ದರು. (4:82)

ಉದಾಹರಣೆಗೆ, *'ನೀವು ನನ್ನ ಹೊರತು ಇತರರ ಸೇವೆ ಮಾಡಲೇಬಾರದು'* ಎಂದು ಅಲ್ಲಾಹನು ಹೇಳಿರುವಾಗ, ಅವನ ಸೇವೆಯನ್ನು ಮಾಡುವ ಅವನ ಸಂದೇಶಕ್ಕೆ ವ್ಯತಿರಿಕ್ತವಾದ ರೀತಿಯನ್ನು ಯಾರಾದರೂ ಕಂಡುಹಿಡಿದರೆ, ಅದು ತಪ್ಪಾಗಿರಲೇಬೇಕು. ಅದು ಅರಬರಾಗಿರಲಿ ಅಥವಾ ಅನ್ಯರಾಗಿರಲಿ. ಹಾಗೆಯೇ, *'ನನ್ನ ಜೊತೆ ಯಾವುದನ್ನೂ ಸಂಯೋಜಿಸಬಾರದು'* ಎಂದು ಅಲ್ಲಾಹನು ಹೇಳಿರುವಾಗ, ನಾವು ಅದಕ್ಕೆ ವಿರುದ್ಧವಾಗಿ ಯಾವುದನ್ನೂ ಮಾಡಬಾರದು ಹಾಗೂ ಅಂತಹ ಕೆಲಸಗಳನ್ನು ಸಮರ್ಥಿಸಿಕೊಳ್ಳಲು ನೆವಣೆಗಳನ್ನು

ನೀಡಬಾರದು. ಇದು ಅರ್ಥಮಾಡಿಕೊಳ್ಳಲು ಬಹಳ ಕಷ್ಟಕರವಾದುದೇನಲ್ಲ. ಇದು ಸರಳವಾದ ಕಪ್ಪು-ಬಿಳುಪಿನಂತಹ ಹೇಳಿಕೆಯಾಗಿದೆ. "ನೀವು ಗರ್ಭಿಣಿಯೇ" ಎಂಬ ಪ್ರಶ್ನೆಗೆ "ಬರೇ ಸ್ವಲ್ಪ" ಎಂದು ತಪ್ಪಿಸಿಕೊಳ್ಳುವಂತೆ ಉತ್ತರಿಸಲು ಸಾಧ್ಯವಿಲ್ಲ. ಒಂದಾ ಹೌದು ಅಥವಾ ಅಲ್ಲ.

ಭಾಗ ಐದರಲ್ಲಿ, ವಿಧ ವಿಧವಾದ ಅರ್ಥಗಳನ್ನು ಕೊಡುವುದರ ಮೂಲಕ ಧಾರ್ಮಿಕರು ಹೇಗೆ ಸ್ವಲಾತ್ ಪದವನ್ನು ಪಲ್ಲಟ ಮಾಡುತ್ತಾರೆಂದು ನಾವು ನೋಡಿದೆವು. ಹೀಗೆ ತಮ್ಮ ಕೈಚಳಕವನ್ನು ತೋರಿಸುವಾಗ, ಅದೇ ಪದಗಳು ಕುರ್‌ಆನಿನ ಇತರ ಕಡೆಯಲ್ಲಿ ಕಾಣಿಸಿಕೊಂಡಾಗ ಅವರು ತಮ್ಮೊಳಗೇ ವಿವಾದಿಸ ತೊಡಗುತ್ತಾರೆ. ಮೇಲಿನ ವಚನವು ಅದನ್ನೇ ಹೇಳುತ್ತಿದೆ, ವೈರುಧ್ಯಗಳು ಅವನಿಂದಿರುವುದಲ್ಲ, ಇತರರಿಂದಾಗಿದೆ.

ಅಲ್ಲಾಹನ ಪದಗಳನ್ನು ವಿರೂಪಗೊಳಿಸಿಕೊಂಡು ಅರಬೀ ಧರ್ಮವನ್ನು ಸಮರ್ಥಿಸಿಕೊಳ್ಳಲು, 2:125 ವಚನವು ದುರಾದೃಷ್ಟಕರವಾಗಿ ಅರಬೀ ಧಾರ್ಮಿಕರ ಮುಖ್ಯ ನಿಶಾನೆಯಾಯಿತು. ನಾನು 2:125 ರ ಎಂಟು ಸರಳ ಪದಗಳು ಅಲ್ಲಾಹನ ಶತ್ರುಗಳಿಂದ ಹೇಗೆ ಭ್ರಷ್ಟಗೊಳಿಸಲ್ಪಟ್ಟಿದೆ ಎಂದು ಕುರ್‌ಆನಿನ ಉಲ್ಲೇಖಗಳೊಂದಿಗೆ ಸಾಬೀತು ಮಾಡುತ್ತೇನೆ.

ಈ ವಚನದಲ್ಲಿ *ಬೈತ* ಪದವು ಎರಡು ಬಾರಿ ಕಂಡುಬರುತ್ತದೆ. ಆ ಪದವನ್ನು ನಾವು ವಿಮರ್ಶಾತ್ಮಕವಾಗಿ ಪರೀಕ್ಷಿಸಿದರೆ ಮತ್ತು ಅದನ್ನು ಕುರ್‌ಆನಿನ ಇತರ ವಚನಗಳೊಂದಿಗೆ ಹೋಲಿಸಿದರೆ, ಇದರ ಅರ್ಥ - ಒಂದು ಭೌತಿಕ ಗೃಹವಾಗಿದೆ ಹಾಗೂ ಅದು ಮಕ್ಕಾದಲ್ಲಿರುವ ಕಾಬಾ ಆಗಿದೆ - ಎಂಬ ಧಾರ್ಮಿಕರ ವಾದಕ್ಕೆ ಯಾವುದೇ ಆಧಾರಗಳಿಲ್ಲ ಎಂಬುವುದು ಸ್ಪಷ್ಟವಾಗುತ್ತದೆ.

ಕೇವಲ ಈ ಒಂದು ವಚನದಲ್ಲೇ ಪರೀಕ್ಷಣೆಯ ಅಗತ್ಯವಿರುವ ಅನೇಕ ಪದಗಳಿವೆ. ಪ್ರತಿಯೊಂದನ್ನೂ ಸ್ಪಷ್ಟವಾಗಿ ಪರಿಶೀಲಿಸಬೇಕಾಗಿದೆ. ಈ ಭಾಗವು ಕೇವಲ *ಬೈತ* ಮತ್ತು *ಬೈತಿಯ* ಪದವನ್ನು ಚರ್ಚಿಸುತ್ತದೆ. ಅದೇ ವಚನದ ಇತರ ಪದಗಳನ್ನು ಮುಂದಿನ ಭಾಗದಲ್ಲಿ ವಿವರಿಸಲಾಗಿದೆ.

ಇಬ್ರಾಹೀಮರಿಗೂ ಮತ್ತು ಮಕ್ಕಾ ಎಂಬ ಸ್ಥಳಕ್ಕೂ ಯಾವುದೇ ಸಂಬಂಧವಿಲ್ಲ

ಇಬ್ರಾಹೀಮರಿಗೆ ಮಕ್ಕಾದಲ್ಲಿ ಅಲ್ಲಾಹನಿಗಾಗಿ ಒಂದು ಮನೆಯನ್ನು ಕಟ್ಟುವ ಜವಾಬ್ದಾರಿಯನ್ನು ವಹಿಸಲಾಗಿತ್ತು ಎಂಬ ಧಾರ್ಮಿಕರ ದಾವೆಯು ಸುಳ್ಳು ಎಂದು ಸಾಬೀತು ಪಡಿಸುವುದು ಸುಲಭವಾಗಿದೆ. ಮೊದಲನೆಯದಾಗಿ, ಇಬ್ರಾಹೀಮರು ಮತ್ತು ಇಸ್ಮಾಯೀಲರು ಮಕ್ಕಾಗೆ ಹೋಗಲೇ ಇಲ್ಲ ಎಂದು ತೋರಿಸಲು ಅನೇಕ ವಚನಗಳು ಕುರ್‌ಆನಿನಲ್ಲಿವೆ (ಭಾಗ ಹನ್ನೆರಡು ನೋಡಿ). ಎರಡನೆಯದಾಗಿ, ಒಂದು ವೇಳೆ ಈ ಮನೆಯು ಅಲ್ಲಾಹನ ಸೇವೆ

ಮಾಡಲು ಮಾನವಕುಲಕ್ಕೆ ಕೇಂದ್ರಬಿಂದುವಾದ ಸ್ಥಳವಾಗಿದ್ದರೆ, ಇಬ್ರಾಹೀಮರ ನಂತರದ ಎಲ್ಲಾ ಪ್ರವಾದಿಗಳು ಅಲ್ಲಿಗೆ ಹೋಗುವ ತಮ್ಮ ಕರ್ತವ್ಯವನ್ನು ಈಡೇರಿಸದೆ ವಿಫಲಗೊಂಡಿದ್ದಾರೆ ಎಂದಾಗುತ್ತದೆ. ಅತ್ಯಂತ ವಿನಾಶಕಾರಿಯಾದ ಅಂಶವೇನೆಂದರೆ - ಪರಮಾತ್ಮನಿಗೆ ಒಂದು ಮನೆಯ ಅವಶ್ಯಕತೆಯೇ ಇಲ್ಲ ಎಂಬ ಸತ್ಯಾಂಶವಾಗಿದೆ. ಈ ಕಲ್ಪನೆಯು ಹಾಸ್ಯಾಸ್ಪದವಾಗಿದೆ.

ಅರ್ಥವಿವರಣೆಯ ಪ್ರಕಾರ, ಮನೆ ಎಂದರೆ ಜನರು ವಾಸಿಸುವ ತಾಣ ಎಂದಾಗಿದೆ. ಆದಾಗ್ಯೂ, 'ಅಲ್ಲಾಹನ ಮನೆ' ಎಂಬ ಕಲ್ಪನೆಯು, ಧಾರ್ಮಿಕರು ಈ ಕೆಳಗಿನ ವಚನವನ್ನು ವಿರೂಪಗೊಳಿಸಿದ ನಂತರ ಉದ್ಭವಿಸಿರುವುದಾಗಿದೆ. ಅವರ ಪ್ರಕಾರ ಈ ವಚನದ ಅರ್ಥವು:

> ನಾವು ಆ ಮನೆಯನ್ನು ಜನರಿಗೆ ಕೇಂದ್ರ ಮತ್ತು ಶಾಂತಿಸ್ಥಾನವಾಗಿ ನಿಶ್ಚಯಿಸಿದ ಸಂದರ್ಭ. 'ಇಬ್ರಾಹೀಮರು ಆರಾಧನೆಗಾಗಿ ನಿಲ್ಲುವ ಸ್ಥಾನವನ್ನು ನೀವು ಸ್ಥಿರವಾದ ವಿಧ್ಯುಕ್ತ ಪ್ರಾರ್ಥನೆಯ ತಾಣವನ್ನಾಗಿಸಿಕೊಳ್ಳಿರಿ' ಎಂದು ನಾವು ಜನರಿಗೆ ಆಜ್ಞಾಪಿಸಿದ್ದೆವು. 'ನನ್ನ ಈ ಮನೆಯನ್ನು ಪ್ರದಕ್ಷಿಣೆ ಮಾಡುವವರಿಗಾಗಿ, ಅದರಲ್ಲಿ ತಪಶ್ಚರ್ಯೆ ನಡೆಸುವವರಿಗಾಗಿ ಮತ್ತು ಬಾಗುವವರಿಗಾಗಿ, ಸಾಷ್ಟಾಂಗವೆಸಗುವವರಿಗಾಗಿ ಶುದ್ಧಗೊಳಿಸಿರಿ' ಎಂದು ನಾವು ಇಬ್ರಾಹೀಮ್ ಮತ್ತು ಇಸ್ಮಾಯೀಲರಿಗೆ ತಾಕೀತು ಮಾಡಿದೆವು. (2:125)

ಮೂರ್ತಿ ಪೂಜೆಯ ಒಂದು ಬುಡಕಟ್ಟು ವ್ಯವಸ್ಥೆಗೆ ಸಿಂಧುತ್ವವನ್ನು ನೀಡಲು ಇದನ್ನು ಹೇಗೆ ವಿರೂಪಗೊಳಿಸಲಾಗಿದೆ ಎಂದು ನೋಡಲು, ನಾವು ಈ ವಚನವನ್ನು ತುಣುಕುಗಳಾಗಿ ಮುರಿಯುವ ಅಗತ್ಯವಿದೆ.

ಮೊದಲನೆಯದಾಗಿ ಧಾರ್ಮಿಕರು ಹೇಳುವುದೇನೆಂದರೆ:

> ಅಲ್ಲಾಹನು ಇಬ್ರಾಹೀಮರಿಗೆ *ಮನೆಯನ್ನು* ಕಾಣಿಸಿಕೊಟ್ಟನು.

ಮೇಲಿನ ವಚನದಲ್ಲಿರುವ ಈ ಹೇಳಿಕೆಯನ್ನು ತಮ್ಮ ಸ್ವಂತ ಉದ್ದೇಶಗಳಿಗಾಗಿ ಅನುಕೂಲವಾಗುವಂತೆ ಬಳಸಿಕೊಳ್ಳಲು, ಅರಬರು ಒಂದಾ ಈ ಮನೆಯನ್ನು ನಿರ್ಮಿಸಿ (ಅಥವಾ ಆಗಲೇ ಅಸ್ತಿತ್ವದಲ್ಲಿದ್ದ ಅನೇಕ ಮೂರ್ತಿಪೂಜೆಯ ಮಂದಿರಗಳಲ್ಲಿ ಇದನ್ನು ಬಳಸಿಕೊಂಡು) ಒಂದು ಮಿಥ್ಯ ಧಾರಣೆಯನ್ನು ಸೃಷ್ಟಿಸಿದರು. ಇದು ಅವರು ಪರಿವರ್ತಿಸಿದ ಧರ್ಮದ ಕೇಂದ್ರವನ್ನಾಗಿ ಮಾಡಿದರು.

ಬೈತ ಎಂಬ ಪದದ ಅರ್ಥವನ್ನು ತಿರುಚಿದ ನಂತರ ಅವರು *ಮಸಾಬತನ್* ಎಂಬ ಪದಕ್ಕೆ 'ಒಟ್ಟುಗೂಡುವ ಒಂದು ಸ್ಥಳ' ಎಂಬ ಅರ್ಥವನ್ನು ಕೊಟ್ಟರು. *ಮಸಾಬತನ್* ಎಂದರೆ ಅಕ್ಷರಶಃ '*ಅನುಗ್ರಹ*' ಎಂದರ್ಥವಾಗಿದೆ, ಅದು ಅರಬರಿಗೂ ಅಥವಾ ಅವರ ವಿದ್ವಾಂಸರಿಗೂ ಒಂದು ಪರಕೀಯ ಪದವಾಗಿದೆ. ಕುರ್‌ಆನಿನಲ್ಲಿ 'ಜೋಡಿಸುವುದು' ಅಥವಾ 'ಜೊತೆಸೇರುವುದು' ಎಂಬುವುದಕ್ಕೆ *ಹಶರ್* ಎಂಬ ಮೂಲಪದದ

ಬಳಕೆಯಾಗುತ್ತದೆ. ಈ ಮೂಲಪದವು ಇತರ ಕ್ರಿಯಾಪದಗಳಾದ *ಯಹ್-ಶ-ರು, ಉಹ್-ಶುರ್, ಹುಶ್ಶಿರ, ಯಹ್-ಶರು, ಮಹ್-ಶರತನ್* ಎಂಬ ಉಪದಗಳನ್ನು ಉತ್ಪಾದಿಸುತ್ತದೆ, ಆದರೆ ಎಂದಿಗೂ *ಮಸಾಬತನ್* ಎಂದು ಈ ಅರ್ಥದಲ್ಲಿ ಬರುವುದಿಲ್ಲ. ಭೇಟಿಯಾಗುವುದನ್ನು ಸೂಚಿಸಲು ಕುರ್‌ಆನ್ *ಮಜಾಲಿಸಿ* ಎಂಬ ಪದವನ್ನಲ್ಲದೇ *ಮಸಾಬತನ್* ಎಂಬುವುದು ಬಳಸಲೇ ಇಲ್ಲ.

ಮಸಾಬತನ್ ಪದಕ್ಕೆ ಒಂದು ತಪ್ಪು ಕಲ್ಪನೆಯನ್ನು ನೀಡಿದ ನಂತರ, ಅವರು *ಮಕಾಮ್ ಮತ್ತು ಮುಸ್ವಲ್ಲನ್* ಎಂಬ ಪದಗಳನ್ನು ವಿರೂಪಗೊಳಿಸಿ (ವಾಸ್ತವವಾಗಿ ಇದು, ಇಬ್ರಾಹೀಮರ *ದರ್ಜೆ* ಮತ್ತು ಅವರ *ಬದ್ಧತೆಗಳನ್ನು* ತಿಳಿಸುತ್ತದೆ) ಹೀಗೆ ಅರ್ಥಕೊಡುತ್ತಾರೆ:

> ಇಬ್ರಾಹೀಮರು ಆರಾಧನೆಗಾಗಿ ನಿಲ್ಲುವ ಸ್ಥಾನವನ್ನು ನೀವು ಸ್ಥಿರವಾದ ವಿಧ್ಯುಕ್ತ ಪ್ರಾರ್ಥನೆಯ ತಾಣವನ್ನಾಗಿಸಿ ಕೊಳ್ಳಿರಿ

ಈ ದಾವೆಯನ್ನು ನಂಬಿಸುವ ಸಲುವಾಗಿ ಅವರು ಒಂದು ತಾಮ್ರದ ಕಟ್ಟೆಯಲ್ಲಿ ಒಂದು ಜೋಡಿ ಹೆಜ್ಜೆಯ ಗುರುತುಗಳನ್ನು ಕೆತ್ತಿಸಿ, ಅದನ್ನು ಚೌಕಾಕಾರದ ವಿಗ್ರಹದ ಮುಂದೆ ಸ್ಥಾಪಿಸಿದರು. ಇದು ಇಬ್ರಾಹೀಮರು ನಿಲ್ಲುವ ತಾಣವನ್ನು ಪ್ರತಿನಿಧಿಸುತ್ತದೆ ಎಂದು ನಮಗೆ ಹೇಳುತ್ತಾರೆ. ಈ ಹೆಜ್ಜೆ ಗುರುತುಗಳು ವಿಧ್ಯುಕ್ತ ಪ್ರಾರ್ಥನೆಯ ಅಭಿನಯಕ್ಕಾಗಿ ಸಭೆ ಸೇರುವ ಸ್ಥಳವನ್ನು ಸೂಚಿಸುತ್ತದೆ ಎಂದು ಪರಿಗಣಿಸಲಾಗುತ್ತದೆ. ಈ ಮಟ್ಟದ ಪೆದ್ದತನ ಮತ್ತು ಭ್ರಮೆಯು, ಒಂದು ಕೆಟ್ಟ ಸಿನಿಮಕ್ಕೂ ಕೂಡ ಯೋಗ್ಯವಾದುದಲ್ಲ.

ಮುಂದೆ:

> ಅದನ್ನು *ಪ್ರದಕ್ಷಿಣೆ* ಮಾಡುವ, ಅದರಲ್ಲಿ *ತಪಶ್ಚರ್ಯೆ* ನಡೆಸುವ ಮತ್ತು *ಬಾಗುವ ಮತ್ತು ಸಾಷ್ಟಾಂಗವೆಸಗುವ* ಜನರಿಗಾಗಿ

ಹಾಗೆಯೇ ಜನರು ಅನುಸರಿಸುತ್ತಾರೆ: ಅವರು ಆ ಕಲ್ಲಿನ ಪೆಟ್ಟಿಗೆಗೆ ಬಾಗುತ್ತಾರೆ, ಸಾಷ್ಟಾಂಗವೆಸಗುತ್ತಾರೆ ಮತ್ತು ಸುತ್ತು ಹೊಡೆಯುತ್ತಾರೆ. ಆದರೂ, ಅವರ ಆಚರಣೆಗಳು ಅವರಿಗೆ ಅಲ್ಲಾಹನನ್ನು ಕಾಣಲು ಸಹಾಯ ಮಾಡುವುದಿಲ್ಲ ಏಕೆಂದರೆ 'ಅವನ ಮನೆ'ಯ ದೊಡ್ಡ ಬಾಗಿಲು ಯಾವಾಗಲೂ ಮುಚ್ಚಿರುತ್ತದೆ. ಧಾರ್ಮಿಕರು ಚದರ ಕಲ್ಲಿನ ಮನೆಯನ್ನು *ಬೈತುಲ್ಲಹ್* ಎಂದು ಕರೆಯುತ್ತಾರೆ.

ಇದರಲ್ಲಿ ವಾಸಿಸುವವನು ಅದರ ಬಾಗಿಲನ್ನೂ ಎಂದಿಗೂ ತೆರೆಯುವುದಿಲ್ಲ ಎಂದು ಗಮನಿಸುವುದು ಕಳವಳಗೊಳಿಸುವಂತಿದೆ. ಅಲ್ಲಾಹನು ಬಾಗಿಲನ್ನು ಬಳಸುವುದಿಲ್ಲ ಎಂದಾಗಿದ್ದರೆ, ಅದು ಏತಕ್ಕಾಗಿ ಇದೆ? ಮುಚ್ಚಿದ ಬಾಗಿಲಿನ ಅರ್ಥವು, ವಾಸಿಗನು ಆ ಮನೆಯನ್ನು *ಬಿಟ್ಟು ಹೋಗಿದ್ದಾನೆ* ಅಥವಾ *ಅವನು ಈಗ ಅಲ್ಲಿ ವಾಸಿಸುತ್ತಿಲ್ಲ* ಎಂದೇ ತಿಳಿದುಕೊಳ್ಳಬಹುದಾಗಿದೆ.

ಈ ರೀತಿಯಲ್ಲಿ ಬಂಡೆ, ಗ್ರಾನೈಟ್, ಮರ, ತಾಮ್ರ, ಹಿತ್ತಾಳೆ, ಕಪ್ಪು ಬಟ್ಟೆ ಮತ್ತು ಅಲಂಕರಿಸಿದ ಅರಬೀ ಅಕ್ಷರಗಳಿಂದ ನಿರ್ಮಿಸಲಾದ ಮೂರ್ತಿಗಳಿಗೆ ಆರಾಧನೆ ಮಾಡಿಸುವ ಮೂಲಕ ಧಾರ್ಮಿಕರು ಜನರನ್ನು ಮೋಸಮಾಡಿದ್ದಾರೆ. ತಮ್ಮ ಮಸೀದಿಯ ಮಧ್ಯದಲ್ಲಿರುವ ಮನೆಯನ್ನು ಹೋಲುವ ಮೂರ್ತಿಗೆ ಸಂಪೂರ್ಣ ಭಕ್ತಿಯೊಂದಿಗೆ ತಮ್ಮ ಶ್ರದ್ಧೆಯನ್ನು ಕೇಂದ್ರೀಕರಿಸಿ, ಅಲ್ಲಾಹನಿಗೆ ಕೇಳಿಸಿ ಕೊಳ್ಳುವ ಸಾಮರ್ಥ್ಯವು ಕಡಿಮೆ ಇರುವಂತೆ ಹಾಗೂ ಅವನ ಶ್ರದ್ಧೆಯನ್ನು ತಮ್ಮೆಡೆಗೆ ಆಕರ್ಷಿಸಲು, *ಓ ಅಲ್ಲಾಹನೇ ನಾನಿಲ್ಲಿಗೆ ಬಂದಿದ್ದೇನೆ.. ಓ ಅಲ್ಲಾಹನೇ ನಾನಿಲ್ಲಿಗೆ ಬಂದಿದ್ದೇನೆ* ಎಂದು ಜೋರಾಗಿ ಕೂಗಿ ಹೇಳಲು ಇವರು ಜನರಿಗೆ ಕಲಿಸುತ್ತಾರೆ. ಅಲ್ಲಾಹನು ನಮ್ಮ ಹೃದಯಗಳಲ್ಲಿರುವುದನ್ನೂ ಕೇಳಿಸಿಕೊಳ್ಳುತ್ತಾನೆ ಎಂದು ಅವನು ನಮಗೆ ಈಗಾಗಲೇ ಹೇಳಿದ್ದಾನೆ. ಇವುಗಳು ಹಾಸ್ಯಮಯ ಅನಾಚಾರಿಕ ವಿಧಿಗಳಲ್ಲದೇ ಬೇರೆ ಏನೂ ಅಲ್ಲ. ಕೇವಲ ಒಂದೇ ಒಂದು ವಚನದಲ್ಲಿ ಇವರು ನಡೆಸಿದ ಕುಶಲತೆಯು, ಕುರ್‌ಆನಿನಲ್ಲಿ ಹೇಳಿರುವ ಏಕದೇವನ ಸೇವೆಯ ಪರಿಕಲ್ಪನೆಯನ್ನೇ ತಿರುಚಿ ಹಾಕಿದೆ.

ಏನೇ ಇರಲಿ, ಲಕ್ಷಾಂತರ ಜನರು ಈ ಪ್ರಕ್ರಿಯೆಗಳನ್ನು ನಿರ್ವಹಿಸುವುದರಲ್ಲಿ ಮಹಾ ಆಹ್ಲಾದವನ್ನು ಅನುಭವಿಸುತ್ತಾರೆ. ಆದರೂ ಸಹ, ಸಾವಿರಾರು ಜನರು *'ನಾವು ಇದನ್ನೆಲ್ಲಾ ಏಕೆ ಮಾಡುತ್ತಿದ್ದೇವೆ?'* ಎಂದು ಖುದ್ದಾಗಿ ತಮ್ಮನ್ನೇ ಕೇಳುತ್ತಿರುತ್ತಾರೆ. ಅಂತೂ ಅವರಿಗೆ ಈ ಪದ್ಧತಿಗಳನ್ನು ತ್ಯಜಿಸುವ ಧೈರ್ಯವು ಇಲ್ಲ. ಅವರು ಎಲ್ಲಿಯ ತನಕ ಅಲ್ಲಾಹನ ಬದಲಿಗೆ ಧಾರ್ಮಿಕರ ಮೇಲೆ ತಮ್ಮ ಭರವಸೆಯನ್ನಿಟ್ಟಿರುತ್ತಾರೋ ಅಲ್ಲಿಯವರೆಗೆ ಅವರ ಈ ಪ್ರಶ್ನೆಗಿರುವ ಉತ್ತರವು ಅವರಿಂದ ಉಪಾಯದಿಂದ ತಪ್ಪಿಸಿಕೊಂಡು ದೂರ ಓಡಿಹೋಗುತ್ತದೆ.

ನಾವು 2:125 ವಚನವನ್ನು ಓದುವಾಗ ಅದರ ಉದ್ದೇಶಿತ ಸಂದೇಶದ ಪ್ರಕಾರ ಅದು ಹೀಗೆ ಹೇಳುತ್ತದೆ:

> ನಾವು ಮಾನವಕುಲಕ್ಕಾಗಿ, ಒಂದು ವ್ಯವಸ್ಥೆಯನ್ನು ಅನುಗ್ರಹವಾಗಿ *(ಬೈತನ್ ಮಸಾಬತನ್)* ಮತ್ತು ಸಂರಕ್ಷಣೆಯಾಗಿ ಗೊತ್ತುಪಡಿಸಿದ ಸಂದರ್ಭ. ಬದ್ಧರಾಗಿದ್ದ *(ಮುಸಲ್ಲನ್)* ಇಬ್ರಾಹೀಮರ ದರ್ಜೆಯನ್ನು *(ಮಕಾಮ್)* ಪರಿಗಣಿಸಿರಿ (ಅಥವಾ ಅರಿತುಕೊಳ್ಳಿರಿ). ಜನಸಮೂಹಕ್ಕಾಗಿ *(ತ್ವಾಇಫೀನ)* ಮತ್ತು ನಿಷ್ಠಾವಂತರಿಗಾಗಿ *(ಆಕಿಫೀನ)* ಮತ್ತು ತಮ್ಮನ್ನು ವಿನಮ್ರವಾಗಿ ಸಮ್ಮತಿಸುವವರಿಗಾಗಿ *(ರುಕ್ಕ-ಇ-ಸ್ಸುಜೂದ್)*, ನನ್ನ ವ್ಯವಸ್ಥೆಯನ್ನು (ಬೈತಿಯ) ನಿರ್ಮಲಗೊಳಿಸಲು ನಾವು ಇಬ್ರಾಹೀಮರನ್ನು ಮತ್ತು ಇಸ್ಮಾಯೀಲರನ್ನು ನಿಯೋಜಿಸಿದೆವು.

ಭ್ರಷ್ಟರಾದ ಈ ಧಾರ್ಮಿಕರು ಈ ಒಂದು ವಚನದಲ್ಲೇ ಎಂಟು ಪದಗಳ ಅರ್ಥವನ್ನು ಬದಲಿಸಿ - ಆರಿಸಲ್ಪಟ್ಟ ಮಾನವನಾದ ಹಾಗೂ ಭೂಮಿಯಲ್ಲಿರುವ ಎಲ್ಲಾ ಜನರನ್ನು ಅಲ್ಲಾಹನ ವ್ಯವಸ್ಥೆಗೆ ಮುನ್ನಡೆಸಬೇಕಿದ್ದ ಇಬ್ರಾಹೀಮರನ್ನು ಅವಮಾನಗೊಳಿಸಿದರು. ಅವರು ಕುಶಲತೆಯಿಂದ ಹೆಣೆದಿರುವ ಈ ಮೂರ್ಖತನಕ್ಕೆ ಕುರ್‌ಆನಿನ ಆಧಾರವಿದೆಯೆಂದು ಸಾಧರಪಡಿಸುವುದು, ಕೇವಲ ಈ ಎರಡು (2:125 ಮತ್ತು 22:26) ವಚನಗಳನ್ನು ಮಾತ್ರವಾಗಿರಲೂ, ಅನುವಾದಕರು ಈ ಪದಗಳನ್ನು ತಪ್ಪಾಗಿ ಉಪಯೋಗಿಸಲು

ಒಪ್ಪಿಕೊಳ್ಳುವಂತೆ ಬಲವಂತಪಡಿಸಲಾಗಿದ್ದಾರೆ. ಈ ಅಪಾರ್ಥಗಳ ನಿವ್ವಳ ಪರಿಣಾಮವೇನೆಂದರೆ, ಮಕ್ಕಾವು ಇಸ್ಲಾಮೀ ಜಗತ್ತಿನ ಕೇಂದ್ರವಾಗಿದೆ ಎಂದು ಲಕ್ಷಾಂತರ ಜನರು ನಂಬಿದ್ದಾರೆ:

- 'ವ್ಯವಸ್ಥೆ' *(ಬೈತ)* ಎಂಬುವುದನ್ನು, ವಿಶ್ವದಾದ್ಯಂತ ಹಲವಾರು ಮಂದಿರಗಳಲ್ಲಿ ನಿಲ್ಲಿಸಲ್ಪಟ್ಟ ಕಲ್ಲಿನ ಮೂರ್ತಿಗಳಂತೆ, ಮಕ್ಕಾದಲ್ಲಿರುವ ಇವರ ಮಸೀದಿಯ ಮಧ್ಯಭಾಗದಲ್ಲಿರುವ ಪರ್ವತ ಬಂಡೆಗಳಿಂದ ರಚಿಸಿದ ಚದರ ಆಕಾರದ ಕಲ್ಲಿಗೆ ಸಂಬಂಧ ಜೋಡಿಸಿದ್ದಾರೆ.

- 'ಅನುಗ್ರಹ' *(ಮಸಾಬತನ್)* ಎಂಬುವುದು ಜೊತೆಗೂಡುವ ಸ್ಥಾನವೆಂದು ಹೇಳಲಾಗಿದೆ. ಆದ್ದರಿಂದ ಜಗತ್ತಿನಿಂದ ಬರುವಂತಹ ಜನರು ಮಕ್ಕಾದಲ್ಲಿ ಸೇರುತ್ತಾರೆ.

- 'ಇಬ್ರಾಹೀಮರ ದರ್ಜೆ' *(ಮಕಾಮಿ ಇಬ್ರಾಹೀಮ)* ಎಂಬುವುದು ಚೌಕ ಗೃಹದ ಬಾಗಿಲಿನ ಸುಮಾರು ಹತ್ತು ಮೀಟರ್ ದೂರದಲ್ಲಿ ಒಂದು ಪಂಜರದೊಳಗೆ ಅಳವಡಿಸಲಾದ ಒಂದು ತಾಮ್ರದ ಬ್ಲಾಕಿನಲ್ಲಿ ಕೆತ್ತಲಾದ ಒಂದು ಜೋಡಿ ಹೆಜ್ಜೆಗಳ ಗುರುತುಗಳ ರೂಪದಲ್ಲಿರುವ ಸಣ್ಣ ವಿಗ್ರಹವಾಗಿ ಪರಿಣಮಿಸಿದೆ.

- 'ಬದ್ಧರಾದ ವ್ಯಕ್ತಿ' *(ಮುಸಲ್ಲನ್)* ಎಂಬುವುದು ಆರಾಧನಾ ಸ್ಥಳವಾಗಿ ಮಾರ್ಪಡಿಸಲಾಗಿದೆ (ಕಲ್ಲಿನ ವಿಗ್ರಹವನ್ನು ಕೇಂದ್ರೀಕರಿಸಿಕೊಂಡು).

- 'ಜನಸಮೂಹ' *(ತ್ವಾಇಫೀನ)* ಎಂಬುವುದು ಕಲ್ಲಿನ ವಿಗ್ರಹವನ್ನು ಏಳು ಬಾರಿ ಸುತ್ತು ಹೊಡೆಯುವ ಧಾರ್ಮಿಕ ವಿಧಿಯಾಗಿದೆ.

- 'ನಿಷ್ಠಾವಂತರು' *(ಆಕಿಫೀನ)* ಎಂಬುವುದರ ಅರ್ಥವು ಆ ಕಲ್ಲಿನ ಮನೆಯಿರುವ ತಮ್ಮ ಮಸೀದಿಯಲ್ಲಿ ತಪಶ್ಚರ್ಯೆ ಮಾಡುವುದಾಗಿ ಮಾರ್ಪಡಿಸಲಾಗಿದೆ.

- ತಮ್ಮನ್ನು 'ವಿನಮ್ರವಾಗಿ ಸಮ್ಮತಿಸುವವರು' *(ರುಕ್ಕ-ಇ-ಸ್ಸುಜೂದ್)* ಎಂಬುವುದು ಕಲ್ಲಿನ ಮೂರ್ತಿಗೆ ಬಾಗುವ ಹಾಗೂ ಸಾಷ್ಟಾಂಗವೆಸಗುವ ನೃತ್ಯಸಂಯೋಜಿತವಾದ ಚಾಲನೆಗಳ ಒಂದು ಸರಣಿಯಾಗಿಸಲ್ಪಟ್ಟಿದೆ.

ಧಾರ್ಮಿಕರ ಪ್ರಕಾರ 2:125 ರಲ್ಲಿ, ಅಲ್ಲಾಹನು ಇಬ್ರಾಹೀಮರಿಗೆ ಮನೆಯನ್ನು ಗೊತ್ತುಪಡಿಸಿದನು. ನಂತರ ಎರಡು ವಚನಗಳನ್ನು ಮುಂಗಡೆದು, ಇಬ್ರಾಹೀಮ್ ಮತ್ತು ಇಸ್ಮಾಯೀಲ್ ಅಲ್ಲಾಹನ ಮನೆಯನ್ನು ಕಟ್ಟಿದರು ಎಂದು ಹೇಳುತ್ತಾರೆ. ಉತ್ತರಕ್ಕಾಗಿ ಚಡಪಡಿಸುತ್ತಿರುವ ಒಂದು ಪ್ರಶ್ನೆಯೇನೆಂದರೆ: ***2:125 ರಲ್ಲಿ ಅಲ್ಲಾಹನು ಇಬ್ರಾಹೀಮರಿಗೆ ಒಂದು ಮನೆಯನ್ನು ಗೊತ್ತುಪಡಿಸಿ, ಅದನ್ನು ಶುದ್ಧಗೊಳಿಸಲು ಆದೇಶ ನೀಡಿದ ನಂತರ, 2:127 ರಲ್ಲಿ ಅದೇ ಮನೆಯ ಅಡಿಪಾಯವನ್ನು ಮೇಲಕ್ಕೇರಿಸಲು ಹೇಳುವುದು ಹೇಗೆ? ಯಾರೂ ಸಹ ಈ ಸರಳ ವಂಚನೆಯನ್ನು ಗಮನಿಸುದಿಲ್ಲ.*** ಇಂತಹ ದಡ್ಡತನವು ಅರಬೀ ಮೂರ್ತಿಪೂಜಾ ಸಂಘದ

ಸದಸ್ಯತ್ವಕ್ಕಿರುವ ಅರ್ಹತೆಯಾಗಿರುವಾಗ, ಮುಸ್ಲಿಮರು ವಿಶ್ವದ ಮುಂದೆ ಈ ಕೀಳು ಮಟ್ಟದ ಸ್ಥಿತಿಯಲ್ಲಿರುವುದರಲ್ಲಿ ಅದ್ಭುತವಿದೆಯೇ?

ಇದು ಸಹಜವಾಗಿ ಇನ್ನೊಂದು ಅರಬೀ ಕುತಂತ್ರವಾಗಿದೆ. ವಾಸ್ತವದಲ್ಲಿ, 2:127 ರ ಅರ್ಥವು: *ಇಬ್ರಾಹೀಮರು <u>ವ್ಯವಸ್ಥೆಯಿಂದ</u> ಮೂಲತತ್ವವನ್ನು ಮೇಲೆತ್ತಿದರು* ಎಂದಾಗಿದೆ. ಆದರೆ ಧಾರ್ಮಿಕರು *ಇಬ್ರಾಹೀಮರು <u>ಮನೆಯ ಅಡಿಪಾಯವನ್ನು ಮೇಲೆತ್ತಿದರು</u>* ಎಂಬ ಅಪಾರ್ಥವನ್ನು ಕೊಟ್ಟರು!

ಅವರು ಬೈತಿ ಪದಕ್ಕೆ ಸೇರಿರುವ *<u>ಮಿನಲ್</u>* ಎಂಬ ಶಬ್ದವನ್ನು ಸಂಪೂರ್ಣವಾಗಿ ವರ್ಜಿಸಿದ್ದಾರೆ, ಅದು ವಚನದ ಇಡೀ ಸನ್ನಿವೇಶವನ್ನೇ ಬದಲಾಯಿಸುತ್ತದೆ. ಇದನ್ನು ವಿವರಿಸುವ ಸಲುವಾಗಿ, 2:127 ನ್ನು ತುಣುಕುಗಳಾಗಿ ಬೇರ್ಪಡಿಸೋಣ:

ವ-ಇಝ್	ಮತ್ತು ಆವಾಗ
ಯರ್-ಫಉ	ಮೇಲೆತ್ತು
ಇಬ್ರಾಹೀಮ್	ಇಬ್ರಾಹೀಮ್
ಅಲ್-ಖವಾಯಿದ	ಮೂಲತತ್ವ
<u>ಮಿನಲ್</u>-ಬೈತಿ	ವ್ಯವಸ್ಥೆಯಿಂದ
ವ ಇಸ್ಮಾಯೀಲ್	ಮತ್ತು ಇಸ್ಮಾಯೀಲ್

ಅಕ್ಷರಶಃ ಇದು ಹೇಳುತ್ತದೆ: *ಇಬ್ರಾಹೀಮರು ಇಸ್ಮಾಯೀಲರ ಜೊತೆ ವ್ಯವಸ್ಥೆಯ ಮೂಲತತ್ವವನ್ನು ಅಥವಾ ಬುನಾದಿಯನ್ನು ಸ್ಥಾಪಿಸಿದಾಗ.* ಇದು ವಿಷಯವನ್ನು 2:124 ರಿಂದ ಓದುವಾಗ ಸಂದರ್ಭೋಚಿತವಾಗಿ ಹೆಚ್ಚು ಹೊಂದಿಕೊಳ್ಳುತ್ತದೆ. ಬೈತಿ ಎಂಬ ಪದವನ್ನು 'ಮನೆ' ಎಂದು ಭಾವಿಸಿದರೂ, ಇಬ್ರಾಹೀಮರು ಈಗಾಗಲೇ ಅಸ್ತಿತ್ವದಲ್ಲಿದ್ದ ಒಂದು ಮನೆಯ ಅಡಿಪಾಯವನ್ನು ಏರಿಸಲು ಸಾಧ್ಯವಿಲ್ಲ. *ಮಿನಲ್* ಎಂಬ ಪದವು ಸರಳವಾಗಿ 'ರಿಂದ' ಎಂಬ ಅರ್ಥವನ್ನು ನೀಡುತ್ತದೆ. ಇದು, ಬೈತಿಗೆ ಪೂರ್ವಪ್ರತ್ಯಯವಾಗಿ ಜೋಡಿಸಿದರೆ, ಇದು *ಬೈತಿಯಿಂದ* ಅಂದರೆ, *ವ್ಯವಸ್ಥೆಯಿಂದ* ಎಂಬ ಅರ್ಥವನ್ನು ನೀಡುತ್ತದೆ.

ಒಂದು 'ವ್ಯವಸ್ಥೆ' ಎಂದರೆ, ಒಂದು ಕಾರ್ಯವನ್ನು ನಿರ್ವಹಿಸುವ ಅಥವಾ ಸಂಘಟಿಸುವ ರೀತಿಯಾಗಿದೆ; ಅಥವಾ ಒಂದು ನಿಗದಿತ ಯೋಜನೆಯನ್ನು (ಅಥವಾ ನಿಯಮಗಳ ಒಂದು ಕೂಟವನ್ನು) ಅನುಸರಿಸುವ ಮೂಲಕ ಯಾವುದಾದರೊಂದು ಕಾರ್ಯವನ್ನು ಮಾಡುವುದು ಎಂದಾಗಿದೆ. ಉದಾಹರಣೆಗೆ, ಒಂದು ಸನ್ನಿವೇಶವು ಅಥವಾ ಚಟುವಟಿಕೆಯು ಒಂದು ವ್ಯವಸ್ಥೆಯನ್ನು ಪಾಲಿಸುತ್ತಿದೆ ಎಂದಾದರೆ, ಅದು

ವ್ಯವಸ್ಥಿತವಾಗಿದೆ ಅಥವಾ ಉತ್ತಮ ಸಂಘಟನೆಯಾಗಿದೆ ಎಂದಾಗುತ್ತದೆ. ಜನರು ಕೆಲವೊಮ್ಮೆ ರಾಜ್ಯದ ಸರ್ಕಾರ ಅಥವಾ ಆಡಳಿತದ ಕುರಿತು ಹೇಳಲು 'ವ್ಯವಸ್ಥೆ' ಎಂಬ ಪದವನ್ನು ಬಳಸುತ್ತಾರೆ. ಅದು ಬಹಳ ಕಠೋರವಾಗಿದ್ದರೆ ಮತ್ತು ಮಿತಿಮೀರಿದ ಹಲವು ಕಾನೂನು, ನಿಯಮಗಳನ್ನೊಳಗೊಂಡಿದೆ ಎಂದು ಅವರು ಭಾವಿಸುವುದಾದರೆ, ಅವರು ಅಂತಹ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಯಾರು ಒಂದು ವ್ಯವಸ್ಥೆಯನ್ನು ಪಾಲಿಸುತ್ತಾರೋ ಅಥವಾ ಎತ್ತಿಹಿಡಿಯುತಾರೋ, ಅವರು ಆ ವ್ಯವಸ್ಥೆಯ ನಿಗದಿತ ನಿಯಮಗಳ ಮೇರೆಯೊಳಗೆ, ಒಂದು ಕ್ರಮಬದ್ಧ ರೀತಿಯಲ್ಲಿ ಜೀವನ ನಡೆಸಲು ಬದ್ಧವಾಗಿರುತ್ತಾರೆ.

ಅಂದರೆ, ಅವರು '*ವ್ಯವಸ್ಥೆಯ ಪ್ರಕಾರ*' ಜೀವಿಸುತ್ತಾರೆ ಅಥವಾ 14:37[53] ರಲ್ಲಿ ಇಬ್ರಾಹೀಮರು ನಿಖರವಾಗಿ ಉಚ್ಚರಿಸಿದಂತೆ, ಅರಬಿಯಲ್ಲಿ ಅದು '*ಇಂದಲ್-ಬೈತಿ*' ಎಂದಾಗಿದೆ.

ಇಂದ-ಬೈತಿಕ ಎಂದರೆ *ನಿನ್ನ ಮನೆಯ ಹತ್ತಿರ* ಎಂದು ಹೇಗಾದರೂ ನಮ್ಮನ್ನು ನಂಬಿಸಲು ಧಾರ್ಮಿಕರು ಬಯಸುತ್ತಾರೆ. ಇಂತಹ ಹೇಳಿಕೆಯನ್ನು ವೈಚಾರಿಕ ನೆಲೆಯಲ್ಲಿ ತೆಗೆದರೆ, ವಿಶ್ವದ ಎಲ್ಲ ಜನರು ಅಲ್ಲಾಹನ ಮನೆಯ ಹತ್ತಿರವೇ ಜೀವಸಬೇಕಾಗಿದೆ. ಮೊರೋಕೊ, ಆಲ್ಜೀರಿಯಾ, ಸಿರಿಯಾ, ಲಿಬಿಯಾ, ಯಮನ್, ಪ್ಯಾಲೆಸ್ತೀನ್, ಜೋರ್ಡಾನ್, ಇರಾಕ್, ಕುವೈತ್, ಒಮಾನ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಸೌದಿ ಅರೇಬಿಯಾದ ಸಂಪೂರ್ಣ ಅರಬ್ ಜನಾಂಗವನ್ನು ಒಂದು ವಾರದ ಮಟ್ಟಿಗೆ ಒಂದು ಸ್ಥಳದಲ್ಲಿ ಒಟ್ಟಿಗೆ ಸೇರಿಸಲು ಪ್ರಯತ್ನ ನಡೆಸಿದರೆ, ಏನು ನಡೆಯಬಹುದೆಂದು ನಮಗೆ ಊಹಿಸಲು ಸಾಧ್ಯವಿದೆ! ಅವರಲ್ಲಿ ಷಿಯಾ ಪಂಥಿಯ ಜನಸಂಖ್ಯೆಯನ್ನು ಏರಿಸಲು ಯಾರಾದರು ಶ್ರಮಿಸಿದರೆ, ನಿಜವಾಗಿಯೂ ಸುಡುಮದ್ದುಗಳು ಸ್ಫೋಟಿಸಲು ಪ್ರಾರಂಭವಾಗುವುದು. ಅಮೆರಿಕಾಗೆ ಅರಬೀ ಮಣ್ಣಿನ ಮೇಲೆ ಆಕ್ರಮಣ ಮಾಡುವ ಯಾವುದೇ ಅಗತ್ಯವು ಬರದು - ಅವರು ಸುಮ್ಮನೆ ಒಳನಡೆದು ಅದನ್ನು ಸರಳವಾಗಿ ವಶಪಡಿಸಬಹುದು. ಏಕೆಂದರೆ, ಅವರನ್ನು ವಿರೋಧಿಸಲು ಜೀವಂತವಾಗಿ ಯಾರೂ ಉಳಿದಿರರು!

ಭೂಮಿಯ ಮೇಲೆ ಮಾನವರ ವಸಾಹತಿನ ಬಗ್ಗೆ ಅಲ್ಲಾಹನು ಏನು ಹೇಳುತ್ತಾನೆಂದು ಧಾರ್ಮಿಕರು ತಿಳಿದಿರದಂತಿದೆ:

---

[53] ಇಬ್ರಾಹೀಮರು ಹೇಳಿದರು, "ನನ್ನ ಪ್ರಭುವೇ, ನಾನು ನನ್ನ ಸಂತತಿಯನ್ನು ನಿನ್ನ ವ್ಯವಸ್ಥೆಯ ನಿರ್ಬಂಧಗಳ ಪ್ರಕಾರ ಈ ಬಂಜರು ಕಣಿವೆಯಲ್ಲಿ ನೆಲೆಸಿದ್ದೇನೆ. ನಮ್ಮ ಪ್ರಭುವೇ, ಇದು ಅವರು ತಮ್ಮ ಬದ್ಧತೆಗಳನ್ನು ಪಾಲಿಸಲೆಂದಾಗಿದೆ. ಆದ್ದರಿಂದ, ಜನಸಮೂಹವು ಇದಕ್ಕೆ ಓಲುವಂತೆ ಮಾಡು, ಅವರಿಗೆ ಫಲಗಳ ಆಹಾರವನ್ನು ಒದಗಿಸು, ಅವರು ಕೃತಜ್ಞರಲ್ಲಾಗಬಹುದು". ಇದು 2:126 ರಲ್ಲಿನ ಇಬ್ರಾಹೀಮರ ವಿನಂತಿಯ ಒಂದು ಪುನರಾವರ್ತನೆಯಾಗಿದೆ: "ನನ್ನ ಪ್ರಭುವೇ, ಇದನ್ನು ಶಾಂತಿಯುತ ನಾಡನ್ನಾಗಿ ಮಾಡು, ಇದರಲ್ಲಿ ವಾಸಿಸುವವರ ಪೈಕಿ ಅಲ್ಲಾಹನ ಮತ್ತು ಕೊನೆಯ ದಿನದ ಮೇಲೆ ವಿಶ್ವಾಸವಿರಿಸುವವರಿಗೆ ಫಲಗಳ ಆಹಾರವನ್ನು ಒದಗಿಸಲು"; (ಅಲ್ಲಾಹನು) ಉತ್ತರಿಸಿದನು, "ನಾನು ಸತ್ಯನಿಷೇಧಿಗಳಿಗೂ ಒದಗಿಸುತ್ತೇನೆ, ಹಾಗೂ ಅದನ್ನು ಅಲ್ಪ ಸಮಯ ಆನಂದಿಸಲು ಅವಕಾಶ ನೀಡುತ್ತೇನೆ, ನಂತರ ಅವರನ್ನು ನರಕಯಾತನೆಗೆ ತಲ್ಲುತ್ತೇನೆ, ಅದು ಅತ್ಯಂತ ನಿಕೃಷ್ಟವಾದ ನೆಲೆಯಾಗಿದೆ."

ಓ ನನ್ನಲ್ಲಿ ವಿಶ್ವಾಸವಿರಿಸುವ ನನ್ನ ಸೇವಕರೇ! ನನ್ನ ಭೂಮಿಯು ವಿಶಾಲವಾಗಿದೆ. ಆದ್ದರಿಂದ, ನೀವು ಕೇವಲ ನನ್ನ ಸೇವೆಯನ್ನು ಮಾತ್ರ ಮಾಡಿರಿ. (29:56)

2:124-127 ನ್ನು ಒಂದು ವಿಷಯವೆಂಬಂತೆ ಓದಿದರೆ, ಇಬ್ರಾಹೀಮರು ಮತ್ತು ಅವರ ಮಗ ಇಸ್ಮಾಯೀಲರು ಅಲ್ಲಾಹನ ವ್ಯವಸ್ಥೆಗೆ ಬದ್ಧರಾಗಿದ್ದರು ಎಂಬ ಅರ್ಥವನ್ನು ನೀಡುತ್ತವೆ. ಅವರಿಬ್ಬರೂ *ಅಲ್ಲಾಹನ ವ್ಯವಸ್ಥೆಯಿಂದ* ತಮ್ಮ ಬದ್ಧತೆಗಳ ಮೂಲತತ್ವವನ್ನು ಅಥವಾ ಬುನಾದಿಯನ್ನು ಸ್ಥಾಪಿಸಿದರು – ಮಕ್ಕಾದಲ್ಲಿ ಅಥವಾ ಬೇರೆಲ್ಲಾದರೂ ಇರುವ ಬಂಡೆಗಳಿಂದ ಮಾಡಿದ *ಮನೆಯಿಂದ* ಅಲ್ಲ. ಸತ್ಯಸಂಗತಿಯೇನೆಂದರೆ, ಅಲ್ಲಾಹನಿಗೆ ಹೊರಿಸಲಾದ ಒಂದು ಚದರ ಕಲ್ಲಿನ ಕಟ್ಟಡದ ಬಗ್ಗೆ, ತಂದೆಗಾಗಲೀ ಅಥವಾ ಮಗನಿಗಾಗಲೀ ಯಾವುದೇ ಅರಿವು ಇರಲಿಲ್ಲ. ಇದು ಪ್ರಾಚೀನ ಅರಬರ ಸ್ವೇಚ್ಛಾಚಾರಿ ಕಲ್ಪನೆಯ ಒಂದು ಮನೋಭ್ರಾಂತಿಯಾಗಿದೆ. ನಿಶ್ಚಯವಾಗಿಯೂ ಇಬ್ರಾಹೀಮರು ಮತ್ತು ಇಸ್ಮಾಯೀಲರು ಅಲ್ಲಾಹನ ವ್ಯವಸ್ಥೆ*ಯಿಂದ* ಒಂದು ಬುನಾದಿಯನ್ನು ಸ್ಥಾಪಿಸಲು ಮೊದಲಿಗರಾಗಿದ್ದರು ಎಂಬುವುದು ಈ ವಚನಗಳ ಮೂಲಕ ತಲುಪುವಂತಹ ಸಂದೇಶವಾಗಿದೆ..

ಮಾನವಕುಲಕ್ಕಿರುವ ಅಲ್ಲಾಹನ ವ್ಯವಸ್ಥೆಯಲ್ಲಿನ ಅನುಗ್ರಹ ಎಂಬುವುದನ್ನು ಉಲ್ಲೇಖಿಸಲು ಕುರ್‌ಆನ್ *ಬೈತ* ಎಂಬ ಪದವನ್ನು ಹೇಗೆ ಬಳಸುತ್ತದೆ ಎಂದು ನೋಡೋಣ. ಕೆಲವು ಸಂದರ್ಭಗಳಲ್ಲಿ, ನಾವು ನಮ್ಮ ಕೆಲಸದಲ್ಲಿ ಏನು ಮಾಡುತ್ತೇವೆಂಬುವುದಕ್ಕೆ ಅನುಗುಣವಾಗಿ ವ್ಯವಸ್ಥೆಯು ಕಾರ್ಯನಿರ್ವಹಿಸುತ್ತದೆ.

ಬೈತ ಎಂದರೆ 'ಒಂದು ವ್ಯವಸ್ಥೆ' ಎಂದಾಗಿದೆ, 'ಒಂದು ಮನೆ' ಎಂದಲ್ಲ

- *ಬೈತ*[54] *ದ ಅರ್ಥವು ಒಂದು ಮನೆ* ಎಂದು ಧಾರ್ಮಿಕರು ಹೇಳುತ್ತಾರೆ. ಕುರ್‌ಆನಿನ ಪ್ರಕಾರ 2:125 ರಲ್ಲಿ ಬೈತ ಎಂದರೆ ಒಂದು ವ್ಯವಸ್ಥೆಯಾಗಿದೆ ಮತ್ತು ಅದರ ಅನಿರ್ದಿಷ್ಟ ನಾಮಪದ *ಬೈತಿನ್* ಎಂಬುವುದು 3:96 ರಲ್ಲಿ ಕಂಡುಬಂದಿದೆ.

- *ಬೈಯ್ಯತ* ಮತ್ತು *ಯುಬೈಯ್ಯತೂನ* ಎಂಬ ಪದಗಳು 4:81 ರಲ್ಲಿ ಬಳಸಲಾಗಿದೆ. ಅಲ್ಲಿ ಅವುಗಳು ಎಲ್ಲಾ ಪ್ರವಾದಿಗಳ ಶತ್ರುಗಳು ಅವರಿಗೆ ಹೇಳಿಲಾಗಿರುವುದನ್ನು ಬದಲಿಸಲು ತಮ್ಮದಾಗಿಸುವ *ವ್ಯವಸ್ಥಿತ ವಿಧಾನದ* ಬಗ್ಗೆ ಮತ್ತು ಅವರು *ವ್ಯವಸ್ಥಿತವಾಗಿ ರೂಪಿಸುವುದನ್ನು* ಅಲ್ಲಾಹನು ದಾಖಲೆಗೊಳಿಸುತ್ತಿದ್ದಾನೆ ಎಂದು ನಮಗೆ ಸೂಚಿಸುತ್ತದೆ. ಇದು 6:112 ರ ಹೇಳಿಕೆಗೆ ಅನುಗುಣವಾಗಿದೆ, "ಪ್ರತಿಯೊಂದು ಪ್ರವಾದಿಗಳಿಗೆ ನಾವು ಮಾನವ ಶೈತಾನರ ಮತ್ತು ಜಿನ್ನ್

[54] ಧಾರ್ಮಿಕರು ಈ ಪದವನ್ನು ದುರುಪಯೋಗಗೊಳಿಸಿ, ಮಕ್ಕಾವನ್ನು ಒಂದು ಧಾರ್ಮಿಕ ಆರಾಧನಾ ಸ್ಥಳವನ್ನಾಗಿ ಮಾಡಿದರು. ಅವರು *ಬುಯೂತ್* ಎಂಬ ಪದವು *ಬೈತ* ಪದದ ಬಹುವಚನವಾಗಿದೆ ಎಂದು ಹೇಳುತ್ತಾರೆ. ವಾಸ್ತವದಲ್ಲಿ ಕುರ್‌ಆನ್ ಈ ಪದಗಳನ್ನು ವಿವಿಧ ವಿಷಯಗಳನ್ನು ಸಂಭೋಧಿಸಲು ಬಳಸುತ್ತದೆ. *ಬೈತ* ಹಾಗೂ *ಬುಯೂತ* ಇವೆರಡೂ ಏಕವಚನಗಳಾಗಿವೆ.

ಶೈತಾನರ ಪೈಕಿ ಶತ್ರುಗಳನ್ನು ನೇಮಕಮಾಡಿದ್ದೇವೆ ಹಾಗೂ ಅವರು ಜನರನ್ನು ಮೋಸಗೊಳಿಸುವ ಸಲುವಾಗಿ ಅಲಂಕಾರಿಕ ಪದಗಳ ಆವಿಷ್ಕಾರ ಮಾಡಿ ಪರಸ್ಪರ ಉತ್ತೇಜಿಸುತ್ತಾರೆ. ನಿಮ್ಮ ಪ್ರಭುವು ಇಚ್ಛಿಸುತ್ತಿದ್ದರೆ, ಅವರು ಇದನ್ನು ಮಾಡುತ್ತಿರಲಿಲ್ಲ. ನೀವು ಅವರನ್ನೂ ಮತ್ತು ಅವರ ಆವಿಷ್ಕಾರವನ್ನೂ ಕಡೆಗಣಿಸಿರಿ"

- 7:4 ಮತ್ತು 7:97 ರಲ್ಲಿ ಅದೇ ಪದವನ್ನು *ಬಯಾತನ್* ಎಂದು ಪ್ರಯೋಗಿಸಲಾಗಿದೆ. ಇಲ್ಲಿ ಅರ್ಥವು: ಮನುಕುಲವು ತಮ್ಮದೇ ಆದ ಕುಕೃತ್ಯಗಳಿಗೆ ಒಂದು ವ್ಯವಸ್ಥೆಯಂತೆ ಪ್ರಾಕೃತಿಕ ವಿಪತ್ತುಗಳನ್ನು ಅನುಭವಿಸುವರು. ಆದರೆ *ಬೈಯ್ಯತ, ಬೈಯ್ಯಿತೂ* ಮತ್ತು *ಬಯಾತನ್* ಎಂಬುವವುಗಳ ಅರ್ಥವು *ರಾತ್ರಿಯ ವೇಳೆ* ಎಂದು ಅನುವಾದಕರು ಹೇಳುತ್ತಾರೆ. ಕುರ್‌ಆನಿನಲ್ಲಿ ಸ್ಪಷ್ಟವಾಗುವುದೇನೆಂದರೆ, ಅನೇಕ ಸಮುದಾಯಗಳು ದಿನದ ಯಾವುದೇ ಸಮಯದಲ್ಲೂ ವಿಪತ್ತಿಗೆ ಆಹುತಿಯಾಗಿದೆ ಎಂದಾಗಿದೆ. ಅಲ್ಲದೇ, ರಾತ್ರಿಯ ವೇಳೆಯನ್ನು ಉಲ್ಲೇಖಿಸಲು, ಕುರ್‌ಆನ್ *ಲೈಲ್* ಎಂಬ ಪದವನ್ನು ಬಳಸುತ್ತದೆ ಹಾಗೂ ಈ ಪದವು ಆ ವಚನಗಳಲ್ಲೆಲ್ಲಿಯೂ ಕಾಣಸಿಗುವುದಿಲ್ಲ.

- ಮನೆಗೆ *ಬುಯೂತ್* ಎಂದು 2:189 ರಲ್ಲಿ ಬಳಸಲಾಗಿದೆ, ಮತ್ತು ಅದರ ಅನಿಶ್ಚಿತ ನಾಮಪದವಾದ *ಬುಯೂತನ್* 24:29 ರಲ್ಲಿ ಕಾಣಿಸಿಕೊಂಡಿದೆ.

- 2:189 ರಲ್ಲಿ *ಬುಯೂತ ಮಿನ್ ಧುಹೂರಿಹಾ* ಎಂಬ ವಾಕ್ಯವು, *ಮನೆಯನ್ನು ಅದರ ಹಿಂಬಾಗಿಲಿನಿಂದ ನುಗ್ಗಬೇಡಿರಿ* ಎಂದು ಹೇಳುತ್ತದೆ. ಇದೊಂದು ಅರಬೀ ಗಾದೆಯಾಗಿದೆ. ಇಲ್ಲಿ *ಧುಹೂರಿ* ಎಂಬ ಪದಕ್ಕೆ ಉತ್ತರಪ್ರತ್ಯಯವಾಗಿ ಬಳಸಲಾದ '*ಹಾ*' (ಅರ್ಥ- ಅದರ ಅಥವಾ ಮನೆಯ) ಎಂಬುವುದು *ಬುಯೂತ* ಎಂಬ ಪದವು ಸ್ತ್ರೀಲಿಂಗವನ್ನು ಪ್ರತಿನಿಧಿಸುವ 'ಏಕವಚನ'ವಾಗಿದೆ ಎಂಬುವುದನ್ನು ಖಚಿತಗೊಳಿಸುತ್ತದೆ.

- 24:29 ರಲ್ಲಿ *ಬುಯೂತನ್* ಎಂಬುವುದು ಅನಿಶ್ಚಿತ ನಾಮಪದವಾಗಿದೆ. '*ಯಾರೂ ವಾಸಿಸದಂತಹ ಮತ್ತು ನಿಮಗೆ ಉಪಯೋಗದ ವಸ್ತುವೇನಾದರೂ ಇರುವಂತಹ ಮನೆಯೊಳಗೆ ಪ್ರವೇಶಿಸುವುದರಲ್ಲಿ ಅಡ್ಡಿಯಿಲ್ಲ. ನೀವು ಪ್ರಕಟಗೊಳಿಸುವುದನ್ನೂ ಬಚ್ಚಿಡುವುದನ್ನೂ ಅಲ್ಲಾಹನು ಅರಿಯುತ್ತಾನೆ*'.

- 24:61 ರಲ್ಲಿ *ಬುಯೂತಿ* ಎಂಬ ಪದವು ಹತ್ತು ಬಾರಿ ಪ್ರಯೋಗಿಸಲಾಗಿದೆ. ಈ ವಚನದಲ್ಲಿ ಉಲ್ಲೇಖಿಸಲ್ಪಟ್ಟ ಪ್ರತಿಯೊಂದು ವ್ಯಕ್ತಿಗಳು ವಾಸಿಸುವ *ಮನೆಯನ್ನು* ಸಂಕೇತಿಸಿ ಮಾತನಾಡಲಾಗಿದೆ.

ಬೈತಿಯ ಎಂದರೆ *ನನ್ನ ಮನೆ* ಎಂಬುವುದಾಗಿ ದಾವೆ ಮಾಡಿ, ಸ್ವಲ್ಪವೂ ಸಮಯ ವ್ಯಯಮಾಡದೆ, ಮಕ್ಕಾದಲ್ಲಿರುವ ಚೌಕ ಕಟ್ಟಡಕ್ಕೆ *ಬೈತುಲ್ಲಾಹ್* ಅಥವಾ *ಅಲ್ಲಾಹನ ಮನೆ* ಎಂದು ಹೆಸರಿಟ್ಟರು. ಕುರ್‌ಆನಿನ ಪ್ರಕಾರ *ಬೈತಿಯ* ಎಂದರೆ *ನನ್ನ ವ್ಯವಸ್ಥೆ* ಎಂದಾಗಿದೆ.

ಕುರ್‌ಆನಿನ ಪ್ರಕಾರ ಬೈತ

ನಮ್ಮಲ್ಲಿ ಪ್ರತಿಯೊಬ್ಬರು, ಆರಂಭದಲ್ಲಿ ನಮ್ಮದೇ ಆದ ವ್ಯವಸ್ಥೆಯನ್ನು ಅಥವಾ 'ಬೈತ'ವನ್ನು ಅನುಸರಿಸುತ್ತೇವೆ. ಅವನ ಕೃಪೆ ಮತ್ತು ಕ್ಷಮೆಯನ್ನು ಸ್ವೀಕರಿಸುವ ಮೂಲಕ ಮೇಲ್ಮಟ್ಟದ ದರ್ಜೆಗೆ ತಲುಪಲು ನಾವು ಅರ್ಹರಾದ ಬಳಿಕ, ಅಲ್ಲಾಹನು ತನ್ನ ಇಚ್ಛೆಯ ಪ್ರಕಾರ ನಮ್ಮನ್ನು ನಮ್ಮ ಹಿಂದಿನ ವ್ಯವಸ್ಥೆಯಿಂದ ಹೊರ ತೆಗೆದು ಅವನ ವ್ಯವಸ್ಥೆಯ ಮತ್ತು ಉತ್ತಮ ಅನುಗ್ರಹದ ಕಡೆಗೆ ದಾರಿ ತೋರಿಸುತ್ತಾನೆ. ಇದು ಸ್ಪಷ್ಟವಾಗಿ 8:5 ರಲ್ಲಿ ಪ್ರಸ್ಥಾಪಿಸಲಾಗಿದೆ.

ಆ ವಚನವನ್ನು ಹೀಗೆ ಬೇರ್ಪಡಿಸಬಹುದು:

ಕಮಾ	ಹಾಗೆ
ಅಹ್ರಜಕ	ನಿಮ್ಮನ್ನು ಹೊರ ತೆಗೆಯುತ್ತಾನೆ
ರಬ್ಬುಕ	ನಿಮ್ಮ ಪ್ರಭು
ಮಿನ್-ಬೈತಿ-ಕ	ನಿಮ್ಮ ವ್ಯವಸ್ಥೆಯಿಂದ
ಬಿಲ್-ಹಖ್ಖಿ	ಸತ್ಯದೊಂದಿಗೆ

> ನಿಮ್ಮ ಪ್ರಭುವು ನಿಮ್ಮನ್ನು ನಿಮ್ಮ ವ್ಯವಸ್ಥೆಯಿಂದ ಸತ್ಯದೊಂದಿಗೆ ಹೊರತೆಗೆದ (ಅಥವಾ ಮುನ್ನಡೆಸಿದ) ಹಾಗೆ – (8:5).

ಎಲ್ಲಾ ಉದ್ದೇಶ ಹಾಗೂ ತಾತ್ಪರ್ಯದಲ್ಲೂ, ಈ ವಾಕ್ಯವೃಂದದ ಪೂರ್ಣ ಪಠ್ಯವನ್ನು ನಾವು ಓದುವಾಗ, *ಬೈತಿ-ಕ* ಎಂಬುವುದು *ನಿನ್ನ ಮನೆ* ಎಂದಲ್ಲ, ಬದಲಾಗಿ *ನಿನ್ನ ವ್ಯವಸ್ಥೆ* ಎಂದಾಗಿದೆ ಎಂಬುವುದು ಸ್ಪಷ್ಟವಾಗುತ್ತದೆ.

> ಅಲ್ಲಾಹನ ಸ್ಮರಣೆ ಬಂದಾಗ ತಮ್ಮ ಹೃದಯದಲ್ಲಿ ಭಯದಿಂದ ವಿನಮ್ರವಾಗುವವರೇ ನಿಜವಾದ ವಿಶ್ವಾಸಿಗಳು. ಅವರ ಮುಂದೆ ವಚನಗಳನ್ನು ಓದಿದಾಗ ಅವರ ವಿಶ್ವಾಸವು ವೃದ್ಧಿಯಾಗುತ್ತದೆ. ಮತ್ತು ಅವರು ತಮ್ಮ ಪ್ರಭುವಿನ ಮೇಲೆ ಭರವಸೆಯಿಡುತ್ತಾರೆ. ಅವರು ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುತ್ತಾರೆ ಮತ್ತು ನಮ್ಮ ಅನುಗ್ರಹಗಳಿಂದ ಅವರು ದಾನವನ್ನು ನೀಡುತ್ತಾರೆ. ಇಂಥವರೇ ನಿಜವಾದ ವಿಶ್ವಾಸಿಗಳು, ಅವರಿಗಾಗಿ ತಮ್ಮ ಪ್ರಭುವಿನ ಕಡೆಯಿಂದ ಉನ್ನತ ಸ್ಥಾನ, ಕ್ಷಮೆ ಹಾಗೂ ಜೀವನಾಧಾರಗಳಿವೆ, ನಿಮ್ಮ ಪ್ರಭುವು ನಿಮ್ಮನ್ನು ನಿಮ್ಮ ವ್ಯವಸ್ಥೆಯಿಂದ ಸತ್ಯದೊಂದಿಗೆ ಹೊರತೆಗೆದ ಹಾಗೆ. ನಿಶ್ಚಯವಾಗಿಯೂ ವಿಶ್ವಾಸಿಗಳ ಪೈಕಿ ಕೆಲವರು ಹಿಂಜರಿಯುತ್ತಾರೆ, ತಮ್ಮ ಕಣ್ಣೆದುರೇ

> ಕಾಣುತ್ತಿರುವ ಮೃತ್ಯುವಿನ ಕಡೆಗೆ ಅಟ್ಟಲಾಗುತ್ತಿದೆಯೋ ಎಂಬಂತೆ ಅವರು ತಮಗೆ ಸತ್ಯವು ಸುಸ್ಪಷ್ಟವಾಗಿ ಪ್ರತ್ಯಕ್ಷವಾಗಿದ್ದರೂ ಅದರ ಬಗ್ಗೆ ತರ್ಕಿಸುತ್ತಾರೆ (8: 2-6)

ಸತ್ಯವು ಅವತೀರ್ಣಗೊಂಡ ನಂತರ, ಪ್ರವಾದಿಯನ್ನು ತನ್ನ ವ್ಯವಸ್ಥೆಯಿಂದ ಹೊರತೆಗೆಯಲಾಯಿತು ಎಂದು ನಮಗೆ ಹೇಳಲಾಗಿದೆ. ಸತ್ಯವು ಅವರಿಗೆ ಸುಸ್ಪಷ್ಟಗೊಳಿಸಿದ ನಂತರ ಅವರನ್ನು ಅವರ ಭೌತಿಕ ಮನೆಯಿಂದ ಹೊರತೆಗೆಯಲಾಯಿತು ಎಂದು ನಾವು ನಂಬಬೇಕಿತ್ತೇ? ಅಥವಾ ಅಲ್ಲಾಹನು ಅವರನ್ನು ಅವರ ಮನೆಯಿಂದ ಹೊರ ತೆಗೆದು ತನ್ನ ಮನೆಗೆ ಪ್ರವೇಶ ನೀಡಿದನೆಂದು ನಾವು ಹೇಳುತ್ತಿದ್ದೇವೆಯೇ?

ಹಾಗೆಯೇ, ಅರ್ಹರಾದಂತಹ ವಿಶ್ವಾಸಿಗಳನ್ನು ಅಲ್ಲಾಹನು ಅವರ ಹಿಂದಿನ ವ್ಯವಸ್ಥೆಯಿಂದ ಸತ್ಯದೊಂದಿಗೆ ಹೊರತೆಗೆಯುತ್ತಾನೆ. ಇಬ್ರಾಹೀಮರ ಇಚ್ಛೆಗೆ ಕೈಗೂಡಿಸುವಂತೆ, ಅವರು ಅಲ್ಲಾಹನ ವ್ಯವಸ್ಥೆಯಲ್ಲಿ ನಿಗದಿತ ನಿರ್ಬಂಧಗಳಿಗೆ ಅನುಸಾರವಾಗಿ ಜೀವಿಸಬೇಕು ಅಥವಾ *ಇಂದ ಬೈತು-ಲ್ ಮುಹರ್ರಮಿ* (ಇದನ್ನು ಮುಂದೆ ವಿವರಿಸಲಾಗಿದೆ).

ಇಲ್ಲಿರುವ ವಿವೇಕತೆಯು ಏನೆಂದರೆ, ಒಬ್ಬ ಮನುಷ್ಯನು ತನ್ನ ಮನೆಯಲ್ಲೇ ಅಲ್ಲಾಹನ ಅವತೀರ್ಣವನ್ನು ಹಾಗೂ ಬುದ್ಧಿವಂತಿಕೆಯನ್ನು ಕಲಿಯುತ್ತಿರುವಾಗ, ಅಲ್ಲಾಹನಿಗೆ ಅವನನ್ನು ಒಂದು ವ್ಯವಸ್ಥೆಯಿಂದ ಇನ್ನೊಂದಕ್ಕೆ ವರ್ಗಾಯಿಸಲು ಸಾಧ್ಯವಿದೆ.

ಅವರು ಅಲ್ಲಾಹನ ಮೇಲೆ ಹಾಗೂ ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿಡಲು ಮತ್ತು ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯಲು ಮತ್ತು ದಾನವನ್ನು ನೀಡಲು ಮುಂದುವರಿಸುತ್ತಾರೆ. ಕೆಳಗಿನ ವಚನವು ಪ್ರವಾದಿಯರ ಪತ್ನಿಯರನ್ನು ಉದ್ದೇಶಿಸಿ ಮಾತನಾಡುತ್ತದೆ:

> ನೀವು ನಿಮ್ಮ ಮನೆಗಳನ್ನು *(ಬುಯೂತಿಕುನ್ನ)* ಮೂಲತಾಣವನ್ನಾಗಿಸಿರಿ. ಹಿಂದಿನ ಜನರಲ್ಲಿನ ಅಜ್ಞಾನಿಗಳಂತೆ ವರ್ತಿಸಬೇಡಿರಿ. ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸಿರಿ ಮತ್ತು ಅಲ್ಲಾಹನನ್ನು ಹಾಗೂ ಅವನ ಸಂದೇಶವಾಹಕರನ್ನು ಅನುಸರಿಸಿರಿ. ವ್ಯವಸ್ಥೆಯಲ್ಲಿನ ಜನರ *(ಅಹ್ಲಲ್-ಬೈತಿ)* ಮಲಿನತೆಯಿಂದ ನಿಮ್ಮನ್ನು ಹೊರತೆಗೆಯಲು ಹಾಗೂ ನಿಮ್ಮನ್ನು ಸಂಪೂರ್ಣವಾಗಿ ಶುದ್ಧಗೊಳಿಸಲು ಅಲ್ಲಾಹನು ಇಚ್ಛಿಸುತ್ತಾನೆ. ನಿಮ್ಮ ಮನೆಯಲ್ಲಿ ಅಲ್ಲಾಹನ ವಚನಗಳಿಂದ ಹಾಗೂ ಬುದ್ಧಿವಂತಿಕೆಯಿಂದ ನಿಮಗೆ ಓದಿಕೇಳಿಸುವುದನ್ನು ನೀವು ಜ್ಞಾಪನೆಯಲ್ಲಿರಸಬೇಕು. ಖಂಡಿತವಾಗಿಯೂ, ಅಲ್ಲಾಹನು ಕರುಣೆಯುಳ್ಳವನೂ, ಸರ್ವಜ್ಞನೂ ಆಗಿರುತ್ತಾನೆ (33:33-34).

ವಚನ 33:33 ಹೇಳುತ್ತದೆ:

> *ಯೂರೀದುಲ್ಲಾಹ ಲಿ ಯುಧ್ಹಿಬ ಅನ್ಕುಮು-ರ್ರಿಜ್ಸ ಅಹ್ಲಲ್-ಬೈತಿ ಲಿಯುಥ್ಹಹ್ಹಿರಕುಮ್ ತಥ್ಹೀರಾ*

> ವ್ಯವಸ್ಥೆಯಲ್ಲಿನ ಜನರ ಮಲಿನತೆಯಿಂದ ನಿಮ್ಮನ್ನು ಹೊರತೆಗೆಯಲು ಹಾಗೂ ನಿಮ್ಮನ್ನು ಸಂಪೂರ್ಣವಾಗಿ ಶುದ್ಧಗೊಳಿಸಲು ಅಲ್ಲಾಹನು ಇಚ್ಛಿಸುತ್ತಾನೆ.

ಪ್ರವಾದಿ ಪತ್ನಿಯರು ಸ್ಥಳೀಯ ಅಜ್ಞಾನಿಗಳಾದ, ಮಲಿನ ವ್ಯವಸ್ಥೆಯ ಜನರಿಗೆ ಅಥವಾ ಅಹ್ಲುಲ್ ಬೈತಿಗೆ ಜನಿಸಿದವರಾಗಿದ್ದರು. ಈ ಅಹ್ಲಲ್ ಬೈತಿಯ ಅಶುದ್ಧತೆಯಿಂದ ಅಲ್ಲಾಹನು ಅವರನ್ನು ಹೊರತೆಗೆಯಲು ಇಚ್ಛಿಸುತ್ತಾನೆ ಮತ್ತು ತಮ್ಮ ಮನೆಗಳನ್ನೇ ತಮ್ಮ ಮೂಲತಾಣವಾಗಿ ಬಳಸಲು ಹೇಳುತ್ತಾನೆ. ಅವರನ್ನು ಅಲ್ಲಾಹನು ಸಂಪೂರ್ಣವಾಗಿ ಶುದ್ಧಗೊಳಿಸುವ ಸಲುವಾಗಿ, ಅಲ್ಲಾಹನನ್ನು ಹಾಗೂ ಸಂದೇಶವಾಹಕರನ್ನು ಅನುಸರಿಸಲು ಮತ್ತು ಅಲ್ಲಾಹನ ಅವತೀರ್ಣವನ್ನು ಹಾಗೂ ಅದರ ಯುಕ್ತಿಯನ್ನು ಜ್ಞಾಪಿಸುತ್ತಿರಲು ಮತ್ತು ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯಲು ಅವರಿಗೆ ಆಜ್ಞಾಪಿಸಲಾಯಿತು. ಅವರು ಅಜ್ಞಾನಿಗಳಾದ ಅಹ್ಲುಲ್ ಬೈತಿಯ ವರ್ತನೆಯನ್ನು ನಿಲ್ಲಿಸಬೇಕಾಗಿತ್ತು. ಸಾವಿರ ವರ್ಷಗಳಿಂತಲೂ ಹೆಚ್ಚಿನ ಕಾಲದಿಂದ, ಹಲವು ಅರಬರು ಅಹ್ಲುಲ್ ಬೈತಿಗೆ ಸಂಬಂಧಿಸಿಕೊಳ್ಳುವುದು ಒಂದು ಘನತೆಯಾಗಿದೆ ಎಂದು ನಂಬಿದ್ದಾರೆ. ಆದರೆ ಕುರ್‌ಆನ್ ಇದಕ್ಕೆ ವಿರುದ್ಧವಾಗಿ ಘೋಷಿಸುತ್ತದೆ. *ಅಹ್ಲಲ್ ಬೈತಿ* ಎಂದರೆ *ಅಲ್ಲಾಹನ ಮನೆಯ ಸದಸ್ಯರು* ಎಂದು ಅವರು ಹೇಳುತ್ತಾರೆ.

ವ್ಯವಸ್ಥೆ (ಬೈತಿ) ಮತ್ತು ಮನೆ (ಬುಯೂತಿ) ಎಂಬ ಎರಡೂ ಪದಗಳು 33:33-34 ರಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲಾಹನ ಮನೆಯ ಸದಸ್ಯರ *(ಅಹ್ಲಲ್ ಬೈತಿ)* ಅಪವಿತ್ರತೆಯಿಂದ ಪ್ರವಾದಿಗಳ ಪತ್ನಿಯರನ್ನು ಶುದ್ಧೀಕರಿಸಿ, ಮತ್ತು ಅವರನ್ನು ಸಂಪೂರ್ಣವಾಗಿ ಶುದ್ಧೀಕರಿಸಿ ನಂತರ ತಮ್ಮ ಮನೆಗಳನ್ನು *(ಬುಯೂತಿ)* ಅಲ್ಲಾಹನ ಹಾಗೂ ಅವನ ಸಂದೇಶವಾಹಕರನ್ನು ಅನುಸರಿಸಲು ಮೂಲತಾಣವನ್ನಾಗಿ ಬಳಸಲು ಅಲ್ಲಾಹನು ಇಚ್ಛಿಸಿದನೆಂದು ಹೇಳುವುದು ದಾರಿಗೆಡಿಸುವಂತಹುದಾಗಿದೆ.

ಬೈತ ಪದವು ಏಕವಚನ ಮತ್ತು *ಬುಯೂತ* ಪದವು ಬಹುವಚನವಾಗಿದೆ ಎಂದು ಧಾರ್ಮಿಕರು ಹೇಳುತ್ತಾರೆ. ಈ ತಪ್ಪು ತಿಳುವಳಿಕೆಯನ್ನು ಕುರ್‌ಆನ್ 29:41 ವಿವರಿಸಿದೆ. ಈ ವಚನದಲ್ಲಿ *ಬುಯೂತಿ* ಎಂಬ ಪದವು ಏಕವಚನದಲ್ಲಿ ಬಳಕೆಯಾಗಿದೆ.

> ಅಲ್ಲಾಹನನ್ನು ಹೊರತಾಗಿ ಇತರರನ್ನು ರಕ್ಷರನ್ನಾಗಿ ಮಾಡಿಕೊಂಡವರ ಉದಾಹರಣೆಯು ಒಂದು ಜೇಡರ ಹಾಗಿದೆ. ಅದು ಒಂದು ವ್ಯವಸ್ಥೆಯನ್ನು ತನ್ನದಾಗಿಸಿಕೊಂಡಿತು *(ಇತ್ತಹಧತ್ ಬೈತನ್)*. ಮತ್ತು ನಿಶ್ಚಯವಾಗಿಯೂ ಜೇಡರ ವ್ಯವಸ್ಥೆಯು *(ಲ-ಬೈತುಲ್-ಅಂಕಬೂತ್)* 'ಅತ್ಯಂತ ದುರ್ಬಲ ಮನೆಯಾಗಿದೆ' *(ಅವ್ಹನಲ್ ಬುಯೂತಿ)*, ಇವರು ಅರಿತಿರುತ್ತಿದ್ದರೆ. (29:41)

ಜನರು ಅಲ್ಲಾಹನ ಜೊತೆಗೆ ಇತರ ಮೂರ್ತಿಗಳನ್ನು ಒಂದು ವ್ಯವಸ್ಥೆಯಾಗಿ 'ತೆಗೆದುಕೊಳ್ಳು'ವುದನ್ನು ಸೂಚಿಸುವುದಕ್ಕಾಗಿ ಕುರ್‌ಆನ್ ಇಲ್ಲಿ '*ಇತ್ತಹಧೂ*' ಎಂಬ ಪದವನ್ನು ಬಳಸಿದೆ. ಅದೇ ಪದವನ್ನು *ಅಂಕಬೂತಿ ಇತ್ತಹಧತ್ ಬೈತನ್* ಎಂಬಲ್ಲಿ ಬಳಕೆಯಾದಾಗಲೂ, ಅದು ಜೇಡವು ಒಂದು ವ್ಯವಸ್ಥೆಯನ್ನು

‘ತೆಗೆದುಕೊಂಡಿತು’ ಎಂದರ್ಥವಾಗಿದೆ (ಅಲ್ಲದೇ ‘ನಿರ್ಮಿಸಿತು’ ಎಂಬ ಅರ್ಥವನ್ನು ಕೊಡುವುದು ಅಸಮರ್ಪಕವಾಗಿದೆ). ಹಾಗೆ ಮುಂದುವರಿದು, *ಅವ್ವನಲ್ ಬುಯೂತಿ* ಎಂಬುವುದು ‘***<u>ಅತ್ಯಂತ</u>*** *ದುರ್ಬಲ ಮನೆ*’ ಎಂದು ಸ್ಪಷ್ಟವಾಗಿ ಸೂಚಿಸಲಾದಾಗ, ಇಲ್ಲಿ ‘ಮನೆ’ ಎಂದಲ್ಲದೇ ‘ಮನೆಗಳು’ ಎಂದು ಅರ್ಥೈಸಲಾಗುವುದಿಲ್ಲ. ಏಕೆಂದರೆ, **‘ಅತ್ಯಂತ’** ಎಂಬ ಪದವು ‘ಹಲವಾರುಗಳ ನಡುವೆ ಕೇವಲ **ಒಂದು** ವಿಶಿಷ್ಟ ರೀತಿಯದ್ದು’ ಎಂಬ ಅರ್ಥವನ್ನು ಮಾತ್ರ ಕೊಡುತ್ತದೆ. *ಲ-ಬೈತುಲ್-ಅಂಕಬೂತ್* ಎಂಬ ಪದಗುಚ್ಛವು *ಅವ್ವನಲ್ ಬುಯೂತಿ* ಎಂಬುವುದರ ನಂತರ ಕಾಣಿಸಿಕೊಂಡಿರುವುದರಿಂದ ಅದು *ಅಂಕಬೂತಿ ಇತ್ತಹಧತ್ ಬೈತನ್* ಎಂಬ ಹಿಂದಿನ ಹೇಳಿಕೆಯನ್ನು ಪ್ರತಿಫಲಿಸುತ್ತದೆ. *ಇತ್ತಹಧತ್* ಗೆ ಕಟ್ಟುವುದು ಎಂಬ ಅರ್ಥವನ್ನು ಕೊಡುವುದು ತಪ್ಪಾಗಿದೆ. ಕುರ್‌ಆನಿನಲ್ಲಿ ‘ನಿರ್ಮಿಸುವುದಕ್ಕೆ’ *ಬನಯ* ಎಂಬ ಮೂಲಪದವನ್ನು ಹಾಗೂ ಅದರ ಉತ್ಪನ್ನಗಳನ್ನು ಬಳಸಲಾಗಿದೆ. ಈ ಪದವು 29:41 ರಲ್ಲಿ ಕಂಡುಬರುವುದಿಲ್ಲ. ಆದ್ದರಿಂದ *ಬೂಯೂತ* ಎಂಬುವುದು *ಬೈತ* ಪದದ ಬಹುವಚನವಲ್ಲ.

ಕುರ್‌ಆನಿನಲ್ಲಿ *ಬೈತಿಯ*

ಬೈತಿಯ ಎಂಬ ಪದವು 2:125, 22:26 ರಲ್ಲಿ (ಅಲ್ಲಾಹನ ವ್ಯವಸ್ಥೆಯನ್ನು ಸೂಚಿಸಲು) ಮತ್ತು 71:28 ರಲ್ಲಿ, ತನ್ನ ಜನರ ವ್ಯವಸ್ಥೆಗಿಂತ ಭಿನ್ನವಾದ ನೂಹರ ಜೀವನ ರೀತಿಯನ್ನು ಸೂಚಿಸುತ್ತದೆ. ಹೀಗೆ ಕುರ್‌ಆನಿನಲ್ಲಿ ಈ ಪದವು ಮೂರು ಬಾರಿ ಕಾಣಿಸಿಕೊಳ್ಳುತ್ತದೆ.

ಪ್ರವಾದಿ ನೂಹರ ಕಾಲದ ಮಹಾ ಪ್ರವಾಹದಲ್ಲಿ ಸತ್ಯ ವಿಶ್ವಾಸಿಗಳನ್ನು ಹೊರತು ಪಡಿಸಿ ಎಲ್ಲಾ ಜನರನ್ನು ಹಾಗೂ ಅವರ ಸ್ವತ್ತುಗಳನ್ನು ನಾಶಪಡಿಸಲಾಯಿತು. 71:26 ರಲ್ಲಿ ನೂಹರು ಹೇಳುತ್ತಾರೆ:

> “ಪ್ರಭುವೇ, ಭೂಮಿಯ ಮೇಲೆ ಒಬ್ಬ ಸತ್ಯನಿಷೇಧಿಯನ್ನು ಕೂಡ ಉಳಿಸಬೇಡ.”

ಹೆಚ್ಚಿನ ಯಹೂದಿ, ಕ್ರೈಸ್ತ ಮತ್ತು ಮುಸ್ಲಿಮರಿಗೆ ನೂಹರ ಈ ಕಥೆಯ ಬಗ್ಗೆ ತಿಳಿದಿದೆ. ಈ ಪ್ರವಾಹದ ವೇಳೆ ನೂಹರೂ ಸೇರಿದಂತೆ, ಎಲ್ಲರು ತಮ್ಮ ಮನೆಗಳನ್ನು ಕಳೆದುಕೊಂಡಿದ್ದರು. ಹಡಗಿನಲ್ಲಿರುವ ವೇಳೆ, ಅವರು ಅಲ್ಲಾಹನನ್ನು ಯಾಚಿಸಿದರು:

> ನನ್ನ ಪ್ರಭುವೇ ನನ್ನನ್ನು ಮತ್ತು ನನ್ನ ಮಾತಾಪಿತರನ್ನು ಮತ್ತು ನನ್ನ ವ್ಯವಸ್ಥೆಗೆ *(ಬೈತಿಯ)* ವಿಶ್ವಾಸಿಯಾಗಿ ಪ್ರವೇಶಿಸುವವರನ್ನು ಮತ್ತು ವಿಶ್ವಾಸಿ ಪುರುಷರನ್ನು ಮತ್ತು ವಿಶ್ವಾಸಿ ಮಹಿಳೆಯರನ್ನು ಕ್ಷಮಿಸು. ಮತ್ತು ದುಷ್ಟರಿಗೆ ನಾಶವನ್ನಲ್ಲದೇ ಬೇರೇನನ್ನೂ ವೃದ್ಧಿಸಬೇಡ. (71:28)

ಸ್ಪಷ್ಟವಾಗಿ, ಅಲ್ಲಾಹನು ನೂಹರಿಗೆ ಮಾರ್ಗದರ್ಶನ ಮಾಡಿರುವ ವ್ಯವಸ್ಥೆಯನ್ನಲ್ಲದೇ *(ಬೈತಿಯ)* ಅವರು ತನ್ನ ಭೌತಿಕ ಮನೆಯನ್ನು ಉಲ್ಲೇಖಿಸಿರುವುದಲ್ಲ. ಅಲ್ಲಿ ಯಾವುದೇ ಮನೆಯು ಬಾಕಿ ಉಳಿದಿರಲಿಲ್ಲ, ಏಕೆಂದರೆ ಆ ವೇಳೆಯಲ್ಲಿ ಎಲ್ಲವೂ ನಾಶವಾಗಿತ್ತು. ನೂಹರು ಅಲ್ಲಾಹನಿಗೆ ಈ ವಿನಂತಿಯನ್ನು ಮಾಡುವಾಗ ಅವರು ಹಡಗಿನಲ್ಲಿ ತೇಲುತ್ತಿದ್ದರು.

ನೂಹರು ತಮ್ಮ ವ್ಯವಸ್ಥೆಯನ್ನು ಅಥವಾ *ಬೈತಿಯ*ವನ್ನು ಪ್ರವೇಶಿಸಿದ ವಿಶ್ವಾಸಿಗಳನ್ನು ಕ್ಷಮಿಸಲು ಅಲ್ಲಾಹನೊಂದಿಗೆ ಯಾಚಿಸಿದರಲ್ಲದೆ, ಅವರ ಮನೆಗೆ ಪ್ರೇವೇಶಿಸಿದವರನ್ನಲ್ಲ. ಕೇವಲ ಅಲ್ಲಾಹನ ಪ್ರವಾದಿಗೆ ಸೇರಿದ ಭೌತಿಕ ಮನೆಯನ್ನು ಪ್ರವೇಶಿಸಿದ ಕಾರಣಕ್ಕಾಗಿ ಒಬ್ಬ ವ್ಯಕ್ತಿಯನ್ನು ಅಲ್ಲಾಹನು ಕ್ಷಮಿಸಬಹುದಾಗಿ ಕುರ್‌ಆನಿನಲ್ಲಿ ಯಾವುದೇ ಸೂಚನೆ ಇಲ್ಲ.

ಕುರ್‌ಆನಿನಲ್ಲಿ *ಬೈತ* ಎಂದರೆ *ವ್ಯವಸ್ಥೆ* ಹಾಗೂ *ಬೈತಿಯ* ಎಂದರೆ *ನನ್ನ ವ್ಯವಸ್ಥೆ* ಎಂದರ್ಥವಾಗಿದೆ. ಕಾಣದ ಅಲ್ಲಾಹನು ಒಂದು ಭೌತಿಕ ಮನೆಯಲ್ಲಿ ವಾಸ ಮಾಡುವುದಿಲ್ಲ ಹಾಗೂ ಅವನಿಗೆ ವಾಸಿಸಲು ಒಂದು ಮನೆಯ ಅಗತ್ಯವಿಲ್ಲ ಎಂಬುವುದು ನಮ್ಮಲ್ಲಿ ಪ್ರತಿಯೊಬ್ಬನಿಗೂ ತಿಳಿದಿದೆ

ಪ್ಯಾಲೆಸ್ತೀನಿನ ಅರಬರು ಹಳೆಯ ನಗರವಾದ ಜೆರುಸಲೆಮಿನ ಹೆಸರನ್ನು ಇತ್ತೀಚೆಗೆ *ಬೈತುಲ್ ಮುಕದ್ದಿಸ್* ಎಂದು ಬದಲಾಯಿಸಿದರು. ಅವರು ಜೆರುಸಲೆಮಿಗೆ *ಬೈತುಲ್* ಎಂಬ ಪದವನ್ನು ಬಳಸಿದಾಗ, ಅವರು ಇಲ್ಲಿ ಅದರ ಅರ್ಥ *ಮನೆ* ಎಂದು ಹೇಳಲಿಲ್ಲ, ಬದಲಿಗೆ ಅವರು ನೀಡಿದ ಅರ್ಥವು *ನಗರ* ಎಂದಾಗಿತ್ತು: *ಬೈತುಲ್ ಮುಕದ್ದಿಸ್* ಎಂದರೆ *ಪವಿತ್ರ ನಗರ* ಎಂದರ್ಥವಾಗಿದೆ. *ಮುಕದ್ದಿಸ್* ಎಂಬ ಪದವು *ಕುದುಸ್* ಎಂಬ ಮೂಲದಿಂದ ಪಡೆಯಲಾಗಿದೆ ಹಾಗೂ ಅದರ ಅರ್ಥವು *ಪವಿತ್ರ* ಎಂದಾಗಿದೆ.

ಕುರ್‌ಆನಿನಲ್ಲಿ *ಬೈತ್* ಎಂಬ ಪದದ ಇತರ ಬಳಕೆಗಳು:

ಬೈತ್-ಅಲ್-ಅತೀಕ್	22:29 ರಲ್ಲಿ	ಮೂಲ ವ್ಯವಸ್ಥೆ
ಬೈತ್-ಅಲ್-ಹರಾಮಿ	5:2 ಮತ್ತು 5:97 ರಲ್ಲಿ	ನಿರ್ಬಂಧಿತ ವ್ಯವಸ್ಥೆ
ಬೈತಿಕಲ್ ಮುಹರ್ರಮಿ	14:37 ರಲ್ಲಿ	ನಿನ್ನ ನಿರ್ಬಂಧಿತ ವ್ಯವಸ್ಥೆ

ಈ ಎಲ್ಲಾ ಪದಗಳು *ಮನೆಗೆ* ಸಂಬಂಧಿಸಿದೆ ಎಂದು ಧಾರ್ಮಿಕರು ಹೇಳುತ್ತಾರೆ. ಇದು ತಮ್ಮ ಆವಿಷ್ಕಾರಿತ ಅರಬೀ ಧರ್ಮವನ್ನು ಸಮರ್ಥಿಸಿಕೊಳ್ಳಲು ಮತ್ತು ತಮ್ಮ ಅನುಯಾಯಿಗಳು ಕಲ್ಲನ್ನು ತಮ್ಮ ಆರಾಧನೆಯಲ್ಲಿ ಕೇಂದ್ರೀಕರಿಸಿಕೊಳ್ಳಬೇಕೆಂದಲ್ಲದೇ ಬೇರೆ ಯಾವುದೇ ಕಾರಣಕ್ಕಾಗಿ ಅಲ್ಲ.

ಕುರ್‌ಆನನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಓದುವವರಿಗೆ ಹೀಗೆ ಸೂಚನೆ ನೀಡಲಾಗಿದೆ:

- ಒಂದನೇ ನಿಯಮ: ಅಜ್ಞಾನವು ನಿಮಗೆ ನರಕಕ್ಕೆ ಟಿಕೆಟ್ ಖರೀದಿಸಬಹುದು.

  ನಾವು *ಜಿನ್ನ್* ಮತ್ತು ಮಾನವರ ಪೈಕಿ ಅನೇಕರನ್ನು ನರಕಕ್ಕಾಗಿ ನಿಯೋಜಿಸಿದ್ದೇವೆ, ಅವರಿಗೆ ಹೃದಯಗಳಿವೆ ಆದರೆ ಅವರು ಅದರಿಂದ ವಿವೇಚಿಸುವುದಿಲ್ಲ, ಮತ್ತು ಅವರಿಗೆ ಕಣ್ಣುಗಳಿವೆ ಆದರೆ ಅವರು ಅವುಗಳಿಂದ ನೋಡುವುದಿಲ್ಲ, ಮತ್ತು ಅವರಿಗೆ ಕಿವಿಗಳಿವೆ ಆದರೆ ಅವರು ಅವುಗಳಿಂದ ಆಲಿಸುವುದಿಲ್ಲ. (7:179)

- ಎರಡನೇ ನಿಯಮ: ಅಜ್ಞಾನವು ಆನಂದದಾಯಕವಲ್ಲ.

  ನಿಶ್ಚಯವಾಗಿಯೂ, ಸಾಮಾನ್ಯ ಜ್ಞಾನವಿಲ್ಲದ ಕಿವುಡರೂ, ಕುರುಡರೂ, ಅಲ್ಲಾಹನ ಸೃಷ್ಟಿಗಳಲ್ಲಿ ನೀಚರಾಗಿದ್ದಾರೆ. (8:22)

- ಮೂರನೇ ನಿಯಮ: ಮತೀಯ ಸಿದ್ಧಾಂತಗಳನ್ನು ಪರಿಶೀಲನೆ ಮಾಡದೇ ಸ್ವೀಕರಿಸಬಾರದು.

  ನಿಮಗೆ ತಿಳುವಳಿಕೆಯಿಲ್ಲದ ಯಾವುದೇ ವಿಷಯವನ್ನು ಸ್ವೀಕರಿಸಬಾರದು. ನಿಶ್ಚಯವಾಗಿಯೂ ನಿಮ್ಮ ದೃಷ್ಟಿ, ಶ್ರವಣ ಮತ್ತು ಮಿದುಳುಗಳು ಪ್ರಶ್ನಿಸಲ್ಪಡುವುದು. (17:36)

  ಅಂದರೆ ಯಾರೋ ಹೇಳಿದರೆಂದು ನಾವು ಕಣ್ಣು ಮುಚ್ಚಿ ಅನುಸರಿದರೆ, ನಮ್ಮ ಕಣ್ಣುಗಳು, ಕಿವಿಗಳು ಹಾಗೂ ಮಿದುಳುಗಳನ್ನು ಏಕೆ ಉಪಯೋಗ ಪಡಿಸಲಿಲ್ಲ ಎಂಬ ಪ್ರಶ್ನೆಯನ್ನು ನಾವು ಎದುರಿಸಬೇಕಾಗುವುದು.

- ನಾಲ್ಕನೇ ನಿಯಮ: ಮೂರ್ಖನು ಯೋಚಿಸುವುದಿಲ್ಲ.

  ಅಲ್ಲಾಹನ ಇಚ್ಛೆಯಿಂದಲ್ಲದೆ ಯಾರಿಗೂ ವಿಶ್ವಾಸವಿರಿಸಲು ಸಾಧ್ಯವಿಲ್ಲ. ಸಾಮಾನ್ಯ ಜ್ಞಾನವನ್ನು ಬಳಸದವರಿಗೆ ಕೊಳಕನ್ನು ನಿಯೋಜಿಸಿದ್ದಾನೆ. (10:100)

ಕುರ್‌ಆನ್ ಓದಿದವರಿಗೆ ಅದರಲ್ಲಿನ ಅಲ್ಲಾಹನ ಅತಿ ಮುಖ್ಯವಾದ ಆದೇಶದ ಬಗ್ಗೆ ತಿಳಿದಿರಬೇಕು. ಅದು:

'ನೀವು ಅಲ್ಲಾಹನೊಂದಿಗೆ ಯಾವುದನ್ನೂ ಸಂಯೋಜಿಸಬಾರದು'

ಒಂದು ಮನೆ ಎಂದರೆ ಜನರು ವಾಸಿಸುವ ಒಂದು ಕಟ್ಟಡವಾಗಿದೆ, ಸಾಮಾನ್ಯವಾಗಿ ಒಂದು ಕುಟುಂಬಕ್ಕೆ ಸೇರಿದ ಜನರಿಗೆ ಸೇರಿರುವುದಾಗಿರುತ್ತದೆ. ಮಕ್ಕಾದಲ್ಲಿರುವ ಕಾಬಾ ಎಂದು ಧಾರ್ಮಿಕರಿಂದ ಕರೆಯಲ್ಪಡುವ ಮಾನವ ನಿರ್ಮಿತ ಚೌಕಾದರದ ಬಂಡೆಕಲ್ಲಿನ ಕಟ್ಟಡವನ್ನು ಸರ್ವಶಕ್ತನಾದ ಅಲ್ಲಾಹನಿಗೆ ಸಂಯೋಜಿಸುವುದು, ನಮ್ಮ ವಿವೇಕ ಮತ್ತು ಸಾಮಾನ್ಯ ಜ್ಞಾನದ ವಿರುದ್ಧ ವಿಧಿಸುವ ಹಿಂಸೆಯಾಗಿದೆ.

ತಾವು ಒಂದು ಕಲ್ಲಿನ ಕಟ್ಟಡವನ್ನು ಅಲ್ಲಾಹನೊಂದಿಗೆ ಏಕೆ ಸಂಯೋಜಿಸುತ್ತಿದ್ದೇವೆ ಎಂದು ಅರಬೀ ಧರ್ಮದ ಅನುಯಾಯಿಗಳು ಕೇಳಬೇಕು. ಅಲ್ಲಾಹನ ಗ್ರಂಥದ ಜೀವಾಳವನ್ನು ಅರಿತುಕೊಳ್ಳಲು, ನಮಗೆ ಕೇವಲ ಒಂದು ಸಾಧಾರಣ ಪ್ರಮಾಣದ ಸಾಮಾನ್ಯ ಜ್ಞಾನವು ಅಗತ್ಯವಿದೆಯಷ್ಟೆ. ಇದು ಧಾರ್ಮಿಕರು ಸ್ವತಃ ತಮ್ಮ ಸಾಂಸ್ಕೃತಿಕ ಮತ್ತು ಲೌಕಿಕ 'ಯೋಗಕ್ಷೇಮ'ಕ್ಕಾಗಿ ರಚಿಸಿರುವ ಅನುಕೂಲಕರ ಸುಳ್ಳಾಗಿದೆ. ಅವರು ಅದನ್ನು ಅಲ್ಲಾಹನ ಮನೆ ಎಂದು ಹೇಳುತ್ತಾರೆ, ಆದರೆ ಅದೇ ಉಸಿರಿನಲ್ಲಿ ಅವರು, ಅಲ್ಲಾಹನು ಆ ಮನೆಯಲ್ಲಿ ವಾಸಿಸುವುದಿಲ್ಲ ಎಂದೂ ಕೂಡ ಹೇಳುತ್ತಾರೆ. ಮುಂದಿನ ಬಾರಿ ನೀವು ಯಾವುದೇ ಒಂದು ಅರಬೀ ಪುರೋಹಿತನನ್ನು ಭೇಟಿ ಮಾಡಿದರೆ, 'ಭೂಮಿಯ ಮೇಲಿರುವ ಅಲ್ಲಾಹನ ಮನೆಯ ಬಗ್ಗೆ, ವಾಸ್ತವದಲ್ಲಿ ನಾವು ಯಾವ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕೆಂದು ಅವರು ಬಯಸುತ್ತಾರೆ' ಎಂಬುವುದನ್ನು ಕೇಳಿ ನೋಡಿ. ಅಂತಿಮವಾಗಿ, ಅವರು ನಮಗೆ, 'ಅದು ಅಲ್ಲಾಹನ ಮನೆಯಾಗಿದೆ, ಆದರೆ ಅವನು ಅಲ್ಲಿ ವಾಸಿಸುವುದಿಲ್ಲವೆಂದು ನಾವು ಭಾವಿಸಿಕೊಳ್ಳಬೇಕು' ಎಂದು ಉತ್ತರಿಸುತ್ತಾರೆ.

ಆದಾಗ್ಯೂ, ಮನೆಯನ್ನು ಕಟ್ಟಿದ ನಂತರ, ಆ ಕಟ್ಟಡವನ್ನು ಅವರು ಪವಿತ್ರಗೊಳಿಸಿದರು. ಧಾರ್ಮಿಕರನ್ನು ಕೇಳಿರಿ:

- ಯಾವ ಗಳಿಗೆಯಿಂದ ಆ ಪರ್ವತದಿಂದಿರುವ ಬಂಡೆಗಳು ಪವಿತ್ರಗೊಂಡವು?
- ಪರ್ವತದಿಂದ ತೆಗೆದುಕೊಳ್ಳುವ ಮುಂಚೆಯೇ ಪವಿತ್ರವಾಗಿದ್ದರೆ, ಅರಬರು ಅವುಗಳನ್ನು ತೆಗೆದುಕೊಂಡು ಆ ಪರ್ವತವನ್ನು ಅಪವಿತ್ರಗೊಳಿಸಿದಂತಾಗಲಿಲ್ಲವೇ?
- ಇದ್ಯಾವುದೂ ಒಂದು ಸ್ಪಷ್ಟ ನಿರ್ಣಯವಾಗಿ ಪರಿಣಮಿಸದಿದ್ದಲ್ಲಿ, ಅವರು ವಾಸ್ತವದಲ್ಲಿ ಏನು ಹೇಳ ಬಯಸುತ್ತಿದ್ದಾರೆ?

ವಾಸ್ತವವೇನೆಂದರೆ, ಧಾರ್ಮಿಕರು ಈ ಪ್ರಶ್ನೆಗಳಿಗೆ ಯಾವುದೇ ಉತ್ತರಗಳನ್ನು ಹೊಂದಿಲ್ಲ. ಅವರ ಭವ್ಯ ಯೋಜನೆಯು ಏನೆಂದರೆ, ಇಸ್ಲಾಮಿನ ವಿರುದ್ಧ ಕುತಂತ್ರವೆಸಗುವುದು ಮತ್ತು ಕೊನೆಯ ಪ್ರವಾದಿಗೆ ಅಲ್ಲಾಹನು ಅವತರಿಸಿದ ಶಾಂತಿಪರತೆಯ ಜೀವನ ರೀತಿಯನ್ನು ನಾಶಪಡಿಸುವುದಾಗಿದೆ. ಮೊದಲು, ಅವರು ವಿಗ್ರಹಗಳನ್ನು ಕಟ್ಟಿದರು. ನಂತರ ಕಟ್ಟುಕಥೆಗಳನ್ನು ಸೃಷ್ಟಿಸಿದರು. ನಂತರ, ತಮ್ಮ ಪಿತೂರಿಯನ್ನು ಸಮರ್ಥಿಸಿಕೊಳ್ಳಲು, ಪವಿತ್ರ ಗ್ರಂಥದ ಅಲ್ಲಾಹನ ಪದಗಳನ್ನು ಅವರು ಭ್ರಷ್ಟಗೊಳಿಸಿದರು. ನಂತರ ತಮ್ಮನ್ನು ನಂಬಿಕೆಯ ಮತ್ತು ಭಾಷೆಯ ಅಧಿಕಾರಿಗಳನ್ನಾಗಿ ಸ್ಥಾಪಿಸಿದರು. ಧಾರ್ಮಿಕರು *ಬೈತಿಲ್ ಹರಾಮಿ* ಮತ್ತು *ಬೈತುಲ್ ಮುಹರ್ರಮಿ* ಎಂಬ ಪದಗಳನ್ನು ಸಹ ತಪ್ಪಾಗಿ ನಿರೂಪಿಸಿದರು ಮತ್ತು ಪ್ರಸ್ತುತಪಡಿಸಿದರು. ಆ ಪದಗಳು 'ಪವಿತ್ರ ಮನೆ' ಎಂದರ್ಥವನ್ನು ನೀಡುತ್ತದೆ ಎಂದು ಹೇಳುತ್ತಾರೆ. ಮುಂದಿನ ಬಾರಿ ನೀವು ಒಂದು ಅರಬೀ ಪುರೋಹಿತನನ್ನು ಭೇಟಿ ಮಾಡಿದರೆ ಅವರನ್ನು ಹೀಗೆ ಕೇಳಿರಿ: ನಿಷೇಧಿತ ಅಥವಾ ನಿರ್ಬಂಧಿತ *(ಹರಾಮ್)* ಎಂಬ ಪದವು ಪವಿತ್ರವೆಂದು ಅರ್ಥಕೊಡಲು ಯಾವಾಗ ಆರಂಭಿಸಿತು? ನಂತರ ಹೀಗೂ ಕೇಳಿರಿ:

ಬೈತುಲ್ ಮುಕದ್ದಿಸ್ ಎಂಬ ಪದವು ಏನಾಗಿದೆ? ಅವರು *ಬೈತ* ಎಂದರೆ *ಒಂದು ಮನೆ* ಮತ್ತು ಕುದುಸ್ ಎಂದರೆ ಪವಿತ್ರ ಆಗಿದ್ದರೆ, ಜೆರುಸಲೆಮ್ 'ಪವಿತ್ರ ಮನೆ' ಅಲ್ಲವೇ? ಅವರ ಪ್ರತಿಕ್ರಿಯೆಯು ಬಹುಶಃ ಋಣಾತ್ಮಕವಾಗಿರುತ್ತದೆ. ಅದು ಸೌದಿ ಅರೇಬಿಯಾದಲ್ಲಿ ಇಲ್ಲದ ಕಾರಣ, ಅದರ ಅರ್ಥವು ಹಾಗೆ ಆಗಿರಲು ಸಾಧ್ಯವಿಲ್ಲ.

ಅರಬೀ ಧರ್ಮದ ಅತ್ಯಂತ ಸನ್ಮಾನ್ಯ ಪುರೋಹಿತರೂ ಸೇರಿದಂತೆ, ಯಾವುದೇ ಅರಬರು ಇಂತಹ ಯಾವುದೇ ವಿಷಯಕ್ಕೆ ಸ್ಪಷ್ಟನೆ ನೀಡಲು ಮುಂದೆ ಬಾರದಿದ್ದ ಕಾರಣ, ನಾವು ಕೇವಲ ಉನ್ನತ ಮಟ್ಟದ ಪ್ರಮಾಣವಾದ ಕುರ್'ಆನನ್ನು ಮಾತ್ರ ಅವಲಂಬಿಸೋಣ.

'ಹರಾಮ್' ಅಂದರೆ 'ಪವಿತ್ರ' ಎಂದಲ್ಲ

ಕುರ್'ಆನ್ ಉಪಯೋಗಿಸುವ ಪ್ರಕಾರ *ಹರಾಮ್* ಪದಕ್ಕೆ - ನಿರಾಕರಿಸಲಾದ, ಕಸಿದುಕೊಂಡಂತಹ, ನಿರ್ಬಂಧಿತ, ನಿಷೇಧಿತ ಅಥವಾ ಪ್ರತಿಬಂಧಿತ - ಎಂಬ ಅರ್ಥಗಳು ಇವೆ.

ಉದಾಹರಣೆಗೆ, *ಹರಾಮ್* ಪದವು *ಬೈತ* ಪದದೊಂದಿಗೆ ಕುರ್'ಆನಿನಲ್ಲಿ ಮೂರು ವಚನಗಳಲ್ಲಿ ಬಳಕೆಯಾಗಿದೆ. ಇವುಗಳು ವ್ಯವಸ್ಥೆಗೆ ಅಥವಾ ಬೈತಕ್ಕೆ ಸಂಬಂಧಿಸಿದ ಕೆಲವು ನಿರ್ಬಂಧಗಳನ್ನು ಸೂಚಿಸುತ್ತದೆ.

ಅದೇ ಪದವನ್ನು *ಮಸ್ಜಿದ್* (ಸಮ್ಮತಿಸಲ್ಪಟ್ಟ ಆದೇಶ) ಎಂಬ ಪದದೊಂದಿಗೆ ಜೋಡಿಸಿದಾಗ, ಅದು ಸಮ್ಮತಿಸಲ್ಪಟ್ಟ ಆದೇಶಗಳಲ್ಲಿನ ನಿರ್ದಿಷ್ಟ ನಿರ್ಬಂಧಗಳನ್ನು ಸಂಕೇತಿಸುತ್ತದೆ. ಸ್ಪಷ್ಟತೆಗಾಗಿ, ಇದನ್ನು *ನಿಷೇಧಾಜ್ಞೆ* ಎಂದು ಕರೆಯಲಾಗುತ್ತದೆ. ಅಂದರೆ: ಜನರು ಕೆಲವು ನಿರ್ದಿಷ್ಟ ನಿರ್ಬಂಧಗಳನ್ನು ಅನುಸರಿಸುವ ಸಲುವಾಗಿ ಅಲ್ಲಾಹನು ಹೇರಿದ ಹಾದಿ ಅಥವಾ ರೀತಿಯಾಗಿದೆ. ಆದಾಗ್ಯೂ, ಸಾಮಾನ್ಯ ಬಳಕೆಯಲ್ಲಿ *ಬೈತಲ್ ಹರಮ್* ಎಂಬುವುದಕ್ಕೆ *'ವ್ಯವಸ್ಥೆಯಲ್ಲಿನ ನಿರ್ಬಂಧಗಳು'* ಅಥವಾ *ಮಸ್ಜಿದಲ್ ಹರಮ್* ಎಂಬುವುದಕ್ಕೆ 'ಸಮ್ಮತಿಸಲ್ಪಟ್ಟ ಆದೇಶಗಳಲ್ಲಿನ ನಿರ್ಬಂಧಗಳು' ಎಂಬ ಅರ್ಥವನ್ನು ಹೇಳಬಹುದು.

ಉದಾಹರಣೆಗೆ, 5:2 ಹೇಳುತ್ತದೆ, *ಆಮ್ಮೀನಲ್ ಬೈತಲ್ ಹರಾಮ್*[55]. ಇದರ ಅರ್ಥವು *ವ್ಯವಸ್ಥೆಯಲ್ಲಿನ ನಿರ್ಬಂಧಗಳ ಶಾಂತಿಯುತ ಸಾಮರಸ್ಯ* ಎಂದಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳಬೇಕಾದರೆ, ಇದು *ವ್ಯವಸ್ಥೆಯಲ್ಲಿ ನಿಗದಿ ಪಡಿಸಲ್ಪಟ್ಟ ನಿರ್ಬಂಧಗಳ ಶಾಂತಿಯುತ ಸಾಮರಸ್ಯ*[56] ಎಂದಾಗಿದೆ. ಈ ವಚನದಲ್ಲಿರುವ ನಿರ್ಬಂಧಗಳು, ಅವನ ವ್ಯವಸ್ಥೆಯಲ್ಲಿ ಪರಿಪೂರ್ಣ

[55] ಈ ಪದದ ಅರ್ಥವು 'ಪವಿತ್ರ' ಎಂಬುವುದಾಗಿದೆ ಎಂದು ಹೇಳುವ ಮೂಲಕ ಧಾರ್ಮಿಕರು ಮುಸ್ಲಿಮರನ್ನು ವಂಚಿಸಿದ್ದಾರೆ.

ಸಾಮರಸ್ಯವನ್ನು ಕಾಯ್ದುಕೊಳ್ಳುವ ಸಲುವಾಗಿ ಅಲ್ಲಾಹನು ತನ್ನ ಆಜ್ಞೆಗಳಿಗೆ ಅನುಸಾರವಾಗಿ ಹೇರಿದ ಮಿತಿಗಳಾಗಿವೆ.

ಈ ಪದವು 5:2 ರಲ್ಲಿ ಮಾತ್ರ ಕಾಣಿಸಿಕೊಂಡಿದೆ. ಅದೇ ವಚನವು ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘನೆ ಮಾಡುವುದರ ಬಗ್ಗೆ ಮಾತನಾಡುತ್ತದೆ. ಅದೇ ವಚನದಲ್ಲಿ ಬೇಟೆಯ ಮೇಲಿನ ನಿಷೇಧಾಜ್ಞೆಗಳನ್ನು ಗೊತ್ತುಪಡಿಸುತ್ತಾ , *ಶಹ್ರಲ್ ಹರಾಮ* ಅಂದರೆ *ನಿರ್ಬಂಧಿತ ತಿಂಗಳುಗಳು, ಹದ್ಯ* ಅಂದರೆ *ಮಾರ್ಗದರ್ಶನ, ಖಲಾಇದ* ಅಂದರೆ *ಸೂಚಕ* ಎಂಬ ಪದಗಳನ್ನು ಉಲ್ಲೇಖಿಸುತ್ತದೆ, ಅದು ನಿರ್ಬಂಧಗಳಲ್ಲಿನ ಸಾಮರಸ್ಯವನ್ನು ಅಥವಾ ಅಲ್ಲಾಹನ ವ್ಯವಸ್ಥೆಯಲ್ಲಿನ ನಿರ್ಬಂಧಗಳನ್ನು ಒಳಗೊಂಡಿದೆ.

ಇದೇ ತರಹ, ಅವತೀರ್ಣವನ್ನು ಪಡೆದ ನಂತರ, ಪ್ರವಾದಿಗೆ ತಮ್ಮನ್ನು ಸಮ್ಮತಿಸಲ್ಪಟ್ಟ ನಿರ್ಬಂಧಗಳಿಗೆ ಅಥವಾ *ಮಸ್ಜಿದಲ್ ಹರಾಮಿ*[57] ನ ಕಡೆಗೆ ಕೇಂದ್ರೀಕೃತಗೊಳ್ಳಲು ಸೂಚಿಸಲಾಗಿದೆ. ಇದು ಗ್ರಂಥದಲ್ಲಿನ ನಿಗದಿತ ನಿರ್ಬಂಧಗಳ ವಿವರಗಳನ್ನು ಒಳಗೊಂಡಿದೆ.

> ನೀವು ಸಮ್ಮತಿಸಲ್ಪಟ್ಟ ನಿರ್ಬಂಧಗಳಿಗೆ *(ಮಸ್ಜಿದಲ್ ಹರಾಮಿ)* ನಿಮ್ಮನ್ನು ಕೇಂದ್ರೀಕರಿಸಿರಿ. ನೀವು ಎಲ್ಲೇ ಆಗಿರಿ, ನೀವು ನಿಮ್ಮನ್ನು ಅದಕ್ಕೆ ಕೇಂದ್ರಿತಗೊಳಿಸಬೇಕು. ಹಿಂದಿನ ಗ್ರಂಥವನ್ನು ಸ್ವೀಕರಿಸಿದವರು ಸಹ, ಇದು ತಮ್ಮ ಪ್ರಭುವಿನಿಂದಿರುವ ಸತ್ಯವೆಂದು ಗುರುತಿಸುತ್ತಾರೆ. (2:144)

ಹರಾಮ್ ಎಂಬ ಪದವು - ಸ್ವತಂತ್ರವಾಗಿ ಬಳಕೆಯಾದಾಗ – 'ನಿರಾಕರಿಸಲಾದ' ಅಥವಾ 'ಕಸಿದುಕೊಂಡ' ಎಂಬ ಅರ್ಥವನ್ನು ಕೊಡುತ್ತದೆ. *ಹುರುಮುನ್* ಎಂಬ ಪದವು ಅದೇ ಮೂಲದಿಂದ ಪಡೆಯಲಾಗಿದೆ ಮತ್ತು *ನಿರ್ಬಂಧಿತ* ಎಂಬ ಅರ್ಥವನ್ನು ಸಂಕೇತಿಸುವ ಅನಿಶ್ಚಿತ ನಾಮಪದವಾಗಿದೆ. ಅದೇ ಮೂಲದಿಂದ ಉತ್ಪತ್ತಿಯಾಗುವ ಇತರ ಪದಗಳ ಉದಾಹರಣೆಗಳು, *ಹುರ್ರಿಮತ್* ಅಥವಾ *ಯು-ಹರ್ರಿಮು* ಎಂಬ ಪದಗಳು *ನಿಷೇಧಿತ* ಎಂದು ಅರ್ಥೈಸಬಹುದಾದ ಪರಿಪೂರ್ಣ ಅಥವಾ ಅಪೂರ್ಣ ಕರ್ತರಿಯಾಗಿದೆ.

ಪ್ಯಾಲೆಸ್ತೀನಿನ ಅರಬರು ತಮ್ಮ ನಂಬಿಕೆಯ ಪ್ರಕಾರ ಜೆರುಸೆಲಮ್ ನಗರವನ್ನು *ಬೈತುಲ್-ಮುಕದ್ದಸ್* ಎಂದು ಹೊಸ ಹೆಸರಿನಿಂದ ಕರೆದಾಗ ಧಾರ್ಮಿಕರ ಬೂಟಾಟಿಕೆಯು ಬಹಿರಂಗಗೊಂಡಿತು. ಧಾರ್ಮಿಕರು ವಾದಿಸುವಂತೆ, *ಬೈತುಲ್ ಹರಾಮ್* ಸಹ 'ಪವಿತ್ರ ಮನೆ' ಎಂಬ ಅರ್ಥವನ್ನು ನೀಡುತ್ತದೆ ಎಂದಾದರೆ, ಅವರು

---

[56] ಅಂದರೆ, ಪ್ರಕೃತಿಯನ್ನು ಕೆಡಿಸಬೇಡಿ ಎಂದಾಗಿದೆ. ವನ್ಯಜೀವಿ ಸಂರಕ್ಷಣೆಯು ಅಲ್ಲಾಹನು ತನ್ನ ವ್ಯವಸ್ಥೆಯಲ್ಲಿ ನಿರ್ಬಂಧಗೊಳಿಸಿದ ಒಂದು ನಿಷೇಧಾಜ್ಞೆಯಾಗಿದೆ ಅಥವಾ *ಬೈತಲ್ ಹರಾಮ.* ಅವನು ಭೂಮಿ ಆಕಾಶಗಳಲ್ಲಿರುವ ಪ್ರತಿಯೊಂದನ್ನೂ ಒಂದು ಪರಿಪೂರ್ಣ ಸಮತೋಲನದಲ್ಲಿ ಸೃಷ್ಟಿಸಿದ್ದಾನೆ. ಆದ್ದರಿಂದ ವನ್ಯಜೀವಿಗಳ ಬೇಟೆಯನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಅನುಮತಿಸಲಾಗಿದೆ.

[57] ಈ ಪದವು ಮಕ್ಕಾದಲ್ಲಿರುವ 'ತಮ್ಮ ಮಸೀದಿ'ಯನ್ನು ಉಲ್ಲೇಖಿಸುತ್ತದೆ ಎಂದು ಅರಬರು ಎಲ್ಲರನ್ನು ವಂಚಿಸಿದ್ದಾರೆ.

ಜೆರುಸೆಲಮಿಗೆ *ಬೈತುಲ್-ಮುಕದ್ದಸ್* ಎಂಬ ಪದವನ್ನು ಯಾವತ್ತೂ ಬಳಸುತ್ತಿರಲಿಲ್ಲ. ಏಕೆಂದರೆ ಸ್ವರೂಪ ಮತ್ತು ಕಾರ್ಯನಿರ್ವಹಣೆ, ಇವೆರಡಕ್ಕೂ ಅದು ಹೊಂದುವುದಿಲ್ಲ.

ಹರಾಮ್ ಪದವನ್ನು *ಪವಿತ್ರ* ಎಂದಾಗಿ ಬದಲಾಯಿಸುವುದು ಕುರ್‌ಆನಿನ ಸಂದೇಶವನ್ನು ಬದಲಾಯಿಸಲು ನಡೆಸಿರುವ ಒಂದು ಪ್ರಯತ್ನವಾಗಿದೆ. ಏಕೆಂದರೆ ಪವಿತ್ರ ಎಂದು ಅರ್ಥಕೊಡಲು ಕುರ್‌ಆನ್ ಬಳಸಿರುವ ಪದವು *ಕುದುಸ್* ಎಂದಾಗಿದೆ. ಕುರ್‌ಆನಿನಲ್ಲಿ ಈ ಪದವು ಇಸ್ರಾಯೀಲರ ಮಕ್ಕಳಿಗೆ ನಿಯೋಜಿಸಲಾದ ಪವಿತ್ರ ಭೂಮಿಯನ್ನು *(ಅರ್ಧಿಲ್ ಮುಕದ್ದಸತ)* ಉಲ್ಲೇಖಿಸಲು ಬಳಸಲಾಗುತ್ತದೆ. ಅವರು ಆ ಪವಿತ್ರ ಭೂಮಿಯನ್ನು ಪ್ರವೇಶಿಸಲು ನಿರಾಕರಿಸಿದರು ಎಂದು 5:21 ವಚನವು ಹೇಳುತ್ತದೆ. 20:12 ಮತ್ತು 79:16 ವಚನಗಳು ಅದೇ ಪದವನ್ನು *ತುವಾದ ಪವಿತ್ರ ಕಣಿವೆಯನ್ನು* (ಮುಕದ್ದಸಿ-ತುವಾ) ಉಲ್ಲೇಖಿಸಲು ಬಳಸಿದೆ. ಕೊನೆಯದಾಗಿ, ಪವಿತ್ರವಾದ ಆತ್ಮ ಅಥವಾ *ರೂಹಿಲ್ ಕುದುಸ್* ಎಂಬುವುದು ಮರ್ಯಮರ ಮಗನಾದ ಈಸಾರ ಅಂತರಾಳದಲ್ಲಿದ್ದ ಪವಿತ್ರವಾದ ಆತ್ಮದ ಅಸ್ತಿತ್ವವನ್ನು ವಿವರಿಸಲು ಬಳಸಲಾಗಿದೆ.

ಈ ಪದವು ಕುರ್‌ಆನಿನಲ್ಲಿ ಎರಡು ಬೇರೆ ಬೇರೆ ಸ್ಥಳಗಳಲ್ಲಿ ಅಲ್ಲಾಹನಿಗೆ ಸಂಬಂಧಿಸಿದೆ.

> ಅವನು ಅಲ್ಲಾಹನು, ಘನತೆಯುಳ್ಳವನು, ಅವನ ಹೊರತು ಬೇರೆ ಯಾವುದೇ ದೇವನಿಲ್ಲ. ಅವನು ಸಾಮ್ರಾಟನು, ಪವಿತ್ರನು *(ಕುದ್ದೂಸ್)*, ಶಾಂತಿದಾತನು, ನಿಷ್ಠಾವಂತನು, ಶ್ರೇಷ್ಟನು, ಸರ್ವಶಕ್ತನು, ಸಹಾನುಭೂತಿಯುಳ್ಳವನು, ಘನತೆಯುಳ್ಳವನು, ಅವರು ಸಂಯೋಜಿಸುತ್ತಿರುವುದಕ್ಕಿಂತ ಮೇಲಾಗಿ ಅವನು ವೈಭವೀಕರಿಸಲ್ಪಡುವವನಾಗಿದ್ದಾನೆ. (59:23)
>
> ಸಾಮ್ರಾಟನೂ, ಪವಿತ್ರನೂ *(ಕುದ್ದೂಸ್)*, ಸರ್ವಶಕ್ತಿನೂ, ನ್ಯಾಯಾಧಿಪತಿಯೂ ಆದ ಅಲ್ಲಾಹನನ್ನು ಆಕಾಶಗಳಲ್ಲಿರುವ ಪ್ರತಿಯೊಂದು ಭೂಮಿಯಲ್ಲಿರುವ ಪ್ರತಿಯೊಂದೂ ವೈಭವೀಕರಿಸುತ್ತದೆ. (62:1)

ಪವಿತ್ರ ಎಂಬ ಅರ್ಥವನ್ನು ಸೂಚಿಸಲು *ಕುದ್ದೂಸ್* ಎಂಬ ಪದವನ್ನು ಬಳಸಲಾಗುತ್ತದೆಯೇ ವಿನಹಃ *ಹರಾಮ್* ಎಂಬ ಪದವನ್ನಲ್ಲವೆಂದು ಇಲ್ಲಿ ಸ್ಪಷ್ಟವಾಗಿ ನಮಗೆ ಕಾಣಬಹುದು.

ಬೈತಲ್ ಹರಾಮಿ ಎಂಬುವುದು *ನಿರ್ಬಂಧಿತ ವ್ಯವಸ್ಥೆ* ಎಂದಾಗಿದೆ, ಮತ್ತು *ಇಂದ ಬೈತಿಕಲ್ ಹರಾಮಿ* ಎಂಬುವುದು *'ನಿನ್ನ ನಿರ್ಬಂಧಿತ ವ್ಯವಸ್ಥೆಯ ಪ್ರಕಾರ'* ಎಂದಾಗಿದೆ. ಧಾರ್ಮಿಕರು *ಬೈತಲ್ ಹರಾಮಿ* ಎಂದರೆ ಪವಿತ್ರ ಮನೆ ಮತ್ತು *ಇಂದ ಬೈತಿಕಲ್ ಹರಾಮಿ* ಎಂದರೆ *ನಿನ್ನ ಪವಿತ್ರ ಮನೆಯ ಹತ್ತಿರ* ಎಂದು ಹೇಳುತ್ತಾರೆ.

ಇಬ್ರಾಹೀಮರಿಗೆ ಈ ವ್ಯವಸ್ಥೆಯ ಅಥವಾ ಬೈತದ ಕಡೆಗೆ ಹಾದಿ ತೋರಿಸಲಾಗಿದೆ ಎಂದು ಕುರ್‌ಆನ್ ನಮಗೆ ಹೇಳುತ್ತದೆ. ಅವರ ದಾರಿಯನ್ನು ಅನುಸರಿಸಲು ಬಯಸುವವರು ಅದೇ ವ್ಯವಸ್ಥೆಗೆ ತಮ್ಮನ್ನು ಬದ್ಧರಾಗಿಸಬೇಕು. ಇಬ್ರಾಹೀಮರು 14:37 ರಲ್ಲಿ *ಇಂದ ಬೈತಿಕಲ್ ಹರಾಮಿ* ಎಂಬ ಪದಗಳನ್ನು ಬಳಸಿದರು ಏಕೆಂದರೆ ಅವರು ತನ್ನ ಸಂತತಿಯು ಅಲ್ಲಾಹನ ವ್ಯವಸ್ಥೆಯಲ್ಲಿನ ನಿರ್ಬಂಧಗಳ ಪ್ರಕಾರ ಜೀವಿಸಬೇಕು ಎಂದು

ಇಚ್ಛಿಸಿದರು. ಇಬ್ರಾಹೀಮರು ಬದ್ಧರಾಗಿದ್ದ ವ್ಯವಸ್ಥೆಯು ಅದೇ ಆಗಿತ್ತು. ತಮ್ಮ ಸಂತತಿಗಳು ಮತ್ತು ಅವರ ಹಾದಿಯನ್ನು ಪಾಲಿಸುವ ವಿಶ್ವದ ಎಲ್ಲಾ ಜನರು, ಅಲ್ಲಾಹನ ನೆರೆವಾಸಿಯಾಗಿರಬೇಕೆಂದು ಇಬ್ರಾಹೀಮರು ಇಚ್ಛಿಸಿದರೆಂದು ಅರ್ಥೈಸುವುದು ಅವಿವೇಕತೆಯಾಗಿದೆ.

- *ಬೈತಿಯ:* 2:125 ರಲ್ಲಿ ಅಲ್ಲಾಹನು ಇಬ್ರಾಹೀಮ್ ಮತ್ತು ಇಸ್ಮಾಯೀಲರಿಗೆ ತನ್ನ ವ್ಯವಸ್ಥೆಯನ್ನು ಉದ್ದೇಶಿಸಿ, *ನನ್ನ ವ್ಯವಸ್ಥೆಯನ್ನು* ಶುದ್ಧೀಕರಿಸಿ ಎಂದು ನಿರ್ದೇಶಿಸಿದ್ದಾನೆ, ಮತ್ತು 22:26 ರಲ್ಲಿ ಇಬ್ರಾಹೀಮರಿಗೆ *ವ್ಯವಸ್ಥೆಯಲ್ಲಿ* ಅಥವಾ *ಬೈತಿ* ಯಲ್ಲಿ ಒಂದು ಸ್ಥಾನವನ್ನು ನೀಡಲಾಯಿತು ಎಂದು ಹೇಳುತ್ತಾನೆ. ಇಲ್ಲಿ ಇಬ್ರಾಹೀಮರು ಮತ್ತು ಇಸ್ಮಾಯೀಲರು ಅಲ್ಲಾಹನಿಗೆ ಸೇರಿದ ದೈಹಿಕ ಮನೆಯನ್ನು ಶುದ್ಧಗೊಳಿಸಿದ ನಂತರ, ಅಲ್ಲಾಹನು ಆ ಮನೆಯನ್ನು ತನ್ನ ಜೊತೆ ಹಂಚಿಕೊಳ್ಳಲು ಇಬ್ರಾಹೀಮರಿಗೆ ಜಾಗ ಕೊಡಲಾಯಿತು ಎಂದು ಹೇಳುವುದು ಹಾಸ್ಯಾಸ್ಪದವಾಗಿದೆ.

- 5:2 ರಲ್ಲಿ *ಆಮಿನಲ್ ಬೈತಲ್ ಹರಾಮಿ* ಎಂಬವುದು ವನ್ಯಜೀವಿ ಸಂರಕ್ಷಣೆಯ ಬಗ್ಗೆ ಅಲ್ಲಾಹನ ವ್ಯವಸ್ಥೆಯಲ್ಲಿನ ನಿರ್ಬಂಧಗಳನ್ನು ಸೂಚಿಸಲು ಉಲ್ಲೇಖಿಸಲಾಗಿದೆ. ಈ ಆಜ್ಞೆಯನ್ನು ಅವನ ವ್ಯವಸ್ಥೆಯಲ್ಲಿನ ಸಾಮರಸ್ಯದ ಸಂರಕ್ಷಣೆಗಾಗಿ ನಿಗದಿಪಡಿಸಲಾಗಿದೆ.

- 14:37 ರಲ್ಲಿ ಇಬ್ರಾಹೀಮರು ಹೇಳಿದರು: *ನಾನು ನನ್ನ ಸಂತತಿಯನ್ನು ನಿನ್ನ ನಿರ್ಬಂಧಿತ ವ್ಯವಸ್ಥೆಯ ಪ್ರಕಾರ (ಇಂದ ಬೈತಿಕಲ್ ಮುಹರ್ರಮಿ) ನೆಲೆಗೊಳ್ಳಿಸುತ್ತಿದ್ದೇನೆ.* ಅಂದರೆ, ಅವರ ಸಂತತಿಯು ಅಲ್ಲಾಹನ ವ್ಯವಸ್ಥೆಯಲ್ಲಿ ನಿಗದಿಪಡಿಸಿದ ನಿರ್ಬಂಧಗಳ ಪ್ರಕಾರ ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯಬೇಕು ಎಂದು ಹೇಳುವುದಾಗಿದೆ.

- 3:97 ಹೇಳುತ್ತದೆ: ಜನರಲ್ಲಿ ಮನವರಿಕೆ ಮಾಡಿಕೊಂಡವರು, ಅಲ್ಲಾಹನ ವ್ಯವಸ್ಥೆಗೆ ದಾರಿಯನ್ನು ಕಂಡುಕೊಂಡರೆ, ಅವರು ಅದಕ್ಕಾಗಿ ಸವಾಲನ್ನು ತೆಗೆದುಕೊಳ್ಳಬಹುದು ಅಥವಾ *ಹಿಜ್ಜುಲ್ ಬೈತಿ ಮನಿಸ್ತತಾಅ ಇಲೈಹಿ ಸಬೀಲ.* ಈ ವ್ಯವಸ್ಥೆಯಲ್ಲಿ ಇಬ್ರಾಹೀಮರ ದರ್ಜೆಯ ಬಗ್ಗೆ ಗಣನೀಯ ನಿದರ್ಶನಗಳಿವೆ ಎಂದೂ ಈ ವಚನವು ಕೆಲವು ಸೂಚನೆಗಳನ್ನು ನೀಡುತ್ತದೆ.

ಆದ್ದರಿಂದ, ಕುರ್‌ಆನಿನಲ್ಲಿ *ಬೈತ* ಎಂಬುವುದು *ವ್ಯವಸ್ಥೆ* ಯನ್ನು ಸೂಚಿಸುತ್ತದೆಯೇ ವಿನಹಃ *ಮನೆ* ಯನ್ನು ಅಲ್ಲ. ಮತ್ತು ಕುರ್‌ಆನಿನಲ್ಲಿ ಇಬ್ರಾಹೀಮರ ಕುಟುಂಬದ ವಿಷಯದಲ್ಲಿ ಮತ್ತಷ್ಟು ಅನ್ವೇಷಣೆಯನ್ನು ನಡೆಸುವ ವೇಳೆ, ಅಲ್ಲಾಹನ ವ್ಯವಸ್ಥೆಯಲ್ಲಿ ಅವರ ದರ್ಜೆಯ ಪ್ರಸ್ತುತತೆಯನ್ನು ಕಾಣಬಹುದೇ ವಿನಹಃ ಅಲ್ಲಾಹನ ಮನೆಯಲ್ಲಿ ಅಲ್ಲ.

ವ್ಯವಸ್ಥೆಯನ್ನು ಕಂಡುಹಿಡಿಯುವ 'ಸವಾಲನ್ನು ತೆಗೆದುಕೊಳ್ಳುವುದು'

ಅಲ್ಲಾಹನ ವ್ಯವಸ್ಥೆಯಲ್ಲಿ, ದೀನನ್ನು ಯಾರು ಕೂಡ ತನ್ನ ಮಾತಾಪಿತರಿಂದ ಪಾರಂಪರ್ಯವಾಗಿ ಪಡೆದುಕೊಳ್ಳಬಹುದೆಂದು ತೋಚುವುದಿಲ್ಲ. ಮಾತಾಪಿತರು ಅಲ್ಲಾಹನ ರೀತಿಗೆ ತಮ್ಮನ್ನು ಸಮ್ಮತಿಸಿಕೊಂಡರೆ, ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶಗಳಿಗೆ ತಮ್ಮ ಮಕ್ಕಳನ್ನು ಪ್ರೋತ್ಸಾಹಿಸುವುದು ಅವರ ಕರ್ತವ್ಯವಾಗಿದೆ. ಇಬ್ರಾಹೀಮರು ಮತ್ತು ಯಾಕೂಬರು ಅವರ ಮಕ್ಕಳಿಗೆ ಹೀಗೆ ನೆನಪಿಸಿದರು:

> ಇದಲ್ಲದೆ, ಇಬ್ರಾಹೀಮರು ಮತ್ತು ಯಾಕೂಬರು ತಮ್ಮ ಮಕ್ಕಳಿಗೆ (ಹೀಗೆ) ನಿರ್ದೇಶಿಸಿದರು, "ನನ್ನ ಮಕ್ಕಳೇ, ಅಲ್ಲಾಹನು ನಿಮಗೆ ದೀನನ್ನು ಸೂಚಿಸಿದ್ದಾನೆ. ನೀವು ಶಾಂತಿವಂತರು (ಮುಸ್ಲಿಮರು) ಆಗದೆ ಮರಣಹೊಂದಬೇಡಿರಿ." (2:132)

ಅಲ್ಲಾಹನು ನಿಗದಿಪಡಿಸಿದ ದೀನನ್ನು ಅನುಸರಿಸುತ್ತಾ ಶಾಂತಿವಂತರಲ್ಲಾಗದೆ ನೀವು ಸಾಯಬಾರದು ಎಂದು ಇಬ್ರಾಹೀಮರು ಮತ್ತು ಯಾಕೂಬರು ತಮ್ಮ ಮಕ್ಕಳಿಗೆ ಹೇಳಿದರು. ಅಲ್ಲಾಹನು ಅವರಿಗೆ ಒಂದು ಧರ್ಮವನ್ನು ಅಥವಾ ಒಂದು ಮನೆಯನ್ನು ಸೂಚಿಸಿದ್ದಾನೆ ಎಂದು ಇಬ್ರಾಹೀಮರು ಮತ್ತು ಯಾಕೂಬರು ತಮ್ಮ ಮಕ್ಕಳಿಗೆ ಹೇಳಲಿಲ್ಲ. ಅವರು ಹೇಳಿರುವುದು ಕೇವಲ:

> ಅಲ್ಲಾಹನು ನಿಮಗೆ ಒಂದು ದೀನನ್ನು (ಅಥವಾ ಜೀವನದ ರೀತಿಯನ್ನು) ಸೂಚಿಸಿದ್ದಾನೆ.

ಅವರಲ್ಲಿ ಯಾರೊಬ್ಬರಿಗೂ ಒಂದು ದೇವಾಲಯಕ್ಕೆ ತೀರ್ಥಯಾತ್ರೆಯನ್ನು ಮಾಡಲು ಅಥವಾ ಅಲ್ಲಾಹನಿಗಾಗಿ ಆರಾಧನೆಯನ್ನು ಆರಂಭಿಸಲು ಹೇಳಲಾಗಿಲ್ಲ, ಬದಲಿಗೆ, ಅಲ್ಲಾಹನ ದೀನನ್ನು ಮನವರಿಕೆ ಮಾಡಿಕೊಳ್ಳಬೇಕು ನಂತರ ಅವರು ಅಲ್ಲಾಹನ ವ್ಯವಸ್ಥೆಗಿರುವ ಹಾದಿಯನ್ನು ಕಂಡು ಹಿಡಿದರೆ, ಅದರ ಪ್ರಕಾರ ಜೀವಿಸುವ ಸವಾಲನ್ನು ತೆಗೆದುಕೊಳ್ಳಬೇಕು. ಅವರ ತಂದೆ ಇಬ್ರಾಹೀಮರಿಗೆ ಒಂದು ವ್ಯವಸ್ಥೆಯ ಕಡೆಗೆ ದಾರಿತೋರಿಸಲಾಗಿತ್ತು ಹಾಗೂ ಅವರು ಇಸ್ಮಾಯೀಲರ ಜೊತೆಗೆ ಅದಕ್ಕೆ ಬದ್ಧರಾಗಿದ್ದರು ಮತ್ತು ಆ ವ್ಯವಸ್ಥೆಯಲ್ಲಿನ ನಿರ್ಬಂಧಗಳ ಪ್ರಕಾರ ಜೊತೆಗೂಡಿ ಜೀವಿಸಿದರು. ಇದೇ ರೀತಿಯಲ್ಲಿ ನಾವು ಅಲ್ಲಾಹನ ರೀತಿಗೆ ನಮ್ಮನ್ನು ಸಮ್ಮತಿಸಿಕೊಂಡರೆ, ನಾವು ನಮ್ಮ ಕುಟುಂಬದ ಸದಸ್ಯರಿಗೂ, ವಿಶ್ವಾಸವಿರಿಸಲು ಮತ್ತು ಅನುಕರಣೀಯ ಉತ್ತಮ ಕಾರ್ಯಗಳು ಮಾಡುವುದರ ಮೂಲಕ ಜೀವನದ ಕ್ರಮಬದ್ಧ ರೀತಿಗೆ ತಮ್ಮ ಸಹಮತವನ್ನು ನೀಡಲು ನೆನಪಿಸಬೇಕು ಎಂದು ನಮಗೆ ಹೇಳಲಾಗಿದೆ. ಆದರ್ಶ ವ್ಯಕ್ತಿಯು ಈ ವ್ಯವಸ್ಥೆಯನ್ನು ಎತ್ತಿಹಿಡಿಯುವ ಮೂಲಕ ಶಾಂತಿಯಲ್ಲಿದ್ದರೆ, ಸಂತತಿಗಳು ಸಹ ಅದನ್ನೇ ಅನುಸರಿಸುತ್ತಾರೆ ಎಂಬುವುದು ಸಹಜವಾಗಿದೆ.

> ನೀವು ಬದ್ಧತೆಯನ್ನು ಎತ್ತಿಹಿಡಿಯಲು ನಿಮ್ಮ ಕುಟುಂಬಕ್ಕೆ ಪ್ರೋತ್ಸಾಹಿಸಬೇಕು ಮತ್ತು ಅದರಲ್ಲಿ ದೃಢರಾಗಿರಬೇಕು. ನಾವು ನಿಮ್ಮಿಂದ ಯಾವುದೇ ಅನುಗ್ರಹಗಳನ್ನು ಕೇಳುವುದಿಲ್ಲ. ನಿಮಗೆ

> ಅನುಗ್ರಹಗಳನ್ನು ನೀಡುವುದು ನಾವಾಗಿದ್ದೇವೆ. ಅಂತಿಮ ವಿಜಯವು ನಿಷ್ಠಾವಂತರಿಗಾಗಿದೆ. (20:132)

ಗ್ರಂಥದಲ್ಲಿ ನಿಗದಿ ಪಡಿಸಿರುವ ಆದೇಶಗಳು *ಇಸ್ಲಾಂ* ಆಗಿದೆ ಎಂದೂ, ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವಂತೆ ಅಲ್ಲಾಹನ ರೀತಿಗೆ ಸಮ್ಮತಿಸಿಕೊಳ್ಳುತ್ತಾ, ಅವರು ಈ ಆದೇಶಗಳಿಗೆ ತಮ್ಮನ್ನು ಕೇಂದ್ರಿತಗೊಳಿಸಬೇಕೆಂದು ನಾವು ನಮ್ಮ ಮಕ್ಕಳಿಗೆ ಹೇಳಬೇಕಾಗಿದೆ. ಅವರು ಯಾವುದೇ ಧರ್ಮವನ್ನು ಅನುಸರಿಸಿ ಮೂರ್ತಿಪೂಜೆಗೆ ಹಳಿತಪ್ಪಿ ಬೀಳಬಾರದು. ದೀನ್ ಎಂಬುವುದು ಎಲ್ಲೋ ಮರುಭೂಮಿಯಲ್ಲಿರುವ ಅರಬರು ನಿರ್ಮಿಸಿದ ಕಲ್ಲಿನ ವಿಗ್ರಹದೊಳಗಿದೆ ಎಂದು ನಾವು ನಮ್ಮ ಮಕ್ಕಳಿಗೆ ಹೇಳಲು ಸಾಧ್ಯವಿಲ್ಲ. ಲುಕ್ಮಾನರು ತನ್ನ ತಿಳುವಳಿಕೆಯಿಂದ ತನ್ನ ಮಗನಿಗೆ ಹೇಳಿದರು: 'ಮಗನೇ, ನೀನು ಅಲ್ಲಾಹನ ಜೊತೆಗೆ ಯಾವುದೇ ಮೂರ್ತಿಗಳನ್ನು ನೆಲೆಗೊಳಿಸಬೇಡ; ಮೂರ್ತಿ ಪೂಜೆಯು ಸುಸ್ಪಷ್ಟವಾದ ಅಪರಾಧವಾಗಿದೆ', ನಂತರ ಅವರು ಮುಂದುವರಿಸುತ್ತಾರೆ:

> ಮಗನೇ, ನಿನ್ನ ಬದ್ಧತೆಗಳನ್ನು ಪಾಲಿಸು, ಒಳಿತಿನ ಆದೇಶ ಕೊಡು, ಕೆಡುಕನ್ನು ತಡೆ, ಯಾವುದೇ ಕಷ್ಟವೇ ಬರಲಿ ಸಹನೆಯನ್ನು ವಹಿಸು, ಇದು ನೈಜ ಸಾಮರ್ಥ್ಯವಾಗಿದೆ. ಜನರೊಂದಿಗೆ ಅಹಂಕಾರದೊಂದಿಗೆ ವರ್ತಿಸಬೇಡ ಮತ್ತು ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ, ದುರಭಿಮಾನ ಮತ್ತು ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ. (31:17-18).

ಲುಕ್ಮಾನರು ಅವತೀರ್ಣವನ್ನು ಪಡೆದಿದ್ದರು ಎಂಬುವುದಕ್ಕೆ ಯಾವುದೇ ಪುರಾವೆಗಳಿಲ್ಲ, ಆದರೆ ಅಲ್ಲಾಹನು ಅವರಿಗೆ ಬುದ್ಧಿವಂತಿಕೆಯನ್ನು ನೀಡಿದ್ದನೆಂದು ಕುರ್‌ಆನ್ ಹೇಳುತ್ತದೆ. ಹೀಗಾಗಿ, ಅವರು ಸಂವೇದನಾಶೀಲವಾದ ಮತ್ತು ಸಮಂಜಸವಾದ ನಿರ್ಧಾರಗಳನ್ನು ತೆಗೆಯುವ ಸಾಮರ್ಥ್ಯವನ್ನು ಹೊಂದಿದ್ದರು. ತನ್ನ ಬುದ್ಧಿವಂತಿಕೆಯಲ್ಲಿ, ಈ ಜೀವನದ ಅತ್ಯಂತ ಗಂಭೀರ ಅಪರಾಧವು ಮೂರ್ತಿಗಳನ್ನು ಅಲ್ಲಾಹನೊಂದಿಗೆ ಸಂಯೋಜಿಸುವುದಾಗಿದೆ ಎಂದು ಅವರಿಗೆ ಗೊತ್ತಿತ್ತು. ಆದರೂ, ಭೂಮಿಯ ಮೇಲಿನ ಹೆಚ್ಚಿನ ಜನರು, ಅಲ್ಲಾಹನನ್ನು ಹೊರತು ಪಡಿಸಿ ಬಹುತೇಕ ಎಲ್ಲವನ್ನೂ ಸೇವೆ ಮಾಡುತ್ತಾರೆ, ಆದರೆ ಭೂಮಿ ಆಕಾಶಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿರುವ ಅಲ್ಲಾಹನನ್ನು ಮಾತ್ರ ಅವರಿಗೆ ಸೇವೆ ಮಾಡಲು ಸಾಧ್ಯವಾಗುತ್ತಿಲ್ಲವೆಂದು ತೋರುತ್ತಿದೆ.

ಬೈತದಲ್ಲಿ ಏನಿದೆ?

ಫೀ-ಹಿ (ಅಂದರೆ ಅದರಲ್ಲಿ), ***ಬಿ*** (ಒಂದಿಗೆ ಅಥವಾ ಜೊತೆಗೆ), ***ಇಲಾ*** (ಅಲ್ಲಿಗೆ ಅಥವಾ ಆ ಕಡೆಗೆ), ***ಮಿನಲ್*** (ಇಂದ, ನಿಂದ), ***ಲಿ*** (ಗೆ, ಕ್ಕೆ) ಮತ್ತು ಇಂತಹ ಇತರ ಕೆಲವು ಸರಳ ಪದಗಳು ಸಹ ಅರಬೀ ಧರ್ಮದ ಕಾವಲುಗಾರರಿಂದ ನಿರ್ದಿಷ್ಟ ಸಂದರ್ಭಗಳಲ್ಲಿ ತಿರುಚಲಾಗಿದೆ ಅಥವಾ ಕಡೆಗಣಿಸಲಾಗಿದೆ ಎಂದು ಜನರು

ಮನವರಿಕೆ ಮಾಡುವುದಿಲ್ಲ. ಈ ಪದಗಳು ಸಾಮಾನ್ಯವಾಗಿ ಕ್ರಿಯಾಪದಗಳಿಗೆ ಪೂರ್ವಪ್ರತ್ಯಯವಾಗಿ ಸೇರಿರುತ್ತದೆ, ಆದರೆ ಅವುಗಳು ಬಹಳಷ್ಟು ವ್ಯತ್ಯಾಸವನ್ನು ಉಂಟುಮಾಡುತ್ತದೆ. ಉದಾಹರಣೆಗೆ, ಈ ಕೆಳಗಿನ ಸಂದರ್ಭದಲ್ಲಿ ***ಫೀ-ಹಿ*** (ಅದರೊಳಗೆ) ಎಂಬುವುದರ ಪ್ರಾಮುಖ್ಯತೆಯ ಬಗ್ಗೆ ಶ್ರದ್ಧೆಯೊಂದಿಗೆ ಆಲೋಚಿಸಲು ಜನರು ವಿಫಲಗೊಳ್ಳುತ್ತಾರೆ:

> ಅದರಲ್ಲಿ *(**ಫೀ-ಹಿ**)* ಇಬ್ರಾಹೀಮರ ದರ್ಜೆಯ (ಮಕಾಮಿ ಇಬ್ರಾಹೀಮ) ಬಗ್ಗೆ ಸುವ್ಯಕ್ತ ಕುರುಹುಗಳಿವೆ. ಮತ್ತು ಅದರೊಳಗೆ ಪ್ರವೇಶಗೊಂಡವನು ಸಂರಕ್ಷಣೆಗೊಂಡನು. ತಮ್ಮ ಹಾದಿಯನ್ನು ಕಂಡುಕೊಳ್ಳವವರು ಅಲ್ಲಾಹನಿಗಿರುವ ಈ ವ್ಯವಸ್ಥೆಯ *(ಬೈತಿ)* ಸವಾಲನ್ನು ತೆಗೆದುಕೊಳ್ಳಬೇಕಾಗಿರುವುದು *(ಹಿಜ್ಜು)* ಮಾನವಕುಲದ ಮೇಲಿರುವ ಕರ್ತವ್ಯವಾಗಿದೆ. ಮತ್ತು ಯಾರು ನಿರಾಕರಿಸುತ್ತಾರೆ, ನಿಶ್ಚಯವಾಗಿಯೂ ಅಲ್ಲಾಹನು ಸಕಲ ಜಗತ್ತಿನವರಿಂದ ನಿರಪೇಕ್ಷನಾದ ಸ್ವಯಂಪೂರ್ಣನಾಗಿದ್ದಾನೆ. (3:97)

ಈ ಸನ್ನಿವೇಶದಲ್ಲಿ *ಫೀ-ಹಿ* ಎಂಬ ಪದಗಳ ಬಳಕೆಯು, *ಬೈತ* ದಲ್ಲಿ ಇಬ್ರಾಹೀಮರ ದರ್ಜೆಯ (ಮಕಾಮಿ ಇಬ್ರಾಹೀಮ) ಬಗ್ಗೆ ಸುವ್ಯಕ್ತ ಕುರುಹುಗಳಿವೆ ಮತ್ತು ಅದರೊಳಗೆ ಪ್ರವೇಶಗೊಂಡವರು ಸಂರಕ್ಷಣೆಯನ್ನು ಕಂಡುಕೊಳ್ಳುವರು ಎಂಬ ಅರ್ಥವನ್ನು ನೀಡುತ್ತದೆ.

ಬೈತ ಎಂಬ ಪದಕ್ಕೆ ನಿಜವಾಗಿಯೂ ಒಂದು ಮನೆ ಎಂಬ ಅರ್ಥವಾಗಿದ್ದರೆ, ಮೇಲಿನ ವಾಕ್ಯವು ವೈಚಾರಿಕವಾಗಿ ಹೀಗಿರಬೇಕು: '*ಆ ಮನೆಯಲ್ಲಿ ಇಬ್ರಾಹೀಮರ ದರ್ಜೆಯ ಬಗ್ಗೆ ಸುವ್ಯಕ್ತ ಕುರುಹುಗಳಿವೆ*'. ಧಾರ್ಮಿಕರು ಅಥವಾ ಉಲೆಮಾಗಳು ತಮ್ಮ ಮಸೀದಿಯ ಮಧ್ಯದಲ್ಲಿ ನಿಂತಿರುವ ಆ ಘನ ರಚನೆಯ ಒಳಗಡೆ ಇಬ್ರಾಹೀಮರ ದರ್ಜೆಯ ಬಗ್ಗೆ ಸುಸ್ಪಷ್ಟ ಕುರುಹುಗಳು ಇವೆ ಎಂದು ಜಗತ್ತಿಗೆ ಸಾಬೀತು ಮಾಡಲು ಸಾಧ್ಯವಿದೆಯೇ? ಇಲ್ಲ, ಅವರಿಗೆ ಸಾಧ್ಯವಿಲ್ಲ. ಆದರೆ ಅವರು ಅದರ ಬದಲಿಗೆ ಆ ಮನೆಯ ಹೊರಗಿರುವ ಒಂದು ಹೊನ್ನ ಪಂಜರದೊಳಗಿರುವ ತಾಮ್ರದ ಒಂದು ಕಟ್ಟೆಯನ್ನು ನಮಗೆ ತೋರಿಸುತ್ತಾರೆ.

3:96-97 ರಲ್ಲಿ *ಬೈತಿನ್* ಎಂಬುವುದು ಒಂದು ವ್ಯವಸ್ಥೆಯನ್ನು ಸೂಚಿಸುತ್ತದೆಯೇ ವಿನಹಃ ಒಂದು ಮನೆಯನ್ನಲ್ಲ ಮತ್ತು ನಾವು ಈ ವ್ಯವಸ್ಥೆಯಲ್ಲಿ, ಸಂಪೂರ್ಣವಾಗಿ ದೀನಿಗೆ ಬದ್ಧರಾಗಿದ್ದ ಇಬ್ರಾಹೀಮರ ದರ್ಜೆಯ (ಮಕಾಮಿ ಇಬ್ರಾಹೀಮ) ಬಗ್ಗೆ ಸುಸ್ಪಷ್ಟ ಕುರುಹುಗಳನ್ನು ಕಾಣಬಹುದು. ಯಾರು ಈ ವ್ಯವಸ್ಥೆಯನ್ನು ಅವಲಂಬಿಸುತ್ತಾರೆ, ಅವರು ಸುರಕ್ಷಿತರಾಗುತ್ತಾರೆ. ಎಲ್ಲಾ ಮಾನವರು ಈ ವ್ಯವಸ್ಥೆಗೆ ಸವಾಲನ್ನು ತೆಗೆದುಕೊಳ್ಳಬೇಕೆಂದು (ಹಿಜ್ಜು) ನಿರೀಕ್ಷಿಸಲಾಗಿದೆ. ಅವರು ಅದಕ್ಕಾಗಿ ಪ್ರಯತ್ನ ಮಾಡಬೇಕು ಮತ್ತು ಅದರ ಕಡೆಗೆ ತಮ್ಮ ದಾರಿಯನ್ನು ಕಂಡುಕೊಳ್ಳಬೇಕು.

ಒಂದು ವಾದದ ದೃಷ್ಟಿಯಿಂದ, ಬೈತ ಪದವು ವಾಸ್ತವವಾಗಿ ಒಂದು ಭೌತಿಕ ಮನೆ ಎಂಬ ಅರ್ಥವನ್ನು ನೀಡುತ್ತದಾದರೆ ಮತ್ತು ಹಜ್ಜ್ ಎಂದರೆ ತೀರ್ಥಯಾತ್ರೆ ಎಂದಾದರೆ, ನಮಗೆ ಒಂದು ಬಹಳ ಗಂಭೀರ

ಸಮಸ್ಯೆಯು ಎದುರಾಗುತ್ತದೆ. ಇಂದು 'ತೀರ್ಥಯಾತ್ರೆ'ಯನ್ನು ನಿರ್ವಹಿಸುವ 2,000,000 ಜನರಲ್ಲಿ ಪ್ರತಿಯೊಬ್ಬರೂ, ಇಬ್ರಾಹೀಮರು ತನ್ನ ವಿಧ್ಯುಕ್ತ ಪ್ರಾರ್ಥನೆಗಾಗಿ ನಿಂತ ಸ್ಥಳವನ್ನು ಸಂದರ್ಶಿಸಲು ಮತ್ತು ಪಾವನಗೊಳ್ಳಲು ಮನೆಯೊಳಗೆ ತುರುಕಿಕೊಳ್ಳಬೇಕು. ಇಂತಹ ಸಂದರ್ಭದಲ್ಲಿ, ಧಾರ್ಮಿಕರು ಸ್ಥಾಪಿಸಿದ ಈ ಮನೆಗೆ ಪ್ರಧಾನ ಪುನಾರಚನೆಯ ಅಗತ್ಯ ಬೀಳುತ್ತದೆ. ಮುಸ್ಲಿಮರ ಸಂಖ್ಯೆ ಹೆಚ್ಚಾದರೆ, ಅವರು ಈ ಹೊಸ ನಿಷ್ಠಾವಂತರಿಗೆ ಸ್ಥಳಮಾಡಿಕೊಡುವ ಸಲುವಾಗಿ ಅಲ್ಲಾಹನ ಮನೆಯನ್ನು ನವೀಕರಿಸುತ್ತಾ ಹೋಗಬೇಕಾಗುತ್ತದೆ. ಈಗ ಇರುವಂತೆ, ಅಲ್ಲಾಹನ ಪ್ರಸ್ತುತ 'ಮನೆಯು' ಹೆಚ್ಚೆಂದರೆ ಕೆಲವು ಸಾವಿರ ಜನರನ್ನು ಮಾತ್ರ ಒಳಗೊಳ್ಳಬಹುದು. ಜಗತ್ತಿನಾದ್ಯಂತ ಪ್ರತಿ ಮೂಲೆಯಿಂದಲೂ ಎಲ್ಲಾ ಸುನ್ನಿಗಳು ಮತ್ತು ಷಿಯಾಗಳು ಸಂರಕ್ಷಣೆ ಸಾಧಿಸಲು 'ಕಾಬಾ'ಗೆ ಹಿಂಡಾಗಿ ಬಂದರೆ ಏನಾಗಬಹುದು. ಇದು ಅವೈಚಾರಿಕವೂ ಮತ್ತು ಅಸಾಧ್ಯವೂ ಆಗಿದೆ. ನಾವು ಅಲ್ಲಾಹನ ಆದರ್ಶಗಳ ಘನತೆಯನ್ನು ತೆಗೆದುಕೊಂಡು, ಅವುಗಳನ್ನು ಜನರ ಭೌತಿಕ ಪ್ರಪಂಚದ ಕ್ಷಲ್ಲಕತನಕ್ಕೆ ಸಮೀಕರಿಸಿದರೆ, ನಿಖರವಾಗಿ ಇದುವೇ ನಡೆಯುತ್ತದೆ. ಪರಿಣಾಮವೇನೆಂದರೆ: *ಆರಾಧನೆಯ ಒಂದು ಮನೆಯ ಕೇಂದ್ರದಲ್ಲಿ ಒಂದು ವಿಗ್ರಹರೂಪ ನೆಲೆನಿಂತಿದೆ.*

ಪ್ರತಿಮೆಗಳ ಅಥವಾ ಮೂರ್ತಿಗಳ ಮೂಲಕ ದೇವನನ್ನು ಪೂಜೆ ಮಾಡುವವರು ಅನಾಚಾರಿಗಳು ಮತ್ತು ಮೂರ್ತಿಪೂಜಕರು ಎಂದು ಧಾರ್ಮಿಕರು ಹೇಳುತ್ತಾರೆ. ಇತರರನ್ನು ಖಂಡಿಸಲು ಮತ್ತು ಟೀಕಿಸಲು ಚುರುಕಾಗಿರುವ ಈ ಅರಬೀ ಧಾರ್ಮಿಕರು ತಾವು ಸ್ವತಃ ಅದನ್ನೇ ಮಾಡುತ್ತಿದ್ದಾರೆಂದು ಯಾವತ್ತೂ ಪರಿಗಣಿಸಲೇ ಇಲ್ಲ. ಇತರ *ಧರ್ಮದ* ಅನುಯಾಯಿಗಳು ತಮ್ಮ ದೇವಾಲಯಗಳಲ್ಲಿ ಅಥವಾ ಅವರ ದೇವಾಲಯಗಳ ಸುತ್ತಮುತ್ತಲಿರುವ ತಮ್ಮ ಕಲ್ಲಿನ ವಿಗ್ರಹಗಳನ್ನು ಪ್ರದಕ್ಷಿಣೆ ಮಾಡುವವರನ್ನು ಅವರು *ಅನಾಚಾರಿಗಳು ಮತ್ತು ಮೂರ್ತಿಪೂಜಕರು* ಎಂದೂ ಹೇಳುತ್ತಾರೆ. ಅವರು ಸಹ ಅದನ್ನೇ ಮಾಡುತ್ತಿದ್ದಾರೆ ಎಂದು ಅರಿತುಕೊಳ್ಳಲು ಶ್ರಮಿಸುವುದಿಲ್ಲ. ಕುರುಡಾಗಿರುವುದು ಅವರ ಕಣ್ಣುಗಳಲ್ಲ, ಅವರ ಹೃದಯಗಳಾಗಿವೆ ಎಂದು ಕುರ್‌ಆನ್ ನಮಗೆ ಹೇಳುತ್ತದೆ. ಉದಾಹರಣೆಗೆ, ಹಿಂದೂಗಳು ಅವರ ದೇವಾಲಯಗಳ ಕೇಂದ್ರದಲ್ಲಿರುವ ಶಿವಲಿಂಗದ ಅಥವಾ ಕಲ್ಲಿನ ವಿಗ್ರಹದ ಸುತ್ತಲೂ ಏಳು ಬಾರಿ ಪ್ರದಕ್ಷಿಣೆ ಮಾಡುತ್ತಾರೆ. ನಮ್ಮ ಧಾರ್ಮಿಕರಿಗಿಂತ ಬಹಳ ಮುಂಚಿತವಾಗಿಯೇ ಹಿಂದುಗಳು ಇದನ್ನು ಮಾಡುತ್ತಾ ಬಂದಿದ್ದಾರೆ.

ಬೈತ ಎಂದರೆ ಒಂದು ಮನೆ ಆಗಿದೆ ಎಂಬ ಧಾರ್ಮಿಕರ ದಾವೆಯು ಒಂದು ಭ್ರಮೆಯಾಗಿದೆ ಮತ್ತು ಪ್ರಪಂಚದ ಪ್ರಭುವಿನ ಸೇವೆಯ ಪರಿಕಲ್ಪನೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಪ್ರತಿ ಬಾರಿಯೂ ಕುರ್‌ಆನಿನ ಯಾವುದೇ ಒಂದು ಪದವು ತಿರುಚಲ್ಪಡುವಾಗ, ಅದು ಸಂದೇಶವನ್ನು ಅಸಂಬದ್ಧಗೊಳಿಸುತ್ತದೆ. *ಬೈತ* ಎಂಬುವುದು ಮನೆ ಎಂದೂ, *ಬೈತಿಲ್ ಹರಾಮ* ಎಂದರೆ *ನಿಷೇಧಿತ ಮನೆ* [58] ಎಂದೂ ಅವರು ಪಟ್ಟುಹಿಡಿಯುತ್ತಾರೆ. ಒಂದು ನಿಷೇಧಿತ ಮನೆಗೆ ಹೋಗುವುದು ಎಲ್ಲರಿಗೂ ಏಕೆ ಕಡ್ಡಾಯ ಪಡಿಸಲಾಗಿದೆ ಎಂಬುವುದು ಒಂದು ಪ್ರಶ್ನೆಯಾಗಿದೆ. ಈ ಒಳತಂತ್ರವನ್ನು ಬಚ್ಚಿಡಲು, ಅವರು *ಹರಾಮ್* ಎಂಬ ಪದವನ್ನು ಇಲ್ಲಿ ಪವಿತ್ರ

[58] ಮಕ್ಕಾದಲ್ಲಿರುವ ಮಸೀದಿಯನ್ನು ಹೀಗೆ ಕರೆಯುತ್ತಾರೆ.

ಎಂದಾಗುವಂತೆ ತಿರುಚಲು ಮುಂದುವರಿಯುತ್ತಾರೆ. ವಿಶ್ವದಾದ್ಯಂತ ಅರಬೇತರ ಮುಸ್ಲಿಮರು ಈ ಒಂದು ಸರಳ ಪ್ರಶ್ನೆಯೊಂದಿಗೆ ಧಾರ್ಮಿಕರನ್ನು ಎದುರಿಸುದಿಲ್ಲ, ಅದೇನೆಂದರೆ: ಇತ್ತೀಚಿನವರೆಗೂ ನವೀಕರಣೆಯಾಗುತ್ತಲೇ ಬಂದ ಒಂದು ಕಲ್ಲಿನ ಕಟ್ಟಡವು ಪವಿತ್ರವಾಗುವುದು ಹೇಗೆ? ಆ ಕಟ್ಟಡದ ಯಾವ ಭಾಗವು ವಾಸ್ತವದಲ್ಲಿ ಪವಿತ್ರವಾಗಿದೆ? ಆಗ ಅವರು ಆ ಚದರ ರಚನೆಯಲ್ಲ ಪವಿತ್ರವಾಗಿರುವುದು, ಬದಲಾಗಿ ತಮ್ಮ ಪೂರ್ವಜರು ಪೂಜಿಸುತ್ತಿದ್ದ ಆ ಸಣ್ಣ ಕಪ್ಪು ಕಲ್ಲಾಗಿದೆ *(ಅಥವಾ ಹಜರುಲ್ ಅಸ್ವದ್)* ಪವಿತ್ರವಾಗಿರುವುದು ಎಂದು ಅವರು ತಕ್ಷಣ ಕಂಡುಕೊಳ್ಳುತ್ತಾರೆ. ಕಪ್ಪು ಕಲ್ಲನ್ನು ಉಲ್ಲೇಖಿಸುವ *ಹಜರುಲ್ ಅಸ್ವದ್* ಎಂಬ ಪದವು ಕುರ್‌ಆನಿನಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಇದು ಇಸ್ಲಾಮಿನ ಭಾಗವಾಗಿದೆ ಎಂದು ಧಾರ್ಮಿಕರು ಹೇಳುತ್ತಾರೆ.

ಅರಬರು ತಮ್ಮ ಕಪ್ಪುಶಿಲೆಯ ನಿಜವಾದ ದೇವತೆಯನ್ನು ಮಕ್ಕಾದಲ್ಲಿ ಆರಾಧನೆಯ ಕೇಂದ್ರವನ್ನಾಗಿ ಯಶಸ್ವಿಯಾಗಿ ಪುನರ್ಸ್ಥಾಪಿಸಿದರು. ಹಾಗೆ ಅನಾಚಾರಿ ಸಮುದಾಯವಾದ ತಮ್ಮ ಪೂರ್ವಜರ ಧರ್ಮದ ದೀವಟಿಗೆಯನ್ನು ಮುಂದೆ ಸಾಗಿಸಿದರು.

ಭಾಗ ಒಂಬತ್ತು

ಭ್ರಷ್ಟತೆಯು ಮುಂದುವರಿಯುತ್ತದೆ

ಇತರ ಧರ್ಮಗಳ ಅನೇಕ ಅನುಯಾಯಿಗಳು ಅವರ ದೇವಾಲಯಗಳಲ್ಲಿ ಮೂರ್ತಿಗಳ ಮುಖಾಂತರ ಅವರ ದೇವರ ಪೂಜೆಯನ್ನು ಮಾಡುವುದು ಎಲ್ಲರಿಗೂ ತಿಳಿದಿರುವುದಾಗಿದೆ. ಆದರೆ ಅರಬೀ ಧರ್ಮದ ಅನುಯಾಯಿಗಳು ಆ ಜನರನ್ನು ಅನಾಚಾರಿಗಳು ಮತ್ತು ಮೂರ್ತಿಪೂಜಕರೆಂದು ದೂಷಿಸುವುದು ಹೇಗೆ?

ವಾಸ್ತವದಲ್ಲಿ ಅರಬೀ ಧರ್ಮದ ಅನುಯಾಯಿಗಳು ಒಂದಕ್ಕಿಂತ ಹೆಚ್ಚಿನ ಮೂರ್ತಿಗಳನ್ನು ಹೊಂದಿದ್ದಾರೆ. ತಮ್ಮ ಮಸೀದಿಯ ಕೇಂದ್ರದಲ್ಲಿರುವ ಘನಾಕೃತಿಯ ಮನೆಯ ಜೊತೆಗೆ, ಧಾರ್ಮಿಕರು ಅವರ ಅನುಯಾಯಿಗಳಿಗೆ ಇತರ ಅನೇಕ ವಿಗ್ರಹಗಳನ್ನು ಒದಗಿಸಿದ್ದಾರೆ. ಘನಾಕೃತಿಯ ಮನೆಯ ಒಂದು ಮೂಲೆಯಲ್ಲಿ ಅಳವಡಿಸಲಾದ ಕಪ್ಪು ಕಲ್ಲು ಅತ್ಯಂತ ಹೆಚ್ಚಾಗಿ ಗೌರವಿಸಲ್ಪಡುವ ಮೂರ್ತಿಯಾಗಿದೆ. ನಿಜವಾಗಿ ಹೇಳುವುದಾದರೆ ಇದು ಒಂದು ಅಶ್ಲೀಲ ಆಕೃತಿಯನ್ನು ಚಿತ್ರಿಸುವ ಬೆಳ್ಳಿಯ ಚೌಕಟ್ಟಿನಲ್ಲಿ ಇರಿಸಲಾಗಿದೆ – ನಿಮಗೆ ಅದನ್ನು ಸುಲಭವಾಗಿ ಊಹಿಸಬಹುದು. ಅದರ ವಿನ್ಯಾಸವು ಬಹುಶಃ *ಅಲ್-ಲಾತ್, ಅಲ್-ಉಝ್ಝಾ* ಮತ್ತು *ಮನಾತ್* ಎಂಬ ಮೂರು ಮುಖ್ಯ ಅರಬೀ ಸ್ತ್ರೀ ಪ್ರಾತಿನಿಧ್ಯ ವಿಗ್ರಹಗಳನ್ನು ಸಾಂಕೇತಿಸುತ್ತದೆ. ವ್ಯಾಕರಣದ ಪ್ರಕಾರ, ಇದು ಸ್ತ್ರೀಲಿಂಗ ಹೆಸರುಗಳಾಗಿವೆ, ಮತ್ತು ಅವುಗಳು ಅಲ್ಲಾಹುವಿನ ಹೆಣ್ಣುಮಕ್ಕಳನ್ನು ಉಲ್ಲೇಖಿಸುತ್ತದೆ ಎಂದು ಧಾರ್ಮಿಕರು ಹೇಳಿದ್ದಾರೆ. ಕುರ್‌ಆನ್ ಅವತೀರ್ಣಗೊಳ್ಳುವ ದೀರ್ಘ ಕಾಲದ ಮುಂಚಿನಿಂದಲೇ, ಅರಬರು ಈ ಸ್ತ್ರೀ ದೇವತೆಗಳನ್ನು ಪೂಜಿಸುತ್ತಿದ್ದರು. ಅರಬರನ್ನು ಹೀಗೆ ಪ್ರಶ್ನಿಸಲು ಕೊನೆಯ ಪ್ರವಾದಿಗೆ ಆದೇಶಿಸಲಾಗಿತ್ತು:

> *ಅಲ್-ಲಾತ್, ಅಲ್-ಉಝ್ಝಾ* ಮತ್ತು ಮೂರನೇಯ *ಮನಾತ್*ಗಳ ಬಗ್ಗೆ ಏನು? ನಿಮಗೆ ಪುತ್ರರು ಮತ್ತು ಅವನಿಗೆ ಪುತ್ರಿಯರೇನು? ಇದು ಒಂದು ಅನ್ಯಾಯವಾದ ಹಂಚಿಕೆಯೇ ಆಗಿದೆ. ನಿಜವಾಗಿ, ಇವೆಲ್ಲವೂ ನೀವು ಮತ್ತು ನಿಮ್ಮ ಪೂರ್ವಜರು ಇಟ್ಟಕೊಂಡಿರುವ ಹೆಸರುಗಳೇ ಹೊರತು ಇನ್ನೇನೂ ಅಲ್ಲ. ಅಲ್ಲಾಹನು ಇವುಗಳ ಪರವಾಗಿ ಯಾವುದೇ ಆಧಾರವನ್ನೂ ಇಳಿಸಿಲ್ಲ. ಅವರು ಕೇವಲ ಊಹೆಗಳನ್ನು ಮತ್ತು ಸ್ವೇಚ್ಛೆಗಳನ್ನು ಅನುಸರಿಸುತ್ತಾರೆ. ವಸ್ತುತಃ ಅವರ ಪ್ರಭುವಿನ ಕಡೆಯಿಂದ ಅವರ ಬಳಿಗೆ ಮಾರ್ಗದರ್ಶನವು ಬಂದಿದೆ. ಮನುಷ್ಯನ ಪಾಲಿಗೆ ತಾನಿಚ್ಛಿಸಿದ್ದೇ ಸತ್ಯವೇ? (53:19-24)

ಅನಾಚಾರಿ ಅರಬರು ತಮಗಾಗಿ ಅನೇಕ ಹೊಸ ದೇವರುಗಳನ್ನು ಆವಿಷ್ಕಾರ ಮಾಡಿದ್ದರು ಎಂಬುವುದು ಈ ವಚನವು ಖಚಿತಪಡಿಸುತ್ತದೆ. ಈ ಸಂದರ್ಭದಲ್ಲಿ, ಈ ಕಲ್ಲುಗಳಿಗೆ ಸ್ತ್ರೀ ಹೆಸರುಗಳನ್ನು ನೀಡಲಾಗಿತ್ತು. ಈ ಕಲ್ಲುಗಳ ಪಾವನತೆಯನ್ನು ಸ್ವಲ್ಪಮಟ್ಟಿಗೆ ಗಳಿಸಿಕೊಳ್ಳಲು ಆರಾಧಕರು ಅದನ್ನು ಸ್ಪರ್ಶಿಸುತ್ತಿದ್ದರು, ಕೈಯಿಂದ ಸವರುತ್ತಿದ್ದರು ಅಥವಾ ಚುಂಬಿಸುತ್ತಿದ್ದರು.

ಅವರ ಇನ್ನೊಂದು ಮೂರ್ತಿಯು, ಹನ್ನೆರಡು ಅಡಿ ಎತ್ತರದ ಪಂಜರದೊಳಗಿರುವ ಒಂದು ತಾಮ್ರದ ಬ್ಲಾಕಿನಲ್ಲಿ ಕೆತ್ತಲ್ಪಟ್ಟ ಯಾರದೋ ಹೆಜ್ಜೆಗುರುತುಗಳಾಗಿದೆ. ಇದು ಅವರ ದೊಡ್ಡ ಮೂರ್ತಿಯ ಬಾಗಿಲಿನ ಎದುರು ಸ್ಥಾಪಿಸಲ್ಪಟ್ಟಿದೆ. ಈ ಎಲ್ಲಾ ವಿಗ್ರಹಗಳು ತಮ್ಮದೇ ಆದ ಉದ್ದೇಶಗಳು ಮತ್ತು ಕಾರ್ಯಗಳನ್ನು ಹೊಂದಿವೆ.

ಅದೇ ಆವರಣದ ಒಳಗೆ *ಸಫಾ* ಮತ್ತು *ಮರ್ವ* ಎಂದು ಧಾರ್ಮಿಕರಿಂದ ಕರೆಯಲ್ಪಡುವ ಎರಡು ಬಹಿರ್ಗತ ಶಿಲಾಸ್ತರ ಪರ್ವತಗಳಿವೆ. ಅಲ್ಲಿಗೆ ನೀಡುವ ಯಾವುದೇ ಭೇಟಿಯ ಅಥವಾ ತೀರ್ಥಯಾತ್ರೆಯ ಸಮಯದಲ್ಲಿ, ಅವರು ಆ ಚೌಕ ಕಟ್ಟಡಕ್ಕೆ ಪ್ರದಕ್ಷಿಣೆ ಮಾಡಿ, ಕಪ್ಪು ಕಲ್ಲಿಗೆ ಮುತ್ತಿಕ್ಕಿ, ಅದರ ಮುಂದುಗಡೆ ಇಟ್ಟಿರುವ ಹೆಜ್ಜೆಗುರುತಿನ ಮೂರ್ತಿಯ ಹಿಂದೆ ವಿಧ್ಯುಕ್ತವಾಗಿ ಪ್ರಾರ್ಥಿಸಿದ ನಂತರ, ಅರಬೀ ಧರ್ಮದ ಅನುಯಾಯಿಗಳು ಈ ಎರಡು ಪರ್ವತಗಳ ನಡುವೆ ಓಡುತ್ತಾರೆ. ಈ ಓಡುವ ವಿಧಿಯು, ಇಬ್ರಾಹೀಮರ ಪತ್ನಿಯು ಅದೇ ಪ್ರದೇಶದಲ್ಲಿ ನೀರನ್ನು ಹುಡುಕುತ್ತಾ ಅನುಭವಿಸಿದ ಕಷ್ಟಕ್ಕೆ ಸಲ್ಲಿಸುವ ಗೌರವಾರ್ಪಣೆಯಾಗಿದೆ ಎಂದು ಅವರು ದಾವೆ ಮಾಡುತ್ತಾರೆ. ಯಾರು ಕೂಡ ಈ ಒಂದು ಸರಳ ಪ್ರಶ್ನೆಯನ್ನು ಕೇಳಲಿಲ್ಲ: ಇಬ್ರಾಹೀಮರ ಪತ್ನಿಗೂ ಇಸ್ಲಾಮಿಗೂ ನಡುವೆ ಅಂತಹ ಯಾವ ಬಂಧವಿದೆ? ಧಾರ್ಮಿಕರು ತಮ್ಮ ಅನುಯಾಯಿಗಳಿಂದ ಈ ಎರಡು ಪರ್ವತ ಶಿಲಾಸ್ತರಗಳ ಆರಾಧನೆಯನ್ನು ಮಾಡಿಸುವ ಸಲುವಾಗಿ, ಇಬ್ರಾಹೀಮರ ಪತ್ನಿಯನ್ನು ಒಂದು ನೆಪವಾಗಿ ಬಳಸಿದರೇ ಹೊರತು ಇದರಲ್ಲಿ ಲೇಖಕರಿಗೆ ಬೇರೆ ಯಾವುದೇ ಯುಕ್ತಿಯು ಕಾಣುತ್ತಿಲ್ಲ. ಈ ಸಮಗ್ರ ವಿಷಯವು ಮತ್ತೊಂದು ಅನಾಚಾರಿಕ ಅರಬೀ ಕಾಲ್ಪನಿಕ ಕಥನವಾಗಿದೆ.

ನಾವು 2:125 ರ ಇತರ ಆರು ಪದಗಳನ್ನು ವಿಶ್ಲೇಷಣೆ ಮಾಡಿ, ಕುರ್‌ಆನಿನ ಇತರ ಚರಣಗಳಲ್ಲಿ ಆ ಪದಗಳ ಬಳಕೆಯನ್ನು ಹೋಲಿಸಿ, ಅವುಗಳು ಹೇಗೆ ತಿರುಚಲ್ಪಟ್ಟಿದೆ ಎಂದು ನೋಡೋಣ. ಧಾರ್ಮಿಕರು ತಮ್ಮ 'ಧರ್ಮ'ದ ಎಲ್ಲಾ ಸಾಂಪ್ರದಾಯಿಕ ಆಚರಣೆಗಳಿಗೆ ಆಧಾರವನ್ನು ರಚಿಸಲು, ಈ ಪದಗಳ ಅರ್ಥವನ್ನು ಅಪಾರ್ಥಗೊಳಿಸಿದ್ದಾರೆ ಎಂದು ಯಾವುದೇ ಅನುಮಾನಗಳನ್ನು ಮೀರಿ ಸ್ಪಷ್ಟಗೊಳ್ಳುತ್ತದೆ.

ಇಬ್ರಾಹೀಮರ ದರ್ಜೆ (ಮಕಾಮಿ ಇಬ್ರಾಹೀಮ)

ಮಕಾಮ್ ಎಂಬ ಪದವು ಕುರ್‌ಆನಿನಲ್ಲಿ ಹಲವು ಬಾರಿ ಕಾಣಿಸಿಕೊಂಡಿದೆ. ಕುರ್‌ಆನನ್ನು ಸ್ವತಃ ಅದುವೇ ವಿವರಿಸುವುದರಿಂದ ನಾವು *ಮಕಾಮ್* ಎಂಬ ಪದದ ಅರ್ಥವನ್ನು ತಿಳಿಯಲು ಎಲ್ಲಾ ಸಂಬಂಧ ಪಟ್ಟ ವಚನಗಳನ್ನು ನೋಡಬೇಕಾದ ಅಗತ್ಯವಿದೆ. *ಮಕಾಮಿ ಇಬ್ರಾಹೀಮ್* ಎಂಬುವುದರ ಅರ್ಥವು ಕಲ್ಲಿನ ಕಟ್ಟಡದ ಎದುರು ಸ್ಥಾಪಿಸಿರುವ ತಾಮ್ರ ಬ್ಲಾಕಿನಲ್ಲಿ ಕೆತ್ತಲಾದ ಹೆಜ್ಜೆಗುರುತಾಗಿದೆ ಎಂದು ಧಾರ್ಮಿಕರು ಹೇಳುತ್ತಾರೆ. ಅದು ನಿಜವಾಗಿದ್ದರೆ, ಅವರು 55:46 ರಲ್ಲಿ *ಮಕಾಮ ರಬ್ಬಿಕ* ಅಥವಾ *ನಿನ್ನ ಪ್ರಭುವಿನ ಮಕಾಮ್* ಎಂಬುವುದನ್ನು ಹೇಗೆ ವಿವರಿಸುತ್ತಾರೆ? ಅದು *ನಿನ್ನ ಪ್ರಭುವಿನ ಹೆಜ್ಜೆಗುರುತು* ಅಥವಾ *ನಿನ್ನ ಪ್ರಭುವು ನಿಂತ*

ಸ್ಥಳ ಎಂದಾಗಲು ಸಾಧ್ಯವಿದೆಯೇ? ಅದೇ ಪದವು 79:40 ರಲ್ಲಿ ಇನ್ನೊಮ್ಮೆ *ಮಕಾಮ ರಬ್ಬಿಹಿ* ಅಂದರೆ *ತನ್ನ ಪ್ರಭುವಿನ ದರ್ಜೆ* ಎಂಬ ಅರ್ಥದಲ್ಲಿ ಕಾಣಿಸಿಕೊಂಡಿದೆ.

> ಮತ್ತು ನಿಶ್ಚವಾಗಿಯೂ *ತನ್ನ ಪ್ರಭುವಿನ ದರ್ಜೆಯನ್ನು (ಮಕಾಮ ರಬ್ಬಿಹಿ)* ಭಯಪಡುವವನು, ದುಷ್ಟ ಅಪೇಕ್ಷೆಗಳಿಂದ ತಮ್ಮನ್ನು ತಡೆದಿಟ್ಟುಕೊಂಡವನಾಗಿದ್ದಾನೆ. (79:40)

ಈ ವಚನವನ್ನು ಹೀಗೆ ಭಾಷಾಂತರಿಸಬಹುದೇ ಎಂದು ಬಹುಶಃ ಮುಸ್ಲಿಮರು ತಮ್ಮ ಅರಬೀ ಪಂಡಿತರೊಂದಿಗೆ ಕೇಳಬೇಕು:

> ಮತ್ತು ನಿಶ್ಚವಾಗಿಯೂ *ತನ್ನ ಪ್ರಭುವಿನ ಕಾಲಿನ ಹೆಜ್ಜೆಗುರುತನ್ನು (ಅಥವಾ ನಿಲ್ಲುವ ಸ್ಥಳವನ್ನು)* ಭಯಪಡುವವನು, ದುಷ್ಟ ಅಪೇಕ್ಷೆಗಳಿಂದ ತಮ್ಮನ್ನು ತಡೆದಿಟ್ಟುಕೊಂಡವನಾಗಿದ್ದಾನೆ.

ಇಂತಹ ಅನಾಗರಿಕ ಚಿಂತನೆಯು ನಮ್ಮ ಬುದ್ಧಿವಂತಿಕೆಗೆ ಒಂದು ಅವಮಾನವಾಗಿದೆ.

ನಮ್ಮಲ್ಲಿ ಯಾರಾದರೂ ಅಲ್ಲಾಹನ ಕೆಲವು ಆಜ್ಞೆಗಳನ್ನು ಈಡೇರಿಸಿಕೊಂಡರೆ, ಅವನು ನಮ್ಮನ್ನು ಹೆಚ್ಚಿನ ಸ್ಥಾನಮಾನಕ್ಕೆ ಅಥವಾ ದರ್ಜೆಗೆ ಏರಿಸುವನು ಎಂದು ಭರವಸೆಯನ್ನು ಕೊಡುತ್ತಾ, 17:79 ರಲ್ಲಿ ಅದೇ ಪದವು ಇನ್ನೊಮ್ಮೆ ನಮೂದಿಸಲಾಗಿದೆ. ಇದು 2:125 ರಲ್ಲಿ ಬಳಸಲಾದ ಅದೇ ಪದವಾಗಿದೆ.

> *ವತ್ತಹಧೂ ಮಿನ್ ಮಕಾಮಿ ಇಬ್ರಾಹೀಮ (2:125)*
>
> ಇಬ್ರಾಹೀಮರ ದರ್ಜೆಯನ್ನು ಪರಿಗಣಿಸಿರಿ.
>
> *ಅಸಾ ಅನ್ ಯಬ್‌ಅಸಕ ರಬ್ಬುಕ ಮಕಾಮನ್ ಮಹ್ಮೂದನ್ (17:79)*
>
> ನಿಮ್ಮ ಪ್ರಭುವು ಒಂದು ಪ್ರಶಂಸಿತ ದರ್ಜೆಗೆ ನಿಮ್ಮನ್ನು ಏರಿಸುವನು.

ಆದ್ದರಿಂದ *ಮಕಾಮ್* ಎಂದರೆ ಕೇವಲ ಒಂದು ವ್ಯಕ್ತಿಯ *ದರ್ಜೆ* ಅಥವಾ *ಸ್ಥಾನಮಾನ* ಎಂದರ್ಥವಾಗಿದೆಯೇ ವಿನಹಃ ಒಂದು *ಸ್ಥಳ* ಎಂದಲ್ಲ.

'ಬದ್ಧರಾದ' (ಮುಸಲ್ಲನ್) ಎಂಬ ಪದವು ಭ್ರಷ್ಟಗೊಂಡಿತು

2:125 ರಲ್ಲಿನ *ಮುಸ್ವಲ್ಲನ್* ಎಂಬ ಪದವನ್ನು, ಸ್ವಲಾತಿನ ಮೂಲಪದವಾದ *ಸ್ವಲವ* ಎಂಬುವುದರಿಂದಲೇ ಪಡೆಯಲಾಗಿದೆ, ಹಾಗೂ ಇಬ್ರಾಹೀಮರನ್ನು ಕರ್ತರಾಗಿ ಪ್ರತಿನಿಧಿಸಲು *ಮು* ಎಂಬ ಒಂದು ಪೂರ್ವಪ್ರತ್ಯಯವನ್ನು ಆ ಮೂಲಪದಕ್ಕೆ ಸೇರಿಸಲಾಗಿದೆ.

ಆದಾಗ್ಯೂ, ಕೊನೆಯ ಪ್ರವಾದಿಯ ಶತ್ರುಗಳು '*ಇಬ್ರಾಹೀಮ ಮುಸ್ವಲ್ಲ*' ಎಂಬ ಪದಗಳು ಇಬ್ರಾಹೀಮರು ಪ್ರಾರ್ಥಿಸಲು ನಿಂತಂತಹ *ವಿಧ್ಯುಕ್ತ ಪ್ರಾರ್ಥನೆಯ ಸ್ಥಳ* ವಾಗಿದೆ ಎಂದು ಹೇಳುತ್ತಾರೆ (ಮತ್ತು ನಂತರ ಹೇಗೆಯೋ ಅವರ ಪಾದದ ಅಚ್ಚುಗಳು ಅದ್ಭುತವಾಗಿ ಅದೇ ಸ್ಥಳದಲ್ಲಿ ಒಂದು ತಾಮ್ರದ ಬ್ಲಾಕಿನಲ್ಲಿ ಕಾಣಿಸಿಕೊಂಡವು). ಅರಬೀ ಭಾಷೆಯಲ್ಲಿ ಮೂರು ವಚನಗಳಿವೆ ಎಂದು ನಾವು ಗಮನಿಸಬೇಕು, ಅವುಗಳು: ಏಕವಚನ, ದ್ವಿವಚನ ಮತ್ತು ಬಹುವಚನ. *ಸ್ವಲಾತಿನ* ಕರ್ತವು (ಕೆಲಸ ಮಾಡುವವನನ್ನು ಸೂಚಿಸುವ ಶಬ್ದ) ಏಕವಚನದಲ್ಲಿದ್ದರೆ, ಅವನು *ಮುಸ್ವಲ್ಲನ್* ಎಂದು, ಮತ್ತು ಕರ್ತವು ಬಹುವಚನದಲ್ಲಿದ್ದರೆ ಅವರು *ಮುಸ್ವಲ್ಲೀನ್* ಎಂದು ಕರೆಯಲಾಗುತ್ತದೆ. *ಮುಸ್ವಲ್ಲೀನ್* ಪದವು ಸಹ ಕುರ್‌ಆನಿನಲ್ಲಿ ಕಂಡುಬರುತ್ತದೆ:

- 2:125 ರಲ್ಲಿರುವ *ಇಬ್ರಾಹೀಮ ಮುಸ್ವಲ್ಲ* ಎಂಬುವುದು, ಇಬ್ರಾಹೀಮ್ ಎಂಬ ಒಬ್ಬ ಮನುಷ್ಯನು ಸ್ವಲಾತಿನ ಕರ್ತನಾಗಿದ್ದಾನೆ ಎಂದು ನಮಗೆ ಮಾಹಿತಿ ನೀಡುತ್ತದೆ. ಅಂದರೆ ಇಲ್ಲಿ ಇಬ್ರಾಹೀಮರನ್ನು ಒಂದು *ಮುಸ್ವಲ್ಲನ್* ಎಂದು ಕರೆಯಲಾಗಿದೆ.

- 107:5 ರಲ್ಲಿ (ಕೆಳಗೆ ನೋಡಿ) ಅದೇ ಪದವನ್ನು ತಮ್ಮ ಸ್ವಲಾತನ್ನು ಮಾಡುವ ಅನೇಕ ಜನರನ್ನು (ಬಹುವಚನ) ಸೂಚಿಸಲು ಬಳಸಲಾಗುತ್ತದೆ. ಅವರನ್ನು *ಮುಸ್ವಲ್ಲೀನ್* ಎಂದು ಕರೆಯಲಾಗುತ್ತದೆ. ಇದು *ಮುಸ್ವಲ್ಲನ್* ಎಂಬ ಪದದ ಬಹುವಚನವಾಗಿದೆ.

ಸ್ವಲಾತ್ ಪದ-ಪಲ್ಲಟದ ಅದೇ ವಿಧಾನವನ್ನು ಧಾರ್ಮಿಕರು ಇಲ್ಲಿ ಬಳಸಿದ್ದಾರೆ. ಅವರು ಒಂದು ಸ್ಥಳದಲ್ಲಿ ಒಂದು ಅರ್ಥವನ್ನು ಹೇಳುತ್ತಾರೆ ತದನಂತರ ಮತ್ತೊಂದು ಸ್ಥಳದಲ್ಲಿ ಬೇರೆ ಏನನ್ನೋ ಹೇಳುತ್ತಾರೆ. ಮುಸ್ವಲ್ಲನ್ ಎಂಬ ಪದವು (ಏಕವಚನದಲ್ಲಿ) ಕುರ್‌ಆನಿನಲ್ಲಿ ಕೇವಲ ಒಮ್ಮೆ ಕಾಣಿಸಿಕೊಂಡಿದೆ ಮತ್ತು ಅದು ಮಾನವ ಸಮುದಾಯಕ್ಕೆ 'ನಾಯಕ'ನನ್ನಾಗಿ ನೇಮಿಸಲಾದ ಈ ನಿರ್ದಿಷ್ಟ ವ್ಯಕ್ತಿಯನ್ನು ಸೂಚಿಸುತ್ತದೆ. ವಚನ 2:253 ರಲ್ಲಿ ಹೇಳಿರುವಂತೆ, ಅಲ್ಲಾಹನು ವಿವಿಧ ಸಂದೇಶವಾಹಕರಿಗೆ ವಿವಿಧ ದರ್ಜೆಯನ್ನು ನೀಡಿದ್ದಾನೆ. ಆದರೆ ಇಡೀ ಮನುಕುಲಕ್ಕೆ 'ನಾಯಕ'ನನ್ನಾಗಿ ನಿಯೋಜಿಸಲಾದ ಮಹಾನ್ ದರ್ಜೆಯನ್ನು ಅಲ್ಲಾಹನು ಬೇರೆ ಯಾವ ಪ್ರವಾದಿಗಳಿಗೋ ಸಂದೇಶವಾಹಕರಿಗೋ ನೀಡಲಿಲ್ಲ. ಅಲ್ಲಾಹನು ನಮಗಾಗಿ ರೂಪಿಸಿರುವ ವ್ಯವಸ್ಥೆಯಲ್ಲಿ ಇಬ್ರಾಹೀಮರ ದರ್ಜೆಯ ಸುಸ್ಪಷ್ಟ ನಿದರ್ಶನಗಳಿವೆ ಎಂದು ಕುರ್‌ಆನ್ 3:97 ರಲ್ಲಿ ಸೂಚಿಸಲಾಗಿದೆ. ಏಕದೇವ ವಿಶ್ವಾಸಿಯಾದ, ಅಲ್ಲಾಹನ ವ್ಯವಸ್ಥೆಯಲ್ಲಿದ್ದ ಎಲ್ಲಾ ತರಹದ ಮೂರ್ತಿಪೂಜೆಯ ಅಂಶಗಳನ್ನು ನಿರ್ಮೂಲಗೊಳಿಸಿ ಶುದ್ಧೀಕರಿಸಲು ನಿಯೋಜಿಸಲ್ಪಟ್ಟ ಇಬ್ರಾಹೀಮರ ನಿಲುವನ್ನು ಹಾಗೂ ಹಾದಿಯನ್ನು ಅನುಸರಿಸಲು ಕೊನೆಯ ಪ್ರವಾದಿಗೆ ಹಾಗೂ ನಮಗೆಲ್ಲರಿಗೆ ಸೂಚನೆ ನೀಡಲಾಗಿದೆ.

ತಮ್ಮ ಧರ್ಮಕ್ಕೆ ಆಸರೆಯನ್ನು ನೀಡುವ ಸಲುವಾಗಿ, ಪದಗಳ ಅರ್ಥವನ್ನು ತಿರುಚುವ ಗಡಿಬಿಡಿಯಲ್ಲಿ, ಅದೇ ಪದವು ಕುರ್‌ಆನಿನಲ್ಲಿ ಮೂರು ಇತರ ಸ್ಥಳಗಳಲ್ಲಿ ಬಹುವಚನದಲ್ಲಿ ಬಳಕೆಯಲ್ಲಿರುವ ವಾಸ್ತವವನ್ನು ಅರಬೀ ಧಾರ್ಮಿಕರು ಗಮನಿಸಲಿಲ್ಲವೆಂದು ತೋರುತ್ತದೆ. ನಾವು ಆ ಎಲ್ಲಾ ಸಂದರ್ಭಗಳನ್ನು ನೋಡೋಣ:

ಮಿನ್ ಮಕಾಮಿ ಇಬ್ರಾಹೀಮ ಮುಸಲ್ಲನ್ (ಏಕವಚನ) (2:125)

ಬದ್ಧರಾದ ಇಬ್ರಾಹೀಮರ ದರ್ಜೆಯಿಂದ.

ಇಲ್ಲಲ್- ಮುಸ್ಪಲ್ಲೀನ್ (ಬಹುವಚನ) (70:22)

ಬದ್ಧರಾದವರನ್ನು ಹೊರತುಪಡಿಸಿ.

ಲಮ್ ನಕು ಮಿನಲ್ ಮುಸ್ಪಲ್ಲೀನ್ (ಬಹುವಚನ) (74:43)

ನಾವು ಬದ್ಧರಾದವರ ಪೈಕಿ ಆಗಿರಲಿಲ್ಲ.

ವಯ್ಲುನ್ ಲಿಲ್ ಮುಸ್ಪಲ್ಲೀನ್ (ಬಹುವಚನ) ಅಲ್ಲಧೀನಹುಮ್ ಅನ್ ಸ್ವಲಾತಿಹಿಮ್ ಸಾಹೂನ್ (107:5-6)

ತಮ್ಮ ಬದ್ಧತೆಗಳ ಬಗ್ಗೆ ನಿರ್ಲಕ್ಷರಾದಂತಹ ಬದ್ಧರಾದವರಿಗೆ ನಾಶವಿದೆ.

ಕೊನೆಯ ವಚನವು, ತಮ್ಮ ಬದ್ಧತೆಗಳನ್ನು ವಿನೋದವಾಗಿ ತೆಗೆದುಕೊಳ್ಳುವವರಿಗೆ ನಾಶವು ಕಾದಿದೆ ಎಂದು ಸೂಚಿಸುತ್ತದೆ!

ಯಾವುದೇ ಅರಬೀ ಭಾಷಾಶಾಸ್ತ್ರಜ್ಞನು *ಮುಸ್ಪಲ್ಲನ್* ಎಂಬುವುದು ವಿಧ್ಯುಕ್ತ ಪ್ರಾರ್ಥನೆಗಳನ್ನು ಸಲ್ಲಿಸುವ ಸ್ಥಳ ಎಂದು ಹೇಳಲು ಸಾಧ್ಯವಿಲ್ಲ; ಆದರೂ ಧಾರ್ಮಿಕರು ಈ ಪದವು ಒಂದು ಭೌತಿಕ ಸ್ಥಳವನ್ನು ಸೂಚಿಸುತ್ತದೆ ಎಂದು ಒತ್ತಾಯಿಸುತ್ತಾರೆ. ಆದ್ದರಿಂದ 2:125 ರಲ್ಲಿ *ಇಬ್ರಾಹೀಮ ಮುಸ್ಪಲ್ಲನ್* ಎಂಬುವುದು ಇಬ್ರಾಹೀಮರು ವಿಧ್ಯುಕ್ತ ಪ್ರಾರ್ಥನೆಗೆ ನಿಂತ ಸ್ಥಳ ಎಂದು ವಾದಿಸುತ್ತಾ ಅವರು ಭ್ರಷ್ಟತೆಯನ್ನು ಮುನ್ನಡೆಸುತ್ತಾರೆ. ಇದು ಯುಕ್ತಿಗೂ ಮತ್ತು ವ್ಯಾಕರಣಕ್ಕೂ ವಿರುದ್ಧವಾಗಿದೆ ಹಾಗೂ ಇದಕ್ಕೆ ಯಾವುದೇ ಪುರೋಹಿತರು ಅಥವಾ ಉಲೆಮಾಗಳು ವಿವರಣೆ ನೀಡಲು ಸಾಧ್ಯವಿಲ್ಲ.

ಮುಸ್ಪಲ್ಲನ್ ಎಂಬುವುದು ಸ್ವಲಾತನ್ನು ಎತ್ತಿಹಿಡಿಯುವ ಸಕ್ರಿಯ ಕೃದಂತವಾದ ಏಕವಚನವಾಗಿದೆ. *ಮುಸ್ಪಲ್ಲೀನ್* ಎಂಬುವುದು ಅದರ ಬಹುವಚನವಾಗಿದೆ. ಇದು ಸರಳವಾದ ಅರಬಿಯಾಗಿದೆ.

ಒಂದು ಉದಾಹರಣೆ: 7:44 ರಲ್ಲಿ ಒಂದು ಘೋಷಣೆಯನ್ನು ಪ್ರಕಟಿಸುವವನ ಬಗ್ಗೆ ಹೇಳಲಾಗಿದೆ. ಅರಬೀ ಭಾಷೆಯಲ್ಲಿ ಪ್ರಕಟನೆ ಅಥವಾ ಘೋಷಣೆ ಮಾಡುವುದಕ್ಕೆ *ಅಝಾನ್* ಎನ್ನಲಾಗುತ್ತದೆ ಮತ್ತು ಭೂತಕಾಲದಲ್ಲಿ ಅದು *ಅಝ್ಞನ* ಎಂದಾಗಿದೆ. ಪ್ರಕಟಣೆಯನ್ನು ಘೋಷಿಸುವ ಅಥವಾ ಪ್ರಕಟಿಸುವ ವ್ಯಕ್ತಿಯನ್ನು *ಮುಅಝ್ಞಿನ್* ಎಂದು ಕರೆಯಲಾಗುತ್ತದೆ.

> ಆಗ ಘೋಷಿಸುವನೊಬ್ಬನು *(ಮುಅಝ್ಝಿನ್)* ಅವರ ನಡುವೆ ಹೀಗೆ ಘೋಷಿಸಿದನು *(ಅಝ್ಞನ)*, "ಅಕ್ರಮಿಗಳ ಮೇಲೆ ಅಲ್ಲಾಹನ ಶಾಪವಿದೆ." (7:44)

ಅದೇ ರೀತಿ, ಇಬ್ರಾಹೀಮರು ಸ್ವಲಾತನ್ನು ಅಥವಾ ಬದ್ಧತೆಗಳನ್ನು ಎತ್ತಿಹಿಡಿಯುವವರಾಗಿದ್ದರು ಹಾಗೂ ಅವರನ್ನು *ಮುಸ್ವಲ್ಲನ್* - ಬದ್ಧರಾಗಿದ್ದ ಮನುಷ್ಯ - ಎಂದು ಕರೆಯಲಾಗಿದೆ. ಅರಬೀ ಭಾಷೆಯನ್ನು ಚೆನ್ನಾಗಿ ತಿಳಿದಿರುವ ವಿದ್ವಾಂಸರು ಸಹ ಧಾರ್ಮಿಕರಿಂದ ಮರಳಾಗಿಸಲ್ಪಟ್ಟಿದ್ದಾರೆ. ಅವರು ಕೂಡ ಈ ಕುತಂತ್ರದ ಭಾಗವಾಗುವುದಿಲ್ಲವೇ?

ವ್ಯವಸ್ಥೆಯನ್ನು ಶುದ್ಧಿಗೊಳಿಸುವುದು

2:125 ರ ಪ್ರಮುಖ ಭಾಗವನ್ನು ಬೇರ್ಪಡಿಸಿ ನೋಡೋಣ.

ವ ಇಝ್ ಅಹಿದ್ನ	ಮತ್ತು ನಾವು ನಿಯೋಜಿಸಿದಾಗ
ಇಬ್ರಾಹೀಮ	ಇಬ್ರಾಹೀಮರನ್ನು
ವ ಇಸ್ಮಾಯೀಲ	ಮತ್ತು ಇಸ್ಮಾಯೀಲರನ್ನು
ಅನ್ ಥ್ಬಹ್ಹಿರ	ಶುದ್ಧೀಕರಿಸಲು
ಬೈತಿಯ	ನನ್ನ ವ್ಯವಸ್ಥೆಯನ್ನು

ಎಲ್ಲಾ ಅನುವಾದಕರು ಹೇಳುವಂತೆ, *ಥ್ಬಹ್ಹಿರ* ಎಂಬುವುದು *ಶುದ್ಧೀಕರಿಸು* ಎಂಬುವುದನ್ನು ನಮಗೆ ಒಪ್ಪಬಹುದು, ಆದರೆ ಅದು ಇಬ್ರಾಹೀಮರು ಮತ್ತು ಇಸ್ಮಾಯೀಲರು ಒಂದು ಭೌತಿಕ ಮನೆಯನ್ನು ಶುದ್ಧೀಕರಿಸಿದರು ಎಂದು ಅರ್ಥಮಾಡಿಕೊಳ್ಳಲು ಬಹಳ ಕಷ್ಟಕರವಾಗಿದೆ.

ಸಹಜವಾಗಿ, ಇಂದು (ಎರಡು ಪವಿತ್ರ ಸ್ಥಳಗಳು ಎಂದು ಹೇಳಲಾಗುವ ಮಕ್ಕಾ ಹಾಗೂ ಮದೀನದ ಪಾಲಕನೆಂದು ಸ್ವತಃ ತನ್ನನ್ನು ಕರೆದು ಕೊಳ್ಳುವ) ಸೌದಿ ಅರೇಬಿಯಾದ ರಾಜನು, ಪ್ರತಿ ವರ್ಷ ಈದ್ ಹಬ್ಬದ ಸಂದರ್ಭದಲ್ಲಿ ಈ ಕಲ್ಲಿನ ವಿಗ್ರಹವನ್ನು ಸ್ವಚ್ಛ ಮಾಡುತ್ತಾನೆ. ಅವನು ಅಲ್ಲಾಹನ ಮನೆಯಾಳು ಅಥವಾ ಮನೆಯನ್ನು ಸ್ವಚ್ಛಗೊಳಿಸುವವನಾಗಿದ್ದಾನೆ.

ಕುರ್'ಆನಿನ ಪ್ರಕಾರ, ಇಬ್ರಾಹೀಮರು ಅಲ್ಲಾಹನ ಸೇವೆಗೆ ಬದ್ಧರಾಗಿದ್ದರು ಹಾಗು ಅವರು ಎಲ್ಲಾ ಧಾರ್ಮಿಕ ಮತ್ತು ಮೂರ್ತಿ ಆರಾಧನಾ ಪದ್ಧತಿಗಳಿಗೆ ವಿರುದ್ಧರಾಗಿದ್ದರು. ಅಸ್ತಿತ್ವದಲ್ಲೇ ಇರದಂತಹ ಒಂದು ಮನೆಯನ್ನು

ಇಬ್ರಾಹೀಮರು ಶುದ್ಧಗೊಳಿಸಿದರು ಎಂಬುವುದನ್ನು *ಥ್ಹಹ್ಹಿರ* ಎಂಬ ಪದವು ಉಲ್ಲೇಖಿಸುವುದಿಲ್ಲ. ಬದಲಿಗೆ, ಅವರು ವ್ಯವಸ್ಥೆಯಲ್ಲಿದ್ದ ಮೂರ್ತಿಪೂಜೆಯನ್ನು ಅಳಿಸಿ ಅದನ್ನು ನಿರ್ಮಲಗೊಳಿಸಲು ಆಜ್ಞಾಪಿಸಲ್ಪಟ್ಟಿದ್ದರು. ಅದಕ್ಕೆ ಸರಿಯಾಗಿ ಇಬ್ರಾಹೀಮರು ವಿಗ್ರಹಗಳನ್ನು ಮುರಿದರು - ಅಥವಾ ಕುರ್‌ಆನಿನ ಶೈಲಿಯಲ್ಲಿ ಹೇಳುವುದಾದರೆ – ಅವರು ತಮ್ಮ ಬಲಗೈಯಿಂದ ವಿಗ್ರಹಗಳನ್ನು ಮುರಿದರು.

'ಜನಸಮೂಹ' ಎಂಬುವುದು ಭ್ರಷ್ಟಗೊಂಡಿತು

ಒಂದು ಚೌಕ ಕಲ್ಲಿನ ವಿಗ್ರಹದ ಪ್ರದಕ್ಷಿಣೆಯ ಅರ್ಥವನ್ನು ನೀಡಲು ಧಾರ್ಮಿಕರು ಅದೇ ವಚನದ ಇನ್ನೊಂದು ಸರಳ ಪದವನ್ನು ತಿರುಚಿದರು (ಇದು ವಾಸ್ತವವಾಗಿ, ಜನಸಮೂಹವನ್ನು ಸೂಚಿಸುವ ಪದವಾಗಿದೆ). ಈ ವಚನದಲ್ಲಿ ಪ್ರಸ್ತಾಪಿಸಲಾದ *ಥ್ವಾಇಫೀನ* ಎಂಬ ಪದವು, ಅಲ್ಲಾಹನ ವ್ಯವಸ್ಥೆಯಲ್ಲಿ ಭಾಗವಹಿಸುವಂತಹ ಜನಸಮೂಹದ ಪ್ರತಿಕ್ರಿಯೆಯನ್ನು ಸೂಚಿಸುವ ಸಂದೇಶದ ಭಾಗವಾಗಿದೆ.

ಧಾರ್ಮಿಕರು *ಥ್ವಾಇಫೀನ* ಎಂಬ ಪದದ ಅರ್ಥವನ್ನು ಬದಲಾಯಿಸಲು ಪ್ರಯತ್ನಿಸಿದಾಗ, ಅವರು ಒಂದು ಮಹಾ ಪ್ರಮಾದವನ್ನೇ ಮಾಡಿದ್ದಾರೆ, ಏಕೆಂದರೆ ಇದನ್ನು ಇತರ ವಚನಗಳೊಂದಿಗೆ ಹೋಲಿಕೆ ಮಾಡುವ ಮೂಲಕ ಅವರ ಈ ಕುಶಲತೆಯನ್ನು ಸುಲಭವಾಗಿ ಪತ್ತೆಹಚ್ಚಬಹುದು. ಅದೇನೇ ಇದ್ದರೂ, ಅವರು ಕಲ್ಲಿನ ವಿಗ್ರಹದ ಸುತ್ತಲೂ ನಡೆಯುವಂತೆ ಮಾಡಿಸಿ ವಿಶ್ವದ ಎಲ್ಲಾ ಜನರನ್ನು ವಂಚನೆಗೊಳಗಾಗಿಸಿದ್ದಾರೆ.

ಥ್ವಾಇಫೀನ ಎಂಬ ಪದವು *ಥ್ವ-ಐನ್-ಫಾ* ಎಂಬ ವ್ಯಂಜನಗಳನ್ನೊಳಗೊಂಡ *ಥ್ವಾಇಫ್* ಎಂಬ ಮೂಲಪದದಿಂದ ರಚಿಸಲ್ಪಟ್ಟಿದೆ. ಅದರ ಅರ್ಥವು ಒಂದು ಪಕ್ಷ ಅಥವಾ ಜನಸಮೂಹ ಎಂದಾಗಿದೆ. ಈ ಪದ (ಅಥವಾ ಅದೇ ಮೂಲದ ಇತರ ಉತ್ಪನ್ನಗಳು) ಕುರ್‌ಆನಿನಲ್ಲಿ ಅನೇಕ ಭಾಗಗಳಲ್ಲಿ ಬಳಸಲಾಗಿದೆ. ಅವುಗಳು 3:69, 3:72, 3:122, 3:154, 4:81, 4:102, ಮತ್ತು 4:113 ರಲ್ಲಿ ಕಾಣಬಹುದು. ಕೆಲವು ಉದಾಹರಣೆಗಳು:

3:69	*ಥ್ವಾಇಫತುನ್ ಮಿನ್ ಅಹ್ಲಿಲ್ ಕಿತಾಬಿ* - ಅಂದರೆ - *ಗ್ರಂಥದ ಜನರ ಪೈಕಿ ಒಂದು ಗುಂಪು*
3:122	*ಥ್ವಾಇಫತಾನಿ ಮಿನ್ಕುಮ್*– ಅಂದರೆ - ನೀವು ಪೈಕಿ ಎರಡು ಗುಂಪುಗಳು
4:81	*ಥ್ವಾಇಫತುನ್ ಮಿನ್ಹುಮ್*– ಅಂದರೆ – ಅವರ ಪೈಕಿ ಒಂದು ಗುಂಪು

ಥ್ವಾಇಫೀನ್ ಅಂದರೆ ಜನರ ಗುಂಪು (ಅಥವಾ ಗುಂಪುಗಳು) ಎಂದರ್ಥವಾಗಿದೆ.

ಇದೇ ಪದವು ಬೈತದೊಂದಿಗೆ ಬಳಕೆಯಾದಾಗ ಮಾತ್ರ *ಸುತ್ತಲೂ ನಡೆಯುವುದು* ಎಂದಾಗುವುದು ಅವೈಚಾರಿಕವಾಗಿದೆ. ನಿಸ್ಸಂಶಯವಾಗಿ, ಈ ಉದ್ದೇಶಪೂರ್ವಕ ದುರ್ವ್ಯಾಖ್ಯಾನವು, ಈ ಆವಿಷ್ಕಾರಿತ ತೀರ್ಥಯಾತ್ರೆಯ ಆಚರಣೆಗಳನ್ನು ಬೆಂಬಲಿಸಲು ವರ್ಷಾನುವರ್ಷ ಓದುಗರ ಮೇಲೆ ಬಲವಂತವಾಗಿ ಹೇರಲಾಗಿದೆ. *ಥ್ವಾಇಫೀನ್* ಎಂದರೆ *ಸುತ್ತಲೂ ನಡೆಯುವುದು* ಎಂದು ಹೇಳಲು ಕುರ್‌ಆನಿನಲ್ಲಿ ಯಾವುದೇ ಸಮರ್ಥನೆಯು ಇಲ್ಲ, ಏಕೆಂದರೆ ಈ ಪದವು ಬಳಕೆಯಾದ ಇತರ ಎಲ್ಲಾ ಕಡೆಗಳಲ್ಲಿಯೂ, ಇದು ಜನರ ಗುಂಪು ಎಂಬ ಅರ್ಥವನ್ನೇ ನೀಡುತ್ತದೆ.

ಅರಬೀ ಭಾಷೆಯ ವಿದ್ವಾಂಸರಿಗೂ ಈ ವಿವಾದವನ್ನು ವಿವರಿಸಲು ಸಾಧ್ಯವಿಲ್ಲ. ಅಲ್ಲಾಹನ ದಿವ್ಯಗ್ರಂಥದ ವೆಚ್ಚದಲ್ಲಿ, ಅಲೆಮಾರಿ ಕಾಲದ ಸಾಂಪ್ರದಾಯಿಕ ಅನಾಚಾರಿಕ ಧಾರ್ಮಿಕ ವಿಧಿಗಳನ್ನು ಕಾಪಾಡಿಕೊಳ್ಳುವ ಉದ್ದೇಶವನ್ನು ಹೊರತು ಈ ಪದವನ್ನು ಹೀಗೆ ತಿರುಚುವುದರ ಹಿಂದೆ ಬೇರೆ ಯಾವುದೇ ಕಾರಣವು ಇರುವುದು ಕಂಡುಬರುವುದಿಲ್ಲ. *ಜನಸಮೂಹಕ್ಕಾಗಿ (ಲಿ-ಥ್ವಾಇಫೀನ)* ವ್ಯವಸ್ಥೆಯನ್ನು *(ಬೈತ)* ಶುದ್ಧೀಕರಿಸುವುದು ಇಬ್ರಾಹೀಮರ ಕೆಲಸವಾಗಿತ್ತು. ಅಷ್ಟೇ.

ಥ್ವವಾಫ್

ಈ ಪದವು 2:125 ಅಥವಾ 22:26 ರಲ್ಲಿ ಕಂಡುಬಂದಿಲ್ಲ, ಆದರೂ ಸ್ಪಷ್ಟತೆಗಾಗಿ ನಾನು ಇಲ್ಲಿ ವಿವರಿಸುತ್ತೇನೆ. ಚೌಕ ಮನೆಗೆ ಏಳು ಸುತ್ತು ಪ್ರದಕ್ಷಿಣೆ ಮಾಡುವುದನ್ನು ಧಾರ್ಮಿಕರು *ಥ್ವವಾಫ್*[59] ಎಂದು ಹೇಳುತ್ತಾರೆ ಮತ್ತು ಈ ಎರಡು ವಚನಗಳಲ್ಲಿನ *ಥ್ವಾಇಫೀನ* ಎಂಬ ಪದವು ಇದೇ ಅರ್ಥವನ್ನು ನೀಡುವಂತೆ ಅಪಾರ್ಥಗೊಳಿಸಿದರು. *ಥ್ವವಾಫ್* ಎಂಬ ಪದವು *ಥ್ಬ-ವ-ಫ* ಎಂಬ ವ್ಯಂಜನಗಳನ್ನೊಳಗೊಂಡ ಮೂಲಪದದಿಂದ ಪಡೆಯಲಾಗಿದೆ. ಅದರ ಅರ್ಥವು *ಸುತ್ತುವರಿಯುವುದು, ಸುತ್ತುಮುತ್ತಲು* ಅಥವಾ *ಯಾವುದೇ ಒಂದು ವಿಷಯಕ್ಕೆ ಹೊಂದಿಕೊಳ್ಳುವುದು* ಎಂಬ ಅರ್ಥದಲ್ಲಿ ಕುರ್‌ಆನಿನಲ್ಲಿ ಅನೇಕ ಬಾರಿ ಕಾಣಿಸಿಕೊಂಡಿದೆ, ಆದರೆ ಅವುಗಳು ಕಲ್ಲಿನ ಮೂರ್ತಿಗೆ ಸಂಬಂಧವಿರುವ ಯಾವುದೇ ಸಂದರ್ಭಗಳಲ್ಲ. ಈ ನಿಟ್ಟಿನಲ್ಲಿ ಗಮನಿಸಬೇಕಾದ ಮುಖ್ಯಾಂಶವೇನೆಂದರೆ, *ಥ್ವಾಇಫ್* ಹಾಗೂ *ಥ್ವವಾಫ್* ಎಂಬುವುದರ ಮೂಲದ ಮಧ್ಯ ವ್ಯಂಜನಗಳು ಬೇರೆ ಬೇರೆಯಾಗಿದೆ, ಆದ್ದರಿಂದ ಅವುಗಳ ಅರ್ಥಗಳು ಒಂದೇ ಅಲ್ಲ. *ಥ್ವಾಇಫೀನ* ಪದದ ಮೂಲಪದವು *ಥ್ಬ-ಐನ್-ಫ* ಆಗಿದೆ ಹಾಗೂ ಥ್ವವಾಫ್ ಪದದ ಮೂಲಪದವು *ಥ್ಬ-ವ-ಫ* ಆಗಿದೆ.

ಥ್ವಾಇಫೀನ ಎಂಬ ಪದವು ಕಲ್ಲಿನ ಮೂರ್ತಿಯ ಸುತ್ತಲೂ ನಡೆಯುವ ಚಟುವಟಿಕೆಯನ್ನು ಸೂಚಿಸುತ್ತದೆ ಎಂದು ಜನರು ಭಾವಿಸಲೆಂದು, ಧಾರ್ಮಿಕರು ಅದರ ಅರ್ಥವನ್ನು ಬದಲಿಸಿದರು ಮತ್ತು ಅನುವಾದಕರು ಸಹ ಆ

[59] ಈ ಪದವು ನಾವು ಚರ್ಚಿಸುತ್ತಿರುವ ವಚನವಾದ 2:125 ರಲ್ಲಿ ಬಳಕೆಯಾಗಲಿಲ್ಲ. ಆದರೂ, ಕಾಬಾವನ್ನು ಪ್ರದಕ್ಷಿಣೆ ಮಾಡುವುದನ್ನು ಸೂಚಿಸಲು ಅರಬೀ ಧರ್ಮದ ಅನುಯಾಯಿಗಳಿಂದ ಈ ಪದವು ಸಾಮಾನ್ಯವಾಗಿ ಬಳಸಲ್ಪಡುತ್ತಿದೆ.

ಪದಕ್ಕೆ '*ಅದಕ್ಕೆ ಪ್ರದಕ್ಷಿಣೆ ಮಾಡುವವರು*' ಎಂಬ ಅರ್ಥವನ್ನೇ ನೀಡಲು ಮುಂದುವರಿಸಿದರು. ಇದೊಂದು ಭಯಾನಕವಾದ ಭ್ರಷ್ಟತೆಯಾಗಿದೆ.

ಥ್ವವಾಫ್ ಎಂಬ ಪದವು ಅನೇಕ ಬಾರಿ ಉಲ್ಲೇಖಿಸಲಾಗಿದೆ. ಉದಾಹರಣೆಗೆ:

> *ಯಥೂಫೂನ ಬೈನಹಾ ವ ಬೈನ ಹಮೀಮಿನ್ ಆನ್* (ಅದರ (ನರಕದ) ಮತ್ತು ಕುದಿಯುತ್ತಿರುವ ನೀರಿನ ನಡುವೆ ಅವರು ಸುತ್ತುತ್ತಿರುವರು)
>
> *ಥ್ವವ್ವಾಫೂನ ಅಲೈಕುಮ್* (ಅವರು ನಿಮ್ಮ ಸುತ್ತುಮುತ್ತಲು ಇರುವವರು) (24:58)
>
> *ವಲ್-ಯಥ್ವವ್ವಫೂ ಬಿಲ್ ಬೈತಿಲ್ ಅತೀಕ್* (ಮತ್ತು ಹಳೆಯ ವ್ಯವಸ್ಥೆಯೊಂದಿಗೆ ಹೊಂದಿಕೊಳ್ಳಲು) (22:29)

ಈಗಾಗಲೇ ಹೇಳಿದಂತೆ *ಥ್ವವಾಫ್* ಎಂಬ ಪದವು ಪ್ರಮುಖವಾದ 2:125 ಅಥವಾ 22:26 ರಲ್ಲಿ ಕಂಡುಬರುವುದಿಲ್ಲ. ಬದಲಿಗೆ ಈ ವಚನಗಳಲ್ಲಿ ಬಳಕೆಯಾಗಿರುವುದು *ಥ್ವಾಇಫೀನ* ಆಗಿದೆ, ಅದರ ಅರ್ಥವು *ಜನಸಮೂಹ* ಎಂದಾಗಿದೆ *ಸುತ್ತುವರಿಯುವುದು* ಎಂದಲ್ಲ.

ಮೇಲೆ ತಿಳಿಸಿದ ಮೂರು ವಚನಗಳ ಸಾರವನ್ನು ಅರ್ಥಮಾಡಿಕೊಂಡಾಗ, ತುಂಬಾ ಗಂಭೀರವಾದ ಪೂರ್ವಯೋಜಿತ ಒಳಸಂಚಿನ ಅಸ್ತಿತ್ವವು ನಮಗೆ ವ್ಯಕ್ತವಾಗುತ್ತದೆ.

ನಾವು 24:58 ನ್ನು ಗಮನಿಸಬೇಕು. ಈ ವಚನದಲ್ಲಿ, ಮಕ್ಕಳು ಮತ್ತು ಸೇವಕರು ದಿನದ 'ನಗ್ನತೆ'ಯ ಮೂರು ವೇಳೆಯಲ್ಲಿ ನಿಮ್ಮ ಕೊಠಡಿಗೆ ಪ್ರವೇಶಿಸುವ ಮೊದಲು ನಿಮ್ಮ ಅನುಮತಿಯನ್ನು ಕೇಳಬೇಕು ಎಂದು ಹೇಳಲಾಗಿದೆ. ಈ ಮೂರು ಅವಧಿಗಳನ್ನು ಹೊರತುಪಡಿಸಿ, ಅವರು ಪ್ರವೇಶಿಸಬಹುದು. ಆದ್ದರಿಂದ, ಈ ವಚನದಲ್ಲಿನ *ಥ್ವವಾಫೂನ ಅಲೈಕುಮ್* ಎಂಬುವುದು *ಅವರು ನಿಮ್ಮ ಸುತ್ತುಮುತ್ತಲು ಇರುವವರು* ಎಂಬ ಅರ್ಥವನ್ನು ನೀಡುತ್ತದೆ. ಇದು ಸರಳ ಸಾಂಸಾರಿಕ ಶಿಷ್ಟಾಚಾರವಾಗಿದೆ.

22:29 ವಚನವು 22:26 ರಲ್ಲಿನ ಇಬ್ರಾಹೀಮರ ಬಗ್ಗೆಗಿನ ಉಲ್ಲೇಖವನ್ನು ಹಿಂಬಾಲಿಸುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ. ಇಬ್ರಾಹೀಮರಿಗೆ ಮುಂಚಿತವಾಗಿ ಅಲ್ಲಿ ಒಂದು ಹಳೆಯ ವ್ಯವಸ್ಥೆಯು (ಅಥವಾ *ಬೈತಿಲ್ ಅತೀಕ್*) ಇತ್ತು. ಆದುದರಿಂದ ಅಲ್ಲಾಹನು ಇಬ್ರಾಹೀಮರಿಗೆ ತನ್ನ ವ್ಯವಸ್ಥೆ ಅಥವಾ ಬೈತವನ್ನು ತೋರಿಸಿಕೊಟ್ಟನು ಅಥವಾ ವ್ಯಕ್ತಪಡಿಸಿದನು ಎಂದು 2:125 ರಲ್ಲಿ ಹೇಳಿರುವುದಾಗಿ ನಾವು ಕಾಣುತ್ತೇವೆ. ಹೀಗಾಗಿ, *ಬೈತ* ಎಂಬುವುದು ಇಬ್ರಾಹೀಮರು ನಿರ್ಮಿಸಿದ ಭೌತಿಕ ಕಟ್ಟಡ ಎಂಬ ಧಾರ್ಮಿಕರ ವಾದವನ್ನು, 22:29 ವಚನವು ಅಂಗೀಕರಿಸುವುದಿಲ್ಲ.

ಕೇವಲ ವಾದದ ಸಲುವಾಗಿ, *ಬೈತ* ಎಂಬುವುದರ ಅರ್ಥವು *ಒಂದು ಭೌತಿಕ ಮನೆ* ಎಂದು ಭಾವಿಸಿದರೆ, 22:29 ರ ಪ್ರಕಾರ ಇಬ್ರಾಹೀಮರಿಗಿಂತ ಮುಂಚಿತವಾಗಿ ಇನ್ನೊಂದು 'ಮನೆ'ಯು *(ಅಂದರೆ ಬೈತಿಲ್ ಅತೀಕ್)* ಆಗಲೇ ಅಸ್ತಿತ್ವದಲ್ಲಿತ್ತು ಎಂದು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದರೆ, ಧಾರ್ಮಿಕರ ಪ್ರಕಾರ, 'ಬೈತ' ಎಂಬುವುದು, ಇಬ್ರಾಹೀಮರಿಂದ ನಿರ್ಮಿಸಲ್ಪಟ್ಟಂತಹ, ಇಂದು ಕಾಬಾ ಎಂದು ಕರೆಯಲಾಗುವ ಮಕ್ಕಾದಲ್ಲಿರುವ 'ಮನೆ'ಯು ಮಾತ್ರವಾಗಿದೆ.

'ನಿಷ್ಠಾವಂತರು' ಎಂಬುವುದು 'ತಪಶ್ಚರ್ಯೆ ಮಾಡುವವರು' ಎಂದಾಯಿತು

ನಮ್ಮ ಅಧ್ಯಯನದಲ್ಲಿ ಮುಂದಿನ ಪದವು *ಆಕಿಫೀನ* ಆಗಿದೆ. ಪದ *ಆಕಿಫೀನ* ಎಂದರೆ *ಯಾವುದನ್ನಾದರೂ ದೃಢವಾಗಿ* ಅಥವಾ *ನಿಷ್ಠೆಯಿಂದ ಹಿಡಿದುಕೊಳ್ಳುವುದು* ಎಂದಾಗಿದೆ, ಆದರೆ ಧಾರ್ಮಿಕರು ಇದಕ್ಕೆ *ಮಸೀದಿಯಲ್ಲಿ ತಂಗಿಕೊಂಡು ತಪಶ್ಚರ್ಯೆ ಮಾಡುವುದು* ಎಂಬ ಅರ್ಥವನ್ನು ನೀಡಿದ್ದಾರೆ. 2:125 ರ ಸನ್ನಿವೇಶದಲ್ಲಿ ಅದನ್ನು ಓದಿದಾಗ:

ಅನ್ ಥ್ಹಹ್ಹಿರಾ ಬೈತಿಯ ಲಿ-ಥ್ವಾ ಇಫೀನ ವಲ್ ಆಕಿಫೀನ ವ-ರ್ರುಕ್ಕ ಇ-ಸ್ಸುಜೂದಿ

ಆಕಿಫೀನ ಪದದ ಮೂಲವು ಐನ್-ಕಾಫ್-ಫಾ ಅಥವಾ '*ಅಕಫ*' ಆಗಿದೆ. ಈ ಪದವನ್ನು ಕುರ್'ಆನಿನ ಬೇರೆ ಕಡೆಗಳಲ್ಲಿ ಬಳಕೆಯಾದ ಪ್ರತಿ ಬಾರಿಯೂ, *ನಿಷ್ಠಾವಂತರು* ಅಥವಾ *ಯಾವುದನ್ನಾದರೂ ಬಲವಾಗಿ ಹಿಡಿದುಕೊಂಡವರು* ಅಥವಾ *ತಮ್ಮನ್ನು ಸಮರ್ಪಿಸಿಕೊಂಡವರು* ಎಂಬ ಅರ್ಥವನ್ನು ಧಾರ್ಮಿಕರೂ ವಿವರಿಸುತ್ತಾರೆ ಮತ್ತು ಅರಬೇತರರಿಗಾಗಿ ಅನುವಾದಿಸುತ್ತಾರೆ. ಉದಾಹರಣೆಗೆ: 2:125, 2:187, 7:138, 20:91, 20:97, 21:52, 22:25, 26:71 ಮತ್ತು 48:25 ಗಳಲ್ಲಿ.

ಯಅ'ಕುಫೂನ ಅಲಾ ಅಸ್ನಾಮಿನ್

ವಿಗ್ರಹಗಳಿಗೆ ನಿಷ್ಠಾವಂತರು ಅಥವಾ ಸಮರ್ಪಿಸಿಕೊಂಡವರು. (7:138)

ಲನ್ ನಬ್ರಹ ಅಲೈಹಿ ಆಕಿಫೀನ

ನಾವು ಅದನ್ನು ಬಲವಾಗಿ ಹಿಡಿದುಕೊಂಡು (ಅಥವಾ ಅದಕ್ಕೆ ನಿಷ್ಠಾವಂತರಾಗಿ) ಮುಂದುವರಿಯುತ್ತೇವೆ. (20:91)

20:91 ರಲ್ಲಿನ *ಆಕಿಫೀನ* ಎಂಬ ಪದವು 2:125 ರಲ್ಲಿ ಬಳಸಿದ ಅದೇ ಪದವಾಗಿದೆ. ಆದರೆ ಇಲ್ಲಿ ಚಿನ್ನದ ಕರುವನ್ನು ಮೂರ್ತೀಕರಿಸಿದ ಇಸ್ರಾಯೀಲರ ಸಂತತಿಯನ್ನು ಉಲ್ಲೇಖಿಸುತ್ತದೆ.

ಅವರು ಮೂಸಾರ ಸಹೋದರ ಹಾರೂನಿನೊಂದಿಗೆ ಹೇಳಿದರು:

> ನಾವು ಅದನ್ನು ಬಲವಾಗಿ ಹಿಡಿದುಕೊಂಡು (ಅಥವಾ ಅದಕ್ಕೆ ನಿಷ್ಠಾವಂತರಾಗಿ) ಮುಂದುವರಿಯುತ್ತೇವೆ. (20:91)

2:125 ಹೊರತುಪಡಿಸಿ – ಧಾರ್ಮಿಕರು ಬೇರೆ ಎಲ್ಲಾ ಕಡೆಯಲ್ಲೂ ಸ್ಥಿರವಾಗಿ ಈ ಪದವನ್ನು *ಯಾವುದನ್ನಾದರೂ ದೃಢವಾಗಿ ಹಿಡಿದುಕೊಳ್ಳುವುದು* ಅಥವಾ *ನಿಷ್ಠಾವಂತರಾಗಿರುವುದು* ಎಂಬ ಅನುವಾದವನ್ನು ನೀಡಿದ್ದಾರೆ. ಕೇವಲ 2:125 ರ ಸಂದರ್ಭದಲ್ಲಿ ಮಾತ್ರ, *ಆಕಿಫೀನ* ಎಂದರೆ, *ಜನರು ಮಸೀದಿಗಳಲ್ಲಿ ತಪಶ್ಚರ್ಯೆಮಾಡುವುದು* (ಅಂದರೆ, ಮಸೀದಿಗಳಲ್ಲಿ ಏಕಾಂತವಾಸದಲ್ಲಿ ಆರಾಧನೆ ಮಾಡುವುದು) ಎಂದು ಸೂಚಿಸುತ್ತಾರೆ. ಇತರ ಜನರು ತಮ್ಮ ಮಂದಿರಗಳಲ್ಲಿ ತಮ್ಮ ಮೂರ್ತಿಗಳಿಗಾಗಿ ತಪಶ್ಚರ್ಯೆಯನ್ನು ಮಾಡುವುದನ್ನು ಧಾರ್ಮಿಕರು ಖಂಡಿಸುತ್ತಾರೆ, ಆದರೆ ಅವರ ಸ್ವಂತ ಪ್ರಕರಣದಲ್ಲಿ – ಘನಾಕೃತಿಯ ಕಟ್ಟಡಕ್ಕೆ ತಾವು ತಪಶ್ಚರ್ಯೆ ಮಾಡಬೇಕೆನ್ನುವಾಗ - ಅವರಿಗೆ ಅಲ್ಲಾಹನಿಂದ ವಿಶೇಷ ಪರವಾನಗಿ ದೊರತಂತೆ ಕಾಣುತ್ತದೆ.

ಇವರ ಮಸೀದಿಯ ನಡುವೆ ಸ್ಥಾಪಿಸಲಾದ ಭೌತಿಕ ಮನೆಯು ಹಾಗೂ ಇತರ ಮಂದಿರಗಳ ನಡುವೆ ಇರುವ ಭೌತಿಕ ವಿಗ್ರಹಗಳು ಹೇಗೆ ಭಿನ್ನವಾಗಿದೆ? ಹೀಗಿದೆ ಅರಬೀ ಧರ್ಮದ ಕಪಟತೆ!

'ವಿಧೇಯತೆಯಿಂದ ಸಮ್ಮತಿಸಿಕೊಳ್ಳುವುದು' ಎಂಬುವುದು 'ಬಗ್ಗುವುದು ಹಾಗೂ ಸಾಷ್ಟಾಂಗವೆಸಗುವುದು' ಎಂದಾಯಿತು

2:125 ರ ಕೊನೆಯ ನುಡಿಗಟ್ಟು *ವ-ರ್ರುಕ್ಕ ಇ-ಸ್ಸುಜೂದಿ* ಎಂದರೆ *ವಿಧೇಯತೆಯಿಂದ ಒಪ್ಪಿಕೊಳ್ಳುವುದು* ಎಂದಾಗಿದೆ. ಧಾರ್ಮಿಕರು ಇಲ್ಲಿ ಇದನ್ನು ನುಜ್ಜುಗುಜ್ಜಾಗಿಸಿ, ಇದು ದೈಹಿಕವಾಗಿ *ಬಗ್ಗುವುದು ಮತ್ತು ಸಾಷ್ಟಾಂಗವೆರಗುವುದು* ಎಂದಾಗಿದೆಯೆಂದು ಹೇಳುತ್ತಾರೆ. ಇದು ಅನಾಚಾರಿ ಆಚರಣೆಗಳಿಗೆ ಮಾತ್ರ ಯೋಗ್ಯವಾದ ವ್ಯವಸ್ಥಿತವಾದ ದೇಹ-ಚಲನೆಯ ಒಂದು ವಿಧಿಗೆ ರೂಪನೀಡಿದೆ. ಶಾರೀರಿಕವಾಗಿ ಬಗ್ಗುವುದು ಮತ್ತು ಸಾಷ್ಟಾಂಗವೆರಗುವುದು, ಅರಬೀ ಧರ್ಮದ ದೇಹ-ಚಲನೆಯ ನಿರ್ಣಾಯಕ ಅಂಶವಾಗಿ ಮಾರ್ಪಟ್ಟಿವೆ. ಈ ಮೂಕನಾಟಕದ ಚಲನೆಯು ಇಲ್ಲದೆ ಅವರ ಆಚರಣೆಗಳು ಅನವಶ್ಯಕವೂ ಮತ್ತು ಅನುಪಯುಕ್ತವೂ ಆಗಿ ಪರಿಣಮಿಸುತ್ತದೆ. ಅವರು ಈ ದೈಹಿಕ ಚಲನೆಯ ಸೂಚನೆಯನ್ನು ಅಲ್ಲಾಹನು 2:125 ಮತ್ತು 22:26 ರ ಮೂಲಕ ದೀಕ್ಷೆ ಮಾಡಿದ್ದಾನೆಂದು ಅವರು ನಂಬುತ್ತಾರೆ.

ಹಲವು ಶತಮಾನಗಳಿಂದಲೂ, ಅರಬೀ ಭಾಷೆಯ ಪಾಂಡಿತ್ಯವನ್ನು ಹೊಂದಿರುವ ಅರಬೇತರು ಕುರ್‌ಆನಿನ ಇತರ ವಚನಗಳೊಂದಿಗೆ ಈ ಸರಳ ಪದಗಳನ್ನು ತುಲನೆಮಾಡುವುದರ ಮೂಲಕ ಪರಿಶೀಲಣೆ ಮಾಡದೆ, ಧಾರ್ಮಿಕರ ಅಧೀನಕ್ಕೆ ತಮ್ಮನ್ನು ಅರ್ಪಿಸಿದ್ದಾರೆ. ಇದು ನನಗೆ ಪತ್ತೆಯಾದ ನಂತರ, ತಮ್ಮ ತಿಳುವಳಿಕೆಯು ಎಷ್ಟು ಸರಿಯಾಗಿದೆ ಎಂದು ತಮ್ಮ ಪವಿತ್ರ ಗ್ರಂಥದಲ್ಲಿ ಪರಿಶೀಲಣೆ ಮಾಡದೆ ಈ ಮೂರ್ಖತನದ ದೇಹ ಚಲನೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ಮುಸ್ಲಿಮರನ್ನು ಕಾಣುವಾಗ ನನಗೆ ಖೇದವಾಗುತ್ತದೆ.

ಅವರು 2:125 ರಲ್ಲಿರುವ *ಬೈತ* ಎಂಬ ಪದವು *ಮನೆ* ಎಂದಾಗಿದೆಯೆಂದು ನಂಬುವಂತೆ ಮಾಡಲ್ಪಟ್ಟಿರುವ ಕಾರಣ, ಸ್ವಾಭಾವಿಕವಾಗಿ, ಅದೇ ವಚನದ *ಬೈತಿಯ* ಎಂಬ ಪದವನ್ನು *ನನ್ನ ಮನೆ* ಎಂದೇ ಅವರು ಅರ್ಥೈಸಬೇಕಾಗಿದೆ. ಅವರು ಆ ಘನಾಕೃತಿಯನ್ನು ಪ್ರದಕ್ಷಿಣೆ ಮಾಡುವುದರ ಮೂಲಕ ಮಹತ್ತರ ತೃಪ್ತಿಯನ್ನು ಪಡೆಯುತ್ತಾರೆ. 2:125 ರ ಪದಗಳ ಅರ್ಥವು ಹೀಗಾಗಿದೆ ಎಂದು ಮುಸ್ಲಿಮರನ್ನು ನಂಬಿಸಲಾಗಿದೆ:

ಥ್ಚಹ್ಹಿರ	ಮನೆಯನ್ನು ಸ್ವಚ್ಛಗೊಳಿಸುವುದು.
ಥ್ಚಾಇಫೀನ	ಮನೆಯ ಸುತ್ತಲೂ ಸುತ್ತುವುದು
ಆಕಿಫೀನ	ಮನೆಯಲ್ಲಿ ತಪಶ್ಚರ್ಯೆ ಮಾಡುವುದು.
ರುಕ್ಕ-ಇ-ಸ್ಸುಜೂದ್	ಶಾರೀರಿಕವಾಗಿ ಬಗ್ಗುವುದು ಮತ್ತು ಸಾಷ್ಟಾಂಗವೆರಗುವುದು.

ಇಸ್ಲಾಂ ಎಲ್ಲಾ ತರಹದ ಆಕೃತಿಗಳನ್ನು ಮತ್ತು ಮೂರ್ತಿಗಳನ್ನು ವಿರೋಧಿಸುತ್ತದೆ ಎಂದು ಅವರು ಹೆಮ್ಮೆಯಿಂದ ದಾವೆಮಾಡುವುತ್ತಿರುವಾಗ, ಅವರು ನಿಷ್ಠೆಯಿಂದ ಪಾಲಿಸುತ್ತಿರುವ ಧಾರ್ಮಿಕ ವಿಧಿಗಳು ಸ್ಪಷ್ಟ ಮೂರ್ತಿಪೂಜೆಯಾಗಿರುವುದು ಅವರ ಗಮನಕ್ಕೆ ಏಕೆ ಬರುವುದಿಲ್ಲ? ಅವರು ತಮ್ಮ ನಂಬಿಕೆಯನ್ನು ಒಂದು ಭೌತಿಕ ಮನೆಗೆ ಸಮರ್ಪಿಸಿ, ನಂತರ ಅದಕ್ಕೆ ಬಗ್ಗುವುದನ್ನೂ ಮತ್ತು ಸಾಷ್ಟಾಂಗವನ್ನೂ ಮಾಡುತ್ತಿಲ್ಲವೇ?

ಅವರ ಉತ್ತರವು 'ಅಲ್ಲ' ಎಂದಾಗಿದ್ದರೆ:

- ಅವರು ಅದನ್ನು 'ಅಲ್ಲಾಹನ ಮನೆ' ಎಂದು ಏಕೆ ಹೇಳುತ್ತಾರೆ?
- ಕುರ್‌ಆನಿನಲ್ಲಿ ಕಂಡುಬರದಂತಹ *ಬೈತುಲ್ಲಾಹ್* ಅಥವಾ *ಅಲ್ಲಾಹನ ಮನೆ* ಎಂಬ ಶಬ್ದವನ್ನು ಅವರು ಏಕೆ ಉಪಯೋಗಿಸುತ್ತಾರೆ?

ಸತ್ಯಾಂಶವೇನೆಂದರೆ, ಅರಬೀ ಧರ್ಮದ ಸಂಶೋಧಕರು ಜನರನ್ನು ಮೋಸಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಅವರು ತಮ್ಮ ಅನುಯಾಯಿಗಳನ್ನು ಹಾಸ್ಯಾಸ್ಪದವಾದ ದೇಹ ಚಲನೆಯನ್ನು

ನಿರ್ವಹಿಸುವಂತೆ ಮಾಡುತ್ತಾರೆ ಹಾಗೂ ಅದನ್ನು ಈ ರೀತಿಯಲ್ಲಿ ಯಾಕಾಗಿ ಮಾಡಬೇಕು ಎಂದೂ ಹೇಳಿಕೊಡುವುದಿಲ್ಲ. ಅವರಿಗೆ ಈ ಸರಳ ಪ್ರಶ್ನೆಗಳಿಗೂ ಉತ್ತರಿಸಲು ಸಾಧ್ಯವಿಲ್ಲ!

ಯಾವುದೇ ಆಧುನಿಕ ಅರಬರು ಅಥವಾ ಅರಬೀ ಧರ್ಮದ ವಿದ್ವಾಂಸರು ಈ ಮೂಲಭೂತ ಪ್ರಶ್ನೆಗಳಿಗೆ ಬುದ್ಧಿವಂತ ಉತ್ತರಗಳನ್ನು ಒದಗಿಸಲು ಸಾಧ್ಯವಿಲ್ಲ:

- ಮಕ್ಕಾದಲ್ಲಿರುವ ಕಲ್ಲಿನ ಮನೆಯು ಅಲ್ಲಾಹನ ಮನೆಯೇ?
- ಅಲ್ಲಾಹನು ಅವನ ಮನೆಯ ಒಳಗಡೆ ಏಕೆ ಇಲ್ಲ - ಅಥವಾ ಇದ್ದಾನೆಯೇ?
- ಅವರು ಆ ಮನೆಯ ಸುತ್ತಲೂ ಏಕೆ ಪ್ರದಕ್ಷಿಣೆ ಮಾಡುತ್ತಾರೆ?
- ಅರಬರಿಂದ ಕೆತ್ತಲ್ಪಟ್ಟ ಬಂಡೆಕಲ್ಲಿನ ಕೂಪಕ್ಕೆ ಅವರು ಯಾಕೆ ಬಗ್ಗುತ್ತಾರೆ ಮತ್ತು ಸಾಷ್ಟಾಂಗವೆರಗುತ್ತಾರೆ?
- ಅವರು ಸಾಷ್ಟಾಂಗವೆಸಗುತ್ತಿರುವುದು ಅಲ್ಲಾಹನಿಗೋ ಅಥವಾ ಆ ಕಲ್ಲಿನ ಮನೆಗೋ?
- ಅವರು ಸಾಷ್ಟಾಂಗ ಮಾಡುತ್ತಿರುವುದು ಅಲ್ಲಾಹನಿಗಾಗಿದೆ ಹಾಗೂ ಆ ಚೌಕ ಮನೆಗೆ ಅಲ್ಲವೆಂದಾದರೆ, ಆ ಮನೆಯನ್ನು ಇತರ ದೇಶಗಳಾದ ಆಸ್ಟ್ರೇಲಿಯಾ, ಕೆನಡಾ, ಮೆಕ್ಸಿಕೋ ಅಥವಾ ಜಪಾನಿಗೆ ವರ್ಗಾಯಿಸಬಹುದೇ?
- ಆ ಕಲ್ಲಿನ ಕೂಪವನ್ನು ತಮ್ಮ ಕೇಂದ್ರ ಬಿಂದುವಾಗಿ ಮಾಡಿಕೊಳ್ಳದೆ, ಅವರ ತೀರ್ಥಯಾತ್ರೆಯ ಆಚರಣೆಗಳು ಮತ್ತು ಅವರ ದೈನಂದಿನ ಐದು ವಿಧ್ಯುಕ್ತ ಪ್ರಾರ್ಥನೆಗಳು ರದ್ದಾಗಿ ಹೋಗುವುದೇ?

ಸಹಜವಾಗಿ, ವಿಷಯದ ತಿರುಳು ಒಂದು ಸರಳ ಯುಕ್ತಿಯಲ್ಲಿದೆ:

- ಅವರು ಆ ಮನೆಯನ್ನು ಆರಾಧಿಸುತ್ತಿದ್ದಾರಾದರೆ, ಅಲ್ಲಾಹನು ಅದರಲ್ಲಿ ಉಪಸ್ಥಿತನಾಗಿದ್ದಾನೆಂದು ಅವರು ಒಪ್ಪಿಕೊಳ್ಳಬೇಕು. ಹಾಗಿದ್ದರೆ ಅದು ಸರಿಯಾಗುತ್ತದೆ.
- ಅಲ್ಲಾಹನು ಆ ಘನಾಕೃತಿಯಲ್ಲಿ ವಾಸಿಸುತ್ತಿಲ್ಲವೆಂದು ಅವರು ಹೇಳುವುದಾದರೆ, ಅವರು ಆ ಆಕೃತಿಯನ್ನೇ ಪೂಜಿಸುತ್ತಿದ್ದಾರೆ.

ಅವರು ಮಾಡಬೇಕಾಗಿರುವುದು - ಅಲ್ಲಾಹನು ಅದರಲ್ಲಿ ವಾಸಿಸುತ್ತಿದ್ದಾನೆಂದು ಸಾಬೀತುಪಡಿಸುವುದಾಗಿದೆ.

ತಮ್ಮ ಧಾರ್ಮಿಕರಿಂದ ಯಾವುದೇ ವಿವೇಚನಾ ಯುಕ್ತ ಉತ್ತರವು ಮುಂಬರುತ್ತಿಲ್ಲವಾದರೆ, ಮುಸ್ಲಿಮರು ಏಕೆ ತಮ್ಮ ಭರವಸೆಯನ್ನು ಇವರ ಮೇಲೆ ಇಟ್ಟುಕೊಳ್ಳಲು ಮುಂದುವರಿಸುತ್ತಾರೆ? ಬಹುಶಃ ಕಣ್ಣುಮುಚ್ಚಿ

ಧಾರ್ಮಿಕರನ್ನು ಅನುಸರಿಸುವುದು ಅಪಾಯಕಾರಿಯಲ್ಲ ಎಂದು ಅವರು ನಿಷ್ಕಪಟವಾಗಿ ಊಹಿಸುತ್ತಾರೆ. ಮುಖ್ಯ ಪ್ರಶ್ನೆಯು ಏನೆಂದರೆ, ಇಂತಹ ಅಸಂಬದ್ಧತೆಯನ್ನು ಅನುಸರಿಸುವುದು, ನರಕಯಾತನೆಯಿಂದ ಅವರನ್ನು ರಕ್ಷಿಸಬಹುದೇ? ಯಾರಾದರೂ ತಮ್ಮ ಸ್ವಂತ ಸಾಮಾನ್ಯ ಜ್ಞಾನವನ್ನು ಬಳಸುವ ಮೂಲಕ ಅದರ ಅರ್ಥವು ಎಷ್ಟರ ಮಟ್ಟಿಗೆ ಸರಿಯಾಗಿದೆ ಎಂದು ಪರಿಶೀಲಿಸದೆ ಇಂತಹ ಪ್ರಮುಖ ವಿಷಯವನ್ನು ನಿರ್ಲಕ್ಷಿಸುವುದು ಉಚಿತವೇ? ಕುರ್‌ಆನಿನ ಪ್ರಕಾರ '*ತಮ್ಮ ಸಾಮಾನ್ಯ ಜ್ಞಾನವನ್ನು ಬಳಸದವರು ಅಲ್ಲಾಹನ ನೋಟದಲ್ಲಿ ಅತ್ಯಂತ ಕೆಟ್ಟ ಜೀವಿಗಳಾಗಿದ್ದಾರೆ*'.

ಮುಸ್ಲಿಮರಿಗೆ ತಮ್ಮ ಪ್ರಜ್ಞಾವಸ್ಥೆಗೆ ಮರಳಲು ಮತ್ತು ತಮ್ಮ ಪ್ರಭುವಿನಿಂದ ಕ್ಷಮೆಯನ್ನು ಮತ್ತು ಕರುಣೆಯನ್ನು ಯಾಚಿಸಲು ಇನ್ನೂ ಸಮಯವಾಗಲಿಲ್ಲವೇ? ಜೀವಿಸಿರುವವರಿಗೆ ಇದು ಈಗಲೂ ಸಾಧ್ಯವಿದೆ. ಅವನ ಅನುಗ್ರಹ ಮತ್ತು ಮೆಚ್ಚುಗೆಯನ್ನು ಪಡೆದುಕೊಳ್ಳಲು, ಕೇವಲ ಅವನಿಗೆ ಮಾತ್ರ ಪ್ರಾಮಾಣಿಕರಾಗಿರಲು ಅವರಿಗೆ ಕಷ್ಟಕರವಾಗಿದೆಯೇ? ಮೇಲಿನವುಗಳು ಅರಬರಲ್ಲದವರು ಗಂಭೀರವಾಗಿ ಪರಿಗಣಿಸಬೇಕಾದ ಕೆಲವು ಮೂಲಭೂತ ಪ್ರಶ್ನೆಗಳಾಗಿವೆ.

ವಿಧೇಯರಾಗಿ ಸಮ್ಮತಿಸುವವರು ಎಂದು ಅರ್ಥಕೊಡುವ 2:125 ರಲ್ಲಿನ *ರುಕ್ಕ-ಇ-ಸ್ಸುಜೂದಿ* ಎಂಬ ಪದಗುಚ್ಛವನ್ನು ಸೇರಿದಂತೆ, ಅಲ್ಲಾಹನ ಮಾರ್ಗದಿಂದ ಮನುಕುಲವನ್ನು ಪಥಭ್ರಷ್ಟರನ್ನಾಗಿಸಲು ಧಾರ್ಮಿಕರು ಕುರ್‌ಆನಿನ ಅನೇಕ ಪದಗಳ ಅರ್ಥವನ್ನು ತಿರುಚಿದರು.

2:125 ಸಂದೇಶವೇನೆಂದರೇ, ಇಬ್ರಾಹೀಮರು ಅಲ್ಲಾಹನಿಂದ ಒಂದು ವ್ಯವಸ್ಥೆಗೆ ನಿರ್ದೇಶಿಸಲ್ಪಟ್ಟಿದ್ದರು ಮತ್ತು ಅವರು ಆ ವ್ಯವಸ್ಥೆಯಲ್ಲಿನ ಅಲ್ಲಾಹನ ಇಚ್ಛೆಗೆ ಸಮ್ಮತಿಯೊಂದಿಗೆ ವಿಧೇಯರಾಗಿದ್ದರು ಮತ್ತು ನಿಷ್ಠಾವಂತರಾಗಿದ್ದರು ಹಾಗೂ ಅದಕ್ಕೆ ಶ್ರದ್ಧಾಪೂರ್ವರಾಗಿ ಬದ್ಧರಾಗಿದ್ದರು. ಹಾಗೆಯೇ ಅವರ ಮಗ ಇಸ್ಮಾಯೀಲರೂ ಬದ್ಧರಾಗಿದ್ದರು ಮತ್ತು ಅವರಿಬ್ಬರು ಸೇರಿಕೊಂಡು, ಆ ವ್ಯವಸ್ಥೆಗೆ ನಿಷ್ಠಾವಂತರಾದ, ವಿಧೇಯತೆಯಿಂದ[60] ಸಮ್ಮತಿಸುವ ಜನಸಮೂಹಕ್ಕಾಗಿ ಆ ವ್ಯವಸ್ಥೆಯನ್ನು ಶುದ್ಧೀಕರಿಸಿದರು. ಇಬ್ರಾಹೀಮ್ ಮತ್ತು ಇಸ್ಮಾಯೀಲರು ಒಂದು ಭೌತಿಕ ಮನೆಗೆ ತಮ್ಮನ್ನು ವಿಧೇಯರಾಗಿರಲೂ ಇಲ್ಲ, ಅದಕ್ಕೆ ಪ್ರದಕ್ಷಿಣೆಯನ್ನೂ ಮಾಡಿರಲಿಲ್ಲ, ಕೆಲವು ಕಲ್ಲಿನ ರಾಶಿಗೆ ಬಗ್ಗಲೂ ಸಾಷ್ಟಾಂಗವೆಸಗಲೂ ಇಲ್ಲ. ಇಬ್ರಾಹೀಮರನ್ನು ಅನುಸರಿಸುವವರಿಂದ ಯಾವುದಕ್ಕೂ ಬಗ್ಗುವುದನ್ನೂ, ಅಡ್ಡಬೀಳುವುದನ್ನೂ ನಿರೀಕ್ಷಿಸಲಾಗುವುದಿಲ್ಲ. ಅವರು ಅಲ್ಲಾಹನ ದೀನಿನಲ್ಲಿ ನಿಗದಿ ಪಡಿಸಿದವುಗಳನ್ನು ಪಾಲಿಸಿ, ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವ ಮೂಲಕ ಆ

[60] ವಿಧೇಯರಾಗುವುದು ಅಥವಾ ವಿನಮ್ರರಾಗಿರುವುದು ಎಂಬವುಗಳನ್ನು *ರುಕೂ* ಎಂಬ ಪದದಿಂದ ಪಡೆಯಲಾಗಿದೆ. ಇತರರನ್ನು ಟೀಕಿಸಲು ಯೋಗ್ಯರಾದ ಅಥವಾ ಇತರರು ತಮ್ಮನ್ನು ಗಮನಿಸಬೇಕು ಎನ್ನುವಷ್ಟು ಪ್ರಮುಖ ಅಥವಾ ಉತ್ತಮರಾದ ಜನರು ತಾವಲ್ಲ ಎಂದು ಭಾವಿಸುವವರು ವಿಧೇಯರಾದ ಅಥವಾ ವಿನಮ್ರರಾದ ಜನರಾಗಿದ್ದಾರೆ. ತನ್ನ ಅವತೀರ್ಣವನ್ನು ಸ್ವೀಕರಿಸಲು ವಿಧೇಯರಾಗಲು ಅಲ್ಲಾಹನು ಇಸ್ರಾಯೀಲರ ಮಕ್ಕಳಿಗೆ ಹೇಳಿದನು. 2:43 ರಲ್ಲಿ ಅವನು ಹೇಳುತ್ತಾನೆ, *ವರ್-ಕಅ-ಮಅ-ರ್ರಾಕಿ-ಈನ್*.

ವ್ಯವಸ್ಥೆಗೆ ವಿಧೇಯತೆಯಿಂದ ತಮ್ಮನ್ನು ಸಮ್ಮತಿಸಿಕೊಳ್ಳಬೇಕು ಹಾಗೂ ನಿಷ್ಠಾವಂತರಾಗಿರಬೇಕು. ಅದರ ಅರ್ಥವು ಅಷ್ಟೇ ಆಗಿದೆ.

ರುಕ್ಕ-ಇ-ಸ್ಸುಜೂದ್ ಎಂದರೆ ಶಾರೀರಿಕವಾಗಿ ಬಾಗುವುದು ಮತ್ತು ಅಡ್ಡಬೀಳುವುದು ಎಂಬ ಅರ್ಥವನ್ನು ಹೊತ್ತೊಯ್ಯುವ ಯಾವುದೇ ವಚನವು ಕುರ್‌ಆನಿನಲ್ಲಿ ಇಲ್ಲ.

ಸುಜೂದ್ ಎಂದರೆ ದೈಹಿಕ ಸಾಷ್ಟಾಂಗ ಎಂದರ್ಥವಲ್ಲ

ಭಾಗ ಮೂರರಲ್ಲಿ ಉಲ್ಲೇಖಿಸಲಾದ ಹಾಗೆ, ಕುರ್‌ಆನಿನಲ್ಲಿ *ಸುಜೂದ್* ಎಂಬ ಪದಕ್ಕೆ *ಸಮ್ಮತಿಸುವುದು* ಅಥವಾ *ಒಂದು ವಿಷಯಕ್ಕೆ ಒಪ್ಪುವುದು* ಎಂದರ್ಥವಾಗಿದೆ. ಕುರ್‌ಆನಿನ ಅನೇಕ ವಚನಗಳಲ್ಲಿ ಈ ಪದವು ದೈಹಿಕ ಸಾಷ್ಟಾಂಗ ಕ್ರಿಯೆ ಎಂಬ ಅರ್ಥವನ್ನು ನೀಡುವುದಿಲ್ಲ ಎಂದು ಧಾರ್ಮಿಕರು ಸ್ಥಿರವಾಗಿ ಹೇಳುತ್ತಾರೆ, ಆದರೆ ಮಾನವರನ್ನು ಉಲ್ಲೇಖಿಸಲು ಆ ಪದವು ಬಳಕೆಯಾಗುವಲ್ಲಿ ಅದನ್ನು ಹೊರತುಪಡಿಸಲು ಪ್ರಯತ್ನಿಸುತ್ತಾರೆ. ನಕ್ಷತ್ರಗಳು, ಮರಗಳು ಅಲ್ಲಾಹನಿಗೆ ಸೂಜೂದ್ ಮಾಡುತ್ತವೆ ಎಂದು ಕುರ್‌ಆನ್ ಹೇಳುವಾಗ, ಅವುಗಳು ಸಾಷ್ಟಾಂಗ ಮಾಡುತ್ತವೆ ಎಂದು ಹೇಳುವುದು ಹಾಸ್ಯಾಸ್ಪದ ಎಂಬುದು ಅವರಿಗೆ ಗೊತ್ತಾಗುತ್ತದೆ.

> *ಹಲಖಲ್ ಇನ್ಸಾನ, ಅಲ್ಲಮ ಹುಲ್ ಬಯಾನ, ಅಸ್ಸಮ್ಸು ವಲ್ ಖಮರು ಬಿಹುಸ್ಬಾನಿನ್, ವನ್ನಜ್ಮು ವಸ್ಸಜರು ಯಸ್ಜುದಾನ್, ವಸ್ಸಮಾಅ ರಫಅಹಾ ವವಳಅಲ್ ಮೀಝಾನಿ* (55:3-7)
>
> ಅವನು ಮಾನವನನ್ನು ಸೃಷ್ಟಿಸಿದನು. ಅವನು ಅವನಿಗೆ ಸ್ಪಷ್ಟವಾಗಿ ಕಲಿಸಿದನು. ಸೂರ್ಯ ಹಾಗೂ ಚಂದ್ರವು ಪೂರ್ವಯೋಜಿತವಾಗಿ ಚಲಿಸುತ್ತದೆ. ಮತ್ತು ನಕ್ಷತ್ರಗಳು ಮತ್ತು ಮರಗಳು ಸಮ್ಮತಿಸುತ್ತಿದೆ *(ಯಸ್ಜುದಾನಿ)* ಮತ್ತು ಆಕಾಶಗಳನ್ನು ಸರಿಯಾದ ಸಮತೋಲನದಿಂದ ಮೇಲಕ್ಕೆತ್ತಿದನು. (55:3-7)

ಆಕಾಶದಲ್ಲಿನ ತಾರೆಗಳು ಮತ್ತು ಭೂಮಿಯಲ್ಲಿನ ಮರಗಳು ತಮ್ಮನ್ನು ಸಮ್ಮತಿಸುತ್ತಿದೆ *(ಯಸ್ಜುದಾನಿ)* ಎಂದು ಈ ವಚನವು ಹೇಳುತ್ತದೆ. ಈ ಪದವು *ಸಮ್ಮತಿಸುವುದು* ಅಥವಾ *ಯಾವುದನ್ನಾದರೂ ಒಪ್ಪುವುದು* ಎಂಬ ಅರ್ಥವನ್ನು ನೀಡುವ *ಸಜದ* ಎಂಬ ಮೂಲಪದದಿಂದ ಪಡೆಯಲಾಗಿದೆ. ಬ್ರಹ್ಮಾಂಡದ ಪ್ರಭುವಿಗೆ ದೈಹಿಕವಾಗಿ ಸಾಷ್ಟಾಂಗವೆರಗಬೇಕು ಎಂದು ಧಾರ್ಮಿಕರು ಮತ್ತು ಅವರ ಅರಬೀ ವಿದ್ವಾಂಸರು ಎಲ್ಲರಿಗೂ ಒತ್ತಾಯ ಪಡಿಸುವ ಮೊದಲು, ತಾರೆಗಳು ಮತ್ತು ಮರಗಳು ಅಲ್ಲಾಹನಿಗೆ ಹೇಗೆ ಸಾಷ್ಟಾಂಗ ಮಾಡುತ್ತವೆ ಎಂದು ಜನರಿಗೆ ತಿಳಿಸಿಕೊಡಬೇಕಾಗಿದೆ.

ಆಕಾಶಗಳಲ್ಲಿರುವುದು ಮತ್ತು ಭೂಮಿಯಲ್ಲಿರುವುದೆಲ್ಲವೂ ಶಾಂತಿಯುತವಾಗಿದೆ (*ಅಸ್ಲಮ – ಮೂಲಪದ:ಸಲಾಂ)* ಮತ್ತು ಸಮ್ಮತಿಸುತ್ತದೆ *(ಯಸ್ಜುದು – ಮೂಲಪದ: ಸಜದ)* ಎಂದು ಕುರ್‌ಆನ್

ಸೂಚಿಸುತ್ತದೆ. *ಇಸ್ಲಾಂ* ಎಂಬುವುದನ್ನು *ಸಲಾಂ* ಎಂಬ ಪದದಿಂದಲೇ ಪಡೆದುಕೊಳ್ಳಲಾಗಿದೆ. ಆದ್ದರಿಂದ ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಅಲ್ಲಾಹನು ರಚಿಸಿದ ಎಲ್ಲವೂ ಇಸ್ಲಾಮಿನ ಅಥವಾ ಶಾಂತಿಪರತೆ ಒಂದು ಸ್ಥಿತಿಯಲ್ಲಿದೆ ಎಂದಾದರೆ - ಸೂರ್ಯ, ಚಂದ್ರ, ನಕ್ಷತ್ರಗಳು, ಮರಗಳು ಮತ್ತು ಪ್ರಾಣಿ ಸಾಮ್ರಾಜ್ಯ ಇವೆಲ್ಲವು ಮುಸ್ಲಿಮರಾಗಿರುವುದು ಹೇಗೆ ಎಂದು ಧಾರ್ಮಿಕರಿಗೆ ಹೇಳಲು ಸಾಧ್ಯವಿದೆಯೇ? ಅವರು "ಅಲ್ಲಾಹನಲ್ಲದೇ ಬೇರೆ ದೇವನಿಲ್ಲವೆಂದು ನಾವು ಸಾಕ್ಷಿವಹಿಸುತ್ತೇವೆ, ಮತ್ತು ಮುಹಮ್ಮದರು ಅಲ್ಲಾಹುವಿನ ಸಂದೇಶವಾಹಕರು ಎಂದು ನಾವು ಸಾಕ್ಷಿವಹಿಸುತ್ತೇವೆ"[61] ಎಂದು ಅವುಗಳೆಲ್ಲವೂ ಘೋಷಿಸಿದ್ದಾರೆಯೇ? ಹಾಗಿದ್ದರೆ, ಇಂತಹ ಒಂದು ಘೋಷಣೆಯು ಅವರ ಪ್ರಚಾರ ಮಾಡುತ್ತಿರುವ ಇಸ್ಲಾಮಿನ ಮೊದಲ ಸ್ತಂಭವಾಗಿರುವುದು ಹೇಗೆ?

ಆಕಾಶದಲ್ಲಿರುವ ಶತಕೋಟಿ ನಕ್ಷತ್ರಗಳು, ಭೂಮಿಯ ಮೇಲಿನ ಹುಲ್ಲು, ನಾವು ತಿನ್ನುವ ತರಕಾರಿ, ನಮ್ಮ ಮನೆಯ ಸುತ್ತಲು ನಾವು ನೆಡುವ ಸಸ್ಯಗಳು, ಅರಣ್ಯದ ಮರಗಳು, ಇವೆಲ್ಲವೂ ಏಕದೇವನಿಗೆ *ಸೂಜೂದ್* ಮಾಡುತ್ತಿವೆ. ಅವುಗಳಾವುದೂ ದೈಹಿಕವಾಗಿ ಸಾಷ್ಟಾಂಗ ಮಾಡುವುದನ್ನು ನಾವು ಯಾರು ಕಾಣಲಿಲ್ಲ. ನಾವು ಕಾಣುತ್ತಿರುವುದೆಲ್ಲವೂ ಅಲ್ಲಾಹನು ನೀಡಿದ ಆಜ್ಞೆಯನ್ನು ಪಾಲಿಸುತ್ತಿದೆ ಮತ್ತು ಅಲ್ಲಾಹನು ಹೇಳುತ್ತಾನೆ, 'ಅವುಗಳೆಲ್ಲವೂ ನನಗೆ *ಸುಜೂದ್* ಮಾಡುತ್ತಿವೆ'.

ನಾವು ವಿಮರ್ಶಾತ್ಮಕವಾಗಿ ಕುರ್‌ಆನನ್ನು ಓದುವಾಗ, ಮಾನವನ ಮನಸ್ಥಿತಿಯನ್ನು ಉಲ್ಲೇಖಿಸಲು *ಯಸ್ಜುದೂನ್* ಎಂಬ ಪದವು ಬಳಸಲಾಗಿರುವುದನ್ನು ನಾವು ಕಾಣುತ್ತೇವೆ. 84:21 ರಲ್ಲಿ ಅದು ಹೇಳುತ್ತದೆ:

> *ವಇಝಾ ಖುರಿಅ ಅಲೈಹಿಮ್ ಕುರ್‌ಆನು, ಲಾ-ಯಸ್ಜುದೂನ.* (84:21)
>
> ಮತ್ತು ಅವರಿಗೆ ಕುರ್‌ಆನ್ ಓದಿ ಕೇಳಿಸಿದಾಗ, ಅವರು ಅದಕ್ಕೆ ತಮ್ಮ ಸಮ್ಮತಿಯನ್ನು ನೀಡುವುದಿಲ್ಲ. (84:21)

ಕುರ್‌ಆನ್ ಅವರಿಗೆ ಪಠಿಸಲಾದ ಪ್ರತಿ ಬಾರಿಯೂ ಯಾವುದೇ ಧಾರ್ಮಿಕರು ಅಥವಾ ಅರಬೀ ತಜ್ಞರು ಸಾಷ್ಟಾಂಗವೆರಗುವುದನ್ನು ನಾವು ಕಾಣಲಿಲ್ಲ, ಆದರೆ ಅದೇ ಸಮಯದಲ್ಲಿ ಅವರು *ಸೂಜೂದ್* ಎಂದರೆ ಸಾಷ್ಟಾಂಗ ಎಂದು ಒತ್ತಿ ಹೇಳುತ್ತಾರೆ. ಇಲ್ಲಿ *ಸೂಜೂದ್* ಎಂಬುವುದಕ್ಕೆ ಕೇವಲ ಒಂದು ಅರ್ಥವಾಗಿದೆ: ಕುರ್‌ಆನಿನ ಆದೇಶಗಳಿಗೆ ಮೌನಸಮ್ಮತಿ ಅಥವಾ ಒಪ್ಪುವುದು ಅಥವಾ ಸಮ್ಮತಿಸುವುದು. ಹಾಗೆ ಇಂದು, ಕುರ್‌ಆನ್ ಓದಿ ಕೇಳಿದಾಗ ಪ್ರತಿ ಮುಸ್ಲಿಮರು ತಕ್ಷಣ ಸಾಷ್ಟಾಂಗವೆರಗಬೇಕಾಗಿದೆ. ಇದು ಸರಿಯಲ್ಲವೆಂದು ನಮಗೆ ತಿಳಿಯುತ್ತದೆ. ಧಾರ್ಮಿಕರು ಸ್ವಲ್ಪ ಅಧಿಕ ಸ್ಥಿರವಾಗಿರುತ್ತಿದ್ದರೆ ಚೆನ್ನಾಗಿರುತ್ತಿತ್ತು ಎಂದು ಒಬ್ಬನು ಇಚ್ಛಿಸಬಹುದು.

---

[61] ಈ ರೂಪದ ವಾಕ್ಯವು ಕುರ್‌ಆನಿನಲ್ಲಿ ಕಂಡುಬರುವುದಿಲ್ಲ. ಇದು ಜನರನ್ನು ತಮ್ಮ ಮುಷ್ಠಿಯಲ್ಲಿ ಹಿಡಿದಿಡಲು ಧಾರ್ಮಿಕರು ಹೂಡಿದ ತಂತ್ರವಾಗಿದೆ. ಇದನ್ನು ಉಚ್ಚರಿಸುವ ವ್ಯಕ್ತಿಯು ಅಧಿಕಾರದಲ್ಲಿರುವ ಪಂಥವು (ಪ್ರವಾದಿಯ ನೆಪದಲ್ಲಿ) ಹೇಳುವುದನ್ನೆಲ್ಲಾ ಸ್ವೀಕರಿಸಲು ಬದ್ಧರಾಗಬೇಕಾಗಿದೆ ಎಂಬುವುದು ಈ ವಾಕ್ಯದ ಸಹಜವಾದ ಅರ್ಥವಾಗಿದೆ.

ಕುರ್‌ಆನ್ ಓದಿ ಕೇಳಿದ ಪ್ರತಿ ಬಾರಿಯೂ ದೈಹಿಕವಾಗಿ ಸಾಷ್ಟಾಂಗ ಮಾಡಬೇಕೆಂದು ಈ ವಚನವು ನಮಗೆ ಆಜ್ಞಾಪಿಸುತ್ತಿಲ್ಲ, ಬದಲಾಗಿ ಸಂದೇಶವನ್ನು ಕೇಳಿದಾಗಲೆಲ್ಲಾ, ಸಮ್ಮತಿಸಲ್ಪಟ್ಟ ಆದೇಶಗಳ (ಅಥವಾ *ಮಸಾಜಿದ್* – ಇದು *ಸಜದ* ಎಂಬ ಮೂಲಪದದಿಂದಲೇ ಇರುವ ಪದವಾಗಿದೆ) ಮೌಲ್ಯಕ್ಕೆ ನಾವು ನಮ್ಮ ಸಮ್ಮತಿಯನ್ನು ಅಥವಾ ಒಪ್ಪಿಗೆಯನ್ನು ನೀಡಬೇಕಾಗಿದೆ ಎಂಬುವುದನ್ನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಮನಗಾಣಲು ಸಾಧ್ಯವಿದೆ. *ಸುಜೂದ್* ಪದದ ವಿರೋಧ ಪದವಾದ '*ಅಬಾ*' (ಅರ್ಥ – ನಿರಾಕರಿಸುವುದು) ಎಂಬುವುದನ್ನೂ ನಾವು ಕುರ್‌ಆನಿನಲ್ಲಿ ಕಾಣಬಹುದು.

> "ನೀವು ಆದಮರಿಗೆ ನಿಮ್ಮ ಸಮ್ಮತಿಯನ್ನು ನೀಡಿರಿ" ಎಂದು ನಾವು *ಮಲಕುಗಳಿಗೆ* ಆದೇಶಿಸಿದಾಗ, ಇಬ್ಲೀಸನನ್ನು ಹೊರತುಪಡಿಸಿ ಅವರೆಲ್ಲರೂ ಸಮ್ಮತಿಸಿದರು, ಅವನು ನಿರಾಕರಿಸಿದನು (ಅಬಾ). ಹಾಗೂ ಅವನು ಅಹಂಕಾರಿಯಾಗಿದ್ದನು, ಆದ್ದರಿಂದ ಅವನು ಸತ್ಯನಿಷೇಧಿಗಳಲ್ಲಾದನು. (2:34)

ಅಬಾ ಎಂಬುವುದರ ಅರ್ಥವು *ಒಪ್ಪದಿರು* ಅಥವಾ *ಯಾವುದನ್ನಾದರೂ ಸರಿಯೆಂದು ಸಮ್ಮತಿಸಲು ನಿರಾಕರಿಸುವುದು* ಎಂದಾಗಿದೆ. ಅದೇ ವಚನದಲ್ಲಿ ಹೇಳುವಂತೆ, ಇಬ್ಲೀಸನು ಅಹಂಕಾರಿಯಾಗಿದ್ದ ಕಾರಣ ಅಲ್ಲಾಹನ ಆದೇಶವನ್ನು *ನಿರಾಕರಿಸಿದನು,* ಆದ್ದರಿಂದ ಅವನ ಆ ಕ್ರಿಯೆಯನ್ನು *ಸತ್ಯನಿಷೇಧ* ಎಂದು ವಿವರಿಸಲಾಗಿದೆ.

ಸ್ಪಷ್ಟವಾಗಿ, *ಸುಜೂದ್* ಎಂಬ ಪದವು ಯಾವುದೇ ಭೌತಿಕ ಸಾಷ್ಟಾಂಗವನ್ನು ಪ್ರಸ್ತಾಪಿಸುವುದಿಲ್ಲ. ಧಾರ್ಮಿಕರು ಹೇಳುವುದರಲ್ಲಿ ಯಾವುದಾದರೂ ಆಧಾರವಿರುತ್ತಿದ್ದರೆ, ಕುರ್‌ಆನ್ ಪರಾಯಣವನ್ನು ರೇಡಿಯೋ ಅಥವಾ ದೂರದರ್ಶನದಲ್ಲಿ ಕೇಳಲ್ಪಟ್ಟಾಗಲೆಲ್ಲಾ ಮುಸ್ಲಿಮರು ತಮ್ಮ ಕಛೇರಿಗಳಲ್ಲಿಯೂ, ತಮ್ಮ ಕಾರಿನ ಒಳಗೆಯೂ, ಮಾರ್ಕೆಟುಗಳಲ್ಲಿಯೂ, ರಸ್ತೆಬದಿಯಲ್ಲಿಯೂ, ಹೀಗೆ ಎಲ್ಲಾ ಕಡೆಗಳಲ್ಲಿಯೂ ದೈಹಿಕವಾಗಿ ಸಾಷ್ಟಾಂಗ ಮಾಡುವುದನ್ನು ನಾವು ಕಾಣುತ್ತಿದ್ದೆವು. ಇದು ಹಾಸ್ಯಾಸ್ಪದವಾದ ವಿಷಯವಾಗಿದೆ.

ಸುಜೂದ್ ಎಂಬುವುದು ಶಾರೀರಿಕವಾದ ಸಾಷ್ಟಾಂಗವಲ್ಲ ಎಂದು ತೋರಿಸುವ ಕುರ್‌ಆನಿನ ಇನ್ನೊಂದು ಸ್ಪಷ್ಟ ಉದಾಹರಣೆ ಇಲ್ಲಿದೆ.

> *ವದುಹುಲುಲ್ ಬಾಬ <u>ಸುಜ್ಜದನ್</u>.* (2:58)
>
> ಊರಬಾಗಿಲನ್ನು <u>ಸಮ್ಮತಿಸಿಕೊಂಡು</u> ಪ್ರವೇಶಿಸಿರಿ

ಒಂದು ಊರಿನ ದ್ವಾರವನ್ನು ಪ್ರವೇಶಿಸಲು ಇಸ್ರಾಯೀಲರ ಸಂತತಿಗೆ ಹೇಳಿದಾಗ, ಆ ಸ್ಥಳವನ್ನು ದೈನ್ಯತೆಯಿಂದ ಪ್ರವೇಶಿಸಲು *ಸುಜ್ಜದನ್* ಎಂಬ ಪದವು ಆಜ್ಞೆಮಾಡುತ್ತಿದೆಯಲ್ಲದೆ, ಸಾಷ್ಟಾಂಗದ ಭಂಗಿಯಲ್ಲಿ ದ್ವಾರವನ್ನು ಪ್ರವೇಶಿಸಲು ಹೇಳಿರುವುದಲ್ಲ. (ಧಾರ್ಮಿಕರು ಅದನ್ನು ಹೇಗೆ ಮಾಡಬಹುದೆಂದು ನಮಗೆ ಪ್ರದರ್ಶನ ಮಾಡಿ ತೋರಿಸಿದರೆ ಪರವಾಗಿಲ್ಲ). *ಸುಜ್ಜದನ್* ಎಂಬ ಪದದ ಅರ್ಥವು, ತಮ್ಮ ಹೊಟ್ಟೆಯ ಮೇಲೆ

ತೆವಳುತ್ತಲೋ, ಅಂಬೆಗಾಲಿಡುತ್ತಲೋ ಪ್ರವೇಶಿಸಲು ಹೇಳಿರುವುದಲ್ಲವೆಂದು ಇಸ್ರಾಯೀಲರ ಸಂತತಿಗೆ ತಿಳಿದಿತ್ತು.

ಯೂಸುಫರ ಇತಿಹಾಸವು ಸಹ, *ಸೂಜೂದ್* ಎಂಬುವುದು ದೈಹಿಕ ಸಾಷ್ಟಾಂಗ ಕ್ರಿಯೆ ಎಂದು ಹೇಳುವ ಧಾರ್ಮಿಕರ ಮಿಥ್ಯಾನಿರೂಪಣೆಯನ್ನು ಧ್ವಂಸಮಾಡುತ್ತದೆ. ಕನಸಿನಲ್ಲಿ ಹನ್ನೊಂದು ಗ್ರಹಗಳು, ಚಂದ್ರನು ಮತ್ತು ಸೂರ್ಯನು ತನಗೆ *ಸುಜೂದ್* ಮಾಡುತ್ತಿರುವುದಾಗಿ ಕಂಡರೆಂದು, ಯೂಸುಫರು ತಮ್ಮ ತಂದೆಯೊಂದಿಗೆ ಹೇಳಿದರು. ಇಲ್ಲಿ ಆ ಬಾಹ್ಯಾಕಾಶದ ವಸ್ತುಗಳು ಅವರಿಗೆ ದೈಹಿಕವಾಗಿ ಸಾಷ್ಟಾಂಗವೆರಗಲು ಸಾಧ್ಯವೇ ಇಲ್ಲ ಎಂಬುವುದನ್ನು ಸಕರಾತ್ಮಕವಾಗಿ ಸೂಚಿಸುತ್ತದೆ.

> ಯೂಸುಫರು ತನ್ನ ತಂದೆಗೆ ಹೇಳಿದ್ದನ್ನು ಮರುಸ್ಮರಣೆ ಮಾಡಿರಿ, "ನನ್ನ ತಂದೆಯೇ, ನಾನು ಹನ್ನೊಂದು ಗ್ರಹಗಳು, ಸೂರ್ಯನು ಮತ್ತು ಚಂದ್ರನು, ನನಗೆ ತಮ್ಮ ಸಮ್ಮತಿಯನ್ನು ನೀಡುವಂತೆ *(ಸಾಜಿದೀನ್)* ನಾನು ಕಂಡೆನು." (12:4)

ಸುಜೂದ್, ಇಸ್ಜುದೂ, ಸಜದೂ, ಸುಜ್ಜದನ್, ಯಸ್ಜುದೂನ್, ಮತ್ತು *ಮಸ್ಜಿದ್* ಎಂಬ ರೂಪಗಳು *ಸಜದ* (ಅಂದರೆ, ಸಮ್ಮತಿಸು) ಎಂಬ ಮೂಲದಿಂದಲೇ ಹುಟ್ಟಿವೆ, ಹಾಗೂ ಇವುಗಳಲ್ಲಿ ಯಾವುದೇ ಪದವು ಭೌತಿಕ ಸಾಷ್ಟಾಂಗ ಕ್ರಿಯೆಯನ್ನು ಸೂಚಿಸುವುದಿಲ್ಲ.

ಬ್ರಹ್ಮಾಂಡದ ಪ್ರಭುವಿಗೆ ನಮ್ಮ ದೇಹ ಚಲನೆಯಲ್ಲಿ ಯಾವುದೇ ಆಸಕ್ತಿ ಇಲ್ಲ. ನಮಗೆ ಒಂದು ನಿರ್ದಿಷ್ಟ ಸಮಯದಲ್ಲಿ ಪಾವಿತ್ರತೆಯ ಸ್ಥಿತಿಯನ್ನು ಪ್ರದರ್ಶಿಸುವ ಅಗತ್ಯವಿಲ್ಲ. ಅವನು ಸರ್ವವ್ಯಾಪಿಯಾಗಿದ್ದಾನೆ ಮತ್ತು ನಾವು ಅವನಿಂದ ಯಾವುದೇ ರಹಸ್ಯವನ್ನು ಅಡಗಿಸಿಡಲು ಸಾಧ್ಯವಿಲ್ಲ ಎಂದು ಅವನು ಹೇಳುತ್ತಾನೆ. ಅವನು ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಪ್ರತಿಯೊಂದನ್ನೂ ಅರಿಯುತ್ತಿದ್ದಾನೆ. ಇಬ್ಬರು ಜನರು ಭೇಟಿ ಮಾಡುವಾಗ ಅವನು ಮೂರನೇಯವನಾಗಿ ಅಲ್ಲಿ ಹಾಜರಿರುತ್ತಾನೆ. ಅವನು ಎಲ್ಲೆಲ್ಲಿಯೂ, ಎಂದೆಂದಿಗೂ ಉಪಸ್ಥಿತನಾಗಿದ್ದಾನೆ.

ಆದ್ದರಿಂದ ನಾವು ಜೀವನದುದ್ದಕ್ಕೂ ಎಲ್ಲಾ ಸಮಯದಲ್ಲೂ ನ್ಯಾಯವಾದುದನ್ನೇ ಮಾಡುತ್ತಾ, ನೈತಿಕವಾದ ಕೆಲಸಗಳನ್ನೇ ನಿರ್ವಹಿಸುತ್ತಿರಬೇಕು. ಪ್ರತಿಯೊಂದು ಗಳಿಗೆ, ಕ್ರಿಯೆ, ಹೇಳಿಕೆ, ಯೋಚನೆ ಮತ್ತು ನಾವು ಹೃದಯದಲ್ಲಿ ಬಚ್ಚಿಟ್ಟ ಎಲ್ಲಾ ವಿಷಯವನ್ನು ಅವನು ಅರಿತಿರುತ್ತಾನೆ ಎಂದು ನಾವು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ನಂತರ ಪುನರುತ್ಥಾನದ ದಿನದಂದು ಅವನು ನಾವು ಮಾಡಿರುವವುಗಳ ಬಗ್ಗೆ ನಮಗೆ ತಿಳಿಯಪಡಿಸುತ್ತಾನೆ. ಅಲ್ಲಾಹನು ಎಲ್ಲವನ್ನೂ ದಾಖಲಿಸುತ್ತಿದ್ದಾನೆ ಮತ್ತು ನಮ್ಮಲ್ಲಿ ಪ್ರತಿಯೊಬ್ಬನನ್ನೂ ಅವನು ಸಂಪೂರ್ಣವಾಗಿ ಅರಿತಿರುತ್ತಾನೆ.

> ನಿಮ್ಮ ಹಾಗೂ ನಿಮ್ಮ ಹೃದಯದ ನಡುವೆ ಅವನು ಉಪಸ್ಥಿತನಿದ್ದಾನೆ ಮತ್ತು ನೀವೆಲ್ಲರೂ ಅವನ ಸನ್ನಿಧಿಯಲ್ಲಿ ಹಾಜರಾಗಬೇಕಿದೆ ಎಂದು ನೀವು ತಿಳಿದುಕೊಳ್ಳಬೇಕು. (8:24)

ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ, ಇಬ್ರಾಹೀಮರು ಈ ವ್ಯಾಯಾಮದ ತರಗತಿಯನ್ನು ಪ್ರಾರಂಭಿಸಿಲ್ಲ. ಅವರು ಪ್ರಪಂಚದ ಒಡೆಯನ ಇಚ್ಛೆಗೆ ತಮ್ಮ ಸಮ್ಮತಿಯನ್ನು ನೀಡಿದ್ದರು ಮತ್ತು ಏಕದೇವ ವಿಶ್ವಾಸಿಯಾಗಿ, ಅಲ್ಲಾಹನ ಸೇವೆಯನ್ನು ಮಾಡುತ್ತಾ, ಒಂದು ಸದ್ಗುಣ ಸಂಪನ್ನವಾದ ಜೀವನವನ್ನು ಸಾಗಿಸಿದ್ದರು ಎಂದು ಕುರ್‌ಆನ್ ನಮಗೆ ತಿಳಿಸುತ್ತದೆ.

> ಅವರಿಗೆ ತನ್ನ ಪ್ರಭುವು "ನೀನು ಶಾಂತಿವಂತನಾಗು *(ಅಸ್ಲಿಮ್)*" ಎಂದು ಹೇಳಿದಾಗ, ಅವರು "ನಾನು ಬ್ರಹ್ಮಾಂಡದ ಪ್ರಭುವಿಗೆ ಶಾಂತಿವಂತನಾದೆ *(ಅಸ್ಲಮ್-ತು-ಲಿ-ರಬ್ಬಿಲ್-ಆಲಮೀನ್)*" ಎಂದು ಉತ್ತರಿಸಿದರು (2: 131)

ಇಬ್ರಾಹೀಮರು ದೈಹಿಕ ಚಲನೆಗಳ ಮೂಲಕ ತನ್ನ ಶಾಂತಿಪರತೆಯನ್ನು ಪ್ರದರ್ಶಿಸಲಿಲ್ಲ. ಬದಲಿಗೆ, ತನ್ನ ಪ್ರಭುವಿನ ಮೇಲಿರುವ ಪ್ರೀತಿಯೊಂದಿಗೆ ತನ್ನ ಹೃದಯ, ಆತ್ಮ, ಮನಸ್ಸು ಮತ್ತು ಶಕ್ತಿಯಿಂದ ಉತ್ತಮ ಕಾರ್ಯಗಳನ್ನು ಮಾಡುವುದರ ಮೂಲಕ ಮತ್ತು ತನ್ನ ಕರ್ತವ್ಯಗಳನ್ನು ನೆರವೇರಿಸುತ್ತಾ, ವೈಯಕ್ತಿಕ ಬದ್ಧತೆಗಳನ್ನು ಪಾಲಿಸುವುದರ ಮೂಲಕ ಶಾಂತಿಪರತೆಯನ್ನು ಪ್ರದರ್ಶಿಸಿದರು.

ದುರಾದೃಷ್ಟವಶಾತ್, ಅವರು ಮಕ್ಕಾದಲ್ಲಿರುವ ಕಲ್ಲಿನ ಮೂರ್ತಿಗೆ ದೈಹಿಕವಾಗಿ ಬಾಗುವುದರ ಮತ್ತು ಅಡ್ಡಬೀಳುವುದರ ಮೂಲಕ ಆರಾಧನೆಯನ್ನು ಮಾಡಿದ ಮೊದಲ ವ್ಯಕ್ತಿ ಎಂದು ಅವರನ್ನು ಆರೋಪಿಸುವ ನೀಚ ಜನರ ಮುಖ್ಯ ಗುರಿಯಾದರು.

ರುಕೂ ಎಂದರೆ ದೈಹಿಕವಾಗಿ ಬಗ್ಗುವುದು ಎಂದರ್ಥವಲ್ಲ

ರುಕೂ ಎಂಬ ಪದದ ಅರ್ಥವು ಬಾಗುವುದು ಎಂದಾಗಿದೆ ಎಂದು ಅರಬೀ ಧರ್ಮದಲ್ಲಿ ಅವರು ಹೇಳುತ್ತಾರೆ. ಮತ್ತೊಮ್ಮೆ, ಇದು ಧಾರ್ಮಿಕರ ಮೂಲಕ ಪ್ರಸಾರ ಮಾಡಲಾದ ಇನ್ನೊಂದು ತಪ್ಪುಕಲ್ಪನೆಯಾಗಿದೆ.

ರುಕೂ ಪದದ ಅರ್ಥವು *ತನನ್ನು ವಿಧೇಯನಾಗಿಸುವುದು* ಅಥವಾ *ನಮ್ರತೆಯಿಂದ ತನ್ನನ್ನು ತಗ್ಗಿಸುವುದು* ಎಂದಾಗಿದೆ. ಬದ್ಧರಾದವರು ದಿನದ ನಿರ್ದಿಷ್ಟ ಸಮಯಗಳಲ್ಲಿ ದೈಹಿಕವಾಗಿ ಬಾಗಬೇಕು ಎಂದು ಹೇಳುವ ಯಾವುದೇ ವಚನವು ಕುರ್‌ಆನಿನಲ್ಲಿ ಇಲ್ಲವೇ ಇಲ್ಲ.

> ಆ ದಿನದಂದು ಸುಳ್ಳುಗಾರರಿಗೆ ನಾಶವಿದೆ. ಅವರಿಗೆ *ವಿಧೇಯರಾಗಿರಿ (ಇರ್ಕಊ)* ಎಂದು ಹೇಳಲಾದಾಗ ಅವರು *ವಿಧೇಯರಾಗುವುದಿಲ್ಲ (ಲಾ-ಯರ್ಕಊನ್)*. (77:47-48)

ನಂತರ 3:45 ರಲ್ಲಿ:

> ಮಾನವ-ರೂಪದ ಮಲಕ್ ಹೇಳಿತು "ಓ ಮರ್ಯಮ್, ಅಲ್ಲಾಹನು ನಿಮಗೊಂದು ಸುವಾರ್ತೆಯನ್ನು ನೀಡುತ್ತಾನೆ; ಅದು ಅವನಿಂದಿರುವ ಒಂದು ಪದವಾಗಿದೆ. ಅವರು ಮರ್ಯಮರ ಮಗ ಈಸಾ ಮಸೀಹ್ ಎಂದು ಕರೆಯಲ್ಪಡುವರು. ಅವರು ಈ ಜೀವನದಲ್ಲಿ ಮತ್ತು ಇನ್ನು ಮುಂದಿನ ಜೀವನದಲ್ಲೂ ಗೌರವಾನ್ವಿತರಾಗಿರುವರು, ಮತ್ತು ಅವರು ಅಲ್ಲಾಹನ ನಿಕಟವರ್ತಿಗಳಲ್ಲಿ ಸೇರಿರುವರು. ಅವರು ಕಿರುಪ್ರಾಯದಲ್ಲೂ, ಅತಿ ವೃದ್ಧಾಪ್ಯದಲ್ಲೂ ಜನರೊಂದಿಗೆ ಮಾತನಾಡುವರು. ಅವರು ಒಂದು ಸದ್ಗುಣ ವ್ಯಕ್ತಿಯಾಗಿರುವರು. (3:45-46)

ಈ ಸಂದೇಶವನ್ನು ಕೇಳುವ ಸಮಯದಲ್ಲಿ ಯಾರ ಜೊತೆಗೂ ವಿಧ್ಯುಕ್ತವಾಗಿ ಅಥವಾ ದೈಹಿಕವಾಗಿ ಬಾಗಲು ಮರ್ಯಮರಿಗೆ ಹೇಳಲಾಗಿಲ್ಲ.

ಅದೇ ರೀತಿ, 2:43 ರಲ್ಲಿ ಇಸ್ರಾಯೀಲರ ಸಂತತಿಗೆ ವಿಧೇಯರಾಗುವವರೊಂದಿಗೆ ತಮ್ಮನ್ನೂ ವಿಧೇಯರಾಗಿಸಲು ಕೆಳಗಿನ ಸಂದರ್ಭದಲ್ಲಿ ಆಜ್ಞಾಪಿಸಲಾಗಿದ್ದರು:

> ಓ ಇಸ್ರಾಯೀಲರ ಮಕ್ಕಳೇ, ನಾನು ನಿಮಗೆ ದಯಪಾಲಿಸಿದ ನನ್ನ ಕೊಡುಗೆಗಳನ್ನು ಸ್ಮರಿಸಿರಿ. ನನ್ನೊಡನೆ ನೀವು ಮಾಡಿದ ಕರಾರನ್ನು ಪೂರೈಸಿರಿ, ನಾನು ನಿಮ್ಮೊಂದಿಗೆ ಮಾಡಿದ ಕರಾರನ್ನು ಪೂರೈಸುವೆನು. ಮತ್ತು ನನ್ನನ್ನು ಮಾತ್ರ ಭಯಪಡಿರಿ. ನಾನು ಕಳುಹಿಸಿದ ಗ್ರಂಥದ ಮೇಲೆ ವಿಶ್ವಾಸವಿಡಿರಿ. ಈ ಗ್ರಂಥವು ಈ ಮೊದಲೇ ನಿಮ್ಮ ಬಳಿ ಇರುವ ಗ್ರಂಥವನ್ನು ಸಮರ್ಥಿಸುತ್ತದೆ. ಆದುದರಿಂದ ಅದನ್ನು ನಿಷೇಧಿಸುವವರಲ್ಲಿ ನೀವೇ ಮೊದಲಿಗರಾಗಬೇಡಿರಿ. ನನ್ನ ವಚನಗಳನ್ನು ಅಲ್ಪ ಬೆಲೆಗೆ ವಿಕ್ರಯಿಸಬೇಡಿರಿ ಮತ್ತು ನನ್ನನ್ನು ಮಾತ್ರ ಲಕ್ಷಿಸಿರಿ. ಮಿಥ್ಯವನ್ನು ಸತ್ಯದೊಂದಿಗೆ ಬೆರೆಸಬೇಡಿರಿ ಮತ್ತು ತಿಳಿದೂ ತಿಳಿದೂ ಸತ್ಯವನ್ನು ಬಚ್ಚಿಡಬೇಡಿರಿ. ನೀವು ನಿಮ್ಮ ಕರ್ತವ್ಯಗಳನ್ನು ಪೂರೈಸಿರಿ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸಿರಿ ಮತ್ತು ವಿಧೇಯರಾಗುವವರೊಂದಿಗೆ ನೀವೂ ವಿಧೇಯರಾಗಿರಿ *(ವರ್-ಕಊ-ಮಅ-ರ್ರಾಕಿಈನ್)*. (2:40-43)

ಕೊನೆಯ ಪ್ರವಾದಿಗೆ ಅವತೀರ್ಣಿಸಲ್ಪಟ್ಟದ್ದನ್ನು ಅಂಗೀಕರಿಸುತ್ತಾ ವಿಧೇಯರಾಗುವವರೊಂದಿಗೆ ತಾವೂ ವಿಧೇಯರಾಗಲು ಇಲ್ಲಿ ಇಸ್ರಾಯೀಲರ ಮಕ್ಕಳಿಗೆ ಅಲ್ಲಾಹನು ಸಲಹೆ ನೀಡುತ್ತಾನೆ. 2:40 ರಿಂದ ಹೇಳಿರುವುದನ್ನೆಲ್ಲಾ ನಿಖರವಾಗಿ ನಿರ್ವಹಿಸುವಂತೆ, 2:43 ರಲ್ಲಿರುವ *ವರ್-ಕಊ-ಮಅ-ರ್ರಾಕಿಈನ್* ಎಂಬ ನುಡಿಗಟ್ಟು ಸ್ಪಷ್ಟವಾಗಿ ನಿರ್ದೇಶಿಸುತ್ತಿದೆ. ಅಲ್ಲಾಹನ ಅವತೀರ್ಣವನ್ನು ಗೌರವಿಸುವುದು, ಮಿಥ್ಯವನ್ನು ಸತ್ಯದೊಂದಿಗೆ ಬೆರೆಸದಿರುವುದು ಮತ್ತು ತಿಳಿದೂ ತಿಳಿದೂ ಸತ್ಯವನ್ನು ಬಚ್ಚಿಡದಿರುವುದು ಅವರ ಬದ್ಧತೆಗಳಾಗಿವೆ. ಅರಬೀ ಜನಾಂಗದ ವಿರುದ್ಧ ಅವರ ಪೂರ್ವಾಗ್ರಹವು, ಪ್ರಪಂಚದ ಪ್ರಭುವಿನೊಂದಿಗಿರುವ

ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುವುದರಿಂದ ತಡೆಯಬಾರದು. ಅಲ್ಲಾಹನ ಗ್ರಂಥವು ಸಕಲ ಮಾನವಕುಲಕ್ಕಾಗಿ ಬಂದಿರುವುದಾಗಿದೆ.

ಆದ್ದರಿಂದ ರುಕೂ ಮತ್ತು ಸುಜೂದ್ ಎಂಬುವುದು ದೈಹಿಕವಾಗಿ ಬಾಗುವುದು ಮತ್ತು ಸಾಷ್ಟಾಂಗವೆರಗುವುದು ಎಂದಲ್ಲ, ಬದಲಿಗೆ *ಯಾವುದಕ್ಕಾದರೂ ತಮ್ಮ ಸ್ವಇಚ್ಛೆಯೊಂದಿಗೆ ಒಪ್ಪಿಕೊಳ್ಳುವುದು ಅಥವಾ ನಮ್ಮ ಸಮ್ಮತಿಯನ್ನು ಕೊಡುವುದು (ರುಕೂ)* ಮತ್ತು *ಮನಸ್ಸಿನಿಂದಲೂ, ಹೃದಯದಿಂದಲೂ, ಆತ್ಮದಿಂದಲೂ ತಮ್ಮನ್ನು ವಿಧೇಯರಾಗಿಸುವುದು ಅಥವಾ ತಮ್ಮನ್ನು ತಗ್ಗಿಸುವುದು (ಸುಜೂದ್)* ಎಂದಾಗಿದೆ ಎಂದು ನಾವು ಕಾಣುತ್ತೇವೆ.

ಆದ್ದರಿಂದ 2:125 ರಲ್ಲಿನ *ರುಕ್ಕ ಇ-ಸ್ಸುಜೂದ್* ಎಂಬುವುದಕ್ಕೆ *ದೈಹಿಕವಾಗಿ ಬಾಗುವುದು ಮತ್ತು ಸಾಷ್ಟಾಂಗವೆಸಗುವುದು* ಎಂಬ ಅರ್ಥವಲ್ಲ, ಬದಲಿಗೆ *(ಅಲ್ಲಾಹನ ವ್ಯವಸ್ಥೆಗೆ) ವಿಧೇಯರಾಗಿ ಸಮ್ಮತಿಕೊಳ್ಳುವವರು* ಎಂದಾಗಿದೆ.

ಥ್ಹಹ್ಹಿರಾ ಬೈತಿಯ	ನನ್ನ ವ್ಯವಸ್ಥೆಯನ್ನು ನೀವಿಬ್ಬರೂ ಶುದ್ಧಗೊಳಿಸಿರಿ
ಲಿ-ಥ್ವಾಇಫೀನ	ಜನಸಮೂಹಕ್ಕಾಗಿ
ವಲ್-ಆಕಿಫೀನ	ಮತ್ತು ನಿಷ್ಠಾವಂತರಿಗಾಗಿ
ವ-ರುಕ್ಕ ಇ-ಸ್ಸುಜೂದ್	ಮತ್ತು ವಿಧೇಯರಾಗಿ ಸಮ್ಮತಿಕೊಳ್ಳುವವರಿಗಾಗಿ

ಭ್ರಷ್ಟಾಚಾರದ ತಿರುಳು ಈ ವಚನದಲ್ಲಿ ಕಂಡುಬರುತ್ತದೆ. ಜನಸಮೂಹ ಎಂಬುವುದು ಪ್ರದಕ್ಷಿಣೆ ಮಾಡುವವರು ಎಂದಾಗಿ, ನಿಷ್ಠಾವಂತರು ಎಂಬುವುದು ತಪಶ್ಚರ್ಯೆಮಾಡುವವರು ಎಂದಾಗಿ, ವಿಧೇಯತೆಯಿಂದ ತಮ್ಮನ್ನು ಸಮ್ಮತಿಸಿಕೊಳ್ಳುವವರು ಎಂಬುವುದು ಬಾಗುವವರು ಮತ್ತು ಸಾಷ್ಟಾಂಗ ಮಾಡುವವರು ಎಂದಾಗಿ ತಿರುಚಲಾಯಿತು. ಈ ಎಲ್ಲಾ ಪದಗಳನ್ನು ತಮ್ಮ ಆಚರಣೆಗಳ ಪ್ರದರ್ಶನಕ್ಕೆ ಸಂಬಂಧಿಸಿಕೊಳ್ಳುವ ಅವರ ಉದ್ದೇಶವು ಸ್ಪಷ್ಟವಾಗಿ ಬಯಲಾಗುತ್ತದೆ.

ಧಾರ್ಮಿಕರು ತಮ್ಮ ಪೂರ್ವಜರ ಧರ್ಮವನ್ನು ಪುನರ್ಸ್ಥಾಪಿಸುವ ಸಲುವಾಗಿ, ಕೊನೆಯ ಪ್ರವಾದಿಗೆ ಅವತೀರ್ಣಿಸಲ್ಪಟ್ಟ ಗ್ರಂಥದ ಜೀವಾಳವನ್ನೇ ಉಲ್ಲಂಘಿಸುವ ಮೂಲಕ ತಮ್ಮ ಹಾದಿಯನ್ನು ಕಂಡುಕೊಂಡರು. ಈ ತಿರುಚುವಿಕೆಯು ಉದ್ದೇಶಪೂರ್ವಕವಾಗಿದೆ ಎಂದು ಕುರ್‌ಆನಿನ ಪುರಾವೆಗಳೊಂದಿಗೆ ನಾವು ಕಂಡೆವು.

ಮರುಸಮೀಕ್ಷೆ ಮಾಡಲು, ನಾವು ಇದುವರೆಗೆ ಪತ್ತೆಹಚ್ಚಿದ ಪುರಾವೆಗಳನ್ನು ಪರಿಗಣಿಸೋಣ:

- *ದೀನ್ (ಜೀವನ ರೀತಿ)* ಎಂಬುವುದು *ಧರ್ಮ* ಎಂದಾಯಿತು

- *ಇಬಾದತ್ (ಸೇವೆ)* ಎಂಬುವುದು *ಪೂಜೆ* ಅಥವಾ *ಆರಾಧನೆ* ಎಂದಾಯಿತು
- *ಸ್ವಲಾತ್ (ಬದ್ಧತೆ)* ಎಂಬುವುದು *ವಿಧ್ಯುಕ್ತ ಪ್ರಾರ್ಥನೆ* ಎಂದಾಯಿತು
- *ಮುಸ್ವಲ್ಲನ್ (ಬದ್ಧನಾದವನು)* ಎಂಬುವುದು *ವಿಧ್ಯುಕ್ತ ಪ್ರಾರ್ಥನೆಯ* ಸ್ಥಳ ಎಂದಾಯಿತು
- *ಬೈತಿಯ (ನನ್ನ ವ್ಯವಸ್ಥೆ)* ಎಂಬುವುದು *ನನ್ನ (ಅಲ್ಲಾಹನ) ಮನೆ* ಎಂದಾಯಿತು
- *ಥ್ವಾಇಫೀನ (ಜನಸಮೂಹ)* ಎಂಬುವುದು ಪ್ರದಕ್ಷಿಣೆ ಅಥವಾ ಸುತ್ತಹೊಡೆಯುವುದು ಎಂದಾಯಿತು
- *ಝಕಾ (ಶುದ್ಧೀಕರಣೆ)* ಎಂಬುವುದು *ಧಾರ್ಮಿಕ ದಶಾಂಶ ತೆರಿಗೆ* ಎಂದಾಯಿತು
- *ಆಕಿಫೀನ (ನಿಷ್ಠಾವಂತರು)* ಎಂಬುವುದು *ಮಸೀದಿಯಲ್ಲಿ ತಪಶ್ಚರ್ಯೆ ಮಾಡುವವರು* ಎಂದಾಯಿತು
- *ರುಕ್ಕ ಇ-ಸ್ಸುಜೂದ್ (ವಿಧೇಯತೆಯಿಂದ ತಮ್ಮನ್ನು ಸಮ್ಮತಿಸುವವರು)* ಎಂಬುವುದು *ದೈಹಿಕವಾಗಿ ಬಾಗುವವರು ಮತ್ತು ಸಾಷ್ಟಾಂಗವೆರಗುವವರು* ಎಂದಾಯಿತು
- *ಮಕಾಮಿ ಇಬ್ರಾಹೀಮ (ಇಬ್ರಾಹೀಮರ ದರ್ಜೆ)* ಎಂಬುವುದು (ಮಕ್ಕಾದ ಬೆಟ್ಟಗಳಿಂದ ಒಡೆದು ತೆಗೆದ ಬಂಡೆಗಳಿಂದ ನಿರ್ಮಿಸಿದ ಘನಾಕೃತಿಯ ಕಲ್ಲಿನ ವಿಗ್ರಹದ ಮುಂದೆ ಸ್ಥಾಪಿಸಲಾದ, ಚಿನ್ನದ ಬಣ್ಣವನ್ನು ಲೇಪಿಸಿದ ಪಂಜರದೊಳಗೆ ಇರಿಸಲ್ಪಟ್ಟ, ಇಬ್ರಾಹೀಮರದೆಂದು ಹೇಳಲ್ಪಡುವ, ತಾಮ್ರದ ಬ್ಲಾಕಿನಲ್ಲಿ ಕೆತ್ತಲ್ಪಟ್ಟಂತಹ) *ಒಂದು ಜೊತೆ ಹೆಜ್ಜೆಗುರುತುಗಳು* ಎಂದಾಯಿತು

ಕುರ್‌ಆನಿನ ಪ್ರಕಾರ, ತಮ್ಮ ಹೃದಯದ ಕಠೋರತನದಿಂದಾಗಿ, ಅಲ್ಲಾಹನ ಪದಗಳನ್ನು ತಿರುಚಿದ ಯಹೂದಿಗಳನ್ನು ಕೆಟ್ಟ ಜನರು ಮತ್ತು ಬಂಡಾಯಕಾರರಾದ ಜನಾಂಗ ಎಂದು ಹೇಳಲಾಗಿದೆ. ಈ ಭಾವನೆಯನ್ನು ಪದೇ ಪದೇ ಪುನರಾವರ್ತಿಸಲಾಗಿದೆ:

> ಅವರು ನಿಮ್ಮ ಹಾಗೆ ವಿಶ್ವಾಸವಿರಿಸುವರೆಂದು ನೀವು ನಿರೀಕ್ಷಿಸುತ್ತೀರಾ? ವಸ್ತುಶಃ ಅವರಲ್ಲಿ ಒಂದು ಪೈಕಿ ವರ್ಗವು ಅಲ್ಲಾಹನ ಪದಗಳನ್ನು ಕೇಳಿ ಅದನ್ನು ಚೆನ್ನಾಗಿ ಅರಿತುಕೊಂಡ ಬಳಿಕವೂ ಉದ್ದೇಶಪೂರ್ವಕವಾಗಿ ತಿರುಚುತ್ತಾರೆ. (2:75)
>
> "ಅಲ್ಲಾಹನು ಅವತೀರ್ಣಗೊಳಿಸಿದವುಗಳ ಮೇಲೆ ವಿಶ್ವಾಸವಿಡಿರಿ" ಎಂದು ಅವರೊಡನೆ ಹೇಳಿದಾಗ, "ನಮಗೆ (ಇಸ್ರಾಯೀಲ್ ಕುಲಕ್ಕೆ) ಅವತೀರ್ಣವಾದುದರಲ್ಲಿ ಮಾತ್ರ ನಾವು ವಿಶ್ವಾಸವಿಡುತ್ತೇವೆ" ಎಂದು ಅವರು ಹೇಳುತ್ತಾರೆ. ಅದಕ್ಕೆ ಹೊರತಾದವುಗಳನ್ನು ಅವರು ನಿಷೇಧಿಸುತ್ತಾರೆ. ವಾಸ್ತವವಾಗಿ ಇದು ಅವರ ಬಳಿ ಮೊದಲೇ ಇರುವ ಬೋಧನೆಗಳನ್ನು ದೃಢೀಕರಿಸುತ್ತದೆ. ನೀವು ಹೀಗೆ ಕೇಳಿರಿ, "ನೀವು (ನಿಮಗೆ ಅವತೀರ್ಣವಾದುದರಲ್ಲಿ) ವಿಶ್ವಾಸವಿರಿಸುವವರೇ ಆಗಿದ್ದರೆ, ಇದಕ್ಕಿಂತ ಮುಂಚೆ

> ಬಂದಂತಹ ಸಂದೇಶವಾಹಕರನ್ನು ನೀವೇಕೆ ವಧಿಸುತ್ತಿದ್ದಿರಿ?" ಮೂಸಾರು ಸುಸ್ಪಷ್ಟ ಆಧಾರಗಳೊಂದಿಗೆ ನಿಮ್ಮೆಡೆಗೆ ಬಂದಿದ್ದರು, ಆದರೂ ಅವರು ಬೆನ್ನುತಿರುಗಿದ ಕೂಡಲೇ ಕರುವನ್ನು ಆರಾಧಿಸುವಂತಹ ಅಕ್ರಮಿಗಳಾದಿರಿ. ಒಪ್ಪಂದದ ಕಲಮು ನಿಮ್ಮ ಮೇಲೆ ಎತ್ತಿಹಿಡಿದು ನಿಮ್ಮೊಂದಿಗೆ ಹೀಗೊಂದು ಕರಾರನ್ನು ಮಾಡಿದ್ದೆವು, "ನಾವು ನಿಮಗೆ ನೀಡಿರುವುದನ್ನು ಕಟ್ಟುನಿಟ್ಟಾಗಿ ಪಾಲಿಸಿರಿ ಮತ್ತು ಕಿವಿಗೊಟ್ಟು ಆಲಿಸಿರಿ", ಆದರೆ ಅವರು ಹೇಳಿದರು, "ನಾವು ಕೇಳಿದೆವು, ಆದರೆ ಅಂಗೀಕರಿಸಲಾರೆವು". ಅವರ ಸತ್ಯನಿಷೇಧದ ಕಾರಣವಾಗಿ, ಅವರ ಹೃದಯದಲ್ಲಿ ಕರುವು ಆಳವಾಗಿ ಹೂತುಕೊಂಡಿದೆ. (2:91-93)

> ಅವರು ತಮ್ಮ ಕರಾರನ್ನು ಮುರಿದ ಕಾರಣ, ನಾವು ಅವರನ್ನು ಶಪಿಸಿದೆವು ಮತ್ತು ಅವರ ಹೃದಯವನ್ನು ಕಠೋರಗೊಳಿಸಿದೆವು. ಅವರು ಪದಗಳನ್ನು ಅದರ ನಿಜವಾದ ಸ್ಥಾನದಿಂದ ತಿರುಚುತ್ತಾರೆ ಮತ್ತು ಅದನ್ನು ಜ್ಞಾಪಿಸಲೇ ಬಾರದಂತೆ ಅದರ ಕೆಲವು ಪಾಲನ್ನು ಮರೆತುಬಿಟ್ಟಿದ್ದಾರೆ. ಅವರಲ್ಲಿ ಕೆಲವರನ್ನು ಹೊರತುಪಡಿಸಿ, ನೀವು ಅವರಿಂದ ಯಾವಾಗಲೂ ವಿಶ್ವಾಸಘಾತಕತನವನ್ನು ಕಾಣಬಹುದು. ಆದುದರಿಂದ ನೀವು ಅವರನ್ನು ಕ್ಷಮಿಸಿರಿ ಮತ್ತು ನಿರ್ಲಕ್ಷಿಸಿರಿ. ಅಲ್ಲಾಹು ಕರುಣೆಯುಳ್ಳವರನ್ನು ಪ್ರೀತಿಸುತ್ತಾನೆ. (5:13)

ಅರಬರು ತಮ್ಮ ಹೃದಯದಲ್ಲಿ ರೋಗವಿರುವವರಾಗಿದ್ದಾರೆ ಎಂದು ಅಲ್ಲಾಹನು ಹೇಳಿರುವ ಇನ್ನೊಂದು ಸತ್ಯವನ್ನು ಬಹುತೇಕ ಎಲ್ಲರೂ ಅಲ್ಲಗಳೆಯುತ್ತಾರೆ, ಬಹುಶಃ ಅವರ ಹೃದಯಗಳು ಯಹೂದಿಗಳ ಹೃದಯಕ್ಕಿಂತ ಅತಿಯಾಗಿ ನೀಚವಾಗಿದೆ. 2:8-10 ರಲ್ಲಿ ಸೂಚಿಸಲಾಗಿರುವ ಜನಸಮೂಹವು, ಗ್ರಂಥವನ್ನು ಸ್ವೀಕರಿಸಿದ ಅರಬರಾಗಿದ್ದಾರೆ ಎಂಬುವುದನ್ನು ನಾವು ನಿರಾಕರಿಸುವಂತಿಲ್ಲ. ಸತ್ಯನಿಷೇಧದಲ್ಲಿ ಮತ್ತು ಕಪಟತೆಯಲ್ಲಿ ಅರಬರು ಅತಿ ಕಠೋರರು ಎಂದು ಅಲ್ಲಾಹನು ಅರಬರನ್ನು ಮುಚ್ಚುಮರೆಯಿಲ್ಲದೆ ಗುರುತಿಸಿಕೊಟ್ಟಿದ್ದಾನೆ.

> ಅರಬರು ಸತ್ಯನಿಷೇಧದಲ್ಲಿ ಮತ್ತು ಕಪಟತೆಯಲ್ಲಿ ಅತಿ ಕಠೋರರಾಗಿದ್ದಾರೆ (9:97)

ವಾಸ್ತವದಲ್ಲಿ 2:8-10 ರಲ್ಲಿ ವಿವರಿಸಲಾದಂತಹ ಜನರನ್ನು ಅವರು ಹೋಲುತ್ತಾರೆ:

> ಅವರಲ್ಲಿ ಕೆಲವರು, "ನಾವು ಅಲ್ಲಾಹನ ಮೇಲೆ ಮತ್ತು ಅಂತ್ಯದಿನದ ಮೇಲೆ ವಿಶ್ವಾಸವಿರಿಸಿದ್ದೇವೆ" ಎಂದು ಹೇಳುವವರೂ ಇದ್ದಾರೆ. ಆದರೆ ನಿಜವಾಗಿ ಅವರು ವಿಶ್ವಾಸಿಗಳಲ್ಲ. ಅವರು ಅಲ್ಲಾಹನನ್ನೂ ವಿಶ್ವಾಸಿಗಳನ್ನೂ ವಂಚಿಸುತ್ತಾರೆ. ವಾಸ್ತವದಲ್ಲಿ ಅವರು ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಿದ್ದಾರೆ ಮತ್ತು ಅವರಿಗೆ ಅದರ ಬೋಧವಿಲ್ಲ. ಅವರ ಹೃದಯದಲ್ಲಿ ಒಂದು ರೋಗವಿದೆ. ಅದನ್ನು ಅಲ್ಲಾಹನು ಇನ್ನಷ್ಟು ಉಲ್ಬಣಗೊಳಿಸಿದನು. ಅವರು ಹೇಳುತ್ತಿರುವ ಸುಳ್ಳಿನ ಪ್ರತಿಫಲವಾಗಿ ಅವರಿಗೆ ವೇದನಾಯುಕ್ತ ಶಿಕ್ಷೆಯು ಕಾದಿದೆ. (2:8-10)

ನಾವು ಅಲ್ಲಾಹನಲ್ಲಿ ಮತ್ತು ಅಂತಿಮ ದಿನದಲ್ಲಿ ವಿಶ್ವಾಸವಿರಿಸುತ್ತೇವೆ ಎಂದು ಹೇಳುವ ಆಧುನಿಕ ಅರಬರನ್ನು ಈ ವಚನಗಳು ಪರಿಪೂರ್ಣವಾಗಿ ವಿವರಿಸುತ್ತದೆ. ಮೂರ್ತಿಪೂಜೆಯನ್ನು ಕುರ್‌ಆನ್ ಸ್ಪಷ್ಟವಾಗಿ ನಿರಾಕರಿಸುತ್ತದೆಯಾದರೂ, ಧಾರ್ಮಿಕರು ಕುರ್‌ಆನಿನ ಸೂಚನೆಗಳನ್ನು ವಿರೋಧಿಸುತ್ತಾರೆ. ಬಂಡೆಕಲ್ಲಿನಿಂದ ಕೆತ್ತಲಾದ ಕಲ್ಲುಗಳನ್ನು, ಪರ್ವತ ಶಿರಸ್ತರಗಳ ಸೇವೆಯನ್ನು ಮಾಡುವುದು ಇಸ್ಲಾಮಿನ ಭಾಗವಾಗಿದೆ ಎಂದು ಅವರು ದಾವೆಮಾಡುತ್ತಾರೆ. ಅಲ್ಲಾಹನನ್ನೂ ನಿಜವಾದ ವಿಶ್ವಾಸಿಗಳನ್ನೂ ವಂಚಿಸುವ ತಮ್ಮ ಪ್ರಯತ್ನದಲ್ಲಿ, ಬೋಧವಿಲ್ಲದೆ ಅವರು ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಿದ್ದಾರೆ. ಅಲ್ಲಾಹನಿಂದ ಬಂದ ಸಮ್ಮತಿಸಲ್ಪಟ್ಟ ಆದೇಶಗಳಿಗೆ ಪ್ರಾಮಾಣಿಕವಾಗಿ ತಮ್ಮ ಸಮ್ಮತಿಯನ್ನು ನೀಡಿರುತ್ತಿದ್ದರೆ ಮತ್ತು ಕುರ್‌ಆನಿನ ಸಂದೇಶವನ್ನು ನಿಜವಾಗಿ ಅರಿತುಕೊಳ್ಳುತ್ತಿದ್ದರೆ ಅವರಿಗೆ ಹೀಗೆಲ್ಲಾ ಮಾಡುವ ಅವಶ್ಯಕತೆಯೇ ಬರುತ್ತಿರಲಿಲ್ಲ. ಅವರ ಹೃದಯದಲ್ಲಿ ರೋಗವಿದೆ ಎಂದು ಕುರ್‌ಆನ್ ಹೇಳುತ್ತಿದೆ. ಅವರಿಗೆ ಈ ರೋಗವು ತಮ್ಮ ಅನಾಚಾರಿಕ ಪೂರ್ವಜರಿಂದ ಪಿತ್ರಾರ್ಜಿತವಾಗಿ ದೊರೆತಿರುವುದಾಗಿದೆ.

ನಿಂದನೀಯ ವಿಷಯವೇನೆಂದರೆ, ವಿಶ್ವದಾದ್ಯಂತ ಅರಬೇತರ ಮುಸ್ಲಿಮರು, ಹೆಂಗಸರೂ ಸೇರಿದಂತೆ, ಈ ಅನಾಚಾರಿಕ ಜೀವನ ರೀತಿಯನ್ನು ಪಾಲಿಸುವಲ್ಲಿ ಸಂತೋಷಪಡುತ್ತಿದ್ದಾರೆ. ಅಲ್ಲಾಹನನ್ನು ತಿರಸ್ಕರಿಸುವವರು ಮತ್ತು ಕಪಟವಿಶ್ವಾಸದಲ್ಲಿ ಖ್ಯಾತಿಹೊಂದಿದವರೆಂದು ಕುರ್‌ಆನ್ ಇವರನ್ನು ಘೋಷಿಸಿರುವಾಗಲೂ, ಗಂಡಸರೂ ಹೆಂಗಸರೂ ಸೇರಿದಂತೆ, ಅನೇಕ ಮುಸ್ಲಿಮರು ಇವರ ಹಾಗೆ ವಸ್ತ್ರವನ್ನು ಧರಿಸುತ್ತಾರೆ. ಉದಾಹರಣೆಗೆ, ಹೆಂಗಸಿನ ತಲೆಯನ್ನು ಮರೆಸುವ ವಿಧಿಯನ್ನು ಬೈಬಲಿನಿಂದ ಕದ್ದಿರುವುದಾಗಿದೆ. ಇಂದು ವಿಶ್ವದಾದ್ಯಂತ ಮುಸ್ಲಿಮ್ ಹೆಂಗಸರು ಇದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ. ತಲೆಯನ್ನು ಕವಚದಿಂದ ಮರೆಮಾಡುವುದನ್ನು ಕುರ್‌ಆನಿನಲ್ಲಿ ವಿಧಿಸಿದೆ ಎಂದು ದಾವೆಮಾಡುವಂತಹ ಪಂಡಿತರ ವಂಚನೆಗೆ ಅವರು ಬಲಿಯಾಗಿದ್ದಾರೆ. ಸತ್ಯಾಂಶವೇನೆಂದರೆ, ಕುರ್‌ಆನಿನಲ್ಲಿ ಇಂತಹ ಒಂದು ಆಜ್ಞೆಯು ಕಾಣಸಿಗುವುದಿಲ್ಲ. ಅವರು ಬೈಬಲಿನಲ್ಲಿರುವ ಆದೇಶಗಳನ್ನು ಎತ್ತಿಹಿಡಿದು ಅದನ್ನು ಪರಿಶುದ್ಧವಾಗಿರಿಸಲು ಬದ್ಧರಾಗಿದ್ದಾರೆ. ಬೈಬಲಿನಲ್ಲಿ, ಕೋರಿಂತಿಯನ್ಸ್ 1 – 11:5 ರಲ್ಲಿ ಹೇಳಲಾಗಿದೆ, *"ಯಾವುದೇ ಮಹಿಳೆಯು, ತನ್ನ ತಲೆಯನ್ನು ಮರೆಮಾಡದೆ ಪ್ರಾರ್ಥಿಸಿದರೆ, ಅವಳ ಕೂದಲು ಬೋಳಿಸಿರುವುದಕ್ಕೆ ಸಮವಾಗಿದೆ. ಒಂದು ಮಹಿಳೆಯು ತನ್ನ ತಲೆಯನ್ನು ಮರೆಮಾಚುವುದಿಲ್ಲವಾದರೆ, ಅವಳು ತನ್ನ ಕೂದಲನ್ನು ಕತ್ತರಿಸಬೇಕಾಗಿದೆ. ತನ್ನ ಕೂದಲನ್ನು ಕತ್ತರಿಸುವುದು ಅಥವಾ ಬೋಳಿಸುವುದು ಮಹಿಳೆಗೆ ಅಪಮಾನಕರವಾಗಿರುವುದರಿಂದ, ಅವಳು ತನ್ನ ತಲೆಯನ್ನು ಮರೆಮಾಚಿಕೊಂಡಿರಬೇಕು"*. ನಿಸ್ಸಂದೇಹವಾಗಿಯೂ, ಶಿರಕವಚದಿಂದ ತಲೆಯನ್ನು ಮರೆಮಾಚುವುದು ಕುರ್‌ಆನಿನ ಆಜ್ಞೆಯಲ್ಲ.

ಉತ್ತಮ ಕಾರ್ಯಗಳನ್ನು ನಿರ್ವಹಿಸುವುದರ ಮೂಲಕ ಪ್ರಪಂಚದ ಪ್ರಭುವನ್ನು ಸೇವೆ ಮಾಡುವುದರ ಬದಲಾಗಿ, ಅರಬರು ಪುರಾತನ ಅರಬೀ ಸಂಪ್ರದಾಯವನ್ನು ಉತ್ತೇಜಿಸುತ್ತಿದ್ದಾರೆ. ಅರಬೀ ಮಣ್ಣಿನ ಮೇಲೆ ಕಲ್ಲಿನ ಮೂರ್ತಿಯನ್ನು ನಿರ್ಮಿಸಿಕೊಂಡು, ಆಡಂಬರ ಮತ್ತು ಉತ್ಸವಗಳೊಂದಿಗೆ ಅವರು ಅದನ್ನು ಸೇವೆ

ಮಾಡುವ ಮೂಲಕ, ತಮ್ಮ ಪೂರ್ವಜರ ಮೂರ್ತಿಪೂಜೆಯ ಆಚರಣೆಗಳನ್ನು ಮುನ್ನಡೆಸುತ್ತಿದ್ದಾರೆ. ಅನೇಕ ಅರಬೇತರ ಮುಸ್ಲಿಮರು ಇದರ ಭಾಗವಾಗಿರಲು ಬಹಳ ಸಂತೋಷಪಡುತ್ತಿದ್ದಾರೆ.

ಯಹೂದಿಗಳು ಅತ್ಯಂತ ಪ್ರತಿರೋಧಿಗಳಾದ ಜನರಾಗಿರಲೂ, ಅರಬೀ ಧಾರ್ಮಿಕರ ತೀವ್ರತೆಯ ಪರಿಧಿಯಷ್ಟು ಅವರು ಹೋಗಲಿಲ್ಲ. ಮೂಸಾರು ಇಸ್ರಾಯೀಲರ ಜೊತೆಗಿರುವ ಸಮಯದಲ್ಲೇ ಅವರು ಕರುವನ್ನು ಮೂರ್ತೀಕರಿಸಿದರು. ಏಕೆಂದರೆ ಅವರ ಹೃದಯದಲ್ಲಿ ಕರುವಿನ ಮೇಲಿನ ಭಕ್ತಿಯು ಬೇರೂರಿತ್ತು ನಂತರ ಅವರು ಯಹೂದಿತ್ವ ಎಂಬ ಧರ್ಮವನ್ನು ರಚಿಸಿದರು. ಮರ್ಯಮರ ಮಗ ಈಸಾ ಮಸೀಹರು ಅವರ ಧರ್ಮವನ್ನು ಧ್ವಂಸಮಾಡಲು ಅವರ ಕಡೆಗೆ ಹೋದಾಗ, ಅವರ ಮೇಲೆ ದೇವನಿಂದೆಯ ಆರೋಪವನ್ನು ಹೊರೆಸಿ ಅವರ ವಿರುದ್ಧ ಸಂಚು ಹೂಡಿದರು.

ಮೇಲೆ ತಿಳಿಸಿದಂತೆ ಕುರ್‌ಆನಿನ ಎರಡನೇ ಸೂರದ ಚರಣಗಳು, ಆಧುನಿಕ ಅರಬರನ್ನು ಮತ್ತು ಅರಬೀ ಧಾರ್ಮಿಕರನ್ನೇ ಸ್ಪಷ್ಟವಾಗಿ ಸೂಚಿಸುತ್ತಿದೆ ಎಂದು ನಂಬದೇ ಇರಲು ಯಾವುದೇ ಕಾರಣವು ಇಲ್ಲ. ಅವರು ಅಲ್ಲಾಹನ ಬಗ್ಗೆ ಸುಳ್ಳನ್ನು ಹೇಳುತ್ತಿದ್ದಾರೆ ಹಾಗೂ ಅವರ ಹೃದಯದಲ್ಲಿ ರೋಗವಿದೆ. ಅಲ್ಲಾಹನಲ್ಲಿ ಹಾಗೂ ಅಂತ್ಯದಿನದಲ್ಲಿ ತಮ್ಮ ವಿಶ್ವಾಸವನ್ನು ದಾವೆ ಮಾಡಿಕೊಳ್ಳುತ್ತಾ, ಅಲ್ಲಾಹನ ಆಜ್ಞೆಗಳನ್ನು ಭ್ರಷ್ಟಗೊಳಿಸುವ ಮಹಾ ಪಾಪವನ್ನು ಪರಿಚಯಿಸಿದರು. ಅಂತಹ ಸ್ವಭಾವವುಳ್ಳ ಜನಾಂಗಕ್ಕೆ ಮಾತ್ರ ಇಂತಹ ಪಾಪವನ್ನು ಎಸಗಿ ಅದನ್ನು ಈ ದಿನದ ವರೆಗೂ ಮುಂದೂಡಿಕೊಂಡು ಬರಲು ಸಾಧ್ಯವಿದೆ. ಯಹೂದಿಗಳಿಗೆ ಅಲ್ಲಾಹನ ವಿರುದ್ಧ ದಂಗೆ ಏಳುವ ವಿಷಯದಲ್ಲಿ ಅರಬರಿಂದ ಕಠಿಣ ಸ್ಪರ್ಧೆಯನ್ನು ಎದುರಿಸಬೇಕಾಗಿದೆ.

ಭಾಗ ಹತ್ತು

‘ಸಮ್ಮತಿಸಲ್ಪಟ್ಟಿರುವುದು’ ಎಂಬುವುದು ‘ಮಸೀದಿ’ ಎಂದಾಯಿತು

ಮೂಲಪದಗಳ ಆಧಾರದ ಮೇಲೆ ಅರಬೀ ಭಾಷೆಯಲ್ಲಿ ಪದಗಳನ್ನು ರಚಿಸಲಾಗಿದೆ ಎಂದು ನಾವು ನೋಡಿದೆವು. ಈ ಮೂಲಪದಗಳ ವ್ಯಂಜನಗಳಿಗೆ ಜೋಡಿರುವ ಸ್ವರವನ್ನು ಬದಲಾಯಿಸುವ ಮೂಲಕ ಮತ್ತು ಆ ವ್ಯಂಜನಗಳ ಮೊದಲು, ನಡುವೆ ಅಥವಾ ನಂತರ ಕೆಲವು ಅಕ್ಷರಗಳನ್ನು ಸೇರಿಸುವ ಮೂಲಕ ಅವುಗಳ ಪದೋತ್ಪನ್ನಗಳನ್ನು ತಯಾರಿಸಲಾಗುತ್ತದೆ. ಮೂಲ ಅರ್ಥವನ್ನು ತಿಳಿಯುವ ಮೂಲಕ ಅದರ ಉತ್ಪನ್ನಗಳ ಅರ್ಥವನ್ನು ಸುಲಭವಾಗಿ ತಿಳಿಯಲು ಸಾಧ್ಯವಾಗುತ್ತದೆ. ಅರಬಿಗಳಾದ ಅಥವಾ ಅರಬಿಗಳಲ್ಲದ ‘ಧಾರ್ಮಿಕರು’, ಕುರ್‌ಆನಿನ ಅರಬೀ ಭಾಷೆಯ ಪರಿಣಿತರಾಗಿರುತ್ತಾರೆ ಎಂದು ಅರಬಿಗಳಲ್ಲದ ಮುಸ್ಲಿಮರನ್ನು ನಂಬಿಸಲಾಗಿದೆ. ನಾವು ಒಂದು ಮುಖ್ಯ ವಾಸ್ತವವನ್ನು ಮರೆಯಬಾರದು: ಒಬ್ಬ ಅರಬೀ ಪ್ರವಾದಿಗೆ ಗ್ರಂಥವನ್ನು ಅವತೀರ್ಣಿಸಿದಾಗ, ಅಲ್ಲಾಹನು ಅರಬರಿಂದ ಭಾಷೆಯನ್ನು ಪಡೆದುಕೊಂಡಿರುವುದಲ್ಲ. ಆಧುನಿಕ ಅರಬರು ಮತ್ತು ಧಾರ್ಮಿಕರು ಕುರ್‌ಆನಿನ ಅನೇಕ ಪದಗಳ ಮತ್ತು ವಚನಗಳ ಅರ್ಥವನ್ನು ತಿಳಿದುಕೊಳ್ಳಲು ಇಂದಿಗೂ ಒದ್ದಾಡುತ್ತಿದ್ದಾರೆ. ಇದಲ್ಲದೆ, ಒಬ್ಬನ ಮಾತೃಭಾಷೆಯು ಅರಬಿಯಾಗಿರಲೂ, ಕೆಲವು ಕಲ್ಪನಾತೀತ ಮತ್ತು ಹಾಸ್ಯಾಸ್ಪದವಾದ ವಿಷಯಗಳನ್ನು ನಂಬದೇ ಇರಲು ಅವರ ಮಾತೃಭಾಷೆಯು ಅವರಿಗೆ ಯಾವುದೇ ರೀತಿಯಲ್ಲಿ ಸಹಾಯಕರವಾಗಲಿಲ್ಲ. ಕುರ್‌ಆನಿಗೆ ವಿರುದ್ಧವಾದ ಸಂಪ್ರದಾಯಗಳ ಮೇಲೆ ಆಧರಿತವಾದಂತಹ ಹಾಗೂ ಅರಬೀ ಧರ್ಮದ ನಾಯಕರಿಂದ ಬೋಧಿಸಲ್ಪಡುವಂತಹ ಕೆಲವು ಉದಾಹರಣೆಗಳು ಇಲ್ಲಿವೆ:

- ಒಂದು ಮೊಟ್ಟೆಯ ಆಕಾರದ ಹಾಗೆ ಭೂಮಿಯನ್ನು ಲಂಬೀಕರಿಸಲಾಗಿದೆ ಎಂದು ಕುರ್‌ಆನ್ ವಿವರಿಸುತ್ತದೆ. ಆದರೆ ಭೂಮಿಯು ಸಮತಳವಾಗಿದೆ ಮತ್ತು ಒಂದು ಗೂಳಿಯ ಎರಡು ಕೊಂಬುಗಳ ಮೇಲೆ ನಿಲ್ಲಿಸಲಾಗಿದೆ ಎಂದು ಧಾರ್ಮಿಕರು ಹೇಳುತ್ತಾರೆ. ಅವರ ತಜ್ಞರ ಪ್ರಕಾರ, ಗೂಳಿಯು ತನ್ನ ತಲೆಯನ್ನು ಅಲ್ಲಾಡಿಸುವ ಪ್ರತಿ ಬಾರಿಯು, ವಿಶ್ವದಲ್ಲೆಲ್ಲಾದರೂ ಒಂದು ಭೂಕಂಪವು ಉಂಟಾಗುತ್ತದೆ.

- ಉಪ ಪರಮಾಣು ಕಣಗಳ ಬಗ್ಗೆ ಕುರ್‌ಆನ್ ಮಾತನಾಡುತ್ತದೆ, ಆದರೆ ಅರಬೀ ಭಾಷಾಶಾಸ್ತ್ರಜ್ಞರು ಹೇಳುತ್ತಾರೆ, ಒಂದು ಉಪ ಪರಮಾಣು ಕಣದ ಗಾತ್ರವು ಒಂದು ಸಾಸಿವೆ ಬೀಜಕ್ಕೆ ಸಮವಾಗಿದೆ.

- ಕುರ್‌ಆನಿನಲ್ಲಿ ಚಂದ್ರನನ್ನು ಸೀಳುವ ಬಗ್ಗೆ ಒಂದು ಲಾಕ್ಷಣಿಕ ವಿವರಣೆಯಿದೆ. ಆದರೆ ಕೊನೆಯ ಪ್ರವಾದಿಯ ಸಮಯದಲ್ಲಿ ಚಂದ್ರನು ಎರಡು ತುಂಡಾಗಿ ಆಕಾಶದಿಂದ ಕೆಳಗೆ, ಅದರ ಅರ್ಧ ಭಾಗವು ಪ್ರವಾದಿಯ ಅಳಿಯನ ಮನೆಯ ಹಿಂಬದಿಯಲ್ಲೂ ಮತ್ತೊಂದು ಭಾಗವು ಒಂದು ಪರ್ವತದ ಹಿಂಬದಿಯಲ್ಲೂ ಬಿತ್ತು ಎಂದು ಧಾರ್ಮಿಕರು ಹೇಳುತ್ತಾರೆ.

- ಸೂರ್ಯನು ನಿರ್ದಿಷ್ಟ ಕಕ್ಷೆಯಲ್ಲಿ ಚಲಿಸುತ್ತಾನೆ ಎಂದು ಕುರ್‌ಆನ್ ಹೇಳುತ್ತದೆ. ಆದರೆ ಧಾರ್ಮಿಕರು ಹೇಳುತ್ತಾರೆ, 'ಸೂರ್ಯಾಸ್ತದ ಸಮಯದಲ್ಲಿ ಸೂರ್ಯನು ಅಲ್ಲಾಹನ ಸಿಂಹಾಸನ ಕೆಳಗೆ ಸಾಷ್ಟಾಂಗವೆರಗುತ್ತಾನೆ ಹಾಗೂ ಮತ್ತೆ ಉದಯಿಸಲು ಅನುಮತಿ ಕೇಳುತ್ತಾನೆ ಮತ್ತು ಅನುಮತಿ ನೀಡಲಾಗುವುದು; ಮತ್ತು ಒಂದು ಅಂತಹ ದಿನವು ಬರಲಿರುವುದು, ಅಂದು ಸೂರ್ಯನು ಸಾಷ್ಟಾಂಗವೆರಗಿ ಮತ್ತೆ ಉದಯಿಸಲು ಅನುಮತಿ ಕೇಳುವಾಗ, ಅದು ಬಂದ ಕಡೆಗೆ ತಿರುಗಿ ಹೋಗಲು ಆದೇಶಿಸಲ್ಪಡುವುದು. ಹಾಗೆ ಅಂದು ಸೂರ್ಯನು ಪಶ್ಚಿಮದಿಂದ ಉದಯಿಸುವನು.' ಬುಖಾರಿಯ *ಸಹೀಹ್* ಪುಸ್ತಕದಲ್ಲಿ ಬರೆದಿರುವ ಹಾಗೆ, ಈ ವಿಷಯದಲ್ಲಿ ಧಾರ್ಮಿಕರ ವಿವರಣೆಯು ಅನೇಕ ಜನರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

- ನಾಯಿಯನ್ನು ವಿಶ್ವಾಸಿಯ ಒಂದು ಒಡನಾಡಿಯಾಗಿ ಮತ್ತು ಬೇಟೆಯಾಡಲು ತರಬೇತಿ ನೀಡಬಹುದಾದ ಒಂದು ಸಾಕು ಪ್ರಾಣಿಯಾಗಿ, ನಾಯಿಯ ಬಗ್ಗೆ ಅನುಕೂಲಕರ ಪರಿಭಾಷೆಯಲ್ಲಿ ಕುರ್‌ಆನ್ ಮಾತಾಡುತ್ತದೆ. ಆದರೆ ನಾಯಿಗಳನ್ನು ಸಾಕುವುದು ಮುಸ್ಲಿಮರಿಗೆ ನಿಷೇಧಿಸಲಾಗಿದೆ ಎಂದು ಅರಬೀ ಭಾಷಾಶಾಸ್ತ್ರಜ್ಞರು ಮತ್ತು ವಿದ್ವಾಂಸರು ಹೇಳುತ್ತಾರೆ.

- ಪರಲೋಕದಲ್ಲಿ ಒಂದು ವ್ಯಕ್ತಿಯ ಹಾಗೂ ಅಲ್ಲಾಹನ ನಡುವೆ ಯಾವುದೇ ಶಿಫಾರಸು *(ಶಫಾಅತ್)* ಮಾಡುವವನು ಇರಲಾರನು ಎಂದು ಕುರ್‌ಆನ್ ಹೇಳುತ್ತದೆ. ಆದರೆ ಕೊನೆಯ ಪ್ರವಾದಿ ಮತ್ತು ಪುರೋಹಿತರು ತಮ್ಮ ಅನುಯಾಯಿಗಳಿಗೆ ಶಿಫಾರಸು ಮಾಡುವರು ಎಂದು ಧಾರ್ಮಿಕರು ಹೇಳುತ್ತಾರೆ.

- ಅರಬೀ ಧರ್ಮದ ಅನುಯಾಯಿಗಳಲ್ಲಿ ಯಾರಿಗಾದರೂ ನರಕಾಗ್ನಿಯ ಯಾತನೆಯು ದೊರಕಿದರೂ, ಅದು ಅವರಿಗೆ ಕೇವಲ ಕೆಲವು ದಿನಗಳ ಕಾಲವು ಮಾತ್ರ ಅನುಭವಿಸಲಿರುವುದಾಗಿದೆ ಎಂದು ಹೇಳುವ ಪರಿಧಿಗೂ ಅರಬೀ ವಿದ್ವಾಂಸರು ಹೋಗಿದ್ದಾರೆ. ಆದರೆ ನರಕಾಗ್ನಿಯ ಶಿಕ್ಷೆಯು ಶಾಶ್ವತವಾಗಿರುವುದಾಗಿದೆ ಎಂದು ಕುರ್‌ಆನ್ ಸರಳ ಅರಬಿಯಲ್ಲಿ ಸ್ಪಷ್ಟವಾಗಿ ಹೇಳುತ್ತದೆ. ಆ ಅನುಯಾಯಿಗಳಿಗೆ ಕುರ್‌ಆನನ್ನು ತಾವು ಅರ್ಥೈಸಿಕೊಳ್ಳಬಹುದಾದ ಭಾಷೆಯಲ್ಲಿ ಅಧ್ಯಯನ ಮಾಡಲು ಇದು ತಕ್ಕ ಸಮಯವಲ್ಲವೇ?

- ತಮ್ಮ ಮಾತಾಪಿತರ ಹಾಗೂ ಸಂಬಂಧಿಕರ ಪ್ರಯೋಜನಕ್ಕಾಗಿ ಉಯಿಲನ್ನು ಬರೆಯುವುದು ನಿಜವಾದ ಮುಸ್ಲಿಮನ ಒಂದು ಕರ್ತವ್ಯವಾಗಿದೆ ಎಂದು ಕುರ್‌ಆನ್ ಹೇಳುತ್ತದೆ. ಆದರೆ ಉಯಿಲನ್ನು ಬರೆಯುವುದು ನಿಷೇಧಿಸಲಾಗಿದೆ ಎಂದು ಧಾರ್ಮಿಕರು ಹೇಳುತ್ತಾರೆ.

- ಜನರು ತಮ್ಮ ಸಾಮಾನ್ಯ ಜ್ಞಾನವನ್ನು ಉಪಯೋಗಿಸಬೇಕು ಮತ್ತು ಯಾವುದನ್ನೂ ಕಣ್ಣುಮುಚ್ಚಿ ಸ್ವೀಕರಿಸಬಾರದು ಮತ್ತು ಒಂದು ಸಿದ್ಧಾಂತವನ್ನು ಅನುಸರಿಸುವ ಮೊದಲು ಎಲ್ಲವನ್ನು

ಪರಿಶೀಲಸಬೇಕು ಎಂದು ಕುರ್‌ಆನ್ ಹೇಳುತ್ತದೆ. ಆದರೆ ಜನರು ತಮ್ಮ ಪುರೋಹಿತರನ್ನು ಕಣ್ಣುಮುಚ್ಚಿ ಅನುಸರಿಸಬೇಕಾಗಿದೆ ಮತ್ತು ಸಾಮಾನ್ಯ ಜ್ಞಾನವನ್ನು ಬಳಸುವ ಜನರು ನರಕಕ್ಕೆ ಹೋಗುವರು ಎಂದು ಅರಬೀ ವಿದ್ವಾಂಸರು ಹೇಳುತ್ತಾರೆ.

ಬಹುತೇಕ ಆಧುನಿಕ ಅರಬರು ಕುರ್‌ಆನಿನ ಅನೇಕ ಪದಗಳ ಅರ್ಥದೊಂದಿಗೆ ಇಂದಿಗೂ ಹೋರಾಡುತ್ತಿದ್ದಾರೆ ಎಂಬುವುದು ವಸ್ತುಸ್ಥಿತಿಯಾಗಿದೆ. ಧಾರ್ಮಿಕರು ಗ್ರಂಥದ ಅರ್ಥದ ಮೇಲಿರುವ ನೈಜ್ಯ ಅಧಿಕಾರಿಗಳೆಂದು ಶತಕೋಟಿ ಮುಸ್ಲಿಮರು ನಂಬಿದ್ದಾರೆ. ಈ ತಪ್ಪು ತಿಳುವಳಿಕೆಯು, ಕುರ್‌ಆನಿನ ಸರಳ ಕಲ್ಪನೆಯನ್ನು ಜಗತ್ತಿನಾದ್ಯಂತ ಮುಗ್ಧ ಜನರು ಅರಿತುಕೊಳ್ಳುವ ರೀತಿಯನ್ನೇ ಬುಡಮೇಲು ಮಾಡಿದೆ ಮತ್ತು ಧಾರ್ಮಿಕರಿಗೆ ತಮ್ಮ ಮೇಲೆ ಸ್ವಾಧೀನಗಳಿಸುವ ಅವಕಾಶವನ್ನು ನೀಡಿದೆ. ಅರಬೀ ಭಾಷಾತಜ್ಞರು ಮತ್ತು ವಿದ್ವಾಂಸರಿಗೆ ಕುರ್‌ಆನಿನಲ್ಲಿ ಎಷ್ಟು ವಚನಗಳಿವೆ ಎಂಬ ಒಂದು ನಿಖರವಾದ ಸಂಖ್ಯೆಯನ್ನು ಸಹ ನೀಡಲು ಸಾಧ್ಯವಾಗಿಲ್ಲ. ಅರಬೀ ಧರ್ಮದ ಬಹುತೇಕ ಅನುಯಾಯಿಗಳು, ಕುರ್‌ಆನಿನಲ್ಲಿ 6666 ವಚನಗಳಿವೆ ಎಂದು ವಾದಿಸುವ ಮಟ್ಟಿಗೆ ತಪ್ಪುದಾರಿಗೆಳೆಯಲ್ಪಟ್ಟಿದ್ದಾರೆ. ವಾಸ್ತವದಲ್ಲಿ ಕುರ್‌ಆನಿನಲ್ಲಿ ಕೇವಲ 6348 ವಚನಗಳಿವೆ.

ಹೀಗಾಗಿ, "ಮಸ್ಜಿದ್" ಎಂಬ ಪದವನ್ನು ಉದ್ದೇಶಪೂರ್ವಕವಾಗಿ 'ಪ್ರಾರ್ಥನೆ'ಯ ಭೌತಿಕ ಸ್ಥಳಗಳಾಗುವಂತೆ ತಿರುಚಲಾಗಿದೆ. ಆರಾಧನೆಯ ಮನೆಗಳನ್ನು ನಿರ್ಮಿಸುವುದು ಈ ತಿರುಚುವಿಕೆಯ ಹಿಂದಿರುವ ಉದ್ದೇಶವಾಗಿತ್ತು ಮತ್ತು ಇದರಿಂದಾಗಿ ಬೆಳೆದು ಬರುತ್ತಿರುವ ತಮ್ಮ ಅರಬೀ ಧರ್ಮಕ್ಕೂ ಇತರ 'ಧರ್ಮಗಳಂತೆ' ಆರಾಧನೆಯ ಮನೆಗಳನ್ನು ಹೊಂದಿಕೊಳ್ಳಲು ಸಾಧ್ಯವಾಯಿತು.

ಮೂಲಪದ *'ಸಜದ'*ವು ವಿವಿಧ ಕ್ರಿಯಾಮಾಲೆಯ ಮಾದರಿಗಳಾಗಿ ರೂಪಗೊಳ್ಳುತ್ತದೆ, ಉದಾಹರಣೆಗೆ, *ಫಅಲ* ಎಂಬ ರೂಪದಲ್ಲಿ *ಸಜದ, ಫಅಲೂ* ರೂಪದಲ್ಲಿ *ಸಜದೂ, ಫುಅಲ್ ಲನ್* ರೂಪದಲ್ಲಿ *ಸುಜ್ಜದನ್, ಅಫ್‌ಉಲು* ರೂಪದಲ್ಲಿ *ಅಸ್ಜುದು, ಯಫ್‌ಉಲುನ್* ರೂಪದಲ್ಲಿ *ಯಸ್ಜುದುನ್, ಮಫ್‌ಇಲ್* ರೂಪದಲ್ಲಿ *ಮಸ್ಜಿದ್* ಎಂಬ ಪದಗಳು ರೂಪಗೊಳ್ಳುತ್ತದೆ.

ಪೂರ್ವಪ್ರತ್ಯಯ ಮತ್ತು ಅಂತ್ಯಪ್ರತ್ಯಯಗಳ ಬಳಕೆಯ ಭಾಷಾ ರೂಢಿಗಳಲ್ಲಿ ಧಾರ್ಮಿಕರು ನಡೆಸಿದ ಉಲ್ಲಂಘನೆಯನ್ನು, ಇತರ ವಚನಗಳಲ್ಲಿರುವ ಸಂಬಂಧಪಟ್ಟಂತಹ ಪದಗಳೊಂದಿಗಿನ ಒಂದು ಸರಳ ಹೋಲಿಕೆಯು ಬಹಿರಂಗಗೊಳಿಸುತ್ತದೆ.

ಉದಾಹರಣೆಗೆ, ಈ ಕೆಳಗಿನ ಪದಗಳನ್ನು ನೋಡಿ:

- *ಸಹರ* ಎಂಬ ಮೂಲಪದದ ಅರ್ಥವು *ಮಂತ್ರಿಸು* ಅಥವಾ *ವಶೀಕರಿಸು* ಎಂದಾಗಿದೆ. ಒಬ್ಬ ವಶೀಕರಿಸಲ್ಪಟ್ಟವನನ್ನು ಸೂಚಿಸಲು, ಆ ಮೂಲಪದವು *ಮ* ಎಂಬ ಪೂರ್ವಪ್ರತ್ಯಯವನ್ನು ಜೋಡಿಸಿಕೊಂಡು *ಮಸ್ಹೂರ್* (ವ್ಯಾಕರಣ ರೂಪಿಕೆ - ಮಫ್‌ಊಲ್) ಎಂಬ ಕ್ರಿಯಾಪದದ

ಧಾತುರೂಪವನ್ನು ಪಡೆದುಕೊಳ್ಳುತ್ತದೆ. *ಮಸ್ತೂರ್* ಒಂದು ಸ್ಥಳ ಅಥವಾ ಭೌತಿಕ ಕಟ್ಟಡವಲ್ಲ, ಬದಲಿಗೆ *ವಶೀಕರಿಸಲ್ಪಟ್ಟ* ಸ್ಥಿತಿಯಾಗಿದೆ.

15:14 ಹೇಳುತ್ತದೆ: ಅಲ್ಲಾಹನು ಆಕಾಶಕ್ಕೆ ಒಂದು ದ್ವಾರವನ್ನು ತೆರೆದು ಅದರ ಮೂಲಕ ನಮಗೆ ಅದಕ್ಕೆ ಏರಬಲ್ಲಂತೆ ಮಾಡಿದರೂ, 'ನಮ್ಮ ಕಣ್ಣುಗಳು ವಶೀಕರಿಸಲ್ಪಟ್ಟಿವೆ' ಎಂದು ನಾವು ಹೇಳಬಹುದು.

- *ಸತರ* ಎಂಬ ಮೂಲಪದದ ಅರ್ಥವು *ಬರೆಯುವುದು* ಅಥವಾ *ದಾಖಲಿಸುವುದು* ಎಂದಾಗಿದೆ. ಅಲ್ಲಾಹನ ಗ್ರಂಥವು ಅವನ ಆದೇಶಗಳೊಂದಿಗೆ ದಾಖಲಿಸಲ್ಪಟ್ಟಿವೆ ಎಂದು ಸೂಚಿಸಲು, ಆ ಮೂಲಪದವು *ಮ* ಎಂಬ ಪೂರ್ವಪ್ರತ್ಯಯವನ್ನು ಜೋಡಿಸಿಕೊಂಡು *ಮಸ್ತೂರ್* ಎಂಬ ಧಾತುರೂಪವನ್ನು ಪಡೆದುಕೊಳ್ಳುತ್ತವೆ. ಗ್ರಂಥವು *ಮಸ್ತೂರ್* ಅಲ್ಲ ಬದಲಿಗೆ ಅದರಲ್ಲಿ *ಲಿಖಿತಗೊಂಡಿರುವುದು ಮಸ್ತೂರ್* ಆಗಿದೆ.

  52:2 ಹೇಳುತ್ತದೆ, '*ಮತ್ತು ದಾಖಲಿಸಲ್ಪಟ್ಟಿರುವ ಕಾಯಿದೆಗಳು*'. ಅಂದರೆ, ಅಲ್ಲಾಹನ ಆದೇಶಗಳು ನಮ್ಮ ನಂಬಿಕೆಯ ಕಾಯಿದೆಗಳಾಗಿ ದಾಖಲಿಸಲ್ಪಟ್ಟಿದೆ.

- *ಶಹದ* ಎಂಬ ಮೂಲಪದದ ಅರ್ಥವು *ಸಾಕ್ಷಿಯಾಗುವುದು* ಎಂದಾಗಿದೆ. ಜನರು ಸಾಕ್ಷಿಯಾಗುವ ಸ್ಥಿತಿಯನ್ನು ಸೂಚಿಸಲು, ಆ ಮೂಲಪದವು *ಮ* ಎಂಬ ಪೂರ್ವಪ್ರತ್ಯಯವನ್ನು ಜೋಡಿಸಿಕೊಂಡು *ಮಶ್ಹೂದ್* ಎಂಬ ಧಾತುರೂಪವನ್ನು ಪಡೆದುಕೊಳ್ಳುತ್ತವೆ. ಆ ಕ್ರಿಯೆಯು ನಡೆದ ಸ್ಥಳವು *ಮಶ್ಹೂದ್* ಅಲ್ಲ ಬದಲಿಗೆ *ಸಾಕ್ಷಿಯಾಗಲ್ಪಡುವ* ಸ್ಥಿತಿಯು *ಮಶ್ಹೂದ್* ಆಗಿದೆ.

  11:103 ರಲ್ಲಿ ಹೇಳಲಾಗಿದೆ, 'ನಿಶ್ಚಯವಾಗಿಯೂ, ಇವುಗಳು ಪರಲೋಕದ ಶಿಕ್ಷೆಯನ್ನು ಭಯಪಡುವವರಿಗಿರುವ ನಿದರ್ಶನಗಳಾಗಿವೆ. ಅಂದು ಜನರು ಒಟ್ಟುಗೂಡಿಸಲ್ಪಡುವರು ಮತ್ತು ಅವರು ಸಾಕ್ಷಿಯಾಗಲ್ಪಡುವರು *(ಮಶ್ಹೂದ್)*.

- *ಸಜನ* ಎಂಬ ಮೂಲಪದದ ಅರ್ಥವು *ಸೆರೆಯಲ್ಲಿಡುವುದು* ಎಂದಾಗಿದೆ. *ಮಸ್ಜೂನಿ* ಎಂಬುವುದು *ಸೆರೆಯಲ್ಲಿಡಲ್ಪಡುವುದು* ಅಥವಾ ಸೆರೆವಾಸದ ಶಿಕ್ಷೆಯನ್ನು ಅನುಭವಿಸುವುದನ್ನು ಸಾಂಕೇತಿಸುತ್ತದೆ. *ಮಸ್ಜೂನಿ* ಎಂಬುವುದು ಜೈಲು ಎಂದಲ್ಲ.

- *ಸಕನ* ಎಂಬ ಮೂಲಪದದ ಅರ್ಥವು *ವಾಸಿಸುವುದು* ಅಥವಾ *ನೆಲೆಸುವುದು* ಎಂದಾಗಿದೆ. *ವಾಸಿಸಲ್ಪಡುವುದು* ಅಥವಾ ವಾಸಿಸುವ ಕ್ರಿಯೆಯು *ಮಸ್ಕುನ್* ಎಂದಾಗಿದೆ. ವಾಸಿಸುವ ಕಟ್ಟಡವನ್ನು *ಬುಯೂತ್* ಅಥವಾ ಮನೆ ಎಂದು ಕರೆಯಲಾಗುತ್ತದೆ, *ಮಸ್'ಕುನ್* ಎಂದಲ್ಲ.

ಯಾರಿಂದಲೂ ವಾಸಿಸಲ್ಪಡದ *(ಘೈರ ಮಸ್ಕೂನ್)*[62] ಮನೆಗಳನ್ನು *(ಬುಯೂತನ್)* ನೀವು ಪ್ರವೇಶಿಸುವುದರಲ್ಲಿ ಅಡ್ಡಿಯಿಲ್ಲ. (24:29)

ಅದೇ ರೀತಿ, ಕುರ್‌ಆನಿನ *ಸಜದ* ಎಂಬ ಪದಕ್ಕೆ *ಸಮ್ಮತಿಸುವುದು* ಅಥವಾ *ಒಪ್ಪಿಗೆ ನೀಡುವುದು* ಅಥವಾ *ಅಂಗೀಕರಿಸುವುದು* ಎಂದರ್ಥವಾಗಿದೆ. *ಮಸ್ಜಿದ್* ಎಂಬ ಪದವು 9:107, 17:1 ಮತ್ತು 17:7 ರಲ್ಲಿ ಕಂಡುಬರುತ್ತದೆ. ಈ ಪದವು ಆ *ಸಜದ* ಎಂಬ ಮೂಲಪದಕ್ಕೆ *ಮ* ಎಂಬ ಪೂರ್ವಪ್ರತ್ಯಯವನ್ನು ಜೋಡಿಸಿಕೊಂಡು ಪಡೆದುಕೊಂಡ ಧಾತುರೂಪವಾಗಿದೆ, ಅದರ ಅರ್ಥವು *ಸಮ್ಮತಿಸಲ್ಪಟ್ಟಿರುವುದು* ಎಂದಾಗಿದೆ, ಮತ್ತು ಕುರ್‌ಆನಿಗೆ ಸಂಬಂಧಿಸಿದಂತೆ ಅದು *ಸಮ್ಮತಿಸಲ್ಪಟ್ಟಿರುವ ಆದೇಶ* ಎಂಬುವುದನ್ನು ಸೂಚಿಸುತ್ತದೆಯೇ ಹೊರತು ಇದು ಜನರು ಸಾಷ್ಟಾಂಗವೆರಗಲು ಹೋಗಬೇಕಾದ ಸ್ಥಳವನ್ನು ಪ್ರತಿನಿಧಿಸುವುದಿಲ್ಲ. *ಮಸ್ಜಿದ್* ಪದದ ಬಹುವಚನವು *ಮಸಾಜಿದ್* ಆಗಿದೆ ಮತ್ತು ಅದು ನಮಗಾಗಿ ಅಲ್ಲಾಹನಿಂದ *ಸಮ್ಮತಿಸಲ್ಪಟ್ಟಿರುವ ಆದೇಶಗಳನ್ನು* ಸೂಚಿಸುತ್ತದೆ.

ಇವುಗಳು ಕುರ್‌ಆನಿನಲ್ಲಿರುವ ಉದಾಹರಣೆಗಳ ದೀರ್ಘ ಪಟ್ಟಿಯಿಂದಿರುವ ಕೆಲವು ಹೋಲಿಕೆಗಳಾಗಿವೆ. ಇತರ ಪದೋತ್ಪನ್ನಗಳಂತೆ *ಮಸ್ಜಿದ್* ಎಂಬುವುದು *ಮಫ್‌ಇಲ್* ಕ್ರಿಯಾಮಾಲೆಯ ಮಾದರಿಗೆ ಸೇರಿದೆ.

ಉದಾಹರಣೆಗೆ, 2:187 ರಲ್ಲಿ *ಮಸ್ಜಿದ್* ಎಂಬ ಪದವನ್ನು ಕಾಣಬಹುದು. ಸ್ವಯಂ-ಶಿಸ್ತನ್ನು[63] ಪಾಲಿಸುವ ವ್ಯಕ್ತಿಯು ಕೆಲವು ನಿಯಮಗಳನ್ನು ಲಕ್ಷಿಸಬೇಕಾದ ಅಗತ್ಯವಿದೆ. ಒರ್ವನು ಅಲ್ಲಾಹನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅವಲಂಬಿಸಿದರೆ, ಅವನು ತನ್ನ ವಿಶ್ವಾಸವನ್ನು ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶಗಳಿಗೆ ಸಮರ್ಪಿಸುತ್ತಾನೆ ಎಂದರ್ಥವಾಗಿದೆ. ಅಂತಹ ಕ್ರಿಯೆಗೆ ಕುರ್‌ಆನ್ *'ಆಕಿಫೂನ ಫಿಲ್ ಮಸಾಜಿದ್'* ಅಥವಾ *'ಸಮ್ಮತಿಸಲ್ಪಟ್ಟ ಆದೇಶಗಳಿಗೆ ಸಮರ್ಪಿಸಿಕೊಳ್ಳುವವರು'* ಎಂದು ಸೂಚಿಸುತ್ತದೆ.

> *ವಬ್ತಘೂ ಮಾ ಕತಬಲ್ಲಾಹು ಲಕುಮ್, ವಕುಲೂ ವಶ್ರಬೂ ಹತ್ತಾ ಯತಬಯ್ಯನ ಲಕುಮ್ ಹೈತುಲ್ ಅಬ್ಯಧು ಮಿನ್ ಹೈತಿಲ್ ಅಶ್ವದಿ ಮಿನಲ್ ಫಜ್ರಿ, ಸುಮ್ಮ ಅತಿಮ್ಮು-ಸಿಯಾಮ ಇಲ-ಲೈಲಿ ವಲಾ ತುಬಾಶಿರೂಹುನ್ನ ವ ಅನ್ತುಮ್ ಆಕಿಫೂನ ಫಿಲ್ ಮಸಾಜಿದಿ. ತಿಲ್ಕ ಹುದೂದುಲ್ಲಾಹಿ.* (2:187 ರ ಎರಡನೇ ಭಾಗ)
>
> ಮತ್ತು ಅಲ್ಲಾಹನು ನಿಮಗೆ ಆಜ್ಞಾಪಿಸಿರುವುದನ್ನು ಕೂಲಂಕಷವಾಗಿ ಅಧ್ಯಯನ ಮಾಡಿರಿ, ಮತ್ತು ಪ್ರಭಾತದಿಂದ ಬಿಳಿರೇಖೆಯು ಕರಿರೇಖೆಯಿಂದ ನಿಮಗೆ ಸ್ಪಷ್ಟವಾಗುವ ತನಕ ಆಸ್ವಾದಿಸಿರಿ. ನಂತರ, ರಾತ್ರಿಯವರೆಗೆ ಸ್ವಯಂ-ಶಿಸ್ತನ್ನು ಪಾಲಿಸಿರಿ. ಸಮ್ಮತಿಸಲ್ಪಟ್ಟಿರುವ ಆದೇಶಗಳಿಗೆ ನೀವು

[62] *ಘೈರ* ಎಂದರೆ ಅಲ್ಲದ ಅಥವಾ ಇಲ್ಲದ.

[63] *ಸಿಯಾಮ್* ಎಂಬ ಪದವು *ಉಪವಾಸ* ಎಂದಾಗಿ ಭ್ರಷ್ಟಗೊಳಿಸಲಾಗಿದೆ. ಉಪವಾಸದ ಪರಿಕಲ್ಪನೆಯು ಯಹೂದಿ ಧರ್ಮದಿಂದ ಕದ್ದಿರುವುದಾಗಿದೆ.

ಸಮರ್ಪಿಸಿಕೊಂಡಿರುವಾಗ ಅವರನ್ನು ಅಸಂತೋಷದ ದೃಷ್ಟಿಯಲ್ಲಿ ನೋಡಬೇಡಿರಿ. ಇವುಗಳು ಅಲ್ಲಾಹನ ಮೇರೆಗಳಾಗಿವೆ *(ಹುದೂದುಲ್ಲಾಹಿ)*. (2:187 ಎರಡನೇ ಭಾಗ)

ವಚನದ ಈ ಭಾಗವನ್ನು ಕೆಳಗಿನಂತೆ ಬೇರ್ಪಡಿಸಲಾಗಿದೆ:

ವ-ಅನ್ತುಮ್	ಮತ್ತು ನೀವು
ಆಕಿಫೂನ	ಸಮರ್ಪಿಸಿಕೊಳ್ಳುತ್ತಿದ್ದೀರಿ
ಫಿಲ್	ಅಲ್ಲಿ
ಮಸಾಜಿದ್	ಸಮ್ಮತಿಸಲ್ಪಟ್ಟ ಆದೇಶಗಳು

(ವಚನದ ಎರಡನೆಯ ಭಾಗದಲ್ಲಿರುವ) ಮೇಲಿನ ಸೂಚನೆಗಳು ಹೇಳುವುದು ಇಷ್ಟೆ - ಕುರ್‌ಆನಿನ ಜ್ಞಾನವು ದೊರೆತ ನಂತರ, ಅಲ್ಲಾಹನು ನಿಮಗೆ ಅವತರಿಸಿರುವುದನ್ನು ಕೂಲಂಕುಷವಾಗಿ ಅಧ್ಯಯನ ಮಾಡಲು ಮುಂದುವರಿಸಬೇಕಾಗಿದೆ. ಈ ಮಧ್ಯೆ ಅವನ ಆದೇಶಗಳು ನಿಮಗೆ ಸ್ಪಷ್ಟವಾಗುವ ತನಕ ಸಡಿಲಗೊಂಡು ಅಥವಾ ಆಸ್ವಾದಿಸುತ್ತಾ ಮುಂದುವರಿಯಬಹುದು. ಮತ್ತು ವ್ಯಕ್ತಿಯು *ಸಮ್ಮತಿಸಲ್ಪಟ್ಟಿರುವ ಆದೇಶಗಳಿಗೆ ತನ್ನನ್ನು ಸಮರ್ಪಿಸಿರುವಾಗ* ತನ್ನ ಪತ್ನಿಯೊಂದಿಗೆ ಸ್ನೇಹಪರ ಸಂಬಂಧಗಳನ್ನು ಸುಸ್ಥಿತಿಯಲ್ಲಿ ನಡೆಸಿಕೊಂಡು ಹೋಗಬೇಕು.

ಆದರೆ, (1) *ಆಕಿಫೂನ* ಅಂದರೆ *ನಿಷ್ಠೆವಹಿಸು* ಅಥವಾ *ಸಮರ್ಪಿಸು* ಎಂಬುವುದನ್ನು *ತಪಶ್ಚರ್ಯೆ ಮಾಡುವುದು* ಎಂದಾಗಿ, (2) *ಫಿಲ್-ಮಸಾಜಿದ್* ಅಂದರೆ *ಸಮ್ಮತಿಸಲ್ಪಟ್ಟ ಆದೇಶಗಳಲ್ಲಿ* ಎಂಬುವುದನ್ನು *ಮಸೀದಿಗಳಲ್ಲಿ* ಎಂದಾಗಿ ಮಾರ್ಪಡಿಸುವ ಮೂಲಕ ಧಾರ್ಮಿಕರು ಅಸ್ಥಿತ್ವದಲ್ಲೇ ಇರದಂತಹ ಅರ್ಥಗಳನ್ನು ಈ ಪದಗಳಿಗೆ ನಿಯೋಜಿಸಿದ್ದಾರೆ.

ವಾಕ್ಯಗಳನ್ನು ಒಗ್ಗೂಡಿಸಿದಾಗ, ಅದರ ಅರ್ಥವು: *ನೀವು ಮಸೀದಿಗಳಲ್ಲಿ ತಪಶ್ಚರ್ಯೆ ಮಾಡುವಾಗ* ಎಂಬುವುದಾಗಿದೆ ಎಂದು ಅವರು ಹೇಳುತ್ತಾರೆ. ಅವರು ಸಂದೇಶದ ಮೊದಲ ಭಾಗವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅದು ಹೀಗೆ ಹೇಳುತ್ತದೆ: *ನೀವು ಸಮ್ಮತಿಸಲ್ಪಟ್ಟಿರುವ ಆದೇಶಗಳಿಗೆ ಸಮರ್ಪಿತರಾಗಿರುವಾಗ, ರಾತ್ರಿಯ ಸಮಯದಲ್ಲಿ ನಿಮ್ಮ ಪತ್ನಿಯೊಂದಿಗೆ ಸ್ನೇಹಪರ ಸಂಬಂಧವನ್ನು ಕಾಯ್ದುಕೊಳ್ಳಬೇಕು.*

> *ಉಹಿಲ್ಲ ಲಕುಮ್ ಲೈಲತ-ಸ್ಸಿಯಾಮಿ ರಫಸ ಇಲಾ ನಿಸಾಇಕುಮ್, ಹುನ್ನ ಲಿಬಾಸುನ್ ಲಕುಮ್, ವ ಅನ್ತುಮ್ ಲಿಬಾಸುನ್ ಲಹುನ್ನ, ಅಲಿಮ-ಲ್ಲಾಹು ಅನ್ನಕುಮ್ ಕುನ್ತುಮ್ ತಖ್ತಾನೂನ ಅನ್ಫುಸಕುಮ್ ಫತಾಬ ಅಲೈಕುಮ್ ವಅಫಾ ಅನ್ಕುಮ್, ಫಲ್-ಆನ ಬಾಶಿರೂಹುನ್ನ* (2:187 ರ ಮೊದಲ ಭಾಗ)

> ಸ್ವಯಂ-ಶಿಸ್ತಿನ ರಾತ್ರಿಗಳಲ್ಲಿ ನಿಮ್ಮ ಪತ್ನಿಯರೊಂದಿಗೆ ಸ್ನೇಹಪರ ಸಂಬಂಧವನ್ನು ಕಾಯ್ದುಕೊಳ್ಳಲು ನಿಮಗೆ ಅನುಮತಿ ನೀಡಲಾಗಿದೆ. ಅವರು ನಿಮಗೆ ಉಡುಪುಗಳಾಗಿದ್ದಾರೆ ಮತ್ತು ನೀವು ಅವರಿಗೆ ಉಡುಪುಗಳಾಗಿದ್ದೀರಿ. ನೀವು ತಪ್ಪು ಮಾಡಿದ್ದೀರಿ ಎಂದು ಅಲ್ಲಾಹನು ತಿಳಿದಿರುವನು. ಆಗ ಅವನು ನಿಮ್ಮನ್ನು ಕ್ಷಮಿಸಿದನು ಮತ್ತು ನಿಮ್ಮ ಅಪರಾಧವನ್ನು ಮನ್ನ ಮಾಡಿದನು. ಆದ್ದರಿಂದ ಅವರಿಗೆ ಸುವಾರ್ತೆಯನ್ನು ನೀಡಿರಿ. (2:187 ಮೊದಲ ಭಾಗ)

ಈ ವಚನವು, ಒಬ್ಬ ವ್ಯಕ್ತಿಯು ಕುರ್‌ಆನಿನ ಜ್ಞಾನವನ್ನು ಪಡೆದುಕೊಳ್ಳುವಾಗ ಪಾಲಿಸಬೇಕಾದ ಸ್ವಯಂ ಶಿಸ್ತಿನ ಬಗ್ಗೆಯಾಗಿದೆ. ಆತನ ಪತ್ನಿಯು ಭಿನ್ನಾಭಿಪ್ರಾಯವನ್ನು ಹೊಂದಿದ್ದರೂ ಅವನು ಸ್ನೇಹಪರ ಸಂಬಂಧವನ್ನು ಕಾಯ್ದುಕೊಳ್ಳಬೇಕು - ನೀವು ಹೊಸದಾಗಿ ಪತ್ತೆ ಹಚ್ಚಿದ ಜ್ಞಾನಕ್ಕೆ ನೀವು ಸಮರ್ಪಿತರಾಗಿರುವುದು ಅವರಿಗೆ ಅಸಂತುಷ್ಟಕರವಾಗಿರಬಹುದು. ಅಲ್ಲಾಹನಿಂದ ಸಮ್ಮತಿಸಲ್ಪಟ್ಟಿರುವ ಆದೇಶಗಳಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಿರುವಾಗಲೂ *(ಆಕೆಫೂನ ಫೆಲ್-ಮಸಾಜಿದ್)*, ತನ್ನ ಅತ್ಯಂತ ನಿಕಟವರ್ತಿಯಾದ ಬಾಳಸಂಗಾತಿಯ ಕಡೆಗೂ ಅಸಂತೋಷದ ದೃಷ್ಟಿಯಲ್ಲಿ ನೋಡಬಾರದು. ಅಷ್ಟೇ. ಇದೊಂದು ಸರಳ ಸೂಚನೆಯಾಗಿದೆ.

ದೀನ್ ನಿರೂಪಿಸಲ್ಪಟ್ಟಿದೆ

ಕುರ್‌ಆನಿನ ಪ್ರಕಾರ ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶಗಳ *(ಮಸಾಜಿದಲ್ಲಾಹ್)* ಪರಿಕಲ್ಪನೆಯು, ಆರಾಧನಾ ಗೃಹದ ಸ್ಥಾಪನೆಗೆ ಅವಕಾಶ ನೀಡುವುದಿಲ್ಲ. ಇದು ಅಲ್ಲಾಹನು ನಿರೂಪಿಸದ ರೀತಿಯ *(ದೀನಿಲ್ಲಾಹ್)* ಭಾಗವೂ ಅಲ್ಲ ಹಾಗೂ ಅಲ್ಲಾಹನ ಕಾನೂನಿನ *(ಶಆಇರಲ್ಲಾಹ್)* [64] ಭಾಗವೂ ಅಲ್ಲ. ಸಮ್ಮತಿಸಲ್ಪಟ್ಟ ಆದೇಶದ ಪರಿಪಾಲನೆಯು ಮಾನವ ಮೌಲ್ಯಗಳ ಮೂಲಕ ಪ್ರಕಟವಾಗುತ್ತದೆ: **ತಮ್ಮ ಬುದ್ಧಿವಂತಿಕೆಯ ಮತ್ತು ವಿವೇಕತೆಯ ಆಧಾರದ ಮೇಲೆ ಜೀವನದಲ್ಲಿ ತಮಗೆ ಸೂಕ್ತವಾಗಿ ಅನ್ವಯಿಸುವ ವೈಯಕ್ತಿಕ ಕ್ರಿಯೆಗಳು ಮತ್ತು ಕರ್ಮಗಳನ್ನು ಕಂಡುಹಿಡಿದು – ಅದನ್ನು ಕಾರ್ಯರೂಪಕ್ಕೆ ತರುವುದು - ಈ ಆದೇಶಗಳ ಪಾಲನೆಯಾಗಿದೆ.**

ದೀನ್ ಎಂಬುವುದು ಪೂಜಾ ಮನೆಗಳ ಮೂಲಕ ತನ್ನದಾಗಿಸಿಕೊಳ್ಳುವಂತಹ ಆಚಾರಕ್ರಮಗಳಲ್ಲ ಎಂದು ಈಗ ಸ್ಪಷ್ಟವಾಗಿರಬೇಕು. ಸಮ್ಮತಿಸಲ್ಪಟ್ಟ ಜೀವನವನ್ನು 'ಸಂಸ್ಥೆಗಳ' ಕಟ್ಟಡಗಳ ಮೂಲಕ ತಮ್ಮದಾಗಿಸಿಕೊಳ್ಳಲು

[64] ಅಥವಾ *ಅಲ್ಲಾಹನ ಶಆಇರ*. ಇದು *ಶರೀಅ* ಎಂದು ಕರೆಯಲ್ಪಡುವ ಧಾರ್ಮಿಕರಿಂದ ರಚಿಸಲ್ಪಟ್ಟ ಅಸಹಿಷ್ಣುತೆಯ ಮತ್ತು ವಿಚಿತ್ರ ನಿಯಮಗಳ ಪಟ್ಟಿಯುಳ್ಳ ಪುಸ್ತಕಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಅವುಗಳ ಉಚ್ಚಾರಣೆಯಲ್ಲಿ ಸಾಮ್ಯತೆಯಿದ್ದರೂ, ಅವುಗಳು ಒಂದೇ ಅಲ್ಲವೆಂಬುವುದನ್ನು ದಯವಿಟ್ಟು ಗಮನಿಸಿರಿ.

ಸಾಧ್ಯವಿದೆ ಎಂದು ವಾದಿಸುವ ಕುತಂತ್ರವು ಎಲ್ಲಾ ಧರ್ಮಗಳಲ್ಲಿ ಸಾಮಾನ್ಯವಾಗಿದೆ, ಮತ್ತು ಧರ್ಮವನ್ನು ಕುರ್‌ಆನ್ ಸಮರ್ಥಿಸುವುದಿಲ್ಲ.

2:185-187 ರಲ್ಲಿರುವ ಹಾಗೆ ಕುರ್‌ಆನಿನ ಜ್ಞಾನವನ್ನು ಪಡೆದ ನಂತರ ಪಾಲಿಸಬೇಕಾದ ಸ್ವಯಂ-ಶಿಸ್ತಿನ ಸೂಚನೆಯು ಹೊಸತೇನಲ್ಲ. ಕುರ್‌ಆನ್ ಅವತರಿಸಲ್ಪಡುವ ಧೀರ್ಘಕಾಲದ ಮುಂಚೆಯೇ ಇಂತಹ ಆದೇಶಗಳು ಜನರಿಗೆ ನೀಡಲಾಗಿತ್ತು. ನಿಶ್ಚಯವಾಗಿಯೂ, ಆ ಕಾಲದ ಜನರಿಗೆ ಮಸೀದಿ ಎಂದರೇನು ಎಂಬುವುದು ತಿಳಿದೇ ಇರಲಿಲ್ಲ. ಅವರಿಗೆ ಅದು ಸಾಧ್ಯವಿರಲಿಲ್ಲ ಏಕೆಂದರೆ, *ಆಕಿಫೂನ ಫಿಲ್ ಮಸಾಜಿದ* ಎಂಬ ಬೋಧನೆಯನ್ನು ಒಂದು ಮಸೀದಿಯನ್ನು ಸೂಚಿಸುವುದಾಗಿ ವ್ಯಾಖ್ಯಾನಿಸಿದ್ದು ಅವರಲ್ಲ. ಅದೇ ಸೂಚನೆಯನ್ನು ಕುರ್‌ಆನ್ ಅರಬರಿಗೆ ಅವತರಿಸಿದ ನಂತರ ನೀಡಲ್ಪಟ್ಟಾಗ, ಅವರು ಒಂದು ಭೌತಿಕ ಕಟ್ಟಡದಲ್ಲಿ ತಪಶ್ಚರ್ಯೆ ಮಾಡಲು ತಮ್ಮ ಅನುಯಾಯಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ, ಒಂದು ತಿಂಗಳಿನ ಉಪವಾಸ ವಿಧಿಯನ್ನು ಪರಿಚಯಿಸಿದರು. ನಂತರ ಅದಲ್ಲದೇ, *'ನೀವು ಮಸೀದಿಗಳಲ್ಲಿ ತಪಶ್ಚರ್ಯೆ ಮಾಡುವಾಗ ನಿಮ್ಮ ಪತ್ನಿಯರೊಂದಿಗೆ ಲೈಂಗಿಕ ಸಂಪರ್ಕ ನಡೆಸಬಾರದು'* ಎಂಬುವುದು ಈ ವಚನದ ಅರ್ಥವಾಗಿದೆ ಎಂದು ವಾದಿಸುವ ಹಾಸ್ಯಾಸ್ಪದ ನಿಲುವನ್ನು ಅವರು ಹೊಂದಿದ್ದಾರೆ. ಅವರ ಈ ಸೂಚನೆಗೆ ಯಾವುದೇ ವಿವೇಕತೆಯು ಇಲ್ಲವಷ್ಟೆ.

ಸ್ವಯಂ-ಶಿಸ್ತು ಮುಸ್ಲಿಮರಿಗೆ ಏಕೆ ನಿರ್ದೇಶಿಸಲಾಗಿದೆ ಎಂದು 2:183 ವಚವು ಒಂದು ಕಾರಣವನ್ನು ನೀಡುತ್ತದೆ:

> ಓ ವಿಶ್ವಾಸಿಗಳೇ, ಒಂದು ನಿರ್ದಿಷ್ಟ ಸಂಖ್ಯೆಯ ದಿನಗಳಲ್ಲಿ ನೀವು ಲಕ್ಷ್ಯತೆಯುಳ್ಳವರಲ್ಲಾಗಬೇಕೆಂದು, ನಿಮಗಿಂತ ಮುಂಚಿನ ಜನರಿಗೆ ವಿಧಿಸಿದ ಹಾಗೆ ನಿಮಗೂ ಸ್ವಯಂ-ಶಿಸ್ತನ್ನು ವಿಧಿಸಲಾಗಿದೆ. (2:183 ಮತ್ತು 2:184 ರ ಮೊದಲ ಭಾಗ)

ಆದ್ದರಿಂದ, ಓರ್ವನು ತನ್ನಲ್ಲಿ ಸ್ವಯಂ-ಶಿಸ್ತನ್ನು ಪಾಲಿಸಬೇಕಾದ ಆದೇಶವು ಇತ್ತೀಚಿನ ಪರಿಚಯವಲ್ಲ. ಬದಲಿಗೆ, ಅಲ್ಲಾಹನ ಈ ಆದೇಶವನ್ನು, ಅಲ್ಲಾಹನ ಗ್ರಂಥಗಳನ್ನು ಸ್ವೀಕರಿಸಿದ ಹಿಂದಿನ ಜನರು ಸಹ ಇದನ್ನು ಪಾಲಿಸುತ್ತಿದ್ದರು. ಮುಗ್ಧ ಜನರ ಮೇಲೆ ಉಪವಾಸವನ್ನು ವಿಧಿಸಲು *ಸಿಯಾಮು* ಎಂಬ ಪದದ ಅರ್ಥವನ್ನು ತಿರುಚಿದರು. ಇಲ್ಲಿ ಮಾನವಕುಲಕ್ಕೆ ಮಾಡಲು ಅಗತ್ಯವಿರುವುದು ಇಷ್ಟೆ – ಜಿಬ್ರೀಲಿನ ಮುಖಾಂತರ (2:97) ಅವರಿಗೆ ಕುರ್‌ಆನ್ ಅವತರಿಸಲ್ಪಟ್ಟ ನಂತರ ಅಲ್ಲಾಹನ ಬಗ್ಗೆ ತಿಳುವಳಿಕೆಯು ಪ್ರಾರಾಪ್ತಗೊಂಡಾಗ (2:185-186) ಅವರು ಶಿಸ್ತನ್ನು ಪಾಲಿಸಬೇಕಾಗಿದೆ.[65]

[65] 2:97 ರಲ್ಲಿ ಮುಹಮ್ಮದರಿಗೆ ಹೀಗೆ ಹೇಳಲು ಆದೇಶಿಸಲಾಗಿದೆ, "ಜಿಬ್ರೀಲರನ್ನು ವಿರೋಧಿಸುವವರು ತಿಳಿಯಬೇಕಾಗಿರುವುದು ಏನೆಂದರೆ, ಅವರು (ಜಿಬ್ರೀಲ್) ಅಲ್ಲಾಹನ ಅನುವಾದದೊಂದಿಗೆ ಈ ಗ್ರಂಥವನ್ನು ನಿಮ್ಮ ಹೃದಯಗಳಿಗೆ ಇಳಿಸುತ್ತಾನೆ, ಅದು ಹಿಂದಿನ ಗ್ರಂಥಗಳನ್ನು ದೃಢೀಕರಿಸುತ್ತದೆ ಮತ್ತು ವಿಶ್ವಾಸಿಗಳಿಗೆ ಮಾರ್ಗದರ್ಶನ ಮತ್ತು ಸುವಾರ್ತೆಯನ್ನು ಒದಗಿಸುತ್ತದೆ". ಕುರ್‌ಆನ್ ಯಾರ ಹೃದಯಕ್ಕೂ ಇಳಿಸಲ್ಪಡಬಹುದು ಮತ್ತು ಅದು ವರ್ಷದ ಯಾವುದೇ ಸಮಯದಲ್ಲೂ ಸಂಭವಿಸಬಹುದು. ಮುಹಮ್ಮದರು

ಪ್ರತಿ ಬಾರಿಯೂ ಒಂದು ವಚನದ ಒಂದು ಪದವನ್ನು ತಿರುಚುವಾಗ, ಧಾರ್ಮಿಕರಿಗೆ ತಮ್ಮ ಬೆನ್ನು ಮುಚ್ಚಲು ಇತರ ಪದಗಳನ್ನೂ ತಿರುಚಲೇ ಬೇಕಾಗುತ್ತದೆ. ನಾವು ಒಂದು ಪರಿಕಲ್ಪನೆಯ ವಿವೇಚನಾಶೀಲತೆಯನ್ನು ಒಂದು ಹೋಲಿಕೆ ಮಾಡುವ ಸಲುವಾಗಿ, ಕುರ್‌ಆನಿನ ಸಂಪೂರ್ಣ ರಚನೆ ಮತ್ತು ಸಮಗ್ರತೆಯ ಒಳಗಡೆ ಪರೀಕ್ಷಿಸಿದ ಕೂಡಲೆ, ಧಾರ್ಮಿಕರ ತಿರುಚುವಿಕೆಯಿಂದ ಸಂದೇಶದ ಅರ್ಥವು ವಿಪಥಗೊಳ್ಳುವುದನ್ನು ಗಮನಿಸಬಹುದು.

ಮಸ್ಜಿದ್ ಎಂದರೆ 'ಸಮ್ಮತಿಸಲ್ಪಟ್ಟಿರುವುದು' ಎಂದಾಗಿದೆ

ಕೊನೆಯ ಪ್ರವಾದಿಯ ಸಮಯದ ದೀರ್ಘಕಾಲದ ಮುಂಚೆಯೇ ಅಸ್ತಿತ್ವದಲ್ಲಿದ್ದ ಜನರ ಬಗ್ಗೆ ಮಾತನಾಡುವಾಗ *ಮಸ್ಜಿದ್* ಎಂಬ ಪದವನ್ನು ಕುರ್‌ಆನ್ ಬಳಸಿದೆ ಮತ್ತು ಅವುಗಳು ಯಾವುದೇ ರೀತಿಯ ಮಸೀದಿಗಳಿಗೆ ಅಥವಾ ಕಟ್ಟಡಗಳಿಗೆ ಸಂಬಂಧಿಸಿದ ಉಲ್ಲೇಖವಲ್ಲ ಎಂದು ಧಾರ್ಮಿಕರು ಮತ್ತು ಪುರೋಹಿತರು ತಿಳಿದೇ ಇಲ್ಲದಂತೆ ವರ್ತಿಸುತ್ತಾರೆ. (ಅಲ್ಲಾಹನಿಗೆ ಸಮ್ಮತಿಸಿಕೊಂಡಿದ್ದ) ಇಬ್ರಾಹೀಮ್, ಇಸ್ಮಾಯೀಲ್, ಇಸ್ಹಾಕ್, ಯಾಕೂಬ್, ಮೂಸಾ ಮತ್ತು ಈಸಾ ಇವರಾರೂ ಇಸ್ಲಾಮಿನಲ್ಲಿ ಮಾನ್ಯತೆಯ ಅರ್ಹತೆಯೇ ಹೊಂದಿರದವರಂತೆ ಧಾರ್ಮಿಕರು ಇವರ ಇತಿಹಾಸದ ಮಹತ್ವವನ್ನು ಸಂಪೂರ್ಣವಾಗಿ ಕಡೆಗಣಿಸುತ್ತಾರೆ. ಅರಬರು ಮುಸ್ಲಿಮರಾಗುವ ಮುಂಚೆಯೇ (ಅಂದರೆ, ಪ್ರವಾದಿ ಮುಹಮ್ಮದರ ಆಗಮನಕ್ಕೆ ಮುಂಚೆ), ಅಲ್ಲಾಹನ ಆದೇಶಗಳಿಗೆ ತಮ್ಮನ್ನು ಸಮ್ಮತಿಸಿಕೊಂಡಂತಹ ಅನೇಕರು ಇದ್ದರು. ಹಾಗೆಯೇ, ಅವರಲ್ಲಿ ಈ ಆದೇಶಗಳನ್ನು ಹಿಯ್ಯಾಳಿಸಿದವರೂ ಅನೇಕರಿದ್ದರು.

> *ವಲ್ಲಧೀನ ಇತ್ತಹದೂ <u>ಮಸ್ಜಿದನ್</u> ಧಿರಾರನ್ ವ ಕುಫ್ರನ್, ವ ತಫ್ರೀಕನ್ ಬೈನಲ್ ಮೂಮಿನೀನ ವ ಇರ್ಶಾದನ್ ಲಿಮನ್ ಹಾರಬಲ್ಲಾಹ ವ ರಸೂಲಹು <u>ಮಿನ್ ಕಬ್ಲು</u>* (9:107)
>
> ಮತ್ತು ಅವರು, ಹಾನಿಯನ್ನುಂಟು ಮಾಡಲಿಕ್ಕೂ ಮತ್ತು ಸತ್ಯವನ್ನು ನಿಷೇಧಿಸಲಿಕ್ಕೂ ಮತ್ತು ಸತ್ಯವಿಶ್ವಾಸಿಗಳೊಳಗೆ ಒಡಕ್ಕನ್ನುಂಟು ಮಾಡಲಿಕ್ಕೂ ಮತ್ತು ಅಲ್ಲಾಹನ ಹಾಗೂ ಅವನ <u>ಮುಂಚಿನ</u> ಸಂದೇಶವಾಹಕರ ವಿರುದ್ಧ ಹೋರಾಡಿದವರಿಗೆ ಸುಲಭಸಾಧ್ಯ ಮಾಡಿಕೊಡಲು <u>ಸಮ್ಮತಿಸಲ್ಪಟ್ಟವುಗಳನ್ನು</u> ತಮ್ಮದಾಗಿಸುತ್ತಾರೆ. (9:107)

ಸಂದೇಶವಾಹಕರಾದ 13 ವರ್ಷಗಳ ನಂತರವೇ *ಹಿಜಿರಿ ಕ್ಯಾಲೆಂಡರ್* ಆವಿಷ್ಕಾರಗೊಂಡಿತ್ತು. ಆದ್ದರಿಂದ, ರಂಜಾನ್ ತಿಂಗಳು ಕುರ್‌ಆನ್ ಅವತೀರ್ಣಗೊಂಡ ಸಮಯದಲ್ಲಿ ಇರಲೇ ಇಲ್ಲ.

ಮಿನ್ ಕಬ್ಲು ಎಂಬ ಪದಗಳು ಗತಿಸಿಹೋದ ಕ್ರಿಯೆಯನ್ನು ಸೂಚಿಸುತ್ತದೆ (ಅಕ್ಷರಶಃ - ಹಿಂದಿನ). ಅಂದರೆ, ಕೊನೆಯ ಪ್ರವಾದಿಯ ಸಮಯಕ್ಕಿಂತ ಮುಂಚೆ, *ಮಸ್ಜಿದನ್* [66] ಅಥವಾ ಅಲ್ಲಾಹನ ಆದೇಶವನ್ನು ಎತ್ತಿಹಿಡಿಯುವುದಕ್ಕೆ ತಮ್ಮ ಸಮ್ಮತಿಯನ್ನು ನೀಡುವುದರಲ್ಲಿ ಸಮಸ್ಯೆ ಮತ್ತು ಅಪನಂಬಿಕೆಯನ್ನು ಸೃಷ್ಟಿಸುವ ಸಲುವಾಗಿ ಅದನ್ನು ಭ್ರಷ್ಟಗೊಳಿಸಲಾಯಿತು.

ಅಲ್ಲಾಹನು ಮತ್ತು ಅವನ ಸೇವಕರ ನಡುವಿನ ಸಮ್ಮತಿಯನ್ನು ಸೂಚಿಸಲು ಕುರ್‌ಆನ್ *ಮಸ್ಜಿದ್* ಎಂಬ ಪದವನ್ನು ಸಾಮಾನ್ಯವಾಗಿ ಬಳಸುತ್ತದೆ ಮತ್ತು ಈ ಪದವು ಮುಹಮ್ಮದರ ಸಮಯದ ಬಹಳ ಮುಂಚೆಯೇ ಇತರ ಜನರಿಗೆ ಬಳಕೆಯಾಗಿದೆ.

ಅದಲ್ಲದೆ, ಕುರ್‌ಆನ್ ಅವತೀರ್ಣಗೊಳ್ಳುವುದಕ್ಕಿಂತ ಮೊದಲು ಮುಸ್ಲಿಮರಿಂದ ಬೆಂಬಲಿಸಲ್ಪಟ್ಟ ಯಾವುದೇ ಭೌತಿಕ ಮಸೀದಿಯ ಅಸ್ತಿತ್ವಕ್ಕೆ ಯಾವುದೇ ಐತಿಹಾಸಿಕ ಪುರಾವೆಗಳಿಲ್ಲ. ಯಹೂದಿಗಳು ಮತ್ತು ಕ್ರೈಸ್ತರು ತಮ್ಮ ಆರಾಧನಾಲಯಗಳನ್ನು ಸಿನಗಾಗ್ ಮತ್ತು ಚರ್ಚುಗಳೆಂದು ಕರೆಯುತ್ತಿದ್ದರು. ಧಾರ್ಮಿಕರ ಪ್ರಕಾರ, ಕುರ್‌ಆನ್ ಕೊನೆಯ ಪ್ರವಾದಿಗೆ ಅವತೀರ್ಣಗೊಂಡ ನಂತರ ಮಾತ್ರವೇ ಜಗತ್ತಿಗೆ ಇಸ್ಲಾಂ ಪರಿಚಯಿಸಲಾಯಿತು ಎಂದಾಗಿದೆ (ಆದರೆ ವಾಸ್ತವದಲ್ಲಿ, ನಿಜವಾದ ಇಸ್ಲಾಂ ಇಬ್ರಾಹೀಮರಿಂದ ಚಾಲನೆಗೊಂಡಿತು ಎಂದು ಕುರ್‌ಆನ್ ಹೇಳುತ್ತದೆ, ಅಂದರೆ ಮೂಸಾರ ಕಾಲಕ್ಕಿಂತಲೂ ದೀರ್ಘಕಾಲದ ಮುಂಚೆ).

ಕೊನೆಯ ಪ್ರವಾದಿಯು, ತಮಗೆ ದಿವ್ಯವಾಣಿ ತಲುಪಿದ ಹನ್ನೆರಡು ವರ್ಷಗಳ ನಂತರ, ತಮ್ಮ ಸಾಕುಪ್ರಾಣಿಯಾದ ಒಂದು ಒಂಟೆಯು ಆಯ್ಕೆ ಮಾಡಿದ ವಿಶೇಷ ಸ್ಥಳದಲ್ಲಿ ಮೊತ್ತ ಮೊದಲ ಮಸೀದಿಯನ್ನು ನಿರ್ಮಿಸಿದರೆಂದು ಆರೋಪಿಸುತ್ತಾ ಅರಬೀ ಪಂಡಿತರು ಹೆಮ್ಮೆ ಪಡುತ್ತಾರೆ. ಮತ್ತೊಂದೆಡೆ, ವಿಧ್ಯುಕ್ತ ಪ್ರಾರ್ಥನೆಯ ದಿಕ್ಕನ್ನು ಜೆರುಸಲೆಮಿನಿಂದ ಮಕ್ಕಾದ ಪವಿತ್ರ ಮಸೀದಿಗೆ ಬದಲಾವಣೆ ಮಾಡಲು ಅಲ್ಲಾಹನು ಕೊನೆಯ ಪ್ರವಾದಿಗೆ ಆದೇಶ ನೀಡಿದನು ಎಂಬ ಅರ್ಥದಲ್ಲಿ ಕುರ್‌ಆನಿನ 2:144 ವಚನವನ್ನು ಚಿತ್ರೀಕರಿಸುತ್ತಾರೆ, ಆದರೆ ವಾಸ್ತವದಲ್ಲಿ ಅವರೇ ಸ್ವಯಂ ಒಪ್ಪಿಕೊಳ್ಳುವಂತೆ ಆ ಸಮಯದಲ್ಲಿ ಮಕ್ಕಾದಲ್ಲಿ ಯಾವುದೇ ಭೌತಿಕ ಮಸೀದಿಯು ಇರಲಿಲ್ಲ ಎಂದಾಗಿದೆ. ಇಂತಹ ವೈರುಧ್ಯಗಳನ್ನು ವಿವರಿಸಲು ಬಹುಶಃ ಕೇವಲ ಧಾರ್ಮಿಕರು ಸಮರ್ಥರಾಗಿದ್ದಾರೆ.

ಅರಬೀ ಧರ್ಮದ ಯಾವುದೇ ಇತಿಹಾಸದಲ್ಲಿ ನೂಹ್, ಇಬ್ರಾಹೀಮ್, ಮೂಸಾ ಮತ್ತು ಈಸಾರ ಕಾಲದಲ್ಲಿ ಮಸೀದಿ ಎಂಬ ಯಾವುದೇ ಭೌತಿಕ ಕಟ್ಟಡಗಳು ಅಥವಾ ಅಲ್ಲಾಹನ ಮಸೀದಿಗಳು ಅಥವಾ ಪವಿತ್ರ ಮಸೀದಿಗಳು ಇದ್ದುದಾಗಿ ಉಲ್ಲೇಖವಿಲ್ಲ.

ನಾವು ಈಗ 9:107 ರ ಉಳಿದ ಭಾಗವನ್ನು ಉಲ್ಲೇಖಿಸೋಣ:

---

[66] *ಮಸ್ಜಿದನ್* ಎಂಬುವುದು ಕರ್ಮಪದವಾಗಿ - ಪುಲ್ಲಿಂಗ, ಏಕವಚನ ನಾಮಪದವಾಗಿದೆ.

ವಲ ಯಹ್ಲಿಫುನ್ನ ಇನ್ ಅರದ್ನಾ ಇಲ್ಲ-ಲ್-ಹುಸ್ನ ವಲ್ಲಾಹು ಯಶ್ಹದು ಇನ್ನಹುಮ್ ಲ-ಕಾಧಿಬೂನ್

> ನಮ್ಮ ಉದ್ದೇಶವು ಒಳ್ಳೆಯದಾಗಿತ್ತೇ ವಿನಃ ಬೇರೇನೂ ಅಲ್ಲವೆಂದು ಅವರು ಪ್ರಮಾಣ ಮಾಡುತ್ತಾ ಹೇಳುತ್ತಾರೆ. ಅವರು ಖಂಡಿತವಾಗಿಯೂ ಸುಳ್ಳುಗಾರರೆಂದು ಅಲ್ಲಾಹನು ಸಾಕ್ಷಿಯಾಗಿದ್ದಾನೆ.

ಜನರು ಮಸೀದಿಗಳ ಬಗ್ಗೆ ಸುಳ್ಳನ್ನಾಡುತ್ತಿದ್ದರು ಎಂದು ಹೇಳುವುದು ಅವೈಚಾರಿಕವಾಗಿದೆ. ಬದಲಾಗಿ, ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶಗಳನ್ನು *(ಮಸಾಜಿದಲ್ಲಾಹ್)* ಪಾಲಿಸಲು ತಾವು ಸಮ್ಮತಿಸಿರುವದರ ಬಗ್ಗೆ ಅವರು ಸುಳ್ಳು ಹೇಳುತ್ತಿದ್ದರು ಎಂದು ಸುರಕ್ಷಿತವಾಗಿ ತಿಳಿದುಕೊಳ್ಳಬಹುದು.

ತಮ್ಮ ಉದ್ದೇಶವು ಗೌರವಾರ್ಹವಾಗಿದೆ ಎಂದು ವಚನದಲ್ಲಿ ಉಲ್ಲೇಖಿಸಲ್ಪಟ್ಟ ಜನರು ಹೇಳಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶಗಳ ಬಗ್ಗೆ ಸುಳ್ಳು ಹೇಳುತ್ತಿದ್ದಾರೆಂದು ಅಲ್ಲಾಹನು ಸಾಕ್ಷಿ ನುಡಿಯುತ್ತಾನೆ. ಯಾರಾದರೂ ಒಂದು ಭೌತಿಕ ಮಸೀದಿಯನ್ನು ನಿಂದನೆಗೊಳಿಸುವುದು ಹೇಗೆ ಎಂಬುದನ್ನು ಕಲ್ಪಿಸುವುದು ಕಷ್ಟಕರವಾಗಿದೆ. ಅದು ಹೀಗೆ ಮುಂದುವರಿಯುತ್ತದೆ:

> *ಲಾ-ತಕುಮ್ ಫೀಹಿ ಅಬದನ್, ಲ-ಮಸ್ಜಿದುನ್ ಉಸ್ಸಿಸ ಅಲ-ತ್ತಖ್ವಾ ಮಿನ್ ಅವ್ವಲಿ ಯೌಮಿನ್ ಅಹಕ್ಕು ಅನ್ ತಕೂಮ ಫೀಹಿ, ಫೀಹಿ ರಿಜಾಲುನ್ ಯುಹಿಬ್ಬೂನ ಅನ್ ಯತತಹ್ಹರೂ, ವಲ್ಲಾಹು ಯುಹಿಬ್ಬುಲ್ ಮುತತಹ್ಹಿರೀನ್*(9:108)
>
> ಶಾಶ್ವತವಾಗಿ ಅದರಲ್ಲಿ ಉಳಿದುಕೊಳ್ಳಬೇಡಿ. ಖಂಡಿತವಾಗಿಯೂ *ಸಮ್ಮತಿಸಿಕೊಳ್ಳುವುದು* ಎಂಬುವುದು ಸತ್ಯದ ಮೊದಲ ದಿನದಿಂದಲೇ ಅದರ ಪಾಲನೆಯ ಮೇಲೆ ಆಧಾರಿಸಿದೆ, ಅದರಲ್ಲಿ ಭಾಗವಹಿಸುವುದು ನಿಮಗೆ ಸುಭದ್ರವಾಗಿದೆ. ಅವರಲ್ಲಿ ತಮ್ಮನ್ನು ಶುದ್ಧೀಕರಿಸಿಕೊಳ್ಳಲು ಬಯಸುವವರೂ ಇದ್ದಾರೆ. ಮತ್ತು ಅಲ್ಲಾಹನು ತಮ್ಮನ್ನು ಶುದ್ಧೀಕರಿಸುವವರನ್ನು ಮೆಚ್ಚುತ್ತಾನೆ. (9:108)

ಸಮ್ಮತಿಸಲ್ಪಟ್ಟ ಆದೇಶಕ್ಕೆ ಅಥವಾ ಮಸ್ಜಿದ್'ಗೆ ತಮ್ಮ ಸಮ್ಮತಿಯನ್ನು ನೀಡುವುದು ಎಂಬುವುದರ ವಾಸ್ತವಿಕತೆಯು 9:108 ರಲ್ಲಿ ಸ್ಪಷ್ಟವಾಗುತ್ತದೆ. ಅದು 'ಜನರನ್ನು ಶುದ್ಧೀಕರಿಸುತ್ತದೆ'. ತಮ್ಮ ಭೌತಿಕ ಮಸೀದಿಗಳು ಜನರನ್ನು ಶುದ್ಧೀಕರಿಸುತ್ತವೆ ಎಂದು ಅರಬೀ ಧಾರ್ಮಿಕರು ವಾದಿಸುತ್ತಾರಾದರೆ, ಮಂದಿರಗಳೂ, ಸಿನಗಾಗ್'ಗಳೂ ಮತ್ತು ಚರ್ಚುಗಳೂ ಆ ಕೆಲಸವನ್ನು ಮಾಡುತ್ತವೆಯೆಂದು ಹೇಳುವುದರಲ್ಲಿ ಏನು ತಪ್ಪಿದೆ?

ಲ-ಮಸ್ಜಿದುನ್ ಉಸ್ಸಿಸ ಅಲ-ತ್ತಖ್ವಾ ಮಿನ್ ಅವ್ವಲಿ ಯೌಮಿನ್ ಅಹಕ್ಕು, ಎಂದು ಹೇಳುವ 9:108 ವಚನವನ್ನು ಗಮನಿಸುವುದು ಕೂಡ ಮುಖ್ಯವಾಗಿದೆ:

ಲ-ಮಸ್ಜಿದುನ್ ಲಾ ಖಂಡಿತವಾಗಿಯೂ ಸಮ್ಮತಿಕೊಳ್ಳುವುದು

ಉಸ್ಸಿಸ ಆಧಾರಿಸಿದೆ

ಅಲ-ತ್ತಖ್ವಾ	ಪಾಲನೆಯ ಮೇಲೆ
ಮಿನ್	ಇಂದ
ಅವ್ವಲಿ	ಮೊದಲ
ಯೌಮಿನ್	ದಿನ
ಅಹಕ್ಕು	ಸತ್ಯದ

ಮಿನ್ ಅವ್ವಲಿ ಯೌಮಿನ್ ಅಹಕ್ಕು ಅನ್ ತಕೂಮ ಫೀಹಿ ಎಂಬ ವಾಕ್ಯದ ಅರ್ಥವು *'ಸತ್ಯದ ಮೊದಲ ದಿನದಿಂದಲೇ ಅದರ ಪಾಲನೆಯ ಮೇಲೆ ಆಧಾರಿಸಿದೆ'* ಎಂದಾಗಿದೆ. ಇದನ್ನು ಧಾರ್ಮಿಕರಿಗೆ ಸಹ ವಿವರಿಸಲು ಸಾಧ್ಯವಿಲ್ಲ. *'ಸತ್ಯದ ಮೊದಲ ದಿನದಿಂದಲೇ'* ಎಂಬ ಪದಗುಚ್ಛವು ಸೂಚಿಸುತ್ತಿರುವುದು - ಒಂದು ಸರಿಯಾದ ಕಟ್ಟಡವನ್ನು ನಿರ್ಮಿಸಲು ನಕ್ಷೆಗಾರರನ್ನು ಮತ್ತು ಗುತ್ತಿಗೆದಾರರನ್ನು ಆಯ್ಕೆಮಾಡುವುದನ್ನೋ? ಅಥವಾ ಕುರ್‌ಆನನ್ನು ಅವಲೋಕನ ಮಾಡಿದ ನಂತರ ಅದರಲ್ಲಿರುವ 'ಸತ್ಯ'ಕ್ಕೆ ನಮ್ಮ ಸಮ್ಮತಿಯನ್ನು ನೀಡುವುದೋ? 'ಸತ್ಯ' ಎಂಬುವುದನ್ನು ಯಾರೂ ಕೂಡ ಆರಾಧನಾ ಮನೆಗಳಲ್ಲಿ ಕಾಣಲು ಸಾಧ್ಯವಿಲ್ಲ.

ವಾಸ್ತವದಲ್ಲಿ, ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶಗಳು ಅಥವಾ ಶಾಸನವು ಸತ್ಯದೊಂದಿಗೆ ಸ್ಥಾಪಿಸಲಾದ ನಂತರ, ಅದನ್ನು ನಿಂದಿಸಬಾರದು ಅಥವಾ ದುರುಪಯೋಗಗೊಳಿಸಬಾರದು ಎಂಬುವುದರ ಪ್ರಾಮುಖ್ಯತೆಯನ್ನು ಈ ವಚನಗಳು ಒತ್ತಿಹೇಳುತ್ತಿವೆ. ಈ ಆದೇಶಗಳು ಒಳಗೊಂಡಿರುವುದೇನೆಂದರೆ – ನಮ್ಮ ಜೀವನದ ರೂಢಿಯಾಗಿ ನಮ್ಮ ಸಮಾಜದಲ್ಲಿರುವ ನಮ್ಮ ಮಾತಾಪಿತರು, ಕುಟುಂಬಗಳು, ಸಂಬಂಧಿಕರು, ಆಪ್ತ ಗೆಳೆಯರು, ಅನಾಥರು, ಬಡವರು ಹಾಗೂ ಕೊರತೆಯಿರುವವರಿಗಾಗಿ ಉತ್ತಮ ಕ್ರಿಯೆಗಳನ್ನು ಮಾಡುವುದಕ್ಕೆ ನಾವು ವೈಯುಕ್ತಿಕವಾಗಿ ಬದ್ಧರಾಗುವುದು ಮತ್ತು ನಾವು ನೀಡಿದ ಭರವಸೆಯನ್ನು ಈಡೇರಿಸುವುದು ಮತ್ತು ನಮ್ಮ ಕರ್ತವ್ಯಗಳನ್ನು ಪೂರೈಸಲು ಮುಂದುವರಿಸುವುದು ಹಾಗೂ ಅವುಗಳನ್ನು ನಿಷ್ಕಳಂಕವಾಗಿರಿಸುವುದಾಗಿದೆ. ನಾವು ಪ್ರತಿಕೂಲ, ಸಂಕಷ್ಟ ಮತ್ತು ಯುದ್ಧದ ಸಂದರ್ಭ ಎದುರಾದರೂ ಸಹ ದೃಢವಾಗಿರಬೇಕು.

ಕೆಳಗಿನವುಗಳು ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳ ಮೂಲಭೂತ ಅಂಶಗಳಾಗಿವೆ:

- **ಕಣ್ಣಿಗೆ ಕಾಣದಂತಹ ಏಕದೇವನ ಮೇಲೆ ವಿಶ್ವಾಸ**
- **ಸಾವಿನ ನಂತರದ ಜೀವನದಲ್ಲಿ ವಿಶ್ವಾಸ**
- **ಈ ಪ್ರಪಂಚದ ಜೀವಿತಾವಧಿಯಲ್ಲಿ ಉತ್ತಮ ಕಾರ್ಯಗಳನ್ನು ಮಾಡುವುದು**

ಬರೇ ಇಷ್ಟೇ ಕುರ್‌ಆನಿನ 2:62 ರಲ್ಲಿ ಹೇಳಲಾಗಿದೆ. ಇವುಗಳನ್ನು ಯಾವುದೇ ಮಸೀದಿಗಳಿಲ್ಲದೆ ಅಥವಾ ಆರಾಧನಾಲಯಗಳಿಲ್ಲದೆ ಯಾರಿಗೂ ಮಾಡಬಹುದಾಗಿವೆ. ಅವುಗಳನ್ನು ಯಾರು ಲಕ್ಷಿಸುತ್ತಾರೋ ಅಥವಾ ಪಾಲಿಸುತ್ತಾರೋ ಅವರಿಗೆ ಯಾವುದೇ ಭಯವೂ ಹಾಗೂ ದುಃಖವೂ ಇಲ್ಲ ಎಂದು ಅದೇ ವಚನದಲ್ಲಿ ಭರವಸೆಯನ್ನು ನೀಡಲಾಗಿದೆ.

ಏಕದೇವನಲ್ಲಿ, ಪರಲೋಕದಲ್ಲಿ ಹೇಗೆ ವಿಶ್ವಾಸವಿರಿಸುವುದು ಮತ್ತು ಸಕರ್ಮಗಳನ್ನು ಮಾಡುತ್ತಾ ತಮ್ಮ ಕರ್ತವ್ಯಗಳನ್ನು ಹೇಗೆ ನಿಭಾಯಿಸುವುದು ಎಂದು ತಿಳಿದುಕೊಳ್ಳಲು ಯಾರಿಗೂ ಧಾರ್ಮಿಕ 'ತಜ್ಞರನ್ನು' ಹುಡುಕಿಕೊಂಡು ಯಾವುದೇ ಭೌತಿಕ ಮಸೀದಿಗೆ ಹೋಗುವ ಅವಶ್ಯಕತೆಯಿಲ್ಲ.

'ಸಮ್ಮತಿಸಲ್ಪಟ್ಟ ಆದೇಶ'ಗಳು ವಿಧಿಸಲಾಗಿದೆ

ಧಾರ್ಮಿಕರು ತಮ್ಮ ಭವ್ಯ ಯೋಜನೆಯಲ್ಲಿ ಮೊದಲು *ಸಮ್ಮತಿಸಲ್ಪಟ್ಟ ಆದೇಶ* ಎಂಬ ಅರ್ಥವನ್ನು ನೀಡುವ *ಮಸ್ಜಿದ್* ಎಂಬ ಪದವನ್ನು ಭೌತಿಕ *ಮಸೀದಿ* ಎಂದಾಗುವಂತೆ ತಿರುಚಿದರು.

ನಂತರ ಅದೇ ಪದಕ್ಕೆ *ಅಲ್ಲಾಹ್* ಎಂಬ ಅಂತ್ಯಪ್ರತ್ಯಯವು ಸೇರಿಕೊಂಡ ಪದವನ್ನೂ ತಿರುಚಿದರು. ಕುರ್‌ಆನಿನಲ್ಲಿ ಬಳಕೆಯಾದ *ಮಸಾಜಿದಲ್ಲಾಹ್* ಎಂಬ ಪದದ ಅರ್ಥವು *ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳು* ಎಂದಾಗಿದೆ. ಕುರ್‌ಆನಿನಲ್ಲಿ ಒಂದು ಪದಕ್ಕೆ ಅಂತ್ಯಪ್ರತ್ಯಯಗಳನ್ನು ಸೇರಿಸುವ ಇದೇ ತರಹದ ಹಲವಾರು ಸಂದರ್ಭಗಳಿವೆ. ಉದಾಹರಣೆಗೆ, *ದೀನಿಲ್ಲಾಹ್* ಎಂಬುವುದು ಅಲ್ಲಾಹನಿಂದ ನಿರೂಪಿಸಲಾದ ಜೀವನ ರೀತಿಯನ್ನು ಸೂಚಿಸುತ್ತದೆ. ಆದರೆ ಧಾರ್ಮಿಕರು ಅದನ್ನು *ಅಲ್ಲಾಹನ ಧರ್ಮ* ಎಂದಾಗುವಂತೆ ತಿರುಚಿದರು.

ಮಕ್ಕಾದಲ್ಲಿ - ಮುಹಮ್ಮದರ ಕಾಲದ ನಂತರ ಧಾರ್ಮಿಕರಿಂದ ಅಥವಾ ಮುಹಮ್ಮದರ ಕಾಲದ ಮುಂಚಿತವಾಗಿ ತಮ್ಮ ಪೂರ್ವಜರಿಂದ - ಪರ್ವತಬಂಡೆಗಳನ್ನು ಒಡೆದು ನಿರ್ಮಿಸಲ್ಪಟ್ಟ ಒಂದು ಕಲ್ಲಿನ ಮನೆಯನ್ನು - ಪವಿತ್ರ ಮಸೀದಿಯೆಂದು ಘೋಷಿಸಿದರು. ಇದಲ್ಲದೆ, ತಾವೇ ಕಲ್ಪಿಸಿಕೊಂಡ 'ಪವಿತ್ರ ನೀರು' ಅದು ಹರಿಯಬೇಕಾದ ರೀತಿಯಲ್ಲಿ ಹರಿಯದ ಕಾರಣ, ಆಧುನಿಕ ಅರಬರು ಈ 'ಪವಿತ್ರ' ಸ್ಥಳದ ಕೆಳಗಡೆ ನೀರಿನ ಪಂಪುಗಳನ್ನು ಅನುಸ್ಥಾಪಿಸಿದರು ಹಾಗು ಆ ನೀರನ್ನೂ ಪವಿತ್ರವೆಂದು ಘೋಷಿಸಿದರು.

9:97 ಪ್ರಕಾರ: *ಅರಬರು ಅಪನಂಬಿಕೆ ಮತ್ತು ಬೂಟಾಟಿಕೆಯಲ್ಲಿ ಕಠೋರರಾಗಿದ್ದಾರೆ.* ಧಾರ್ಮಿಕರಿಗೆ ಕುರ್‌ಆನಿನ ಈ ಹೇಳಿಕೆಯನ್ನು ಅಳಿಸಿ ಹಾಕಲು ಸಾಧ್ಯವಿಲ್ಲ. ಅವರು ಏನೇ ಮಾಡಲಿ ಅವರು ತಮ್ಮ ಉದ್ದೇಶಗಳು ಒಳ್ಳೆಯದ್ದಾಗಿದೆ ಎಂದು ದಾವೆ ಮಾಡುತ್ತಾರೆ ಎಂದು ಕುರ್‌ಆನಿನಲ್ಲಿ ಭವಿಷ್ಯ ನುಡಿಯಲಾಗಿದೆ.

ನಿಜವಾಗಿಯೂ ಇವರು ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು *(ಮಸಾಜಿಲ್ಲಾಹ್)* ಅನುಸರಿಸದಂತೆ ಇತರರನ್ನು ತಡೆಯುವಂತಹ ದುಷ್ಟ ಜನರಾಗಿದ್ದಾರೆ.

ಕುರ್‌ಆನ್ ಸಂಪೂರ್ಣ ವಿವರಗಳನ್ನು ಒಳಗೊಂಡಿದೆ ಮತ್ತು ಅಲ್ಲಾಹನು ಈ ಗ್ರಂಥದ ಹೊರಗಡೆ ಏನನ್ನೂ ಬಿಟ್ಟು ಬಿಡಲಿಲ್ಲ ಎಂದು ಕುರ್‌ಆನ್ 6:38 ರಲ್ಲಿ ಘೋಷಿಸುತ್ತದೆ. ಅಲ್ಲಾಹನ ಗ್ರಂಥವನ್ನು ವಿರೂಪಗೊಳಿಸುವುದು ಒಂದು ಕ್ರೂರತನದ ಕ್ರಿಯೆಯಾಗಿದೆ. ಧಾರ್ಮಿಕರು ಕುರ್‌ಆನನ್ನು ಹೇಗೆ ದುರುಪಯೋಗಗೊಳಿಸುತ್ತಾರೆಂದು ನಾವು ನೋಡಿದೆವು ಮತ್ತು ಅವರ ಈ ನೀಚತನದ ಬಣ್ಣವು ಬಯಲಾಗಿದೆ:

> *ವಮನ್ ಅಧ್ಲಮು ಮಿಮ್ಮನ್ ಮನಅ ಮಸಾಜಿದ್ದಾಹಿ ಅನ್ ಯುಧ್ಕರ ಫೀಹ-ಸ್ಮಹು ವ ಸಆ ಫೀ ಖರಾಬಿಹಾ. ಉಲಾಯಿಕ ಮಾಕಾನ ಲಹುಮ್ ಅನ್ ಯದ್ಖುಹುಲೂಹ ಇಲ್ಲಾ ಖಾಇಫೀನ, ಲಹುಮ್ ಫಿದ್ದುನ್ಯ ಖಿಝ್ಯುನ್ ವ ಲಹುಮ್ ಫಿಲ್ ಆಖಿರತಿ ಅಝಾಬುನ್ ಅಧೀಮ್* (2:114)
>
> ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು ಅದರಲ್ಲಿ ಅವನ ಹೆಸರನ್ನು ನೆನಪಿಸಲ್ಪಡುವುದನ್ನು ತಡೆಗಟ್ಟುವವರಿಗಿಂತ ಮತ್ತು ಅದನ್ನು ನಾಶಪಡಿಸಲು ಉದ್ಯುಕ್ತರಾಗುವವರಿಗಿಂತ ಅನ್ಯಾಯಿಗಳು ಯಾರಿದ್ದಾರೆ? ಭಯಪಡುವವರನ್ನು ಹೊರತುಪಡಿಸಿ, ಇದರಲ್ಲಿ ಪಾಲ್ಗೊಳ್ಳಲು ಅವರು ಅರ್ಹರಾದವರೇ ಅಲ್ಲ. ಈ ಲೋಕದಲ್ಲಿ ಅಪಮಾನವೂ ಪರಲೋಕದಲ್ಲಿ ಘೋರ ಶಿಕ್ಷೆಯು ಅವರನ್ನು ಕಾದಿದೆ. (2:114)

ಕುತಂತ್ರವು ಅನಾವರಣಗೊಂಡಿದೆ. ಈ ವಚನದಲ್ಲಿ ಉಲ್ಲೇಖಿಸಲಾದ ಕಿಡಿಗೇಡಿಗಳು, ಅಲ್ಲಾಹನ ಸಮ್ಮತಿಸಲ್ಪಟ್ಟ ಶಾಸನವು ಅವನ ಹೆಸರಿನಲ್ಲಿ ಸನ್ಮಾನಿಸಲ್ಪಡುವುದನ್ನು ತಡೆಗಟ್ಟುತ್ತಾರೆ. ನಕಲಿ ಅರಬೀ ಧರ್ಮವನ್ನು ಸೃಷ್ಟಿಸಲು ಧಾರ್ಮಿಕರು ಅಲ್ಲಾಹನ ಪದಗಳನ್ನು (ಕುರ್‌ಆನಿನಲ್ಲಿರುವ ಅವನ *ಕಲಿಮಾತ್*ಗಳನ್ನು) ಭ್ರಷ್ಟಗೊಳಿಸಿದರು. ಅವರು ಅಲ್ಲಾಹನ ಹೆಸರನ್ನು ಕೂಡ ಬಳಸಿಕೊಳ್ಳುತ್ತಾರೆ.

ಅಲ್ಲಾಹನ ಆದೇಶಗಳಿಗೆ ಸಮ್ಮತಿಸಿಕೊಳ್ಳದವರು ಜೀವನ ರೀತಿಯಾಗಿ ಅವುಗಳನ್ನು ಎಳಿಗೆಮಾಡಲು ಅಥವಾ ಉತ್ತೇಜಿಸಲು ಅರ್ಹರಾದವರಲ್ಲ.

> ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು ಉತ್ತೇಜಿಸುವುದು *(ಅನ್ ಯ'ಮುರು)* ಮೂರ್ತಿ ಆರಾಧಕರಿಗೆ ತಕ್ಕುದ್ದಲ್ಲ. ಅವರು ತಮ್ಮ ಅಪನಂಬಿಕೆಗೆ ತಾವೇ ಸಾಕ್ಷಿಯಾಗಿದ್ದಾರೆ. ಅವರ ಸತ್ಕರ್ಮಗಳು ವ್ಯರ್ಥವಾಗುವುದು ಮತ್ತು ಅವರು ಶಾಶ್ವತವಾಗಿ ನರಕಾಗ್ನಿಯಲ್ಲಿ ವಾಸಿಸಲಿದ್ದಾರೆ. (9:17)

ಅನ್ ಯ'ಮುರು ಎಂಬ ಪದಕ್ಕೆ ಜೀವನ ನೀಡುವುದು ಅಥವಾ ಉತ್ತೇಜಿಸುವುದು ಎಂದರ್ಥವಾಗಿದೆ.[67] ಖಂಡಿತವಾಗಿಯೂ, ನಾವು ಒಂದು ಭೌತಿಕ ಕಟ್ಟಡಕ್ಕೆ ಜೀವನ ನೀಡಲು ಸಾಧ್ಯವಿಲ್ಲ. ಆದರೆ ಅಲ್ಲಾಹನು ಸಮ್ಮತಿಸಿದ ನಿಷೇಧಗಳನ್ನು *(ಮಸ್ಜಿದಿಲ್ ಹರಾಮಿ)* ಗಣನೆಗೆ ತೆಗೆದುಕೊಳ್ಳುತ್ತಾ, ಅವನಿಂದ ಸಮ್ಮತಿಸಲ್ಪಟ್ಟ ಆದೇಶಗಳನ್ನು *(ಮಸಾಜಿದಲ್ಲಾಹ್)* ಜನರು ಉತ್ತೇಜಿಸಬಹುದು ಅಥವಾ ಅದಕ್ಕೆ ಜೀವವನ್ನು ನೀಡಬಹುದು.

ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶಗಳನ್ನು ಪ್ರೋತ್ಸಾಹಿಸಲು ಅಥವಾ ನೆಲೆನಿಲ್ಲಿಸಲು ಅರ್ಹರಾದವರು ಅಲ್ಲಾಹನ ಮತ್ತು ಅಂತ್ಯದಿನದ ಮೇಲೆ ನಿಜವಾಗಿ ವಿಶ್ವಾಸವಿರಿಸುವ ಮತ್ತು ತಮ್ಮ ಬದ್ಧತೆಗಳನ್ನು ಪಾಲಿಸುವವರು ಮತ್ತು ಅವುಗಳನ್ನು ಪರಿಶುದ್ಧವಾಗಿರಿಸುವ ಜನರು ಮಾತ್ರರಾಗಿದ್ದಾರೆ.

> *ಇನ್ನಮಾ ಯ'ಮುರು ಮಸಾಜಿದಲ್ಲಾಹಿ ಮನ್ ಆಮನ ಬಿಲ್ಲಾಹಿ ವಲ್ ಯೌಮಿನ್ ಆಖಿರಿ ವ ಅಖಾಮ ಸ್ವಲಾತ ವಆತ-ಝ್ಝಕಾತ* (9:18)
>
> ಅಲ್ಲಾಹನ ಮತ್ತು ಅಂತ್ಯದಿನದ ಮೇಲೆ ವಿಶ್ವಾಸವಿರಿಸುವ ಮತ್ತು ತಮ್ಮ ಬದ್ಧತೆಗಳನ್ನು ಪಾಲಿಸುವ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸುವ ಜನರು ಮಾತ್ರ ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು ಉತ್ತೇಜಿಸಲು ಅರ್ಹರಾದವರಾಗಿದ್ದಾರೆ. (9:18)

ಮಸಾಜಿದಲ್ಲಾಹ್ ಎಂಬುವುದು ಒಂದು ಕಟ್ಟಡವಲ್ಲವೆಂದು ಸ್ಪಷ್ಟವಾಗುತ್ತದೆ. ಬದಲಿಗೆ, ಅದು ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳಾಗಿವೆ. ಈ ಆದೇಶಗಳಿಗೆ ತಮ್ಮ ಸಮ್ಮತಿಯನ್ನು ನೀಡಿದವರು ಮಾತ್ರ ಇದರ ಪ್ರವರ್ತಕರಾಗಲು ಹಕ್ಕುದಾರರಾಗಿದ್ದಾರೆ. ಅವರು ಒಂದು ಆರಾಧನಾಯದಲ್ಲಿ ಅಥವಾ ಒಂದು ನಿರ್ಧಿಷ್ಟ ಸ್ಥಳಗಳಲ್ಲಿ ಒಂದು ನಿರ್ಧಿಷ್ಟ ಸಮಯಗಳಲ್ಲಿ ಯಾವುದೇ ಆರಾಧನೆಯನ್ನು ಅಥವಾ ವಿಧ್ಯುಕ್ತ ಪ್ರಾರ್ಥನೆಯನ್ನು ನಿರ್ವಹಿಸುವ ಬೇಡಿಕೆಯನ್ನು ಈ ಆದೇಶಗಳು ಮುಂದಿಡುವುದಿಲ್ಲ. ಅದರ ಮೌಲ್ಯಗಳಿಗೆ ಬದ್ಧರಾಗುವ ಮೂಲಕ ತಮ್ಮನ್ನು ತಾವು ಸಮ್ಮತಿಸಿಕೊಳ್ಳವವರು ಮಾತ್ರ ಈ ಶುಭ ಸುದ್ದಿಯನ್ನು ಪ್ರಚಾರ ಮಾಡುವ ಮೂಲಕ ಅಲ್ಲಾಹನ ಸಮ್ಮತಿಸಲ್ಪಟ್ಟ ಶಾಸನವನ್ನು ಚೈತನ್ಯಗೊಳಿಸಲು ಅರ್ಹರಾದ ಪಕ್ಷವಾಗಿದ್ದಾರೆ.

ಕುರ್‌ಆನಿನ ಪ್ರಕಾರ, ಭೂಮಿ ಆಕಾಶಗಳಲ್ಲಿರುವವುಗಳನ್ನು ಸೃಷ್ಟಿಸಿರುವುದು ಅಲ್ಲಾಹನಾಗಿದ್ದಾನೆ ಮತ್ತು ಅವನ ಎಲ್ಲಾ ಸೃಷ್ಟಿಗಳು ಅವನ ಜೀವನ ರೀತಿಗೆ (ದೀನಿಗೆ) ಅಥವಾ ಯೋಜನೆಗೆ ಇಷ್ಟವಿದ್ದೋ ಇಷ್ಟವಿಲ್ಲದೆಯೋ ಶಾಂತಿಯಲ್ಲಿ ಸಮ್ಮತಿಸುತ್ತಿವೆ. ಆದ್ದರಿಂದ ಬಂಡೆಕಲ್ಲು, ಮರ, ಸಿಮೆಂಟು ಅಥವಾ ಕಲ್ಲುಗಳಿಂದ ಮಸೀದಿಗಳನ್ನು ಮಾನವನಿಂದ ನಿರ್ಮಿಸಲ್ಪಡುವ ವರೆಗೆ ಅಲ್ಲಾಹನು ಕಾದುಕುಳಿತುಕೊಂಡು, ನಂತರ 'ಈ ಕಟ್ಟಡಗಳು ಅಲ್ಲಾಹನ ಮನೆಗಳಾಗಿವೆ' ಎಂದು ಕರೆಯಲು ಅವನಿಗೆ ಅವಶ್ಯಕತೆಯೇ ಇಲ್ಲ. ಅಲ್ಲಾಹನು ಈಗಾಗಲೇ ಬ್ರಹ್ಮಾಂಡದಲ್ಲಿರುವ ಎಲ್ಲಾ ಖನಿಜಗಳ, ಲೋಹಗಳ, ಮರಗಳ ಮತ್ತು ಕಲ್ಲುಗಳ ಮಾಲಿಕನಾಗಿದ್ದಾನೆ.

[67] ಅಧ್ಯಾಯ ಹನ್ನೆರಡನ್ನು ನೋಡಿ.

ಅಲ್ಲಾಹನ ಅವತೀರ್ಣಗಳ ಸಂದೇಶ

ಅಲ್ಲಾಹನು ತನ್ನ ವಚನಗಳನ್ನು ಮನುಕುಲದ ಮಾರ್ಗದರ್ಶನಕ್ಕಾಗಿ ಅವತೀರ್ಣಗೊಳಿಸಿದನು. ನಿಸ್ಸಂಶಯವಾಗಿ, ತನ್ನ ಗ್ರಂಥದಲ್ಲಿರುವ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳು - ಕೇವಲ ಸೂಕ್ಷ್ಮ ಲಕ್ಷ್ಯತೆ ಇರುವವರಿಗೆ, ಅದೃಷ್ಯದಲ್ಲಿ ವಿಶ್ವಾಸವಿರಿಸುವವರಿಗೆ, ಅವನೊಂದಿಗೆ ತಮ್ಮ ಒಪ್ಪಂದವನ್ನು ಪಾಲಿಸುವವರಿಗೆ ಮತ್ತು ಮರಣಾನಂತರ ಜೀವನದ ಬಗ್ಗೆ ಖಚಿತರಾದವರಿಗೆ - ಮಾತ್ರ ಇರುವುದಾಗಿದೆ. ಆದರೆ ಅದನ್ನು ಯಾರು ನಿರಾಕರಿಸುತ್ತಾರೋ, ಅವರ ಹೃದಯಗಳಿಗೆ ಹಾಗೂ ಶ್ರವಣಶಕ್ತಿಗೆ ಮುದ್ರೆಯೊತ್ತಲ್ಪಡುತ್ತದೆ ಮತ್ತು ಅವರ ದೃಷ್ಟಿಯ ಮೇಲೆ ಮುಸುಕು ಹೊರಿಸಲಾಗುವುದು, ಆದ್ದರಿಂದ ಅವರು ಗ್ರಂಥವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿ ಅವನು ಹೇಳುತ್ತಾನೆ, 'ಸಂದೇಶವಾಹಕರಿಗೆ ತಾನಿಚ್ಛಿಸಿದವರನ್ನು ಸನ್ಮಾರ್ಗಿಗಳಾಗಿಸಲು ಸಾಧ್ಯವಿಲ್ಲ'. ಅಲ್ಲಾಹನು ತಾನಿಚ್ಛಿಸಿದವರಿಗೆ ಮಾತ್ರ ಸನ್ಮಾರ್ಗವನ್ನು ನೀಡುತ್ತಾನೆ, ಏಕೆಂದರೆ ಅದಕ್ಕೆ ಅರ್ಹರಾದವರನ್ನು ಸಂಪೂರ್ಣವಾಗಿ ಅರಿತಿರುವುದು ಅವನು ಮಾತ್ರ ಆಗಿರುತ್ತಾನೆ. ಅದೃಷ್ಟರಾದ ವಿಶ್ವಾಸಿಗಳು ಉತ್ತಮ ಕಾರ್ಯಗಳನ್ನು ಮಾಡುವುದಕ್ಕೆ ಬದ್ಧರಾಗಿರುವ ಮೂಲಕ ಸೃಷ್ಟಿಕರ್ತನಿಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಅಷ್ಟೆ. ಸಮ್ಮತಿಸಲ್ಪಟ್ಟ ಆದೇಶಗಳಿಗೆ ಅನುಗುಣವಾಗಿ ಯಾರು ತಮ್ಮ ಜೀವನವನ್ನು ನಡೆಸುವವರು, ಅವರು ಈ ಜೀವನದಲ್ಲಿ ಮತ್ತು ಮುಂದೆ ಇರುವ ಜೀವನದಲ್ಲಿ ಯಾವುದೇ ಭಯ ಅಥವಾ ವ್ಯಥೆಗೆ ಈಡಾಗಲಾರರು ಎಂದು ಸೃಷ್ಟಿಕರ್ತನು ಭರವಸೆ ನೀಡಿದ್ದಾನೆ.

ಮನುಷ್ಯರು ಪ್ರಪಂಚದ ವಿಭಿನ್ನ ಭಾಗಗಳಲ್ಲಿ ವಿಭಿನ್ನ ಜೀವನ ಮಾರ್ಗಗಳನ್ನು ಅನುಸರಿಸುತ್ತಾರೆ. ಅವರು ಬೇರೆ ಬೇರೆ ಪದ್ಧತಿಗಳನ್ನು ಮತ್ತು ಶಿಷ್ಟಾಚಾರಗಳನ್ನು ಅನುಸರಿಸುವ ಮೂಲಕ ಪ್ರತ್ಯೇಕ ಜೀವನ ವಿಧಾನಗಳನ್ನು ಹೊಂದಿದ್ದಾರೆ. ಅವರು ಬೇರೆ ಬೇರೆ ಬಣ್ಣ ಮತ್ತು ಭಾಷೆಗಳನ್ನು ಹೊಂದಿದ್ದರು ಸಹ, ಅವರಿಗೆ ಜೀವನ ಮತ್ತು ಮರಣವನ್ನು ನೀಡುವುದು ಏಕದೇವನಾಗಿದ್ದಾನೆ ಎಂಬ ಅಂಶವು ಅವರನ್ನು ಒಗ್ಗೂಡಿಸುತ್ತದೆ. ಆದಾಗ್ಯೂ ಅವರಲ್ಲಿ ಅತ್ಯುತ್ತಮರು, 'ಸತ್ಕಾರ್ಯಗಳನ್ನು ಮಾಡುವವರಾಗಿದ್ದಾರೆ'.

> ಆಕಾಶಗಳ ಮತ್ತು ಭೂಮಿಯ ಸೃಷ್ಟಿಯೂ, ನಿಮ್ಮ ಭಾಷೆಗಳ ಮತ್ತು ಬಣ್ಣಗಳ ವೈವಿಧ್ಯತೆಯೂ ಅವನ ನಿದರ್ಶನಗಳಲ್ಲಿ ಒಂದಾಗಿದೆ. ಇವುಗಳು ಮನುಕುಲಕ್ಕಿರುವ ನಿದರ್ಶನಗಳಾಗಿವೆ. (30:22)

> ಓ ಮಾನವಕುಲವೇ! ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಸೃಷ್ಟಿಸಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮನ್ನು ಜನಾಂಗಗಳಾಗಿಯೂ ಮತ್ತು ಗೋತ್ರಗಳಾಗಿಯೂ ಮಾಡಿದೆವು. ನಿಮ್ಮಲ್ಲಿ ಸದ್ಗುಣನು ಅಲ್ಲಾಹನ ಬಳಿ ಅತ್ಯಂತ ಹೆಚ್ಚು ಗೌರವಪಾತ್ರನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ, ವಿವರಪೂರ್ಣನೂ ಆಗಿದ್ದಾನೆ. (49:13)

ಕುರ್‌ಆನ್ 'ಪಾವಿತ್ರತೆ'ಯ ಒಂದು ಧರ್ಮವನ್ನು ಅಥವಾ 'ದಿವ್ಯತೆ'ಯ ಒಂದು ಜೀವನವನ್ನು ಚಿತ್ರೀಕರಿಸುವುದಿಲ್ಲ. ತಮ್ಮ, ಅಹಂಕಾರ, ದುರಾಸೆ ಮತ್ತು ಸ್ವಾರ್ಥವನ್ನು ತ್ಯಾಗಮಾಡಿ, ಸತ್ಕಾರ್ಯಗಳನ್ನು ಮಾಡುವ ಮೂಲಕ ಸದ್ಗುಣ ಸಂಪನ್ನವಾದ ಜೀವನವನ್ನು ನಡೆಸಲು ಬಯಸುವ ಪ್ರಾಮಾಣಿಕ ಜನರಿಗೆ, ಕುರ್‌ಆನ್ ಒಂದು ಮಾರ್ಗದರ್ಶಿಯ ಹಾಗೂ ಸುವಾರ್ತೆಯ ಒಂದು ಗ್ರಂಥವಾಗಿದೆ. ಜೀವನಕ್ಕಿರುವ ಒಂದು ಕೈಪಿಡಿಯಾಗಿದೆ.

> ವಾಸ್ತವದಲ್ಲಿ ಈ ಕುರ್‌ಆನ್, ಉತ್ತಮ ಕಾರ್ಯಗಳ ನಿರ್ವಹನೆಯ ಮೂಲಕ ವಿಶ್ವಾಸವಿರಿಸುವವರಿಗೆ ಒಂದು ಮಾರ್ಗದರ್ಶನ ಮತ್ತು ಸುವಾರ್ತೆಯಾಗಿದೆ. ಅವರು ಶ್ರೇಷ್ಠ ಪ್ರತಿಫಲಕ್ಕೆ ಅರ್ಹರಾಗಿದ್ದಾರೆ. (17:9)

ಧಾರ್ಮಿಕರು ಕೊನೆಯ ಪ್ರವಾದಿಯ ಉದಾಹರಣೆಯನ್ನು ಅನುಸರಿಸುತ್ತಿದ್ದರೆ ಹಾಗೂ ಪ್ರಪಂಚಕ್ಕೆ ಸುವಾರ್ತೆಯನ್ನು ತಲುಪಿಸುತ್ತಿದ್ದರೆ, ನಾವು ಇಂದು ಒಂದು ಉತ್ತಮ ವಿಶ್ವದಲ್ಲಿ ಜೀವಿಸುತ್ತಿದ್ದೆವು. ಬದಲಾಗಿ, ಅವರು ನಿಷ್ಠಾವಂತರಿಗೆ ಮೂಲಭೂತ ಮಾನವ ಹಕ್ಕುಗಳನ್ನು ಮತ್ತು ವಾಕ್ ಸ್ವಾತಂತ್ರ್ಯವನ್ನು ನಿರಾಕರಿಸುವ ಶಿಲಾಯುಗದ ಒರಟು ಕಾನೂನುಗಳು ನಕಲು ಮಾಡಲು ಆಯ್ಕೆಮಾಡಿದರು.

ಮಕ್ಕಾ, ಮದೀನಾ ಮತ್ತು ಜೆದ್ದಾಗೆ ಒಂದು ಸಂಕ್ಷಿಪ್ತ ಭೇಟಿಯ ವೇಳೆಯಲ್ಲಿ, ಮಸೀದಿಯ ಧ್ವನಿವರ್ಧಕವು ಜನರನ್ನು ಪ್ರಾರ್ಥನೆ ಕರೆಯುವ ಪ್ರತಿ ಬಾರಿಯೂ, ಎಲ್ಲಾ ಅಂಗಡಿಗಳು ಮತ್ತು ವ್ಯವಹಾರಗಳು ಬಲವಂತವಾಗಿ ಮುಚ್ಚಿಸಲ್ಪಡುವುದನ್ನು ನೋಡಿ ಲೇಖಕರು ಆಶ್ಚರ್ಯಚಕಿತರಾದರು. ಆರಾಧಕರ ಜನಸಂದಣಿಯು - ಮೊಣಗಂಟಿನುದ್ದದ ಬಿಳಿ ನೀಲುಡುಪನ್ನು ಹಾಗೂ ಚೌಕಾಕರದ ಬಟ್ಟೆಯ ತಳಿಕವಚವನ್ನು ಧರಿಸಿದ ಪುರುಷರು ಮತ್ತು ಕಪ್ಪು ದೇಹ ಕವಚವನ್ನು ಧರಿಸಿದ ಮಹಿಳೆಯರು - ಮಸೀದಿಯ ಕಡೆಗೆ ಆತುರಪಟ್ಟು ಓಡುತ್ತಾರೆ. ಮುತವ್ವಗಳು ಎಂಬ ಧಾರ್ಮಿಕ ಪೋಲಿಸರು ರಸ್ತೆಯಲ್ಲಿ ಮಸೀದಿಗೆ ಹೋಗದವರಿಗಾಗಿ ಬಲೆಬೀಸಿರುತ್ತಾರೆ. ಅವರ ನಿಯಮಗಳು ಅತಿಕಠೋರವಾಗಿದೆ ಮತ್ತು ಒರಟು ನಿಷ್ಕರುಣೆಯೊಂದಿಗೆ ವಿಧಿಸಲಾಗಿದೆ. ಕುರ್‌ಆನ್ ಕಲಿಸುವುದು ಇದಲ್ಲ.

ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳು ಪೂರ್ವ ಕುರ್‌ಆನಿನ ಅವಧಿಯದ್ದಾಗಿದೆ

9:107 ವಚನವು ಹಿಂದಿನ ಸಂದೇಶವಾಹಕರ ಸಮಯದಲ್ಲಿ ಭ್ರಷ್ಟಗೊಂಡ *ಮಸ್ಜಿದ್* ಎಂಬ ಪದವನ್ನು ವಿವರಿಸುತ್ತದೆ. ಇದನ್ನು ಭ್ರಷ್ಟಗೊಳಿಸುವ ಮೂಲಕ, ಕುರ್‌ಆನ್ *ಮಸಾಜಿದಲ್ಲಾಹ್* ಎಂದು ಕರೆಯುವ ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು ಜನರು ನೇರವಾಗಿ ನಿಂದನೆ ಮಾಡಿದರು.

- ತೌರಾತನ್ನು ಮೂಸಾರಿಗೆ ಅವತರಿಸಲ್ಪಟ್ಟಾಗ, ನೂಹ್ ಮತ್ತು ಇಬ್ರಾಹೀಮರಿಗೆ ಅವತರಿಸಲ್ಪಟ್ಟ ಅದೇ ಜೀವನ ರೀತಿಯನ್ನು (ದೀನನ್ನು) ಎತ್ತಿಹಿಡಿಯುವಂತೆ ಅವರ ಜನರಿಗೆ ನಿರ್ದೇಶಿಸಲಾಗಿತ್ತು. ಆದರೆ ಧಾರ್ಮಿಕರು ಒಂದು ಹೊಸ ಧರ್ಮವನ್ನು ಸೃಷ್ಟಿಸುವ ಸಲುವಾಗಿ, ಅಲ್ಲಾಹನ ಸಮ್ಮತಿಸಲ್ಪಟ್ಟ ಮೂಲಭೂತ ಅನುಶಾಸನಗಳನ್ನು ಭ್ರಷ್ಟಗೊಳಿಸಿದರು. ಅವರು ಮೂಸಾರಿಗೆ ತಿಳಿದೇ ಇಲ್ಲದಿದ್ದಂತಹ ಯಹೂದಿ ಧರ್ಮವನ್ನು ಪರಿಚಯಿದರು.

- ಮರ್ಯಮರ ಮಗ ಈಸಾರನ್ನು, ಮೂಸಾರಿಗೆ ನೀಡಲಾಗಿದುದನ್ನು ಖಚಿತಪಡಿಸಲು ಇಸ್ರಾಯೀಲರ ಸಂತತಿಯ ಕಡೆಗೆ ಕಳುಹಿಸಲಾಗಿತ್ತು. ಈಸಾರು ತಮ್ಮ ಅನುಯಾಯಿಗಳು ಯಾವುದನ್ನು ಪುನರ್ಸ್ಥಾಪಿಸಬೇಕೆಂದು ಇಚ್ಛಿಸಿದರೋ ಅವರು ಅದನ್ನು ಕಡೆಗಣಿಸಿದರು ಮತ್ತು ಅವರೇ ಈಸಾರ ವಿರುದ್ಧ ಒಳಸಂಚು ಹೂಡಿದರು. ಬದಲಿಗೆ ಅವರು ಈಸಾರ ಹೆಸರಿನಲ್ಲಿ ಒಂದು ಹೊಸ ಧರ್ಮವನ್ನು ಸೃಷ್ಟಿಸಿದರು. ಈಸಾರು ತಮ್ಮ ಅನುಯಾಯಿಗಳನ್ನು ಕ್ರೈಸ್ತರು, ಕ್ಯಾಥೋಲಿಕರು ಅಥವಾ ಪ್ರೋಟೆಸ್ಟೆಂಟ್'ಗಳೆಂಬ ಯಾವುದೇ ಹೆಸರಿನಿಂದ ಕರೆಯಲಿಲ್ಲ.

- ಹಾಗೆಯೇ, ಮೂಸಾರಿಗೆ ಮತ್ತು ಈಸಾರಿಗೆ ನೀಡಲ್ಪಟ್ಟ ಆದೇಶಗಳನ್ನು ದೃಢೀಕರಿಸುವ ಕುರ್'ಆನನ್ನು ಅವತೀರ್ಣಗೊಳಿಸಿದಾಗ, ಅರಬರು ಅದರ ಪದಗಳನ್ನು ಭ್ರಷ್ಟಗೊಳಿಸಿ, ಕಪಟ ತಂತ್ರಗಳಿಂದ ಅದನ್ನು ಅರಬೀ ಧರ್ಮದೊಂದಿಗೆ ಬದಲಾಯಿಸಿಕೊಂಡರು. ಅವರು *ಮಸ್ಜಿದುಲ್ಲಾಹ್* ಅಥವಾ ಅಲ್ಲಾಹನ ಸಮ್ಮತಿಸಲ್ಪಟ್ಟ ಅನುಶಾಸನದಿಂದ ಇತರರನ್ನು ತಡೆಯುತ್ತಾರೆ.

ಹೀಗೆ ಸಮ್ಮತಿಸಲ್ಪಟ್ಟ ಆದೇಶಗಳು ನಿಂದಿಸಲ್ಪಟ್ಟವು. 2:114 ರಲ್ಲಿ ಹೇಳಲಾದಂತೆ, ಅವರ ಪ್ರಮುಖ ಉದ್ದೇಶವು ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು ನಾಶಪಡಿಸುವುದಾಗಿತ್ತು.

ಕುರ್'ಆನಿನುದ್ದಕ್ಕೂ ಕಂಡುಬರುವ ಇಸ್ರಾಯೀಲರ ಸಂತತಿಯ ಐತಿಹಾಸಿಕ ಉಲ್ಲೇಖಗಳನ್ನು ಯಾರಿಗೂ ಗಮನಿಸದಿರಲು ಸಾಧ್ಯವಿಲ್ಲ. ಉದಾಹರಣೆಗೆ, ಅವರಿಗೆ ಮೊದಲ ಬಾರಿಗೆ ಗ್ರಂಥವು ನೀಡಲ್ಪಟ್ಟಾಗ, ಅವರು ಭೂಮಿಯ ಮೇಲೆ ಎರಡು ಬಾರಿ ಹದ್ದುಗೆಡುವರು ಎಂದು ಎಚ್ಚರಿಕೆ ನೀಡಲಾಯಿತು. ಮೊದಲ ಸಂದರ್ಭವು ನಡೆದಾಗ, ಅಲ್ಲಾಹನು ಅದ್ಭುತ ಶಕ್ತಿಯನ್ನು ಹೊಂದಿದ್ದ ತನ್ನ ಸೇವಕರ ಮೂಲಕ ಅವರ ತಾಯ್ನಾಡಿನ ಮೇಲೆ ಆಕ್ರಮಣ ಮಾಡಿಸಿ ಅವರನ್ನು ಶಿಕ್ಷಿಸಿದನು. ನಂತರ, ಅವರು ಸದ್ಗುಣರಾಗಿ ಕಾರ್ಯಗಳನ್ನು ನಿರ್ವಹಿಸಿದರೆ ಅದು ಅವರ ಸ್ವಯಂ ಒಳಿತಿಗಾಗಿದೆ, ಆದರೆ ಕೆಟ್ಟ ಕಾರ್ಯಗಳನ್ನು ಮಾಡಲು ಮುಂದುವರಿಸಿದರೆ ಅದರ ಪರಿಣಾಮಗಳನ್ನು ಅವರು ಎದುರಿಸಬೇಕಾಗುವುದು ಎಂದು ಹೇಳುವ ಮತ್ತೊಂದು ಎಚ್ಚರಿಕೆ ನೀಡಲಾಯಿತು.

ಎರಡನೇ ಬಾರಿ ಉಲ್ಲಂಘನೆಯು ನಡೆದಾಗ, ಅವರ ವಿರೋಧಿಗಳು ಅವರನ್ನು ತಟಸ್ಥಗೊಳಿಸುವರು ಮತ್ತು ಅವರು *ಮಜ್ಜಿದ್'ಗೆ* ಮೊದಲ ಬಾರಿಗೆ ಪ್ರವೇಶಿಸಿದ ರೀತಿಯಲ್ಲಿ ಬರುವರು ಎಂದು ಹೇಳಲಾಗಿತ್ತು. ಇಲ್ಲಿ *ಮಸ್ಜಿದ್* ಎಂಬ ಪದವು ಇಸ್ರಾಯೀಲರ ಮಕ್ಕಳಿಗೆ ಸಂಬಂಧಿಸಿದೆ ಮತ್ತು ಇದು ಮಸೀದಿ ಎಂಬ ಒಂದು ಭೌತಿಕ

ಕಟ್ಟಡವನ್ನು ಉಲ್ಲೇಖಿಸುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಇದರ ಸರಳವಾದ ಅರ್ಥವೇನೆಂದರೇ, ಇಸ್ರಾಯೀಲರ ಸಂತತಿಯು ಮುಹಮ್ಮದರ ಕಾಲದ ದೀರ್ಘಕಾಲ ಮುಂಚಿತವಾಗಿಯೇ, *ಮಜ್ಜಿದ್‌ಗೆ* (ಅಥವಾ ಸಮ್ಮತಿಸಲ್ಪಟ್ಟ ಆದೇಶಕ್ಕೆ) ತಮ್ಮ ಸಮ್ಮತಿಯನ್ನು ನೀಡಿದ್ದರು. ಆದ್ದರಿಂದ, ಇಸ್ರಾಯೀಲರ ಮಕ್ಕಳು ಯಾವುದೇ ಭೌತಿಕ ಮಸೀದಿಯೊಳಗಡೆ ಇರಲಿಲ್ಲವೆಂಬುವುದು ನಾವು ನಿಸ್ಸಂದೇಹವಾಗಿ ಹೇಳಬಹುದು.

ಇಸ್ರಾಯೀಲರ ಮಕ್ಕಳು ಅಲ್ಲಾಹನ ಕಾನೂನುಗಳನ್ನು ಉಲ್ಲಂಘಿಸಿದರು. ಅವರು ಗ್ರಂಥವನ್ನು ವಿರೂಪಗೊಳಿಸಿದರು ಮತ್ತು ಪ್ರತಿಭಟಿಸಿದರು. ಅಲ್ಲಾಹನು ತನ್ನ ಕರುಣೆಯಿಂದ, ಮೂಸಾರಿಗೆ ಅವತೀರ್ಣಿಸಿದ್ದನ್ನು ಖಚಿತಪಡಿಸಲು ಈಸಾರನ್ನು ಕಳುಹಿಸಿದನು:

> ನಾವು ಮೂಸಾರಿಗೆ ಗ್ರಂಥವನ್ನು ನೀಡಿದೆವು. ತರುವಾಯ ನಿರಂತರ ಸಂದೇಶವಾಹಕರನ್ನು ಕಳುಹಿಸಿದೆವು ಮತ್ತು ವ್ಯಕ್ತವಾದ ದೃಷ್ಟಾಂತಗಳನ್ನು ಕೊಟ್ಟು ಮರ್ಯಮರ ಮಗ ಈಸಾರನ್ನು ಕಳುಹಿಸಿ, ಅವರನ್ನು ಪವಿತ್ರ ಆತ್ಮದ *(ರೂಹಿಲ್ ಖುದುಸಿ)*[68] ಮೂಲಕ ಬೆಂಬಲಿಸಿದೆವು. ಸಂದೇಶವಾಹಕರು ನಿಮ್ಮ ಚಿತ್ತಾಕಾಂಕ್ಷೆಗಳಿಗೆ ವಿರುದ್ಧವಾದುದನ್ನು ತಂದಾಗಲೆಲ್ಲಾ ನೀವು ಉದ್ಧಟತನವನ್ನು ತೋರಿಸಿದಿರಿ. ಕೆಲವರನ್ನು ಸುಳ್ಳಾಗಿಸಿದಿರಿ, ಇನ್ನು ಕೆಲವರನ್ನು ವಧಿಸಿದಿರಿ. (2:87)

ಅವರು ಈಸಾರನ್ನು ತಿರಸ್ಕರಿಸಿದರು ಮತ್ತು ಆಜ್ಞೋಲ್ಲಂಘನೆ ಮಾಡಿದರು. ಅಲ್ಲಾಹನು ಹೇಳಿದನು, ಸತ್ಕಾರ್ಯಗಳನ್ನು ಮಾಡುತ್ತಾ ನಡೆದರೆ ಅದು ಅವರಿಗೇ ಒಳಿತಾಗಿದೆ, ಬದಲಿಗೆ ದುಷ್ಟತೆಯನ್ನು ಪ್ರದರ್ಶಿಸುತ್ತಾ ಮುಂದುವರಿದರೆ ಅದರ ಕೆಡುಕನ್ನು ಅವರೇ ಸಹಿಸಬೇಕಾಗಿದೆ.

ಅನೇಕ ವರ್ಷಗಳ ನಂತರ, ಅಲ್ಲಾಹನು ಅವರ ಪೈಕಿಯಲ್ಲದ ಒಬ್ಬ ವ್ಯಕ್ತಿಗೆ ಕುರ್‌ಆನ್ ಗ್ರಂಥವನ್ನು ಅವತರಿಸಿದನು. ಕುರ್‌ಆನಿನಲ್ಲಿದ್ದುದು ಮೂಸಾರಿಗೆ ನೀಡಲಾದ ಅದೇ ಸಂದೇಶವಾಗಿತ್ತು. ಕುರ್‌ಆನಿನ ಪ್ರಾರಂಭದ ಭಾಗವು (2:40 ರಿಂದ 2:123 ವರೆಗೆ) ಇಸ್ರಾಯೀಲರ ಸಂತತಿಗೆ ವಿಶೇಷ ಗಮನವನ್ನು ನೀಡುತ್ತಾ, ಅವರು ಅದನ್ನು ತಿರಸ್ಕರಿಸುವವರಲ್ಲಿ ಮೊದಲಿಗರಾಗಬಾರದೆಂದು ಹೇಳುತ್ತದೆ. ಅವರಿಗೆ ನೀಡಲಾದುದನ್ನೇ ಇದು ದೃಢೀಕರಿಸುತ್ತಿದೆ ಎಂದು ಅವರಿಗೆ ಭರವಸೆಯನ್ನು ನೀಡುತ್ತದೆ. ಇಸ್ರಾಯೀಲರ ಮಕ್ಕಳು ಕುರ್‌ಆನನ್ನು ಓದಿದರೆ, ತಮ್ಮದೇ ಜನಾಂಗದ ವಿಷಯವೂ ಸೇರಿದಂತೆ ಅವರಿಗೆ ಸತ್ಯವು ಪತ್ತೆಯಾಗುತ್ತದೆ.

ಕುರ್‌ಆನಿನ ಎರಡನೇ ಸೂರದ ಮೊದಲ ಭಾಗವನ್ನು ಹೀಗೆ ಸಂಕ್ಷೇಪಿಸಬಹುದು:

---

[68] ಈಸಾರು ವಿಶಿಷ್ಟ ಗುಣಗಳನ್ನು ಹೊಂದಿದ್ದರೂ, ಅದು ಇಸ್ರಾಯೀಲರ ಸಂತತಿಗಳೊಂದಿಗೆ ಫಲಕಾರಿಯಾಗಲಿಲ್ಲ. ನಂತರ ಈಸಾರನ್ನು ನಂಬಿದವರು ಅವರು ಅಲ್ಲಾಹನ ಮಗನೆಂದು ಭಾವಿಸಲು ಪ್ರಾರಂಭಿಸಿದರು. ಅಲ್ಲಾಹನ ಪದಗಳಿಂದ ಮತ್ತು ಪವಿತ್ರ ಆತ್ಮದಿಂದ ಅವರನ್ನು ಸೃಷ್ಟಿಸಿರುವುದು ಅಲ್ಲಾಹನ ಇಚ್ಛೆಯ ಪ್ರಕಾರವಾಗಿತ್ತೆಂದು ಅವರಿಗೆ ಊಹಿಸಲು ಅಸಾಧ್ಯವಾಗಿತ್ತು.

1.	2:1-5	ಅಲ್ಲಾಹನ ಗ್ರಂಥವನ್ನು ಅಂಗೀಕರಿಸುವಂತಹ ಜನರು
2.	2:6-7	ಅವಿಶ್ವಾಸಿಗಳಾದ ಜನರು
3.	2:8-20	ಕಪಟ ವಿಶ್ವಾಸಿಗಳು
4.	2:21-29	ಈ ಸಂದೇಶವು ಸಂಪೂರ್ಣ ಮನುಕುಲಕ್ಕಾಗಿದೆ
5.	2:30-39	ಅಲ್ಲಾಹನ ಮಾರ್ಗದರ್ಶನದಂತೆ ಬದುಕಿದ ಒಬ್ಬ ಮನುಷ್ಯನ ಇತಿಹಾಸ
6.	2:40-123	ಇಸ್ರಾಯೀಲರ ಸಂತತಿಗೆ ಸಂದೇಶ
7.	2:124-134	ಒಬ್ಬ ಏಕದೇವವಿಶ್ವಾಸಿಯ ಇತಿಹಾಸ
8.	2:135-141	ಹಿಂದಿನ ಗ್ರಂಥವನ್ನು ಸ್ವೀಕರಿಸಿದವರ ಪ್ರತಿರೋಧ
9.	2:142	ಪ್ರಶ್ನೆ: ಕುರ್‌ಆನ್ ಇಸ್ರಾಯಿಲೇತರ ಜನಾಂಗಕ್ಕೆ ಏಕೆ ಕಳುಹಿಸಲಾಯಿತು?
10.	2:143	ಉತ್ತರ: ಅವನ ಸಂದೇಶವಾಹಕರನ್ನು ನಿಜವಾಗಿ ಅನುಸರಿಸುವವರು ಯಾರು ಎಂದು ಪರೀಕ್ಷಿಸುವ ಸಲುವಾಗಿದೆ.
11.	2:144-147	ಇದು ಸತ್ಯವೆಂದು ಅವರಿಗೆ ಗೊತ್ತಿತ್ತು; ಅವರು ಅದನ್ನು ಗುರುತಿಸುತ್ತಾರೆ.
12.	2:148-152	ಪ್ರವಾದಿಗೆ ಅವತೀರ್ಣಗೊಂಡ ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ನಿರ್ಬಂಧಗಳಿಗೆ ಅಥವಾ *ಮಸ್ಜಿದಿಲ್ ಹರಾಮಿಗೆ* ಕೇಂದ್ರಿತರಾಗಿರಬೇಕು. ಪ್ರತಿಯೊಬ್ಬರೂ ತಮ್ಮ ಗಮನವನ್ನು ಅದಕ್ಕೆ ಕೇಂದ್ರೀಕರಿಸಬೇಕು.

ಕುರ್‌ಆನ್ ಇಸ್ರಾಯಿಲೇತರ ಜನಾಂಗಕ್ಕೆ ಕಳುಹಿಸಲಾದರೂ, ಮೊದಲ ಪ್ರಮುಖ ಸೂರದ ಸಂದೇಶವು ಪ್ರಧಾನವಾಗಿ ಅವರನ್ನೇ ಸಂಬೋಧಿಸುತ್ತದೆ. ಓದುಗರಿಗೆ ಬಹುಶಃ ಆಘಾತವಾಗಬಹುದಾದ ಒಂದು ಸತ್ಯವೇನೆಂದರೆ: ಕುರ್‌ಆನಿನ ಸಂದೇಶವು ಇಸ್ರಾಯೀಲರ ಸಂತತಿಗಾಗಿದೆ - ಅರಬರಿಗಲ್ಲ. ಸಂದೇಶವಾಹಕರನ್ನು ಪ್ರವಾದಿಯೆಂಬ ನೆಲೆಯಲ್ಲಿ ಸಂಬೋಧಿಸಿರುವ ಕೆಲವು ವಚನಗಳನ್ನು ಹೊರತುಪಡಿಸಿ, ಅರಬರನ್ನು ಪ್ರಬಲ ಪದಗಳೊಂದಿಗೆ ಬೆದರಿಸಿರುವುದಲ್ಲದೆ ಅವರನ್ನು ಸಂಬೋಧಿಸಿದ ವಚನಗಳು ಕುರ್‌ಆನಿನಲ್ಲಿ ಎಲ್ಲಿಯೂ ಇಲ್ಲ. ಆ ಕಾರಣಕ್ಕಾಗಿ ಅಲ್ಲಾಹನು ಹೇಳುತ್ತಾನೆ, ಇಸ್ರಾಯೀಲರ ಸಂತತಿಯು ಕುರ್‌ಆನಿನ ನಿರ್ಬಂಧಗಳನ್ನು ತಮ್ಮ ಸ್ವಂತ ಮಕ್ಕಳ ಹಾಗೆ ಗುರುತಿಸುತ್ತಾರೆ. ಅಲ್ಲಾಹನ ವ್ಯವಸ್ಥೆಗೆ ಬದ್ಧರಾದ

ಇಬ್ರಾಹೀಮರ ಇತಿಹಾಸವನ್ನು ಮತ್ತು ಅವರು ಇಸ್ಮಾಯೀಲರೊಂದಿಗೆ ಸೇರಿ ಅಲ್ಲಾಹನ ವ್ಯವಸ್ಥೆಯಿಂದ ತಮ್ಮ ಬದ್ಧತೆಯನ್ನು ಸ್ಥಾಪಿಸಿದ ಶೈಲಿಯನ್ನು 2:124-131 ವಚನಗಳು ಅವರಿಗೆ ನೆನಪಿಸಿ ಕೊಡುತ್ತದೆ. ಈ ಅವತೀರ್ಣವನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಅವರಿಗೆ ನೀಡಲಾಗಿತ್ತು. ಜನಾಂಗೀಯ ಮೂಲದ ಪೂರ್ವಾಗ್ರಹವಿಲ್ಲದೆ ಸಂದೇಶವಾಹಕರನ್ನು ಯಾರು ಅನುಸರಿಸುತ್ತಾರೆ ಮತ್ತು ಯಾರು ತಮ್ಮ ಹಿಮ್ಮಡಿಯಲ್ಲಿ ತಿರುಗಿಕೊಂಡು ಹೋಗುತ್ತಾರೆ ಎಂದು ಪತ್ತೆಹಚ್ಚುವ ಸಲುವಾಗಿ, ಇದನ್ನು ದಿವ್ಯಗ್ರಂಥದ ಜ್ಞಾನವಿಲ್ಲದ ಒಂದು ಪ್ರವಾದಿಗೆ ಅವತರಿಸಲಾಯಿತು. "*ಇದು ಅತ್ಯಂತ ಕಠಿಣವಾದ ಪರೀಕ್ಷೆಯಾಗಿದೆ – ಆದರೆ ಅವನಿಂದ ಮಾರ್ಗದರ್ಶನ ಹೊಂದಿವರನ್ನು ಹೊರತುಪಡಿಸಿ. ಅವನು ನಿಮ್ಮ ವಿಶ್ವಾಸವನ್ನು ವ್ಯರ್ಥಗೊಳಿಸಲಾರ*", ಎಂದು ಅಲ್ಲಾಹನು 2:143 ರಲ್ಲಿ ಒತ್ತು ನೀಡುತ್ತಾನೆ.

ಕುರ್‌ಆನಿನಲ್ಲಿ ಇಸ್ರಾಯೀಲರ ಸಂತತಿಯ ಬಗ್ಗೆ ಇರುವ ಸಂದೇಶದ ಸಾರವನ್ನು ಅನೇಕ ಜನರು ಅರಿತಿದ್ದರು. ಅಲ್ಲಾಹನ ಸಮ್ಮತಿಸಲ್ಪಟ್ಟಿರುವ ಶಾಸನದ ನಿರ್ಬಂಧಗಳು ತೌರಾತಿನಲ್ಲೂ ನಿರೂಪಿಸಲಾಗಿತ್ತು, ಆದರೆ ಇಸ್ರಾಯೀಲರ ಸಂತತಿಯು ಅದನ್ನು ವಿಕೃತಗೊಳಿಸಿ ದುರುಪಯೋಗ ಮಾಡಿದರು. ಅವರು ಈ ಮೊದಲೇ ಅಲ್ಲಾಹನೊಂದಿಗೆ ಒಂದು ಒಪ್ಪಂದಕ್ಕೆ ಪ್ರವೇಶಿಸಿದ್ದರು ಅಥವಾ ಮೊದಲ ಬಾರಿಗೆ ತೌರಾತಿನಲ್ಲಿದ್ದ ಸಿದ್ಧಾಂತಗಳನ್ನು ಎತ್ತಿಹಿಡಿಯಲು ಸಮ್ಮತಿಸಿದ್ದರು, ಆದರೆ ಅವರು ಅದನ್ನು ನಿಂದಿಸಿದರು. ಇಸ್ರಾಯೀಲರ ಮಕ್ಕಳು ಯಾವುದೇ ಮಸೀದಿಗಳನ್ನು ಪ್ರವೇಶಿಸಿರುವುದಾಗಿ ಯಾವುದೇ ಇತಿಹಾಸ ದಾಖಲೆಗಳಿಲ್ಲ.

ನಾವು 17:7 ರನ್ನು ಎಚ್ಚರಿಕೆಯಿಂದ ಓದಿದರೆ, ನಾವು ಹೀಗೆ ಕಾಣುತ್ತೇವೆ:

ಇನ್ ಅಹ್ಸನ್ತುಮ್	ನೀವು ಒಳಿತನ್ನು ಮಾಡಿದರೆ
ಅಹ್ಸನ್ತುಮ್ ಲಿ ಅನ್ಫುಸಿಕುಮ್	ನಿಮ್ಮ ಸ್ವಂತಕ್ಕೇ ಒಳಿತನ್ನು ಮಾಡಿದಿರಿ
ವ-ಇನ್ ಅಸಅತುಮ್	ಮತ್ತು ನೀವು ದುಷ್ಕೃತ್ಯಗಳನ್ನು ಎಸಗಿದರೆ
ಫಲಹಾ	ಅದೂ ಅದಕ್ಕೇ (ಸ್ವಂತಕ್ಕೆ)
ಫ-ಇಝಾ ಜಾಅ ವಅದು	ಆದ್ದರಿಂದ, ವಾಗ್ದಾನವು ಬಂದಾಗ
ಅಲ್ ಆಹಿರತಿ	ಕೊನೆಯ
ಲಿ ಯಸ್‌ಊ	ಅವರು ಅವಮಾನ ಮಾಡುವರು
ಉಜೂಹಕುಮ್	ನಿಮ್ಮ ಮುಖಗಳನ್ನು
ವಲಿ ಯದ್ಖುಲು	ಮತ್ತು ಅವರು ಪ್ರವೇಶಿಸುವರು ಅಥವಾ ಪಡೆದುಕೊಳ್ಳುವರು

ಮಸ್ಜಿದ	ಸಮ್ಮತಿಲ್ಪಟ್ಟಿರುವ ಆದೇಶವನ್ನು
ಕಮಾ ದಖಲೂಹು	ನೀವು ಪ್ರವೇಶಿಸಿದ ಹಾಗೆ
ಅವ್ವಲ ಮರ್ರತಿನ್	ಮೊದಲ ಬಾರಿಗೆ
ವಲಿಯುತಬ್ಬಿರೂ	ಅವರು ಹತೋಟಿಯಲ್ಲಿಡುತ್ತಾರೆ
ಮಾ ಅಲವ್ ತತ್ಬೀರನ್	ಅವರ ಸಂಪೂರ್ಣ ಹತೋಟಿಗೆ ಸಿಗುವುದನ್ನು

ಅವರು ಮುಂಚೆ ಮಸ್ಜಿದನ್ನು ಪ್ರವೇಶಿಸಿದ್ದರು ಎಂದು ಅವರಿಗೆ ಜ್ಞಾಪಿಸಲಾಗಿದೆ. ಅದು ಅವರು ತೌರಾತನ್ನು ಸ್ವೀಕರಿಸಿದ ಸಮಯದಲ್ಲಾಗಿತ್ತು. *ದಖಲೂ ಅವ್ವಲ ಮರ್ರತಿನ್* ಎಂಬುವುದು *ಅವರು ಮೊದಲ ಬಾರಿಗೆ ಪ್ರವೇಶಿಸಿದ ಹಾಗೆ* ಎಂದಾಗಿದೆ. ಅಲ್ಲಾಹನೊಂದಿಗೆ ಒಂದು ಒಪ್ಪಂದವನ್ನು ಮಾಡಿದ ನಂತರ ಅವನ ಆದೇಶಕ್ಕೆ ಅವರು ಸಮ್ಮಿತಿಸಿದರು ಎಂದು ಸೂಚಿಸುತ್ತದೆ. ಇದು ಅವರು ಅಲ್ಲಾಹನ ಜೊತೆಗೆ ಒಪ್ಪಂದಕ್ಕೆ ಪ್ರವೇಶಿಸಿದ ಅಥವಾ ಅವನ ನಿರ್ದೇಶನಗಳಿಗೆ ತಮ್ಮ ಸಮ್ಮತಿಯನ್ನು ನೀಡಿದ ಅವಧಿಯಾಗಿತ್ತು. ಸಹಜವಾಗಿ, ಇಸ್ರಾಯೀಲರ ಸಂತತಿಯು ಯಾವುದೇ ಮಸೀದಿಗಳನ್ನು ನಿರ್ಮಿಸಲಿಲ್ಲ.

ಪೂರ್ವ ಕುರ್‌ಆನಿನ ಅವಧಿಯ ನಿರ್ಬಂಧಗಳು

ಸೂರ 17 ರಲ್ಲಿ, ನಾವು ಹತ್ತು ಆಜ್ಞೆಗಳ ಪಟ್ಟಿಯನ್ನು ಸೇರಿದಂತೆ ಇಸ್ರಾಯೀಲರ ಮಕ್ಕಳ ಬಗ್ಗೆ ಅನೇಕ ಐತಿಹಾಸಿಕ ಘಟನೆಗಳನ್ನು ಕಾಣುತ್ತೇವೆ. ಮೊದಲ ಏಳು ವಚನಗಳು ಇಸ್ರಾಯೀಲರ ಮಕ್ಕಳಿಗೆ ನೀಡಿದ ಮೂಲಭೂತ ಸಿದ್ಧಾಂತಗಳನ್ನು ವಿವರಿಸುತ್ತವೆ. ಇಲ್ಲಿಯೂ ಸಹ ಸಂದೇಶವು ಧಾರ್ಮಿಕರ ಮೂಲಕ ತಿರುಚಲಾಗಿದೆ ಎಂಬುವುದು ಅಚ್ಚರಿಕರವೇನಲ್ಲ.

ಪೂರ್ವಭಾವಿ ಕಲ್ಪನೆಗಳಿಲ್ಲದವರಿಗೆ 17:1-2 ಅರ್ಥವನ್ನು ಮತ್ತು ಉದ್ದೇಶಿತ ಸಂಕಲ್ಪವನ್ನು ಅರಿತುಕೊಳ್ಳಬಹುದು:

> ತಮ್ಮ ನಿದರ್ಶನಗಳನ್ನು ಪ್ರಕಟಗೊಳಿಸಲಿಕ್ಕಾಗಿ ತನ್ನ ಸೇವಕನನ್ನು ಒಂದು ರಾತ್ರಿಯಲ್ಲಿ, ಸಮ್ಮತಿಸಲ್ಪ ನಿರ್ಬಂಧಗಳಿಂದ, ಅನುಗ್ರಹೀತವಾದ ಸಮ್ಮತಿಸಲ್ಪಟ್ಟ ಆದೇಶಗಳ ಕಿನಾರೆಗಳ ಕಡೆಗೆ ವಶಹಿಡಿದವನು ಗೌರವಾರ್ಹನು. ನಿಶ್ಚಯವಾಗಿಯೂ ಅವನು ಸರ್ವಶ್ರುತನೂ ಸರ್ವವೀಕ್ಷಕನೂ ಆಗಿದ್ದಾನೆ. ಮತ್ತು ನಾವು ಮೂಸರಿಗೆ ಗ್ರಂಥವನ್ನು ನೀಡಿದೆವು ಮತ್ತು ಅದನ್ನು ಇಸ್ರಾಯೀರ

ಸಂತತಿಗೆ ಮಾರ್ಗದರ್ಶನವನ್ನಾಗಿ ಮಾಡಿದೆವು. ನೀವು ನನ್ನನ್ನಲ್ಲದೆ ಇತರರನ್ನು ವಕಾಲತುಗಾರನಾಗಿ ತೆಗೆದುಕೊಳ್ಳಬಾರದು.

ಸಂಕ್ಷಿಪ್ತವಾಗಿ, 17:1 ರಲ್ಲಿರುವ ವರದಿಯು ಮೂಸಾರ ಬಗ್ಗೆಯಾಗಿದೆ, ಅಲ್ಲಾಹನು ಅವರನ್ನು ತನ್ನ ನಿದರ್ಶನಗಳಿಗೆ ಸಾಕ್ಷಿಯಾಗಲು ಒಂದು ನಿರ್ದಿಷ್ಟ ಸ್ಥಳಕ್ಕೆ ಹೋಗುವಂತೆ ಮಾಡಿದನು. ಇದನ್ನು ಆನಂತರದ ವಚನ 17:2 ರೊಂದಿಗೆ ಓದಬೇಕಾಗಿದೆ. 17:2 ವಚನವು *ಮತ್ತು* ಎಂಬ ಅರ್ಥವನ್ನು ಕೊಡುವ 'ವ' ಎಂಬ ಕೂಡುಸ್ವರದೊಂದಿಗೆ ಆರಂಭಗೊಳ್ಳುವುದರಿಂದ, ಅದು ಹಿಂದಿನ ವಚನವಾದ 17:1 ಕ್ಕಿರುವ ನಿರಂತರತೆಯನ್ನು ಸೂಚಿಸುತ್ತದೆ: *ಮತ್ತು ನಾವು ಮೂಸಾರಿಗೆ ಗ್ರಂಥವನ್ನು ನೀಡಿದೆವು. ಮತ್ತು ಅದನ್ನು ಇಸ್ರಾಯೀಲರ ಮಕ್ಕಳಿಗೆ ಮಾರ್ಗದರ್ಶನವನ್ನಾಗಿ ಮಾಡಿದೆವು.* ಈ ಎರಡು ವಚನಗಳನ್ನು ಒಟ್ಟಿಗೆ ಓದಿದರೆ, ಅಲ್ಲಿ ಎರಡು ಘಟನೆಗಳು ನಡೆದಿದ್ದವು ಎಂದು ನಮಗೆ ಕಾಣಬಹುದು. ಮೊದಲನೆಯದಾಗಿ, ನಿದರ್ಶನಗಳ ಪ್ರದರ್ಶನ, ಎರಡನೆಯದಾಗಿ ಗ್ರಂಥದ ಅವತೀರ್ಣ. *ಮಸ್ಜಿದಿಲ್ ಹರಾಮಿ* ಮತ್ತು *ಮಸ್ಜಿದಿಲ್ ಅಕ್ಸಾ* ಎಂಬ ಪದಗಳು ಮೂಸಾರ ಕಾಲದಲ್ಲಿ ಬಳಸಲಾಗುತ್ತಿತ್ತು. ಅವುಗಳ ಅರ್ಥವೇನು?

ಸಮ್ಮತಿಸಲ್ಪಟ್ಟ ನಿರ್ಬಂಧಗಳಿಂದ *(ಮಿನಲ್ ಮಸ್ಜಿದಿಲ್ ಹರಾಮಿ)* ಸಮ್ಮತಿಸಲ್ಪಟ್ಟ ಆದೇಶಗಳ ಕಿನಾರೆಗಳ ಕಡೆಗೆ *(ಇಲಲ್ ಮಸ್ಜಿದಿಲ್ ಅಕ್ಸಾ)*, ಎಂಬುವುದು ದೂರದ ಅಂತದಲ್ಲಿರುವ ಇನ್ನೊಂದು ಭೌತಿಕ ಮಸೀದಿಯಿಂದ ಇನ್ನೊಂದು ಭೌತಿಕ ಮಸೀದಿಗೆ ಎಂದಲ್ಲ. ಇದು ಅರಬೀ ಭ್ರಷ್ಟಾಚಾರವಾಗಿದೆ. *ಅಕ್ಸಾ* ಎಂಬ ಪದದ ಅರ್ಥವು *ದೂರದ* ಎಂದಲ್ಲ, *ಬದಲಿಗೆ ಸಮೀಪದ ಅಂಚುಗಳು ಅಥವಾ ಅಂಚುಗಳು* ಎಂದಾಗಿರುವುದು ನಾವು ತಿಳಿದುಕೊಳ್ಳಬೇಕಾಗಿದೆ. ಇದನ್ನು ಸದ್ಯದಲ್ಲಿ ವಿವರಿಸಲಾಗುವುದು.

ಇದು ರಾತ್ರಿಯ ವೇಳೆಯಲ್ಲಿ ಸಂಭವಿಸಿದ ಘಟನೆಯಾಗಿದೆ ಎಂದು 17:1 ಹೇಳುತ್ತದೆ. ಕುರ್'ಆನಿನ ಪ್ರಕಾರ, ಅಲ್ಲಾಹನ ಸಂದರ್ಶನ ಪಡೆದ ಏಕೈಕ ವ್ಯಕ್ತಿಯು ಮೂಸಾರಾಗಿದ್ದಾರೆ. ಬೇರೆ ಯಾವುದೇ ಸಂದೇಶವಾಹಕರಿಗೆ ಅಂತಹ ಸೌಲಭ್ಯವನ್ನು ನೀಡಲಾಗಿಲ್ಲ. ಮೂಸಾರು ತನ್ನ ಅವಧಿಯಲ್ಲಿ ಎರಡು ಬಾರಿ ಅಲ್ಲಾಹನ ಸಂದರ್ಶನವನ್ನು ಪಡೆದಿದ್ದರು ಮತ್ತು ಅವು ಎರಡೂ ಸಹ ರಾತ್ರಿಯ ಸಮಯದಲ್ಲಿ ನಡೆದಿತ್ತು.

ನಾವು 17:1 ನ್ನು ಆನಂತರದ ವಚನಗಳ ಜೊತೆಗೆ ಓದಿದರೆ, ಅವುಗಳು ಮೂಸಾರಿಗೆ ಗ್ರಂಥವು ವಿಭಿನ್ನ ಸ್ಥಳಗಳಲ್ಲಿ ಅವತೀರ್ಣಗೊಳ್ಳುವ ಮುಂಚಿತವಾಗಿ, ಅಲ್ಲಾಹನ ನಿದರ್ಶನಗಳಿಗೆ ಸಾಕ್ಷಿಯಾಗುವ ಅವಧಿಯ ಇಸ್ರಾಯೀಲರ ಸಂತತಿಯ ಇತಿಹಾಸದ ಬಗ್ಗೆ ನಮಗೆ ಹೇಳುತ್ತಿದೆ ಎಂದು ನಾವು ಕಾಣಬಹುದು. ಕೊನೆಯ ಪ್ರವಾದಿಯು, ಬುರಾಕ್ ಎಂಬ ಅರ್ಧ-ಮಾನವ ಅರ್ಧ-ಕುದುರೆ ರೂಪದ ಒಂದು ಪ್ರಾಣಿಯ ಮೇಲೆ ಕುಳಿತುಕೊಂಡು ಆಕಾಶ ಪ್ರಯಾಣ ನಡೆಸಿದರೆಂದು ಹೇಳಿಕೊಳ್ಳಲು ಈ ವಾಕ್ಯವನ್ನು ದುರುಪಯೋಗಗೊಳಿಸಿದರು. ಇಂತಹ ಸೃಷ್ಟಿಸಲ್ಪಟ್ಟ, ಅಸಂಬದ್ಧ ಕಾಲ್ಪನಿಕ ಕಥೆಗಳನ್ನು ಕುರ್'ಆನ್ ಸೂಚಿಸುವುದೂ ಇಲ್ಲ, ಸಮರ್ಥಿಸುವುದೂ ಇಲ್ಲ.

ಅಲ್ಲಾಹನ ನಿದರ್ಶನಗಳನ್ನು ಸಾಕ್ಷಿಯಾಗುವಂತಹ ಗಮನಾರ್ಹ ಘಟನೆಗಳನ್ನು ಕುರ್‌ಆನಿನುದ್ದಕ್ಕೂ ಇತರ ವಚನಗಳಲ್ಲಿ ವಿಸ್ತರಿಸಲಾಗುತ್ತದೆ ಮತ್ತು ಸಮರ್ಥಿಸಲಾಗುತ್ತದೆ. 'ಆಕಾಶ ಪ್ರಯಾಣ'ಕ್ಕೆ ಸಂಬಂಧಿಸಿದ ಕಾಲ್ಪನಿಕ ಕಥೆಗಳನ್ನು ರುಜುವಾತು ಮಾಡಲು ಕುರ್‌ಆನಿನಲ್ಲಿ ಒಂದೇ ಒಂದು ವಚನಗಳಿಲ್ಲ. ಈ ಪವಾಡಗಳ ಮೂಲವು, ಅರಬೀ ಧರ್ಮದ ಚೆಂದಿಚೀಲದೊಳಗೆ ಉಳಿದಂತಹ, ಒಂದು ಅನಾಚಾರಿಕ ಅವಶೇಷವಾಗಿದೆ. ಅವರು ಇದನ್ನು 17:1 ರಲ್ಲಿನ '*ಅಸ್ರಾ*' ಎಂಬ ಪದಕ್ಕೆ 'ರಾತ್ರಿ ಪ್ರಯಾಣ' ಎಂಬ ಅರ್ಥವನ್ನು ನೀಡಿ ಅದರ ನೈಜ್ಯ ಅರ್ಥವನ್ನು ಅಡಗಿಸಿದರು. ಈ ಪದವನ್ನು ಕುರ್‌ಆನಿನ ಅನೇಕ ಸ್ಥಳಗಳಲ್ಲಿ ಕಾಣಬಹುದು, *ಉಸ್ರಾ* ಎಂಬ ರೂಪದಲ್ಲಿ ಬಳಕೆಯಾದಲ್ಲೆಲ್ಲಾ ಅದು *ವಶಗೊಳಿಸುವುದು* ಅಥವಾ *ಸೆರೆಹಿಡಿಯುವುದು* ಎಂಬುವುದನ್ನು ಉಲ್ಲೇಖಿಸುತ್ತದೆ. *ಅಸ್ರಾ* ಎಂದರೆ ಸರಳವಾಗಿ *ವಶಗೊಳ್ಳು* ಅಥವಾ *ಸೆರೆಹಿಡಿಯಲ್ಪಡು* ಎಂದರ್ಥವಾಗಿದೆ.

ರಾತ್ರಿ ಸಮಯದಲ್ಲಿ ಅಲ್ಲಾಹನ ನಿರ್ದೇಶನಗಳಿಗೆ ಸಾಕ್ಷಿಯಾಗುವ ಮೂಸಾರ ಇತಿಹಾಸವು ಸ್ಪಷ್ಟವಾಗಿ ಕುರ್‌ಆನಿನಲ್ಲಿ ಬರೆಯಲಾಗಿದೆ. ಆದ್ದರಿಂದ, ಈ ವಚನದಲ್ಲಿನ ಘಟನೆಯನ್ನು ಮೂಸಾರ ಹೊರತು ಬೇರೆ ಯಾವುದೇ ಪ್ರವಾದಿಗೆ ಸಂಬಂಧಿಸಲು ಸಾಧ್ಯವಿಲ್ಲ.

ಮೊದಲ ಸಂದರ್ಶನ:

> ನಿಮಗೆ ಮೂಸಾರ ಇತಿಹಾಸವೇನಾದರೂ ತಲುಪಿದೆಯೇ?[69] ಅವರು ಬೆಂಕಿಯೊಂದನ್ನು ಕಂಡಾಗ ತನ್ನ ಕುಟುಂಬದವರೊಡನೆ, "ಸಲ್ಪ ತಡೆಯಿರಿ, ನಾನೊಂದು ಬೆಂಕಿಯನ್ನು ಕಂಡಿದ್ದೇನೆ. ನಾನು ನಿಮಗಾಗಿ ಕೆಂಡವೊಂದನ್ನು ತರಬಹುದು ಅಥವಾ ಆ ಬೆಂಕಿಯಿಂದ (ದಾರಿಯ ಕುರಿತು) ಮಾರ್ಗದರ್ಶನವು ಸಿಗಬಹುದು" ಎಂದು ಹೇಳಿದ ಸಂದರ್ಭ. ಅಲ್ಲಿಗೆ ತಲುಪಿದಾಗ ಹೀಗೆ ಕರೆಯಲಾಯಿತು, "ಓ ಮೂಸಾ, ನಾನೇ ನಿಮ್ಮ ಪ್ರಭು. ನಿಮ್ಮ ಪಾದರಕ್ಷೆಗಳನ್ನು ಕಳಚಿ ಬಿಡಿರಿ. ನೀವು ಪವಿತ್ರ ಕಣಿವೆಯಾದ ತುವಾದಲ್ಲಿದ್ದೀರಿ. ಮತ್ತು ನಾನು ನಿಮ್ಮನ್ನು ಆರಿಸಿಕೊಂಡಿದ್ದೇನೆ. ನಿಮಗೆ ಅವತೀರ್ಣವಾಗುವುದನ್ನು ಆಲಿಸಿರಿ. ನಿಶ್ಚಯವಾಗಿಯೂ ನಾನೇ ಅಲ್ಲಾಹ್, ನನ್ನ ಹೊರತು ಇನ್ನಾವ ದೇವನೂ ಇಲ್ಲ. ಆದ್ದರಿಂದ ನೀವು ನನ್ನ ಸೇವೆಯನ್ನು ಮಾತ್ರ ಮಾಡಿರಿ ಮತ್ತು ನನ್ನ ಸ್ಮರಣೆಗಾಗಿ ಬದ್ಧತೆಗಳನ್ನು ಎತ್ತಿಹಿಡಿಯಿರಿ. (ಅಂತ್ಯ) ಘಳಿಗೆಯು ಖಂಡಿತವಾಗಿಯೂ ಬರಲಿದೆ. ಪ್ರತಿಯೊಬ್ಬ ಜೀವಿಯೂ ತನ್ನ ಪರಿಶ್ರಮಕ್ಕನುಸಾರವಾಗಿ ಪ್ರತಿಫಲ ಪಡೆಯುವಂತಾಗಲು ನಾನು ಆ ಸಮಯವನ್ನು ಬಹುತೇಕ ರಹಸ್ಯವಾಗಿಡಲು ಇಚ್ಛಿಸಿದ್ದೇನೆ. ಆದುದರಿಂದ, ಅದರ ಮೇಲೆ ವಿಶ್ವಾಸವಿರಿಸದ ಮತ್ತು ತನ್ನ ಸ್ವೇಚ್ಛೆಗಳ ದಾಸನಾಗಿ ಬಿಟ್ಟವನಿಂದ ವಿಚಲಿತಗೊಳ್ಳಬೇಡಿರಿ. ಅನ್ಯಥಾ ನೀವು ವಿನಾಶದಲ್ಲಿ ಬೀಳುವಿರಿ." (20:9-16)

[69] ಮೂಸಾರ ಇತಿಹಾಸವು ಕುರ್‌ಆನಿನಲ್ಲಿ ಪ್ರಧಾನ ಸ್ಥಾನವನ್ನು ಪಡೆದಿದೆ. ಅಲ್ಲಾಹನ ಸಲುವಾಗಿ ಸವಾಲನ್ನು ತೆಗೆದುಕೊಳ್ಳುವವರಿಗೆ ಅವರು ಒಂದು ಉತ್ತಮ ಉದಾಹರಣೆಯಾಗಿ ಸ್ಥಾಪಿತರಾಗಿದ್ದಾರೆ. ಅವರು ತೀರ್ವವಾದವನ್ನು ಪ್ರೋತ್ಸಾಹಿಸಲಿಲ್ಲ, ಆದರೆ ಅದೃಷ್ಯ ದೇವನಲ್ಲಿ ತನ್ನ ಭರವಸೆಯನ್ನು ನೆಲೆಸಿದ್ದರು.

- 20:24-25 ರಲ್ಲಿ ಅಲ್ಲಾಹನು ಮೂಸಾರಿಗೆ ಫಿರ್‌ಔನಿನ ಬಳಿಗೆ ಹೋಗಲು ಹೇಳುತ್ತಾನೆ.

- 20:26-37 ರಲ್ಲಿ ಸಂಭಾಷಣೆಯು ಮುಂದುವರಿಯುತ್ತದೆ, ಆದರೆ ಅದು ನಿಖರವಾಗಿ ಅವರ ಕಾರ್ಯಯೋಜನೆಯ ಬಗ್ಗೆಯಾಗಿದೆ.

- 20:38-40 ರಲ್ಲಿ ಅಲ್ಲಾಹನು ಅವರ ಗತಿಸಿ ಹೋದ ವೈಯಕ್ತಿಕ ಘಟನೆಯನ್ನು ತಿಳಿಸುತ್ತಾನೆ. ವಚನ 40ರ ಕೊನೆಯ ಭಾಗ ಮತ್ತು ಆನಂತರದ ವಚನದಲ್ಲಿ ಅಲ್ಲಾಹನು ಹೇಳುತ್ತಾನೆ, '*ನೀವು ಮಿದಿಯನ್‌ನಲ್ಲಿ ಅನೇಕ ವರ್ಷಗಳ ವಾಸಿಸಿದಿರಿ ಮತ್ತು ಈಗ ನೀವು ಒಂದು ಯೋಜನೆಯ ಪ್ರಕಾರ ಬಂದಿರುವಿರಿ*'. (20:24 ರಲ್ಲಿ ಕಂಡಂತೆ, ಅವರಿಗೆ ನೀಡಲಾದ ಅತ್ಯಂತ ದೊಡ್ಡ ಕಾರ್ಯನಿಗದಿಯು, ಫಿರ್‌ಔನನ್ನು ಭೇಟಿಯಾಗುವುದಾಗಿತ್ತು.)

ಆದ್ದರಿಂದ 17:1 ವಚನವು ಮೂಸಾರ ಇತಿಹಾಸವನ್ನು ಸೂಚಿಸುತ್ತದೆ ಮತ್ತು ಇದು 20:9-48 ವಾಕ್ಯವೃಂದದ ಜೊತೆ ಹೊಂದಿಕೊಳ್ಳುತ್ತದೆ. ಆದರೆ ಧಾರ್ಮಿಕರು, ಮಕ್ಕಾದಲ್ಲಿ ಅಸ್ತಿತ್ವದಲ್ಲಿರದ ಒಂದು ಮಸೀದಿಯಿಂದ ಜೆರುಸಲೆಮಿನಲ್ಲಿ ಅಸ್ತಿತ್ವದಲ್ಲಿರದ ಮತ್ತೊಂದು ಮಸೀದಿಯ ತನಕ ಮುಹಮ್ಮದರ ಪ್ರಯಾಣದ ಬಗ್ಗೆ ಒಂದು ಸುದೀರ್ಘ ಕಥೆಯನ್ನು ರಚಿಸಿದರು, ತದನಂತರ ಮಹಮ್ಮದರು ಅಲ್ಲಾಹನ ಜೊತೆ 'ವಿಧ್ಯುಕ್ತ ಪ್ರಾರ್ಥನೆ'ಯ ಬಗ್ಗೆ ವ್ಯವಹರಿಸಲು ಏಳನೇ ಆಕಾಶದವರೆಗೆ ಕರೆದೊಯ್ಯಲಾಯಿತೆಂಬ ಕಥೆಯನ್ನು ವಿಸ್ತರಿಸುತ್ತಾರೆ.

ಕೊನೆಯ ಪ್ರವಾದಿಗೆ ಕುರ್‌ಆನನ್ನು ಸ್ವೀಕರಿಸುವುದು ಹಾಗೂ ಅದನ್ನು ಓದಿ ಹೇಳುವುದನ್ನು ಹೊರತುಪಡಿಸಿ (29:51), ಹಗಲಿನಲ್ಲೋ ಅಥವಾ ರಾತ್ರಿಯಲ್ಲೋ ಬೇರೆ ಯಾವುದೇ ನಿದರ್ಶನಗಳಿಗೆ ಅಥವಾ ದೃಷ್ಟಾಂತಗಳಿಗೆ ಸಾಕ್ಷಿಯಾಗಿರುವುದಕ್ಕೆ ಕುರ್‌ಆನಿನಲ್ಲಿ ಯಾವುದೇ ಪುರಾವೆಗಳಿಲ್ಲ.

(ಅಲ್ಲಾಹನ ಆದೇಶ ಅಥವಾ ಶಾಸನಗಳಿಗೆ ಸಂಬಂಧಪಟ್ಟ) *ಮಸ್ಜಿದಿಲ್ ಹರಾಮಿ* ಮತ್ತು *ಮಸ್ಜಿಜಿದಿಲ್ ಅಕ್ಸಾ* ಎಂಬುವವುಗಳು ಕೊನೆಯ ಪ್ರವಾದಿಯ ಸಮಯಕ್ಕಿಂತ ದೀರ್ಘಕಾಲ ಮುಂಚಿತವಾಗಿಯೇ ಅಲ್ಲಾಹನ ವ್ಯವಸ್ಥೆಯ ಭಾಗವಾಗಿ ಅಸ್ತಿತ್ವದಲ್ಲಿದ್ದವು. ಕುರ್‌ಆನ್ ಅವತೀರ್ಣಗೊಂಡಾಗ, ಅಲ್ಲಾಹನ ನಿದರ್ಶನಗಳನ್ನು ವ್ಯಕ್ತಪಡಿಸಿದ ಈ ಕಥೆಯು, ಒಬ್ಬ ವ್ಯಕ್ತಿಯು ರಾತ್ರಿಯ ಸಂದರ್ಭದಲ್ಲಿ ಸಾಕ್ಷಿಯಾದ ಹಿಂದೆ ನಡೆದ ಕ್ರಿಯೆಯನ್ನು ಉಲ್ಲೇಖಿಸುತ್ತಿದೆ ಎಂದು ಅವರಿಗೆ ಸ್ಪಷ್ಟವಾಗಿತ್ತು.

ನಿಜವಾಗಿಯೂ ದೃಷ್ಟಾಂತಗಳನ್ನು ನೇರವಾಗಿ ನೋಡಿರುವ ವ್ಯಕ್ತಿಯು ಯಾರೆಂದು ಗುರುತಿಸಲು ಕುರ್‌ಆನಿನ ಇತರ ವಚನಗಳನ್ನು ಪರಿಶೋಧಿಸಿದರೆ, ಆ ಸೆರೆಹಿಡಿಯಲ್ಪಟ್ಟವರು ಮೂಸರಾಗಿದ್ದರೆಂಬುವುದರಲ್ಲಿ ನಿಗೂಢವೇನೂ ಇಲ್ಲವೆಂದು ತಿಳಿದುಬರುತ್ತದೆ. ಇದಲ್ಲದೆ, ಕುರ್‌ಆನ್ ಅವತೀರ್ಣವಾದ ಸಮಯದಲ್ಲಿ, ಜೆರುಸಲೆಮಿನಲ್ಲೋ ಅಥವಾ ಮಕ್ಕಾದಲ್ಲೋ 'ಪವಿತ್ರ ಮಸೀದಿ' ಎಂಬ ಸಂಗತಿಯೇ ಇರಲಿಲ್ಲ.

ಆ ವಚನವನ್ನು ನಾವು ಪರಿಶೀಲಿಸೋಣ:

ಮಿನಲ್ ಮಸ್ಜಿದಿಲ್ ಹರಾಮಿ	ಸಮ್ಮತಿಸಲ್ಪಟ್ಟ ನಿರ್ಬಂಧಗಳಿಂದ
ಇಲಲ್ ಮಸ್ಜಿದಿಲ್ ಅಕ್ಸಾ	ಸಮ್ಮತಿಸಲ್ಪಟ್ಟ ಆದೇಶದ ಕಿನಾರೆಗಳ ಕಡೆಗೆ
ಅಲ್ಲಝೀ ಬಾರಕ್ನಾ ಹೌಲಹು	ಅದರ ಸುತ್ತಲೂ ನಾವು ಅನುಗ್ರಹಿಸಿರುವೆವು
ಲಿನುರಿಯಹು	ನಾವು ಅವರಿಗೆ ತೋರಿಸಿಕೊಡಲು
ಮಿನ್ ಆಯಾತಿನಾ	ನಮ್ಮ ನಿದರ್ಶನಗಳಿಂದ

ಈ ವಚನವು, ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳ ಕೇವಲ ಒಂದು ಭಾಗವಾದ, ಅಲ್ಲಾಹನ ದೃಷ್ಟಾಂತಗಳನ್ನು ಸಾಕ್ಷಿಯಾದ ಮೂಸಾರನ್ನು ಉದ್ದೇಶಿಸಿದ ಪೂರ್ವಯೋಜಿತವಲ್ಲದ ಘಟನೆಯನ್ನು ಸುಸ್ಪಷ್ಟವಾಗಿ ವಿವರಿಸುತ್ತದೆಯೇ ಹೊರತು, ಈ ವಚನವು ಬೇರೆ ಯಾವುದೇ ಉದ್ದೇಶವನ್ನೂ ಹೊಂದಿಲ್ಲ. ಅದರ ಸುತ್ತಮುತ್ತಲಿನ ಸಂದರ್ಭಗಳನ್ನು ಪರಿಶೀಲಿಸುವ ಮೊದಲು ಘಟನೆಯ ವಸ್ತುನಿಷ್ಠೆಯನ್ನು ಅರ್ಥೈಸಲು ನಾವು ವಚನವನ್ನು ಸಂಪೂರ್ಣವಾಗಿ ಓದಬೇಕು. ಇದು ಪ್ರಾರ್ಥನೆಗಾಗಿಯೋ ಅಥವಾ ಆರಾಧನೆಗಾಗಿಯೋ ನಡೆದ ಘಟನೆಯಲ್ಲ, ಬದಲಿಗೆ ಅಲ್ಲಾಹನ ನಿದರ್ಶನಗಳನ್ನು ಸಾಕ್ಷಿಯಾಗಲಿಕ್ಕಾಗಿತ್ತು. ಮೂಸಾರು ಮಾತ್ರ ಈ ಘಟನೆಯನ್ನು ಕಣ್ಣಾರೆ ಕಂಡವರಾಗಿದ್ದರು ಎಂದು ನಾವು ಕಾಣುತ್ತೇವೆ, ಇದು ಅವರು ಒಂದು ಕಾರ್ಯವನ್ನು ನಿರ್ವಹಿಸಲು ಅವರ ಹೃದಯವನ್ನು ಪ್ರಬಲಗೊಳಿಸಲಿಕ್ಕಾಗಿತ್ತು. “ಓ ಮೂಸಾ, ನಾನು ನಿನ್ನನ್ನು ನನಗಾಗಿ ಆಯ್ಕೆಗೊಳಿಸಿದ್ದೇನೆ” (20:41) ಎಂದು ಈ ಸಂದರ್ಶನದ ಸಂದರ್ಭದಲ್ಲಿ ಅಲ್ಲಾಹನು ಅವರಿಗೆ ಹೇಳಿದ್ದಾನೆ. ನಿದರ್ಶನಗಳನ್ನು ಕಂಡ ನಂತರ ಅವರಿಗೆ ಅಲ್ಲಾಹನ ಮೇಲೆ ವಿಶ್ವಾಸಿಸಬೇಕೋ ಅಥವಾ ಬೇಡವೋ ಎಂದು ತೀರ್ಮಾನಿಸಬಹುದಿತ್ತು. ಅವರು ಸದ್ಯದಲ್ಲೇ ಮಾಡಬೇಕಾಗಿದ್ದ ಕಾರ್ಯವು ಅಲ್ಲಾಹನ ಸಮ್ಮತಿಸಲ್ಪಟ್ಟಿರುವ ಆದೇಶಗಳ ಕಿನಾರೆಗಳು ಮಾತ್ರವಾಗಿತ್ತು ಹಾಗೂ ಕುರ್‌ಆನ್ ಇದನ್ನು *ಮಸ್ಜಿದಿಲ್ ಅಕ್ಸಾ* ಎಂದು ಹೇಳುತ್ತದೆ. ಇದು ಅವರು ಬದ್ಧರಾಗಬೇಕಾದ ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳ ಇಡೀ ಚೌಕಟ್ಟಿನೊಳಗಿನ ತನ್ನ ಕರ್ತವ್ಯದ ಒಂದು ಸಣ್ಣ ಭಾಗವಾಗಿತ್ತು. *ಮಸ್ಜಿದಿಲ್ ಹರಾಮಿ* ಎಂಬ ಪದವು, ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳ ಇಡೀ ಪರಿಕಲ್ಪನೆಯನ್ನು ಒಳಗೊಂಡ ನಿರ್ಬಂಧಗಳನ್ನು ಉಲ್ಲೇಖಿಸಲು ಕುರ್‌ಆನಿನಲ್ಲಿ ಬಳಸಲಾಗಿದೆ.

ಮೂಸಾರು ಬೆಂಕಿಯನ್ನು ಕಂಡಾಗ, ಅವರು ಅದರ ಕಡೆಗೆ ಆಕರ್ಷಿತರಾದರು, ತುವಾ ಕಣಿವೆಯಿಂದ ಹತ್ತಿರದ ರಸ್ತೆ ಬದಿಯಲ್ಲಿ ತನ್ನ ಪತ್ನಿಯನ್ನು ಬಿಟ್ಟು ಅದರ ಕಡೆಗೆ ಹೋಗಲು ನಿರ್ಧರಿಸಿದರು. ಅಂತರವು ಬಹಳ ಕಡಿಮೆಯಾಗಿತ್ತು ಮತ್ತು ಭೇಟಿಯು ಬಹಳ ಸಂಕ್ಷಿಪ್ತವಾಗಿತ್ತು. 20:9-47 ರಲ್ಲಿನ ಮೂಸಾರ ಈ ಘಟನೆಯ ಅನುಭವವನ್ನು ಧಾರ್ಮಿಕರು 17:1 ರ ಜೊತೆಗೆ ಸಂಬಂಧಿಸಲು ಪ್ರಯತ್ನಿಸಲಿಲ್ಲ. ಅದರ ಬದಲಿಗೆ, ಐದು ದೈನಂದಿನ ವಿಧ್ಯುಕ್ತ ಪ್ರಾರ್ಥನೆಗಳನ್ನು ನಡೆಸುವಂತೆ ಜನರನ್ನು ಬೆಪ್ಪರನ್ನಾಗಿಸಲು, *ಮೀರಾಜ್* ಎಂಬ ಕಾಲ್ಪನಿಕ ಕಥೆಯನ್ನು ಪಸರಿಸಲು ಕುರ್‌ಆನಿನ ಈ ಚರಣವನ್ನು ತಿರುಚಿದರು.

ಅಕ್ಸಾ ಪದದ ಅರ್ಥದ ಬಗ್ಗೆ ಇರುವ ತಪ್ಪು ತಿಳುವಳಿಕೆಯನ್ನು ವಿವರಿಸುವ ಮೊದಲು, ನಾವು ಹಿಂದಿನ ಜನರ ಇತಿಹಾಸದ ಮೇಲೆ ಕಣ್ಣಾಯಿಸೋಣ. ಮೂಸಾರ ಕಾಲಾವಧಿಯಲ್ಲೂ ಅಥವಾ ಅದರ ನಂತರವೂ ಭೌತಿಕ 'ಪವಿತ್ರ ಮಸೀದಿ' ಅಥವಾ ಭೌತಿಕ 'ದೂರದ ಮಸೀದಿ' ಅಥವಾ ಯಾವುದೇ ಭೌತಿಕ ಮಸೀದಿ ಎಂಬ ವಿಷಯವು ಇರಲಿಲ್ಲ.

ಸಾಂಪ್ರದಾಯಿಕವಾಗಿ, *ಅಕ್ಸಾ* ಎಂಬುವುದನ್ನು *ದೂರ* ಅಥವಾ *ಅತಿದೂರ* ಎಂದಾಗಿ ಅರ್ಥೈಸಲಾಗಿದೆ. ನಾವು ಕುರ್‌ಆನಿನ ಇತರ ಚರಣಗಳನ್ನು ನೋಡಿದರೆ, ಇದು *ಒಂದೇ ಪ್ರದೇಶದ ಸುತ್ತುಮುತ್ತಲೂ* ಎಂಬ ಅರ್ಥವನ್ನು ಕಾಣಬಹುದು. *ದೂರ* ಎಂಬ ಪದವನ್ನು ಸೂಚಿಸಲು ಕುರ್‌ಆನ್ ಯಾವ ಪದ ಬಳಸುತ್ತದೆಂದು ನೋಡೋಣ. ಕುರ್‌ಆನಿನಲ್ಲಿ *ದೂರ* ಎಂಬುವುದನ್ನು ಉಲ್ಲೇಖಿಸಲಾದ ಪ್ರತಿ ಬಾರಿಯೂ *ಬಉದ* ಎಂಬ ಮೂಲದಿಂದ ಪಡೆದಿರುವ *ಬಈದ್* ಎಂಬ ಪದವನ್ನು ಬಳಸಲಾಗಿದೆ:

> ಲಾಭವು ತ್ವರಿತವಾಗಿ ಸಿಗುತ್ತಿದ್ದರೆ ಅಥವಾ ಪ್ರಯಾಣವು ಲಘುವಾಗಿರುತ್ತಿದ್ದರೆ ನಿಶ್ಚಯವಾಗಿಯೂ ಅವರು ನಿಮ್ಮನ್ನು ಅನುಸರಿಸುತ್ತಿದ್ದರು. ಅದು ಅವರಿಗೆ ಬಹು ದೂರವಾದರೆ *(ಬಉದತ್)* ಅವರು, 'ನಮ್ಮಿಂದ ಸಾಧ್ಯವಾಗುತ್ತಿದ್ದರೆ ಖಂಡಿತವಾಗಿಯೂ ನಿಮ್ಮೊಂದಿಗೆ ಹೊರಡುತ್ತಿದ್ದೆವು' ಎಂದು ಅವರು ಅಲ್ಲಾಹನ ಮೇಲೆ ಪ್ರತಿಜ್ಞೆ ಮಾಡುತ್ತಾರೆ. (9:42)

9:42 ರಲ್ಲಿ *ಬಉದತ್* ಎಂಬ ಪದವು ಒಂದು ದೂರದ ಅಂತರವನ್ನು ವಿವರಿಸಲು ಬಳಸಲಾಗಿದೆ. *ದೂರ* ಎಂಬುವುದರ ಇತರ ಸಮಾನ ಅರ್ಥಗಳಿಗೆ ಕುರ್‌ಆನ್ *ಬಈದ್* ಎಂದು ಯಾವುದಾದರೂ ಬಹಳ ದೂರದ ಅಂತರವನ್ನು ವಿವರಿಸಲು ಬಳಸುತ್ತದೆ.

> ಅವರು ವಿಮುಖರಾದರೆ ಅವರೊಂದಿಗೆ ಹೇಳಿರಿ, ನಾನು ನಿಮಗೆ ಅದನ್ನೇ ಘೋಷಿಸುತ್ತಿದ್ದೇನೆ. ಇನ್ನು ನಿಮ್ಮೊಂದಿಗೆ ವಾಗ್ದಾನ ಮಾಡಲ್ಪಟ್ಟಿರುವಂತಹ ವಿಷಯವು ಸಮೀಪವಿದೆಯೋ ಅಥವಾ ದೂರವಿದೆಯೋ *(ಬಈದ್)* ಎಂಬುವುದು ನನಗರಿಯದು (21:109)

ಅಕ್ಸಾ ಎಂಬ ಪದವು *ಕಸವ* ಎಂಬ ಮೂಲಪದದಿಂದ ಪಡೆಯಲಾಗಿದೆ, ಅದರ ಅರ್ಥವು *ಒಂದು ಖಚಿತವಾದ ಸ್ಥಳದ ಕೆನಾರೆ ಅಥವಾ ಅಂಚು* ಎಂದಾಗಿದೆ. ಈ ಪದವು ವಿಧ್ಯರ್ಥವಾಗಿಯೂ (ಅಂದರೆ ಆಜ್ಞೆಯ ರೂಪದಲ್ಲಿ) ಬಳಸಲಾಗಿದೆ.

ಈ ಪದವನ್ನು ಇತರ ವಿಷಯಗಳಿಗೆ ಹೇಗೆ ಅನ್ವಯಿಸಲಾಗಿದೆ ಎಂದು ನಾವು ನೋಡೋಣ:

> ನೀವು ಕಣಿವೆ ಪ್ರದೇಶದಲ್ಲಿ ಮತ್ತು ಅವರು ಕಣಿವೆಯ <u>ಅಂಚಿನಲ್ಲಿ</u> *(ಕುಸ್ವಾ)* ಮತ್ತು ತಳವು ನಿಮ್ಮಿಂದ ಕೆಳಗೆ ಇದ್ದ ಸಂದರ್ಭ. (8:42)

8:42 ವಚನವು ಒಂದೇ ಪ್ರದೇಶದಲ್ಲಿದ್ದ ಜನರ ಎರಡು ಗುಂಪುಗಳ ಉಪಸ್ಥಿತಿಯನ್ನು ವಿವರಿಸುತ್ತದೆ. *ಬಿಲ್ ಉದ್ಬಾನ್* ಎಂದರೆ *ಕಣಿವೆಯಲ್ಲಿ* ಎಂದರ್ಥವಾಗಿದೆ ಮತ್ತು *ಕುಸ್ಬಾ* ಎಂಬ ಪದವು (ಇದು *ಕಸವ* ಎಂಬ ಮೂಲಪದದಿಂದಲೇ ಪಡೆಯಲಾಗಿದೆ) *ಅದೇ ಪ್ರದೇಶದ ಸುತ್ತಲೂ* ಎಂದರ್ಥವನ್ನು ನೀಡುತ್ತದೆ. ಆದ್ದರಿಂದ ಈ ವಚನವು, ಶತ್ರುಗಳನ್ನು ದೂರದಲ್ಲಿಲ್ಲ ಬದಲಾಗಿ ಸುತ್ತಮುತ್ತಲಿನ ಪ್ರದೇಶಗಳಲ್ಲೇ ಇದ್ದಾರೆ ಎಂದು ಸೂಚಿಸುತ್ತಿದೆ.

ನಾವು ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ:

> ನಗರದ ಅಂಚಿನಲ್ಲಿರುವ *(ಅಕ್ಸ-ಲ್-ಮದೀನತಿ)* ಒಬ್ಬ ಮನುಷ್ಯನು ಧಾವಿಸಿಕೊಂಡು ಬಂದನು, ಅವರು "ಓ ಮೂಸಾ! ನಿಶ್ಚಯವಾಗಿಯೂ ಅಧಿಕಾರಿಗಳು ನಿನ್ನನ್ನು ಕೊಲ್ಲಲು ಸಮಾಲೋಚನೆ ನಡೆಸುತ್ತಿದ್ದಾರೆ." (28:20)

ಅಕ್ಸ-ಲ್-ಮದೀನತಿ ಎಂಬುವುದರ ಅರ್ಥ '*ದೂರದ ಒಂದು ನಗರ*' ಎಂದಲ್ಲ. ಆ ಮನುಷ್ಯನು ಅದೇ ನಗರದಿಂದ ಓಡಿಬಂದಿದ್ದ. ಕುರ್‌ಆನಿನಲ್ಲಿರುವ ಇತಿಹಾಸದ ಪ್ರಕಾರ ಮೂಸಾರು ಒಬ್ಬ ವ್ಯಕ್ತಿಯನ್ನು ಕೊಂದಿದ್ದರು ಮತ್ತು ಅವರು ವಿಚಾರಣೆಯನ್ನು ಎದುರಿಸಲು ಅಧಿಕಾರಿಗಳಿಗೆ ಬೇಕಾದವರಾಗಿದ್ದರು. ಅದೇ ನಗರವಾಸಿಯಾಗಿದ್ದರಿಂದ ಆ ಮನುಷ್ಯನಿಗೆ, ಅಧಿಕಾರಿಗಳು ಮೂಸಾರನ್ನು ಕೊಲ್ಲಲು ಯೋಜನೆ ಹೂಡಿದ್ದಾರೆ ಎಂಬ ಸುದ್ದಿಯು ಸಿಕ್ಕಿತು, ಒಡನೆ ಆ ವಿಷಯವನ್ನು ಮೂಸಾರಿಗೆ ತಿಳಿಸಲು ಧಾವಿಸಿ ಓಡಿ ಬಂದನು.

ಆದ್ದರಿಂದ, *ಮಸ್ಜಿದಿಲ್ ಅಕ್ಸಾ* ಎಂಬುವುದು ಎಲ್ಲೋ ಬಹಳ ದೂರದಲ್ಲಿರುವ ಒಂದು ಭೌತಿಕ ಕಟ್ಟಡವನ್ನು ಸೂಚಿಸುವುದಿಲ್ಲ. ಒಂದು ಭೌತಿಕ ಕಟ್ಟಡವನ್ನು ಸೂಚಿಸುತ್ತದೆ ಎಂದು ತಪ್ಪಾಗಿ ಉಲ್ಲೇಖಿಸಲ್ಪಡುವ *ಮಸ್ಜಿದ್* ಎಂಬ ಪದವು, ಕುರ್‌ಆನಿನಲ್ಲಿ ಬಳಸಲಾದ ಒಂದು ಹೊಸ ಪದವೇನಲ್ಲ, ಬದಲಾಗಿ ಅದು ಯಾವಾಗಲೂ ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶವನ್ನು ಉಲ್ಲೇಖಿಸಲು ಬಳಸಲಾಗಿದೆ; ಜೊತೆಗೆ, ಇಬ್ರಾಹೀಮರ ಕಾಲದಿಂದಲೂ ಮಸೀದಿ ಎಂದು ಕರೆಯಲ್ಪಡುವ ಆರಾಧನಾ ಮನೆ ಎಂಬ ಸಂಗತಿಯೇ ಇರಲಿಲ್ಲ. ಮೂಸಾರು ಕೂಡ ತನ್ನ ಜನರಿಗೆ ಆರಾಧನೆಗಾಗಿ ಯಾವುದೇ ಮನೆಯನ್ನು ನಿರ್ಮಿಸಲು ಕರೆನೀಡಲಿಲ್ಲ. ಸಿನಗಾಗ್'ಗಳನ್ನು ನಿರ್ಮಿಸಿದ್ದು ಅವರ ನಂತರ ರೂಪುಗೊಂಡ ಯಹೂದಿಗಳಾಗಿದ್ದರು. ಅವರು ಅದನ್ನು ಮಸ್ಜಿದ್ ಅಥವಾ ಮಸೀದಿ ಎಂದು ಕರೆಯಲೂ ಇಲ್ಲ. ಮರ್ಯಮರ ಮಗ ಈಸಾ, ಸಿನಗಾಗ್'ಗಳಲ್ಲಿ ಆಚರಿಸಲಾಗುತ್ತಿದ್ದ ಧಾರ್ಮಿಕ ವ್ಯವಸ್ಥೆಯನ್ನೇ ನಾಶ ಮಾಡುವ ಸಲುವಾಗಿ ಜೆರುಸಲೆಮಿಗೆ ತೆರಳಿದ್ದರು. ಅದರ ಉನ್ನತ ಪುರೋಹಿತರು ಅವರನ್ನು ಶಿಲುಬೆಗೇರಿಸಲು ಆದೇಶಿಸಿದರು. ನಂತರ ಅವರ ಅನುಯಾಯಿಗಳೆಂದು ಹೇಳಿಕೊಳ್ಳುವವರು ಚರ್ಚುಗಳನ್ನು ನಿರ್ಮಿಸಿದರು. ಅವರೂ ಅದನ್ನು ಮಸ್ಜಿದ್ ಎಂದು ಕರೆಯಲಿಲ್ಲ. ಮೂಸಾರಿಗೆ ಸಿನಗಾಗ್'ಗಳ ಬಗ್ಗೆ ಏನೂ ತಿಳಿದಿರಲಿಲ್ಲ. ಈಸಾರಿಗೆ ಚರ್ಚುಗಳ ಬಗ್ಗೆ ಏನೂ ತಿಳಿದಿರಲಿಲ್ಲ. ಅದೇ ರೀತಿ, ಮುಹಮ್ಮದರಿಗೂ ಮಸೀದಿಗಳ ಬಗ್ಗೆ ಏನೂ ತಿಳಿದಿರಲಿಲ್ಲ. *ಮಸ್ಜಿದಿಲ್ ಅಕ್ಸಾ* ಎಂಬುವುದು,

ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶದ ಅಂಚು ಎಂದರ್ಥವಾಗಿದೆ, ಅದು ಅಲ್ಲಾಹನ ಆದೇಶಗಳಿಗೆ ತನ್ನ ಜವಾಬ್ದಾರಿಗಳನ್ನು ಸಮ್ಮತಿಸುವುದು ಎಂಬ ಮೂಸಾರನ್ನು ಉದ್ದೇಶಿಸಿದ ವಚನವಾಗಿದೆ.

ಎರಡನೇ ಸಂದರ್ಶನ:

> ನಾವು ಮೂಸಾರನ್ನು ನಲವತ್ತು ರಾತ್ರಿಗಳಿಗೆ ನಿಯೋಜಿಸಿದಾಗ. (2:51)
>
> ಮತ್ತು ನಾವು ಮೂಸಾರನ್ನು ಮೂವತ್ತು ರಾತ್ರಿಗಳಿಗೆ ನಿಯೋಜಿಸಿದೆವು ಮತ್ತು ನಾವು ಹತ್ತು ದಿನವನ್ನು ಹೆಚ್ಚಿಸಿದೆವು. ಆದ್ದರಿಂದ, ಅವರ ಪ್ರಭುವಿನ ನಿಶ್ಚಯಾವಧಿಯು ನಲವತ್ತು ರಾತ್ರಿಗಳಾಗಿತ್ತು. (7:142)

ಮೂಸಾರ ಇತಿಹಾಸವು ಕುರ್‌ಆನಿನ ಒಂದು ಪ್ರಮುಖ ಸ್ಥಾನವನ್ನು ಆವರಿಸಿಕೊಂಡಿದೆ. ಮೊದಲ ಸಂದರ್ಶನದ ಸಮಯದಲ್ಲಿ ದೃಷ್ಟಾಂತಗಳಿಗೆ ಸಾಕ್ಷಿಯಾಗುವ ಜೊತೆಗೆ, ಅಲ್ಲಾಹನೊಂದಿಗಿನ ತನ್ನ ಎರಡನೇ ಸಂದರ್ಶನವು ಮೇಲೆ ತಿಳಿಸಿದಂತೆ ಎರಡು ವಚನಗಳಲ್ಲಿ ಪುನರಾವರ್ತನೆಯಾಗಿದೆ. ನಂತರ ಮೂಸಾರು ಕಂಡಿರುವುದು ತನ್ನ ಪ್ರಭುವಿನ ಮಹಾ ನಿದರ್ಶನಗಳಿಂದಿರುವುದಾಗಿದೆ ಎಂದು ಖಚಿತಪಡಿಸಲು 53:1-18 ಮತ್ತು 20:23 ರಲ್ಲಿಯೂ ಉಲ್ಲೇಖಗಳಿವೆ. 53:1-18 ವಚನಗಳು ಕೊನೆಯ ಪ್ರವಾದಿಗೆ ಸಂಬಂಧಿಸಿದ ಘಟನೆಯಾಗಿದೆ ಎಂದು ಅನೇಕ ಜನರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಅವರಿಗೆ ತನ್ನ ಜೀವನಪರ್ಯಂತ ಕುರ್‌ಆನನ್ನು ಹೊರತುಪಡಿಸಿ ಬೇರೆ ಯಾವುದೇ ನಿದರ್ಶನಗಳನ್ನು ಪ್ರಕಟಗೊಳಿಸಲಾಗಿಲ್ಲ.

ಅರಬಿಗಳಿಗೆ ನೀಡಲ್ಪಟ್ಟಿರುವಾಗಲೂ, ಮತ್ತೊಂದು ಜನಾಂಗವಾದ ಯಹೂದಿಗಳಿಗೆ ಇಂತಹ ಔನತ್ಯವನ್ನು ಕುರ್‌ಆನ್ ನೀಡಿರುವುದು, ಮೊದಲ ಬಾರಿಗೆ ಕುರ್‌ಆನನ್ನು ಓದುವ ಯಾರಿಗಾದರೂ ಅಚ್ಚರಿಯನ್ನು ತರಬಹುದು. ಆರಂಭದಲ್ಲಿ ನಾವು ಓದುತ್ತೇವೆ:

> ಓ ಇಸ್ರಾಯೀಲರ ಸಂತತಿಗಳೇ, ನಾನು ನಿಮಗೆ ದಯಪಾಲಿಸಿದ ನನ್ನ ಅನುಗ್ರಹಗಳನ್ನು ಸ್ಮರಿಸಿರಿ. ನನ್ನೊಡನೆ ನೀವು ಮಾಡಿದ ಕರಾರನ್ನು ನೀವು ಪೂರೈಸಿದರೆ ನಿಮ್ಮೊಡನೆ ಮಾಡಿದ ಕರಾರನ್ನು ನಾನೂ ಪೂರೈಸುವೆನು. ಮತ್ತು ನನ್ನನ್ನು ಗೌರವಿಸಿರಿ. ನಾನು ಕಳುಹಿಸಿದ ಗ್ರಂಥದ ಮೇಲೆ ವಿಶ್ವಾಸವಿಡಿರಿ, ಈ ಗ್ರಂಥವು ಈ ಮೊದಲೇ ನಿಮ್ಮ ಬಳಿಯಲ್ಲಿರುವ ಗ್ರಂಥವನ್ನು ಸಮರ್ಥಿಸುತ್ತಿದೆ. ಅದನ್ನು ನಿಷೇಧಿಸುವವರಲ್ಲಿ ನೀವೇ ಮೊದಲಿಗರಾಗಬೇಡಿರಿ. ನನ್ನ ವಚನಗಳನ್ನು ಅಲ್ಪ ಬೆಲೆಗೆ ವಿಕ್ರಯಿಸಬೇಡಿರಿ. ಮತ್ತು ನನ್ನನ್ನು ಮಾತ್ರ ಲಕ್ಷಿಸಿರಿ. ಮಿಥ್ಯವನ್ನು ಸತ್ಯದೊಂದಿಗೆ ಬೆರೆಸಬೇಡಿರಿ ಮತ್ತು ತಿಳಿದೂ ತಿಳಿದೂ ಸತ್ಯವನ್ನು ಬಚ್ಚಿಡಬೇಡಿರಿ. ನೀವು ನಿಮ್ಮ ಬದ್ಧತೆಗಳನ್ನು ಪೂರೈಸಿರಿ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸಿರಿ ಮತ್ತು ವಿಧೇಯರಾಗುವವರೊಂದಿಗೆ ನೀವೂ ವಿಧೇಯರಾಗಿರಿ. (2:40-43)

ಇದು ಅದ್ಭುತವಾಗಿದೆ: ಇಸ್ರಾಯೀಲರ ಸಂತತಿಗಳು ಅರಬೀ ಜನಾಂಗಕ್ಕೆ ಸೇರಿರುವವರಲ್ಲ, ಆದರೂ ಅವರು ಈ ಗ್ರಂಥದ ಉದ್ದೇಶಿತ ಸ್ವೀಕೃತರ ಹಾಗೆ ಸಂಬೋಧಿಸಲಾಗಿದೆ.

ಕುರ್‌ಆನಿನ ಪ್ರಕಾರ, ಕೊನೆಯ ಪ್ರವಾದಿ ಮತ್ತು ಅವರ ಸುತ್ತಲಿದ್ದವರು ಅಲ್ಲಾಹನ ಗ್ರಂಥದ ಬಗ್ಗೆ ಯಾವುದೇ ಜ್ಞಾನವಿರದ ಜನಾಂಗಕ್ಕೆ *(ಉಮ್ಮಿಯ್ಯೀನ್)* ಸೇರಿದ್ದರು. ಆದಾಗ್ಯೂ ಧಾರ್ಮಿಕರು, *ಉಮ್ಮಿಯ್ಯೀನ್* ಎಂಬ ಪದಕ್ಕೆ *ಅನಕ್ಷರಸ್ಥ* ಎಂಬ ಒಂದು ಅಸಂಗತ ಅರ್ಥವಿವರಣೆಯನ್ನು ನೀಡಿದ್ದಾರೆ. ಇದರೊಂದಿಗೆ ಪ್ರವಾದಿ ಮತ್ತು ಅರಬರು ಅನಕ್ಷರಸ್ಥರು ಎಂದು ಹೇಳುತ್ತಾರೆ. ಪ್ರವಾದಿಯು ಅಕ್ಷರಸ್ಥರಾಗಿದ್ದರೆಂದು ಕುರ್‌ಆನ್ ಸ್ಪಷ್ಟವಾಗಿ ಸೂಚಿಸುತ್ತದೆ. ಪ್ರವಾದಿಯವರು ಅವರಿಗೆ ಓದಿಹೇಳಲ್ಪಡುವ ಹಿಂದಿನ ಕಥೆಗಳನ್ನು ಬರೆಯುತ್ತಿದ್ದಾರೆಂದು ಅನಾಚಾರಿಗಳು ಆರೋಪಿಸಿರುವುದನ್ನು 25:5 ರಲ್ಲಿ ಕಾಣಬಹುದು. 25:6 ರಲ್ಲಿ, ತಾನು ಬರೆದಿರುವುದೆಲ್ಲವೂ ಭೂಮಿ ಆಕಾಶಗಳ ರಹಸ್ಯಗಳನ್ನು ತಿಳಿದಿರುವಂತನಿಂದ ಅವತೀರ್ಣಗೊಂಡಿರುವುದಾಗಿದೆ ಎಂದು ಪ್ರವಾದಿಗೆ ಘೋಷಿಸಲು ಆದೇಶಿಸಲಾಗಿದೆ. ಧಾರ್ಮಿಕರು ಈ ಸರಳ ವಾಸ್ತವಿಕತೆಯನ್ನು ಅನುಕೂಲಕರವಾಗಿ ಅಲ್ಲಗಳೆದಿದ್ದಾರೆ.

> ಅವನು ಗ್ರಂಥದ ಬಗ್ಗೆ ಯಾವುದೇ ಜ್ಞಾನವಿರದ ಜನಾಂಗದ ಪೈಕಿಯಿಂದ ಒಬ್ಬ ಸಂದೇಶವಾಹಕನನ್ನು ಕಳುಹಿಸಿದನು, ಅವರಿಗೆ ಗ್ರಂಥವನ್ನೂ, ವಿವೇಕತೆಯನ್ನೂ ಕಲಿಸಿಕೊಡಲು, ಮತ್ತು ಅವರನ್ನು ಸಂಸ್ಕರಿಸಲು ಅವರು (ಸಂದೇಶವಾಹಕರು) ಅವತೀರ್ಣವನ್ನು ಓದಿ ಹೇಳುತ್ತಾರೆ. ಮತ್ತು ವಾಸ್ತವವಾಗಿ ಅವರು (ಅರಬೀ ಜನಾಂಗವು) ಹಿಂದಿನಿಂದಲೂ ಸಂಪೂರ್ಣ ನಷ್ಟದಲ್ಲಿದ್ದರು. (62:2)

ಈ ಗ್ರಂಥವನ್ನು, ದೇವಗ್ರಂಥದ ಬಗ್ಗೆ ತಿಳುವಳಿಕೆ ಇಲ್ಲದ ಪ್ರವಾದಿಗೆ ನೀಡಲಾಗಿತ್ತು ಎಂದು ಮೇಲಿನ ವಚನವು ಖಚಿತಪಡಿಸುತ್ತದೆ. ಅದೇ ಪ್ರದೇಶದಲ್ಲಿದ್ದ ಕ್ರೈಸ್ತರಿಗೆ ಮತ್ತು ಯಹೂದಿಯರಿಗೆ ಇದು ಅಸಾಮಾನ್ಯವಾದ ವಿಚಾರವಾಗಿತ್ತು.

ಪ್ರವಾದಿಯು ಅವರ ಜೊತೆ ಮಾತನಾಡಲು ಪ್ರಯತ್ನಿಸಿದ ವೇಳೆಯಲ್ಲಿ, ಅವರ ತಕ್ಷಣದ ಪ್ರತಿಕ್ರಿಯೆಯು ಅರಬೀ ಜನಾಂಗಕ್ಕೆ ಕುರ್‌ಆನನ್ನು ನೀಡಲ್ಪಟ್ಟುದರ ಪ್ರಸಕ್ತತೆಯನ್ನು ಪ್ರಶ್ನಿಸುವುದಾಗಿತ್ತು ಎಂಬುವುದು ಊಹಾತೀತವೇನಲ್ಲ. ಹಿಂದಿನ ಗ್ರಂಥಗಳನ್ನು ಸ್ವೀಕರಿಸಿದವರು (ಯಹೂದಿಗಳು ಮತ್ತು ಕ್ರೈಸ್ತರು) ಅಲ್ಲಾಹನ ಗ್ರಂಥವು ಒಬ್ಬ ಅರಬಿಗೆ ನೀಡಲಾಗಿರುವುದಕ್ಕೆ ತಮ್ಮ ಆಕ್ಷೇಪವನ್ನು ಪ್ರಕಟಿಸಿದ್ದರು. ಅಲ್ಲಾಹನಿಂದ ಮಾರ್ಗದರ್ಶನವನ್ನು ಪಡೆಯಬೇಕಾದರೆ, ಅವನು ಒಂದು ಯಹೂದಿಯೋ ಅಥವಾ ಕ್ರೈಸ್ತನೋ ಆಗಿರಬೇಕೆಂದು ಹೇಳುತ್ತಿದ್ದರು.

> ಅವರು ಹೇಳುತ್ತಾರೆ “ನೀವು ಮಾರ್ಗದರ್ಶನವನ್ನು ಪಡೆಯಬೇಕಾದರೆ, ಯಹೂದಿಯರಾಗಿರಬೇಕು ಅಥವಾ ಕ್ರೈಸ್ತರಾಗಿರಬೇಕು.” (2:135 ರ ಮೊದಲ ಭಾಗ)

ಕುರ್‌ಆನ್ ಎದುರುತ್ತರ ನೀಡುತ್ತದೆ:

> ಅವರಿಗೆ ಹೇಳಿರಿ "ನಾವು ಪ್ರಾಮಾಣಿಕರಾದ ಇಬ್ರಾಹೀಮರ ತತ್ವವನ್ನು ಅನುಸರಿಸುತ್ತೇವೆ, ಅವರು ಎಂದಿಗೂ ಮೂರ್ತಿ ಪೂಜಕರಾಗಿರಲಿಲ್ಲ." (2:135 ರ ಎರಡನೇ ಭಾಗ)

ಅಲ್ಲಾಹನ ನೈಜ್ಯ ಸೇವಕರು ಇಬ್ರಾಹೀಮರ ಉದಾಹರಣೆಯನ್ನು ಮಾತ್ರ ಅನುಸರಿಸುತ್ತಾರೆ. ಏಕದೇವ ವಿಶ್ವಾಸಿಯಾದ ಇಬ್ರಾಹೀಮರ ತತ್ವವನ್ನು ಅನುಸರಿಸುವ ತನಕ, ಯಹೂದಿಗಳು ಮತ್ತು ಕ್ರೈಸ್ತರು ಮೂರ್ತಿಪೂಜಕರಲ್ಲಿ ಸೇರುತ್ತಾರೆ ಎಂದು ಈ ಉತ್ತರದಿಂದ ನಾವು ನಿಸ್ಸಂದೇಹವಾಗಿ ಹೇಳಬಹುದು. ಅಲ್ಲಾಹನ ಸೇವಕರ ಮೂಲಭೂತ ನಂಬಿಕೆಯು ಈ ಕೆಳಗಿನ ಹೇಳಿಕೆಯನ್ನು ಅಂಗೀಕರಿಸಬೇಕಾಗಿದೆ:

> ಅವರಿಗೆ ಹೇಳಿರಿ, "ನಾವು ಅಲ್ಲಾಹನಲ್ಲಿ, ನಮ್ಮ ಮೇಲೆ ಅವತೀರ್ಣವಾಗಿರುವುದರಲ್ಲಿ, ಮತ್ತು ಇಬ್ರಾಹೀಮ್, ಇಸ್ಮಾಯೀಲ್, ಇಸ್ಹಾಕ್, ಯಾಕೂಬ್ ಮತ್ತು ಅವರ ಸಂತತಿಗಳಿಗೆ ಅವತೀರ್ಣವಾಗಿರುವುದರಲ್ಲಿ ಹಾಗೂ ಮೂಸಾ, ಈಸಾ ಮತ್ತು ಇತರ ಎಲ್ಲಾ ಪ್ರವಾದಿಗಳಿಗೆ ಅವರ ಪ್ರಭುವಿನಿಂದ ದೊರೆತಿರುವುದರಲ್ಲಿ ವಿಶ್ವಾಸವಿಟ್ಟಿದ್ದೇವೆ. ನಾವು ಅವರ ಮಧ್ಯೆ ತಾರತಮ್ಯ ತೋರಿಸುವುದಿಲ್ಲ. ಅವನಿಗಾಗಿ ನಾವು ಶಾಂತಿವಂತರು (ಮುಸ್ಲಿಮರು) ಆಗಿದ್ದೇವೆ." (2:136)

ಕುರ್‌ಆನಿನ ಬೋಧನೆಗೆ ಸಂಬಂಧಿಸಿದಂತೆ, ಇದು ಶಾಂತಿಯಲ್ಲಿರುವ ಒಬ್ಬ ವ್ಯಕ್ತಿಯ ಪರಿಪೂರ್ಣ ಪರಿಕಲ್ಪನೆಯಾಗಿದೆ. ಆದ್ದರಿಂದ, ಮೇಲೆ ಹೇಳಿದಂತೆ ಯಾರು ನೈಜ್ಯವಾಗಿ ವಿಶ್ವಾಸವಿರುಸುತ್ತಾರೋ, ಅವರನ್ನು ಮುಸ್ಲಿಮರು ಅಥವಾ ಅಲ್ಲಾಹನೊಂದಿಗೆ ಶಾಂತಿಯಲ್ಲಿರುವವರು ಎಂದು ಪರಿಗಣಿಸಲಾಗುತ್ತದೆ.

ದುರದೃಷ್ಟವಶಾತ್, ಎಲ್ಲಾ 'ಏಕದೇವೋಪಾಸನೆ'ಯ ಧರ್ಮಗಳು, ಇಂದು ಒಂದು ಪ್ರವಾದಿಯನ್ನು ಆರಿಸುತ್ತಾರೆ ಮತ್ತು ಉಳಿದವರನ್ನು ಉಪೇಕ್ಷಿಸುತ್ತಾರೆ. ಯಹೂದಿಗಳು ಮೂಸಾರ ಮೇಲೆ ಏಕಾಗ್ರತಗೊಂಡರು. ಕ್ರೈಸ್ತರು, ಈಸಾರನ್ನು ಸಂಯೋಜಿಸಿಕೊಳ್ಳುವುದಕ್ಕೆ ಸೀಮಿತವಾಗಿ ಇಬ್ರಾಹೀಮ್, ಇಸ್ಹಾಕ್, ಇಸ್ಮಾಯೀಲ್, ಯಾಕೂಬ್, ಮೂಸಾ ಮತ್ತು ಇತರ ಪ್ರವಾದಿಗಳಿಗೆ ತಮ್ಮನ್ನು ಸಂಬಂಧಿಸಿಕೊಳ್ಳುತ್ತಾರೆ. ಮತ್ತು ಅರಬೀ ಧಾರ್ಮಿಕರು, ಒಂದು ಬುಡಕಟ್ಟಿಗೆ ಒಲವು ತೋರಿಸುವ, ಮುಹಮ್ಮದರ ಕಾಲ್ಪನಿಕ ಐತಿಹಾಸಿಕ ಚಿತ್ರಣದ ಸುತ್ತಲೂ ರೂಪಿಸಿದ ತಮ್ಮ ಧರ್ಮಕ್ಕೆ ಕೇಂದ್ರಿತರಾಗಿದ್ದಾರೆ. ಅರಬರ ಈ ಆವಿಷ್ಕಾರವು, ಅರಬೀ ಧರ್ಮದಲ್ಲಿರುವ ಧರ್ಮಾಂಧತೆಯ, ಭಯೋತ್ಪಾದನೆಯ, ತೀವ್ರವಾದದ ಮತ್ತು ಅಜ್ಞಾನದ ಮೂಲವಾಗಿದೆ.

ಕುರ್‌ಆನಿನ ಪ್ರಕಾರ, ನಿಜವಾದ ಅವಿಶ್ವಾಸಿಗಳು ಅಲ್ಲಾಹನ ಸಂದೇಶವಾಹಕರ ನಡುವೆ ತಾರತಮ್ಯ ಮಾಡುವವರಾಗಿದ್ದಾರೆ. ನಿಖರವಾಗಿ ಎಲ್ಲ ಧರ್ಮಗಳಲ್ಲೂ ನಾವು ಇದನ್ನೇ ಕಾಣುತ್ತಿದ್ದೇವೆ:

> ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ನಿಷೇಧಿಸುವವರೂ, ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ನಡುವೆ ತಾರತಮ್ಯ ಮಾಡಬೇಕೆಂದು ಬಯಸುವವರೂ ಹೇಳುತ್ತಾರೆ, "ನಾವು ಕೆಲವರನ್ನು ವಿಶ್ವಾಸವಿರಿಸುತ್ತೇವೆ ಮತ್ತು ಕೆಲವರನ್ನು ತಿರಸ್ಕರಿಸುತ್ತೇವೆ", ಮತ್ತು ಅದರ ಮಧ್ಯದ ನಡುಮಾರ್ಗವನ್ನು ಅನುಸರಿಸಲು ಬಯಸುತ್ತಾರೆ. ಇವರೇ ನಿಜವಾದ ಸತ್ಯನಿಷೇಧಿಗಳಾಗಿದ್ದಾರೆ. ಮತ್ತು ನಾವು ಸತ್ಯನಿಷೇಧಿಗಳಿಗೆ ಒಂದು ಅವಮಾನಕರ ಪ್ರತೀಕಾರವನ್ನು ಸಿದ್ಧಗೊಳಿಸಿದ್ದೇವೆ. (4:150-151)

> ಅಲ್ಲಾಹ್ ಮತ್ತು ಅವನ ಸಂದೇಶವಾಹಕರುಗಳಲ್ಲಿ ವಿಶ್ವಾಸವಿರಿಸುವವರಿಗೆ ಮತ್ತು ಅವರ ನಡುವೆ ಯಾವುದೇ ತಾರತಮ್ಯ ಮಾಡದವರಿಗೆ, ಅಲ್ಲಾಹನು ಅವರ ಪ್ರತಿಫಲವನ್ನು ಖಂಡಿತವಾಗಿಯೂ ನೀಡುವನು. ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿದ್ದಾನೆ. (4:152)

ಹಿಂದಿನ ಗ್ರಂಥಗಳ ಜನರಲ್ಲಿ ಯಾರು ಪ್ರಾಮಾಣಿಕವಾಗಿ ಅಲ್ಲಾಹನ ಸಂದೇಶವಾಹಕರನ್ನು ಅನುಸರಿಸುತ್ತಾರೆ ಮತ್ತು ಯಾರು ತಮ್ಮ ಹಿಂಗಾಲಿನಲ್ಲಿ ತಿರುಗಿ ಹೋಗುತ್ತಾರೆ ಎಂದು ಪರೀಕ್ಷಿಸಲು ಕುರ್‌ಆನನ್ನು ಅರಬೀ ಭಾಷೆಯಲ್ಲಿ ಅವತರಿಸಲಾಗಿದೆ ಎಂದು ಅವರಿಗೆ ಹೇಳಲಾಗಿದೆ. ಅಲ್ಲಾಹನ ಗ್ರಂಥವನ್ನು ಒಂದು ನಿರ್ದಿಷ್ಟ ಸಮುದಾಯಕ್ಕೆ ಮಾತ್ರ ನೀಡಬೇಕಾಗಿದೆ ಎಂದೇನಿಲ್ಲ ಎಂದು ನಾವು ಇಲ್ಲಿ ಕಾಣುತ್ತೇವೆ. ಅಲ್ಲಾಹನ ಪ್ರವಾದಿಯ ಜನಾಂಗೀಯ ಮೂಲವು ಪ್ರಮುಖವಲ್ಲ, ಸಂದೇಶವು ಪ್ರಮುಖವಾಗಿದೆ. ಮನುಕುಲವು ಅಲ್ಲಾಹನ ಸಂದೇಶಕ್ಕೆ ತಮ್ಮ ಸಮ್ಮತಿಯನ್ನು ನೀಡಲು ನಿರಾಕರಿಸಿದರೆ, ಅವರು ತಿರಸ್ಕರಿಸುವುದು ಪ್ರವಾದಿಗಳನ್ನೋ ಅಥವಾ ಸಂದೇಶವಾಹಕರನ್ನೋ ಅಲ್ಲ, ಬದಲಿಗೆ ಅಲ್ಲಾಹನ ಅವತೀರ್ಣಗೊಳಿಸಿರುವುದನ್ನಾಗಿದೆ.

> ಅವರ ಮಾತುಗಳು ನಿಮ್ಮನ್ನು ದುಃಖಿತನಾಗಿಸಿದೆ ಎಂದು ನಮಗೆ ತಿಳಿದಿದೆ. ಆದರೆ, ಅವರು ತಿರಸ್ಕರಿಸುವುದು ನಿಮ್ಮನ್ನಲ್ಲ, ಬದಲಿಗೆ ಈ ಅಕ್ರಮಿಗಳು ಅಲಕ್ಷಿಸುವುದು ಅಲ್ಲಾಹನ ಅವತೀರ್ಣವನ್ನಾಗಿದೆ. ನಿಮಗಿಂತ ಮುಂಚಿನ ಸಂದೇಶವಾಹಕರೂ ಇದೇ ರೀತಿಯಲ್ಲಿ ತಿರಸ್ಕರಿಸಲ್ಪಟ್ಟಿದ್ದರು, ಆದರೆ ಅವರು ತಿರಸ್ಕಾರದ ಎದುರು ದೃಢವಾಗಿ ಪಟ್ಟುಹಿಡಿದಿದ್ದರು, ಮತ್ತು ನಮ್ಮ ವಿಜಯ ಅವರಿಗೆ ತಲುಪುವ ತನಕವೂ ಅವರಿಗೆ ಕಿರುಕುಳ ನೀಡಲಾಗಿತ್ತು. ಅಲ್ಲಾಹನ ಪದಗಳಲ್ಲಿ ಯಾವುದೇ ಬದಲಾವಣೆಯು ಸಾಧ್ಯವಿಲ್ಲ. ಮತ್ತು ಸಂದೇಶವಾಹಕರ ಇತಿಹಾಸವು ನಿಮಗೆ ತಲುಪಿರುತ್ತದೆ. (6:33-34)

ಸಮ್ಮತಿಸಲ್ಪಟ್ಟಿರುವ ನಿರ್ಬಂಧಗಳಿಗೆ ಕೇಂದ್ರೀಕರಿಸುವುದು

ಕುರ್‌ಆನ್ ಅವತೀರ್ಣಗೊಳ್ಳುವುದಕ್ಕೆ ಮುಂಚಿತವಾಗಿ, ತಮ್ಮನ್ನು ಮುಸ್ಲಿಮರೆಂದು ಘೋಷಿಸಿದ, ಅಲ್ಲಾಹನು ನಿರೂಪಿಸಿದ ಜೀವನ ರೀತಿಗೆ (ದೀನಿಗೆ) ತಮ್ಮನ್ನು ಸಮ್ಮತಿಸಿಕೊಂಡ ಜನರು ಇದ್ದರು. ಉದಾಹರಣೆಗೆ, ಇಬ್ರಾಹೀಮರು ಅಲ್ಲಾಹನೊಂದಿಗೆ ಬೇಡುವಾಗ ಮುಸ್ಲಿಮರು ಎಂಬ ಪದವನ್ನು ನಿರ್ದಿಷ್ಟವಾಗಿ ಬಳಸಿದ್ದರು:

> ನಮ್ಮ ಪ್ರಭುವೇ, ನಮ್ಮಿಬ್ಬರನ್ನು ನಿನಗಾಗಿ ಶಾಂತಿವಂತರನ್ನಾಗಿ (ಮುಸ್ಲಿಮರನ್ನಾಗಿ) ಮಾಡು, ಮತ್ತು ನನ್ನ ವಂಶಸ್ಥರನ್ನು ನಿನಗಾಗಿ ಶಾಂತಿವಂತರಾದ ಜನಾಂಗವನ್ನಾಗಿ ಮಾಡು. (2:128)

ನಂತರ ಈಸಾರ ಅನುಯಾಯಿಗಳು ತಮ್ಮನ್ನು ಮುಸ್ಲಿಮರೆಂದು ಘೋಷಿಸಿದ್ದರು:

> "ನನ್ನ ಮೇಲೂ ನನ್ನ ಸಂದೇಶವಾಹಕರ ಮೇಲೂ ವಿಶ್ವಾಸವಿಡಿರಿ" ಎಂದು (ಈಸಾರ) ಶಿಷ್ಯರಿಗೆ ನಾವು ಪ್ರೇರಣೆ ನೀಡಿದಾಗ, ಅವರು ಹೇಳಿದರು "ನಾವು ವಿಶ್ವಾಸವಿರಿಸಿದ್ದೇವೆಂದು ಮತ್ತು ನಾವು ಶಾಂತಿವಂತರಾಗಿದ್ದೇವೆಂದು (ಮುಸ್ಲಿಮರು) ನೀವು ಸಾಕ್ಷಿನಿಲ್ಲಿರಿ" (5:111)

ಮುಸ್ಲಿಮರು ಎಂಬ ಪದವು ಅಲ್ಲಾಹನೊಂದಿಗೆ ಶಾಂತಿಯಲ್ಲಿ ಇರುವವರು ಎಂಬ ಅರ್ಥವನ್ನು ಸೂಚಿಸುತ್ತದೆ. ಇದು ಒಂದು ಮಾಯಾಜಾಲದ ಪದವೇನಲ್ಲ. 2:140 ರ ಪ್ರಕಾರ, ಇಬ್ರಾಹೀಮ್, ಇಸ್ಮಾಯೀಲ್, ಇಸ್ಹಾಕ್, ಯಾಕೂಬ್, ಇವರಾರೂ ಯಹೂದಿಯರೋ ಅಥವಾ ಕ್ರೈಸ್ತರೋ ಆಗಿರಲಿಲ್ಲ. ಅವರು ಕೇವಲ ಅಲ್ಲಾಹನ ಸೇವೆಯನ್ನು ಮಾಡಿದರು ಮತ್ತು ತಮ್ಮ ಬದ್ಧತೆಗಳನ್ನು ಪೂರೈಸಿದರು. ಅವರು ಕೆಲವು ಕರ್ತವ್ಯಗಳನ್ನು ಪ್ರಾಮಾಣಿಕರಾಗಿ ಪೂರೈಸುತ್ತಿದ್ದ ಕಾರಣ ಅವರು ತಮ್ಮನ್ನು ಶಾಂತಿವಂತರೆಂದು ಪರಿಗಣಿಸಿದ್ದರು, ಮತ್ತು ಈ ಸಂದರ್ಭದಲ್ಲಿ ಅವರು ಕೆಲವು ನಿಯಮಗಳಿಗೆ ಅಥವಾ ಅಲ್ಲಾಹನಿಂದ ಆಜ್ಞಾಪಿಸಲ್ಪಟ್ಟ ನಿರ್ಬಂಧಗಳಿಗೆ ತಮ್ಮ ಗಮನವನ್ನು ಕೇಂದ್ರೀಕರಿಸಬೇಕಾದ ಅಗತ್ಯವಿತ್ತು ಎಂಬುವುದು ಎದ್ದುಕಾಣುತ್ತದೆ.

ಅಲ್ಲಾಹ್ ಎಂಬುವುದು ಅಂತ್ಯ-ಪ್ರತ್ಯಯವಾಗಿ ಕುರ್‌ಆನಿನಲ್ಲಿ ಬಳಕೆಯಾದಾಗ, ಅದರ ಕಲ್ಪನೆಯು ಅಲ್ಲಾಹನಿಗೆ ಸಂಬಂಧಿಸಿರುತ್ತದೆ. ಉದಾಹರಣೆಗೆ, ಸ್ಪಷ್ಟವಾಗಿ ಅಲ್ಲಾಹನಿಂದ ಗೊತ್ತುಪಡಿಸಲಾದ ಸಮ್ಮತಿಸಲ್ಪಟ್ಟಿರುವ ಆದೇಶಗಳನ್ನು *ಮಸಾಜಿದಲ್ಲಾಹ್* ಎಂದು ಕರೆಯಲ್ಪಡುತ್ತದೆ. ಅಲ್ಲಾಹನಿಂದ ನಿರೂಪಿಸಲ್ಪಟ್ಟ ಮಿತಿಗಳನ್ನು *ಹುದೂದುಲ್ಲಾಹ್* ಎಂದು ಕರೆಯಲಾಗುತ್ತದೆ, ಅಲ್ಲಾಹನ ಕಾನೂನುಗಳನ್ನು *ಶಆಇರಲ್ಲಾಹ್* ಎಂದು ಕರೆಯುತ್ತಾರೆ ಮತ್ತು ಅಲ್ಲಾಹನ ಪಥವನ್ನು *ಸಬೀಲಿಲ್ಲಾಹ್* ಎಂದು ಕರೆಯಲಾಗುತ್ತದೆ. ಈ ಪದಗಳು ಕುರ್‌ಆನಿನಲ್ಲಿ ಕಾಣಿಸಿಕೊಳ್ಳುವ ಸಂದರ್ಭಗಳಲ್ಲಿ ಅವುಗಳು ಕೆಲವು ನಿಶ್ಚಿತ ವಿಷಯಗಳನ್ನು ಸೂಚಿಸುತ್ತವೆ ಮತ್ತು ಅವುಗಳು ನಿಗದಿತ ನಿರ್ಬಂಧಗಳಲ್ಲಿ ಮಾರ್ಗದರ್ಶಿ ಸೂತ್ರಗಳಾಗಿ ಪರಿಗಣಿಸಲಾಗುತ್ತವೆ. ಈ ಪದಗಳು ಯಾವುದೇ ಒಂದು ಭೌತಿಕ ಅರ್ಥವ್ಯಾಪ್ತಿಯನ್ನು ಹೊಂದಿಲ್ಲ ಆದರೆ ಅವುಗಳು ನಿರ್ದಿಷ್ಟ ಆದೇಶಗಳಾಗಿ

ತೆಗೆದುಕೊಳ್ಳಲಾಗುತ್ತವೆ. ಕುರ್‌ಆನ್ ಅವತೀರ್ಣವಾಗುವ ಮುಂಚೆಯು ಸಹ, ಶಾಂತಿವಂತರು (ಮುಸ್ಲಿಮರು) ಈ ಸಮ್ಮತಿಸಲ್ಪಟ್ಟಿರುವ ನಿರ್ಬಂಧಗಳ ಕಡೆಗೆ ಕೇಂದ್ರೀಕರಿಸಿಕೊಂಡು ತಮ್ಮ ಬದ್ಧತೆಗಳನ್ನು ಪಾಲಿಸುತ್ತಿದ್ದರು.

ಕೊನೆಯ ಪ್ರವಾದಿಯು ಕೂಡ ಇದೇ ರೀತಿಯಲ್ಲಿ ಅದೇ ವ್ಯವಸ್ಥೆಗೆ ಬದ್ಧರಾಗಿದ್ದರು. ಅಲ್ಲಾಹನ ದೀನನ್ನು ಅಂಗೀಕರಿಸುವವರು ಸಮ್ಮತಿಸಲ್ಪಟ್ಟ ಈ ನಿರ್ಬಂಧಗಳಿಗೆ ಕೇಂದ್ರೀಕೃತರಾಗಬೇಕು. ಅವರು ಯಾರೇ ಆಗಿರಲಿ, ಎಲ್ಲೇ ಇರಲಿ, ಅವರ ಗಮನವು ಸಮ್ಮತಿಸಲ್ಪಟ್ಟ ಆದೇಶಗಳಲ್ಲಿನ ನಿರ್ಬಂಧಗಳ ಕಡೆಗೆ ಕೇಂದ್ರಿತವಾಗಿರಬೇಕು.

ಪ್ರತಿಯೊಬ್ಬ ವ್ಯಕ್ತಿಯು ಅವನ ಅಥವಾ ಅವಳ ವೈಯಕ್ತಿಕ ಕಾರ್ಯಗಳಿಗೆ ಹೊಣೆಗಾರರಾಗಿರುವ ಕಾರಣ, ಪ್ರತಿಯೊಬ್ಬರೂ ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ನಿರ್ಬಂಧಗಳಿಗೆ ಅನುಸಾರವಾಗಿ ಉತ್ತಮ ಕಾರ್ಯಗಳನ್ನು ಮಾಡಲು ಪೈಪೋಟಿ ನಡೆಸಬೇಕು. *ಮಸ್ಜಿದಿಲ್ ಹರಾಮಿ* ಎಂದರೆ, ಗ್ರಂಥದಲ್ಲಿ ಸೂಚಿಸಲ್ಪಟ್ಟ ಮಾರ್ಗದರ್ಶಿ ಸೂತ್ರಗಳ ವಿವರಗಳನ್ನು ಪಾಲಿಸುವುದಲ್ಲದೆ ಬೇರೆ ಏನೂ ಅಲ್ಲ.

ಮಸ್ಜಿದಿಲ್ ಹರಾಮಿ ಎಂಬುವುದು ಎಲ್ಲೋ ಅರಬೀ ನಾಡಿನ ಮಣ್ಣಿನಲ್ಲಿ ಭೌಗೊೀಳಿಕವಾಗಿ ಅಸ್ಥಿತ್ವದಲ್ಲಿರುವ ಒಂದು ಭೌತಿಕ ಕಟ್ಟಡವನ್ನು ಸೂಚಿಸುವುದಿಲ್ಲ. ಒಂದು ವೇಳೆ ಅದು ಒಂದು ಕಟ್ಟಡವನ್ನೇ ಸೂಚಿಸುತ್ತಿದೆಯಾದರೆ, ಇತಿಹಾಸದ ಯಾವುದೋ ಪ್ರಾಚೀನ ಕಾಲದಲ್ಲಿ ಅರಬರು ಅಲ್ಲಾಹನ ಬೊೀಧನೆಗಳ ಜ್ಞಾನವನ್ನು ಪಡೆದಿದ್ದರು ಎಂದಾಗಬೇಕು. ಆದರೆ ಅಂತಹ ಸಂಭವವು ನಡೆದೇ ಇಲ್ಲ. ಏಕೆಂದರೆ ಅವರು ಕುರ್‌ಆನಿನಲ್ಲಿ *ಉಮ್ಮೀಗಳು* (ಅಂದರೆ ಅವತೀರ್ಣದ ತಿಳಿವಳಿಕೆ ಇಲ್ಲದವರು) ಎಂದು ಕರೆಯಲ್ಪಟ್ಟಿದ್ದಾರೆ.

62:2 ರ ಪ್ರಕಾರ, ಅರಬರು ಅಲ್ಲಾಹನ ಅವತೀರ್ಣಗಳ ಬಗ್ಗೆ ಪೂರ್ವಜ್ಞಾನವಿಲ್ಲದವರಾಗಿದ್ದರು:

> *ವ ಇನ್ ಕಾನೂ ಮಿನ್ ಕಬ್ಲು ಲಫೀ ದ್ಬಲಾಲಿನ್ ಮುಬೀನ್* (62:2)
>
> ಮತ್ತು ವಾಸ್ತವದಲ್ಲಿ ಅವರು ಮುಂಚಿನಿಂದಲೂ ಸಂಪೂರ್ಣವಾಗಿ ದಿಕ್ಕುಗೆಟ್ಟವರಾಗಿದ್ದರು. (62:2)

ಹೀಗಾಗಿ, ಅರಬರಿಗೆ ಪವಿತ್ರ ಮಸೀದಿಯ ಬಗ್ಗೆ ಏನೂ ತಿಳಿದಿರಲಿಲ್ಲ ಮತ್ತು ವಿಧ್ಯುಕ್ತ ಪ್ರಾರ್ಥನೆಗಳ ನಿರ್ವಹಣೆಗಾಗಿ ಮರುಭೂಮಿಯ ಮಧ್ಯದಲ್ಲಿ ಒಂದು ಪವಿತ್ರ ಕಟ್ಟಡವನ್ನೂ ಹೊಂದಿರಲಿಲ್ಲ. ಅವರದೇ ಆದ ಅರಬೀ ಪುರಾಣದ ಪ್ರಕಾರ, ಪ್ರಾರಂಭದಲ್ಲಿ ತಮ್ಮ 'ಪವಿತ್ರ ಮಸೀದಿ'ಯು ವಿಸ್ತೀರ್ಣದಲ್ಲಿ ಸುಮಾರು ಒಂದು ಟೆನ್ನಿಸ್ ಕೋರ್ಟಿಗಿಂತ ಕೊಂಚ ದೊಡ್ಡದಾಗಿತ್ತು ಮತ್ತು ಕಟ್ಟಿಗೆಯಿಂದ ಸುತ್ತುಕಟ್ಟಲ್ಪಟ್ಟ ಕುದುರೆಗಳ ಹಟ್ಟಿಯಂತಿತ್ತು. ಇನ್ನೊಂದೆಡೆ, (ಕುರ್‌ಆನಿಗೆ ಯಾವುದೇ ಸಂಬಂಧವಿಲ್ಲದ) ಅವರದೇ ಆದ ಘಟನೆಗಳ ಆವೃತ್ತಿಗಳ ಪ್ರಕಾರ, ಮೊದಲನೇ ಮಸೀದಿಯು ಮದೀನಾದಲ್ಲಿ ಮುಹಮ್ಮದರ ಪ್ರವಾದಿತ್ವದ ಹನ್ನೆರಡು ವರ್ಷಗಳ ನಂತರ ಮಾತ್ರವೇ ನಿರ್ಮಿಸಲಾಗಿತ್ತು.

ಓದುಗರು ಇದನ್ನು ತಿಳಿದುಕೊಳ್ಳುವಾಗ ಬಹುಶಃ ಆಶ್ಚರ್ಯಪಡಬಹುದು:

- ಕೊನೆಯ ಪ್ರವಾದಿಯ ಕಾಲದಲ್ಲಿ 'ಪವಿತ್ರ ಮಸೀದಿ' ಎಂಬ ಹೆಸರಿರುವ ಒಂದು ಕಟ್ಟಡವಿತ್ತೆಂದು ಕುರ್‌ಆನಿನಲ್ಲಿ ಎಲ್ಲಿಯೂ ಉಲ್ಲೇಖವಿಲ್ಲ.

- ಕೊನೆಯ ಪ್ರವಾದಿಗೆ, 'ಪವಿತ್ರ ಮಸೀದಿ' ಎಂಬ ಕಟ್ಟಡವನ್ನು ನಿರ್ಮಿಸಲು ಆದೇಶಿಸುವ ಯಾವುದೇ ಸೂಚನೆಯು ಕುರ್‌ಆನಿನಲ್ಲಿಲ್ಲ.

- ಮಕ್ಕಾಗೆ ಮುಖಮಾಡಿ ವಿಧ್ಯುಕ್ತ ಪ್ರಾರ್ಥನೆಯನ್ನು ಮಾಡಬೇಕೆಂದು ಕುರ್‌ಆನ್ ಜನರಿಗೆ ಎಲ್ಲಿಯೂ ಹೇಳಲಿಲ್ಲ.

'ಸಮ್ಮತಿಸಲ್ಪಟ್ಟಿರುವ ಆದೇಶಗಳು' ಅವತೀರ್ಣಗೊಂಡಿವೆ

ಕೊನೆಯ ಪ್ರವಾದಿಯು ಗ್ರಂಥವನ್ನು ಸ್ವೀಕರಿಸಿದಾಗ (ಅವರ ಮುಂಚಿನ ಇತರ ಮುಸ್ಲಿಮರ ತರಹ) ಸಮ್ಮತಿಸಲ್ಪಟ್ಟಿರುವ ಆದೇಶಗಳ ನಿರ್ಬಂಧಗಳಿಗೆ ತಮ್ಮ ಗಮನವನ್ನು ಕೇಂದ್ರೀಕರಿಸಲು ಆದೇಶಿಸಲಾಗಿದ್ದರು.

> ಆದ್ದರಿಂದ, ನೀವು ತೃಪ್ತಿಪಡುವಂತಹ ದಿಕ್ಕನ್ನು ನಾವು ನಿಗದಿಪಡಿಸಿದೆವು. ಆದ್ದರಿಂದ, ನೀವೆಲ್ಲಿದ್ದರೂ ಸಮ್ಮತಿಸಲ್ಪಟ್ಟಿರುವ ನಿರ್ಬಂಧಗಳಿಗೆ *(ಮಸ್ಜಿದಿಲ್ ಹರಾಮಿ)* ನಿಮ್ಮನ್ನು ಕೇಂದ್ರೀಕರಿಸಿಕೊಳ್ಳಿರಿ. ಆದ್ದರಿಂದ, ಅದರ ಕಡೆಗೆ ನಿಮ್ಮನ್ನು ಕೇಂದ್ರೀಕರಿಸಿರಿ. ನಿಶ್ಚಯವಾಗಿಯೂ, ಗ್ರಂಥವನ್ನು ನೀಡಲ್ಪಟ್ಟವರು ಇದು ಅವರದೇ ಪ್ರಭುವಿನಿಂದಿರುವ ಸತ್ಯವೆಂದು ತಿಳಿದುಕೊಳ್ಳುತ್ತಾರೆ. (2:144)

ಇಲ್ಲಿ ಕೊನೆಯ ಪ್ರವಾದಿಗೆ ತನ್ನ ದೈನಂದಿನ ಐದು ಪ್ರಾರ್ಥನೆಗಳ ದಿಕ್ಕನ್ನು ಜೆರುಸಲೆಮಿನಿಂದ ಮಕ್ಕಾದ ಕಡೆಗೆ ಬದಲಾಯಿಸಲು ಆದೇಶಿಸಲಾಗಿದೆ ಎಂದು ಧಾರ್ಮಿಕರು ಹೇಳಿಕೊಳ್ಳುತ್ತಾರೆ. ಇಲ್ಲಿ ಜ್ಞಾಪಿಸಿಕೊಳ್ಳಬೇಕಾದ ಪ್ರಮುಖ ವಿಷಯವೇನೆಂದರೆ, ಕುರ್‌ಆನ್ ಅವತೀರ್ಣಗೊಳ್ಳುವ ಸಮಯದಲ್ಲಿ ಜೆರುಸಲೆಮ್ ಸೇರಿದಂತೆ, ಜಗತ್ತಿನಲ್ಲಿ ಎಲ್ಲಿಯೂ ಮಸೀದಿ ಎಂಬುವುದೇ ಇರಲಿಲ್ಲ. *ಮಸ್ಜಿದಿಲ್ ಹರಾಮ್* ಎಂಬುವುದು ಒಂದು ಭೌತಿಕ ಪವಿತ್ರ ಮಸೀದಿಯನ್ನು ಉಲ್ಲೇಖಿಸುತ್ತದೆ ಎಂದು ಹೇಳುವುದು ಶುದ್ಧ ಸುಳ್ಳಾಗಿದೆ, ಏಕೆಂದರೆ *ಪವಿತ್ರ ಮಸೀದಿ* ಎಂಬ ಉಲ್ಲೇಖವು ಕುರ್‌ಆನಿನಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. *ಹರಾಮ್* ಎಂಬ ಪದವು *ಮಸ್ಜಿದ್* ಎಂಬ ಪದಕ್ಕೆ ಸೇರಿಕೊಂಡು ಬಂದಲ್ಲಿ, ಧಾರ್ಮಿಕರು ಅದರ ಅರ್ಥವನ್ನು ಉದ್ದೇಶಪೂರ್ವಕವಾಗಿ *ಪವಿತ್ರ* ಎಂದು ತಿರುಚಿದರು. *ಮಸ್ಜಿದಿಲ್ ಹರಾಮ್* ಎಂಬುವುದು ಪವಿತ್ರ ಮಸೀದಿ ಎಂದು ಹೇಗೆ ಅನುವಾದಿಸಲಾಗುತ್ತದೆ ಎಂದು ಯಾವುದೇ ಅರಬೀ ವಿದ್ವಾಂಸನಿಗೆ ವಿವರಿಸಲು ಸಾಧ್ಯವಿಲ್ಲ. *ಹರಾಮ್* ಪದದ ಅಕ್ಷರಶಃ ಅರ್ಥವು,

ಕಸಿದುಕೊಂಡಿರುವ ಅಥವಾ *ನಿಷೇಧಿಸಿರುವ* ಎಂದಾಗಿದೆ. ಅರಬೀ ಭಾಷೆಯಲ್ಲಿ ಪವಿತ್ರ ಎಂಬುವುದಕ್ಕೆ ಸರಿಯಾದ ಪದವು *ಕುದುಸ್* ಎಂದಾಗಿದೆ.

ಅರಬೀ ಜನಾಂಗವು ತಮ್ಮ ಪೂರ್ವಜರ 'ಧರ್ಮ'ವನ್ನು ಅನುಸರಿಸುತ್ತಿದ್ದರು ಮತ್ತು ಅವರು ಇಸ್ಲಾಮನ್ನೋ ಅಥವಾ ಅವತೀರ್ಣವನ್ನೋ ಅಂಗೀಕರಿಸಿಕೊಳ್ಳಲಿಲ್ಲ. ಅವರು ಅವತೀರ್ಣವನ್ನು ದ್ವೇಷಿಸುತ್ತಿದ್ದರು ಎಂದು ಕುರ್‌ಆನ್ ಹೇಳುತ್ತದೆ; ಅರಬೀ ಧರ್ಮದ ಸಂಕೋಲೆಯಲ್ಲಿ ಬಂಧಿತರಾದಂತಹ ಇಂದಿನ ಮುಸ್ಲಿಮರಲ್ಲೂ ಈ ದ್ವೇಷವು ಸಾಮಾನ್ಯವಾಗಿದೆ.

ಅನಾಚಾರಿಗಳು ಕುರ್‌ಆನನ್ನು ತಿರಸ್ಕರಿಸಿದರೆಂದು ಕೊನೆಯ ಪ್ರವಾದಿಯು ಕಳವಳಗೊಳ್ಳಲಿಲ್ಲ. ಆದರೆ ಯಹೂದಿಯರು ಮತ್ತು ಕ್ರೈಸ್ತರು ಅಲ್ಲಾಹನ ಅವತೀರ್ಣಗಳ ಬಗ್ಗೆ ತಿಳಿದಿದ್ದರು ಎಂಬ ಪುರಾವೆಯನ್ನು ಅವರು ಹೊಂದಿದ್ದರು. ಮೂಸಾರಿಗೆ ನೀಡಲಾಗಿದ್ದವುಗಳನ್ನು ದೃಢೀಕರಿಸುವ ಗ್ರಂಥವನ್ನು ಅಲ್ಲಾಹನು ತನಗೆ ಅವತೀರ್ಣಗೊಳಿಸಿದ್ದಾನೆ ಎಂದು ಅವರಿಗೆ ಹೇಳುವುದು ಅವರ ಕರ್ತವ್ಯವಾಗಿತ್ತು.

ಇಸ್ರಾಯೀಲರ ಸಂತತಿಗಳು ಮೊದಲ ಬಾರಿಗೆ ಅಲ್ಲಾಹನ ಆದೇಶಗಳನ್ನು ಎತ್ತಿಹಿಡಿಯಲು ಸಮ್ಮತಿಸಿಕೊಂಡಿದ್ದರು ಎಂದು 17:7 ರಲ್ಲಿ ಹೇಳಲಾಗಿದೆ. ಅಂದರೆ, ತೌರಾತ್ ಅವರಿಗೆ ಅವತೀರ್ಣಗೊಂಡಾಗ ಅವರು ಅಲ್ಲಾಹನ ಜೊತೆಗೆ ಒಂದು ಒಪ್ಪಂದಕ್ಕೆ ಪ್ರವೇಶಿಸಿದರು ಎಂದಾಗಿದೆ. ಅವರು ಸಮ್ಮತಿಸಲ್ಪಟ್ಟಿರುವ ನಿರ್ಬಂಧಗಳ ಕಡೆಗೆ ತಮ್ಮನ್ನು ಕೇಂದ್ರೀಕರಿಸಿದ್ದರು, ಹೀಗಾಗಿ ಅದೇ ನಿರ್ಬಂಧಗಳು ಕುರ್‌ಆನಿನಲ್ಲಿ ನಿಗದಿತಗೊಳಿಸಿರುವಾಗ ಅದನ್ನು ಅವರು ಸುಲಭವಾಗಿ ಗುರುತಿಸಲು ಸಾಧ್ಯವಾಯಿತು. ಅಲ್ಲಾಹನು ಅವರನ್ನು 'ಹಿಂದಿನ ಗ್ರಂಥದ ಜನರು' ಎಂದು ಕುರ್‌ಆನಿನಲ್ಲಿ ಸಂಬೋಧಿಸುತ್ತಾನೆ. ಅವರನ್ನು ಅದೇ ನಿರ್ಬಂಧಗಳಿಗೆ ಪುನಃ ಆಮಂತ್ರಿಸುವುದು ಕೊನೆಯ ಪ್ರವಾದಿಯ ಕರ್ತವ್ಯದ ಭಾಗವಾಗಿತ್ತು, ಆದರೆ ಅವರಲ್ಲಿ ಅನೇಕರು ನಿರಾಕರಿಸಿದರು.

> ಮತ್ತು ನೀವು ಗ್ರಂಥವನ್ನು ನೀಡಲ್ಪಟ್ಟವರ ಬಳಿಗೆ ಎಂತಹ ನಿದರ್ಶನಗಳನ್ನು ತಂದರೂ ಅವರು ನಿಮ್ಮ ದಿಕ್ಕನ್ನು ಅನುಸರಿಸಲಾರರು, ಮತ್ತು ನೀವು ಅವರ ದಿಕ್ಕನ್ನೂ ಅನುಸರಿಸಬಾರದು. (2:145)
>
> ಗ್ರಂಥವನ್ನು ನೀಡಲ್ಪಟ್ಟವರು, ಅದನ್ನು ತಮ್ಮ ಸ್ವಂತ ಮಕ್ಕಳನ್ನು ಗುರುತಿಸುವಂತೆಯೇ ಗುರುತಿಸುತ್ತಾರೆ. ವಾಸ್ತವದಲ್ಲಿ, ಅವರಲ್ಲಿ ಒಂದು ಪಂಗಡವು ತಿಳಿದೂ ತಿಳಿದೂ ಸತ್ಯವನ್ನು ಬಚ್ಚಿಡುತ್ತಾರೆ. (2:146)

ಸಂದೇಶವಾಹಕರನ್ನೋ ಅಥವಾ ಧಾರ್ಮಿಕರು 'ಪವಿತ್ರ ಮಸೀದಿ' ಎಂದು ಪ್ರತಿನಿಧಿಸುವ ಯಾವುದೇ ಕಟ್ಟಡವನ್ನೋ ಹಿಂದಿನ ಗ್ರಂಥದ ಜನರು ಗುರುತಿಸಿದರು ಎಂದು ಈ ವಚನವು ಹೇಳುತ್ತಿಲ್ಲ. ವಾಸ್ತವವಾಗಿ, ಅವರು *ಮಸ್ಜಿದಿಲ್ ಹರಾಮಿ* ಎಂದು ನಿರೂಪಿಸಲ್ಪಡುವ ಕುರ್‌ಆನಿನ ನಿರ್ಬಂಧಗಳನ್ನು ಗುರುತಿಸಿದರು. ಹಿಂದಿನ ಗ್ರಂಥದ ಜನರು ನಿರಾಕರಿಸಿದರೂ ಸಹ, ಕೊನೆಯ ಪ್ರವಾದಿಯು ಈ ನಿರ್ಬಂಧಗಳಿಗೆ ತಮ್ಮ

ಗಮನವನ್ನು ಕೇಂದ್ರೀಕರಿಸಿಕೊಳ್ಳಬೇಕು ಎಂಬ ಸೂಚನೆಯನ್ನು ನೀಡಲಾಗಿದೆ. ಅವರು ಹಿಂದೆ ಪಡೆದ ಅದೇ ನಿರ್ಬಂಧಗಳನ್ನು ಮರೆಮಾಚಿದ್ದರು, ಮತ್ತು ತಮ್ಮ ಮಕ್ಕಳನ್ನು ಗುರುತಿಸುವ ಹಾಗೆ ಅವರಿಗೆ ಈ ಸತ್ಯವನ್ನು ಗುರುತಿಸಲು ಸಾಧ್ಯವಾಗಿತ್ತು.

ಇದು ಅಲ್ಲಾಹನ ಕಡೆಯಿಂದಿರುವ ಸತ್ಯವಾಗಿದೆ ಎಂದು ಅಲ್ಲಾಹನು 2:146 ರಲ್ಲಿ ಹೇಳುತ್ತಾನೆ. ಅಂದರೆ, ಹಿಂದಿನ ಗ್ರಂಥವನ್ನು ಸ್ವೀಕರಿಸಿದ ಜನರಿಗೆ, ಅಲ್ಲಾಹನು ಈ ನಿರ್ಬಂಧಗಳನ್ನು ಅರಬೀ ಜನಾಂಗದ ಮೇಲೆ ಸಮ್ಮತಿಸಿಕೊಟ್ಟಿದ್ದಾನೆ ಎಂದು ಗೊತ್ತಿತ್ತು! ನಿಸ್ಸಂಶಯವಾಗಿ 'ಸತ್ಯ' ಎಂಬುವುದು ಯಾವುದೇ ವಿವರಣೆಯಿಂದಲೂ ಒಂದು ಮಸೀದಿಯನ್ನು ಪ್ರತಿನಿಧಿಸಲು ಸಾಧ್ಯವಿಲ್ಲವೆಂದೂ ಅವರಿಗೆ ಗೊತ್ತಿತ್ತು!

> *ಅಲ್ ಹಕ್ಕು ಮಿನ್ ರಬ್ಬಿಕ ಫಲಾ ತಕೂನನ್ನ ಮಿನಲ್ ಮುಮ್ತರೀನ್* (2:147)
>
> ಇದು ಅಲ್ಲಾಹನ ಕಡೆಯಿಂದಿರುವ ಸತ್ಯವಾಗಿದೆ, ಆದ್ದರಿಂದ ಸಂಶಯಪಡುವವರಲ್ಲಿ ನೀವು ಆಗಬೇಡಿರಿ. (2:147)

ಕೊನೆಯ ಪ್ರವಾದಿಯು ಮತ್ತು ಅವರನ್ನು ಅನುಸರಿಸುವವರು ಎಲ್ಲಿ ಇದ್ದರೂ ತಮ್ಮ ಗಮನವನ್ನು ಕೇಂದ್ರೀಕರಿಸಿಕೊಳ್ಳಬೇಕಾದ ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು ಆನಂತರದ ವಚನಗಳು ಪದ ಪದಗಳಾಗಿ ಪುನರಾವರ್ತಿಸುತ್ತದೆ. ಗಮನಿಸಬೇಕಿರುವುದು ಅವತೀರ್ಣವನ್ನಾಗಿದೆ ಅಲ್ಲದೆ ಒಂದು ಭೌತಿಕ ಕಟ್ಟಡವನ್ನಲ್ಲ. ಧಾರ್ಮಿಕರು ಅದರ ಅರ್ಥವನ್ನು ಮಂದಿರಕ್ಕೆ ಹೋಲುವ ಕಟ್ಟಡವನ್ನಾಗಿ ಮಾರ್ಪಡಿಸಿದರು, ಏಕೆಂದರೆ ತಮ್ಮ ದೇವರುಗಳು ಕಲ್ಲುಗಳಲ್ಲಿ ಮತ್ತು ಬಂಡೆಗಳಲ್ಲಿ ವಾಸಿಸುತ್ತಾರೆ ಎಂಬುವುದು ಅವರ ಪೂರ್ವಜರ ನಂಬಿಕೆಯಾಗಿತ್ತು.

> ನೀವೆಲ್ಲಿಗೆ ಹೊರಟರೂ, ಸಮ್ಮತಿಸಲ್ಪಟ್ಟ ಆದೇಶದ ನಿರ್ಬಂಧಗಳ *(ಮಸ್ಜಿದಿಲ್ ಹರಾಮಿ)* ಕಡೆಗೆ ನಿಮ್ಮ ಗಮನವನ್ನು ಕೇಂದ್ರೀಕರಿಸಿರಿ. ನಿಶ್ಚಯವಾಗಿಯೂ, ಇದು ನಿಮ್ಮ ಪ್ರಭುವಿನಿಂದಿರುವ ಸತ್ಯವೇ ಆಗಿದೆ. ಮತ್ತು ಅಲ್ಲಾಹನು ನೀವು ಮಾಡುತ್ತಿರುವದನ್ನೆಲ್ಲಾ ಅರಿಯುತ್ತಿದ್ದಾನೆ. (2:149)
>
> ಆದ್ದರಿಂದ, ನೀವೆಲ್ಲರೂ ಎಲ್ಲಿಗೆ ಹೋರಟರೂ, ಸಮ್ಮತಿಸಲ್ಪಟ್ಟ ಆದೇಶದ ನಿರ್ಬಂಧಗಳ ಕಡೆಗೆ ನಿಮ್ಮ ಗಮನವನ್ನು ಕೇಂದ್ರೀಕರಿಸಿರಿ. ಜನರಿಗೆ ನಿಮ್ಮ ವಿರುದ್ಧ ವಾದಕ್ಕೆ ಅವಕಾಶ ಸಿಗದಂತಾಗಲು ನೀವೆಲ್ಲರೂ ಎಲ್ಲೇ ಇದ್ದರೂ, ನಿಮ್ಮ ಗಮನವನ್ನು ಅದರ ಕಡೆಗೆ ಕೇಂದ್ರೀಕರಿಸಿರಿ, ಅವರಲ್ಲಿ ದುಷ್ಟರನ್ನು ಹೊರತುಪಡಿಸಿ. (2:150)

2:142-150 ರಲ್ಲಿ 'ವಿಧ್ಯುಕ್ತ ಪ್ರಾರ್ಥನೆ'ಯ ಅಥವಾ ಮಸೀದಿಗಳ ಬಗ್ಗೆ ಒಂದು ಸುಳಿವು ಕೂಡ ಇಲ್ಲ. ಆದರೆ ಧಾರ್ಮಿಕರು - ವಿಧ್ಯುಕ್ತ ಪ್ರಾರ್ಥನೆಯನ್ನು ಮಾಡುವಂತೆ ಜನರನ್ನು ಮುಟ್ಠಾಳರನ್ನಾಗಿ ಮಾಡಿದ ನಂತರ – ಅವರು ಪವಿತ್ರ ಮಸೀದಿ ಎಂದು ಕರೆಯುವ ಮಕ್ಕಾದಲ್ಲಿರುವ ಒಂದು ಭೌತಿಕ ಕಟ್ಟಡಕ್ಕೆ ಪ್ರತಿಯೊಬ್ಬರೂ ಮುಖ

ಮಾಡಬೇಕೆಂದು ಹೇಳುವ ಮೂಲಕ ಅವರನ್ನು ಮತ್ತಷ್ಟು ವಂಚಿಸಿದರು. ವಿಪರ್ಯಾಸವೆಂದರೆ, ಅವರದೇ ಆದ ಪುರಾವೆಗಳ ಪ್ರಕಾರ ಮೊತ್ತ ಮೊದಲ ಮಸೀದಿಯು ಮುಹಮ್ಮದರು ಪ್ರವಾದಿಯಾದ ಹನ್ನೆರಡು ವರ್ಷಗಳ ನಂತರ ಮದೀನದಲ್ಲಿ ಕಟ್ಟಲಾಗಿತ್ತು.

2:142-152 - ವಿಸ್ತಾರವಾದ ಸನ್ನಿವೇಶದಲ್ಲಿ

ಸಂಕ್ಷಿಪ್ತವಾಗಿ ನೋಡೋಣ:

- (2:142): ಅವರಲ್ಲಿನ ಮೂರ್ಖರು ಕೇಳುತ್ತಾರೆ: 'ಅವರ ಗಮನದ ದಿಕ್ಕು ಬದಲಾವಣೆಗೆ ಕಾರಣವೇನು?' ಅವರೊಂದಿಗೆ ಹೇಳಿರಿ: 'ಪೂರ್ವವೂ ಹಾಗೂ ಪಶ್ಚಿಮವೂ ಅಲ್ಲಾಹನಿಗೆ ಸೇರಿದೆ. ತಾನಿಚ್ಛಿಸುವವರಿಗೆ ಅವನು ಸನ್ಮಾರ್ಗಕ್ಕೆ ಮಾರ್ಗದರ್ಶನ ಮಾಡುತ್ತಾನೆ'.

ಅರಬರು ಅನಾಚಾರಿಕ ತತ್ತ್ವದ ನಂಬಿಕೆಯಿಂದ ತಮ್ಮ ಗಮನವನ್ನು ಅಲ್ಲಾಹನ ದೀನಿನ ಕಡೆಗೆ ಏಕೆ ಬದಲಾಯಿಸಿದರು? ಎಂದು ಅಲ್ಲಾಹನ ಗ್ರಂಥವು ಕೇವಲ ನಿರ್ದಿಷ್ಟ ಆರಿಸಲಾದ ಜನರಿಗೆ ಮಾತ್ರ ನೀಡಲಾಗುವುದು ಎಂದು ಭಾವಿಸಿಕೊಂಡಿದ್ದ ಹಿಂದಿನ ಗ್ರಂಥವನ್ನು ಸ್ವೀಕರಿಸಿದ್ದ ಜನರು ಕೇಳತೊಡಗಿದರು.

- (2:143): ಅಲ್ಲಾಹನು ಹೇಳುತ್ತಾನೆ: 'ಸಂದೇಶವಾಹಕರನ್ನು ಅನುಸರಿಸುವವರು ಯಾರು ಮತ್ತು ತಮ್ಮ ಹಿಮ್ಮಡಿಯಲ್ಲಿ ಹಿಂದಕ್ಕೆ ತಿರುಗಿಕೊಂಡು ಹೋಗುವ ಜನರು ಯಾರು ಎಂದು ಪರೀಕ್ಷಿಸುವ ಸಲುವಾಗಿ ನಾವು ದಿಕ್ಕನ್ನು ಬದಲಾಯಿಸಿದೆವು. ಇದು ಒಂದು ಕಠಿಣವಾದ ಪರೀಕ್ಷೆಯೇ ಆಗಿದೆ, ಅಲ್ಲಾಹನಿಂದ ಮಾರ್ಗದರ್ಶನ ಹೊಂದಿರುವವರನ್ನು ಹೊರತುಪಡಿಸಿ.

ಈ ಗ್ರಂಥವನ್ನು ಈತನಕ ಗ್ರಂಥಗಳನ್ನು ಸ್ವೀಕರಿಸಿರುವ (ಉದಾ: ಇಸ್ರಾಯೀಲರ ಸಂತತಿ) ಜನರಿಗೆ ವ್ಯತಿರಿಕ್ತವಾಗಿ ಅರಬರಿಗೆ ನೀಡಲಾಯಿತು.

- (2:144): ಅಲ್ಲಾಹನು ಹೇಳುತ್ತಾನೆ: 'ನಿಮ್ಮ ಮುಖವು ಆಗಾಗ ಆಕಾಶದತ್ತ ತಿರುಗುವುದನ್ನು ನಾವು ನಿಶ್ಚಯವಾಗಿಯೂ ಕಾಣುತ್ತಿದ್ದೇವೆ. ಆದ್ದರಿಂದ ನೀವು ತೃಪ್ತಿಪಡುವಂತಹ ದಿಕ್ಕಿಗೆ ನಿಮ್ಮ ಗಮನವನ್ನು ಕೇಂದ್ರೀಕರಿಸುತ್ತಿದ್ದೇವೆ. ಆದ್ದರಿಂದ ನಿಮ್ಮ ಗಮನವನ್ನು ಸಮ್ಮತಿಸಲ್ಪಟ್ಟ ನಿರ್ಬಂಧಗಳ ಕಡೆಗೆ ಕೇಂದ್ರೀಕರಿಸಿರಿ. ನೀವೆಲ್ಲರೂ ಎಲ್ಲೇ ಇದ್ದರೂ ಅದರ ಕಡೆಗೆ ನಿಮ್ಮ ಗಮನವನ್ನು ಕೇಂದ್ರೀಕರಿಸಿಕೊಂಡು ಇರಬೇಕು. ಗ್ರಂಥವನ್ನು ಸ್ವೀಕರಿಸಿರಿಸುವವರು ಇದು ತಮ್ಮ ಪ್ರಭುವಿನಿಂದ ಬಂದ ಸತ್ಯವೆಂದು ಗುರುತಿಸುತ್ತಾರೆ'.

ಪೂರ್ವ ಗ್ರಂಥಗಳನ್ನು ಸ್ವೀಕರಿಸಿದವರು ಈ ಸಮ್ಮತಿಸಲ್ಪಟ್ಟ ನಿರ್ಬಂಧಗಳು ತಮ್ಮ ಪ್ರಭುವಿನಿಂದಿರುವ ಸತ್ಯವಾಗಿದೆ ಎಂದು ಗುರುತಿಸುತ್ತಾರೆ. ಒಂದು ಮಸೀದಿಯು ಯಾವುದೇ ರೀತಿಯಲ್ಲಿ 'ಸತ್ಯ'ವೆಂದಾಗಲು ಸಾಧ್ಯವಿಲ್ಲ.

- (2:145): ಅಲ್ಲಾಹನು ಕೊನೆಯ ಪ್ರವಾದಿಗೆ ಹೇಳುತ್ತಾನೆ: 'ನೀವು ಈ ಗ್ರಂಥದವರ ಬಳಿಗೆ ಯಾವುದೇ ನಿದರ್ಶನಗಳನ್ನು ಕೊಂಡು ಹೋದರೂ ಅವರು ನಿಮ್ಮ ದಿಕ್ಕನ್ನು ಅನುಸರಿಸುವುದಿಲ್ಲ. ಮತ್ತು ನೀವೂ ಅವರ ದಿಕ್ಕನ್ನು ಅನುಸರಿಸಬಾರದು. ವಾಸ್ತವದಲ್ಲಿ, ಅವರು ತಮ್ಮಲ್ಲಿನ ಇನ್ನೊರ್ವನ ದಿಕ್ಕನ್ನು (ಕಿಬ್ಲ) ಪರಸ್ಪರ ಅನುಸರಿಸುತ್ತಿಲ್ಲ.

- (2:146): ಗ್ರಂಥದ ಜನರು ಇದನ್ನು **<u>ತಮ್ಮ ಸ್ವಂತ ಮಕ್ಕಳನ್ನು ಗುರುತಿಸುವ ಹಾಗೆ ಗುರುತಿಸುತ್ತಾರೆ</u>**. ಆದರೆ ಖಂಡಿತವಾಗಿಯೂ ಅವರಲ್ಲಿ ಅನೇಕರು ಸತ್ಯವನ್ನು ಮರೆಮಾಚುತ್ತಾರೆ.

ಅಂದರೆ, ಅವರು ಆ ನಿರ್ಬಂಧಗಳನ್ನು ತಮ್ಮ ಸ್ವಂತ ಮಕ್ಕಳನ್ನು ಗುರುತಿಸುವಂತೆ ಗುರುತಿಸುತ್ತಾರೆ. ಏಕೆ? ಏಕೆಂದರೆ, ಅವರು ಇದೇ ರೀತಿಯ ನಿರ್ಬಂಧಗಳನ್ನು ಈ ಮುಂಚೆ ಸಮ್ಮತಿಸಿಕೊಂಡಿದ್ದರು. ಅವರಲ್ಲಿ ಅನೇಕರು ಈ ಗ್ರಂಥದ ತಿರುಳನ್ನು ನಿರ್ಲಕ್ಷಿಸಲು ಆಯ್ಕೆಮಾಡಿರುವುದು ಬೇರೆ ವಿಷಯ.

- (2:147): 'ಸತ್ಯವು ಬಂದಿರುವುದು ನಿಮ್ಮ ಪ್ರಭುವಿನಿಂದಾಗಿದೆ. ಆದುದರಿಂದ ನೀವು ಅನುಮಾನ ಪಡುವವರಲ್ಲಿ ಆಗಬೇಡಿರಿ'.

ಸಮ್ಮತಿಸಲ್ಪಟ್ಟಿರುವ ನಿರ್ಬಂಧಗಳು ಸತ್ಯವಾಗಿದೆ ಎಂದು ಅಲ್ಲಾಹನು ನಮಗೆ ಭರವಸೆ ನೀಡುತ್ತಾನೆ. ಕುರ್‌ಆನ್ ಅವತೀರ್ಣವಾದ ಸಮಯದಲ್ಲಿ ಪವಿತ್ರ ಅಥವಾ ಅಪವಿತ್ರ ಮಸೀದಿ ಎಂಬ ವಿಚಾರವೇ ಇರಲಿಲ್ಲ.

- (2:148): 'ಪ್ರತಿಯೊಬ್ಬನಿಗೂ ಅವನದ್ದೇ ಆದ ದಿಕ್ಕು ಇದೆ, ಆದ್ದರಿಂದ ಸದ್ಗುಣದ ಕಡೆಗೆ ಪೈಪೋಟಿ ನಡೆಸುವುದಕ್ಕೆ ನಿಮ್ಮ ಗಮನವನ್ನು ಕೇಂದ್ರೀಕರಿಸಿರಿ. ನೀವು ಎಲ್ಲೇ ಇದ್ದರೂ ಅಲ್ಲಾಹನು ನಿಮ್ಮೆಲ್ಲರನ್ನೂ ಮರಳಿ ತರುವನು'.

- (2:149): 'ನೀವೆಲ್ಲಿಗೆ ಹೊರಟರೂ, ಸಮ್ಮತಿಸಲ್ಪಟ್ಟ ಆದೇಶದ ನಿರ್ಬಂಧಗಳ *(ಮಸ್ಜಿದಿಲ್ ಹರಾಮಿ)* ಕಡೆಗೆ ನಿಮ್ಮ ಗಮನವನ್ನು ಕೇಂದ್ರೀಕರಿಸಿರಿ. ನಿಶ್ಚಯವಾಗಿಯೂ, ಇದು ನಿಮ್ಮ ಪ್ರಭುವಿನಿಂದಿರುವ ಸತ್ಯವೇ ಆಗಿದೆ.'

- (2:150): 'ಆದ್ದರಿಂದ, ನೀವೆಲ್ಲಿಗೆ ಹೋರಟರೂ, ಸಮ್ಮತಿಸಲ್ಪಟ್ಟ ಆದೇಶದ ನಿರ್ಬಂಧಗಳ ಕಡೆಗೆ ನಿಮ್ಮ ಗಮನವನ್ನು ಕೇಂದ್ರೀಕರಿಸಿರಿ. ಜನರಿಗೆ ನಿಮ್ಮ ವಿರುದ್ಧ ವಾದಕ್ಕೆ ಅವಕಾಶ ಸಿಗದಂತಾಗಲು ನೀವೆಲ್ಲರೂ ಎಲ್ಲೇ ಇದ್ದರೂ, ನಿಮ್ಮ ಗಮನವನ್ನು ಅದರ ಕಡೆಗೆ ಕೇಂದ್ರೀಕರಿಸಿರಿ, ಅವರಲ್ಲಿ

> ದುಷ್ಟರನ್ನು ಹೊರತುಪಡಿಸಿ. ಆದುದರಿಂದ ನೀವು ಅವರನ್ನು ಭಯಪಡಬೇಡಿರಿ, ನನ್ನನ್ನು ಮಾತ್ರ ಭಯಪಡಿರಿ. ಇದು ನಾನು ನಿಮ್ಮ ಮೇಲೆ ನನ್ನ ಅನುಗ್ರಹವನ್ನು ಸಂಪೂರ್ಣಗೊಳಿಸಲಿಕ್ಕಾಗಿದೆ'.

ಗ್ರಂಥವನ್ನು ಅವತರಿಸುವ ಪ್ರರಂಪರೆಯು ಹಿಂದಿನ ಗ್ರಂಥವನ್ನು ಸ್ವೀಕರಿಸಿದಂತಹ ಜನರಿಂದ (ಇಸ್ರಾಯೀಲರ ಸಂತತಿ) ಬದಲಾಗಿ ಒಂದು ಅರಬೀ ಪ್ರವಾದಿಗೆ ನೀಡಿರುವುದನ್ನು 2:142-150 ವಚನಗಳು ವಿವರಿಸುತ್ತದೆ. *ಮಸ್ಜಿದಿಲ್ ಹರಾಮಿ* ಎಂದರೆ ಆ ಗ್ರಂಥದಲ್ಲಿರುವಂತಹ ನಿರ್ಬಂಧಗಳಲ್ಲದೇ ಬೇರೇನೂ ಅಲ್ಲ.

> ನಾವು ನಿಮ್ಮೊಳಗಿಂದಲೇ ಒರ್ವ ಸಂದೇಶವಾಹಕರನ್ನು ಕಳುಹಿಸಿದೆವು. ಅವರು ನಿಮಗೆ ನಮ್ಮ ವಚನಗಳನ್ನು ಓದಿ ಹೇಳುತ್ತಾರೆ. ನಿಮ್ಮನ್ನು ಸಂಸ್ಕರಿಸುತ್ತಾರೆ. ನಿಮಗೆ ಗ್ರಂಥದ ಮತ್ತು ಬುದ್ಧಿವಂತಿಕೆಯ ಶಿಕ್ಷಣವನ್ನು ನೀಡುತ್ತಾರೆ, ಮತ್ತು ನೀವು ಇಷ್ಟರ ತನಕ ತಿಳಿಯದಿದ್ದಂತಹ ಸಂಗತಿಗಳನ್ನು ಬೋಧಿಸುತ್ತಾರೆ. ಆದುದರಿಂದ, ನೀವು ನನ್ನನ್ನು ಸ್ಮರಿಸುತ್ತಲಿರಿ, ನಾನು ನಿಮ್ಮನ್ನು ಸ್ಮರಿಸುತ್ತಲಿರುತ್ತೇನೆ ಮತ್ತು ನನಗೆ ಕೃತಜ್ಞರಾಗಿರಿ ಹಾಗೂ ನನ್ನನ್ನು ತಿರಸ್ಕರಿಸಬೇಡಿರಿ. (2:151-152)

ಇಸ್ರಾಯೀಲರ ಮಕ್ಕಳು ಅಲ್ಲಾಹನ ಸಮ್ಮತಿಸಲ್ಪಟ್ಟ ಶಾಸನದ ನಿರ್ಬಂಧಗಳ ವಿವರಗಳೊಂದಿಗೆ ಅಲ್ಲಾಹನ ಗ್ರಂಥವನ್ನು ಪಡೆದಿದ್ದರು. ಅದು ಅವರ ಏಕದೇವನ ಕಡೆಗಿದ್ದ ತಮ್ಮ ಬದ್ಧತೆಯ ಕೇಂದ್ರಬಿಂದುವಾಗಿತ್ತು. ಅದುವೇ ಒಂದು ಅರಬೀ ಪ್ರವಾದಿಗೆ ಅವತರಿಸಲ್ಪಟ್ಟಾಗ, ಆ ಸಂದೇಶದ ಸಾರವು ಈ ಹಿಂದೆ ತಮಗೆ ಅವತರಿಸಲ್ಪಟ್ಟಿದ್ದವುಗಳಿಗೆ ಹೋಲುತ್ತಿರುವುದಾಗಿ ಅವರಿಗೆ ತಿಳಿದಿತ್ತು. ಅಧ್ಯಾಯ 2, ವಚನ 146 ರಲ್ಲಿನ ಹೇಳಿಕೆಯನ್ನು ಮತ್ತಷ್ಟು 6:19-20 ರಲ್ಲಿ ವಿವರಿಸಲಾಗಿದೆ:

> "ಯಾರ ಸಾಕ್ಷ್ಯವು ಎಲ್ಲಕ್ಕಿಂತಲೂ ಶ್ರೇಷ್ಠವಾಗಿದೆ? ಎಂದು ಇವರೊಡನೆ ಕೇಳಿರಿ. ನನ್ನ ಮತ್ತು ನಿಮ್ಮ ನಡುವೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ ಮತ್ತು ಈ ಕುರ್‌ಆನ್ ನಿಮಗೂ ಇನ್ನು ಇದು ಯಾರಿಗೆಲ್ಲಾ ತಲುಪುತ್ತದೋ ಅವರೆಲ್ಲರಿಗೂ ಎಚ್ಚರಿಕೆ ನೀಡಲಿಕ್ಕಾಗಿ ನನ್ನ ಕಡೆಗೆ ಅವತೀರ್ಣಗೊಳಿಸಲಾಗಿದೆ, ಎಂದು ಹೇಳಿರಿ..... ನಾವು ಯಾರಿಗೆ ಗ್ರಂಥವನ್ನು ನೀಡಿದ್ದೆವೋ ಅವರು ತಮ್ಮ ಮಕ್ಕಳನ್ನು ಗುರುತಿಸುವಂತೆಯೇ ಇದನ್ನು ಗುರುತಿಸುತ್ತಾರೆ. ಆದರೆ ತಮ್ಮನ್ನು ತಾವೇ ನಷ್ಟಕ್ಕೊಳಪಡಿಸಿ ಕೊಂಡವರು ಇದನ್ನು ಒಪ್ಪುವುದಿಲ್ಲ."

ಅಲ್ಲಾಹನ ಅನುಗ್ರಹ ಮತ್ತು ಕರುಣೆಯ ಹೊರತಾಗಿಯೂ ಅವರು ಗ್ರಂಥವನ್ನು ತಿರುಚಿದರು. ಅವರು ಅಲ್ಲಾಹನ ಹಾಗೂ ಸಂದೇಶವಾಹಕರ ವಿರುದ್ಧ ಸಂಚುಹೂಡವವರಲ್ಲಿ ಮೊದಲಿಗರಾದರು. ಅವರು ಒಂದು ಧರ್ಮವನ್ನು ರಚಿಸುವ ಸಲುವಾಗಿ ಜನರನ್ನು ಅಲ್ಲಾಹನ ಮಾರ್ಗದಿಂದ ಪಥಭ್ರಷ್ಟಗೊಳಿಸಿದರು ಮತ್ತು ತಮಗೆ ಯಹೂದಿಗಳೆಂಬ ಹೊಸ ಹೆಸರನ್ನು ನೀಡಿದರು.

ಹಳೆಯ ಒಡಂಬಡಿಕೆಯಲ್ಲಿ ಹೀಗೆ ದಾಖಲಿಸಲಾಗಿದೆ - ಈಸಾರು ಇಸ್ರೇಲೀಯರ ಬಳಿಗೆ ಹೊೀದಾಗ ದೊಡ್ಡ ಸಮಸ್ಯೆಯನ್ನೇ ಎದುರಿಸಬೇಕಾಗಿತ್ತು ಮತ್ತು ಕೆಲವರು ಅವರ ಮೇಲೆ ಕಲ್ಲುತೂರಾಟ ನಡೆಸಲು ಪ್ರಯತ್ನಿಸಿದ್ದರು. ನಂತರ, ತಲ್ಮೂದಿನ ರಬ್ಬಿಗಳು ಮತ್ತು ಸಿನಗಾಗ್'ಗಳ ಪ್ರತ್ಯೇಕವಾದಿಗಳು ಅವರು ತಂದಂತಹ ಸತ್ಯವು ಯಹೂದಿ ಧರ್ಮವನ್ನು ಕೊನೆಗೊಳಿಸಬಹುದು ಎಂಬ ಆತಂಕವನ್ನು ವ್ಯಕ್ತಪಡಿಸಿದರು. ಇದನ್ನು ತಡೆಯಲು, ಅವರು ಜನರನ್ನು ಉದ್ರೇಕಗೊಳಿಸಿದರು ಮತ್ತು ಅವರ ವಿರುದ್ಧ ದೈವನಿಂದೆಯ ಆರೊೀಪವನ್ನು ಹೊರಿಸಿದರು. ಅವರನ್ನು ರಾಜ್ಯಪಾಲರ ಬಳಿಗೆ ತನಿಖೆಗೆ ಕಳುಹಿಸಲು ಅವರು ನಿರ್ಧರಿಸಿದರು. ರಾಜ್ಯಪಾಲರಿಗೆ ಅವರು ಮುಗ್ಧನೆಂದು ಪತ್ತೆಯಾದರೂ, ಯಹೂದಿಗಳು ಈ ಮನುಷ್ಯನಿಗೆ ಶಿಕ್ಷೆಯಾಗಲೇ ಬೇಕೆಂದು ಪಟ್ಟುಹಿಡಿದು, ತಮ್ಮ ಒರಟು ಧಾರ್ಮಿಕ ಕಾನೂನನ್ನು ಅವರ ಮೇಲೆ ವಿಧಿಸಿದರು.

ನಂತರ ಈಸಾರು ಶಿಲುಬೆಗೇರಿಸಲ್ಪಟ್ಟರು ಎಂಬ ಐತಿಹಾಸಿಕ ದಾಖಲೆಯನ್ನು ಸೃಷ್ಟಿಸಿದರು. ಅದು ಶತಕೊೀಟಿ ಜನರು ಈ ಕಥೆಯನ್ನು ನಂಬಿಕೊಳ್ಳಲು ಕಾರಣವಾಯಿತು. ಜನರು ಒಂದು ನಶ್ವರ ವ್ಯಕ್ತಿಯನ್ನು ಆರಾಧಿಸುವಂತೆ ಮಾಡುವಲ್ಲಿ ಯಹೂದಿಗಳು ಯಶಸ್ವಿಯಾದರು.

ಆದಾಗ್ಯೂ ಅರಬರು ಯಹೂದಿಗಳನ್ನು ದಾಟಿಹೋಗಿದ್ದಾರೆ. ಅವರು *ಇಸ್ಲಾಂ* ಎಂದು ಹೆಸರಿಡಲಾದ ಧರ್ಮದ ಸೊೀಗಿನಡಿಯಲ್ಲಿ ತಮ್ಮ ಪ್ರಾಚೀನ ಅರಬೀ ಧರ್ಮವನ್ನು ಮತ್ತೆ ಬಳಕೆಗೆ ತರುವಲ್ಲಿ ಯಶಸ್ವಿಯಾದರು ಮತ್ತು ಕಪ್ಪು ಕಲ್ಲನ್ನು ಪೊೀಷಣೆ ಮಾಡುವ ತಮ್ಮ ಪೂರ್ವಜರ ಅನಾಚಾರಿ ಸಂಪ್ರದಾಯವನ್ನು ಉಳಿಸಿಕೊಂಡು ಬರಲು ಒಂದು ದಾರಿಯನ್ನು ಕಂಡುಕೊಂಡರು. ಆವಿಷ್ಕಾರಿತ 'ಪವಿತ್ರ ಮಸೀದಿ'ಯ ಮಧ್ಯದಲ್ಲಿರುವ ಅರಬರ ಪೂರ್ವಜರ ದೇವತೆಯನ್ನು ವಿಶ್ವಾದ್ಯಂತ ಜನರು ಅಲ್ಲಾಹನ ಹೆಸರಿನಲ್ಲಿ ಪೂಜಿಸುತ್ತಿದ್ದಾರೆ. ಒಂದು ವ್ಯವಸ್ಥಿತ ಜೀವನ ರೀತಿಯ ಬಗ್ಗೆ ಇರುವ ಅಲ್ಲಾಹನ ಆದೇಶಗಳನ್ನು ಒಂದು ಭೌತಿಕ ಕಟ್ಟಡದ ಜೊತೆಗೆ ಬದಲಿಸಿದರು. ಹಾಗೆ *ಮಸ್ಜಿದಿಲ್ ಹರಾಮ್* ಎಂಬ ಪದವನ್ನು ತಮ್ಮ ಕಲ್ಲಿನ ವಿಗ್ರಹದ *ಅಭಯಧಾಮ* ಅಥವಾ *ದೇವಾಲಯ* ಎಂಬ ಅರ್ಥದಲ್ಲಿ ಜನರು ಒಪ್ಪಿಕೊಳ್ಳುವಂತೆ ದುರುಪಯೋಗಗೊಳಿಸಿದರು.

ಕುರ್'ಆನನ್ನು ವ್ಯಾಖ್ಯಾನಿಸುವಾಗ ತಪ್ಪು ಅರ್ಥಗಳನ್ನು ನೀಡುವುದು ಬಹುಶಃ ಎಲ್ಲಾ ಅನುವಾದಕರ ನೇರ ಉದ್ದೇಶವಾಗಿರದು ಎಂದು ನಾವು ಒಪ್ಪಿಕೊಳ್ಳಬಹುದು. ಅವರು ಕುರ್'ಆನಿನ ಬಗ್ಗೆ ಹೆಚ್ಚಿನ ಜ್ಞಾನವನ್ನು ಹೊಂದಿವೆ ಎಂದು ಖ್ಯಾತಿಹೊಂದಿದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಗ್ರಂಥಗಳಿಂದ ಮೋಸಗೊಳಿಸಲ್ಪಟ್ಟಿದ್ದಾರೆ. ಆದಾಗ್ಯೂ ಇದು, ಸಾಮಾನ್ಯ ತಿಳುವಳಿಕೆಗೆ ಮತ್ತು ವಿವೇಕತೆಗೆ ಸಮಂಜಸವಾದ ಒಂದು ರೀತಿಯಲ್ಲಿ ವ್ಯಾಖ್ಯಾನಗಳನ್ನು ಸ್ವತಃ ಪರಿಶೀಲಿಸುವ ಕರ್ತವ್ಯದಿಂದ ಯಾವುದೇ ವಿದ್ವಾಂಸನನ್ನು ಹೊರತುಪಡಿಸುವುದಿಲ್ಲ.

ತಮ್ಮ ಪ್ರಭುವಿನ ಅನುಗ್ರಹ ಮತ್ತು ಮೆಚ್ಚುಗೆಯನ್ನು ನಿರೀಕ್ಷಿಸುವವ ಪ್ರಾಮಾಣಿಕ ಜನರಿಗಿರುವ ಪ್ರಮುಖ ಅಂಶವೇನೆಂದರೆ, ವೈಭವಪೂರ್ಣನಾದ ಅಲ್ಲಾಹನನ್ನು ಯಾವುದೇ ಮಾನವ ಅಥವಾ ಭೌತಿಕವಾದ ಮಸೀದಿ

ಅಥವಾ ಕಲ್ಲಿನ ವಿಗ್ರಹ, ಪರ್ವತದೊಂದಿಗೆ ಸಂಯೋಜಿಸಿಕೊಳ್ಳಲು ಸಾಧ್ಯವೇ ಇಲ್ಲ. ವಿಶೇಶವಾಗಿ ಮನುಷ್ಯರಿಂದ 'ಪವಿತ್ರ'ವೆಂದು ಘೋಷಿಸಲ್ಪಟ್ಟವುಗಳು ಅವುಗಳಲ್ಲಿ ಒಳಗೊಳ್ಳುತ್ತವೆ.

ಭಾಗ ಹನ್ನೊಂದು

‘ವನ್ಯಜೀವಿ ಸಂರಕ್ಷಣೆ’ ಎಂಬುವುದು ವಿನಾಶಗೊಂಡಿತು

ಈತರಹದ ಒಂದು ಪುಸ್ತಕದಲ್ಲಿ ವನ್ಯಜೀವಿ ಸಂರಕ್ಷಣೆಯ ಬಗ್ಗೆ ಒಂದು ಭಾಗವನ್ನು ಕಾಣುವುದು ಅಚ್ಚರಿಯ ವಿಷಯವೇನಲ್ಲ. ಮತ್ತೊಮ್ಮೆ, ಕುರ್‌ಆನಿನ ಒಂದು ಸಂವೇದನಾಶೀಲ ಮತ್ತು ಶಿಕ್ಷಣಾರ್ಹ ಆದೇಶವನ್ನು ಒಂದು ಅನಾಚಾರಿ ಪಂಗಡದ ಅವಶ್ಯಕತೆಗಳಿಗೆ ಸರಿಹೊಂದಿಸುವ ಸಲುವಾಗಿ, ಯಾವುದೇ ರೀತಿಯಲ್ಲಿ ಗುರುತುಹಿಡಿಯಲು ಸಾಧ್ಯವಾಗದಂತೆ ಕುಶಲತೆಯಿಂದ ತಿರುಚಲಾಗಿದೆ. ಈ ಭಾಗವು *ಹಜ್ಜ್* ಅಥವಾ *ಉಮ್ರಾ* ಎಂದು ಕರೆಯಲ್ಪಡುವ ‘ತೀರ್ಥಯಾತ್ರೆ’ಯ ಧಾರ್ಮಿಕ ವಿಧಿಯನ್ನು ಕೈಗೊಂಡವರ ಗಮನವನ್ನು ಸೆಳೆಯಬಹುದು.

ನಾನು ಆಹಾರದ ಬಗ್ಗೆ ವಚನಗಳನ್ನು ಸಂಗ್ರಹಿಸುತ್ತಿರುವಾಗ, ಈ ಪ್ರಮುಖ ವಿಷಯದ ಮೇಲೆ ಎಡವಿ ಬಿದ್ದೆ. 5:1 ನ್ನು ಅದರ ನಂತರದ ವಚನಗಳ ಜೊತೆಯಲ್ಲಿ ಹಲವಾರು ಬಾರಿ ಓದಿದ ನಂತರ, ‘ನಿರ್ಬಂಧಿತ’ ಎಂಬ ಪದವು ‘ಧಾರ್ಮಿಕ ಉಡುಗೆ’ ಎಂಬ ಅರ್ಥವನ್ನು ನೀಡುವುದು ಹೇಗೆ ಎಂದು ಅರಿತುಕೊಳ್ಳಲು ಪ್ರಯತ್ನಿಸುವಾಗ, ನಾನು ಒಂದು ಗಂಭೀರ ಸಮಸ್ಯೆಯನ್ನು ಎದುರಿಸಬೇಕಾಯಿತು. ನನ್ನ ಜೊತೆಗಿದ್ದ ಎಲ್ಲಾ ಹನ್ನೆರಡು ಅನುವಾದಗಳು ಹಾಗೂ ನಿಘಂಟುಗಳು *ಹುರುಮುನ್* ಎಂಬುವುದು ಒಂದಾ *ತೀರ್ಥಯಾತ್ರೆಯ ಉಡುಪು* ಅಥವಾ *ತೀರ್ಥಯಾತ್ರೆಯ ವೇಳೆಯಲ್ಲಿನ ಪಾವಿತ್ರ್ಯ ತೆಯ ಸ್ಥಿತಿ (ಇಹ್ರಾಮ್)* ಎಂದು ಹೇಳುತ್ತವೆ.

ಅರಬೇತರ ಮುಸ್ಲಿಮರು, ಧಾರ್ಮಿಕ ಆಚರಣೆಗಳನ್ನು ಮತ್ತು ‘ಆರಾಧನೆ’ಯ ಇತರ ಅಂಶಗಳನ್ನು ವಿವರಿಸಲು ಧಾರ್ಮಿಕರನ್ನು ಅವಲಂಬಿಸುತ್ತಾರೆ. ಒಂದೇ ಒಂದು ಅರಬೀ ಆಚರಣೆಗಳು ಕುರ್‌ಆನಿನಿಂದ ಬಂದಿಲ್ಲ ಮತ್ತು ಇವುಗಳ ಮೂಲವು ಪ್ರವಾದಿಯ ಮೇಲೆ ತಪ್ಪಾಗಿ ಹೊರಿಸಲಾದ ಗಾಳಿಸಮಾಚಾರಗಳ ಒಂದು ದೊಡ್ಡ ಸಂಗ್ರಹವಾದ *ಹದೀಸ್*‌ಗಳಾಗಿವೆ ಎಂದು ನನಗೆ ಹಲವು ವರ್ಷಗಳ ಮುಂಚೆಯೇ ತಿಳಿದಿತ್ತು. ತಮ್ಮ ಅರಬೀ ಧರ್ಮವನ್ನು ಮರು-ಪ್ರಚಾರಪಡಿಸುವಾಗ, ಅರಬರ ಹಿಂದಿನ ತೀರ್ಥಯಾತ್ರೆಯ ವಿಶಿಷ್ಟತೆಗಳನ್ನು ಧಾರ್ಮಿಕರು ಮುಂದುವರಿಸಿಕೊಂಡು ಹೋಗಲು ನಿರ್ಣಯಿಸಿದಂತೆ ತೋರುತ್ತದೆ, ಮತ್ತು ಅವರ ದಾವೆಯನ್ನು ಬೆಂಬಲಿಸಲು ಕುರ್‌ಆನಿನ ಐದನೇ ಸೂರದ ಎರಡು ವಚನಗಳ ಅರ್ಥವನ್ನು ತಿರುಚಿಬಿಟ್ಟರು.

ಪ್ರಶ್ನಾರ್ಥಕವಾದ ವಚನಗಳನ್ನು ನೋಡುವ ಮೊದಲು, ನಾವು ಜ್ಞಾಪಿಸಿಕೊಳ್ಳಬೇಕಾದದು ಏನೆಂದರೆ, ಕುರ್‌ಆನಿನ ಪ್ರಕಾರ, ಕುರ್‌ಆನ್ ಹೇಳ ಬಯಸುವ ಪ್ರಮುಖ ಅಂಶಗಳನ್ನು ಅರ್ಥೈಸಿಕೊಳ್ಳಲು ಇತರ ಯಾವುದೇ ಮೂಲಗಳ ಅಗತ್ಯವು ನಮಗಿಲ್ಲ. ಯಾವುದೇ ತಫ್ಸೀರ್, ಯಾವುದೇ ಹದೀಸ್[70]ಗಳ

[70] *ಹದೀಸ್* ಎಂಬುವುದು ಪರಿಶೀಲಿಸಲು ಸಾಧ್ಯವಿಲ್ಲದ ಅನೇಕ ಮೂಲಗಳಿಂದಿರುವ ಕೊನೆಯ ಪ್ರವಾದಿಯ ಬಗ್ಗೆಗಿನ ಕಟ್ಟುಕಥೆಗಳಾಗಿವೆ.

ಅವಶ್ಯಕತೆಯಿಲ್ಲ. ಕುರ್‌ಆನ್ ಅತ್ಯುತ್ತಮ ಹದೀಸ್ ಮತ್ತು ಸ್ಥಿರತೆಯುಳ್ಳ ಗ್ರಂಥವಾಗಿದೆ ಎಂದು ಅಲ್ಲಾಹನು 39:23 ರಲ್ಲಿ ಘೋಷಿಸುತ್ತಾನೆ. ಕುರ್‌ಆನ್ ಸ್ವಯಂ-ವಿವರಣಾತ್ಮಕವಾಗಿದೆ ಎಂದು ಸ್ವತಃ ಕುರ್‌ಆನೇ ಹೇಳುತ್ತದೆ. ಈ ಸರಳವಾದ ಸತ್ಯಾಂಶವನ್ನು, ಸಹಜವಾಗಿ ಅರಬೀ ಧರ್ಮದಲ್ಲಿರುವ ಎಲ್ಲಾ ಪಂಗಡಗಳು ನೇರವಾಗಿ ವಿರೋಧಿಸುತ್ತಾರೆ. ನಾವು ಕುರ್‌ಆನಿನಲ್ಲಿನ ಈ ಪದಗಳನ್ನು ಸ್ವೀಕರಿಸುತ್ತೇವೆಂದಾದರೆ, ನಮಗೆ ಮತ್ತಷ್ಟು ತಪಾಸಣೆ ಮಾಡಬಹುದು.

> ಅಲ್ಲಾಹನು ಅತ್ಯುತ್ತಮ ನಿರೂಪಣೆಯಾದ *(ಹದೀಸ್)*, ಸ್ಥಿರತೆಯುಳ್ಳಂತಹ ಒಂದು ಗ್ರಂಥವನ್ನು ಅವತರಿಸಿದ್ದಾನೆ. (39:23)

> ಅವರು ನಿಮ್ಮ ಮುಂದೆ ಯಾವುದೇ ವಿಷಯವನ್ನು ತಂದಾಗಲೂ, ನಾವು ಸತ್ಯ ಹಾಗೂ ಅತ್ಯುತ್ತಮ ವ್ಯಾಖ್ಯಾನವನ್ನು *(ಅಹ್ಸನ ತಫ್ಸೀರ)* ನಿಮಗೆ ಒದಗಿಸಿದೆವು. (25:33)

ಹುರುಮುನ್ ಎಂಬುವುದು ಕುರ್‌ಆನಿನಲ್ಲಿ ನಾಲ್ಕು ಬಾರಿ ಕಾಣಿಸಿಕೊಳ್ಳುತ್ತದೆ. ಈ ಪದವನ್ನು, ಪುರುಷ ಯಾತ್ರಿಕರು ಕಡ್ಡಾಯವಾಗಿ ಧರಿಸಬೇಕಾದ, ತಡೆರಹಿತ ಎರಡು ಬಿಳಿ ವಸ್ತ್ರ ಎಂದಾಗುವಂತೆ ತಿರುಚಲಾಯಿತು ಹಾಗೂ ಧಾರ್ಮಿಕರು ಅದನ್ನು *ಇಹ್ರಾಮ್* ಎಂದು ಹೇಳುತ್ತಾರೆ. ಬಿಳಿ ಬಟ್ಟೆಯ ಎರಡು ತುಂಡುಗಳು ವಾಸ್ತವವಾಗಿ, ರೋಮನ್ ಹಾಗೂ ಗ್ರೀಸ್ ಕಾಲದಿಂದಲೂ ಬಂದ ಅನಾಚಾರಿಕ ಪರಂಪರೆಯ ಅವಶೇಷಗಳಾಗಿವೆ, ಅವರ ಪಾದ್ರಿಗಳು ಮತ್ತು ಪವಿತ್ರರು ಸಮಾಜದಲ್ಲಿ ತಮ್ಮ 'ಪಾವಿತ್ರ್ಯತೆ'ಯನ್ನು ಸೂಚಿಸುವುದಕ್ಕಾಗಿ ಬಿಳಿ ಬಟ್ಟೆಗಳನ್ನು ಧರಿಸುತ್ತಿದ್ದರು (ಉದಾಹರಣೆಗೆ, ಪುರಾತನ ರೋಮನ್ ಗಂಡಸರು ಧರಿಸುತ್ತಿದ್ದ 'ತೊಗ' ಎಂಬ ಒಂದು ಬಗೆಯ ಬಿಳಿವಸ್ತ್ರ).

5:1-5 ವಚನಗಳಲ್ಲಿರುವ ವಿಷಯವು 'ಆಹಾರ'ದ ಬಗ್ಗೆಯಾಗಿದೆ. ಇದು ತೀರ್ಥಯಾತ್ರೆಯ ಬಗ್ಗೆ ಇರುವುದೇ ಅಲ್ಲ.

ಅನುವಾದಕರು 5:1 ಮೊದಲ ಭಾಗವನ್ನು ಸರಿಯಾಗಿಯೇ ವ್ಯಾಖ್ಯಾನಿಸುತ್ತಾರೆ. ಅವರ ವೈಯಕ್ತಿಕ ನಂಬಿಕೆಗಳಿಗೆ ಘಾತ ಉಂಟಾಗದ ಸಂದರ್ಭಗಳಲ್ಲಿ ಅವರು ಸರಿಯಾಗಿಯೇ ವ್ಯಾಖ್ಯಾನಿಸುವುದು ಸಾಮಾನ್ಯವಾಗಿದೆ:

> *ಯಾ ಅಯ್ಯುಹಲ್ಲಧೀನ ಆಮನೂ* - ಓ ಸತ್ಯವಿಶ್ವಾಸಿಗಳೇ,
>
> *ಔಫೂ ಬಿಲ್ ಉಖೂದ್* - ನೀವು ನಿಮ್ಮ ಕರಾರನ್ನು ಕಟ್ಟುನಿಟ್ಟಾಗಿ ಪಾಲಿಸಿರಿ.
>
> *ಉಹಿಲ್ಲತ್ ಲಕುಮ್ ಬಹೀಮತುಲ್ ಅನ್‌ಆಮಿ* - ನಿಮಗೆ ಎಲ್ಲಾ ಜಾನುವಾರುಗಳ ಮಾಂಸವನ್ನು ಅನುಮತಿಸಲಾಗಿದೆ

ಇಲ್ಲಾ ಮಾ ಯುತ್ಲಾ ಅಲೈಕುಮ್ - ನಿಮಗೆ ಓದಿತಿಳಿಸಲಾಗುವುದನ್ನು ಹೊರತುಪಡಿಸಿ.

ಇದು 5:1 ರ ಮೊದಲ ಭಾಗವಾಗಿದೆ ಮತ್ತು ಇಲ್ಲಿನ ವಿಷಯವು ಅಲ್ಲಾಹನ ಒಪ್ಪಂದದ ಬಗ್ಗೆಯಾಗಿದೆ, ಮತ್ತು ಒಪ್ಪಂದವು ಆಹಾರದ ಬಗ್ಗೆಯಾಗಿದೆ. ವಚನದ ಉಳಿದ ಭಾಗವು ಹೇಳುತ್ತದೆ:

ಘೈರ ಮುಹಿಲ್ಲಿ-ಸ್ಸೈದಿ – ಬೇಟೆಯಾಡುವುದನ್ನು ಅನುಮತಿಸಬೇಡಿರಿ

ವ ಅನ್ತುಮ್ ಹುರುಮುನ್ – (ಸಾಧಾರಣವಾಗಿ ಅನುವಾದಿಸುವಂತೆ) – ನೀವು ತೀರ್ಥಯಾತ್ರೆಯ ಉಡುಪನ್ನು ಧರಿಸಿರುವಾಗ ಅಥವಾ ಇಹ್ರಾಮಿನ ಸ್ಥಿತಿಯಲ್ಲಿರುವಾಗ.

ಭ್ರಷ್ಟಾಚಾರವು ಇರುವುದು ಇಲ್ಲಿ. ಈ ವಚನದ ಎದ್ದುಕಾಣುವಂತಹ ಇಂತಹ ತಪ್ಪುಪಾರಾಯಣವನ್ನು ಮಾಡುವಾಗ, ವಿಷಯವು ಹಠಾತ್ತಾಗಿ ಬದಲಾವಣೆಯಾಗುತ್ತದೆ. ಇಂತಹ ವೈಪರೀತ್ಯಗಳು ಕುರ್‌ಆನಿನಲ್ಲಿ ಎಲ್ಲಿಯೂ ಸಂಭವಿಸುವುದಿಲ್ಲ.

ನಮಗೆ ಓದಿಹೇಳುವುದನ್ನು ಹೊರತುಪಡಿಸಿ, ಎಲ್ಲಾ ಜಾನುವಾರುಗಳ ಮಾಂಸವನ್ನು ಸೇವಿಸಲು ನಮಗೆ ಸಂಪೂರ್ಣ ಸ್ವಾತಂತ್ರ್ಯವನ್ನು ವಚನದ ಮೊದಲ ಭಾಗವು ನೀಡುತ್ತದೆ. ಎರಡನೇ ಭಾಗವು, ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ವನ್ಯಜೀವಿಗಳ ಮಾಂಸದ ಸೇವನೆಯ ಬಗ್ಗೆ ಸೂಚಿಸುತ್ತದೆ: *ವ ಅನ್ತುಮ್ ಹುರುಮುನ್.*

ವ ಅನ್ತುಮ್ ಎಂಬ ಪದಗಳು *ನೀವು ಆಗಿರುವಾಗ* ಎಂಬ ಅರ್ಥವನ್ನು ನೀಡುತ್ತದೆ.

ವ ಅನ್ತುಮ್ ಹುರುಮುನ್ ಎಂಬುವುದು **'ನೀವು ನಿರ್ಬಂಧಿತರಾಗಿರುವಾಗ'** ಎಂದಾಗಿದೆ.

ಹುರುಮುನ್ ಎಂಬುವುದು ಹ-ರ-ಮ ಅಥವಾ *ಹರಾಮ್* ಎಂಬ ಮೂಲದ ಒಂದು ಉತ್ಪನ್ನವಾಗಿದೆ. ಈ ಮೂಲ ಪದದಿಂದ ಉತ್ಪತ್ತಿಯಾಗುವ ಎಲ್ಲಾ ಉತ್ಪನ್ನಗಳು ವಿವಿಧ ಛಾಯೆಗಳನ್ನು ಹೊಂದಿರಬಹುದು, ಆದರೆ ಪದದ ಅರ್ಥದ ಸತ್ವವು ಒಂದೇ ಆಗಿರುತ್ತದೆ.

ಪ್ರತಿ ಬಾರಿಯು ವಿವಿಧ ಮತ್ತು ವಿಭಿನ್ನ ಉತ್ಪನ್ನಗಳಾದ *ಹರಾಮ್, ಹುರುಮ್, ಹುರುಮತ್, ಹರ್ರಮ, ಯುಹರ್ರಿಮು, ಹುರಿಮ ಮತ್ತು ಮುಹರ್ರಮ್* ಬಳಕೆಯಾದಾಗ ಅವುಗಳು *ನಿಷೇಧಿತ, ನಿರ್ಬಂಧಿತ, ಸೀಮಿತ, ನಿಯಂತ್ರಿತ* ಅಥವಾ *ನಿಯಮಿತ* ಎಂಬ ಅರ್ಥಗಳನ್ನು ನೀಡುತ್ತದೆ.

ನಾವು ಅವುಗಳು ಕಂಡುಬರುವ ಸಂದರ್ಭಗಳನ್ನು ತುಲನಾತ್ಮಕವಾಗಿ ಪರಿಶೀಲಿಸುವ ಮೂಲಕ ಈ ಉತ್ಪನ್ನಗಳ ಅರ್ಥವನ್ನು ತಿಳಿಯಲು ಸಾಧ್ಯವಿದೆ. ಇದು ಒಂದು ಸರಳವಾದ ಮತ್ತು ಪ್ರಮುಖವಾದ

ಪ್ರಕ್ರಿಯೆಯಾಗಿದೆ ಮತ್ತು ಕೆಲವು ಪದಗಳ ಅರ್ಥವನ್ನು ತಿಳಿಯಲು ನಮಗೆ ಕುರ್‌ಆನಿನ ಹೊರಗಿನ ದೀರ್ಘ ವ್ಯಾಖ್ಯಾನ ಅಥವಾ ವರಧಿ ಅಥವಾ ತಫ್ಸೀರ್[71] ಗಳ ಅಗತ್ಯವಿಲ್ಲ.

ಉದಾಹರಣೆಗೆ, 3:93 ರಲ್ಲಿ ಇಸ್ರಾಯೀಲರ ಸಂತತಿಗಳಿಗೆ ತೌರಾತ್ ಅವತೀರ್ಣಗೊಳ್ಳುವ ಮೊದಲು ಅವರು ತಮಗಾಗಿ ನಿಷೇಧಿತಗೊಳಿಸಿದವುಗಳನ್ನು *(ಹರ್ರಮ)* ಹೊರತು ಪಡಿಸಿ ಎಲ್ಲಾ ಆಹಾರವನ್ನು ಸೇವಿಸುವುದು ಅವರಿಗೆ ಅನುಮತಿ ನೀಡಲಾಗಿತ್ತು *(ಹಲಾಲ್)*.

> *ಕುಲ್ಲು ಥ್ಚಆಮಿ ಕಾನ ಹಿಲ್ಲನ್ ಲಿ ಬನೀ ಇಸ್ರಾಯೀಲ* – ಎಲ್ಲಾ ಆಹಾರವು ಇಸ್ರಾಯೀಲರ ಸಂತತಿಗೆ ಅನುಮತಿಸಲಾಗಿತ್ತು
>
> *ಇಲ್ಲಾ ಮಾ ಹರ್ರಮ ಇಸ್ರಾಯೀಲು ಅಲಾ ನಫ್ಸಿಹೀ* – ಇಸ್ರಾಯೀಲರು ತಮ್ಮ ಮೇಲೆ ತಾವೇ ನಿಷೇಧಿಸಿದವುಗಳನ್ನು ಹೊರತು ಪಡಿಸಿ
>
> *ಮಿನ್ ಕಬ್ಲಿ ಅನ್ ತುನಝ್ಝಲ ತ್ತೌರಾತು* - ತೌರಾತ್ ಅವತೀರ್ಣಗೊಳ್ಳುವ ಮುಂಚಿತವಾಗಿ

ಇಸ್ರಾಯೀಲರ ಮಕ್ಕಳು ತೌರಾತ್ ಅವತೀರ್ಣಗೊಳ್ಳುವ ಮುಂಚೆ ಕೆಲವು ಆಹಾರಗಳನ್ನು <u>ನಿಷೇಧಿತ/ನಿರ್ಬಂಧಿತ</u>ಗೊಳಿಸಿದ್ದರು *(<u>ಹರ್ರಮ</u>)*.

ಆದ್ದರಿಂದ, 5:1 ರಲ್ಲಿನ *ಅನ್ತುಮ್ <u>ಹುರುಮುನ್</u>* ಎಂಬುವುದಕ್ಕೆ *ನೀವು <u>ನಿರ್ಬಂಧಿತರಾಗಿರುವಾಗ</u> ಅಥವಾ <u>ನಿಷೇಧಿಸಲ್ಪಟ್ಟಿರುವಾಗ</u>* ಎಂಬರ್ಥವಾಗಿದೆ.

ಅಂದರೆ, 5:1 ರಲ್ಲಿ ಬೇಟೆಯಾಡುವುದರ ನಿರ್ಬಂಧನೆಯನ್ನು ಪಾಲಿಸಬೇಕಾದುದು ನಾವಾಗಿದ್ದೇವೆ. 5:94 ರಲ್ಲಿ, ಬೇಟೆಯಾಡುವುದು ನಮಗೆ ಒಂದು ಪರೀಕ್ಷೆಯಾಗಿದೆ ಎಂದು ಹೇಳಲಾಗಿದೆ (ಈ ವಚನವು ನಂತರ ಉಲ್ಲೇಖಿಸಲಾಗುವುದು). ಆಹಾರದ ವಿಷಯಗಳ ಅಲ್ಲಾಹನ ಆದೇಶಗಳ ವಾಕ್ಯವೃಂದಗಳಲ್ಲಿ, ವನ್ಯಜೀವಿ ಸಂರಕ್ಷಣಾ ವಿಷಯವನ್ನೂ ಅವನು ಈಗ ನಿರ್ಬಂಧಗೊಳಿಸಿದ್ದಾನೆ.

ನಾವು ಕಾಡುಪ್ರಾಣಿಗಳ ಬೇಟೆಯಾಡುವುದರಿಂದ ಎಷ್ಟು ಸಮಯ ನಿಷೇಧಿತರಾಗಿರಬೇಕೆಂದು ಕುರ್‌ಆನ್ ಹೇಳುವುದಿಲ್ಲ, ಆದರೆ ಇದು ಅಲ್ಲಾಹನ ಆದೇಶಗಳ ಭಾಗವಾಗಿದೆ ಎಂದು ಕುರ್‌ಆನ್ ಹೇಳುತ್ತದೆ. ಆದ್ದರಿಂದ ಅದರ ಸಮಯವನ್ನು ನಾವು ಪ್ರದೇಶ ಹಾಗೂ ಋತುವಿಗೆ ಅನುಸಾರವಾಗಿ ನಿರ್ಧರಿಸಬೇಕಾಗಿದೆ. ಅಂದರೆ,

---

[71] *ತಫ್ಸೀರ್* ಎಂದರೆ, ಕುರ್‌ಆನನ್ನು ವಿವರಿಸುವ ನೆಪದಲ್ಲಿ, ಹಲವಾರು ಹದೀಸ್ ಗ್ರಂಥಗಳಲ್ಲಿ ಕಂಡುಬರುವ ಸಂಪ್ರದಾಯ ಮತ್ತು ಕಥೆಗಳನ್ನು ಆಧರಿಸಿ, ತಜ್ಞರು ಎಂದು ಕರೆಯಲ್ಪಡುವಂತಹ ಜನರಿಂದ ಬರೆಯಲ್ಪಟ್ಟ, ಸುಧೀರ್ಘ ವ್ಯಾಖ್ಯಾನಗಳಾಗಿವೆ. ಇದು ಯಹೂದಿಗಳ *ತೊಸೆಫ್ತ*ವನ್ನು ಹೋಲುತ್ತದೆ, ಅದರಲ್ಲಿ ಪ್ರತಿನಿಧಿಸುವಂತಹ ಅನೇಕ ಅಧಿಕಾರಿಗಳಿಂದ ಸೃಷ್ಟಿಸಲ್ಪಟ್ಟ *ಮಿಸ್ನಹ್* ಎಂಬುವುದಕ್ಕೆ ನಿಕಟವಾಗಿರುವ, ಸಂಪ್ರದಾಯಗಳು ಮತ್ತು ಹೇಳಿಕೆಗಳನ್ನು ಒಳಗೊಂಡ ಒಂದು ಸಂಕಲನವಾಗಿದೆ.

ಅಫ್ಘಾನಿಸ್ಥಾನದ ಪರ್ವತಗಳ ಮೇಕೆಗಳ ವಂಶಾಭಿವೃದ್ಧಿಯ ಅವಧಿಯು ಐದು ತಿಂಗಳಾಗಿದೆ, ಹಾಗಿರುವಾಗ ಆ ಐದು ತಿಂಗಳ ಕಾಲ ಆ ಮೇಕೆಗಳನ್ನು ಬೇಟೆಯಾಡಬಾರದು.

'ನಿಕರಾಗ್ವಾ' ಎಂಬ ಸ್ಥಳದಲ್ಲಿ ವಿಷೇಶವಾದ ತೊಗಲು ಆಮೆಗಳು ತಮ್ಮ ಮೊಟ್ಟೆಗಳನ್ನು ಎರಡು ತಿಂಗಳು ಹೊತ್ತಿರುತ್ತವೆ, ತದನಂತರ ವರ್ಷದ ಒಂದು ನಿರ್ದಿಷ್ಟ ಹುಣ್ಣಿಮೆಯ ರಾತ್ರಿಯಲ್ಲಿ ತಮ್ಮ ಮೊಟ್ಟೆಗಳನ್ನು ಇಡುತ್ತವೆ, ನಾವು ಆ ನಿರ್ದಿಷ್ಟ ಹುಣ್ಣಿಮೆಯ ಮುಂಚಿನ ಸುಮಾರು ಮೂರು ತಿಂಗಳ ಕಾಲ ಅದನ್ನು ಬೇಟೆಯಾಡುವುದನ್ನು ನಿಷೇಧಿಸಬೇಕು. ಜಿಂಕೆಯು ಬಹುತೇಕ ಅಳಿವಿನಂಚಿನಲ್ಲಿದ್ದರೆ ಮತ್ತು ಅದಕ್ಕೆ ತನ್ನ ವಂಶಾಭಿವೃದ್ಧಿ ಮಾಡಿಕೊಳ್ಳಲು ವರ್ಷಗಳ ಕಾಲಾವಧಿಯ ಅಗತ್ಯವಿದ್ದರೆ, ನಾವು ಆ ವರ್ಷಗಳ ಕಾಲಾವಧಿಯಲ್ಲಿ ಬೇಟೆಯಾಡಬಾರದು *(ಫೈರ ಸೈದಿನ್)*. *ಅನ್ತುಮ್ ಹುರುಮುನ್* ಎಂದರೆ, *ನೀವು ನಿಷೇಧಿಸಲ್ಪಟ್ಟಿರುವಾಗ* ಎಂದಾಗಿದೆ.

5:1 ವಚನವು ಬೇಟೆಯಾಡುವ ನಿರ್ಬಂಧನೆಯ ಬಗ್ಗೆ ಬಲವಾಗಿ ಒತ್ತಿಹೇಳುತ್ತದೆ:

ಫೈರ ಮುಹಿಲ್ಲಿ-ಸ್ಸೈದಿ – ಬೇಟೆಯಾಡುವುದನ್ನು ಅನುಮತಿಸಬೇಡಿರಿ

ಬೇಟೆಯ ಮೇಲಿನ ನಿಷೇಧಾಜ್ಞೆಯು, ವಿವಿಧ ಜಾತಿಯ ಪ್ರಾಣಿಗಳನ್ನು ರಕ್ಷಿಸುವ ಸಲುವಾಗಿ ಪ್ರದೇಶದ ಕಾನೂನಿನಲ್ಲಿ ಒಳಗೊಂಡಿರಬೇಕಾಗಿದೆ. ಪ್ರದೇಶದ ಕಾನೂನು, ಸರಿಯಾದ ಸಮಯದಲ್ಲಿ ಬೇಟೆಯ ನಿರ್ಬಂಧಗಳನ್ನು ಹೇರಬೇಕು.

ಈ ಸಂದೇಶದ ಅರ್ಥವನ್ನು ಗ್ರಹಿಸಲು ನಾವು ಯಾವುದೇ ದೇಶದ ವನ್ಯಜೀವಿ ವಿಭಾಗಕ್ಕೆ ಭೇಟಿ ನೀಡಬೇಕು ಹಾಗೂ ಅವರು ನಿರ್ದಿಷ್ಟ ತಿಂಗಳಲ್ಲಿ ವಿವಿಧ ಪ್ರಾಣಿಗಳನ್ನು ಬೇಟೆಯಾಡುವುದರ ಮೇಲೆ ವಿವಿಧ ನಿರ್ಬಂಧಗಳನ್ನು ಏಕೆ ವಿಧಿಸಿದ್ದಾರೆ ಎಂದು ಕೇಳಿ ತಿಳಿದುಕೊಳ್ಳಬಹುದು. ಭಾರತದಲ್ಲಿ ಜಿಂಕೆ ಬೇಟೆಯ ಋತುವು, ಯಮನಿನ ಮೇಕೆ ಬೇಟೆಯ ಋತುವಿಗಿಂತ ಭಿನ್ನವಾಗಿರಬಹುದು. ವಿವಿಧ ಪ್ರಾಣಿಗಳಿಗೆ ವಿವಿಧ ಋತುಗಳಿವೆ. ಬೇಟೆಯಾಡುವುದನ್ನು ಯಾವಾಗ ನಿಷೇಧಿಸಬೇಕು ಎಂದು ನಾವು ತೀರ್ಮಾನಿಸಬೇಕಾಗುತ್ತದೆ, ಮತ್ತು ನಾವು ಅಲ್ಲಾಹನನ್ನು ಭಯಪಡುವವರಾದರೆ ಈ ಕಾನೂನುಗಳನ್ನು ಗೌರವಿಸಬೇಕಾಗಿದೆ.

ಇದು 5:1 ರ ಸಂದೇಶದ ನಿಜವಾದ ಅರ್ಥವಾಗಿದೆ. ಇದು *ಇಹ್ರಾಮ್* ಎಂಬ ಎರಡು ತುಂಡು ಬಿಳಿ ಬಟ್ಟೆಯ ಉಡುಗೆಯನ್ನು ಧರಿಸಿ, ನಮ್ಮನ್ನು ಆಲಿಸಲು ಅಲ್ಲಾಹನನ್ನು ಕೂಗಿ ಕರೆಯುತ್ತಾ, ಒಂದು ಮಸೀದಿಯ ಕೇಂದ್ರದಲ್ಲಿರುವ ಒಂದು ಚೌಕಾರದ ಕಲ್ಲಿನ ವಿಗ್ರಹದ ಸುತ್ತಲೂ ನಡೆಯುವುದರ ಬಗ್ಗೆ ಅಲ್ಲ. ಆ ಉಡುಗೆಯನ್ನು ಧರಿಸಿ, ತೀರ್ಥಯಾತ್ರೆಯ ಪಾವಿತ್ರತೆಯ ಸ್ಥಿತಿಯಲ್ಲಿರುವಾಗ ಬೇಟೆಯಾಡುವುದನ್ನು ನಿಷೇಧಿಸಲಾಗಿದೆ ಎಂದು ಹೇಳುವುದೂ ಅವಿವೇಕತನವಾಗಿದೆ.

ಇಲ್ಲಿ ವನ್ಯಜೀವಿಯ ಮಾಂಸವನ್ನು ನಿಷಿದ್ಧ (ಅಥವಾ ಹರಾಮ್) ಮಾಡಿರುವುದಲ್ಲ, ಆದರೆ ನಮಗೆ ಒಂದು ನಿರ್ದಿಷ್ಟ ಅವಧಿಯಲ್ಲಿ ಅವುಗಳನ್ನು ಬೇಟೆಯಾಡುವುದನ್ನು ನಿಷಿದ್ಧಗೊಳಿಸಲಾಗಿದೆ.

ನಾವು ಪ್ರಪಂಚದ ಪ್ರಭುವಿನ ಇಚ್ಛೆಯನ್ನು ಪಾಲಿಸಲು ಬಯಸಿದಲ್ಲಿ, ನಿರ್ಬಂಧಿತ ತಿಂಗಳುಗಳಲ್ಲಿ ವನ್ಯಜೀವಿಗಳ ಬೇಟೆಯಾಡುವ ಬಗ್ಗೆ ಇರುವ ಅವನ ಆಜ್ಞೆಗಳನ್ನು ನಾವು ಮುರಿಯಬಾರದು:

> ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಅನುಗ್ರಹ ಮತ್ತು ಸಂಪ್ರೀತಿಯನ್ನು ಅರಸುವಾಗ, ಅಲ್ಲಾಹನ ಆಜ್ಞೆಗಳನ್ನು *(ಶ'ಆಇರಲ್ಲಾಹ್)*, ಮತ್ತು (ಬೇಟೆಯಾಡುವ) ನಿರ್ಬಂಧಿತ ತಿಂಗಳುಗಳನ್ನು, ಮತ್ತು (ಬೇಟೆಯ ಬಗ್ಗೆ) ಮಾರ್ಗದರ್ಶಿ ಸೂತ್ರವನ್ನು, ಮತ್ತು (ಬೇಟೆಯ ಬಗ್ಗೆ) ಸೂಚಕಗಳು ಮತ್ತು ವ್ಯವಸ್ಥೆಯಲ್ಲಿ ನಿರ್ಬಂಧಗೊಳಿಸಲ್ಪಟ್ಟ ಸಾಮರಸ್ಯವನ್ನು *(ಆಮ್ಮೀನಲ್ ಬೈತಲ್ ಹರಾಮ)* ಉಲ್ಲಂಘಿಸಬೇಡಿರಿ. ಮತ್ತು ನಿಮಗೆ ಅನುಮತಿ ನೀಡಲಾದಾಗ (ನಿಷೇಧವನ್ನು ರದ್ದುಗೊಳಿಸಲಾದ ನಂತರ) *(ಹಲಲ್ತುಮ್)*, ನೀವು ಬೇಟೆಯಾಡಬಹುದು. ನೀವು ಅತಿರೇಕವನ್ನೆಸಗಬೇಕಾಗಿ, ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು *(ಅನಿಲ್ ಮಸ್ಜಿದಿಲ್ ಹರಾಮಿ)* ಪಾಲಿಸುವುದರಿಂದ ನಿಮ್ಮನ್ನು ತಡೆಯುವ ಜನಾಂಗದ ದ್ವೇಷವು ನಿಮ್ಮನ್ನು ಕೆರಳಿಸದಿರಲಿ. ಮತ್ತು ನ್ಯಾಯದ ಕಾರ್ಯಗಳಲ್ಲಿ ಮತ್ತು ಪುಣ್ಯಕರ್ಮಗಳಲ್ಲಿ ಪರಸ್ಪರ ಸಹಕರಿಸಿರಿ, ಮತ್ತು ಪಾಪ ಕೃತ್ಯಗಳಲ್ಲಿ ಮತ್ತು ಆಕ್ರಮಣಶೀಲತೆಯಲ್ಲಿ ಪರಸ್ಪರ ಸಹಕರಿಸಬೇಡಿರಿ. ಅಲ್ಲಾಹನನ್ನು ಲಕ್ಷಿಸಿರಿ. ಅವನ ಶಿಕ್ಷೆಯು ಅತ್ಯಂತ ಕಠಿಣವಾಗಿದೆ. (5:2)

ನಾವು ವನ್ಯಜೀವಿಯನ್ನು ರಕ್ಷಿಸಲು ಶಾಸಕರೊಂದಿಗೆ ಸಹಕರಿಸಬೇಕು ಮತ್ತು ಹಾಗೆ ಮಾಡುವುದರ ಮೂಲಕ ನಾವು ಅಲ್ಲಾಹನ ವ್ಯವಸ್ಥೆಯಲ್ಲಿ ಅವನು ನಿಗದಿಪಡಿಸಿದ ನಿರ್ಬಂಧಗಳನ್ನು ಪಾಲಿಸುತ್ತೇವೆ. ನಾವು ಅಕ್ರಮ ಬೇಟೆಗಾರರೊಂದಿಗೆ ಸಹಕರಿಸಬಾರದು. ಆದಾಗ್ಯೂ, ನಾವು ಉದ್ದೇಶಪೂರ್ವಕವಾಗಿ ನಿರ್ಬಂಧಿತ ತಿಂಗಳ *(ಶಹ್ರುಲ್ ಹರಾಮಿ)* ಅವಧಿಯಲ್ಲಿ ವನ್ಯಜೀವಿಯನ್ನು ಕೊಂದರೆ, ಆ ಆಹಾರವನ್ನು ತಿನ್ನಲು ನಮಗೆ ಅನುಮತಿಸಲ್ಪಟ್ಟಿದೆ, ಆದರೆ ನಾವು ಅದಕ್ಕೆ ದುಬಾರಿ ದಂಡವನ್ನು ಪಾವತಿಸಬೇಕಾಗುತ್ತದೆ ಅಥವಾ ಆ ಪ್ರದೇಶದ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ.

> ಓ ವಿಶ್ವಾಸಿಗಳೇ, ನಿಷೇಧಿಸಲ್ಪಟ್ಟ ಅವಧಿಯಲ್ಲಿ *(ಹುರುಮುನ್)* ವನ್ಯಜೀವಿಗಳನ್ನು ಕೊಲ್ಲಬೇಡಿರಿ. ಯಾರಾದರೂ ಉದ್ದೇಶಪೂರ್ವಕವಾಗಿ ಕೊಂದರೆ, ಅವುಗಳ 'ಕಣಕಾಲುಗಳ' (ಕಾಬಾ) ಮೇಲೆ ಅವುಗಳ ಪರಿಪಕ್ವತೆಯನ್ನು ಸೂಚಿಸಲು ನಿಮ್ಮ ಪೈಕಿ ಎರಡು ಸೂಕ್ತ ವ್ಯಕ್ತಿಗಳು ತೀರ್ಮಾನಿಸುವಂತೆ ಒಂದು ಸಮಾನ ಜಾನುವಾರಿನ ದಂಡತೆರಬೇಕು. ಅಥವಾ ಅವರು ತಮ್ಮ ಕಾರ್ಯಗಳ ಪರಿಣಾಮಗಳನ್ನು ವಿಷಾದಿಸಿಕೊಳ್ಳಲು, ಬಡವರಿಗೆ ಆಹಾರ ನೀಡುವ ಮೂಲಕ ಅಥವಾ ಸ್ವಯಂ-

> ಶಿಸ್ತನ್ನು[72] *(ಸಿಯಾಮ್)* ಹೇರುವ ಮೂಲಕ ಪ್ರಾಯಶ್ಚಿತ್ತಪಟ್ಟುಕೊಳ್ಳಬೇಕು. ಅಲ್ಲಾಹನು ಅವನ ಹಿಂದಿನ ಅಪರಾಧಗಳನ್ನು ಕ್ಷಮಿಸುತ್ತಾನೆ. ತನ್ನ ಅಪರಾಧಕ್ಕೆ ಹಿಂತಿರುಗುವವರಿಗೆ, ಅಲ್ಲಾಹನು ಅವನಿಂದ ಪ್ರತಿಕಾರ ಪಡೆದೇ ತೀರುತ್ತಾನೆ. ಅಲ್ಲಾಹನು ಸರ್ವಶಕ್ತನೂ, ಪ್ರತಿಕಾರ ತೀರಿಸಿಕೊಳ್ಳುವವನೂ ಆಗಿದ್ದಾನೆ. (5:95)

ಹುರುಮುನ್ ಪದದ ಸರಿಯಾದ ಅರ್ಥವನ್ನು ಇತರ ವಚನಗಳೊಂದಿಗೆ ಪರಿಶೀಲಿಸಬಹುದಾಗಿದೆ. ಉದಾಹರಣೆಗೆ, 9:36 ರಲ್ಲಿ ಈ ಪದವನ್ನು *ನಿರ್ಬಂಧಿತ* ಎಂದಲ್ಲದೇ ಬೇರೆ ಯಾವುದೇ ಅರ್ಥದೊಂದಿಗೆ ಬದಲಾವಣೆ ಮಾಡಲು ಅಸಾಧ್ಯವಾಗಿದೆ.

> ನಿಶ್ಚಯವಾಗಿಯೂ ಅಲ್ಲಾಹನು ಭೂಮಿ ಆಕಾಶಗಳನ್ನು ಸೃಷ್ಟಿಸಿದಂದಿನಿಂದಲೂ ಅಲ್ಲಾಹನ ಗಣತಿಯಲ್ಲಿ *(ಫೀ ಕಿತಾಬಿಲ್ಲಾಹಿ)* ತಿಂಗಳುಗಳ ಸಂಖ್ಯೆಯು ಹನ್ನೆರಡೇ ಆಗಿದೆ. ಅವುಗಳ ಪೈಕಿ ನಾಲ್ಕು ತಿಂಗಳು ನಿಷಿದ್ಧವಾಗಿದೆ *(ಅರ್ಬಅತುನ್ ಹುರುಮುನ್)*. ಇದುವೇ ನೇರವಾದ ಜೀವನದ ರೀತಿಯಾಗಿದೆ *(ದೀನ್-ಅಲ್-ಖಯ್ಯಿಮ್)*. (9:36)

ಅರ್ಬಅತುನ್ ಹುರುಮುನ್ ಎಂಬ ಪದಕ್ಕೆ, ನಾಲ್ಕು ತಿಂಗಳ ಮೇಲೆ ನಿಷೇಧಾಜ್ಞೆಯಿದೆ ಎಂದರ್ಥವಾಗಿದೆ.

ಈ ವಚನದ ಸನ್ನಿವೇಶವನ್ನು ಅರಿತರೆ, ಈ ನಾಲ್ಕು ನಿರ್ಬಂಧಿತ ತಿಂಗಳುಗಳು ಸೂಚಿಸುವುದೇನೆಂದರೆ, ಅಲ್ಲಾಹನು ಮತ್ತು ಅವನ ಸಂದೇಶವಾಹಕರು, ಮೂರ್ತಿ ಆರಾಧಕರೊಂದಿಗೆ ಅವರ ಮೂರ್ತಿ ಆರಾಧನೆಯ ಪದ್ಧತಿಗಳಿಂದ ಸಂಬಂಧವನ್ನು ಸಂಪೂರ್ಣವಾಗಿ ಕಡಿದು ಕೊಂಡಿದ್ದಾರೆ ಎಂಬ ಘೋಷಣೆಯನ್ನು ಘೋಷಿಸಿದ ನಂತರದ ನಾಲ್ಕು ತಿಂಗಳುಗಳು, ಶೀತಲಾವಧಿಯಾಗಿದೆ. ಈ ಘೋಷಣೆಯನ್ನು ಮಾಡುವ ದಿನಕ್ಕೆ ಮಹಾ ಸವಾಲಿನ ದಿನ ಅಥವಾ *ಹಜ್ಜಿಲ್ ಅಕ್ಬರ್* ಎಂದು ಕರೆಯಲ್ಪಡುತ್ತದೆ. 9:1-4 ರಲ್ಲಿ, ಮೂರ್ತಿ ಆರಾಧಕರು ಮತ್ತು ಸತ್ಯನಿಷೇಧಿಗಳಿಗೆ ದೀನಿನಲ್ಲಿ ತಮ್ಮ ಸ್ಥಾನವನ್ನು ನಿರ್ಧರಿಸಲು ನಾಲ್ಕು ತಿಂಗಳುಗಳ ಕಾಲ 'ಭೂಮಿಯ ಸಂಚರಿಸಲು' ಅವಧಿಯನ್ನು ನೀಡಲಾಗುತ್ತದೆ.

ಇಂದು ಭೂಮಿಯ ಮೇಲೆ ಒಂದು ಶತಕೋಟಿಗಿಂತಲೂ ಹೆಚ್ಚಿನ ಜನರು ತಮ್ಮನ್ನು ಕೆಲವು ದಿನಗಳ ಕಾಲ 'ಪವಿತ್ರ' ಮಾಡಿಕೊಳ್ಳಬೇಕೆಂದು ನಂಬುತ್ತಾರೆ. ಪ್ರತಿ ವರ್ಷವೂ, ಅವರಲ್ಲಿ ಲಕ್ಷಾಂತರ ಜನರು ಇಹ್ರಾಮ್ ಎಂದು ಅವರು ಕರೆಯುವ ಅಸಭ್ಯವಾದ ಎರಡು ತುಂಡು ಬಿಳಿವಸ್ತ್ರವನ್ನು ಉಟ್ಟುಕೊಂಡು, ಘನಾಕೃತಿಯ ಕಲ್ಲಿನ ವಿಗ್ರಹವನ್ನು ಪ್ರದಕ್ಷಿಣೆ ಮಾಡುತ್ತಾರೆ. ಆದರೆ ಅಲ್ಲಾಹನು ಅವರಿಗೆ ಮಾಡಲು ಹೇಳಿರುವುದು,

---

[72] *ಸಿಯಾಮ್* ಎಂಬ ಅರಬೀ ಪದವನ್ನು ಸಾಂಪ್ರದಾಯಿಕವಾಗಿ *ಉಪವಾಸ* ಎಂದು ಅನುವಾದಿಸಲಾಗುತ್ತದೆ. ಆದರೆ ಇಲ್ಲಿ ಉಪವಾಸದ ಅವಧಿಯ ಬಗ್ಗೆ ಹೇಳಲೇ ಇಲ್ಲ. ಆದ್ದರಿಂದ, ಇದರ ಅರ್ಥವು ಪ್ರಾಣಿಗಳು ಪಕ್ವತೆಯನ್ನು ತಲುಪುವವರೆಗೂ ಬೇಟೆಯಾಡದೆ, ಸ್ವಯಂ-ಶಿಸ್ತಿಗೆ ತನ್ನನ್ನು ವಿಧೇಯನಾಗಿಸಬೇಕು. ಇದು ಆಹಾರವನ್ನು ತಿನ್ನುವುದನ್ನು ಅಥವಾ ಕುಡಿಯುವುದನ್ನು ನಿಷೇಧಿಸುವ ಉಪವಾಸದ ಬಗ್ಗೆ ಅಲ್ಲ.

ನಿರ್ಬಂಧಿತ ಅವಧಿಯಲ್ಲಿ ವನ್ಯಜೀವಿ ಬೇಟೆಯಾಡಬಾರದೆಂಬ ವ್ಯವಸ್ಥೆಯಲ್ಲಿನ ನಿರ್ಬಂಧಗಳನ್ನು ಪಾಲಿಸುವುದಾಗಿತ್ತು.

ಈ ರೀತಿಯ ಒಂದು ಸರಳ ಪದವನ್ನು ಸ್ವಲ್ಪ ತಿರುಚಿದರೆ, ಅದು ಒಂದು ವ್ಯಕ್ತಿಯ ಈ ಜೀವನದಲ್ಲಿ ಮತ್ತು ಅನಂತರದ ಜೀವನದಲ್ಲಿ ದುರಂತಕ್ಕೆ ಕಾರಣವಾಗಬಹುದು.

ಆದಾಗ್ಯೂ, 'ಮುಸ್ಲಿಮರ' ಬಹುಪಾಲು ಜನರು ವನ್ಯಜೀವಿಗಳನ್ನು ರಕ್ಷಿಸುವ ನಿರ್ಬಂಧಗಳನ್ನು ಪಾಲಿಸುವ ಬಗ್ಗೆ ಬಹಳ ಕಡಿಮೆ ಕಾಳಜಿ ವಹಿಸುತ್ತಾರೆ. ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ಪ್ರಯೋಜನಕಾರಿ ಕ್ರಿಯೆಗಳಿಂದ ಅವರನ್ನು ದಿಕ್ಕುಗೆಡಿಸಲು ಧಾರ್ಮಿಕರು ಯಶಸ್ವಿಯಾಗಿದ್ದಾರೆ ಮತ್ತು ಖಾಲಿ ಕಲ್ಲು ಪೆಟ್ಟಿಗೆಯ ಮುಂದೆ ಮೇಲೆ-ಕೆಳಗೆ ಜಿಗಿಯುವಂತೆ ಅವರನ್ನು ತಪ್ಪುದಾರಿಗೆಳೆದಿದ್ದಾರೆ. ಯಾರೋ, ಎಲ್ಲೋ, ಚೆನ್ನಾಗಿ ನಗೆ ಪಟಾಕಿಯನ್ನು ಹಾರಿಸುತ್ತಿರಬೇಕು.

ಅಲ್ಲಾಹನು ಭೂಮಿಯಲ್ಲಿರುವ ಎಲ್ಲಾ ಜೀವಿಗಳನ್ನು ಸೃಷ್ಟಿಸಿದನು ಮತ್ತು ಮಾನವಕುಲವು ಅವುಗಳೊಂದಿಗೆ ಪರಿಪೂರ್ಣ ಸಾಮರಸ್ಯದೊಂದಿಗೆ ಸಹಜೀವನ ನಡೆಸಬೇಕಾಗಿ ನಿರೀಕ್ಷಿಸಲಾಗಿದೆ:

> ಭೂಮಿಯ ಮೇಲಿರುವ ಎಲ್ಲಾ ಜೀವಿಗಳು, ರೆಕ್ಕೆಗಳಿಂದ ಹಾರುವ ಪಕ್ಷಿಗಳು ನಿಮ್ಮಂತೆಯೇ ಇರುವ ಸೃಷ್ಟಿವರ್ಗಗಳಾಗಿವೆ. (6:38)

ಮಾನವರಿಗೆ ಅವುಗಳನ್ನು ಯದ್ವಾತದ್ವವಾಗಿ ಕೊಲ್ಲಲು ಅವಕಾಶವಿಲ್ಲ. ಸಮರ್ಥಿಸಲ್ಪಟ್ಟರೆ ಮಾತ್ರ ಕೊಲ್ಲುವುದನ್ನು ಅನುಮತಿಸಲಾಗಿದೆ:

> ನ್ಯಾಯಸಮ್ಮತವಲ್ಲದೆ ನೀವು ಜೀವವನ್ನು ಕೊಲ್ಲಬೇಡಿರಿ, ಇದು ಅಲ್ಲಾಹನು ನಿಷೇಧಿಸಿದ್ದಾನೆ, (17:33)

ಇತರ ಸಜೀವಿಗಳ ಉಪಸ್ಥಿತಿಯು ಅಲ್ಲಾಹನ ಸೃಷ್ಟಿಯ ಭಾಗವಾಗಿದೆ. ಮನುಷ್ಯನು ತಾನಿಚ್ಛಿಸುವ ಯಾವುದನ್ನೂ ನಾಶಪಡಿಸುತ್ತಲು, ವಧಿಸುತ್ತಲು ಮುನ್ನಡೆಯಲು ಸಾಧ್ಯವಿಲ್ಲ. ಅಲ್ಲಾಹನು ಜಾನುವಾರುಗಳನ್ನು ಮಾನವಕುಲಕ್ಕೆ ಒಂದು ಅನುಗ್ರಹವಾಗಿ ಸೃಷ್ಟಿಸಿದ್ದಾನೆ. ಆಹಾರದ ಅವಶ್ಯಕತೆಗೆ ಅನುಗುಣವಾಗಿ ಜಾನುವಾರುಗಳನ್ನು ಕೊಲ್ಲುವುದನ್ನು ಸಮರ್ಥಿಸಿಕೊಳ್ಳಬಹುದು. ವನ್ಯಜೀವಿಗಳ ಮಾಂಸವನ್ನು ಆನಂದಿಸಲು ಸಹ ಅಲ್ಲಾಹನು ಮಾನವಕುಲಕ್ಕೆ ಅನುಮತಿಸಿದ್ದಾನೆ. ಆದ್ದರಿಂದ ಕೆಲವು ನಿಯಮಗಳ ಅಧೀನದಲ್ಲಿ ಪ್ರಾಣಿಗಳನ್ನು ಕೊಲ್ಲುವುದನ್ನು ಸಮರ್ಥಿಸಿಕೊಳ್ಳಬಹುದು.

ವನ್ಯಜೀವಿಯಲ್ಲಿ ಎರಡು ವಿಧಗಳಿವೆ: ಒಂದು ಜಲವಾಸಿ ಮತ್ತೊಂದು ಭೂವಾಸಿ. 5:96 ರಲ್ಲಿ, ಸಮುದ್ರದ ಬೇಟೆಯನ್ನು ತಿನ್ನಲು ಅನುಮತಿ ನೀಡಲಾಗಿದೆ. ಆದರೆ ಭೂವಾಸಿ ಜೀವಿಯನ್ನು ಬೇಟೆಯಾಡುವುದು ನಿಷೇಧಿಸಲ್ಪಟ್ಟಿರುವಾಗ ನಾವು ಆ ನಿಷೇಧಾಜ್ಞೆಯನ್ನು ಪಾಲಿಸಬೇಕು.

> ಸಮುದ್ರದ ಬೇಟೆ ಮತ್ತು ಅದನ್ನು ತಿನ್ನುವುದು ನಿಮಗೆ ಅನುಮತಿಸಲಾಗಿದೆ *(ಉಹಿಲ್ಲ ಲಕುಮ್)* ಅವುಗಳು ನಿಮಗೂ ಮತ್ತು ಪ್ರಯಾಣಿಗಳಿಗೂ ಆಹಾರವಾಗಿವೆ. ನೀವು ನಿರ್ಬಂಧಿತರಾಗಿರುವ *(ಹುರುಮನ್)* ತನಕ ಭೂವಾಸಿ ಜೀವಿಗಳ ಬೇಟೆಯು ನಿಮ್ಮ ಮೇಲೆ ನಿಷೇಧಿಸಲ್ಪಟ್ಟಿದೆ (ಹುರ್ರಿಮ). ನೀವು ಯಾರ ಸನ್ನಿಧಿಯಲ್ಲಿ ಹಾಜರಾಗಲಿದೆಯೋ ಅವನನ್ನು ಲಕ್ಷಿಸಿರಿ. (5:96)

ಅರಬೀ ಧರ್ಮದ ಸಂಶೋಧಕರ ಭ್ರಷ್ಟಾಚಾರವು ಇಲ್ಲಿ ಇನ್ನೊಮ್ಮೆ ಬೆಳಕಿಗೆ ಬರುತ್ತದೆ. ಇಲ್ಲಿ *ಹುರ್ರಿಮ* ಮತ್ತು *ಹುರುಮನ್* ಎರಡೂ ಪದಗಳು ಬಳಕೆಯಾಗಿದೆ. ಇವೆರಡೂ *ಹ-ರ-ಮ* ಅಥವಾ *ಹರಾಮ್* ಎಂಬ ಮೂಲದಿಂದಲೇ ಬಂದಿರುವುದಾಗಿದೆ. ವಾಕ್ಯದ ಮೊದಲ ಭಾಗದಲ್ಲಿ ಬಳಕೆಯಾದ *ಹುರ್ರಿಮ* ಎಂಬ ಪದಕ್ಕೆ *ನಿಷೇಧಿಸಲ್ಪಟ್ಟಿದೆ* ಎಂದರ್ಥವಾಗಿದೆ ಆದರೆ, ಅನಂತರ ಬಳಕೆಯಾದ *ಹುರುಮನ್* ಪದಕ್ಕೆ *ಪಾವಿತ್ರತೆಯ ಸ್ಥಿತಿ* ಎಂದರ್ಥವಾಗಿದೆ ಎಂದು ಅವರು ಹೇಳುತ್ತಾರೆ. ಇದು ಎರಡು ಬಿಳಿ ಬಟ್ಟೆಯ ಹಾಳೆಯನ್ನು ಸುತ್ತಿಕೊಂಡು ಚೌಕಕಲ್ಲಿನ ವಿಗ್ರಹಕ್ಕೆ ಸುತ್ತುಹೊಡೆಯಲು ಹೊರಡುವ ಆ ಸಂದರ್ಭದ ಸ್ಥಿತಿಯಾಗಿದೆ ಎಂದು ಅವರು ದಾವೆ ಮಾಡುತ್ತಾರೆ. ಈ ವಚನಗಳಿಗೂ, ತೀರ್ಥಯಾತ್ರೆಗೂ ಯಾವುದೇ ರೀತಿಯ ಸಂಬಂಧವಿಲ್ಲವೆಂದು ನಾವು ನೋಡಿದೆವು.

ವನ್ಯಜೀವಿಗಳ ವಧೆಯು ಎಲ್ಲೆಡೆಯೂ ನಡೆಯುತ್ತಿದೆ. ಋತುವಿನ ಹೊರಗೆ ವನ್ಯಜೀವಿಗಳನ್ನು ಕೊಲ್ಲದೆ ಇರುವ ಮೂಲಕ ಸ್ವಯಂ-ಶಿಸ್ತು ಅಭ್ಯಾಸ ಮಾಡಲು ಬೇಟೆಗಾರರಿಗೆ ಕುರ್‌ಆನ್ ಕರೆನೀಡುತ್ತದೆ:

> ಓ ಸತ್ಯವಿಶ್ವಾಸಿಗಳೇ, ನಿಮ್ಮಲ್ಲಿ ಯಾರು ಪರೋಕ್ಷವಾಗಿ ಅವನನ್ನು ಭಯಪಡುತ್ತಾರೆಂದು ನೋಡಲಿಕ್ಕಾಗಿ, ನಿಮ್ಮ ಕೈಗಳಿಗೆ ಮತ್ತು ಸಾಧನಗಳಿಗೆ ಎಟಕುವಂತಹ ಬೇಟೆಯ ಮೂಲಕ ನಿಮ್ಮನ್ನು ಅಲ್ಲಾಹನು ಪರೀಕ್ಷಿಸುವನು. ಇದರ (ಈ ಎಚ್ಚರಿಕೆಯ) ನಂತರವೂ ಯಾರು ಮೇರೆಯನ್ನು ಮೀರುತ್ತಾನೋ, ಅವನಿಗೆ ವೇದನಾಯುಕ್ತ ಶಿಕ್ಷೆಯು ಕಾದಿದೆ. (5:94)

ಬಹುತೇಕ ನಾಗರೀಕ ಸರ್ಕಾರಗಳು ವನ್ಯಜೀವಿಯನ್ನು ರಕ್ಷಿಸಲು ಕಾನೂನುಗಳನ್ನು ಹೇರಿವೆ. ಅವರು ಅಲ್ಲಾಹನ ವ್ಯವಸ್ಥೆಯಲ್ಲಿನ ನಿರ್ಬಂಧಗಳ ಸಾಮರಸ್ಯವನ್ನು *(ಅಥವಾ ಆಮಿನಲ್ ಬೈತಿಲ್ ಹರಾಮ)* ಸಂರಕ್ಷಿಸುತ್ತಿದ್ದಾರೆಂದು ಅವರಿಗೆ ತಿಳಿದಿಲ್ಲ. ಅದು ಅವರಿಗೆ ಬರೇ ಉತ್ತಮ ಪರಿಜ್ಞಾನದ ಒಂದು ವಿಷಯವಾಗಿದೆ. ಅವರು ಪರಿಸರ ಮತ್ತು ಪ್ರಾಣಿ ಸಾಮ್ರಾಜ್ಯದಲ್ಲಿನ ಜೀವನ ಮಾದರಿಗಳನ್ನು ಅಧ್ಯಯನ ಮಾಡಿದ್ದಾರೆ ಮತ್ತು ಅದರಲ್ಲಿನ ಜೀವಿಗಳನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದು ಅವರು ಅರಿತುಕೊಂಡಿದ್ದಾರೆ. ಕೆಲವರು ಸ್ವಯಂ ಆಸಕ್ತಿಯಿಂದ ಮಾಡುತ್ತಾರೆ. ಕುರ್‌ಆನಿಗೆ ಸಂಬಂಧಿಸಿದಂತೆ, ಇಂತಹ ಅಂತರ್ದೃಷ್ಟಿಯು (ಒಳಅರಿವು) ಸದ್ಗುಣ ಕ್ರಿಯೆಯಾಗಿದೆ.

ವ ಅನ್ತುಮ್ ಹುರುಮುನ್ ಎಂಬುವುದು, *ತೀರ್ಥಯಾತ್ರೆಯ ಸಮಯವನ್ನು* ಸೂಚಿಸುವುದೂ ಅಲ್ಲ ಅಥವಾ ಅವರು *ಇಹ್ರಾಮ್*[73] ಎಂದು ಕರೆಯುವ *ಎರಡು ತುಂಡು ಯಾತ್ರಿಯ ಬಟ್ಟೆಯನ್ನು* ಸೂಚಿಸುವುದೂ ಅಲ್ಲ ಎಂಬುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಲ್ಲದೆ, *ಇಹ್ರಾಮ್* ಎಂಬ ಪದವು ಕುರ್‌ಆನಿನಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ.

ಕುರ್‌ಆನಿನ ಸಂಯೋಜನೆಯ ಸೌಂದರ್ಯವನ್ನು ನಾವು ಅರ್ಥಮಾಡಿಕೊಳ್ಳಬೇಕು. ಹೆಚ್ಚಿನ ಸಂದರ್ಭಗಳಲ್ಲಿ, ಒಂದು ವಿಷಯವು ಅನುಕ್ರಮ ವಚನಗಳಲ್ಲಿ ವಿವರಿಸಲಾಗುತ್ತದೆ ಮತ್ತು ಅದನ್ನೇ ಬೇರೆಕಡೆಯಲ್ಲೂ ಉಲ್ಲೇಖಿಸಲಾಗುತ್ತದೆ. ಕುರ್‌ಆನಿನಲ್ಲಿ ವಿವರಿಸಲಾದ ಆಹಾರದ ಮೇಲಿರುವ ನಿಷೇಧಾಜ್ಞೆಗಳು, ವ್ಯವಸ್ಥೆಯಲ್ಲಿನ ನಿರ್ಬಂಧಗಳ *(ಖೈತಲ್ ಹರಾಮ್)* ಭಾಗವಾಗಿದೆ ಮತ್ತು ತಮ್ಮನ್ನು ನಿರ್ಬಂಧಗಳಿಗೆ ಸಮ್ಮತಿಸಿಕೊಳ್ಳುವವರು ಇದನ್ನು ಪಾಲಿಸಬೇಕಾಗಿದೆ.

ಈ ನಿಷೇಧದ ವಿವರವನ್ನು 5:1-5 ರಲ್ಲಿ ವಿಸ್ತರಿಸಲಾಗಿದೆ. ಆಹಾರವನ್ನು ವಿವರಿಸುವ ಮಧ್ಯದಲ್ಲಿ, 5:3 ರಲ್ಲಿ ಅಲ್ಲಾಹನು ಹೇಳುತ್ತಾನೆ:

> ಇಂದು, ನಾನು ನಿಮಗಾಗಿ ದೀನನ್ನು ಪರಿಪೂರ್ಣಗೊಳಿಸಿದ್ದೇನೆ, ಮತ್ತು ನಿಮ್ಮ ಮೇಲೆ ನನ್ನ ಕೃಪೆಯನ್ನು ಸಂಪೂರ್ಣಗೊಳಿಸಿದ್ದೇನೆ. ಮತ್ತು ಇಸ್ಲಾಮನ್ನು (ಶಾಂತಿಪರತೆಯನ್ನು) ನಿಮಗೆ ದೀನಾಗಿ (ಜೀವನದ ರೀತಿಯಾಗಿ) ವಿಧಿಸಿದ್ದೇನೆ. (5:3)

ಆಹಾರದ ಮೇಲಿನ ನಿರ್ಬಂಧಗಳ ವಿವರಗಳಿಗೆ ಸಂಬಂಧಿಸಿದ ಅವತೀರ್ಣದೊಂದಿಗೆ ಅಲ್ಲಾಹನಿಂದ ನಿಗದಿಪಡಿಸಲಾದ ಜೀವನದ ರೀತಿಯು ಪರಿಪೂರ್ಣಗೊಳಿಸಲಾಗಿದೆ. ಶಾಂತಿಯಲ್ಲಿರುವ ಒರ್ವ ಪ್ರಾಮಾಣಿಕ ವ್ಯಕ್ತಿಯು ಅಲ್ಲಾಹನಿಂದ ನಿಗದಿಪಡಿಸಲಾದ ಮಿತಿಗಳನ್ನಲ್ಲದೆ, ಬೇರೆ ಯಾವುದೇ ನಿರ್ಬಂಧಗಳಿಗೆ ತಮ್ಮ ಸಮ್ಮತಿಯನ್ನು ನೀಡಬಾರದು. ಆದಾಗ್ಯೂ, ವಚನವು ಒಂದು ವಿನಾಯಿತಿಯೊಂದಿಗೆ ಕೊನೆಗೊಳ್ಳುತ್ತದೆ:

> ಆದಾಗ್ಯೂ, ಯಾರಾದರೂ ದುರುದ್ದೇಶವಿಲ್ಲದೆ, ಬಲವಂತವಾಗಿ ತಿನ್ನಿಸಲ್ಪಟ್ಟರೆ, ಅಲ್ಲಾಹನು ಕ್ಷಮಾಶೀಲನೂ, ಕರುಣಾಮಯನೂ ಆಗಿರುತ್ತಾನೆ.

---

[73] ಈ *ಇಹ್ರಾಮ್* ಉಡುಪಿನೊಳಗೆ ಏನನ್ನಾದರೂ ಧರಿಸಿದರೆ, ಅವನ ತೀರ್ಥಯಾತ್ರೆಯು ವ್ಯರ್ಥವಾಗಿ ಬಿಡುತ್ತದೆ. ನೀವು ಆ ಊರಿನ ಉಷ್ಣತೆಯನ್ನು ಊಹಿಸಿ ನೋಡಿರಿ, ನನಗೆ ಎರಡು ತೊಡೆಗಳ ನಡುವೆ ಚರ್ಮಲೇಪವನ್ನು ಸವರುತ್ತಾ ಪ್ರಯಾಸಪಡಬೇಕಾಗಿ ಬಂದಿತ್ತು. ಅನಾಚಾರಿ ಅರಬರು ಪೂರ್ವಕುರ್‌ಆನಿನ ಸಮಯದಲ್ಲಿ ಈ ಕಟ್ಟಡಕ್ಕೆ ನಗ್ನ ಪ್ರದಕ್ಷಿಣೆಮಾಡುತ್ತಿದ್ದರು ಎಂದು ಇತಿಹಾಸ ಗ್ರಂಥಗಳಲ್ಲಿ ದಾಖಲೆಗಳಿವೆ. ಎರಡು ಬಿಳಿ ಬಟ್ಟೆಯ ಹಾಲೆಯ ಒಳಗಡೆ ಏನನ್ನೂ ಧರಿಸಬಾರದೆಂಬ ಅಸಭ್ಯ ಹಾಗೂ ಅನಗತ್ಯ ನಿಯಮವು - ಈ ತೀರ್ಥಯಾತ್ರೆಯು, ಪುರಾತನ ಅನಾಗರಿಕ ಅರಬೀ ಆಚರಣೆಯ ಸುಧಾರಿತ ಆವೃತಿಯಾಗಿರುವುದಕ್ಕೆ, ಒಂದು ಸ್ಪಷ್ಟ ನಿದರ್ಶನವಾಗಿದೆ. ಈ ಒಳನಗ್ನತೆಯ ಅವಶ್ಯಕತೆಯಾದರೂ ಏನು ಎಂದು ಯುಕ್ತಿಯುಳ್ಳ ಮುಸ್ಲಿಮನು ಸ್ವತಃ ಪ್ರಶ್ನಿಸುವುದಿಲ್ಲ.

ಹೊಸ ವಿಷಯವನ್ನು ವ್ಯವಹರಿಸುವ ಮೊದಲು, ಮುಂದಿನ ಎರಡು ವಚನಗಳಲ್ಲಿ ಅದೇ ವಿಷಯವು ಮುಂದುವರಿಯುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ತಿಳಿಸಿದ ನಿರ್ಬಂಧಗಳನ್ನು ದೃಢೀಕರಿಸಲು, 6:141-150 ರಲ್ಲಿ ಎಂಟು ನಿರಂತರ ವಚನಗಳಲ್ಲಿ ಪುನರಾವರ್ತಿಸಲಾಗಿದೆ. ಕೊನೆಯ ಭಾಗವು, ಇನ್ನೊಮ್ಮೆ 16:112-119 ರ ಎಂಟು ನಿರಂತರ ವಚನಗಳಲ್ಲಿ ಅದನ್ನು ಉಲ್ಲೇಖಿಸುತ್ತದೆ.

ನನ್ನ ಆಸಕ್ತಿಯ ಸಂಗತಿಯೊಂದನ್ನು ಹೇಳಬೇಕಾದರೆ, ಕುರ್‌ಆನಿನ ಸಂಯೋಜನೆಯು ಹೇಗಿದೆಯೆಂದರೆ, ಯಾವುದೇ ಪ್ರತ್ಯೇಕ ವಿಷಯವು ಯಾವಾಗಲೂ ತನ್ನದೇ ಆದ ಒಂದು ವಚನದಲ್ಲಿ ಪ್ರತ್ಯೇಕವಾಗಿ ಅವತೀರ್ಣಗೊಳ್ಳುತ್ತದೆ. ಪರಸ್ಪರ ಸಂಬಂಧವಿಲ್ಲದ ವಿಷಯಗಳು ಯಾವತ್ತೂ ಒಂದೇ ವಚನದಲ್ಲಿ ಕಾಣಸಿಗುವುದಿಲ್ಲ.

'ವನ್ಯಜೀವಿ ಸಂರಕ್ಷಣೆ' ಎಂಬುವುದು 'ತೀರ್ಥಯಾತ್ರೆಯ ಉಡುಪು' ಎಂದಾಯಿತು

5:1-5 ರ ಸಂಕ್ಷಿಪ್ತ ಪರಿಶೀಲನೆಯು ಕೆಳಗಿನವುಗಳನ್ನು ಸೂಚಿಸುತ್ತವೆ:

- ನಮಗೆ ನಿರ್ದೇಶಿಸಲ್ಪಟ್ಟವುಗಳನ್ನು ಹೊರತುಪಡಿಸಿ, ಬೇರೆ ಯಾವುದೇ ಆಹಾರವನ್ನು ನಿಷೇಧಿಸದೇ ಇರುವ ಮೂಲಕ ಅಲ್ಲಾಹನೊಂದಿಗೆ ನಮ್ಮ ಒಪ್ಪಂದವನ್ನು ನಾವು ಈಡೇರಿಸಬೇಕಾಗಿದೆ. ನಿರ್ಬಂಧಿತ ಅವಧಿಯಲ್ಲಿ ಬೇಟೆಯಾಡುವುದನ್ನು ನಾವು ಅನುಮತಿಸಬಾರದು.

- ಅಲ್ಲಾಹನ ಅನುಗ್ರಹ ಮತ್ತು ಸಂಪ್ರೀತಿಯನ್ನು ಅರಸುವಾಗ, ಅಲ್ಲಾಹನ ಆಜ್ಞೆಗಳನ್ನು, ಅಥವಾ ನಿರ್ಬಂಧಿತ ತಿಂಗಳುಗಳನ್ನು ಮತ್ತು ಮಾರ್ಗದರ್ಶಿ ಸೂತ್ರವನ್ನು ಮತ್ತು ಸೂಚಕಗಳನ್ನು ಮತ್ತು ವ್ಯವಸ್ಥೆಯಲ್ಲಿ ನಿರ್ಬಂಧಗೊಳಿಸಲ್ಪಟ್ಟ ಸಾಮರಸ್ಯವನ್ನು *(ಆಮ್ಮೀನಲ್ ಬೈತಲ್ ಹರಾಮ)* ನಾವು ಉಲ್ಲಂಘಿಸಬಾರದು. ನಮಗೆ ಅನುಮತಿ ನೀಡಲ್ಪಟ್ಟಾಗ ನಾವು ಬೇಟೆಯಾಡಬಹುದು. ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು *(ಅನಿಲ್ ಮಸ್ಜಿದಿಲ್ ಹರಾಮಿ)* ಪಾಲಿಸುವುದರಿಂದ ನಮ್ಮನ್ನು ತಡೆಯುವವರ ದ್ವೇಷವು ನಮ್ಮನ್ನು ಕೆರಳಿಸದಿರಬೇಕು, ಮತ್ತು ನಾವು ಅತಿರೇಕವನ್ನೆಸಗಬಾರದು. ನ್ಯಾಯವತ್ತಾದ ಕಾರ್ಯಗಳಲ್ಲಿ ಮತ್ತು ಪುಣ್ಯಕರ್ಮಗಳಲ್ಲಿ ನಾವು ಪರಸ್ಪರ ಸಹಕರಿಸಬೇಕು, ಮತ್ತು ಪಾಪ ಕೃತ್ಯಗಳಲ್ಲಿ ಮತ್ತು ಆಕ್ರಮಣಶೀಲತೆಯಲ್ಲಿ ಪರಸ್ಪರ ಸಹಕರಿಸಬಾರದು.

- ಅನುಮತಿಸಲ್ಪಟ್ಟಿರುವುದು ಯಾವುದೆಂದು ಜನರು ಕೇಳುತ್ತಾರೆ. "ತರಬೇತಿ ನೀಡಲ್ಪಟ್ಟ ನಾಯಿಗಳು ಹಿಡಿದವುಗಳೂ ಸೇರಿದಂತೆ, ಉತ್ತಮವಾದ ಎಲ್ಲವೂ" ಎಂದು ಅವರಿಗೆ ಉತ್ತರಿಸಲು ಹೇಳಲಾಗಿದೆ.

- ನಮಗೆ ನಿಷಿದ್ಧಗೊಳಿಸಿರುವ ಆಹಾರಗಳು ಇವುಗಳಾಗಿವೆ: ಸ್ವತಃ ಸತ್ತ ಪ್ರಾಣಿಗಳ ಮಾಂಸ, ರಕ್ತ, ಹಂದಿಯ ಮಾಂಸ, ಅಲ್ಲಾಹೇತರಿಗೆ ಅರ್ಪಿಸಲ್ಪಟ್ಟಂತಹವುಗಳು ಮತ್ತು ಉಸಿರುಕಟ್ಟಿ, ಒಂದು ವಸ್ತುವಿನಿಂದ ಹೊಡೆಯಲ್ಪಟ್ಟು, ಎತ್ತರದಿಂದ ಬಿದ್ದು ಮತ್ತು ಘರ್ಷಿಸಲ್ಪಟ್ಟು ಸತ್ತಂತಹ ಪಾಣಿ, ಮತ್ತು ಕ್ರೂರಮೃಗದಿಂದ (ಭಾಗಶಃ) ತಿನ್ನಲ್ಪಟ್ಟ ಪ್ರಾಣಿ ಆದರೆ ಅದನ್ನು ನೀವು ಜೀವಂತವಾಗಿ ಪಾರುಮಾಡಿದರೆ ಇದಕ್ಕೆ ಹೊರತಾಗಿದೆ, ಮತ್ತು ಜೂಜಾಟಕ್ಕೆ ವಿನಿಯೋಗಿಸಿದಂತಹ ಪ್ರಾಣಿ ಮತ್ತು ಎರಕದ ಮೂಲಕ ವಿಂಗಡಿಸಲಾದ ಮಾಂಸ. ಅಲ್ಲಾಹನಿಂದ ನಿರ್ಬಂಧಿಸಲಾದ ಆಹಾರಗಳು ಕೇವಲ ಇವುಗಳು ಮಾತ್ರ ಆಗಿವೆ. ಈ ಸೀಮಾರೇಖೆಯನ್ನು ಯಾರು ಕಟ್ಟುನಿಟ್ಟಾಗಿ ಅನುಸರಿಸುತ್ತಾರೋ ಅವರು ಶಾಂತಿಪರತೆಯನ್ನು ಆನಂದಿಸುವರು, ಮತ್ತು ಅಲ್ಲಾಹನು ತಾನು ನಿರ್ಬಂಧಿಸಿರುವುದನ್ನಲ್ಲದೇ ಬೇರೆ ಯಾವುದನ್ನು ನಮ್ಮ ಮೇಲೆ ವಿಧಿಸದೆ, ಅವನು ಇದನ್ನು *ಇಸ್ಲಾಂ* ಎಂದು ಕರೆದಿದ್ದಾನೆ.

- ಕೊನೆಯದಾಗಿ, ಹಿಂದಿನ ಗ್ರಂಥದ ಜನರು ಸೇವಿಸುತ್ತಿದ್ದವುಗಳೂ ಸೇರಿದಂತೆ, ಎಲ್ಲಾ ಒಳ್ಳೆಯ ಆಹಾರವು ನಮಗೆ ಅನುಮತಿಸಲಾಗಿದೆ.

ಈ ಎಲ್ಲಾ ಐದು ವಚನಗಳು, ವನ್ಯಜೀವಿಗಳ ಮಾಂಸವು ಸೇರಿದಂತೆ, ಆಹಾರದ ಕುರಿತು ಇರುವುದಾಗಿದೆ. ತೀರ್ಥಯಾತ್ರೆಯನ್ನು ನಿರ್ವಹಿಸುವುದು ಅಥವಾ ಯಾತ್ರಿಯ ಉಡುಪನ್ನು *(ಇಹ್ರಾಮ್)* ಧರಿಸುವುದು ಆಹಾರದ ಸಾಧನವಲ್ಲ ಅಥವಾ ಆಹಾರಕ್ಕೆ ಸಂಬಂಧಿಸಿರುವುದಲ್ಲ. ಇಲ್ಲಿ ಆ ವಿಷಯವು ಇಲ್ಲವೇ ಇಲ್ಲ. ತೀರ್ಥಯಾತ್ರೆಯನ್ನು ಮತ್ತು ಒಂದು ಧಾರ್ಮಿಕ ಉಡುಪನ್ನು ಧರಿಸುವ ಮೂಲಕ ಅಸ್ತಿತ್ವದಲ್ಲಿದ ಪಾವಿತ್ರ್ಯತೆಯ ಒಂದು ಸ್ಥಿತಿಯನ್ನು ಈ ಐದು ವಚನಗಳಿಂದ ಹಿಂಡಿತೆಗೆಯುವುದು, ಬಹುತೇಕ ಇತರ ಎಲ್ಲಾ ಧರ್ಮದ ವಂಚನೆಗಳನ್ನು ಮೀರಿಸಿದ ಒಂದು ಧಾರ್ಮಿಕ ಸಾಹಸಕೃತ್ಯದ ಅಭ್ಯಾಸವಾಗಿದೆ.

ಇಹ್ರಾಮ್ ಎಂಬ ಪದವು ಕುರ್‌ಆನಿನಲ್ಲಿ ಕಂಡುಬಂದಿಲ್ಲ

ಇಹ್ರಾಮ್ ಎಂಬ ಪದವು *ಹರಾಮ್* ಎಂಬ ಪದದ ಒಂದು ಉತ್ಪನ್ನವಲ್ಲ ಮತ್ತು ಇದು ಕುರ್‌ಆನಿನಲ್ಲಿ ಎಲ್ಲಿಯೂ ಕಂಡುಬಂದಿಲ್ಲ ಎಂಬುವುದು ಮುಖ್ಯವಾಗಿ ಗಮನಿಸಬೇಕಾಗಿದೆ.

ಹುರುಮುನ್ ಎಂದರೆ ಧಾರ್ಮಿಕರು ನಮನ್ನು ನಂಬುವಂತೆ ಮಾಡಿರುವ ತೀರ್ಥಯಾತ್ರೆ ಅಥವಾ ತೀರ್ಥಯಾತ್ರೆಯ ಉಡುಪು ಎಂಬ ಅರ್ಥವು ಒಂದು ಕ್ಷಣ ಸರಿಯೆಂದೇ ನಾವು ಭಾವಿಸಿದರೆ, ನಾವು ನಮ್ಮನ್ನು ಹಾಸ್ಯಾಸ್ಪದವಾದ ಪರಿಸ್ಥಿತಿಯಲ್ಲಿ ಕಾಣಬಹುದು. 9:36 ರಲ್ಲಿನ *ಅರ್ಬಅತುನ್ ಹುರುಮುನ್* ಎಂಬುವುದನ್ನು ಹೀಗೆ ಓದಬೇಕಾಗುತ್ತದೆ:

- ಅಲ್ಲಾಹನ ಗಣತಿಯಲ್ಲಿ ತಿಂಗಳುಗಳು ಹನ್ನೆರಡಾಗಿವೆ. ಅವುಗಳಲ್ಲಿ ನಾಲ್ಕು ತೀರ್ಥಯಾತ್ರೆಗಳಾಗಿವೆ.

ಅಥವಾ:

- ಅಲ್ಲಾಹನ ಗಣತಿಯಲ್ಲಿ ತಿಂಗಳುಗಳು ಹನ್ನೆರಡಾಗಿವೆ. ಅವುಗಳಲ್ಲಿ ನಾಲ್ಕು ಯಾತ್ರಿಯ ಉಡುಪುಗಳಾಗಿವೆ.

ಎರಡೂ ಚಿತ್ರಣವೂ ಸುವ್ಯಕ್ತವಾಗಿ ಒಪ್ಪಲು ಅಸಾಧ್ಯವಾಗಿವೆ.

9:36 ರ ಪೂರ್ಣ ಪಠ್ಯವು ಹೇಳುತ್ತದೆ:

> ನಿಶ್ಚಯವಾಗಿಯೂ ಅಲ್ಲಾಹನು ಭೂಮಿ ಆಕಾಶಗಳನ್ನು ಸೃಷ್ಟಿಸಿದಂದಿನಿಂದಲೂ ಅಲ್ಲಾಹನ ಗಣತಿಯಲ್ಲಿ ತಿಂಗಳುಗಳ ಸಂಖ್ಯೆಯು ಹನ್ನೆರಡೇ ಆಗಿದೆ. ಅವುಗಳ ಪೈಕಿ ನಾಲ್ಕು ತಿಂಗಳು ನಿಷಿದ್ಧವಾಗಿದೆ. ಇದುವೇ ನೇರವಾದ ಜೀವನದ ರೀತಿಯಾಗಿದೆ. ಆದ್ದರಿಂದ ಆ ಅವಧಿಯಲ್ಲಿ ನೀವು ನಿಮ್ಮ ಮೇಲೆ ಅಕ್ರಮವೆಸಗಬೇಡಿರಿ. ಮತ್ತು ಮೂರ್ತಿ ಆರಾಧಕರೆಲ್ಲರೂ ಒಟ್ಟಾಗಿ ನಿಮ್ಮೊಡನೆ ಹೋರಾಡುವಂತೆ ನೀವೂ ಒಟ್ಟಾಗಿ ಅವರೊಡನೆ ಹೋರಾಡಿರಿ. ಅಲ್ಲಾಹನು ಸದ್ಗುಣರೊಂದಿಗಿದ್ದಾನೆ ಎಂದು ಅರಿಯಿರಿ (9:36)

5:2 ನ್ನು ಭ್ರಷ್ಟಗೊಳಿಸುವ ಧಾರ್ಮಿಕರ ವಿಷಾದಕರವಾದ ಪ್ರಚೋದನೆಯು ಅನೇಕ ಓದುಗರನ್ನು ದಿಗಿಲುಪಡಿಸುತ್ತದೆ:

> *ಯಾ ಅಯ್ಯುಹಲ್ಲಧೀನ ಆಮನೂ ಲಾ ತುಹಿಲ್ಲೂ ಶಆಇರಲ್ಲಾಹ್* - ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸಬೇಡಿರಿ
>
> *ವಲಾ ಶ್ಶಹ್ರಲ್ ಹರಾಮ* - ಮತ್ತು ನಿರ್ಬಂಧಿತ ತಿಂಗಳುಗಳನ್ನು
>
> *ವಲಲ್ ಹದ್ಯ* - ಮತ್ತು ಮಾರ್ಗದರ್ಶಿ ಸೂತ್ರವನ್ನು
>
> *ವಲಾಲ್ ಖಲಾಇದ* - ಮತ್ತು (ನಿರ್ಬಂಧಗಳ) ಸೂಚಕಗಳನ್ನು
>
> *ವಲಾ ಆಮ್ಮೀನಲ್ ಬೈತಲ್ ಹರಾಮ* - ಮತ್ತು ವ್ಯವಸ್ಥೆಯಲ್ಲಿ ನಿರ್ಬಂಧಗೊಳಿಸಲ್ಪಟ್ಟ ಸಾಮರಸ್ಯವನ್ನು
>
> *ಯಬ್ತಗೂನ ಫಧ್ಲನ್ ಮಿನ್ ರಬ್ಬಿಹಿಮ್ ವ ರಿಧ್ವಾನನ್* - ಅಲ್ಲಾಹನ ಅನುಗ್ರಹ ಮತ್ತು ಸಂಪ್ರೀತಿಯನ್ನು ಅರಸುವಾಗ

ವ ಇಝಾ ಹಲಲ್ತುಮ್ ಫಸ್ತಾದೂ - ಮತ್ತು ನಿಮಗೆ ಅನುಮತಿ ನೀಡಲಾದಾಗ, ನೀವು ಬೇಟೆಯಾಡಬಹುದು

ವಲಾ ಯಜ್ರಿಮನ್ನಕುಮ್ ಶನಆನು ಕೌಮಿನ್ ಅನ್ ಸ್ವದ್ದೂಕುಮ್ ಅನಿಲ್ ಮಸ್ಜಿದಿಲ್ ಹರಾಮಿ ಅನ್ ತಅ'ತದೂ - ನೀವು ಅತಿರೇಕವನ್ನೆಸಗಬೇಕಾಗಿ, ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು *(ಅನಿಲ್ ಮಸ್ಜಿದಿಲ್ ಹರಾಮಿ)* ಪಾಲಿಸುವುದರಿಂದ ನಿಮ್ಮನ್ನು ತಡೆಯುವ ಜನಾಂಗದ ದ್ವೇಷವು ನಿಮ್ಮನ್ನು ಕೆರಳಿಸದಿರಲಿ

ವತಆವನೂ ಅಲಲ್ ಬಿರ್ರಿ ವತ್ತಖ್ವಾ ವಲಾತಆವನೂ ಅನಿಲ್ ಇಸ್ಮಿ ವಲ್ ಉದ್ವಾನಿ - ಮತ್ತು ನ್ಯಾಯದ ಕಾರ್ಯಗಳಲ್ಲಿ ಮತ್ತು ಪುಣ್ಯಕರ್ಮಗಳಲ್ಲಿ ಪರಸ್ಪರ ಸಹಕರಿಸಿರಿ, ಮತ್ತು ಪಾಪ ಕೃತ್ಯಗಳಲ್ಲಿ ಮತ್ತು ಆಕ್ರಮಣಶೀಲತೆಯಲ್ಲಿ ಪರಸ್ಪರ ಸಹಕರಿಸಬೇಡಿರಿ.

ವತ್ತಖುಲ್ಲಾಹ ಇನ್ನಲ್ಲಾಹ ಶದೀದುಲ್ ಇಖಾಬ್ - ಅಲ್ಲಾಹನನ್ನು ಲಕ್ಷಿಸಿರಿ. ಅವನ ಶಿಕ್ಷೆಯು ಅತ್ಯಂತ ಕಠಿಣವಾಗಿದೆ.

5:2 ರ ಸಂದೇಶವು ಹಿಂದಿನ ವಚನದ ವಿಷಯದ ಮುಂದುವರಿಕೆಯಾಗಿದೆ. ಇದು ಜಾನುವಾರು ಮತ್ತು ವನ್ಯಜೀವಿಗಳ ಬೇಟೆಯ ಬಗ್ಗೆಯಾಗಿದೆ. ಈ ವಚನದಲ್ಲಿರುವ *ಬೇಟೆ* ಎಂಬ ಪದವು *(ಫಸ್ತಾದೂ)* 5:1 ರಲ್ಲಿ ಬಳಕೆಯಾದ ಪದದ ಪುನರಾವರ್ತನೆಯಾಗಿದೆ. ಈ ಎರಡು ವಚನಗಳು ಒಂದೇ ವಿಷಯದ ಮೇಲೆ ಪರಸ್ಪರ ಪೂರಕವಾಗಿವೆ.

5:2 ರ ಅನೇಕ ಪದಗಳ ಜನರ ತಿಳುವಳಿಕೆಯನ್ನು, ಮಕ್ಕಾದಲ್ಲಿ ಹಜ್ಜ್ ಎಂಬ ತೀರ್ಥಯಾತ್ರೆಯ *ಒಂದು ವಿಧ್ಯುಕ್ತ ಆಚರಣೆಯನ್ನು* ಸೂಚಿಸುವಂತೆ (ಎಂದಿನಂತೆ, ಹದೀಸ್ ಎಂಬ ಕಟ್ಟುಕಥೆಗಳ ಪೌರೋಹಿತ ಅನುಲೇಪನದ ಮೂಲಕ) ತಿರುಚಲಾಗಿದೆ.

ಅರಬೀ ಧರ್ಮದ ಕುಶಲಕಾರ್ಮಿಕರು *ಹದ್ಯ* ಎಂಬ ಪದಕ್ಕೆ ಒಂದು ಹೊಸ ಅರ್ಥವನ್ನೇ ನೀಡಿದರು ಮತ್ತು ಕುರ್'ಆನ್ ಅವರ ಈ ಪಿತೂರಿಯನ್ನು ಬಹಿರಂಗಗೊಳಿಸುತ್ತದೆ. ಈ ಪದಕ್ಕೆ ಮಾರ್ಗದರ್ಶನ ಎಂದರ್ಥವಾಗಿದೆ. ಅವರು ಈ ಪದವು *ಒಂದು ಪ್ರಾಣಿಯನ್ನು ಬಲಿಯಾಗಿ ಅರ್ಪಿಸುವುದು* ಎಂಬ ಅರ್ಥವನ್ನು ನೀಡುವಂತೆ ಬದಲಾಯಿಸಿದರು. ಅಲ್ಲಾಹನಿಗೆ ಆಹಾರದ ಕಾಣಿಕೆಗಳನ್ನು ಅರ್ಪಿಸುವುದು ಪಾಪವಾಗಿದೆ ಎಂದು ಕುರ್'ಆನ್ ಹೇಳುತ್ತದೆ:

> ಅವರು ಅಲ್ಲಾಹನಿಗೆ ಸ್ವತಃ ಅವನೇ ಒದಗಿಸಿದ ಬೆಳೆಗಳ ಮತ್ತು ಜಾನುವಾರುಗಳ ಒಂದು ಪಾಲನ್ನು ಮೀಸಲಿಡುತ್ತಾರೆ ಹಾಗೂ ಹೇಳುತ್ತಾರೆ "ಇದು ಅಲ್ಲಾಹನಿಗೆ". ಅವರದೇ ದಾವೆಯ ಪ್ರಕಾರ ಅವರು ಹೀಗೂ ಹೇಳುತ್ತಾರೆ "ಇದು ನಮ್ಮ ಮೂರ್ತಿಗಳಿಗೆ". ಅಂತೂ, ಅವರು ತಮ್ಮ ಮೂರ್ತಿಗಳಿಗೆ

> ಮೀಸಲಿಟ್ಟವುಗಳು ಅಲ್ಲಾಹನನ್ನು ತಲುಪುವುದಿಲ್ಲ, ಹಾಗೂ ಅಲ್ಲಾಹನಿಗಾಗಿ ಮೀಸಲಿಟ್ಟವುಗಳು ಅವರ ಮೂರ್ತಿಗಳನ್ನು ತಲುಪಿಬಿಡುತ್ತವೆ. ಅವರ ಇಂತಹ ತೀರ್ಮಾನವು ಒಂದು ಪಾಪಕೃತ್ಯವಾಗಿದೆ. (6:136)

ಈ ನಿರ್ದಿಷ್ಟ ವಚನವನ್ನು ಗಮನಿಸಿರಿ. ಅಲ್ಲಾಹನು ತನಗೆ ಯಾವುದೇ ಪ್ರಾಣಿಬಲಿಯನ್ನು ನೀಡಲೋ ಅಥವಾ ಯಾವುದೇ ಸಾಧನವನ್ನು ಅರ್ಪಿಸಲೋ ಅವರಿಗೆ ಆಜ್ಞಾಪಿಸಿಲ್ಲ. ಅವರೇ ಅಲ್ಲಾಹನಿಗೆ ಮತ್ತು ತಮ್ಮ ಮೂರ್ತಿಗಳಿಗೆ ಬೆಳೆಗಳ, ಜಾನುವಾರುಗಳ ಒಂದು ಪಾಲನ್ನು ಅರ್ಪಿಸಲು ಮೀಸಲಿಡುತ್ತಾರೆ. ಅವರ ತೀರ್ಮಾನವು 'ಪಾಪಕೃತ್ಯ'ವಾಗಿದೆ ಎಂದು ಅಲ್ಲಾಹನು ಹೇಳುತ್ತಾನೆ, ಇದು ಕುರ್‌ಆನಿನಲ್ಲಿ ಬಳಕೆಯಾಗುವ ಪ್ರಬಲ ಪದಗಳಲ್ಲೊಂದಾಗಿದೆ.

ಈ ವಿಚಾರವನ್ನು ಸ್ಮರಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಏಕೆಂದರೆ, ಈ ವಿಷಯವು ಯಾತ್ರಿಗಳು ಹಜ್ಜ್ ತೀರ್ಥಯಾತ್ರೆಗಾಗಿ ಮಕ್ಕಾದಲ್ಲಿರುವ ತಮ್ಮ ಕಲ್ಲಿನ ಮೂರ್ತಿಯನ್ನು ಭೇಟಿನೀಡುವ ಸಮಯದಲ್ಲಿ, ಅಲ್ಲಾಹನಿಗೆ ಒಂದು ಮೇಕೆ, ಒಂಟೆ, ಅಥವಾ ಇತರ ಜಾನುವಾರುಗಳನ್ನು ಬಲಿನೀಡುವುದಕ್ಕೆ ಸಂಬಂಧಪಟ್ಟಿರುವುದಾಗಿದೆ. ಅಲ್ಲಾಹನು ತನ್ನ ಗ್ರಂಥದಲ್ಲಿ ಹೇಳುತ್ತಾನೆ - ಪ್ರಾಣಿ ಬಲಿಯು ಅವನನ್ನು ಎಂದಿಗೂ ತಲುಪುವುದಿಲ್ಲ, ಅವುಗಳು ಅಂತಿಮವಾಗಿ ಅವರ (ಕಲ್ಲಿನ) ಮೂರ್ತಿಯನ್ನು ತಲುಪುತ್ತವೆ.

ದೇವತೆಗಳಿಗೆ ಪ್ರಾಣಿಬಲಿಯನ್ನು ನೀಡುವುದು, ಕೊನೆಯ ಪ್ರವಾದಿಯ ಅವಧಿಗಿಂತ ಬಹಳ ಮುಂಚೆಯೇ ಇದ್ದ ಒಂದು ಅರಬೀ ವಾಡಿಕೆಯಾಗಿತ್ತು. ಧಾರ್ಮಿಕರು ಪ್ರಾಣಿಬಲಿಯ ಮೂಲವನ್ನು ತಪ್ಪಾಗಿ ಪ್ರವಾದಿ ಇಬ್ರಾಹೀಮರ ಮೇಲೆ ಹೊರಿಸುತ್ತಾರೆ, ಆದರೆ ಅವರ ಈ ಸಮರ್ಥನೆಯು ಮತ್ತೊಂದು ಕಥೆಯಾಗಿದೆ.

'ಮಾರ್ಗದರ್ಶನ' ಎಂಬುವುದು 'ಪ್ರಾಣಿಬಲಿ' ಎಂದಾಯಿತು

5:2 ರಲ್ಲಿನ *ಹದ್ಯ* ಎಂಬ ಪದವು, *ಮಾರ್ಗದರ್ಶನ ನೀಡುವುದು, ತೋರಿಸುವುದು* ಅಥವಾ *ಮುನ್ನಡೆಸುವುದು* ಎಂಬ ಅರ್ಥವನ್ನು ಸೂಚಿಸುತ್ತದೆ. ಮೂಲ ಪದ *ಹದಯ* ಎಂಬುವುದಕ್ಕೆ *ಮಾರ್ಗದರ್ಶನ ನೀಡುವುದು* ಎಂದರ್ಥ ಮತ್ತು *ಹುದನ್* ಎಂದರೆ *ಮಾರ್ಗದರ್ಶನ* ಎಂದಾಗಿದೆ. ಕುರ್‌ಆನಿನ ಇಂತಹ ಸರಳವಾದ ಅರಬೀ ಪದಗಳನ್ನು ತಾವು ಊನಗೊಳಿಸಿದರೆ, ಅವುಗಳು ಅಂತಿಮವಾಗಿ ಬಹಿರಂಗಪಡುವುದೆಂದು ಧಾರ್ಮಿಕರು ನಿರೀಕ್ಷಿಸಿರಲಿಲ್ಲ. *ಹದ್ಯ* ಎಂಬ ಪದವು ಕುರ್‌ಆನಿನಲ್ಲಿ ಹಲವು ಬಾರಿ ಕಾಣಿಸಿಕೊಳ್ಳುತ್ತದೆ. 7:186 ಮತ್ತು 25:31 ರಲ್ಲಿನ *ಹಾದಿಯ* ಎಂಬ ಪದದ ಅರ್ಥವು *ಮಾರ್ಗದರ್ಶನ* ನೀಡುವುದನ್ನು ಸೂಚಿಸುತ್ತದೆ.

> ಅಲ್ಲಾಹನು ಯಾರನ್ನು ದಿಕ್ಕುಗೆಡಿಸಿ ಬಿಡುತ್ತಾನೆ, ಅವನಿಗೆ ಇನ್ನಾರೂ ಮಾರ್ಗದರ್ಶಕನಿಲ್ಲ *(ಫಲಾ ಹಾದಿಯ ಲಹೂ)*. ಮತ್ತು ಅವನು ಅವರ ಉದ್ಧಟತನದಲ್ಲೇ ಅಲೆದಾಡುತ್ತಿರಲು ಬಿಟ್ಟುಬಿಡುತ್ತಾನೆ. (7:186)

> ನಾವು ಇದೇ ರೀತಿಯಲ್ಲಿ ಅಪರಾಧಿಗಳ ಪೈಕಿಯಿಂದ ಪ್ರತಿಯೊಂದು ಪ್ರವಾದಿಗಳಿಗೆ ಶತ್ರುಗಳನ್ನು ನೇಮಿಸಿರುತ್ತೇವೆ. ಮಾರ್ಗದರ್ಶಕನಾಗಿ *(ಹಾದಿಯನ್)* ಮತ್ತು ಸಹಾಯಕನಾಗಿ ನಿಮ್ಮ ಪ್ರಭುವೇ ಸಾಕು. (25:31)

ಆದರೆ ಅದೇ ಮೂಲದಿಂದಿರುವ *ಹದ್ಯ* ಎಂಬ ಪದವು 5:2, 2:196 ಮತ್ತು ಇತರ ವಚನಗಳಲ್ಲಿ ಕಾಣಿಸಿಕೊಂಡಾಗ, ಧಾರ್ಮಿಕರು ಇದಕ್ಕೆ ತಮ್ಮ ಅರಬೀ ಧರ್ಮದಲ್ಲಿನ ಪ್ರಾಣಿಬಲಿಯ ಧಾರ್ಮಿಕ ವಿಧಿ ಎಂಬ ಅರ್ಥ ಕೊಡುವಂತೆ ಆ ಪದವನ್ನು ತಿರುಚಿದ್ದಾರೆ.

ಇನ್ನಷ್ಟು ಭ್ರಷ್ಟಾಚಾರಗಳು

5:1 ರಲ್ಲಿನ *ಹುರುಮುನ್* ಎಂಬ ಪದವನ್ನು ಭ್ರಷ್ಟಗೊಳಿಸುವ ಜೊತೆಗೆ, ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಶತ್ರುಗಳು ತಮ್ಮ ವಿಗ್ರಹಗಳನ್ನು ಭೇಟಿ ನೀಡಲು ಮತ್ತು ಆರಾಧನೆ ಮಾಡಲು ತಮ್ಮೊಂದಿಗೆ ಸಮಸ್ತ ಮುಸ್ಲಿಮರನ್ನು ಸೇರಿಸಿಕೊಳ್ಳಲು, 5:2 ರಲ್ಲಿನ ಇನ್ನೂ ಆರು ಪದಗಳನ್ನು ಭ್ರಷ್ಟಗೊಳಿಸಿ ಮೋಸಮಾಡಲು ಮುಂದುವರಿದ್ದಾರೆ.

ಅವರು ಈ ಕೆಳಗಿನ ಪದಗಳನ್ನು ತಿರುಚಿದ್ದಾರೆ:

- *ಹದ್ಯ* ಎಂಬುವುದು ಪ್ರಾಣಿಬಲಿ ಎಂದಾಯಿತು. ವಾಸ್ತವದಲ್ಲಿ ಕಲ್ಲಿನ ವಿಗ್ರಹಗಳಿಗೆ ಆಹಾರವನ್ನು ಸಮರ್ಪಿಸುವ ಅರಬೀ ಅನಾಚಾರಿಗಳ ದೀವಟಿಗೆಯನ್ನು ಹಿಡಿದು ಮುಸ್ಲಿಮರು ಮುನ್ನಡೆಯುತ್ತಿದ್ದಾರೆ.

- *ಖಲಾಇದ* ಎಂಬುವುದು ಪ್ರಾಣಿಗಳನ್ನು ಗುರುತಿಸುವಂತೆ ಅವುಗಳಿಗೆ ಹಾಕುವ *ಹೂಮಾಲೆಗಳು* ಎಂದಾಯಿತು. ಅಲ್ಲಾಹನು ತನ್ನ ಸೇವಕರಿಗೆ 'ಪ್ರಾಣಿಗಳಿಗೆ ಹಾಕುವ ಹೂಮಾಲೆಗಳನ್ನು ಉಲ್ಲಂಘಿಸಬೇಡಿರಿ' ಎಂದು ಸೂಚಿಸುತ್ತಿದ್ದಾನೆ ಎಂದು ಹೇಳುವುದರಲ್ಲಿ ಯಾವುದೇ ಯುಕ್ತಿಯು ಕಾಣುವುದಿಲ್ಲ. ಆದರೂ ಧಾರ್ಮಿಕರು ತಮ್ಮ ಸ್ವಂತ ಭ್ರಷ್ಟಾಚಾರಕ್ಕೆ ತಾವೇ ಬದ್ಧರಾಗಿಲ್ಲ, ಏಕೆಂದರೆ ಇಂದು ಮೀನದಲ್ಲಿ ಬಲಿಪ್ರಾಣಿಗೆ ಯಾವುದೇ ಹೂಮಾಲೆಯನ್ನು ಧರಿಸಲಾಗುತ್ತಿಲ್ಲ, ಬದಲಿಗೆ ಅವುಗಳ ಕಿವಿಗೆ ಒಂದು ಕುರುಹು ಚಿಹ್ನೆಯನ್ನು ಹಾಕಿಬಿಡುತ್ತಾರೆ!

ಆ ವಚನವು ಹೇಳುವುದು, ವನ್ಯಜೀವಿಯ ಬೇಟೆಯ ಮೇಲೆ ನಿಗದಿಪಡಿಸಲಾದ ನಿರ್ಬಂಧಗಳನ್ನು ರೂಪಿಸುವಂತಹ, ಮಾರ್ಗದರ್ಶಿ ಸೂತ್ರವನ್ನು *(ಹದ್ಯ)* ಮತ್ತು ಸೂಚಕಗಳನ್ನು *(ಖಲಾಇದ)* ಉಲ್ಲಂಘಿಸಬೇಡಿರಿ ಎಂದಾಗಿದೆಯಷ್ಟೆ. ತಳಿ-ಅಭಿವೃದ್ಧಿಯ (ಗರ್ಭಧಾರಣೆಯ) ಅವಧಿಯಲ್ಲಿ ಪರ್ವತ ಮೇಕೆಗಳನ್ನು ಬೇಟೆಯಾಡಬಾರದು ಎಂದು ನಾಡಿನ ನಿಯಮವು ನಿರ್ದೇಶಿಸುತ್ತಿದ್ದರೆ ಹಾಗೂ ನೋಟೀಸುಗಳು ಅಥವಾ ಸೂಚನಾ ಪತ್ರಗಳು *(ಖಲಾಇದ)* ಪ್ರಕಟಗೊಂಡಿದ್ದರೆ, ನಾವು ಅದನ್ನು ಗೌರವಿಸಬೇಕು, ಅಷ್ಟೆ.

5:94 ರ ಪ್ರಕಾರ, ಬೇಟೆಯಾಡುವುದು ಮಾನವಕುಲಕ್ಕೆ ಒಂದು ಪರೀಕ್ಷೆಯಾಗಲೂ ಬಹುದು. ಅಲ್ಲಾಹನನ್ನು ಲಕ್ಷಿಸುವವರು ನಿರ್ದಿಷ್ಟ ಅವಧಿಯಲ್ಲಿ ಅಥವಾ ಪ್ರಾಣಿಗಳು ಪಕ್ವತೆಯನ್ನು ತಲುಪಿದ ಸಮಯದಲ್ಲಿ ಮಾತ್ರ ಬೇಟೆಯಾಡುತ್ತಾರೆ. ಖಂಡಿತವಾಗಿಯೂ, ಇದು ಹಸುಗಳ, ಮೇಕೆಗಳ ಅಥವಾ ಒಂಟೆಗಳ ಕುತ್ತಿಗೆಯ ಸುತ್ತ ಹೂಮಾಲೆಗಳನ್ನು ಹಾಕುವ ಬಗ್ಗೆ ಇರುವ ಆದೇಶವೇ ಅಲ್ಲ. ಪಾವಿತ್ರತೆಯನ್ನು ಸೂಚಿಸುವುದಕ್ಕಾಗಿ ಯಾವುದೇ ಜಾನುವಾರುಗಳಿಗೆ ಒಂದು ಹಾರವನ್ನು ಅಥವಾ ಯಾವುದೇ ಕುರುಹು ಚಿಹ್ನೆಗಳನ್ನು ಹಾಕುವುದು ಕೆಲವು ಧರ್ಮಗಳ ಒಂದು ವಿಶಿಷ್ಟತೆಯಾಗಿದೆ. ಅದಕ್ಕೆ ಇಸ್ಲಾಮಿನಲ್ಲಿ ಯಾವುದೇ ಸ್ಥಾನವಿಲ್ಲ ಎಂದು ಅಲ್ಲಾಹನು ತಿಳಿಯಪಡಿಸುತ್ತಾನೆ.

- ಅವರು *ಆಮಿನಲ್ ಬೈತಿಲ್ ಹರಾಮ* ಎಂಬುವುದು *ಪವಿತ್ರ ಮನೆಗೆ ಭೇಟಿನೀಡುವವರು* ಎಂದಾಗುವಂತೆ ತಿರುಚಿದರು. ಇದು ಶುದ್ಧ ದೈವದ್ರೋಹವಾಗಿದೆ. ಈ ವಚನದ ಸಂದೇಶವು ಬಹಳ ಸ್ಪಷ್ಟವಾಗಿದೆ, ಅಲ್ಲಾಹನ ಅನುಗ್ರಹ ಮತ್ತು ಸಂಪ್ರೀತಿಯನ್ನು ಅರಸುವಾಗ, ವ್ಯವಸ್ಥೆಯಲ್ಲಿ ನಿರ್ಬಂಧಗೊಳಿಸಲ್ಪಟ್ಟ ಸಾಮರಸ್ಯವನ್ನು ಉಲ್ಲಂಘಿಸಬೇಡಿರಿ ಎಂದಾಗಿದೆ.

- *ವ ಇಝಾ ಹಲಲ್ತುಮ್ ಫಸ್ತಾದೂ* ಎಂಬುವುದನ್ನೂ ಮಾರ್ಪಡಿಸಲಾಗಿದೆ. ಬಹುಶಃ ಇಡೀ ಕುರ್‌ಆನಿನಲ್ಲಿ ಅರ್ಥಮಾಡಲು ಅತ್ಯಂತ ಸುಲಭವಾದ ಪದವು ಇದಾಗಿರಬಹುದು.

ವಇಝಾ ಹಲಲ್ತುಮ್	ಮತ್ತು ನಿಮಗೆ ಅನುಮತಿ ನೀಡಲ್ಪಟ್ಟರೆ
ಫಸ್ತಾದೂ	ಆಗ ನೀವು ಬೇಟೆಯಾಡಬಹುದು

ಹತ್ತು ವರ್ಷ ವಯಸ್ಸಿನ ಮುಸ್ಲಿಂ ಮಕ್ಕಳು ಸಹ *ಹಲಾಲ್* ಪದವನ್ನು ಅರ್ಥ ಮಾಡಿಕೊಳ್ಳುತ್ತಾರೆ. ಅವರ ಮಾತಾಪಿತರು ಅವರಿಗೆ *ಹಲಾಲ್* ಆಹಾರವನ್ನು ಮಾತ್ರ ತಿನ್ನಬೇಕು ಎಂದು ತರಬೇತಿ ನೀಡಿರುತ್ತಾರೆ. *ಹಲಾಲ್* ಪದದ ವಿರುದ್ಧವಾಗಿರುವುದು *ಹರಾಮ್* ಆಗಿದೆ. ಒಂದು ಅನುಮತಿಸಲಾಗಿರುವುದು ಮತ್ತೊಂದು ನಿಷೇಧಿಸಲಾಗಿರುವುದು. ಈ ನೇರವಾದ ವಾಕ್ಯವನ್ನು ಉದ್ದೇಶಪೂರ್ವಕವಾಗಿ ಹೀಗೆ ಅನುವಾದಿಸಿದ್ದಾರೆ: *ಮತ್ತು ನೀವು ತೀರ್ಥಯಾತ್ರೆಯನ್ನು ಪೂರ್ಣಗೊಳಿಸಿದ ನಂತರ ನೀವು ಬೇಟೆಯಾಡಬಹುದು.* ಅವರು ಇಂತಹ ಒಂದು ಚೇಷ್ಟೆಯ ಮಿಥ್ಯಾನಿರೂಪಣೆಗೆ ಹೇಗೆ ತಲುಪಿದರು ಎಂಬುವುದನ್ನು ಓದುಗರ ಕಲ್ಪನೆಗೆ ಬಿಡುತ್ತಿದ್ದೇನೆ.

ವನ್ಯಜೀವಿ ಸಂರಕ್ಷಣೆಯು ಅರಬೀ ಧರ್ಮದಲ್ಲಿ ಯಾವುದೇ ಮಾನ್ಯತೆಯನ್ನು ಹೊಂದಿಲ್ಲ. ಒಂದು ವರ್ಷದ ನಾಲ್ಕು ಋತುಗಳನ್ನು ನಿಶ್ಚಯಿಸಲು ಸಾಧ್ಯವಿಲ್ಲದಂತಹ, ಒಂದು ಅರಬೀ ಕ್ಯಾಲೆಂಡರನ್ನು ಧಾರ್ಮಿಕರು ರೂಪಿಸಿದರು. ಅವರು ಹನ್ನೆರಡು ತಿಂಗಳುಗಳನ್ನು ಉಳಿಸಿಕೊಂಡರೂ ಸಹ, ಅವರ ಕ್ಯಾಲೆಂಡರ್ ಸದಾ ಚಲಿಸುತ್ತಿರುವುದರಿಂದ ಮತ್ತು ಋತುಗಳ ಮೇಲೆ ಆಧರಿತವಾಗಿರದ ಕಾರಣ, ಚಳಿಗಾಲವು ಹನ್ನೆರಡರಲ್ಲಿ ಯಾವುದೇ ತಿಂಗಳಲ್ಲಿ ಸಂಭವಿಸಬಹುದು. ಅವರ ಕ್ಯಾಲೆಂಡರಿನಲ್ಲಿ, ಅಲ್ಲಾಹನು ಆಜ್ಞಾಪಿಸಿದಂತೆ ಬೇಟೆಯಾಡುವುದನ್ನು ನಿರ್ಬಂಧಿಸಲು ಪ್ರತಿ ಹನ್ನೆರಡು ತಿಂಗಳುಗಳಲ್ಲಿ ಶಾಶ್ವತವಾಗಿ ಹಾಗೂ ನಿಖರವಾಗಿ

ಒಂದು ನಿರ್ದಿಷ್ಟ ಅವಧಿಯನ್ನು ನಿಯೋಜಿಸಲು ಸಾಧ್ಯವಿಲ್ಲ. ಹಾಗೆಯೇ, ಅವರ ಖೋಟ ತೀರ್ಥಯಾತ್ರೆಯ ಋತುವು ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ.

ವಿಷಯವನ್ನು ಇನ್ನೂ ಉಲ್ಬಣಗೊಳಿಸಲು ಅವರು *ಮಸ್ಜಿದುಲ್ ಹರಾಮಿ* ಪದವನ್ನು ತಿರುಚಿದರು. 5:2 ರ ಒಂದು ವಾಕ್ಯವನ್ನು *'ಪವಿತ್ರ ಮಸೀದಿಗೆ ಹೋಗುವುದರಿಂದ ನಿಮ್ಮನ್ನು ತಡೆಯುವವರ ದ್ವೇಷವು ನಿಮ್ಮನ್ನು ಕೆರಳಿಸದಿರಲಿ'* ಎಂಬ ಅರ್ಥದಲ್ಲಿ ಚಿತ್ರೀಕರಿಸುವ ಮೂಲಕ ಅವರು ಜನರನ್ನು ವಂಚಿಸಿದರು. ಕುರ್‌ಆನಿನ ಪ್ರಕಾರ, ಪವಿತ್ರ ಮಸೀದಿ ಎಂಬ ಯಾವುದೇ ವಿಷಯವೇ ಇರಲಿಲ್ಲ. ಅರಬೀ ಧರ್ಮದಲ್ಲಿರುವ ಕಾಲ್ಪನಿಕ ಕಥೆಗಳು ಸಹ, ಕೊನೆಯ ಪ್ರವಾದಿಯ ಸಮಯದ ಮೊದಲು ಒಂದು ಪವಿತ್ರ ಮಸೀದಿಯು ಇದ್ದುದಾಗಿ ಮಾತಾಡುವುದಿಲ್ಲ. ಅಂತಹ ಯಾವೊಂದೂ ಸಂಗತಿಯು ಅಸ್ಥಿತ್ವದಲ್ಲೇ ಇರಲಿಲ್ಲ – ಪೂರ್ಣವಿರಾಮ! ಕುರ್‌ಆನ್ ಅವತೀರ್ಣಗೊಳ್ಳುವ ಮುಂಚಿನ ಯಾವುದೇ ಮಸೀದಿಯ ಬಗ್ಗೆ ಧಾರ್ಮಿಕರಿಗೆ ಯಾವುದೇ ಕಾಳಜಿಯಿಲ್ಲ. ಅವರ ಸಂಪೂರ್ಣ ಇತಿಹಾಸವು, ಕಪ್ಪು ಕಲ್ಲನ್ನು ಹೇಗೆ ರಕ್ಷಿಸುವುದು ಮತ್ತು ಪ್ರಚಾರ ಪಡಿಸುವುದು ಎಂಬುವುದರಲ್ಲಿ ಕೇಂದ್ರಿತವಾಗಿದೆ.

ಸಂದೇಶದ ಸಂದರ್ಭವನ್ನು ಓದುವ ಮೂಲಕ, *ಮಸ್ಜಿದಿಲ್ ಹರಾಮಿ* ಎಂಬ ಪದಗಳನ್ನು ಸುಲಭವಾಗಿ ತಿಳಿಯಬಹುದು. ಅದು ಹೇಳುವುದೇನೆಂದರೆ, *'ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು ಪಾಲಿಸುವುದರಿಂದ ನಿಮ್ಮನ್ನು ತಡೆಯುವ ಜನಾಂಗದ ದ್ವೇಷವು ನಿಮ್ಮನ್ನು ಕೆರಳಿಸದಿರಲಿ'*. ಸಂದೇಶದ ಆರಂಭದ ಭಾಗವು ನಮಗೆ ಸರಳವಾಗಿ ಹೇಳುವುದೇನೆಂದರೆ, ಬೇಟೆಯ ನಿರ್ಬಂಧಿತ ತಿಂಗಳುಗಳಿಗೆ, ಮಾರ್ಗದರ್ಶಿ ಸೂತ್ರಗಳಿಗೆ ಹಾಗೂ ಸೂಚಕಗಳಿಗೆ ಸಂಬಂಧಿಸಿದ ಅಲ್ಲಾಹನ ಆದೇಶಗಳನ್ನು ಉಲ್ಲಂಘಿಸಬಾರದು ಎಂದಾಗಿದೆ. ಚೊಕ್ಕವಾಗಿ ಹೇಳುವುದಾದರೆ, ಪ್ರಾಣಿಗಳ ಬೇಟೆಯ ಬಗ್ಗೆ ನಾವು ಶಿಸ್ತನ್ನು ಪಾಲಿಸಬೇಕು. *ಮಸ್ಜಿದಿಲ್ ಹರಾಮಿ* ಎಂದರೆ ಸಮ್ಮತಿಸಲ್ಪಟಿರುವ ಆದೇಶಗಳಲ್ಲಿನ ನಿರ್ಬಂಧಗಳು ಎಂದಾಗಿದೆ. ನಿಷೇಧಿಸಲ್ಪಟ್ಟ ತಿಂಗಳುಗಳಲ್ಲಿ ಪ್ರಾಣಿಗಳನ್ನು ಬೇಟೆಯಾಡಲು ನಮ್ಮನ್ನು ಆಹ್ವಾನಿಸುವ ಮೂಲಕ, ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು ಪಾಲಿಸುವುದರಿಂದ ನಮ್ಮನ್ನು ತಡೆಯುವ ಶತ್ರುಗಳನ್ನು ನಾವು ನಿರ್ಲಕ್ಷಿಸಬೇಕಾಗಿದೆ.

ಆಹಾರದ ಮೇಲಿನ ನಿರ್ಬಂಧಗಳು[74]

ಆಹಾರದ ಬಳಕೆಯ ಮೇಲಿನ ನಿರ್ಬಂಧಗಳನ್ನು ಕೆಳಗಿನ ವಚನದಲ್ಲಿ ನಿರೂಪಿಸಲಾಗಿದೆ:

> ನಿಮಗೆ ನಿಷಿದ್ಧಗೊಳಿಸಿರುವುದು ಇವುಗಳಾಗಿವೆ: ಸ್ವತಃ ಸತ್ತ ಪ್ರಾಣಿಗಳ ಮಾಂಸ, ರಕ್ತ, ಹಂದಿಯ ಮಾಂಸ, ಅಲ್ಲಾಹೇತರಿಗೆ ಅರ್ಪಿ ಸಲ್ಪಟ್ಟಂತಹವುಗಳು ಮತ್ತು ಉಸಿರುಕಟ್ಟಿ, ಒಂದು ವಸ್ತುವಿನಿಂದ ಹೊಡೆಯಲ್ಪಟ್ಟು, ಎತ್ತರದಿಂದ ಬಿದ್ದು ಮತ್ತು ಘರ್ಷಿಸಲ್ಪಟ್ಟು ಸತ್ತಂತಹ (ಪಾಣಿ), ಮತ್ತು ಕ್ರೂರಮೃಗದಿಂದ (ಭಾಗಶಃ) ತಿನ್ನಲ್ಪಟ್ಟಂತಹ (ಪ್ರಾಣಿ) ಆದರೆ ಅದನ್ನು ನೀವು ಜೀವಂತವಾಗಿ ಪಾರುಮಾಡಿದರೆ ಇದಕ್ಕೆ ಹೊರತಾಗಿದೆ, ಮತ್ತು ಜೂಜಾಟಕ್ಕೆ ವಿನಿಯೋಗಿಸಿದಂತಹ (ಪ್ರಾಣಿ) ಮತ್ತು ಎರಕದ ಮೂಲಕ ವಿಂಗಡಿಸಲಾದ (ಪ್ರಾಣಿ) - ಇವುಗಳು ಅಸಹ್ಯತೆಗಳಾಗಿವೆ. ಇಂದು, ಸತ್ಯನಿಷೇಧಿಗಳು ನಿಮ್ಮ ದೀನಿನ ಬಗ್ಗೆ ಹತಾಶರಾಗಿದ್ದಾರೆ. ಅವರನ್ನು ಭಯಪಡಬೇಡಿರಿ ಬದಲಿಗೆ ನನ್ನನ್ನು ಭಯಪಡಿರಿ. ಇಂದು, ನಾನು ನಿಮಗೆ ದೀನನ್ನು ಪರಿಪೂರ್ಣಗೊಳಿಸಿದೆ ಮತ್ತು ನಿಮ್ಮ ಮೇಲೆ ನನ್ನ ಕೃಪೆಯನ್ನು ಪೂರ್ಣಗೊಳಿಸಿದೆ ಮತ್ತು ಇಸ್ಲಾಮನ್ನು (ಶಾಂತಿಪರತೆ) ನಿಮಗೆ ದೀನಾಗಿ ಶಾಸನಗೊಳಿಸಿದೆ. (5:3)

(ಆಹಾರದ ಬಗ್ಗೆಗಿನ) ಈ ವಿಷಯವು 5:1 ರಿಂದ ಪ್ರಾರಂಭವಾಗುತ್ತದೆ ಮತ್ತು ಇದು ವನ್ಯಜೀವಿಯ ಮಾಂಸದ ಪರತ್ತುಬದ್ಧ ಬಳಕೆಯನ್ನೂ ಅನುಮತಿಸುತ್ತದೆ.

5:2 ವಚನವು ವ್ಯವಸ್ಥೆಯಲ್ಲಿ ನಿರ್ಬಂಧಿಸಲ್ಪಟ್ಟ ಅಲ್ಲಾಹನ ಆಜ್ಞೆಗಳ ಪಾಲನೆಗೆ ಒತ್ತು ನೀಡುತ್ತದೆ, ತದನಂತರ ಆಹಾರಕ್ಕೆ ಸಂಬಂಧಿಸಿದಂತೆ ಸಮ್ಮತಿಸಲ್ಪಟ್ಟ ಆದೇಶಗಳಲ್ಲಿ ನಿಷೇಧಿಸಲ್ಪಟ್ಟ ನಿರ್ಬಂಧನೆಗಳ ಮೇರೆಗಳನ್ನು ಅಥವಾ ಮಾನದಂಡಗಳು ನಿರೂಪಿಸಲಾಗಿದೆ.

ಆದಾಗ್ಯೂ, 5:3 ರ ಮಧ್ಯದಲ್ಲಿ ಅದು ಹೇಳುತ್ತದೆ:

> ಇಂದು, ಸತ್ಯನಿಷೇಧಿಗಳು ನಿಮ್ಮ ಜೀವನ ರೀತಿಯ *(ದೀನುಕುಮ್)* ಬಗ್ಗೆ ಹತಾಶರಾಗಿದ್ದಾರೆ. ಅವರನ್ನು ಭಯಪಡಬೇಡಿರಿ, ಬದಲಿಗೆ ನನ್ನನ್ನು ಭಯಪಡಿರಿ. ಇಂದು, ನಾನು ನಿಮಗಾಗಿ ನಿಮ್ಮ ಜೀವನ ರೀತಿಯನ್ನು *(ದೀನುಕುಮ್)* ಪರಿಪೂರ್ಣಗೊಳಿಸಿದ್ದೇನೆ ಮತ್ತು ನಿಮ್ಮ ಮೇಲೆ ನನ್ನ ಅನುಗ್ರಹವನ್ನು ಸಂಪೂರ್ಣಗೊಳಿಸಿದ್ದೇನೆ, ಮತ್ತು ಇಸ್ಲಾಮನ್ನು ನಿಮಗೆ ಜೀವನ ರೀತಿಯಾಗಿ *(ದೀನನ್)* ಅಂಗೀಕರಿಸಿದ್ದೇನೆ.

[74] ಆಹಾರದ ಬಗ್ಗೆ ನಿಷೇದಾಜ್ಞೆಯು ಎಲ್ಲಾ ಧರ್ಮದಲ್ಲಿಯೂ ಸಾಮಾನ್ಯವಾಗಿ ಕಾಣಬಹುದು. ಅಲ್ಲಾಹನಿಂದ ನಿರ್ಬಂಧಿಸಲ್ಪಟ್ಟವುಗಳ ಹೊರಗಿನವುಗಳನ್ನು ಪಾಲಿಸುವುದು, ಮೂರ್ತಿಆರಾಧನೆಯಾಗಿದೆ.

ಅಂದರೆ, ಆಹಾರದ ಪರಿಮಿತಿಗಳೊಂದಿಗೆ ವ್ಯವಸ್ಥೆಯು ಪೂರ್ಣಗೊಂಡಿದೆ. ಅವನ ಸೇವಕರು ವಿಷಯಗಳನ್ನು ಜಟಿಲಗೊಳಿಸಲು ಇತರ ಯಾವುದೇ ನಿರ್ಬಂಧಗಳನ್ನು ಹೇರಬಾರದು.

ಜನರು ಎಚ್ಚರಿಕೆಯಿಂದಿರಲು ನೆನಪಿಸಲಾಗಿದೆ. ಶೈತಾನನು, ಹೆಚ್ಚುವರಿ ಪ್ರತಿಬಂಧಗಳೊಂದಿಗೆ ನಮ್ಮನ್ನು ತಪ್ಪುದಾರಿಗೊಯ್ಯಲು ಪ್ರಯತ್ನಿಸುತ್ತಾನೆ. ಉತ್ತಮವಾದ ಎಲ್ಲಾ ಆಹಾರವು (ನಿರ್ದಿಷ್ಟವಾಗಿ ನಿಷೇಧಿಸಲಾದವುಗಳನ್ನು ಹೊರತುಪಡಿಸಿ) ಅನುಮತಿಸಲಾಗಿದೆ. ಮನುಷ್ಯರನ್ನು ಮೋಸಗೊಳಿಸಲು ಶೈತಾನನು ನೇಮಿಸಿಕೊಳ್ಳುವ ಸುಲಭವಾದ ಮಾರ್ಗವೆಂದರೆ, ಪುರುಷ ಅಥವಾ ಮಹಿಳೆಯರನ್ನು ಒಂದು ಪ್ರತ್ಯೇಕ ಆಹಾರ ನಿರ್ಬಂಧವನ್ನು ಅನುಸರಿಸುವಂತೆ ಮಾಡುವುದಾಗಿದೆ. ಉದಾಹರಣೆಗೆ, ಮಾನವಕುಲಕ್ಕೆ ಆಹಾರವಾಗಿ ಅಲ್ಲಾಹನು ಕೆಲವು ಪ್ರಾಣಿಗಳನ್ನು ಪಳಗಿಸಲಾಗುವಂತೆ ವಿನ್ಯಾಸ ಮಾಡಿದ್ದಾನೆ – ಇದು ಅವನ ದಯೆ ಮತ್ತು ಅನುಗ್ರಹವಾಗಿದೆ. ಅದೇ ವರ್ಗದ ಪ್ರಾಣಿಗಳು ವನ್ಯಪ್ರದೇಶದಲ್ಲೂ ಕಂಡುಬರುತ್ತದೆ. ಆದರೆ ಕೆಲವು ಧರ್ಮದ ಉಲೆಮಾಗಳು ಮತ್ತು ಪುರೋಹಿತರು ಜಾನುವಾರುಗಳು ಸೇರಿದಂತೆ ಯಾವುದೇ ಜೀವಿಗಳನ್ನು ಕೊಲ್ಲಬಾರದೆಂದು ತಮ್ಮ ಅನುಯಾಯಿಗಳಿಗೆ ಬೋಧಿಸುತ್ತಾರೆ. ಆದ್ದರಿಂದ, ನಾವು ಎಲ್ಲಾ ಕಡೆಯಲ್ಲೂ ಸಸ್ಯಾಹಾರಿಗಳನ್ನು ಕಾಣುತ್ತೇವೆ.

ಇಂತಹ ಆವಿಷ್ಕಾರಿತ ನಿರ್ಬಂಧಗಳಿಗೆ ತಮ್ಮನ್ನು ಸಮ್ಮತಿಸಿಕೊಳ್ಳುವವರನ್ನು ಮೂರ್ತಿ-ಆರಾಧಕರು ಎಂದು ಕರೆಯಲಾಗುತ್ತದೆ, ಏಕೆಂದರೆ; ಅಲ್ಲಾಹನು ಅವರಿಗೆ ಒದಗಿಸಿದ ಅನುಗ್ರಹಗಳನ್ನು, ಅವನ ಸೃಷ್ಟಿಗಳನ್ನು ಮತ್ತು ಉತ್ತಮವಾದವುಗಳನ್ನು ಅವರು ತಿರಸ್ಕರಿಸುತ್ತಾರೆ. ಸಸ್ಯಾಹಾರಿ ಜನರು ಪ್ರಕೃತಿಯ ನಿಯಮವನ್ನು ಉಲ್ಲಂಘಿಸುತ್ತಿದ್ದಾರೆ ಎಂದೂ ಕೆಲವರು ಹೇಳುತ್ತಾರೆ.

> ಆದ್ದರಿಂದ ಅಲ್ಲಾಹನು ನೀಡಿರುವುದರಿಂದ ಅನುಮತಿಸಲ್ಪಟ್ಟವುಗಳನ್ನು ಮತ್ತು ಉತ್ತಮವಾಗಿರುವುದನ್ನು ತಿನ್ನಿರಿ. ನೀವು ಅವನನ್ನು ಮಾತ್ರ ಸೇವೆಮಾಡುವವರಾಗಿದ್ದರೆ, ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞರಾಗಿರಿ. (16:114)

ಕುರ್‌ಆನಿನಲ್ಲಿ ವಿವರಿಸಲಾದವುಗಳ ಹೊರಗೆ, ಇನ್ನಷ್ಟು ಹೆಚ್ಚಿನ ನಿಷೇಧಿತ ಆಹಾರದ ಬಗೆಗಳಿವೆ ಎಂದು ಯಾರಾದರೂ ಹೇಳಿದರೆ, ಅವರು ಅಲ್ಲಾಹನ ಮೇಲೆ ಸುಳ್ಳನ್ನು ಆರೋಪಿಸುತ್ತಿದ್ದಾರೆ.

> ಅಲ್ಲಾಹನ ಮೇಲೆ ಸುಳ್ಳನ್ನು ಹೊರಿಸುವ ಸಲುವಾಗಿ "ಇದು ಹಲಾಲ್ (ಅನುಮತಿಸಲಾದವುಗಳು) ಮತ್ತು ಇದು ಹರಾಮ್ (ನಿಷೇಧಿಸಲಾದವುಗಳು)" ಎಂದು ನಿಮ್ಮ ನಾಲಿಗೆಗಳು ವಿಧಿಸುವ ಸುಳ್ಳನ್ನು ಹೇಳದಿರಿ. ನಿಶ್ಚಯವಾಗಿಯೂ ಅಲ್ಲಾಹನ ಮೇಲೆ ಸುಳ್ಳನ್ನು ಹೊರಿಸುವವರು ಯಶಸ್ವಿಗಳಾಗುವುದಿಲ್ಲ. (16:116)

ಅಲ್ಲಾಹನು ಆಜ್ಞಾಪಿಸಿರುವುದರ ಹೊರತು ಇತರ ನಿಷೇಧಾಜ್ಞೆಗಳನ್ನು ವಿಧಿಸುವವರು ಸುಳ್ಳನ್ನು ಹೇಳುತ್ತಿದ್ದಾರೆ ಎಂದು ಈ ವಚನವು ಸ್ಪಷ್ಟವಾಗಿ ಹೇಳುತ್ತಿದೆ. ಅರಬೀ ಧರ್ಮವೂ ಸೇರಿದಂತೆ, 5:3 ರಲ್ಲಿ ಅಲ್ಲಾಹನಿಂದ ನಿರ್ಬಂಧಿಸಲ್ಪಟ್ಟ ಮೇರೆಗಳನ್ನು ಯಾವುದೇ ಧರ್ಮಕ್ಕೂ ಪಾಲಿಸಲು ಸಾಧ್ಯವಿಲ್ಲ.

ತರಬೇತಿ ನೀಡಲ್ಪಟ್ಟ ನಾಯಿಗಳು ಹಿಡಿದ ಪ್ರಾಣಿಗಳನ್ನು ಅನುಮತಿಸಲಾಗಿದೆ

5:4 ರಲ್ಲಿ ಹೇಳುವಂತೆ, ತರಬೇತಿ ನೀಡಲ್ಪಟ್ಟ ತಮ್ಮ ನಾಯಿಗಳು ಹಿಡಿದ ಕಾಡು ಪ್ರಾಣಿಗಳ ಮಾಂಸವನ್ನು ಸೇವಿಸಲು ಅಲ್ಲಾಹನು ವಿಶ್ವಾಸಿಗಳಾದ ಪುರುಷರು ಮತ್ತು ಮಹಿಳೆಯರಿಗೆ ಅನುಮತಿ ನೀಡಿದ್ದಾನೆ. ಮುಸ್ಲಿಮರು ನಾಯಿಗಳನ್ನು ಸಾಕಬಹುದು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಸೂರ 18:18 ರಲ್ಲಿರುವ ಇತಿಹಾಸವು ಹೇಳುತ್ತದೆ, ಒಂದು ಗುಹೆಯೊಳಗೆ ರಕ್ಷಣೆ ಪಡೆದ ಕೆಲವು ಯುವ ವಿಶ್ವಾಸಿಗಳಿಗೆ ಒಂದು ನಾಯಿಯು ಅವರ ಸಂಗಾತಿಯಾಗಿತ್ತು: *'ನಾವು ಅವರನ್ನು ಬಲಬದಿಗೆ ಮತ್ತು ಎಡಬದಿಗೆ ತಿರುಗಿಸುತ್ತಿದ್ದೆವು, ಅವರ ನಾಯಿಯು ಅವರ ಮಧ್ಯೆ ತನ್ನ ಕೈಗಳನ್ನು ಚಾಚಿತ್ತು'*. ಅರಬೀ ಧರ್ಮದಲ್ಲಿ ನಾಯಿಗಳನ್ನು ಸಾಕುವುದು ನಿಷೇಧಿಸಲಾಗಿದೆ. ಲೇಖಕರು ಕೆಲವು ವರ್ಷಗಳ ಹಿಂದೆ ಒಂದು ಜರ್ಮನ್ ಶೆಫರ್ಡ್ ತಲೆಯ ನಾಯಿಯನ್ನು ಸಾಕಲು ತೊಡಗುವ ತನಕ ಅದರ ಪ್ರಯೋಜನಗಳನ್ನು ತಿಳಿದಿರಲಿಲ್ಲ.

> ತಮಗೆ ಏನೆಲ್ಲಾ ಅನುಮತಿಸಲ್ಪಟ್ಟಿದೆ ಎಂದು ಜನರು ಕೇಳುತ್ತಾರೆ, ಹೇಳಿರಿ: "ನಿಮಗೆ ಉತ್ತಮವಾಗಿರುವುದೆಲ್ಲವೂ ಮತ್ತು ಅಲ್ಲಾಹನು ನಿಮಗೆ ನೀಡಿದ ಜ್ಞಾನದ ಆಧಾರದಲ್ಲಿ ನೀವು ತರಬೇತಿ ನೀಡಿದ ನಾಯಿಗಳು ನಿಮಗಾಗಿ ಹಿಡಿದು ತರುವವುಗಳೂ ನಿಮಗೆ ಅನುಮತಿಸಲ್ಪಟ್ಟಿವೆ." ಅವುಗಳು ನಿಮಗಾಗಿ ಹಿಡಿಯುವುದನ್ನು ನೀವು ತಿನ್ನಬಹುದು. ಮತ್ತು ಅವುಗಳ ಮೇಲೆ ಅಲ್ಲಾಹನ ನಾಮವನ್ನುಚ್ಚರಿಸಿರಿ. ನೀವು ಅಲ್ಲಾಹನನ್ನು ಲಕ್ಷಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ಲೆಕ್ಕಾಚಾರದಲ್ಲಿ ಕಟ್ಟುನಿಟ್ಟಾದವನು ಆಗಿದ್ದಾನೆ. (5:4)

ಅನೇಕ ಅನುವಾದಕರು *ಮುಕಲ್ಲಿಬೀನ* ಎಂಬ ಪದವನ್ನು *ನಾಯಿಗಳು* ಎಂದು ಅನುವಾದಿಸಲು ಸಿದ್ಧರಿಲ್ಲ ಏಕೆಂದರೆ, ಮುಸ್ಲಿಮರೆಂದು ಹೇಳಿಕೊಳ್ಳುವ ಬಹುಪಾಲು ಜನರು ನಾಯಿಯನ್ನು ಸಾಕುವುದು ನಿಷಿದ್ಧವಾಗಿದೆ *(ಹರಾಮ್)* ಎಂದು ವಿಶ್ವಸಿಸುತ್ತಾರೆ. ನಾಯಿಗೆ ಅರಬೀ ಪದವು *ಕಲ್ಬ್* ಎಂದಾಗಿದೆ ಮತ್ತು ಗುಹೆಯಲ್ಲಿ ವಿಶ್ವಾಸಿಗಳ ಜೊತೆಗಿದ್ದ ನಾಯಿಯನ್ನು ಉಲ್ಲೇಖಿಸಲು 18:18 ಹಾಗೂ 18:22 ರಲ್ಲಿ ಇದೇ ಪದವನ್ನು ಬಳಸಲಾಗಿದೆ. ಅಲ್ಲಾಹನ ಅವತೀರ್ಣವನ್ನು ಸ್ವೀಕರಿಸಿದ ನಂತರ ಅದನ್ನು ಅಲಕ್ಷಿಸುವವರನ್ನು ಕುರ್‌ಆನ್ 7:176 ವಚನದಲ್ಲಿ ನಾಯಿಗಳಿಗೆ ಹೋಲಿಸುತ್ತದೆ, ಹಾಗೂ ಅದೇ ಪದವನ್ನು ಬಳಸಲಾಗಿದೆ.

2:62 ಮತ್ತು 5:69 ರಲ್ಲಿ, ಹಿಂದಿನ ಗ್ರಂಥಗಳಲ್ಲಿನ ನಿಜವಾದ ವಿಶ್ವಾಸಿಗಳ ಆಹಾರವನ್ನು ಸಮರ್ಥಿಸಲಾಗಿದೆ. ನಂತರ 5:5 ರಲ್ಲಿ, ಎರಡೂ ಪಕ್ಷಗಳ (ಈ ಗ್ರಂಥದ ಹಾಗೂ ಹಿಂದಿನ ಗ್ರಂಥದ ಜನಾಂಗದ) ಆಹಾರವನ್ನು ಪರಸ್ಪರ ಸೇವಿಸಬಹುದೆಂದು ಅನುಮತಿ ನೀಡಲಾಗಿದೆ. ತದನಂತರ, ಹಿಂದಿನ ಗ್ರಂಥದ ಜನರ ಬಗ್ಗೆ ಇನ್ನೊಂದು ವಿಷಯವನ್ನು ಅಲ್ಲಾಹನು ಸೇರಿಸುತ್ತಾನೆ. ಇಂತಹ ಸೇರಿಸುವಿಕೆಯು, ಒಂದು ನಿರ್ದಿಷ್ಟ ವಿಷಯದ ಬಗ್ಗೆ ವಚನದ ಕೊನೆಯಲ್ಲಿ ಕಂಡುಬರುತ್ತದೆ, ಆದರೆ ಎಂದಿಗೂ ವಿಷಯದ ಮಧ್ಯದಲ್ಲಿ ಪ್ರತ್ಯಕ್ಷವಾಗುವುದಿಲ್ಲ.

ಆವಿಷ್ಕಾರಿತ *ತೀರ್ಥಯಾತ್ರೆ* ಮತ್ತು *ಯಾತ್ರಿಯ ಉಡುಪು* ಎಂಬುವುದನ್ನು ಒಂದು ವಚನದ ಮಧ್ಯದಲ್ಲಿ ಧಾರ್ಮಿಕರು ಗೊತ್ತುಗುರಿಯಿಲ್ಲದೆ ಬಲವಂತವಾಗಿ ತುರುಕಿಸಿಕೊಂಡಿದ್ದಾರೆ, ಅದು ವಿಷಯ ಹಾಗೂ ಸಂದರ್ಭಕ್ಕೆ ಸಂಯೋಜಿಸುವುದಿಲ್ಲ. ಕುರ್‌ಆನಿನ ಪರಿಪೂರ್ಣ ಸಂಯೋಜನೆಯನ್ನು ಉಲ್ಲಂಘಿಸುವ ಈ ಪ್ರಯತ್ನದ ಅವಲಕ್ಷಣವು, ಶ್ರದ್ಧೆಯುಳ್ಳ ಓದುಗರ ವಿವೇಕವನ್ನು ಎಚ್ಚರಗೊಳಿಸಲು ಸಾಕಾಗಿದೆ.

ಧಾರ್ಮಿಕರು ಶೈತಾನನ ಭರವಸೆಯನ್ನು ಈಡೇರಿಸುತ್ತಿದ್ದಾರೆ

ಧಾರ್ಮಿಕರ ಮೂಲಕ ನಡೆದ ಕುರ್‌ಆನಿನಲ್ಲಿರು ಅಲ್ಲಾಹನ ಪದಗಳ ಅಗಾಧ ಭ್ರಷ್ಟಾಚಾರವು, ಅವರು ಶೈತಾನನ ಇಚ್ಛೆಯನ್ನು ಪೂರ್ಣಗೊಳಿಸಿದ್ದಾರೆ ಎಂಬುವುದನ್ನು ಸ್ಪಷ್ಟಪಡಿಸಿದೆ. ಕುರ್‌ಆನಿನ ಪ್ರಕಾರ ಶೈತಾನನು ಅಲ್ಲಾಹನೊಂದಿಗೆ ಹೀಗೆ ವಾಗ್ದಾನ ಮಾಡಿದ್ದನು:

> ನಾನು ಪಥಭ್ರಷ್ಟನಾಗಿರುವೆನೆಂದು ನೀನು ದೃಢಪಡಿಸಿರುವ ಕಾರಣ, ನಾನು ಅವರೆಲ್ಲರನ್ನೂ ನೇರ ಪಥದಿಂದ ದಾರಿತಪ್ಪಿಸುತ್ತೇನೆ. (7:16)

ಅರಬರು ಸತ್ಯನಿಷೇಧದಲ್ಲಿ ಮತ್ತು ಕಪಟತೆಯಲ್ಲಿ ಕಠೋರರು ಎಂದು 9:97 ಹೇಳುತ್ತದೆ. ಅಲ್ಲಾಹನು ಇಲ್ಲಿ ಅರಬರ ಬಗ್ಗೆ ನಿರ್ವಿವಾದದ ವಾಸ್ತವವನ್ನು ಬಯಲುಪಡಿಸಿದ್ದಾನೆ. ನಾನು ಇನ್ನೇನು ಹೇಳಬೇಕು? ಒಂದು ಕಣಕಾಲನ್ನು ಅಥವಾ ಕಾಲಿನ ಪಾದವನ್ನು ಅಲ್ಲಾಹನ ಮನೆಯನ್ನಾಗಿ ಮಾಡಿ, ಲಕ್ಷಾಂತರ ಜನರನ್ನು ಅದನ್ನು ಆರಾಧಿಸುವಂತೆ ಮಾಡಲು ಇನ್ನಾರಿಗೆ ಸಾಧ್ಯ?

ಮೇಲೆ 7:16 ರಲ್ಲಿ ಹೇಳಿದಂತೆ, ಅವರು ಈಗ ಶೈತಾನನ ದುಷ್ಟ ವಿನ್ಯಾಸಕ್ಕೆ ತುತ್ತಾಗಿದ್ದಾರೆ.

> ಅರಬರು ಸತ್ಯನಿಷೇಧದಲ್ಲಿಯೂ ಹಾಗೂ ಕಪಟತನದಲ್ಲಿಯೂ ಅತಿ ಕಠೋರರು ಮತ್ತು ಅಲ್ಲಾಹನಿಂದ ತನ್ನ ಸಂದೇಶವಾಹಕರಿಗೆ ಅವತೀರ್ಣಿಸಿದ ಮಿತಿಗಳ ಬಗ್ಗೆ ಅವರು ಅಜ್ಞರಾಗುವ ಸಾಧ್ಯತೆಗಳೇ ಹೆಚ್ಚು ಮತ್ತು ಅಲ್ಲಾಹನು ಜ್ಞಾನಿಯೂ ಮತ್ತು ನ್ಯಾಯಾಧಿಪತಿಯೂ ಆಗಿರುತ್ತಾನೆ. (9:97) ನಿಮ್ಮ

> ಸುತ್ತಮುತ್ತಲಲ್ಲಿ ಇರುವವರ ಪೈಕಿ, ಕಪಟ ಅರಬರು ಇದ್ದಾರೆ ಮತ್ತು ನಗರ ವಾಸಿಗಳು ಇದ್ದಾರೆ. ಅವರು ಕಪಟತನದಲ್ಲಿ ಕಠೋರರಾಗಿದ್ದಾರೆ. (9:101)

ಅವರು ಶತಕೋಟಿ ಜನರನ್ನು ಅಲ್ಲಾಹನ ಪಥದಿಂದ ಯಶಸ್ವಿಯಾಗಿ ತಪ್ಪುದಾರಿಗೆಳೆದಿದ್ದಾರೆ. ನಾವು ಇದನ್ನು ನಂಬದೇ ಇರಲು ಯಾವುದೇ ಕಾರಣವಿಲ್ಲ. ಈ ವಚನದ ಅನಾನುಕೂಲಕರ ವಾಸ್ತವಕ್ಕೆ ಮುಖಾಮುಖಿಯಾದಾಗ, ನಗರವಾಸಿ ಅರಬರುಗಳು ನಮ್ಮನ್ನು ನಂಬಿಸಲು ಪ್ರಯತ್ನಿಸುವಂತೆ, ಮೇಲೆ ಉಲ್ಲೇಖಿಸಲ್ಪಟ್ಟ ವಚನಗಳು ಸೂಚಿಸುವುದು ಅಲೆಮಾರಿಗಳಾದ ಅರಬರನ್ನೂ ಅಲ್ಲ, ಮರುಭೂಮಿವಾಸಿಗಳಾದ ಅರಬರನ್ನೂ ಅಲ್ಲ[75] ಬದಲಿಗೆ ಅದು ಸ್ಪಷ್ಟವಾಗಿ ಸೂಚಿಸುವುದು ನಗರವಾಸಿಗಳಾದ ಅರಬರನ್ನೇ ಆಗಿದೆ. ಮರುಭೂಮಿವಾಸಿಗಳಾದ (ಬದು) ಅರಬರು ಯಾವತ್ತೂ ನಗರಗಳಲ್ಲಿ ವಾಸಿಸುತ್ತಿರಲಿಲ್ಲ.

'ಕಾಬಾ' (ಕಣಕಾಲು) ಎಂಬುವುದು 'ಅಲ್ಲಾಹನ ಮನೆ' ಎಂದಾಯಿತು

ಕಣಕಾಲನ್ನು *ಕಾಬಾ* ಎಂದು ಕರೆಯಲಾಗುತ್ತದೆ ಎಂದು ಎಲ್ಲಾ ಅರಬರಿಗೆ ತಿಳಿದಿದೆ, ಆದರೆ ಧಾರ್ಮಿಕರು *ಕಾಬಾ* (ಕಣಕಾಲು ಅಥವಾ ಹಿಮ್ಮಡಿಯ ಕೀಲುಗಳು) ಎಂಬುವುದನ್ನು 'ಅಲ್ಲಾಹನ ಮನೆ' ಎಂದಾಗುವಂತೆ ಬದಲಾಯಿಸಲು ಮುಂದಾದರು. ಈಗಾಗಲೇ 5:2 ರಲ್ಲಿ *ಹುರುಮುನ್* ಎಂಬ ಪದದ ಪೂರ್ವಯೋಜಿತ ತಿರುಚುವಿಕೆಯನ್ನು ಸರಿಹೊಂದಿಸಲು ಅವರು ಈ ಮರೆಮಾಚುವಿಕೆಯ ಕ್ರಿಯೆಯನ್ನು ಸಾಧಿಸಿದ್ದಾರೆ. 5:2 ರಲ್ಲಿ ಅಲ್ಲಾಹನು ತನ್ನ ಸೃಷ್ಟಿಯ ವ್ಯವಸ್ಥೆಯಲ್ಲಿ ವನ್ಯಜೀವಿ ಸಂರಕ್ಷಣಾ ಕಾಯಿದೆಯನ್ನು[76] ಮಂಜೂರು ಮಾಡಿದ್ದಾನೆ.

ಕಾಬಾ ಎಂಬ ಪದವು ಕುರ್'ಆನಿನಲ್ಲಿ ಮೂರ ವಿವಿಧ ಸ್ಥಳಗಳಲ್ಲಿ ಉಲ್ಲೇಖಿಸಲಾಗಿದೆ ಮತ್ತು ಅವೆಲ್ಲವೂ ಸೂರ 5 ರಲ್ಲೇ ಬಳಕೆಯಾಗಿದೆ. ಈ ಸೂರದ ಶೀರ್ಷಿಕೆಯು *ಅಲ್ ಮಾಇದ* ಅಂದರೆ *ಔತಣ* ಅಥವಾ *ಊಟ* ಎಂದಾಗಿದೆ.

---

[75] ವಿದ್ವಾಂಸರು ಸೇರಿದಂತೆ, ಅರಬ್ ಧರ್ಮದಲ್ಲಿನ ಸಂಕೋಲೆಗಳಿಂದ ಬಂಧಿಸಲ್ಪಟ್ಟ ಪ್ರತಿಯೊಂದು ಮನಸ್ಸು ಸಹ, ಈ ವಚನವು ನಗರವಾಸಿ ಅರಬರನ್ನು ಸೂಚಿಸುತ್ತಿದೆ ಎಂಬುವುದನ್ನು ನಂಬಲು ನಿರಾಕರಿಸುತ್ತಾರೆ. ಮರುಭೂಮಿವಾಸಿಗಳಾದ ಅಥವಾ ಅಲೆಮಾರಿಗಳಾದ ಅರಬರನ್ನು ಸೂಚಿಸಲು ಕುರ್'ಆನ್ 33:20 ರಲ್ಲಿ *ಬದೂನ ಫಿಲ್ ಅ'ರಾಬಿ* ಎಂಬ ಪದಗಳನ್ನು ಬಳಸಿರುವುದನ್ನು ಇವರೆಲ್ಲರೂ ಕಡೆಗಣಿಸಿದ್ದಾರೆ.

[76] ವನ್ಯಜೀವಿ ಸಂರಕ್ಷಣೆಯ ವಿಷಯವು ಭೂಲೋಕದ ಯಾವುದೇ ಕುರ್'ಆನ್ ಅನುವಾದಗಳಲ್ಲಿ ಕಾಣಸಿಗುವುದಿಲ್ಲ. ಆದರೆ, ನಾವು *ಹುರುಮುನ್* ಎಂಬ ಪದದ ಅಂತರಾಳವನ್ನು ಪತ್ತೆಹಚ್ಚಿದರೆ, ಈ ವಿಷಯದ ಕುರಿತ ಕುರ್'ಆನಿನ ಹೇಳಿಕೆಗಳು ಬಹಳ ಸ್ಪಷ್ಟವಾಗುತ್ತದೆ.

ಕಾಬಾ ಪದದ ನಿಜವಾದ ಅರ್ಥವನ್ನು ಅನ್ವೇಷಿಸುವ ಮುನ್ನ, ಈ ಸೂರವನ್ನು ಸಂಕ್ಷಿಪ್ತವಾಗಿ ಅವಲೋಕನ ಮಾಡೋಣ.

ಇದರಲ್ಲಿ 120 ವಚನಗಳಿವೆ, ಮತ್ತು ಆಹಾರದ ವಿಷಯವು (ಅಮಲು ಪದಾರ್ಥದ ಬಳಕೆಯ ಬಗ್ಗೆಗಿನ ಪ್ರಸಿದ್ಧ ವಚನವನ್ನೂ ಸೇರಿದಂತೆ) ಈ ಸೂರದುದ್ದಕ್ಕೂ ಹರಡಿದೆ. ಈ ಸೂರದ ಸಾಮಾನ್ಯ ಸಂದೇಶವು, ಅಲ್ಲಾಹನ ಗ್ರಂಥವನ್ನು ಸ್ವೀಕರಿಸಿದ ಮೂರು ಪ್ರವಾದಿಗಳಾದ ಮೂಸಾ, ಈಸಾ ಹಾಗೂ ಮುಹಮ್ಮದರಿಗೆ ಕೇಂದ್ರಿತವಾಗಿದೆ.

- 1-5 ವಚನಗಳು ಆಹಾರದ ನಿರ್ಬಂಧಗಳ ವಿವರಗಳನ್ನು ನೀಡುತ್ತವೆ. 6 ನೇ ವಚನವು 1-5 ಸಾರವನ್ನು ಬಲಪಡಿಸುವುದರ ಜೊತೆಗೆ ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಪ್ರಸ್ತಾಪಿಸುತ್ತದೆ. 7-11 ಅಲ್ಲಾಹನ ಆದೇಶಗಳನ್ನು ಎತ್ತಿಹಿಡಿಯುವ ಪ್ರಾಮುಖ್ಯತೆಗೆ ಒತ್ತು ನೀಡುತ್ತದೆ.

- 12-47 ವಚನಗಳು, ಮೂಸಾ ಹಾಗೂ ಈಸಾರಿಗೆ ನೀಡಿದ ಕಾನೂನುಗಳನ್ನು ಉಲ್ಲಂಘಿಸಿದ ಇಸ್ರಾಯೀಲರ ಸಂತತಿಯ ಇತಿಹಾಸಕ್ಕೆ ಸಂಬಂಧಿಸಿದೆ.

- 48-89 ವಚನಗಳು, ಅಲ್ಲಾಹನ ಆದೇಶಗಳನ್ನು ಉಲ್ಲಂಘಿಸಿದ ಹಿಂದಿನ ಗ್ರಂಥದ ಜನರ ಬಗ್ಗೆ ಓದುಗರನ್ನು ನೆನಪಿಸುವ ಸಲುವಾಗಿ ಇರುವ ಕೊನೆಯ ಪ್ರವಾದಿಗೆ ಅವತೀರ್ಣವಾದ ಕುರ್‌ಆನಿನ ಸಂದೇಶದ ಕುರಿತಾಗಿದೆ.

- 90-93 ರಲ್ಲಿ, ವಿಷಯವು ಮತ್ತೊಮ್ಮೆ ಆಹಾರದ ಬಗ್ಗೆಯಾಗಿದೆ; ಹಾಗೂ ಅಮಲು ಪದಾರ್ಥಗಳ, ಜೂಜಾಟದ ಮತ್ತು ಎರಕದ ಮೂಲಕ ವಿಂಗಡಿಸಲಾದ ಮಾಂಸದ ಬಗ್ಗೆ ಉಪದೇಶವೂ ಇವೆ. ಸಚ್ಚಾರಿತ್ರ್ಯವನ್ನು ಪಾಲಿಸುತ್ತಿರುವ, ಒಳ್ಳೆಯ ನೈತಿಕ ನಡತೆಯುಳ್ಳ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುತ್ತಲಿರುವಂತಹ ವಿಶ್ವಾಸಿಗಳು ಮತ್ತು ಸದ್ಗುಣ ಜೀವನವನ್ನು ನಡೆಸುವವರು (ಅಲ್ಲಾಹನ ನಿರ್ಬಂಧನೆಯ ಹೊರಗಿನ) ಯಾವುದೇ ಆಹಾರವನ್ನು ತಿನ್ನುವುದರಲ್ಲಿ ಯಾವುದೇ ಪಾಪವಿಲ್ಲ ಎಂದು 93 ನೇ ವಚನವು ಹೇಳುತ್ತದೆ.

- 94-98 ವಚನಗಳು, 1 ಮತ್ತು 2 ನೇ ವಚನದಲ್ಲಿ ತಿಳಿಸಿದ ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ವಿಸ್ತರಣೆಯಾಗಿದೆ ಮತ್ತು ಬೇಟೆಯ ನಿರ್ಬಂಧಗಳ ಉಲ್ಲಂಘನೆಗೆ ಹೇರಿರುವ ದಂಡನೆಯ ಬಗ್ಗೆಯಾಗಿದೆ.

- 99-100 ಕೊನೆಯ ಪ್ರವಾದಿಯ ಸೀಮಿತ ಪಾತ್ರವನ್ನು ನಮಗೆ ತಿಳಿಸಲು ಸ್ವಲ್ಪ ತಿರುವನ್ನು ತೆಗೆದುಕೊಳ್ಳುತ್ತದೆ. ಆದರೆ, ಆಹಾರವು ಮತ್ತೆ 103 ನೇ ವಚನದಲ್ಲಿ ನಮೂದಿಸಲಾಗಿದೆ. ಈ ವಚನದಲ್ಲಿರುವ ಹೆಸರುಗಳು, ಅರಬರನ್ನೂ ಸೇರಿದಂತೆ ಅನೇಕ ಜನರ ತಿಳುವಳಿಕೆಯ ಹೊರಗಿದೆ.

ಅದರಲ್ಲಿ *'ಬಹೀರ'*, *'ಸಾಇಬ'*, *'ವಸೀಲ'* ಎಂಬ ಹೆಸರುಗಳಿವೆ. ಅವುಗಳು ಅರಬರಿಗೆ ಸಾಮಾನ್ಯವಾಗಿರುವ ಒಂಟೆಗಳು, ಆಡುಗಳು ಅಥವಾ ಕತ್ತೆಗಳಲ್ಲ.

- 110-120 ರಲ್ಲಿ ಈಸಾರ ಬಗ್ಗೆ ಪ್ರಸ್ತಾಪವಿದೆ. ಅವರ ಅನುಯಾಯಿಗಳು ಮರುಭರವಸೆಯನ್ನು ಬಯಸಿದರು ಮತ್ತು ಉತ್ಸವದ ಒಂದು ಸಂಕೇತವಾಗಿ ಆಕಾಶದಿಂದ ಒಂದು ಔತನವನ್ನು ತರಿಸಲು ತನ್ನ ಪ್ರಭುವನ್ನು ಕೇಳಿಕೊಳ್ಳಲು ಅವರು ಈಸಾರ ಮೇಲೆ ವಿಪರೀತ ಬೇಡಿಕೆಯನ್ನಿಟ್ಟರು. ಅದರ ನಂತರ ವಿಶ್ವಾಸವಿರಿಸದಿದ್ದರೆ ಅವರು ತೀವ್ರವಾಗಿ ಶಿಕ್ಷಿಸಲ್ಪಡುವರು ಎಂಬ ಎಚ್ಚರಿಕೆಯೊಂದಿಗೆ ಅವರ ವಿನಂತಿಯನ್ನು ಈಡೇರಿಸಲಾಗಿತ್ತು.

ಇದು 5 ನೇ ಸೂರದ ಸಾಂದರ್ಭಿಕ ಸತ್ವವಾಗಿದೆ. ವಿಷಯದ ಬಹುಭಾಗವು ಆಹಾರದ ಬಗೆಯಾಗಿದೆ. *ಕಾಬಾ* ಎಂಬ ಪದವು ಕಂಡುಬರುವುದು ಈ ಸೂರದಲ್ಲಿ ಮಾತ್ರವಾಗಿದೆ ಹಾಗೂ ಆ ಸಂದರ್ಭಗಳೆಲ್ಲವೂ ಆಹಾರದ ಸನ್ನಿವೇಶದಲ್ಲಾಗಿದೆ. ಅದು ಮೂರು ಬಾರಿ ಉಲ್ಲೇಖಿಸಲ್ಪಟ್ಟಿವೆ:

> ಓ ವಿಶ್ವಾಸಿಗಳೇ, ನೀವು ನಿಮ್ಮ ಬದ್ಧತೆಗಳನ್ನು ಪ್ರಾರಂಭಿಸುವಾಗ ನಿಮ್ಮ ಮುಖಗಳನ್ನು, ತೋಳುಗಳನ್ನು ಮೊಣಕೈ ಗಂಟುಗಳವರೆಗೆ ತೊಳೆದು ಕೊಳ್ಳಿರಿ, ನಿಮ್ಮ ತಲೆಯನ್ನು ಸವರಿರಿ ಮತ್ತು ಕಾಲುಗಳನ್ನು ಕಣಕಾಲುಗಳ ವರೆಗೆ *(ಕಾಬೈನಿ)*[77] ತೊಳೆಯಿರಿ. (5:6)

ಈ ವಚನದಲ್ಲಿನ *ಕಾಬೈನಿ* ಎಂಬ ಪದಕ್ಕೆ *ಕಾಲುಗಳ ಎರಡು ಕೀಲುಗಳು* ಎಂದರ್ಥವಾಗಿದೆ. ಅದೇ ಪದವನ್ನು ಪ್ರಾಣಿಗಳ ಕಣಕಾಲುಗಳನ್ನು ಸೂಚಿಸಲು 5:95[78] ರಲ್ಲಿ ಬಳಸಲಾಗುತ್ತದೆ.

> ಓ ವಿಶ್ವಾಸಿಗಳೇ, ನಿಷೇಧಿಸಲ್ಪಟ್ಟ ಅವಧಿಯಲ್ಲಿ *(ಹುರುಮುನ್)* ವನ್ಯಜೀವಿಗಳನ್ನು ಕೊಲ್ಲಬೇಡಿರಿ. ಯಾರಾದರೂ ಉದ್ದೇಶಪೂರ್ವಕವಾಗಿ ಕೊಂದರೆ, ಅವುಗಳ 'ಕಣಕಾಲುಗಳ' (ಕಾಬಾ) ಮೇಲೆ ಪರಿಪಕ್ವತೆಯನ್ನು ಸೂಚಿಸಲು ನಿಮ್ಮ ಪೈಕಿ ಎರಡು ಸೂಕ್ತ ವ್ಯಕ್ತಿಗಳು ತೀರ್ಮಾನಿಸುವಂತೆ ಒಂದು ಸಮಾನ ಜಾನುವಾರಿನ ದಂಡತೆರಬೇಕು. ಅಥವಾ ಅವರು ತಮ್ಮ ಕಾರ್ಯಗಳ ಪರಿಣಾಮಗಳನ್ನು ವಿಷಾದಿಸಿಕೊಳ್ಳಲು, ಬಡವರಿಗೆ ಆಹಾರ ನೀಡುವ ಮೂಲಕ ಅಥವಾ ಸ್ವಯಂ-ಶಿಸ್ತನ್ನು *(ಸಿಯಾಮ್)* ಹೇರುವ ಮೂಲಕ ಪ್ರಾಯಶ್ಚಿತ್ತಪಟ್ಟುಕೊಳ್ಳಬೇಕು. ಅಲ್ಲಾಹನು ಅವನ ಹಿಂದಿನ ಅಪರಾಧಗಳನ್ನು ಕ್ಷಮಿಸುತ್ತಾನೆ. ತನ್ನ ಅಪರಾಧಕ್ಕೆ ಹಿಂತಿರುಗುವವರಿಗೆ, ಅಲ್ಲಾಹನು ಅವನಿಂದ ಪ್ರತಿಕಾರ ಪಡೆದೇ ತೀರುತ್ತಾನೆ. ಅಲ್ಲಾಹನು ಸರ್ವಶಕ್ತನೂ, ಪ್ರತಿಕಾರ ತೀರಿಸಿಕೊಳ್ಳುವವನಾಗಿದ್ದಾನೆ. (5:95).

---

[77] ಇದು *ಕಾಬಾ* ಪದದ ದ್ವಿವಚನವಾಗಿದೆ.

[78] 5:94 ರಿಂದ ಪ್ರಾರಂಭಿಸಿ 5:97 ರ ವರೆಗೆ ಇರುವ ಈ ವಚನದಲ್ಲಿರುವ ವಿಷಯದ ಸನ್ನಿವೇಶವನ್ನು ಧಾರ್ಮಿಕರು ಸಂಪೂರ್ಣವಾಗಿ ಕಡೆಗಣಿಸುತ್ತಾರೆ. ಈ ಎಲ್ಲಾ ವಚನಗಳು ಭೂಭಾಗದ ಹಾಗೂ ಸಮುದ್ರದ ಜೀವಿಗಳ ಬೇಟೆಗೆ ಸಂಬಂಧಿಸಿದೆ.

ಈ ವಚನದ *ಕಾಬತಿ* ಎಂಬ ಪದದ ಮುನ್ನ ಇರುವ ಪದಗಳು *ಹದಿಯನ್ ಬಾಲಿಫ* ಎಂದಾಗಿದೆ, ಹಾಗೂ ಅದರ ಅಕ್ಷರಶಃ ಅರ್ಥವು *ಪಕ್ವತೆಯನ್ನು ತೋರಿಸಿಕೊಡು* ಅಥವಾ *ಸೂಚಿಸು* (ಪಾದದ ಕೀಲುಗಳ ಪಕ್ವತೆಯನ್ನು ನಿರ್ಣಯಿಸುವ ಸಲುವಾಗಿ) ಎಂದಾಗಿದೆ.

ಹದ್ಯನ್[79] ಎಂಬ ಪದವು *ಮಾರ್ಗದರ್ಶನ* ಅಥವಾ *ತೋರಿಸಿಕೊಡು* ಅಥವಾ *ನಿರ್ದೇಶಿಸು* ಅಥವಾ *ಸೂಚಿಸು* ಎಂಬ ಅರ್ಥಗಳನ್ನು ನೀಡುವ *ಹದಯ* ಎಂಬ ಮೂಲಪದದ ಉತ್ಪನ್ನವಾಗಿದೆ. ಇದು ಕುರ್‌ಆನಿನಲ್ಲಿ ಸಾಮಾನ್ಯವಾಗಿ ಹಲವಾರು ವಚನಗಳಲ್ಲಿ ಕಂಡುಬರುವ ಸರಳವಾದ ಪದವಾಗಿದೆ. *ಹದ, ಹಾದಿ, ಹುದಾ, ಹುದನ್, ಹದ್ಯ*, ಮತ್ತು *ಹದ್ಯನ್* ಎಂಬುವುದೆಲ್ಲದರ ಅರ್ಥದ ಸಾರವು ಒಂದೇ ಆಗಿದೆ. *'ಮಾರ್ಗದರ್ಶನ' ಎಂಬುವುದು 'ಪ್ರಾಣಿಬಲಿ' ಎಂದಾಯಿತು* ಎಂಬ ಶೀರ್ಷಿಕೆಯಡಿಯಲ್ಲಿ ನಾನು ಈಗಾಗಲೇ ಈ ಪದವನ್ನು ವಿವರಿಸಿದ್ದೇನೆ.

ಬಾಲಿಫ ಎಂಬ ಪದವು *ಬಲಫ* ಎಂಬ ಮೂಲಪದದಿಂದ ಬಂದಿರುವುದಾಗಿದೆ. ಇದರ ಅರ್ಥವು, *ಪಕ್ವತೆಯನ್ನು ಪಡೆಯುವುದು, ಪ್ರೌಢರಾಗುವುದು, ಪ್ರಬುದ್ಧವಾಗುವುದು* ಅಥವಾ *ಒಂದು ಉದ್ದೇಶವನ್ನು, ಅಥವಾ ಸ್ಥಿತಿಯನ್ನು ಸಾಧಿಸುವುದು* ಎಂದಾಗಿದೆ.

ಉದಾಹರಣೆಗೆ 4:6 ರಲ್ಲಿ, ನಾವು ಅನಾಥ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರೆ, ನಾವು ಅವರ ಪ್ರೌಢತೆಯನ್ನು *(ಬಲಫ)* ಗಮನಿಸಿ, ಅವರು ಮದುವೆಯಾಗುವ ಪ್ರಾಯವನ್ನು ತಲುಪಿದ ತಕ್ಷಣ ಅವರಿಗೆ ಅವರ ಹಕ್ಕಿನ ಆಸ್ತಿಯನ್ನು ಹಸ್ತಾಂತರಿಸಬೇಕು. 4:6 ರಲ್ಲಿನ *ಬಲಫ* ಎಂಬ ಪದವು, ಪ್ರಾಣಿಗಳ ಕಣಕಾಲುಗಳ ಪ್ರೌಢತೆ ಅಥವಾ ಪಕ್ವತೆಯನ್ನು ಉಲ್ಲೇಖಿಸಲು 5:95 ರಲ್ಲಿ ಬಳಸಲಾದ ಅದೇ ಪದವಾಗಿದೆ.

> ಅನಾಥರು ಮದುವೆಯಾಗುವ ಪ್ರೌಢತೆಯನ್ನು ತಲುಪಿದರೆ *(ಬಲಫು-ನ್ನಿಕಾಹ)* ನೀವು ಅವರನ್ನು ಪರೀಕ್ಷಿಸಬೇಕು. ನೀವು ಅವರಲ್ಲಿ ವಿವೇಚನಾಶೀಲತೆಯನ್ನು ಗಮನಿಸಿದರೆ, ನೀವು ಅವರ ಸೊತ್ತನ್ನು ಹಸ್ತಾಂತರಿಸಬೇಕು. ಮತ್ತು ಅವರು ಬೆಳೆದು ಬರುವ *(ಯಕ್ಬರೂ)* ಮುನ್ನ ಅವರ ಸೊತ್ತನ್ನು ವ್ಯರ್ಥವಾಗಿಯೂ, ಮಿತಿಮೀರಿಯೂ ಬಳಸಬಾರದು. (4:6)

4:6 ರಲ್ಲಿ *ಯಕ್ಬರೂ* (ಬೆಳೆದು ಬರು) ಎಂಬ ಪದವು, *ಬಲಫ* (ಪ್ರೌಢತೆ ಎಂದರ್ಥ) ಎಂಬ ಪದಕ್ಕೆ ಮತ್ತಷ್ಟು ಒತ್ತುನೀಡುತ್ತದೆ. ಅಂದರೆ, ಅನಾಥರಿಗೆ ಅವರ ಆಸ್ತಿಯನ್ನು ಹಸ್ತಾಂತರಿಸುವ ಮುನ್ನ ಅವರು ಪಕ್ವತೆಯನ್ನು ಪಡೆದಿರಬೇಕು.

---

[79] ಅನುವಾದಕರು *ಹದ್ಯ* ಎಂಬ ಪದಕ್ಕೆ *ಬಲಿ ಅರ್ಪಿಸುವುದು* ಎಂಬ ಅರ್ಥವನ್ನು ನೀಡಿದ್ದಾರೆ. ಅಲ್ಲಾಹನು ಈ ಪದವನ್ನು ಮಾರ್ಗದರ್ಶನ ಎಂಬ ಅರ್ಥದಲ್ಲಿ ಕುರ್‌ಆನಿನುದ್ದಕ್ಕೂ ಬಳಸಿದ್ದಾನೆ ಮತ್ತು ಅವರು 2:196, 5:2 ಮತ್ತು 5:95 ನ್ನು ಹೊರತುಪಡಿಸಿ ಇತರ ಎಲ್ಲಾ ವಚನಗಳಲ್ಲಿಯೂ ನಿರಂತರವಾಗಿ ಸರಿಯಾಗಿಯೇ ಅದನ್ನು ಭಾಷಾಂತರಿಸುತ್ತಾರೆ. ಇದು ಸುಲಭವಾಗಿ ಪತ್ತೆ ಹಚ್ಚಬಹುದಾದ ಸರಳವಾದ ವಿಕೃತಿಯಾಗಿದೆ.

ಇನ್ನೊಂದೆಡೆ, ಮಹಾ ವಿವೇಕತೆಯ ಜ್ಞಾನವು ಅವರಿಗೆ ತಲುಪಿದ ನಂತರವೂ, ಮಾನವಕುಲದ ಪ್ರಗತಿ ಅಥವಾ ಪ್ರಬುದ್ಧತೆಯು ಮನುಷ್ಯರಲ್ಲಿ ಅನೇಕರಿಗೆ ಅನುಪಯುಕ್ತವಾಗಿದೆ ಎಂದು ಕುರ್‌ಆನ್ ಹೇಳುತ್ತದೆ. ಅದೇ ಮೂಲಪದವನ್ನೂ ಇಲ್ಲಿ ಬಳಸಲಾಗಿದೆ:

> ತಮ್ಮನ್ನು ನೆಟ್ಟಗಾಗಿಸಲು ಬೇಕಾದ ಜ್ಞಾನವೂ ವಿವೇಕವೂ ಅವರಿಗೆ ತಲುಪಿದೆ, ಆದರೆ ಅವರ ಪ್ರಬುದ್ಧತೆಯು *(ಬಾಲಿಘತುನ್)* ಅನುಪಯುಕ್ತವಾಗಿರುವಂತೆ ತೋರುತ್ತದೆ. ಆದ್ದರಿಂದ ಅವರನ್ನು ಅವರಷ್ಟಕ್ಕೆ ಬಿಟ್ಟುಬಿಡಿರಿ. (54:46)

ಹಾಗೆ ವನ್ಯಜೀವಿ ಸಂರಕ್ಷಣೆಯು ಅಲ್ಲಾಹನ ಸೃಷ್ಟಿಯ ಒಂದು ಅವಿಭಾಜ್ಯ ಅಂಗವಾಗಿದೆ. ಇದು ಮಾನವರಿಂದ ಪಾಲಿಸಲೇಬೇಕಾದ ಎಂದು ಆದೇಶವಾಗಿದೆ. 5:95 ರಲ್ಲಿ, *ಕಾಬತಿ* ಪದದ ಬಳಕೆಯು, ನಿರ್ಬಂಧಗಳ ಉಲ್ಲಂಘನೆಗೆ ಮತ್ತು ವನ್ಯಜೀವಿಗಳನ್ನು ನಿರ್ಬಂಧಿತ ಅವಧಿಯಲ್ಲಿ ಉದ್ದೇಶಪೂರ್ವಕವಾಗಿ ಕೊಂದ ಸಂದರ್ಭದಲ್ಲಿ ಪಾವತಿಸಬೇಕಾದ ದಂಡನೆಗೆ ಸಂಬಂಧಿಸಿದೆ. ಪ್ರಾಣಿಗಳು ತನ್ನ ಕಣಕಾಲುಗಳಿಂದ ದೊಡ್ಡ ಹೆಜ್ಜೆಗಳನ್ನು ಹಾಕುವುದರ ಮೂಲಕ ಅವುಗಳ ಪ್ರೌಢತೆಯನ್ನು ಪತ್ತೆಹಚ್ಚಬಹುದಾದರೆ ಮಾತ್ರ ಬೇಟೆಗೆ ಅವಕಾಶವಿದೆ.

5:2 ರಲ್ಲಿ ನಿರ್ಬಂಧಿತ ಅವಧಿಯಲ್ಲಿ ವನ್ಯಜೀವಿಯ ಬೇಟೆ ಬಗ್ಗೆ ಇರುವ ಅಲ್ಲಾಹನ ಆದೇಶಗಳನ್ನು ಉಲ್ಲಂಘಿಸದಿರಲು ಜನರಿಗೆ ಸಲಹೆ ನೀಡಲಾಗಿದೆ.

> ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಅನುಗ್ರಹ ಮತ್ತು ಸಂಪ್ರೀತಿಯನ್ನು ಅರಸುವಾಗ, ಅಲ್ಲಾಹನ ಆಜ್ಞೆಗಳನ್ನು, ಮತ್ತು ನಿರ್ಬಂಧಿತ ತಿಂಗಳಗಳನ್ನು, ಮತ್ತು ಮಾರ್ಗದರ್ಶಿ ಸೂತ್ರವನ್ನು, ಮತ್ತು ಸೂಚಕಗಳು ಮತ್ತು ವ್ಯವಸ್ಥೆಯಲ್ಲಿ ನಿರ್ಬಂಧಗೊಳಿಸಲ್ಪಟ್ಟ ಸಾಮರಸ್ಯವನ್ನು ಉಲ್ಲಂಘಿಸಬೇಡಿರಿ. ಮತ್ತು ನಿಮಗೆ ಅನುಮತಿ ನೀಡಲಾದಾಗ, ನೀವು ಬೇಟೆಯಾಡಬಹುದು. ನೀವು ಅತಿರೇಕವನ್ನೆಸಗಬೇಕಾಗಿ, ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು ಪಾಲಿಸುವುದರಿಂದ ನಿಮ್ಮನ್ನು ತಡೆಯುವ ಜನಾಂಗದ ದ್ವೇಷವು ನಿಮ್ಮನ್ನು ಕೆರಳಿಸದಿರಲಿ. ಮತ್ತು ನ್ಯಾಯದ ಕಾರ್ಯಗಳಲ್ಲಿ ಮತ್ತು ಪುಣ್ಯಕರ್ಮಗಳಲ್ಲಿ ಪರಸ್ಪರ ಸಹಕರಿಸಿರಿ, ಮತ್ತು ಪಾಪ ಕೃತ್ಯಗಳಲ್ಲಿ ಮತ್ತು ಆಕ್ರಮಣಶೀಲತೆಯಲ್ಲಿ ಪರಸ್ಪರ ಸಹಕರಿಸಬೇಡಿರಿ. ಅಲ್ಲಾಹನನ್ನು ಲಕ್ಷಿಸಿರಿ. ಅವನ ಶಿಕ್ಷೆಯು ಅತ್ಯಂತ ಕಠಿಣವಾಗಿದೆ. (5:2)

2 ನೇ ವಚನದ ಸಂದೇಶವನ್ನು 97 ರಲ್ಲಿಯೂ ವನ್ಯಜೀವಿಯ ಬೇಟೆಯ ನಿಬಂಧನೆಗಳ ಪ್ರಾಮುಖ್ಯತೆಯನ್ನು ಒತ್ತುನೀಡಲು ಪುನರಾವರ್ತಿಸಲಾಗಿದೆ. ನಿಷೇಧವನ್ನು ಎತ್ತಲಾದ ಮೇಲೆ ನೀವು ಬೇಟೆಯಾಡಬಹುದು.

5:95 ಸಂದೇಶವನ್ನು ಸುಲಭವಾಗಿ ಅರ್ಥೈಸಬಹುದು. ಉದಾಹರಣೆಗೆ, ಜಿಂಕೆಯ ಬೇಟೆಯ ಮೇಲೆ ನಿರ್ಬಂಧವು *(ಹುರುಮುನ್)* ಜಾರಿಯಲ್ಲಿರುವಾಗ ಯಾರಾದರೂ ಒಂದು ಜಿಂಕೆಯನ್ನು ಕೊಂದರೆ, ಅವರು ಒಂದು ಸಮಾನ ಜಾನುವಾರಿನ ದಂಡವನ್ನು ತೆರಬೇಕು. ನಿಷೇಧವನ್ನು ತೆಗೆದುಹಾಕುವ ತನಕ ನಿರ್ಬಂಧದ

ಪಾಲನೆಯನ್ನು ಖಚಿತಪಡಿಸಿಕೊಳ್ಳಲು ತಮ್ಮ ನಡುವಿನ ನೀತಿಸಮ್ಮತವಾದ ಎರಡು ಜನರು ಅಪರಾಧಿಯನ್ನು ವಿಚಾರಣೆ ಮಾಡಬೇಕು.

ಹದ್ಯನ್ ಬಾಲಿಘ-ಅಲ್-ಕಾಬತಿ ಎಂದರೆ ಅಕ್ಷರಶಃ *ಕಣಕಾಲಿನ ಪ್ರೌಢತೆಯನ್ನು ತೋರಿಸು* ಎಂದರ್ಥವಾಗಿದೆ. ಅಂದರೆ, ಕಣಕಾಲುಗಳ ಪ್ರಾಬಲ್ಯವನ್ನು ಗಮನಿಸುವ ಮೂಲಕ ಪ್ರಾಣಿಯ ನೈಸರ್ಗಿಕ ಚಲನೆಯ ಮಾದರಿಯ ಆಧಾರದ ಮೇಲೆ ಪ್ರಾಣಿಯ ಪ್ರೌಢತೆಯನ್ನು ಅವರು ನಿರ್ಧರಿಸಬೇಕು.

ಹಾಗೆಯೇ, ಬೇಟೆಗಾರನು ನಿರ್ಬಂಧಿತನಾಗಿರುವಾಗ *(ಹುರುಮುನ್)*, ಬೇಟೆಯಾಡುವ ನಿರ್ಬಂಧಗಳ ಸೂಚಕಗಳನ್ನು *(ಖಲಾಇದ)* ಉಲ್ಲಂಘಿಸಿರುವುದಕ್ಕೆ ಮತ್ತು ಅರಿತುಕೊಂಡು ಪ್ರಾಣಿಯನ್ನು ಕೊಂದಿರುವುದಕ್ಕೆ, ತನ್ನ ಕಾರ್ಯಗಳ ಪರಿಣಾಮಗಳನ್ನು ಅನುಭವಿಸಲು ಬೇಕಾಗಿ ತಕ್ಕ ದಂಡನೆಯನ್ನು ವಿಧಿಸುವುದೂ ಬಹಳ ಮುಖ್ಯವಾಗಿದೆ. ಆದ್ದರಿಂದ, ಕೊಲ್ಲಲ್ಪಟ್ಟ ಪ್ರಾಣಿಯ ಪ್ರೌಢತೆಯನ್ನು ಪತ್ತೆಹಚ್ಚುವುದು ಹಾಗು ಸಮಾನ ಜಾನುವಾರಿನ ಮೌಲ್ಯದ ಒಂದು ಸೂಕ್ತವಾದ ದಂಡನೆಯನ್ನು ವಿಧಿಸುವುವುದು ನೀತಿಸಮ್ಮತವಾದ ಜನರ (ಆಧುನಿಕ ಕಾಲದ ವನ್ಯಜೀವಿ ಸಂರಕ್ಷಣಾಧಿಕಾರಿಗಳ) ಕರ್ತವ್ಯವಾಗಿದೆ.

ಅಲ್ಲಾಹನನ್ನು ಲಕ್ಷಿಸುವ ಒಬ್ಬ ವ್ಯಕ್ತಿಯು ನಿಷೇಧಿತ ಅವಧಿಯಲ್ಲಿ ನಿಷೇಧಿತ ವನ್ಯಜೀವಿಯನ್ನು ತಪ್ಪಾಗಿ ಕೊಂದುಬಿಟ್ಟರೆ, ಅವನು ವನ್ಯಜೀವಿ ಕಚೇರಿಗೆ ತೆರಳಿ ತನ್ನ ತಪ್ಪನ್ನು ಒಪ್ಪಿಕೊಳ್ಳಬೇಕು ಮತ್ತು ಅವರ ವಿಚಾರಣೆಗೆ ವಿಧೇಯನಾಗಬೇಕು. ಎರಡು ಸೂಕ್ತ ವ್ಯಕ್ತಿಗಳು ಅವನನ್ನು ವಿಚಾರಣೆ ಮಾಡದಿದ್ದರೆ, ಅವನು (ನಿಜವಾಗಿಯೂ ಅಲ್ಲಾಹನಲ್ಲಿ ವಿಶ್ವಾಸವಿಡುವವನಾಗಿದ್ದರೆ) ಸ್ವಯಂಪ್ರೇರಣೆಯಿಂದ ಕೊಲ್ಲಲ್ಪಟ್ಟ ಜಾನುವಾರಿನ ಸಮಾನ ಮೌಲ್ಯದ ಆಹಾರವನ್ನು ಬಡವರಿಗೆ ನೀಡಬೇಕಾಗಿದೆ ಅಥವಾ ಪ್ರಾಣಿಗಳು ಪಕ್ವತೆಯನ್ನು ತಲುಪುವ ವರೆಗೆ ಬೇಟೆಯಾಡದೆ ತನ್ನನ್ನು ಸ್ವಯಂ-ಶಿಸ್ತಿಗೆ ಅಧೀನನಾಗಿಸುವುದು ಅವನ ಕರ್ತವ್ಯವಾಗಿದೆ.

ಕಾಬಾ ಪದವು 5:97 ರಲ್ಲೂ ಕಂಡುಬರುತ್ತದೆ. ವಿಷಯವು 5:2 ರ ತದ್ರೂಪವಾಗಿದೆ.

> ಮಾನವ ಸಮುದಾಯವು ಎತ್ತಿಹಿಡಿಯಬೇಕಾದ ಒಂದು ನಿರ್ಬಂಧಿತ ವ್ಯವಸ್ಥೆಯನ್ನಾಗಿ *(ಬೈತಲ್ ಹರಾಮ)* ಕಣಕಾಲನ್ನು *(ಕಾಬತ)* ಮತ್ತು ನಿರ್ಬಂಧಿತ ತಿಂಗಳನ್ನು *(ಶಹ್ರರಲ್ ಹರಾಮ)*, ಮತ್ತು ಮಾರ್ಗದರ್ಶಿ ಸೂತ್ರಗಳನ್ನು *(ಹದ್ಯ)*, ಮತ್ತು ಸೂಚಕಗಳನ್ನು *(ಖಲಾಇದ)* ಅಲ್ಲಾಹನು ಸ್ಥಾಪಿಸಿದ್ದಾನೆ. ಏಕೆಂದರೆ, ಆಕಾಶಗಳಲ್ಲಿರುವುದನ್ನು ಮತ್ತು ಭೂಮಿಯಲ್ಲಿರುವುದನ್ನೆಲ್ಲಾ ಅಲ್ಲಾಹನು ಅರಿತಿರುತ್ತಾನೆಂದೂ, ಅವನಿಗೆ ಎಲ್ಲಾ ವಸ್ತುಗಳ ಪರಿಜ್ಞಾನವಿರುವುದೆಂದೂ ನೀವು ತಿಳಿದುಕೊಳ್ಳಲಿಕ್ಕಾಗಿರುತ್ತದೆ. (5:97)

ಕಾಬಾ ಎಂಬುವುದು ಕಲ್ಲಿನ ಕಟ್ಟಡವೆಂದೂ, *ಬೈತ* ಎಂದರೆ ಮಕ್ಕಾದಲ್ಲಿರುವ ಮಸೀದಿ ಎಂದೂ ಪಟ್ಟುಹಿಡಿಯುವಂತಹ, ತನ್ನ ಮನಸ್ಸುಗಳ ಸಂಕೋಲೆಯ ಸರಪಣಿಯನ್ನು ಕಳಚಲು ನಿರಾಕರಿಸುವ ಕೆಲವು ವಿಮರ್ಶಕರಿಗೆ, ಮೇಲಿನ ವಚನವು ಅವೈಚಾರಿಕವಾಗಿ ಕಾಣಬಹುದು. 22:36 ರಲ್ಲಿ ಅಲ್ಲಾಹನ ಆದೇಶಗಳ

ಭಾಗವಾಗಿರುವ ಪ್ರಕಾರ, ಮಾನವಕುಲಕ್ಕೆ ಲಾಭಕರವಾದ ವನ್ಯಜೀವಿ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ಅಲಕ್ಷಿಸಿದ್ದಾರೆ. ಈ ವಚನದಲ್ಲಿನ *ಅಲ್ ಬುದ್ನ* (ಇದು ಬದುಗಳಿಗೆ ಬಳಸಿದ ಅದೇ ಮೂಲಪದದಿಂದ ಪಡೆದಿರುವ) ಎಂಬ ಪದಕ್ಕೆ ವನ್ಯಜೀವಿ ಎಂದರ್ಥವಾಗಿದೆ ಹಾಗೂ ಇದು ಎಲ್ಲಾ ಅನುವಾದಕರಿಂದ ಕಡೆಗಣಿಸಲಾದ ಅತ್ಯಂತ ಪ್ರಮುಖ ವಿಷಯವಾಗಿದೆ. ಅನುವಾದಕರು ತಮ್ಮ ತಿಳುವಳಿಕೆಯಲ್ಲಿ ವಿಭಿನ್ನರಾಗಿರುತ್ತಾರೆ, ಮತ್ತು ಅವರಲ್ಲಿ ಕೆಲವರು ಇದಕ್ಕೆ ತಪ್ಪಾಗಿ *ಒಂದು ಒಂಟೆ* ಎಂಬ ಅರ್ಥವನ್ನು ಕೊಟ್ಟಿದ್ದಾರೆ. ಅವರು ಈಗಾಗಲೇ *ಜಮಾಲ್, ಇಬಿಲ್, ಬೈರ್, ರಿಕಾಬ್, ಹೀಮ್, ಇಶಾರ್* ಎಂಬ ಪದಗಳಿಗೆ 'ಒಂಟೆ' ಎಂದೇ ಅರ್ಥವನ್ನು ನೀಡಿ ತಮ್ಮನ್ನು ಗೊಂದಲಕ್ಕೊಳಪಡಿಸಿದ್ದಾರೆ. ಹಾಗೆ ಹಲವು ಪದಗಳು ಒಂಟೆ ಎಂದಾಗುವಾಗ, ಅವರು 22:27 ರಲ್ಲಿನ *ಧಾಮಿರ್* ಎಂಬ ಪದದ ಅರ್ಥಕ್ಕೆ ಸ್ವಲ್ಪ ಬದಲಾವಣೆ ಮಾಡಿ, ಅದಕ್ಕೆ 'ಸಣಕಲಾದ ಒಂಟೆ' ಎಂಬ ಅರ್ಥವನ್ನು ನೀಡಿದರು. ಕುರ್‌ಆನಿನಲ್ಲಿನ ಅಲ್ಲಾಹನ ಅರಬೀ ಪದಗಳು ಧಾರ್ಮಿಕರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗದ ಪ್ರತಿ ಬಾರಿಯೂ ಅವರು ಅನುವಾದಕರಿಗೆ ಮತ್ತು ಅವರ ವಿದ್ವಾಂಸರಿಗೆ, ಅದು 'ಒಂದು ಒಂಟೆ' ಎಂದೆನ್ನುತ್ತಾರೆಂದು ಅನಿಸುತ್ತದೆ. ವಿಮರ್ಶಕರು, ಬಹುಶಃ ತಮ್ಮ ಅಹಂಕಾರದ ಅಥವಾ ಪೂರ್ವಯೋಜಿತ ಕಲ್ಪನೆಗಳ ಕಾರಣವಾಗಿ, ಒಂದು ಪದವು ಪರಸ್ಪರ ಸಂಬಂಧವಿಲ್ಲದ ಅನೇಕ ಅರ್ಥಗಳನ್ನು ನೀಡಬಹುದು ಎಂದು ಪಟ್ಟು ಹಿಡಿಯುತ್ತಾರೆ – ಅದೇ ಸಮಯದಲ್ಲಿ ಅರಬರು, ತಮ್ಮ ಮೂರ್ಖತನದ ಅಥವಾ ಕಪಟತನದ ಕಾರಣವಾಗಿ, ಅನೇಕ ಪದಗಳು ಒಂದೇ ಅರ್ಥವನ್ನು ನೀಡಬಹುದು ಎಂದು ಹಟ ಹಿಡಿಯುತ್ತಾರೆ. ಇದಾಗಿದೆ ಅರಬೀ ಧರ್ಮದ ಅರಬೀ ಸಂದಿಗ್ಧತೆ.

5:95 ಮತ್ತು 5:97 ರಲ್ಲಿರುವ *ಕಾಬಾ* ಎಂಬ ಪದವು ಕಾಡು ಪ್ರಾಣಿಗಳ ಕಣಕಾಲಿಗೆ ಸಂಬಂಧಿಸಿದೆ ಹಾಗೂ ಈ ವಿಷಯವು 5:94 ರಿಂದ ಪ್ರಾರಂಭವಾಗುತ್ತದೆ. ಪ್ರಾಣಿಗಳ ಕಣಕಾಲುಗಳನ್ನು ಗಮನಿಸುವ ಮೂಲಕ, ಅವುಗಳು ಪಕ್ವತೆಯನ್ನು ತಲುಪುವವರೆಗೂ (ಅವುಗಳು ಪಕ್ವತೆಯನ್ನು ತಲುಪಿದ ನಂತರ ಆ ಪ್ರಾಣಿಗಳು ಅದೇ ಪ್ರದೇಶದಲ್ಲಿ ನೆಲೆಗೊಳ್ಳುವುದಿಲ್ಲ), ಮಾನವರು ಈ ಪ್ರಾಣಿಗಳ ಬೇಟೆಯನ್ನು ಮಾಡಬಾರದು ಎಂದು ಸೂಚಿಸುವ ಸಲುವಾಗಿ ಈ *ಕಾಬಾ* ಎಂಬ ಪದವು ಮತ್ತೆ ಇಲ್ಲಿ ಬಳಸಲಾಗಿದೆ, ಈ ಕಾನೂನು ಅಲ್ಲಾಹನ ವ್ಯವಸ್ಥೆಯಲ್ಲಿ ಸಮ್ಮತಿಸಲಾಗಿದೆ; ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ಮತ್ತು ನಿರ್ದಿಷ್ಟ ತಿಂಗಳಲ್ಲಿ ಬೇಟೆಯಾಡುವುದನ್ನು ನಿರ್ಬಂಧಿಸುವ ಸೂಚಕಗಳನ್ನು ಗಮನಿಸಬೇಕಾಗಿದೆ. ಪ್ರಾಣಿಗಳ ದಾಪುಗಾಲು ಅಥವಾ ಚಲಿಸುವ ಮಾದರಿಯ ಮೇಲೆ ತಜ್ಞರು ಅವುಗಳ ಪಕ್ವತೆಯನ್ನು ಗುರುತಿಸಿಕೊಳ್ಳುತ್ತಾರೆ.

> ಮತ್ತು ವನ್ಯಜೀವವನ್ನು *(ಬುದ್ನ)* ನಿಮ್ಮ ಸ್ವಂತ ಒಳ್ಳೆಯದಕ್ಕಾಗಿ ಅಲ್ಲಾಹನ ಆದೇಶಗಳಿಂದ *(ಶಆಇರಿಲ್ಲಾಹ್)* ರೂಪಿಸಲಾಗಿದೆ. ನೀವು ಅದರ ಮೇಲೆ ದೃಷ್ಟಿಯನ್ನು ನೆಟ್ಟಾಗ ಮತ್ತು ಅದು ದೂರದಲ್ಲಿ ಬಿದ್ದಾಗ ಅದರ ಮೇಲೆ ಅಲ್ಲಾಹನ ಹೆಸರನ್ನು ಸ್ಮರಿಸಿರಿ. ಹಾಗೆ ನೀವು ಅದರಿಂದ ತಿನ್ನಿರಿ ಮತ್ತು ಸ್ವಯಂಪ್ರೇರಣೆಯಿಂದ ಜನರಿಗೆ ನೀಡಿರಿ ಮತ್ತು ಅಪೇಕ್ಷಿಸುವವರಿಗೂ ನೀಡಿರಿ. ನೀವು ಕೃತಜ್ಞರಾಗಲಿಕ್ಕಾಗಿ ನಾವು ಈ ರೀತಿಯಲ್ಲಿ ನಿಮಗಾಗಿ ಅವುಗಳನ್ನು ಅನುರೂಪಗೊಳಿಸಿದ್ದೇವೆ. (22:36)

ವಿಷಯದ ತಿರುಳು ಏನೆಂದರೆ ವನ್ಯಜೀವವನ್ನು ಅದರ ಜೀವನಚಕ್ರದ ಪ್ರಕಾರ ಸಂರಕ್ಷಿಸಬೇಕು ಮತ್ತು ಮೇಲುಸ್ತುವರಿ ನಡೆಸಬೇಕು. ಜನರು ನಿರ್ಬಂಧಿತ ಅವಧಿಯಲ್ಲಿ ವನ್ಯಜೀವಿಗಳನ್ನು ಬೇಟೆಯಾಡಬಾರದು, ಪ್ರತ್ಯೇಕವಾಗಿ ಅದೃಷ್ಯದಲ್ಲಿ ವಿಶ್ವಾಸವಿರಿಸುವವರು. ಒಂದು ವೇಳೆ, ಯಾರಾದರೂ ಆದೇಶವನ್ನು ಉಲ್ಲಂಘಿಸಿದರೆ, 5:95 ರಲ್ಲಿ ನಿರ್ದೇಶಿಸಿದಂತೆ ಅವನು ಸ್ವಯಂಪ್ರೇರಣೆಯಿಂದ ತನ್ನ ತಪ್ಪಿಗೆ ಪ್ರಾಯಶ್ಚಿತ ಮಾಡಿಕೊಳ್ಳಬೇಕು. ವನ್ಯಬೇಟೆಯು ಕಾಣದ ದೇವರನ್ನು ಭಯಪಡುವವರಿಗಿರುವ ಒಂದು ನಿಜವಾದ ಪರೀಕ್ಷೆಯಾಗಿದೆ.

> ಓ ಸತ್ಯವಿಶ್ವಾಸಿಗಳೇ, ನಿಮ್ಮಲ್ಲಿ ಯಾರು ಪರೋಕ್ಷವಾಗಿ ಅವನನ್ನು ಭಯಪಡುತ್ತಾರೆಂದು ನೋಡಲಿಕ್ಕಾಗಿ, ನಿಮ್ಮ ಕೈಗಳಿಗೆ ಮತ್ತು ಸಾಧನಗಳಿಗೆ ಎಟಕುವಂತಹ ಬೇಟೆಯ ಮೂಲಕ ನಿಮ್ಮನ್ನು ಅಲ್ಲಾಹನು ಪರೀಕ್ಷಿಸುವನು. ಇದರ (ಈ ಎಚ್ಚರಿಕೆಯ) ನಂತರವೂ ಯಾರು ಮೇರೆಯನ್ನು ಮೀರುತ್ತಾನೆ, ಅವನಿಗೆ ವೇದನಾಯುಕ್ತ ಶಿಕ್ಷೆಯು ಕಾದಿದೆ. (5:94)

ವನ್ಯಜೀವಿಗಳನ್ನು ಸಂರಕ್ಷಿಸಬೇಕು ಮತ್ತು ಅಲ್ಲಾಹನ ವ್ಯವಸ್ಥೆಯ ಪ್ರಕಾರ ಜೀವಿಸಲು ಅವಕಾಶ ನೀಡಬೇಕು. ಪ್ರಾಣಿಗಳು ತಮ್ಮ ಸ್ವಂತ ಕಾಲುಗಳ (ಕಣಕಾಲು) ಮೇಲೆ ಬದುಕಬಲ್ಲ ಪ್ರೌಢತೆಯನ್ನು ಸೂಚಿಸುವವರಗೆ ನಾವು ಅವುಗಳನ್ನು ಕೊಲ್ಲಬಾರದು. ಅಷ್ಟೆ.

ಧಾರ್ಮಿಕರು ಕುರ್‌ಆನಿನಲ್ಲಿ ವನ್ಯಜೀವಿ ಸಂರಕ್ಷಣೆಯ ಬಗ್ಗೆ ಇರುವ ಸಂದೇಶವನ್ನು ಮುಚ್ಚಿಹಾಕಿದರು ಮತ್ತು ತಾವು *ಇಹ್ರಾಮ್* ಎಂದು ಕರೆಯುವ ಎರಡು ತುಂಡು ಬಟ್ಟೆಯನ್ನು ಧರಿಸುವಂತೆ ಜನರನ್ನು ವಂಚನೆಗೊಳಗಾಗಿಸಿದರು. ಪ್ರಾಣಿಯ ಪಾದವನ್ನು ಅಲ್ಲಾಹನ ಮನೆ ಎಂದು ಜನರನ್ನು ವಿಶ್ವಸಿಸಲಾಯಿತು ಮತ್ತು ಒಂದು ಮೂಲೆಯಲ್ಲಿ ಅಳವಡಿಸಲಾದ ಸಣ್ಣ ಕಪ್ಪು ಕಲ್ಲಿನ ಜೊತೆಗೆ, ಕಪ್ಪು ಬಟ್ಟೆಯನ್ನು ಹೊದಿಸಲಾದ, ಕಪ್ಪು ಬಂಡೆಗಳಿಂದ ನಿರ್ಮಿಸಲ್ಪಟ್ಟ ಒಂದು ಘನಾಕೃತಿಯನ್ನು *ಬೈತುಲ್ಲಾಹ್* ಎಂದು ಅವರಿಂದ ಕರೆಯಿಸಲಾಯಿತು (ಈ ಪದವು ಕುರ್‌ಆನಿನಲ್ಲೆಲ್ಲಿಯೂ ಕಂಡುಬರುವುದಿಲ್ಲ). 5:95 ರನ್ನು ಅವರಿಂದ ಹೀಗೆ ಓದಿಸಲಾಗಿದೆ:

> ಓ ಸತ್ಯವಿಶ್ವಾಸಿಗಳೇ, ಇಹ್ರಾಮಿನ ಸ್ಥಿತಿಯಲ್ಲಿ ಬೇಟೆಪ್ರಾಣಿಗಳನ್ನು ಕೊಲ್ಲಬೇಡಿರಿ. ನಿಮ್ಮಲ್ಲಾರಾದರೂ ಉದ್ದೇಶಪೂರ್ವಕವಾಗಿ ಹೀಗೆ ಮಾಡಿಬಿಟ್ಟರೆ, ಅವನು ತಾನು ಮಾಡಿದ ಕರ್ಮದ ಸಜೆಯನ್ನು ಅನುಭವಿಸುವಂತಾಗಲು ನಿಮ್ಮಲ್ಲಿನ ಇಬ್ಬರು ನ್ಯಾಯಶಾಲಿಗಳು ತೀರ್ಮಾನಿಸುವಂತೆ ಅವನು ಕೊಂದ ಪ್ರಾಣಿಗೆ ಸಮಾನವಾದ ಒಂದು ಪ್ರಾಣಿವನ್ನು ಕಾಣಿಕೆಯಾಗಿ ಕೊಡಬೇಕಾಗುವುದು ಮತ್ತು ಈ ಕಾಣಿಕೆಯು ಅಲ್ಲಾಹನ ಮನೆಗೆ ತಲುಪಿಸಲ್ಪಡುವುದು.

ನಾನು ಇನ್ನೊಮ್ಮೆ ಪುನರಾವರ್ತಿಸುತ್ತಿದ್ದೇನೆ, ಪ್ರಾಣಿಯನ್ನು ಕಾಣಿಕೆಯಾಗಿ ಬಲಿಕೊಡುವುದು ಪಾಪಕೃತ್ಯವಾಗಿದೆ. ಇಂತಹ ಧಾರ್ಮಿಕ ವಿಧಿಗಳನ್ನು ಅಲ್ಲಾಹನ ಮೇಲೆ ಹೊರಿಸುವುದು ದೊಡ್ಡ

ದೈವದೂಷಣೆಯಾಗಿದೆ. ಅಂತೂ ಅಲ್ಲಾಹನ ಶತ್ರುಗಳು, ಕುರ್‌ಆನಿನಲ್ಲಿನ ಅವನ ಪದಗಳನ್ನು ವಿರೂಪಗೊಳಿಸಿ ಇಂತಹ ದುಷ್ಟ ಕೃತ್ಯಗಳನ್ನು ಮಾಡುವಂತೆ ಮನುಕುಲವನ್ನು ಯಶಸ್ವಿಯಾಗಿ ತಿರುಗಿಸಿಬಿಟ್ಟರು. ಈ ಅನಾಚಾರಿ ಪ್ರಾಚೀನ ವಿಧಿಯ ಗಂಭೀರತೆಯನ್ನು ಸೂಚಿಸಲು ಮತ್ತೆ ಈ ವಚನವನ್ನು ನಾನು ಎತ್ತಿತೋರಿಸುತ್ತಿದ್ದೇನೆ:

> ಅವರು ಅಲ್ಲಾಹನಿಗೆ ಸ್ವತಃ ಅವನೇ ಒದಗಿಸಿದ ಬೆಳೆಗಳ ಮತ್ತು ಜಾನುವಾರುಗಳ ಒಂದು ಪಾಲನ್ನು ಮೀಸಲಿಡುತ್ತಾರೆ ಹಾಗೂ ಹೇಳುತ್ತಾರೆ "ಇದು ಅಲ್ಲಾಹನಿಗೆ". ಅವರದೇ ದಾವೆಯ ಪ್ರಕಾರ ಅವರು ಹೀಗೂ ಹೇಳುತ್ತಾರೆ "ಇದು ನಮ್ಮ ಮೂರ್ತಿಗಳಿಗೆ". ಆದಾಗ್ಯೂ, ಅವರು ತಮ್ಮ ಮೂರ್ತಿಗಳಿಗೆ ಮೀಸಲಿಟ್ಟವುಗಳು ಅಲ್ಲಾಹನನ್ನು ತಲುಪುವುದಿಲ್ಲ, ಹಾಗೂ ಅಲ್ಲಾಹನಿಗಾಗಿ ಮೀಸಲಿಟ್ಟವುಗಳು ಅವರ ಮೂರ್ತಿಗಳನ್ನು ತಲುಪಿಬಿಡುತ್ತವೆ. ಅವರ ಇಂತಹ ತೀರ್ಮಾನವು ಪಾಪವಾಗಿದೆ. (6:136)

ಅಲ್ಲಾಹನಿಗೆ ನಿಯೋಜಿಸಲಾದ ಯಾವುದೇ ರೀತಿಯ ಆಹಾರವು ಎಂದಿಗೂ ಅವನನ್ನು ತಲುಪುವುದಿಲ್ಲ. 9:95 ರಲ್ಲಿನ *ಹದ್ಯನ್ ಬಾಲಿಘ-ಲ್-ಕಾಬತಿ* ಎಂಬ ಸರಳ ವಾಕ್ಯದ ಹುಚ್ಚಾಬಟ್ಟೆಯಾದ ದುರುಪಯೋಗವು, ಲಕ್ಷಾಂತರ ಜನರು ಪ್ರತಿ ವರ್ಷವೂ ಕೋಟ್ಯಾಂತರ ಜಾನುವಾರುಗಳನ್ನು ಬಲಿಕೊಡುವ ಅನಗತ್ಯವಾದ ಹಾಗೂ ಹೇಸಿಗೆ ಪಡಿಸುವಂತಹ ಕ್ರಿಯೆಯನ್ನು ಶ್ರದ್ಧಾಪೂರ್ವಕವಾಗಿ ನಡೆಸುತ್ತಾ ಬರಲು ಕಾರಣವಾಗಿದೆ. ಮೇಲಿನ ವಚನದಲ್ಲಿ ಖಂಡಿಸಲಾಗಿರುವುದು ಇದೇ ಆಗಿದೆ. ಬಲಿ ಅರ್ಪಣೆಯನ್ನು ಶೈತಾನನ ಕ್ರಿಯೆಯೆಂದು ಅಲ್ಲಾಹನು ಕರೆದಿದ್ದಾನೆ. ಅವರು ದುಷ್ಟರಾಗಿದ್ದಾರೆ.

ಪ್ರತಿ ವರ್ಷವೂ, ಮಕ್ಕಾದಲ್ಲಿ ತಮ್ಮ ತೀರ್ಥಯಾತ್ರೆಯ ಸಮಯದಲ್ಲಿ ಸುಮಾರು ಎರಡು ಮಿಲಿಯನ್ ಜನರು ಜಾನುವಾರುಗಳನ್ನು ವಧಿಸುತ್ತಾರೆ. ಅರಬೀ ಧರ್ಮದ ಭಕ್ತರು ಸಹ ಅದೇ ದಿನ ಪ್ರಪಂಚದಾದ್ಯಂತ ಹಾಗೆಯೇ ಪ್ರಾಣಿಗಳನ್ನು ಬಲಿನೀಡುತ್ತಾರೆ. ಅವರು ಆ ದಿನವನ್ನು *ಈದುಲ್ ಅಧ್ಹ*[80] ಎಂದು ಕರೆಯುತ್ತಾರೆ.

ಜಾನುವಾರುಗಳು ಮತ್ತು ವನ್ಯಜೀವಿಗಳು ಅಲ್ಲಾಹನ ಅನುಗ್ರಹಗಳಾಗಿವೆ. ಜನರು ದಾನವಾಗಿ ಮಾಂಸವನ್ನು ಇತರರಿಗೆ ಉಚಿತವಾಗಿ ನೀಡಿ ಸ್ವಯಂ-ತ್ಯಾಗವನ್ನು ಅಭ್ಯಸಿಸಬೇಕು, ಅದಲ್ಲದೆ ಅಲ್ಲಾಹನಿಗೆ ಅವುಗಳನ್ನು ಬಲಿ ಅರ್ಪಿಸುವುದಲ್ಲ. ಅವನಿಗೆ ಪ್ರಾಣಿಗಳ ರಕ್ತದ ಅಥವಾ ಮಾಂಸದ ಅವಶ್ಯಕತೆಯೇ ಇಲ್ಲ - ಆದರೆ ಅಲ್ಲಾಹನು ಅವರಿಗೆ ನೀಡಿದ ಅನುಗ್ರಹದಿಂದ ಒಂದು ಪಾಲನ್ನು ಇತರರಿಗೆ ನೀಡುವವನ ಸದ್ಗುಣಶೀಲ ಕರ್ಮಗಳ ಕ್ರಿಯೆಯು ಅವನನ್ನು ತಲುಪುತ್ತದೆ. ವನ್ಯಜೀವಿಗಳ ಮಾಂಸ ತಿನ್ನುವ ಸೌಲಭ್ಯ ಹೊಂದಿರುವರು ಸಹ – ತಾವು ಗಳಿಸಿರುವ ಕೊಡುಗೆಯ ಒಂದು ಭಾಗವನ್ನು ದಾನವಾಗಿ ಇತರ ಜನರಿಗೆ ನೀಡಬೇಕು.

> ನಾವು ಪ್ರತಿಯೊಂದು ಸಮುದಾಯಕ್ಕೂ ತಮ್ಮದೇ ಆದ ಸ್ವಯಂ-ತ್ಯಾಗದ ರೀತಿಯನ್ನು ಸ್ಥಾಪಿಸಿದ್ದೇವೆ, ಇದು ಅವರಿಗೆ ದಯಪಾಲಿಸಿರುವ ಜಾನುವಾರುಗಳ ಮೇಲೆ ಅಲ್ಲಾಹನ ನಾಮವನ್ನು ಸ್ಮರಿಸಲಿಕ್ಕಾಗಿದೆ. ನಿಮ್ಮ ದೇವನಂತು ಏಕಮಾತ್ರ ದೇವನಾಗಿದ್ದಾನೆ, ಆದುದರಿಂದ ನೀವು ಅವನಿಗೆ

[80] ಇದು ಮಕ್ಕಾದಲ್ಲಿರುವ ಕಲ್ಲಿನ ವಿಗ್ರಹಕ್ಕಿರುವ ತೀರ್ಥಯಾತ್ರೆಯ ವಾರ್ಷಿಕ ಉತ್ಸವವಾಗಿದೆ.

ಶಾಂತಿವಂತರಾಗಿರಿ ಮತ್ತು ಅಲ್ಲಾಹನನ್ನು ಸ್ಮರಿಸಿದೊಡನೆ ತಮ್ಮ ಹೃದಯಗಳು ದೀನಗೊಳ್ಳುವಂತಹ ಆಜ್ಞಾಪಾಲಕರಿಗೆ ಸುವಾರ್ತೆಯನ್ನು ನೀಡಿರಿ. ಅವರ ಮೇಲೆ ಯಾವ ಸಂಕಷ್ಟಗಳು ಬಂದರೂ ತಾಳ್ಮೆ ವಹಿಸುತ್ತಾರೆ, ತಮ್ಮ ಬದ್ಧತೆಗಳನ್ನು ಎತ್ತಿಹಿಡಿಯುತ್ತಾರೆ ಮತ್ತು ನಾವು ಅವರಿಗೆ ನೀಡಿದ ಅನುಗ್ರಹಗಳಿಂದ ವ್ಯಯಿಸುತ್ತಾರೆ. ಮತ್ತು ವನ್ಯಜೀವವನ್ನು *(ಬುದ್ನ)* ನಿಮ್ಮ ಸ್ವಂತ ಒಳ್ಳೆಯದಕ್ಕಾಗಿ ಅಲ್ಲಾಹನ ಆದೇಶಗಳಿಂದ *(ಶಆಇರಿಲ್ಲಾಹ್)* ರೂಪಿಸಲಾಗಿದೆ. ನೀವು ಅದರ ಮೇಲೆ ದೃಷ್ಟಿಯನ್ನು ನೆಟ್ಟಾಗ ಮತ್ತು ಅದು ದೂರದಲ್ಲಿ ಬಿದ್ದಾಗ ಅದರ ಮೇಲೆ ಅಲ್ಲಾಹನ ಹೆಸರನ್ನು ಸ್ಮರಿಸಿರಿ. ಹಾಗೆ ನೀವು ಅದರಿಂದ ತಿನ್ನಿರಿ ಮತ್ತು ಸ್ವಯಂಪ್ರೇರಣೆಯಿಂದ ಜನರಿಗೆ ನೀಡಿರಿ ಮತ್ತು ಅಪೇಕ್ಷಿಸುವವರಿಗೂ ನೀಡಿರಿ. ನೀವು ಕೃತಜ್ಞರಾಗಲಿಕ್ಕಾಗಿ ನಾವು ಈ ರೀತಿಯಲ್ಲಿ ನಿಮಗಾಗಿ ಅವುಗಳನ್ನು ಅನುರೂಪಗೊಳಿಸಿದ್ದೇವೆ. ಮಾಂಸ ಮತ್ತು ರಕ್ತವು ಎಂದಿಗೂ ಅವನನ್ನು ತಲುಪುವುದಿಲ್ಲ, ಆದರೆ (ಆದೇಶಗಳ) ಪಾಲನೆಯು ಅವನನ್ನು ತಲುಪುತ್ತದೆ..... (22:34-37)

ಅಲ್ಲಾಹನ ಕೊಡುಗೆಗಳನ್ನು ತಿನ್ನಿರಿ ಮತ್ತು ಇತರ ಜನರಿಗೆ ನೀಡಿರಿ – ಅಲ್ಲದೆ ಅಲ್ಲಾಹನಿಗಲ್ಲ. ಇತರಿಗೆ ನೀಡುವುದು ನಮ್ಮ ಪುಣ್ಯ ಕ್ರಿಯೆಯಾಗಿದೆ. ನಾವು ಎಷ್ಟು ದಾನ ಮಾಡಬೇಕು ಎಂಬುವುದಕ್ಕೆ ಯಾವುದೇ ನಿರ್ದಿಷ್ಟ ನಿಯಮಗಳಿಲ್ಲ. ದಾನವನ್ನು ನೀಡುವುದನ್ನು ಪ್ರೇರೇಪಿಸಲಾಗಿದೆ, ಅದು ನಮ್ಮದೇ ಒಳಿತಿಗಾಗಿದೆ ಮತ್ತು ಅದರ ಪ್ರಮಾಣವನ್ನು ನಾವೇ ನಿರ್ಧರಿಸಬೇಕಾಗಿದೆ ಹಾಗೂ ನಾವು ಜಿಪುಣತನವನ್ನು ತೋರಿಸಬಾರದು. ಅದು ಆತ್ಮ-ತ್ಯಾಗದ ಕಾರ್ಯವಾಗಿದೆ. ನಾವು ಬಡವರಾಗಿದ್ದೇವೆ ಆದರೆ ಅವನು ಶ್ರೀಮಂತನಾಗಿದ್ದಾನೆಂದು ಅಲ್ಲಾಹನು ಹೇಳುತ್ತಾನೆ. ನಾವು 6:136 ರಲ್ಲಿ ಕಂಡಂತೆ ಪ್ರಾಣಿಬಲಿಯು ಶೈತಾನನ ಕೃತಿಯಾಗಿದೆ. ವಿವಿಧ ದೇಶಗಳ ಜನರು ವಿವಿಧ ರೀತಿಯ ಜಾನುವಾರುಗಳನ್ನು ಸಾಕುತ್ತಾರೆ ಮತ್ತು ಸಮೃದ್ಧಿಯ ಅಥವಾ ಸಂಕಷ್ಟದ ಎರಡೂ ಸಮಯದಲ್ಲಿ ಉತ್ತಮ ಕಾರ್ಯಗಳನ್ನು ಮಾಡುವುದರ ಸಲುವಾಗಿ ಉದಾರ ಮನೋಭಾವುಳ್ಳವರಾಗಲು ತಮ್ಮನ್ನು ಬದ್ಧರಾಗಿಸುವುದು ಅವರ ಕರ್ತವ್ಯವಾಗಿದೆ.

ಇಂದು ಸೌದಿ ಅರೇಬಿಯಾವು, ಯಾತ್ರಿಕರ ಅಗತ್ಯಗಳನ್ನು ಪೂರೈಸುವುದಕ್ಕಾಗಿ, ಹೋಟೆಲುಗಳು, ಫಲಹಾರ ಗೃಹಗಳು ಮತ್ತು ಶಾಪಿಂಗ್ ಕಾಂಪ್ಲೆಕ್ಸುಗಳನ್ನು ನಿರ್ಮಿಸಲು ತನ್ನ ತೈಲ ಸಂಪತ್ತನ್ನು ಬಳಸುತ್ತದೆ. ಸುಮಾರು ನೂರು ವರ್ಷಗಳ ಹಿಂದೆ, ಬಲು ದೂರದಿಂದ ಭೂಮಾರ್ಗವಾಗಿ ಬರುತ್ತಿದ್ದ ಯಾತ್ರಿಕರು ಆಹಾರಕ್ಕಾಗಿ ವನ್ಯಜೀವಿಯನ್ನು ಅವಲಂಬಿಸದೆ ತಮ್ಮ 'ತೀರ್ಥಯಾತ್ರೆ'ಯನ್ನು ಕೈಗೊಳ್ಳಲು ಸಾಧ್ಯವಿರಲಿಲ್ಲ. ಈ ಸಮಸ್ಯೆಯನ್ನು ಅರಿತುಕೊಂಡ ಧಾರ್ಮಿಕರು - ಮಕ್ಕಾದಲ್ಲಿ ನಿಂತಿರುವ 'ಪವಿತ್ರ ಮಸೀದಿ'ಯ ಸಮೀಪದ ಪ್ರದೇಶದಲ್ಲಿ ಮಾತ್ರ ಬೇಟೆಯಾಡಬಾರದು – ಎಂದು ಹೇಳುತ್ತಾ ಒಂದು ಸರಳ ಪರಿಹಾರವನ್ನು ಒದಗಿಸಿದರು.

ತಮ್ಮ 'ಪವಿತ್ರ ಮಸೀದಿ'ಯ ಸುತ್ತಲೂ ಹಲವು ಕಿಲೋಮೀಟರುಗಳ ವಿಸ್ತಾರದಲ್ಲಿ ಗಗನಚುಂಬಿಗಳಾದ ಕಟ್ಟಡಗಳು ತಲೆಯೆತ್ತಿ ನಿಂತಿರುವಾಗ, ಮರುಭೂಮಿ ಮಧ್ಯದಲ್ಲಿ ಬಹುಶಃ ಸುಮಾರು ಐವತ್ತಕ್ಕಿಂತಲೂ ಹೆಚ್ಚು ಕಿಲೋಮೀಟರುಗಳ ದೂರದಲ್ಲಿಯೂ ಬೇಟೆಪ್ರಾಣಿಗಳು ಕಂಡು ಬರುವುದಿಲ್ಲ. ಅವರು ಏನೇ ಕಾರಣವನ್ನು

ನೀಡಲಿ, ಇಂದಿನ ಕಾಲದಲ್ಲಿ ಮಕ್ಕಾದಲ್ಲಿರುವ ತಮ್ಮ ದೇವರು ಅಥವಾ ದೇವರುಗಳಿಗೆ ಗೌರವಾರ್ಪಣೆಯನ್ನು ಪಾವತಿಸುವ ಸಂದರ್ಭದಲ್ಲಿ ಯಾವುದೇ ಸಮರ್ಥ ಯಾತ್ರಿಯು ಬೇಟೆಯಾಡುವ ಅನಿಶ್ಚಿತ ಪ್ರಯಾಣಕ್ಕೆ ಹೋಗುವುದಿಲ್ಲ. ಇದು ಧಾರ್ಮಿಕರು ಕುರ್‌ಆನನನ್ನು ತಿರುಚಲು ಪ್ರಯತ್ನ ಮಾಡುವಾಗ, ಸಂದೇಶವು ಅಸಂಬಂಧಗೊಳ್ಳುತ್ತದೆ ಎಂದು ಸ್ಪಷ್ಟವಾಗಿ ತೋರಿಸುತ್ತದೆ.

ಈ ವಿಗ್ರಹಗಳ ಕಾವಲುಗಾರರು, ಮುನ್ನಡೆದಂತೆಯೇ ಸುಮ್ಮನೆ ಇಂತಹ ಭ್ರಷ್ಟತೆಗಳನ್ನು ಸೃಷ್ಟಿಸುತ್ತಾ ಸಾಗಿದ್ದಾರೆ.

ಭಾಗ ಹನ್ನೆರಡು

ಉಮ್ರ ಮತ್ತು ಹಜ್ಜ್ - ಆವಿಷ್ಕಾರಿತ ತೀರ್ಥಯಾತ್ರೆಯಾಗಿದೆ [81]

ಇಂದು *ಇಸ್ಲಾಮಿನ* ಮರುವೇಷದಲ್ಲಿರುವ ಹಿಂಸಾತ್ಮಕ ಮತ್ತು ಹಾಸ್ಯಾಸ್ಪದವಾದ ಅರಬೀ ಧರ್ಮವು, ಮಕ್ಕಾದಲ್ಲಿರುವ ಒಂದು ಕಲ್ಲಿನ ಕಟ್ಟಡಕ್ಕೆ ಗೌರವಾರ್ಪಣೆಯನ್ನು ಅರ್ಪಿಸುವಂತೆ ಜನರನ್ನು ವಂಚಿಸಿದೆ. ಅವರು ತಪ್ಪಾಗಿ ಇಸ್ಲಾಮಿನ ನಂಬಿಕೆಯ ಒಂದು ಸ್ತಂಭವೆಂದು ಉತ್ತೇಜಿಸಲಾಗುವಂತಹ ಒಂದು ವಿಧಿಯನ್ನು ರಚಿಸಲು, ಕುರ್‌ಆನಿನ ಎರಡು ಪದಗಳನ್ನು ದುರುಪಯೋಗಗೊಳಿಸಿದರು. ಹಜ್ಜ್ ಮತ್ತು ಉಮ್ರ ಎಂಬ ಪದಗಳನ್ನು ಕ್ರಮವಾಗಿ *ವಾರ್ಷಿಕ ತೀರ್ಥಯಾತ್ರೆ* ಮತ್ತು *ಸಣ್ಣ ತೀರ್ಥಯಾತ್ರೆ*[82] ಎಂದಾಗುವಂತೆ ತಿರುಚಲಾಯಿತು. ಈ ಆಚರಣೆಗಳನ್ನು ನಮಗೆ ಆಜ್ಞಾಪಿಸಲೇ ಇಲ್ಲ. ಅವುಗಳು ಕೇವಲ ಕುರ್‌ಆನಿನ ಸಂದೇಶವನ್ನು ಮಾತ್ರ ತಲುಪಿಸುವ ಕರ್ತವ್ಯವನ್ನು ಹೊಂದಿದ್ದ ಕೊನೆಯ ಪ್ರವಾದಿಯ ಬೋಧನೆಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ.[83]

'ಉಮ್ರ' ಎಂದರೆ 'ಜೀವನ' ಎಂದರ್ಥ

ಉಮ್ರತ ಎಂಬ ಪದವು ಸಾಮಾನ್ಯವಾಗಿ ಉಮ್ರ ಎಂದು ಉಲ್ಲೇಖಿಸಲಾಗುತ್ತದೆ. ಇದರ ಮೂಲಪದವು *ಅಮ್ರ್* (ಐನ್-ಮೀಮ್-ರಾ) ಎಂದಾಗಿದೆ ಹಾಗೂ ಇದರ ಅರ್ಥವು '*ಜೀವ*'ವನ್ನು ಸೂಚಿಸುತ್ತದೆ. ಕುರ್‌ಆನಿನಲ್ಲಿ, ಈ ಪದವನ್ನು ಒಂದು ಉದ್ದೇಶವನ್ನು ಪೂರೈಸಲು ನಡೆಸುವ ನಿರಂತರ ಕ್ರಿಯೆಯನ್ನು ಅಥವಾ ಪ್ರತಿಕ್ರಿಯೆಯನ್ನು ಉಲ್ಲೇಖಿಸಲೂ ಬಳಸಲಾಗಿದೆ. ಉದಾಹರಣೆಗೆ, ನಾವು ಒಂದು ಬಂಜರು ಭೂಮಿಗೆ ಜೀವವನ್ನು ನೀಡಲು ಬಯಸಿದರೆ, ಅದರ ಫಲಿತಾಂಶವನ್ನು ನೋಡಲು ನಾವು ಅದನ್ನು ಅಭಿವೃದ್ಧಿಪಡಿಸಬೇಕು ಅಥವಾ ಬೇಸಾಯ ಮಾಡಬೇಕು. ಕುರ್‌ಆನ್ ಇದನ್ನು ಸೂಚಿಸಲು (*ಅಮ್ರ್* ಎಂಬ ಮೂಲಪದದಿಂದಲೇ ಪಡೆದಿರುವ) *ಆ'ಮರು* ಎಂಬ ಪದವನ್ನು ಬಳಸುತ್ತದೆ.

---

[81] ನಾನು ಈ ವಿಷಯದ ಬಗ್ಗೆ ತಿಳಿಯುವಾಗ ಬೆಚ್ಚಿಬಿದ್ದಿದ್ದೆ. ಈ ಸತ್ಯವನ್ನು ತಿಳಿದುಕೊಳ್ಳಲು ನನಗೆ ದೀರ್ಘ ಸಮಯ ತೆಗೆದುಕೊಳ್ಳಲಿಲ್ಲ. ಕುರ್‌ಆನಿನಲ್ಲಿರುವ ಎಲ್ಲಾ ಹಜ್ಜ್ ಮತ್ತು ಉಮ್ರ ಪದಗಳನ್ನು ನಾನು ಸಂಗ್ರಹಿಸಿದೆ. ಅಂತಿಮವಾಗಿ ಈ ಎರಡು ಪದಗಳ ಗಂಭೀರವಾದ ವಿಕೃತಿಯನ್ನು ಕಂಡುಹಿಡಿದೆ.

[82] ನಾನು ಈ ಎರಡೂ ವಿಧಿಗಳನ್ನು ನಿರ್ವಹಿಸಿದ್ದೇನೆ ಮತ್ತು ನಾನು ನನ್ನ ಅಜ್ಞಾನಕ್ಕಾಗಿ ನನಗೆ ಸ್ವತಃ ನನ್ನನ್ನೇ ಕ್ಷಮಿಸಲು ಸಾಧ್ಯವಾಗುತ್ತಿಲ್ಲ. ನನಗೆ ಆ ಹಣವನ್ನು ಬಡವರಿಗೆ ಮತ್ತು ನಿರ್ಗತಿಕರಿಗೆ ಸಹಾಯ ಮಾಡಲು ಬಳಸಬಹುದಿತ್ತು.

[83] ತೀರ್ಥಯಾತ್ರೆಯೆಂಬ ಈ ಕುರ್‌ಆನ್ ಬಾಹಿರ ಪರಿಕಲ್ಪನೆಗಳನ್ನು ಬೆಂಬಲಿಸಲು ಕುರ್‌ಆನ್-ಬಾಹಿರ ಸಾಹಿತ್ಯದ ಬೃಹತ್ ಗೋಪುರವೇ ಅಸ್ತಿತ್ವದಲ್ಲಿದೆ ಎಂದು 'ಮುಸ್ಲಿಂ' ಹಿನ್ನೆಲೆಯಿರುವ ಜನರಿಗೆ ತಿಳಿದಿದೆ. ಇಲ್ಲಿನ ಸಮರ್ಥನೆಯೇನೆಂದರೆ, ಈ ಕುರ್‌ಆನ್-ಬಾಹಿರ ಸಾಹಿತ್ಯವು ಕುರ್‌ಆನಿನ ಆಧಾರ ಪ್ರಮಾಣವನ್ನು ಬೆಂಬಲಿಸುವ ಬದಲಿಗೆ ಪ್ರತಿಷೇಧಿಸುತ್ತದೆ.

ಅಲ್ಲಾಹನಿಂದ ಮಾನವರಿಗೆ ಉಮ್ರ

'ಅಲ್ಲಾಹನು ಮಾನವರಿಗೆ ಜೀವನ ನೀಡುತ್ತಾನೆ' ಎಂದು ನೀವು ಯಾವುದೇ ಮುಸ್ಲಿಮರಿಗೆ ಅವರು ಅರ್ಥಮಾಡುವ ಭಾಷೆಯಲ್ಲಿ ಹೇಳಿದರೆ ಅವರು ಅದನ್ನು ಸಂಪೂರ್ಣವಾಗಿ ಒಪ್ಪುತ್ತಾರೆ, ಆದರೆ 'ಅಲ್ಲಾಹನು ಮಾನವರಿಗೆ ಉಮ್ರ ಮಾಡುತ್ತಾನೆ' ಎಂದ ತಕ್ಷಣ ಅವರು ಬೆಚ್ಚಿಬೀಳುವರು. ಅವರನ್ನು ಸಂಬಂಧಿಸಿದಂತೆ, ಉಮ್ರ ಎಂದರೆ ಕೇವಲ ಒಂದೇ ಒಂದು ವಿಷಯವಾಗಿದೆ, ಅದು ಮಕ್ಕಾದಲ್ಲಿರುವ ತಮ್ಮ ಪುಣ್ಯಕ್ಷೇತ್ರಕ್ಕಿರುವ ಅಕಾಲ ಭೇಟಿಯಾಗಿದೆ. ಹೀಗೆ, ಅವರ ಧಾರ್ಮಿಕ ವಿದ್ವಾಂಸರು ಮತ್ತು ಅವರ ಪುರೋಹಿತರು ಅವರ ಮನಸ್ಸನ್ನು ಸಂಕೋಲೆಯಲ್ಲಿ ಬಂಧಿಸಿದ್ದಾರೆ. ತಮ್ಮ ಪಂಡಿತರು ಅರಬೀ ಭಾಷೆಯಲ್ಲಿ ಏನೋ ಹೇಳುತ್ತಾರೆ ಮತ್ತು ಅದು ತಕ್ಷಣ ದೈವಿಕ ಮತ್ತು 'ಇಸ್ಲಾಮಿಕ್' ಆಗಿ ಬಿಡುತ್ತದೆ.

ಅಮ್ರ್ ಎಂಬ ಅದೇ ಮೂಲಪದದಿಂದ, ಅಲ್ಲಾಹನು ಮಾನವರಿಗೆ *ಉಮ್ರ* (ಜೀವ ನೀಡುವ) ಕ್ರಿಯೆಯನ್ನು ನಿರಂತರವಾಗಿ ನಿರ್ವಹಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹಾಗೆ ಅವರು ಒಂದು ನಿರ್ದಿಷ್ಟ ಅವಧಿಯ ಜೀವಂತವಾಗಿರುತ್ತಾರೆ (ಅಥವಾ *ಮ'ಮೂರಿ*), ಅದು ಅವರ ಜೀವನದ ಅವಧಿಯು ಮುಗಿಯುವವರೆಗಿನ ಆಯಸ್ಸು (ಅಥವಾ ಉಮ್ರ್) ಆಗಿರುತ್ತದೆ. ಆದುದರಿಂದ *ಉಮ್ರ* ಎಂಬುವುದನ್ನು ಪುಣ್ಯಯಾತ್ರೆ ಎಂದು ಅನುವಾದಿಸಲು ಸಾಧ್ಯವಿಲ್ಲ, ಏಕೆಂದರೆ ಈ ಪದವು *ಅಮ್ರ್* ಎಂಬ ಮೂಲದಿಂದಲೇ ಪಡೆದಿರುವುದಾಗಿದೆ.

ಹಾಗೆಯೇ, ಯಾವುದೇ ಜೀವವು ಬದುಕುತ್ತಿರುವುದನ್ನು ನಿಲ್ಲಿಸಲು ಅವನು ನಿರ್ಧರಿಸಿದರೆ, 35:11 ರಲ್ಲಿ ಅವನು ಹೇಳುತ್ತಾನೆ, *ಮಾ-ಯುಅಮ್ಮರು*, ಇದರ ಅಕ್ಷರಶಃ ಅರ್ಥವು 'ಜೀವವನ್ನು ನೀಡುವುದನ್ನು ನಿಲ್ಲಿಸುವುದು' ಎಂದಾಗಿದೆ. ಈ ಅಂಶವನ್ನು ವಿವರಿಸಲು, ಇಲ್ಲಿ ಎರಡು ಉದಾಹರಣೆಗಳಿವೆ:

> *ಹುವ ಅನ್ಶಅಕುಮ್ ಮಿನಲ್ ಅರ್ದಿ, ವಸ್ತ-ಅ'ಮರಕುಮ್ ಫೀಹಾ ಫಸ್ತ-ಗ್'ಫಿರೂಹು ಸುಮ್ಮ, ತೂಬೂ ಇಲ್ಲೈಹಿ* (11:61)
>
> ನಿಮ್ಮನ್ನು ಭೂಮಿಯಿಂದ ಸೃಷ್ಟಿಸಿದವನು ಮತ್ತು ಅದರಲ್ಲಿ ನಿಮಗೆ ಜೀವವನ್ನು ನೀಡಿದವನು *(ವಸ್ತ-ಅ'ಮರಕುಮ್)* ಅವನೇ ಆಗಿದ್ದಾನೆ. ಆದ್ದರಿಂದ, ನೀವು ಅವನೊಡನೆ ಕ್ಷಮೆ ಯಾಚಿಸಿರಿ ಮತ್ತು ಪಶ್ಚಾತ್ತಾಪ ಪಟ್ಟು ಆತನೆಡೆಗೆ ಮರಳಿರಿ. (11:61)
>
> *ಲ-ಅಮ್ರುಕ ಇನ್ನಹುಮ್ ಲಫೀ ಸಕ್ರತಿಹಿಮ್ ಯಅ'ಮಹೂನ್*(15:72)
>
> ನಿಮ್ಮ ಜೀವದಾಣೆ[84], ನಿಶ್ಚಯವಾಗಿಯು ಅವರು ತಮ್ಮ ಅಮಲಿನಲ್ಲೇ ಮೈಮರೆತಿದ್ದಾರೆ. (15:72)

[84] ಇಲ್ಲಿ ಮೂಲಪದ ಅಮ್ರ್ ಕಂಡುಬರುತ್ತದೆ. ಉಮ್ರ ಎಂಬುವುದನ್ನೂ ಸೇರಿದಂತೆ, ಅದೇ ಅರ್ಥದ ಸಾರದೊಂದಿಗೆ, ಈ ಮೂಲಪದವು ಇತರ ಅನೇಕ ಪದಗಳನ್ನು ಉತ್ಪತ್ತಿಮಾಡುತ್ತದೆ.

ಮಾನವರು ಭೂಮಿಗೆ ಜೀವ ನೀಡುತ್ತಾರೆ

ಜೀವನದಲ್ಲಿ ಅಭಿವೃದ್ಧಿಹೊಂದುವ ಸಲುವಾಗಿ, ಮಾನವರು ತಾವು ವಾಸಿಸುತ್ತಿರುವ ಭೂಮಿಗೆ ಜೀವವನ್ನು ನೀಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. 30:9 ರಲ್ಲಿ, ತಮ್ಮಲ್ಲಿರುವುದನ್ನು ಅಭಿವೃದ್ಧಿಗೊಳಿಸಿದ ನಂತರ ಪ್ರಬಲವಾದ ಜನಾಂಗಗಳು ಯಶಸ್ವಿಯಾಗಿದ್ದಾರೆ ಎಂದು ನಾವು ಕಾಣುತ್ತೇವೆ. ಹಿಂದಿನ ಭೂಮಿಯನ್ನು ಫಲವತ್ತಾಗಿ ಅಭಿವೃದ್ಧಿಗೊಳಿಸಿದ *(ಆ'ಮರು)* ಅಥವಾ ಜೀವ ನೀಡಿದ ಪ್ರಬಲ ಹಾಗೂ ಯಶಸ್ವಿಯಾದ ಕೆಲವು ಸಮುದಾಯಗಳು ಗತಿಸಿಹೋಗಿದ್ದರು ಎಂದು ಕುರ್‌ಆನ್ ಹೇಳುತ್ತದೆ.

> *ವ ಅಸಾರುಲ್ ಅರ್ಧ ವ ಅಮರೂಹಾ ಅಕ್ಸರ ಮಿಮ್ಮಾ ಆ'ಮರೂಹಾ ವ ಜಾಅತ್ಹುಮ್ ರುಸುಲುಹುಮ್ ಬಿಲ್ ಬಯ್ಯಿನಾತಿ* (30:9)
>
> ಅವರು ಭೂಮಿಯನ್ನು ಚೆನ್ನಾಗಿ ಅಗೆದಿದ್ದರು ಮತ್ತು ಅದಕ್ಕೆ ಇವರು ಜೀವನವನ್ನು ನೀಡಿರುವುದಕ್ಕಿಂತ ಹೆಚ್ಚಾಗಿ ಅವರು ಜೀವನವನ್ನು ನೀಡಿದ್ದರು (ಸಮೃದ್ಧಗೊಳಿಸಿದ್ದರು) ಮತ್ತು ಅವರ ಸಂದೇಶವಾಹಕರು ಅವರ ಕಡೆಗೆ ಸುಸ್ಪಷ್ಟ ಅವತೀರ್ಣಗಳೊಂದಿಗೆ ತೆರಳಿದ್ದರು. (30:9)

30:9 ರ *ಆ'ಮರೂ* ಎಂಬ ಪದವು ಮತ್ತು 11:72 ರಲ್ಲಿ *ತ'ಮರೂ* ಎಂಬ ಪದವು, *ಅಮ್ರ್* ಎಂಬ ಮೂಲಪದದಿಂದ ಪಡೆದವುಗಳಾಗಿವೆ ಹಾಗೂ ಅವುಗಳು ಒಂದು ಧ್ಯೇಯವನ್ನು ಪೂರ್ಣಗೊಳಿಸುವ ಕ್ರಿಯೆಯನ್ನು ಸೂಚಿಸುತ್ತದೆ. ಅಕ್ಷರಶಃ ಈ ಎರಡೂ ವಚನಗಳು, ಜೀವನ ನೀಡುವ ಅಥವಾ ಸಮೃದ್ಧಿಗೊಳಿಸುವ ಕ್ರಿಯೆಯನ್ನು ಉಲ್ಲೇಖಿಸುತ್ತದೆ.

ಅದೇ ಮೂಲಪದದಿಂದಿರುವ *ಮಾ'ಮುರ್* ಎಂಬ ಪದವು *ಸಜೀವ* ಎಂಬ ಅರ್ಥದಲ್ಲಿ ಅಥವಾ ಜೀವಿಸುವ ನಿರಂತರ ಸ್ಥಿತಿಯನ್ನು ಸೂಚಿಸುವುದಕ್ಕಾಗಿ 52:4 ರಲ್ಲಿ ಬಳಸಲಾಗಿರುವುದನ್ನು ನಾವು ನೋಡಿದೆವು.

> *ವಲ್ ಬೈತಿಲ್ ಮಾ'ಮೂರಿ* - ಮತ್ತು ಜೀವಂತ ವ್ಯವಸ್ಥೆ. (52:4)

ಸಂದರ್ಭಗಳನ್ನು ಶ್ರದ್ಧಾಪೂರ್ವಕವಾಗಿ ಪರಿಶೀಲನೆ ಮಾಡಿದರೆ, ಈ ಪದಗಳನ್ನು ಅರಬೀ ಧರ್ಮದ ಸೇವೆಗಾಗಿ ತಪ್ಪಾಗಿ ಅನುವಾದಿಸಲಾಗಿದೆ ಎಂದು ತಿಳಿದುಬರುತ್ತದೆ. ಈ ಪದಗಳನ್ನು (ಅಸಂಬದ್ಧವಾಗಿ) *ಪದೇ ಪದೇ ಭೇಟಿನೀಡಲ್ಪಡುವ ಕ್ಷೇತ್ರ* ಅಥವಾ *ಹೆಚ್ಚಾಗಿ ಭೇಟಿನೀಡಲ್ಪಡುವ ಮನೆ* ಎಂದು ಭಾಷಾಂತರಿಸುವಂತೆ ಧಾರ್ಮಿಕರು ಅನುವಾದಕರನ್ನು ಒತ್ತಾಯಿಸುತ್ತಾರೆ. ಆರಂಭದಲ್ಲಿ ಅವರು *ಬೈತ* ಎಂದರೆ ಮನೆ ಎಂದು ಹೇಳಿದರು. ನಂತರ ಆ ಮನೆಯನ್ನು ಒಂದು ದೇವಾಲಯ ಅಥವಾ ಕ್ಷೇತ್ರದ ಸ್ಥಾನಮಾನಕ್ಕೆ ಎತ್ತರಿಸಿದರು. *ಜೀವಂತ* ಎಂಬ ಅರ್ಥವನ್ನು ನೀಡುವ *ಮಾ'ಮುರ್* ಎಂಬ ಪದವನ್ನು *ಪದೇ ಪದೇ ಭೇಟಿನೀಡಲ್ಪಡುವ*

ಎಂದಾಗುವಂತೆ ಅಸಂಬದ್ಧವಾಗಿ ಭಾಷಾಂತರಿಸಿದರು. ಕುರ್‌ಆನಿನ ಹೇಳಿಕೆಗಳನ್ನು ಅಸಂಬದ್ಧಗೊಳಿಸಲು ಅಲ್ಲಾಹನ ಹಾಗೂ ಅವನ ಸಂದೇಶವಾಹಕರ ಶತ್ರುಗಳು, ಕುರ್‌ಆನಿನ ವಾಕ್ಯಗಳನ್ನು ಹೇಗೆ ತಿರುಚುತ್ತಾರೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆಯಾಗಿದೆ. ಒಂದು ದೇವಾಲಯವನ್ನು ಪದೇ ಪದೇ ಭೇಟಿನೀಡುವುದು, ಪೂರ್ವ ಕುರ್‌ಆನಿನ ಅರಬೀ ಅನಾಚಾರಿಕ ನಂಬಿಕೆಗೆ ಸೂಕ್ತವಾಗಿದೆ, ಆದರೆ ಕುರ್‌ಆನಿನ ಅವತೀರ್ಣದ ಬೆಳಕಿನಲ್ಲಿ ಅದು ಸರಿಹೊಂದುವುದಿಲ್ಲ.

ಬೈತಿಲ್ ಮಾ'ಮೂರಿ 52:4 ರ ಪದಗಳು 52:1 ರಿಂದ ತೊಡಗಿದ ಸಂದರ್ಭದ ಮುಂದುವರಿಕೆಯಾಗಿದೆ:

ವ ಥ್ಹೂರಿ	ಲೇಖನದಾಣೆ (52:1)
ವ ಕಿತಾಬಿನ್ ಮಸ್ತೂರಿನ್	ಮತ್ತು ದಾಖಲಿಸಲ್ಪಟ್ಟ ಲೇಖನ (52:2)
ಫೀ ರಕ್ಕಿನ್ ಮನ್ಶೂರಿನ್	ಬಹಿರಂಗವಾದ ಸುರುಳಿಗಳಲ್ಲಿ (52:3)
ವಲ್ ಬೈತಿಲ್ ಮಾ'ಮೂರಿ	ಮತ್ತು ಜೀವಂತ ವ್ಯವಸ್ಥೆ (52:4)
ವ ಸ್ಸಖ್‌ಫಿಲ್ ಮರ್ಫೂಅ'	ಮತ್ತು ಎತ್ತರಕ್ಕೇರಿಸಲ್ಪಟ್ಟ ಛಾವಣಿ (52:5)
ವಲ್ ಬಹ್ರಿಲ್ ಮಸ್ಜೂರಿ	ಮತ್ತು ತೆರೆಯೇಳುವ ಸಮುದ್ರ (52:6)

ಕುರ್‌ಆನಿನಲ್ಲಿ ಇರುವುದು ಕೇವಲ ಒಂದೇ *ಬೈತ*, ಅದು ನಿಷ್ಠಾವಂತರಿಗಾಗಿ ಮತ್ತು ವಿನಮ್ರವಾಗಿ ತಮ್ಮನ್ನು ಸಮ್ಮತಿಸಿಕೊಳ್ಳುವವರಿಗಾಗಿ 2:125 ರಲ್ಲಿ ಇಬ್ರಾಹೀಮರಿಗೆ ಸೂಚಿಸಲ್ಪಟ್ಟ ಹಾಗೂ ಅವರಿಂದ ಶುದ್ಧೀಕರಿಸಲ್ಪಟ್ಟ ಅದೇ 'ಬೈತ'ವಾಗಿದೆ.

ಮೂಸಾರು ಗ್ರಂಥವನ್ನು ಸ್ವೀಕರಿಸುವ ಕಾಲದಲ್ಲಿ, ಅವರು ಪ್ರವಾದಿಯಾಗುವ ಮುಂಚೆಯೇ, ಅಲ್ಲಾಹನ ವ್ಯವಸ್ಥೆಯು ಜೀವಂತವಾಗಿತ್ತು ಎಂದು ನಮಗೆ 52:4 ರಲ್ಲಿ ಹೇಳಲಾಗಿದೆ. ಮುಹಮ್ಮದರು ಬಂದಿರುವುದು ಅದರ ಅನೇಕ ಸಾವಿರ ವರ್ಷಗಳ ನಂತರವಾಗಿದೆ. ಜೊತೆಗೆ, ಮೂಸಾರು ಮಕ್ಕಾಗೆ ಬಂದಿದ್ದರು ಎಂದು ತೋರಿಸಲು ಯಾವುದೇ ಐತಿಹಾಸಿಕ ದಾಖಲೆಗಳಿಲ್ಲ.

ಅಲ್ಲಾಹನ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು ಹಾಗೂ ಜೀವಂತವಾಗಿತ್ತು ಮತ್ತು ಗ್ರಂಥವು ಅವರಿಗೆ ನೀಡಲ್ಪಟ್ಟ ನಂತರವೂ ಅದೇ ಸ್ಥಿತಿಯಲ್ಲಿ ಮುಂದುವರಿಯುವುದು ಎಂಬುವುದಕ್ಕೆ, ಮೂಸಾರಿಗೆ ಅವತೀರ್ಣವಾದ ಸಂದೇಶವು ಒಂದು ಸೂಚನೆಯಾಗಿತ್ತು. ಕುರ್‌ಆನ್ ಪ್ರಸ್ತಾಪಿಸುತ್ತಿರುವುದು ಅದೇ ವ್ಯವಸ್ಥೆಯನ್ನಾಗಿದೆ ಮತ್ತು ಕೊನೆಯ ಪ್ರವಾದಿಗೆ ಅವತೀರ್ಣವಾದ ಅದೇ ಸಂದೇಶವನ್ನು ಮೂಸಾರಿಗೂ ಮತ್ತು ಇಬ್ರಾಹೀಮರಿಗೂ ನೀಡಲಾಗಿದೆ:

ಖಂಡಿತವಾಗಿಯೂ, ಇದು (ಕುರ್‌ಆನ್), ಇಬ್ರಾಹೀಮರ ಮತ್ತು ಮೂಸಾರ ಗ್ರಂಥವು ಸೇರಿದಂತೆ, ಹಿಂದಿನ ಗ್ರಂಥಗಳಲ್ಲಿದ್ದವುಗಳೇ ಆಗಿದೆ. (87:18-19)

ಪೂಜಾವೇದಿಕೆ, ಮನೆ, ಡೇರೆ, ಕ್ಷೇತ್ರ, ದೇವಾಲಯ, ಸಿನಗಾಗ್, ಚರ್ಚು, ಮಸೀದಿ ಅಥವಾ ಯಾವುದೇ 'ಪೂಜಾಗೃಹ' ಎಂಬುವವುಗಳಿಗೂ, *ಬೈತಿಲ್ ಮಾ'ಮೂರಿ* ಎಂಬ ಪದಗಳಿಗೂ ಯಾವುದೇ ಸಂಬಂಧವಿಲ್ಲ. ಎಲ್ಲಾ ತರಹದ ಆರಾಧನಾ ರೂಪಗಳು, ಧಾರ್ಮಿಕ ವಿಧಿಗಳು ಅಥವಾ ವಿಧ್ಯುಕ್ತ ಪ್ರಾರ್ಥನೆಗಳನ್ನು ಕುರ್‌ಆನ್ ಖಡಾಖಂಡಿತವಾಗಿ ತಿರಸ್ಕರಿಸುತ್ತದೆ. ಅವುಗಳು ಮಾನವಕೃತವಾಗಿದೆ. ತಾವು ಹೊಂದಿರುವುದನ್ನು ಅಥವಾ ರಚಿಸುವುದನ್ನು ಪವಿತ್ರ ಅಥವಾ ಪಾವನ ಎಂದು ಘೋಷಿಸುವುದು ಮನುಷ್ಯರಾಗಿದ್ದಾರೆ.

ಧಾರ್ಮಿಕರು ಇತರ ಧರ್ಮಗಳೊಂದಿಗೆ ಪೈಪೋಟಿ ನಡೆಸುತ್ತಾ, ತಮ್ಮ ಪಿತಾಮಹರು ಆರಾಧಿಸುತ್ತಿದ್ದವುಗಳನ್ನು ಆರಾಧಿಸುವಂತೆ ಜನರನ್ನು ವಂಚನೆಗೆ ಒಳಗಾಗಿಸಿದ್ದಾರೆ. ಕುರ್‌ಆನ್ ಅರಬೀ ಭಾಷೆಯಲ್ಲಿ ಅವತೀರ್ಣಗೊಂಡ ಕಾರಣ ಹಾಗೂ ತಮ್ಮನ್ನು ವಿಶ್ವಾಸದ ಸ್ವಘೋಷಿತ ಕಾವಲುಗಾರನ್ನಾಗಿಸಿರುವ ಕಾರಣ, ಅವರು ತಮ್ಮ ಅನಾಚಾರಿಕ ವಿಧಿಗಳನ್ನು ಮತ್ತು ಸೂತ್ರಗಳನ್ನು ಅಲ್ಲಾಹನ ಮೇಲೆ ಹೊರಿಸಲು, ಅವರು ಈ ಸಂದರ್ಭವನ್ನು ಪ್ರಯೋಜನ ಪಡಿಸಿಕೊಂಡರು ಅಷ್ಟೆ. ಈ ಧಾರ್ಮಿಕರ ತಾಯ್ನಾಡಿನ ವಂಶಜರ ಸ್ವಭಾವವು ಇಂದಿಗೂ ಹೆಚ್ಚಾಗಿ ಬದಲಾವಣೆಗೊಂಡಿಲ್ಲ. ಸೌದಿ ಅರೇಬಿಯಾದಲ್ಲಿ ಅವರ ಮನೆಯಾಳಾಗಿ ಅಥವಾ ಅವರ ಚಾಲಕರಾಗಿ ದುಡಿದ ಬಹುತೇಕ ಜನರೊಂದಿಗೆ ತಮ್ಮ ಅನುಭವವನ್ನು ಕೇಳಿ ತಿಳಿದುಕೊಳ್ಳಬಹುದು. ನಾವು ಪ್ರಾಣಿಗಳಿಗೆ ತೋರಿಸುವ ದಯೆಯೂ ಕೂಡ ಅವರು ಇತರ ಜನರಿಗೆ ತೋರಿಸುವುದಿಲ್ಲ. ಅಲ್ಲಾಹನು ಅವರನ್ನು ಕಪಟರು ಹಾಗೂ ಕಠೋರರು ಎಂದು ಘೋಷಿಸುತ್ತಿರುವಾಗಲೂ, ಮುಸ್ಲಿಂ ಲೋಕವು ಅವರ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆಯುತ್ತಿದ್ದಾರೆ.

ಕುರ್‌ಆನಿನಲ್ಲಿ *ಉಮ್ರ* ಎಂಬ ಪದವು ಒಂದು ನಿರ್ದಿಷ್ಟ ಸ್ಥಳದಲ್ಲಿ ನಿರ್ವಹಿಸುವ ವಿಶೇಷ ಪ್ರಯಾಣ ಅಥವಾ ಧಾರ್ಮಿಕ ಭೇಟಿಯನ್ನು ಸೂಚಿಸುವುದಿಲ್ಲ. *ಉಮ್ರ* ಎಂಬ ಪದದ ಸರಳವಾದ ಅರ್ಥವು, ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳಿಗೆ (ಅಥವಾ ಮಸ್ಜಿದಲ್ಲಾಹ್) ಜೀವವನ್ನು ನೀಡುವುದು ಅಥವಾ ಪ್ರಸರಿಸುವುದು ಅಥವಾ ಉತ್ತೇಜಿಸುವುದು ಎಂದಾಗಿದೆ.

> *ಇನ್ನಮಾ <u>ಯಾ'ಮುರು</u> ಮಸಾಜಿದಲ್ಲಾಹಿ ಮನ್ ಆಮನ ಬಿಲ್ಲಾಹಿ ವಲ್ ಯೌಮಿನ್ ಆಖಿರಿ ವ ಅಖಾಮ ಸ್ವಲಾತ ವಆತ-ಝಕಾತ ವ ಲಮ್ ಯಖ್ಶ ಇಲ್ಲಲ್ಲಾಹ ಫಅಸಾ ಉಲಾಇಕ ಅನ್ ಯಕೂನೂ ಮಿನಲ್ ಮುಹ್ತದೀನ* (9:18)
>
> ಅಲ್ಲಾಹನ ಮತ್ತು ಅಂತ್ಯದಿನದ ಮೇಲೆ ವಿಶ್ವಾಸವಿರಿಸುವ ಮತ್ತು ತಮ್ಮ ಬದ್ಧತೆಗಳನ್ನು ಪಾಲಿಸುವ ಮತ್ತು ಅವುಗಳನ್ನು ಪರಿಶುದ್ಧವಾಗಿರಿಸುವ ಜನರು ಮಾತ್ರ ಅಲ್ಲಾಹನ ಸಮ್ಮತಿಸಲ್ಪಟ್ಟ

ಆದೇಶಗಳನ್ನು ಉತ್ತೇಜಿಸಲು ಅರ್ಹರಾದವರಾಗಿದ್ದಾರೆ. ಅವರು ಅಲ್ಲಾಹನನ್ನಲ್ಲದೆ ಬೇರೆ ಯಾರನ್ನೂ ಭಯಪಡುವುದಿಲ್ಲ. ಮಾರ್ಗದರ್ಶನ ಹೊಂದಿದವರು ಅವರಾಗಿದ್ದಾರೆ (9:18)

ಮಸಾಜಿದಲ್ಲಾಹಿ ಎಂಬ ಪದವನ್ನು *ಅಲ್ಲಾಹನ ಮಸೀದಿಗಳು* ಎಂದು ಬಹುವಚನದಲ್ಲಿ ಅನುವಾದಿಸಲಾಗಿದೆ. ಧಾರ್ಮಿಕರು ಹೇಳುತ್ತಿರುವುದು ವಾಸ್ತವವಾಗಿಯೂ ನಿಜವಾಗಿದ್ದರೆ, ವಿಶ್ವದ ಎಲ್ಲಾ ಮಸೀದಿಗಳು ಅಲ್ಲಾಹನ ಸ್ವಾಮ್ಯದಲ್ಲಾಗುವ ಅಗತ್ಯವಿದೆ. ಹಾಗೆಯೇ, ಜನರು ಕೇವಲ ಮಕ್ಕಾದಲ್ಲಿರುವ ಮಸೀದಿಯನ್ನು ಮಾತ್ರ *ಯಾ'ಮುರು* ಮಾಡಬೇಕು (ಅಥವಾ ಉತ್ತೇಜಿಸಬೇಕು) ಎಂದು ಅವರು ಪಟ್ಟುಹಿಡಿಯುತ್ತಾರೆ. ಯಾರಾದರೂ ತನ್ನ ದೇಶದ ಹೊರಗಿರುವ ಯಾವುದೇ ಮಸೀದಿಯನ್ನು *ಮಸಾಜಿದಲ್ಲಾಹ್* ಎಂದು ಸೂಚಿಸಿದರೆ, ಅವರನ್ನು ಧರ್ಮನಿಂದೆಯ ಆರೋಪವನ್ನು ಹೊರಿಸಿ, ಅವರು ಕಲ್ಲು ಹೊಡೆದು ಕೊಲ್ಲಲ್ಪಡಲು ಅರ್ಹರಾದವರೆಂದು ಅವರು ಘೋಷಿಸುವರು.[85]

9:19 ರಲ್ಲಿನ *ಉಮ್ರ* ಎಂಬ ಪದವನ್ನು ಹೇಗೆ ತಿರುಚಲಾಯಿತು

9:18 ರ ತಮ್ಮದೇ ಆದ ಚಿತ್ರಣದಲ್ಲಿ ಧಾರ್ಮಿಕರು *ಯಾ'ಮುರು* ಎಂಬ ಪದದ ಅರ್ಥವು ಅಲ್ಲಾಹನ ಮಸೀದಿಗೆ ಪದೇ ಪದೇ ಭೇಟಿನೀಡುವುದು ಎಂದು ದೃಢವಾಗಿ ಘೋಷಿಸುತ್ತಾರೆ.

ಆದರೂ 9:19 ರಲ್ಲಿರುವ ಅದೇ ಪದದ ಅರ್ಥವು, ಪವಿತ್ರ ಮಸೀದಿಯ *ನಿರ್ವಹಣೆ ನಡೆಸುವುದು* ಎಂದು ಹೇಳಿಕೊಳ್ಳುತ್ತಾರೆ. ಎರಡೂ ಪದಗಳು *ಅಮ್ರ್* ಎಂಬ ಒಂದೇ ಮೂಲದಿಂದ ಜನ್ಯವಾಗಿವೆ. ಕೆಲವು ಅನುವಾದಕರು ಇದರ ಅರ್ಥವನ್ನು *ಪವಿತ್ರ ಮಸೀದಿಯಲ್ಲಿ ಬೀಡುಬಿಡುವುದು* ಎಂದೂ ಹೇಳುತ್ತಾರೆ. ಇದು ಅವರ ತಿರುಚುವಿಕೆಗಳ ವೈಶಾಲ್ಯತೆಯಾಗಿದೆ..

ಕುರ್‌ಆನಿನ ಪ್ರಕಾರ, ಯಾವುದನ್ನಾದರೂ ನಿರ್ವಹಣೆ ನಡೆಸುವ ಒಬ್ಬ ವ್ಯಕ್ತಿಯನ್ನು *ಆಮಿಲ್* (*ಅಮಿಲ* ಎಂಬ ಪದದಿಂದ) ಎಂದು ಕರೆಯಲಾಗುತ್ತದೆ. *ಆಮಿಲ್* ಪದದ ಮೂಲಪದವು *ಅಮಲ* (ಐನ್-ಮೀಮ್-ಲಾಮ್) ಆಗಿದೆ ಮತ್ತು *ಉಮ್ರ* ಪದದ ಮೂಲಪದವು *ಅ'ಮರ* (ಐನ್-ಮೀಮ್-ರಾ) ಆಗಿದೆ. ಅವುಗಳು ಒಂದೇ ಅಲ್ಲ. *ಆಮಿಲ್* ಎಂಬ ಪದವು ಕುರ್‌ಆನಿನಲ್ಲಿ ಹಲವಾರು ಬಾರಿ ಕಂಡುಬರುತ್ತದೆ:

ಇನ್ನಮಾ-ಸ್ವದಖಾತು ಲಿಲ್-ಫುಖರಾಇ ವಲ್ ಮಸಾಕೀನಿ ವಲ್ ಆಮಿಲೀನ ಅಲೈಹಾ (9:60)

[85] ಕುರ್‌ಆನಿನಲ್ಲಿ ಯಾವುದೇ ಅಪರಾಧಕ್ಕೆ ಕಲ್ಲು ಹೊಡೆದು ಕೊಲ್ಲುವ ಶಿಕ್ಷೆಯನ್ನು ವಿಧಿಸಲಾಗಿಲ್ಲ. 18:20 19:46, 26:116 ಮತ್ತು ಇತರ ಕೆಲವು ವಚನಗಳಲ್ಲಿ ಹೇಳುವಂತೆ, ಅನಾಚಾರಿಗಳು ಮಾತ್ರ ಕಲ್ಲು ಹೊಡೆದು ಕೊಲ್ಲಲು ಆದ್ಯತೆ ನೀಡುತ್ತಾರೆ. ಬಹುಶಃ ಬಂಡೆಗಳು ಮತ್ತು ಕಲ್ಲುಗಳು ಅವರ ಗೌರವಾರ್ಹ ವಸ್ತುಗಳಾಗಿರುವುದು ಇದಕ್ಕೆ ಕಾರಣವಾಗಿರಬಹುದು.

ವಾಸ್ತವವಾಗಿ, ದಾನವು ಬಡವರಿಗೆ ಮತ್ತು ಕೊರತೆಯಿರುವವರಿಗೆ ಮತ್ತು ಅದನ್ನು ನಿರ್ವಹಣೆ ನಡೆಸುವವರಿಗಾಗಿದೆ. (9:60)

ಧಾರ್ಮಿಕರಿಗೆ ಕುರ್‌ಆನಿನ ಅರಬೀ ಪದಗಳ ಅರ್ಥದ ಬಗ್ಗೆ ಮುಸ್ಲಿಮರನ್ನು ತಪ್ಪುದಾರಿಗೆಳೆಯಲು ಅನುಕೂಲಕರವಾಗಿರಬಹುದು, ಆದರೆ ಅವರು ಮೂಲಗ್ರಂಥದ ಪಠ್ಯವನ್ನು ಮಾರ್ಪಡಿಸಲು ಅಸಮರ್ಥರಾಗಿದ್ದಾರೆ. ಇತರ ಪುಸ್ತಕಗಳಿಗೆ ಭಿನ್ನವಾಗಿ, ಕುರ್‌ಆನ್ ಯಾವುದೇ ರೀತಿಯ ಪುನರ್ವಿಮರ್ಶೆಗೆ ಅಥವಾ ತಿದ್ದುಪಡಿಗೆ ಒಳಗಾಗಿಲ್ಲ. ಉದಾಹರಣೆಗೆ, ನಾವು ಯಾವುದೇ ದೇಶದ ಸುಮಾರು 800 ಅಥವಾ ಅಧಿಕ ವರ್ಷಗಳ ಹಿಂದೆ ಲಿಖಿತಗೊಂಡ ಕುರ್‌ಆನನ್ನು ತೆಗೆದುಕೊಂಡು, ವಿಶ್ವದ ಯಾವುದೇ ಭಾಗದಲ್ಲಿ ಮುದ್ರಿತಗೊಂಡ ಇತ್ತೀಚಿನ ಕುರ್‌ಆನಿನ ಜೊತೆ ಹೊೀಲಿಸಿದರೂ, ಅವುಗಳ ಅರಬೀ ಪಠ್ಯಗಳು, ಪದಗಳು, ವಾಕ್ಯಗಳೆಲ್ಲವೂ ಒಂದೇ ಆಗಿರುವುದನ್ನು ಕಾಣಬಹುದು. ಕುರ್‌ಆನಿನ ಈ ಕೆಳಗಿನ ಹೇಳಿಕೆಯು ಪ್ರಕೃತಿ, ಸ್ವರೂಪ ಮತ್ತು ಪರಿಣಾಮದಲ್ಲಿ ಬಹಳ ಸತ್ಯವಾಗಿದೆ ಎಂಬುವುದು ಲೇಖಕರ ದೃಢವಾದ ನಂಬಿಕೆಯಾಗಿದೆ:

> *ಈ ಅನುಭೋಧಕವನ್ನು (ಜ್ಞಾಪಿಸಿಕೊಡುವ ವಸ್ತು) ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮತ್ತು ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ. (15:9)*

ಕುರ್‌ಆನ್ ಪ್ರಾರಂಭದಲ್ಲಿ ಎಲೆ, ಸಿಪ್ಪೆ, ಕಲ್ಲು, ಮತ್ತು ಪ್ರಾಣಿ ಚರ್ಮದ ಮೇಲೆ ದಾಖಲಿಸಲಾಗಿತ್ತು ಎಂದು ಧಾರ್ಮಿಕರು ತಪ್ಪಾಗಿ ಹೇಳಿಕೊಳ್ಳುತ್ತಾರೆ. ಕುರ್‌ಆನಿನಂತಹ ಪ್ರಮುಖವಾದ ಒಂದು ಸಂದೇಶವು ಮಾನವಕುಲಕ್ಕೆ ಅವತೀರ್ಣಗೊಂಡು, ನಂತರ ಸಿಪ್ಪೆ, ಎಲೆ, ಕಲ್ಲು ಅಥವಾ ಈ ರೀತಿಯ ವಸ್ತುಗಳ ಮೇಲೆ ದಾಖಲಿಸಲಾಗಿದೆ ಎಂಬುವುದು ಚಿಂತನೆಗೆ ನಿಲುಕದ ಹಾಗೂ ಹಾಸ್ಯಾಸ್ಪದವೂ ಆದ ಕಲ್ಪನೆಯಾಗಿದೆ.

ನಿಸ್ಸಂಶಯವಾಗಿಯೂ, ಮಾನವಕುಲವನ್ನು ಮೊೀಸಗೊಳಿಸಲು ಧಾರ್ಮಿಕರಿಗೆ ಉಳಿದಿರುವ ಮಾರ್ಗವು ನಾಲಿಗೆಯನ್ನು ತಿರುಚುವ ತಂತ್ರಗಳಾಗಿತ್ತು: ಮೊದಲನೆಯದಾಗಿ, ಕುರ್‌ಆನನ್ನು ಭಾಷಾಂತರಿಸಲು ಸಾಧ್ಯವೇ ಇಲ್ಲ ಎಂದು ಅವರು ಜನರನ್ನು ನಂಬಿಸಿದರು (ಯಹೂದಿಗಳು ತೌರಾತಿನ ಜೊತೆ ಮಾಡಿದ ಹಾಗೆ), ತದನಂತರ ಅವರು ಗ್ರಂಥದ ಅರ್ಥಗಳನ್ನು ತಿರುಚಲು ಮುಂದುವರಿಸಿದರು, ಅಲ್ಲದೆ ತಾವು ಹೇಳುವುದರ ಆಧಾರವು ಅಲ್ಲಾಹನಿಂದಿರುವುದಾಗಿದೆ ಎಂದು ಸಾರಿದರು. ಭ್ರಷ್ಟ ಅರಬೀ ಸಂತರಿಂದ ತಮ್ಮ ಚತುರತೆಯನ್ನು ಕಲಿತ ಪುರೋಹಿತರ ಮೇಲೆ ತಮ್ಮ ಭರವಸೆಯನ್ನು ಇರಿಸಿದ ವಿಶ್ವದ ಅರಬೀ ಧರ್ಮದ ಅನುಯಾಯಿಗಳು ಈ ಜಾಲದಲ್ಲಿ ಸಿಕ್ಕಿಬಿದ್ದಿದ್ದಾರೆ. ಕುರ್‌ಆನ್ ನಮಗೆ ಅವರ ಬಗ್ಗೆ ಎಚ್ಚರಿಕೆ ನೀಡಲು ಮರೆಯಲಿಲ್ಲ:

> **ಅವರಲ್ಲಿ ಕೆಲವರು ಗ್ರಂಥವನ್ನು ಓದುವಾಗ ನಾಲಗೆಯನ್ನು ತಿರುವು ಮುರುವುಗೊಳಿಸುತ್ತಾರೆ. ಅವರು ಗ್ರಂಥದ ವಿಷಯವನ್ನು ಓದುತ್ತಿರುವರೆಂದೇ ನೀವು ತಿಳಿದುಕೊಳ್ಳುತ್ತೀರಿ. ವಸ್ತುತಃ ಅದು ಗ್ರಂಥದ ವಿಷಯವಾಗಿರುವುದಿಲ್ಲ. ನಾವು ಓದುತ್ತಿರುವದೆಲ್ಲವೂ ಅಲ್ಲಾಹನ ಕಡೆಯಿಂದಾಗಿದೆ ಎಂದು ಅವರು**

ಹೇಳುತ್ತಾರೆ. ವಸ್ತುತಃ ಅದು ಅಲ್ಲಾಹನ ಕಡೆಯಿಂದಾಗಿರುವುದಿಲ್ಲ. ಅವರು ಬೇಕು ಬೇಕೆಂದೇ ಸುಳ್ಳು ಮಾತನ್ನು ಅಲ್ಲಾಹನ ಮೇಲೆ ಹೊರಿಸಿಬಿಡುತ್ತಾರೆ. (3:78)

ನಾನು ಇನ್ನೇನು ಹೇಳಲಿ? ನಾವು ಮೇಲಿನ ವಚನವದೊಂದಿಗೆ ಯಾವುದೇ ವಿದ್ವಾಂಸರನ್ನು ಎದುರಿಸಿದರೆ, ಅದು ಹಿಂದಿನ ಗ್ರಂಥಗಳ ಜನರನ್ನು ಸೂಚಿಸುತ್ತದೆ ಎಂದು ಹೇಳಿ ಅವರು ತಪ್ಪಿಸಿಕೊಳ್ಳುತ್ತಾರೆ. ಅವರೂ ಅದನ್ನೇ ಮಾಡುತ್ತಿರುವಾಗ, ಅದು ಅವರಿಗೆ ಅನ್ವಯವಾಗುವುದಿಲ್ಲವೆಂದು ಹೇಗೆ ಹೇಳಿಕೊಳ್ಳುತ್ತಾರೆ?

ಅಂತೂ, ಗ್ರಂಥದ ಒಂದು ಪದವನ್ನು ಒಮ್ಮೆ ವಿಕೃತಗೊಳಿಸಿದರೆ, ಒಂದು ಸರಣಿ ಪ್ರತಿಕ್ರಿಯೆಯು ಆರಂಭವಾಗುತ್ತದೆ. ಆದುದರಿಂದ ಅವರಿಗೆ ಇತರ ಪದಗಳನ್ನೂ ತಿರುಚಬೇಕಾಗುತ್ತದೆ. ಈ ತಿರುಚುವಿಕೆಗೆ ಯಾವುದೇ ಮುಕ್ತಾಯವು ಸಿಗುವುದಿಲ್ಲ, ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಸಮಗ್ರವಾಗಿ ಓದುವಾಗ ತಿರುಚಲ್ಪಟ್ಟ ಭಾಗವು ಅಸಂಬದ್ಧವಾಗಿ ಮಾರ್ಪಡುತ್ತದೆ. ಇಂದು, ಈ ಗ್ರಂಥವನ್ನು, ವಿಶೇಷವಾಗಿ ಇಂದಿನ ಅನುವಾದಗಳನ್ನು ಮತ್ತು ವ್ಯಾಖ್ಯಾನಗಳನ್ನು (ತಫ್ಸೀರ್) ಒಳಮುಖಿಯಾದ ಐತಿಹಾಸಿಕ ದಾಖಲೆಯಂತೆ ಪರಿಗಣಿಸಲಾಗುತ್ತಿರುವುದನ್ನು ನಾವು ಕಾಣಬಹುದು. ಇದು ಯಾರು ಕುರ್‌ಆನನ್ನು ಹೆಚ್ಚಾಗಿ ಅರಿತಿರಬೇಕಿತ್ತೋ, ಅವರ ಕೈಗಳಿಂದ ಅವಗಳ ಪದಗಳ ಜೊತೆಗೆ ನಡೆದ ಶಬ್ದದಾಟಗಳ ಮತ್ತು ಭಾಷಾರ್ಥಶಾಸ್ತ್ರದ ತಿರುಚುವಿಕೆಯ ಭಯಾನಕ ಪರಿಣಾಮವಾಗಿದೆ.

ಹಜ್ಜ್ ಎಂದರೆ ಸವಾಲು, ತೀರ್ಥಯಾತ್ರೆ ಎಂದಲ್ಲ

ಸವಾಲು (challenge) ಎಂಬ ಪರಿಕಲ್ಪನೆಯು ಕುರ್‌ಆನಿಗೆ ಏಕೆ ಸಂಬಂಧಿಸಿದೆ ಎಂಬ ಒಂದು ಪ್ರಶ್ನೆಯು ಇಲ್ಲಿ ಉದ್ಭವಿಸಬಹುದು. ವಾಸ್ತವವೇನೆಂದರೆ, ಪುರುಷರು ಮತ್ತು ಮಹಿಳೆಯರು ಜ್ಞಾನದ ಅನ್ವೇಷಣೆಯೂ ಸೇರಿದಂತೆ, ತಮ್ಮ ಜೀವನದಲ್ಲಿ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅವರು ಪ್ರಾಮಾಣಿಕವಾಗಿ ನೇರವಾದ ಪಥವನ್ನು ಕಂಡುಹಿಡಿಯಲು ಶ್ರಮಿಸುವವರೆಗೆ, ಅವರು ಕುರುಡು ಅನುಯಾಯಿಗಳಾಗಿರುತ್ತಾರೆ ಮತ್ತು ಮಾನಸಿಕ ಬಂಧನಕ್ಕೆ ಒಳಪಟ್ಟಿರುತ್ತಾರೆ. ಅಲ್ಲಾಹನು ಎರಡೂ ಲಿಂಗಗಳಿಗೆ (ಪುರುಷರಿಗೆ ಹಾಗೂ ಮಹಿಳೆಯರಿಗೆ) ಒಂದೇ ರೀತಿಯ ಸ್ವಾತಂತ್ರ್ಯವನ್ನು ನೀಡಿದ್ದಾನೆ. ಇಬ್ಬರಿಗೂ ಸ್ವತಃ ತಮ್ಮ ಒಳಿತಿಗಾಗಿ ಮತ್ತು ಕ್ಷೇಮಕ್ಕಾಗಿ, ತಾವೇ ಚಿಂತನೆ ನಡೆಸಬೇಕಾಗಿದೆ. ಅಲ್ಲಾಹನ ಹೆಸರಿನಲ್ಲಾಗಲೀ ಅಥವಾ ಬೇರೆ ಹೇಗೆಯೇ ಆಗಲಿ - ಅವರಿಂದ ಆ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ವಿಮರ್ಶಾತ್ಮಕವಾಗಿ ಚಿಂತಿಸಲು, ತೂಗಿನೋಡಿ ಪರಿಗಣಿಸಲು ಮತ್ತು ಎಲ್ಲವನ್ನು ಪರಿಶೀಲಿಸಲು, ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನತೆಯನ್ನು ನೀಡಲಾಗಿದೆ. ತಾವು ನಿರ್ಧರಿಸುವ ಮೊದಲು ಅವುಗಳ ಪರಿಣಾಮಗಳ ಬಗ್ಗೆ ಅವರು ಮುಂದಾಲೋಚನೆ ಮಾಡಬೇಕು.

ಅಲ್ಲಾಹನು ಅವರು ಮುನ್ನಡೆಯಲು ಉದ್ದೇಶಿಸುವ ರೀತಿಯಲ್ಲೇ ಅವರಿಗೆ ಬೆಂಬಲಿಸುತ್ತಾನೆ. ಒಬ್ಬ ಪುರುಷನು ಅಥವಾ ಮಹಿಳೆಯು ಅಲ್ಲಾಹನ ಅವತೀರ್ಣವನ್ನು ತಿರಸ್ಕರಿಸಲು ನಿರ್ಧರಿಸಿದರೆ, ಅವರು ಅಲ್ಲಾಹನಿಗೆ ಯಾವುದೇ ಹಾನಿಯನ್ನು ಉಂಟುಮಾಡುವುದಿಲ್ಲ. ವಾಸ್ತವದಲ್ಲಿ, ಅವನು ಅವರಿಗೆ ಹಾಗೆ ಮಾಡಲು ಉತ್ತೇಜನ ನೀಡುತ್ತಾನೆ.

> ನಮ್ಮ ಅವತೀರ್ಣವನ್ನು ಸುಳ್ಳಾಗಿಸುವವರನ್ನು ನಾವು ಕ್ರಮೇಣ ಅವರಿಗೆ ಅರಿವೇ ಆಗದಂತೆ ವಿನಾಶದ ಕಡೆಗೆ ಒಯ್ಯುವೆವು. ಮತ್ತು ನಾನು ಅವರಿಗೆ ಸಮಯಾವಕಾಶ ನೀಡುವೆನು. ನನ್ನ ತಂತ್ರವು ಅತ್ಯಂತ ಅಬೇಧ್ಯವಾದುದಾಗಿದೆ. (7:182-183)

ಜೀವನದುದ್ದಕ್ಕೂ ಇದುವೇ ಅನ್ವಯಿಸುತ್ತದೆ. ನಾವು ನಮ್ಮ ದೃಷ್ಟಿಯನ್ನು ಹತೋಟಿಯಲ್ಲಿಟ್ಟು ಪರಿಶುದ್ಧವಾಗಿ ಇರಿಸಿಕೊಳ್ಳದಿದ್ದರೆ, ನಮಗೆ ಅರಿವಿಲ್ಲದಂತೆ ನಾವು ಯಾವುದನ್ನು ಮಾಡಬಾರದೋ ಅದರ ಕಡೆಗೆ ಅಲ್ಲಾಹನು ನಮ್ಮನ್ನು ಸಾಗಿಸುವನು. ನಮಗೆ ಯಾವುದೇ ಒಳಿತು ಬಂದೊದಗಿದರೆ ಅದು ಅಲ್ಲಾಹನಿಂದಾಗಿರುತ್ತದೆ, ಮತ್ತು ನಮಗೆ ಯಾವುದೇ ಕೆಡುಕು ಸಂಭವಿಸಿದರೆ ಅದು ನಮ್ಮದೇ ಆದ ತಪ್ಪು ಕಾರ್ಯಗಳ ಪರಿಣಾಮವಾಗಿರುತ್ತದೆ.

ನಮಗೆ ಯಾರಾದರೂ ಅಲ್ಲಾಹನ ಸಲುವಾಗಿ ತೀರ್ಥಯಾತ್ರೆಯನ್ನು ನಿರ್ವಹಿಸಲು ಮಕ್ಕಾಗೆ ಪ್ರಯಾಣಿಸಲು ನಿರ್ದೇಶಿಸಿದರೆ, ನಾವು ಅರೊಂದಿಗೆ 'ಏಕೆ ಹೋಗಬೇಕು' ಎಂದು ಕೇಳುವ ಹಕ್ಕು ನಮಗಿದೆ. ಎಷ್ಟಾದರೂ, ಮಾನವರು ತಮ್ಮ ವಿವೇಕವನ್ನು ಬಳಸಲು ನಿರೀಕ್ಷಿಸಲಾಗಿದೆ.

ಕುರ್‌ಆನಿನ ಪಠ್ಯಗಳನ್ನು ಪರಿಶೀಲಿಸಿದ ನಂತರ, ತೀರ್ಥಯಾತ್ರೆಯ ಯಾವುದೇ ನೇರ ಸೂಚನೆಯನ್ನು ಕಾಣಲು ನನಗೆ ಸಾಧ್ಯವಾಗಿಲ್ಲ. ಆದಾಗ್ಯೂ, 3:97 ವಚನವು ಒಂದು ಸಂಭವನೀಯ ಪ್ರಯಾಣದ ಒಂದು ಅಸ್ಪಷ್ಟ ಸುಳಿವನ್ನು ನೀಡುತ್ತದೆ. ಈ ವಚನವನ್ನು ಒಂಟಿಯಾಗಿ ಓದಿದರೆ, ಇದು ಉತ್ತರಗಳಿಗಿಂತ ಹೆಚ್ಚಾಗಿ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಇದರ ನೈಜ್ಯ ಸಂದೇಶವನ್ನು ಅರಿಯಲು, ಹಿಂದಿನ ಎರಡು ವಚನಗಳನ್ನು ಓದಿದರೆ ಸಾಕು. ಈ ವಚನಗಳು ಧಾರ್ಮಿಕರು ನಮಗೆ ವಿವರಿಸುವುದನ್ನು ನಿರೂಪಿಸುತ್ತಿಲ್ಲವೆಂದು ನಮಗೆ ತಿಳಿದುಬರುತ್ತದೆ. ಈ ವಚನದ ಸಾರವೇನೆಂದರೆ, ಅಲ್ಲಾಹನ ವ್ಯವಸ್ಥೆಯು ದೃಢಸಂಕಲ್ಪ ಹೊಂದಿರುವವರಿಗಾಗಿ ಸ್ಥಾಪಿಸಲಾಗಿದೆ ಎಂಬುವುದಾಗಿದೆ. 3:96 ವಚನವು, '*ವ್ಯವಸ್ಥೆಯಲ್ಲಿ ಇಬ್ರಾಹೀಮರ ಸುವ್ಯಕ್ತ ನಿದರ್ಶನಗಳಿವೆ*' ಎಂಬ ಬಹಳ ಮುಖ್ಯವಾದ ಸುಳಿವೊಂದನ್ನು ನೀಡುತ್ತದೆ. ಅಂತಹ ಒಂದು ವ್ಯವಸ್ಥೆಯನ್ನು ಹುಡುಕುವ ಸವಾಲನ್ನು ತೆಗೆದುಕೊಳ್ಳುವುದೂ ದೃಢಸಂಕಲ್ಪ ಹೊಂದಿರುವವರ ಕರ್ತವ್ಯವಾಗಿದೆ. ಇದನ್ನು ಭಾಗ ಎಂಟರ '*ಬೈತದಲ್ಲಿ ಏನಿದೆ*' ಎಂಬ ಉಪ-ಶೀರ್ಷಿಕೆಯಲ್ಲಿ ಚರ್ಚಿಸಲಾಗಿದೆ.

ಉಮ್ರ ಎಂಬ ಪದವನ್ನು *ಭೇಟಿ* ಎಂದಾಗುವಂತೆ ಭ್ರಷ್ಟಗೊಳಿಸಿದ ನಂತರ, ಧಾರ್ಮಿಕರು *ಹಜ್ಜ್* ಎಂಬ ಪದದ ಅರ್ಥವನ್ನು *ವಾರ್ಷಿಕ ತೀರ್ಥಯಾತ್ರೆ* ಎಂದಾಗುವಂತೆ ತಿರುಚಿದರು.

ಹಜ್ಜ್ ಪದದ ಮೂಲವು *ಹಾ-ಜೀಮ್-ಜೀಮ್ ಅಥವಾ ಹಜ್ಜ* ಆಗಿದೆ. ಈ ಮೂಲಕ್ಕೆ ಸಂಬಂಧಿಸಿರುವ ಪ್ರಮುಖ ಪರಿಕಲ್ಪನೆಯು *ಸವಾಲು ತೆಗೆದುಕೊಳ್ಳು* ಅಥವಾ *ಎದುರಿಸು* ಎಂದಾಗಿದೆ.

ಇದನ್ನು ವಿವಿಧ ರೀತಿಯಲ್ಲಿ ಅನ್ವಯಿಸುವಾಗ ಅಸ್ಥಿರತೆಯು ಸ್ಪಷ್ಟವಾಗುತ್ತದೆ. ಸಾಂಪ್ರದಾಯಿಕ ಧಾರ್ಮಿಕರು, ಹಜ್ಜ್ ಎಂಬ ಪದಕ್ಕೆ ತೀರ್ಥಯಾತ್ರೆಯೆಂಬ ಅರ್ಥವನ್ನು ಕಲಿಸುತ್ತಾರಾದರೂ, ಈ ಪದದ ಇತರ ಉತ್ಪನ್ನಗಳಾದ *ತುಹಾಜ್ಜು* ಮತ್ತು *ಯುಹಾಜ್ಜು* ಎಂಬುವುದಕ್ಕೆ *ವಾದಿಸುವುದು* ಎಂಬ ಅರ್ಥವನ್ನು ನೀಡುತ್ತಾರೆ. ಇದು ಅವರ ಅಸ್ಪಷ್ಟತೆ ಹಾಗೂ ಅಸ್ಥಿರತೆಯ ಮತ್ತೊಂದು ಉದಾಹರಣೆಯಾಗಿದೆ. ಅವರ ಪ್ರಕಾರ, ಕುರ್‌ಆನಿನ ಒಂದೇ ಪದವು, ವಿವಿಧ ವಚನಗಳಲ್ಲಿ ಸಂಪೂರ್ಣವಾಗಿ ವಿಭಿನ್ನ ಅರ್ಥಗಳನ್ನು ನೀಡಬಹುದು.

ವಾದಿಸುವುದು ಎಂಬ ಅರ್ಥವನ್ನು ಸೂಚಿಸಲು ಕುರ್‌ಆನ್ ವ್ಯವಸ್ಥಿತವಾಗಿ *ಜದಲ*[86] ಎಂಬ ಪದವನ್ನು ಹಲವು ಬಾರಿ ಬಳಸಿದೆ. 11:32 ರಲ್ಲಿ, ತಮ್ಮೊಂದಿಗೆ ಅಧಿಕವಾಗಿ 'ವಾದಿಸುತ್ತಾರೆ' ಎಂದು ನೂಹರ ಮೇಲೆ ಅವರ ಜನರು ಆರೋಪಿಸಿದರು.

> *ಖಾಲೂ ಯಾ ನೂಹು ಖದ್ ಜಾದಲ್ತನಾ ಫ-ಅಕ್ಸರ್ತ ಜಿದಾನಲಾ ಫ'ತಿನಾ ಬಿಮಾ ತಇದುನಾ ಇನ್ ಕುನ್ತ ಮಿನ-ಸ್ಸಾದಿಖೀನ.* (11:32)
>
> ಅವರು ಹೀಗೆಂದರು, "ಓ ನೂಹ್, ನೀವು ನಮ್ಮೊಡನೆ ಅನೇಕ ವಾದಗಳೊಂದಿಗೆ ವಾದಿಸಿದೆ. ಇನ್ನು ನೀವು ಸತ್ಯವಾದಿಯಾಗಿದ್ದರೆ ನೀವು ನಮಗೆ ಬೆದರಿಕೆ ಹಾಕುತ್ತಿರುವ ಆ ಯಾತನೆಯನ್ನು ಬರಮಾಡಿಸು." (11:32)

ಈ ವಚನದಲ್ಲಿ ಪ್ರಸ್ತಾಪಿಸಲಾದ *ಜದಲ* ಎಂಬ ಕ್ರಿಯಾಪದವು ನೂಹರ ಹಾಗೂ ಅವರ ಜನರ ನಡುವೆ ನಡೆದ 'ವಾದ'ವನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಒಬ್ಬ ಮಹಿಳೆಯು ಕೊನೆಯ ಪ್ರವಾದಿಯೊಂದಿಗೆ ಯಶಸ್ವಿಯಾಗಿ 'ವಾದಿಸಿದ್ದರು':

> *ಖದ್ ಸಮಿಅಲ್ಲಾಹು ಖೌಲಲ್ಲತೀ ತುಜಾದಿಲುಕ ಫೀ ಝೌಜಿಹಾ ವ ತಸ್ತಕೀ ಇಲಲ್ಲಾಹಿ. ವಲ್ಲಾಹು ಯಸ್ಮಉ ತಹಾವುರಕುಮಾ. ಇನ್ನಲ್ಲಾಹ ಸಮೀಉನ್ ಬಶೀರ್* (58:1)
>
> ನಿಮ್ಮೊಡನೆ ತನ್ನ ಪತಿಯ ಬಗ್ಗೆ ವಾದಿಸುತ್ತಿರುವ ಹಾಗೂ ಅಲ್ಲಾಹನಲ್ಲಿ ದೂರು ಸಲ್ಲಿಸುತ್ತಿರುವ ಮಹಿಳೆಯ ಮಾತನ್ನು ಅಲ್ಲಾಹನು ಆಲಿಸಿದನು. ಅಲ್ಲಾಹನು ನಿಮ್ಮಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದಾನೆ. ಅವನು ಕೇಳುವವನೂ, ನೋಡುವವನೂ ಆಗಿದ್ದಾನೆ. (58:1)

[86] *ಜದಲ* ಮತ್ತು *ಹಜ್ಜ್* ಎಂಬುವುದು ಒಂದೇ ಅರ್ಥವನ್ನು ಹಂಚಿಕೊಳ್ಳುವ ಎರಡು ವಿಭಿನ್ನವಾದ ಪದಗಳೆಂದು ಎಲ್ಲರೂ ನಂಬ ಬೇಕೆಂದು, ಧಾರ್ಮಿಕರು ನಿರೀಕ್ಷಿಸುತ್ತಾರೆ.

ಮಹಿಳೆಯು ತನ್ನ ಪತಿಯ ಬಗ್ಗೆ ಪ್ರವಾದಿಗೆ ದೂರು ನೀಡಲಿಲ್ಲ. ಅವಳು ಪ್ರವಾದಿಯ ಜೊತೆ ವಾದಿಸಿದಳು ನಂತರ ಅಲ್ಲಾಹನೊಂದಿಗೆ ದೂರು ಸಲ್ಲಿಸಿದಳು. ಈ ಎರಡು ವಚನಗಳಿಂದ, 'ವಾದ' ಎಂಬುವುದನ್ನು 'ಸವಾಲು' ಎಂಬ ಅದೇ ವರ್ಗದಲ್ಲಿ ವರ್ಗೀಕೃತಗೊಳಿಸಲು ನಮಗೆ ಸಾಧ್ಯವಿಲ್ಲ ಎಂದು ಕಾಣಬಹುದಾಗಿದೆ. ಮೇಲಾಗಿ ಅವುಗಳು ಪ್ರತ್ಯೇಕ ಮೂಲಪದಗಳನ್ನು ಹೊಂದಿವೆ.

ನಾವು ವಿಷಯದಿಂದ ಸ್ವಲ್ಪ ತಿರುವು ತೆಗೆದುಕೊಳ್ಳೋಣ. ಮಹಿಳೆಯರು ಎರಡನೇ ದರ್ಜೆಯ ಪ್ರಜೆಗಳು ಮತ್ತು ಪುರುಷರು ಎಲ್ಲದರಲ್ಲೂ ಶ್ರೇಷ್ಠರು ಎಂದು ಅರಬೀ ಧರ್ಮದಲ್ಲಿ ಮುಲ್ಲಾಗಳು ಹೇಳುತ್ತಾರೆ. ಹುಡುಗಿಯರು ಶಾಲೆಗೆ ಹೋಗುವುದನ್ನು, ಮಹಿಳೆಯರು ಅಧಿಕಾರದ ಅಥವಾ ಹೊಣೆಗಾರಿಕೆಯ ಉದ್ಯೋಗಗಳನ್ನು ಹೊಂದುವುದನ್ನು, ಪತಿಯ ಅಥವಾ ರಕ್ತ ಸಂಬಂಧಿ ಜೊತೆಗಳಲ್ಲದೆ ಹಾಗೂ ತಲೆ ಹಾಗು ಕಾಲು ಪಾದಗಳನ್ನು ವಸ್ತ್ರದಿಂದ ಮುಚ್ಚಿಕೊಳ್ಳದೇ ಮನೆಯಿಂದ ಹೊರಗೆ ಹೋಗುವುದನ್ನು ಅವರು ವಿರೋಧಿಸುತ್ತಾರೆ. ಆದ್ದರಿಂದ, ಅವರಲ್ಲಿ ಅನೇಕರು ಕೇವಲ ಒಂದು ಲೈಂಗಿಕ ಉಪಕರಣಗಳಾಗಿ ಉಳಿದ್ದಾರೆ ಮತ್ತು ಯಾವುದೇ ಸಾಂಸಾರಿಕ ವಿಷಯಗಳಲ್ಲಿಯೂ ಸಹ ನಿರ್ಧಾರಗಳನ್ನು ತೆಗೆಯುವ ಹಕ್ಕಿನಿಂದ ವಂಚಿತರಾಗಿದ್ದಾರೆ. ಮತ್ತೊಂದೆಡೆ, ಈ ಮುಲ್ಲಾಗಳು, ತಮ್ಮ ಬೋಧನೆಗಳನ್ನು ಅನುಸರಿಸುವ ಮುಸ್ಲಿಮರಿಗೆ 'ತಮ್ಮೊಂದಿಗೆ ವಾದಿಸಬಾರದು ಅಥವಾ ತಮ್ಮನ್ನು ಪ್ರಶ್ನಿಸಬಾರದು ಅಥವಾ ತಮ್ಮ ವಿರುದ್ಧ ಮಾತನಾಡಬಾರದು' ಎಂದು ಹೇಳುತ್ತಾರೆ. ಆದರೆ, ತನ್ನ ಮೊಕದ್ದಮೆಯ ಬಗ್ಗೆ ಪ್ರವಾದಿಯೊಂದಿಗೆ ವಾದಿಸಿ ತನ್ನ ಹಕ್ಕನ್ನು ಉಪಯೋಗಿಸಿದ ಒಂದು ಮಹಿಳೆಯ ವಿಷಯವನ್ನೂ ಸೇರಿದಂತೆ, ಜನರು ಪ್ರವಾದಿಯೊಂದಿಗೂ ವಾದಿಸಬಹುದು ಎಂದು ಕುರ್'ಆನ್ ಹೇಳುತ್ತದೆ. ಹಾಗಿರುವಾಗ ಮುಲ್ಲಾಗಳು ತಮ್ಮನ್ನು ಪ್ರಶ್ನಿಸುವುದು ಮತ್ತು ಅವರೊಂದಿಗೆ ವಾದಿಸುವುದು ಮಹಾ ಪಾಪವೆಂದು ಏಕೆ ಹೇಳುತ್ತಾರೆ?

ನಾವು ವಿಷಯಕ್ಕೆ ಹಿಂತಿರುಗೋಣ. 42:16 ರಲ್ಲಿ, *ಹಜ್ಜ್* ಎಂಬ ಮೂಲಪದದ ಎರಡು ಉತ್ಪನ್ನಗಳನ್ನು ಬಳಸಲಾಗಿದೆ. ಮೊದಲನೆಯದು *ಹಾಜ್ಜೂ* ಎಂಬ ಪದ ಮತ್ತು ಎರಡನೇ ಪದವು *ಹುಜ್ಜತ*, ಅವುಗಳನ್ನು *ವಾದಿಸು* ಅಥವಾ *ಸವಾಲೊಡ್ಡು* ಎಂದು ಹೆಚ್ಚು ಸೂಕ್ತವಾಗಿ ಅನುವಾದಿಸಬಹುದು.

ನಾವು ಆ ವಚನವನ್ನು ಪರೀಶೀಲಿಸೋಣ:

> *ವಲ್ಲಝೀನ ಯುಹಾಜ್ಜೂನ ಫಿಲ್ಲಾಹಿ ಮಿನ್ ಬಅ್'ದಿ ಮಾ-ಸ್ತುಜೀಬ ಲಹೂ ಹುಜ್ಜತುಹುಮ್ ದಾಹಿಫತುನ್ ಇಂದ ರಬ್ಬಿಹಿಮ್ ವ ಅಲೈಹಿಮ್ ಘಫಬುನ್ ವ-ಲಹುಮ್ ಅಝಾಬುನ್ ಶದೀದುನ್.*
>
> ಅವರಿಗೆ ಉತ್ತರಿಸಲಾದ ನಂತರವೂ ಯಾರು ಅಲ್ಲಾಹನ ವಿಷಯದಲ್ಲಿ ವಾದಿಸುತ್ತಾರೆ *(ಯುಹಾಜ್ಜೂನ)*, ಅವರ ವಾದವು *(ಹುಜ್ಜತುಹುಮ್)* ಅವರ ಪ್ರಭುವಿನ ದೃಷ್ಟಿಯಲ್ಲಿ ನಿರರ್ಥಕವಾಗಿದೆ. ಅವರ ಮೇಲೆ ಅವನ ಪ್ರಕೋಪವಿದೆ ಮತ್ತು ಅವರಿಗೆ ಘೋರ ಯಾತನೆಯಿದೆ.

ಯುಹಾಜ್ಜೂನ ಮತ್ತು *ಹುಜ್ಜತುಹುಮ್* ಎಂಬ ಪದಗಳು *ಹಜ್ಜ್* ಮೂಲಪದದಿಂದಲೇ ಬಂದಿದೆ.

ಮರಣಾನಂತರದ ಜೀವನದಲ್ಲಿ ಅನುಯಾಯಿಗಳು ತಮ್ಮ ಪುರೋಹಿತರೊಂದಿಗೆ ಅಥವಾ ಧಾರ್ಮಿಕರ ಪಂಡಿತರೊಂದಿಗೆ ಮುಖಾಮುಖಿಯಾಗಿ, ತಮ್ಮ ನರಕಯಾತನೆಯ ಹೊರೆಯನ್ನು ಹೊತ್ತುಕೊಳ್ಳಲು ಅವರೊಂದಿಗೆ ಹೇಳುತ್ತಾರೆ. 40:47 ಹೇಳುತ್ತದೆ:

> *ವ-ಇಝ್ ಯತಹಾಜ್ಜೂನ ಫಿನ್ನಾರಿ* (40:47)
>
> ಮತ್ತು ಅವರು ನರಕದಲ್ಲಿ ವಾದಿಸುವಾಗ (40:47)

40:48 ರಲ್ಲಿ, ಧಾರ್ಮಿಕ ಪುರೋಹಿತರು ಮತ್ತು ವಿದ್ವಾಂಸರು ತಮ್ಮ ಅನುಯಾಯಿಗಳಿಗೆ ಹೀಗೆನ್ನುತ್ತಾರೆ , '*ನಾವು ಇದರಲ್ಲಿ ಸೇರಿಕೊಂಡು ಇದ್ದೆವು, ಅಲ್ಲಾಹನು ಜನರ ನಡುವೆ ತೀರ್ಮಾನಿಸಿದ್ದಾನೆ*'. 40:47 ರಲ್ಲಿನ *ಯತಹಾಜ್ಜೂನ* ಎಂಬುವುದರ ಅರ್ಥ *ಅವರು ಜಗಳಮಾಡುವರು* ಎಂದಲ್ಲ ಬದಲಿಗೆ *ಅವರು ವಾದಿಸುವರು* ಎಂದಾಗಿದೆ.

'ಹಜ್ಜಿಲ್ ಅಕ್ಬರ್' ಎಂದರೆ 'ಮಹಾ ಸವಾಲು'

ಹಜ್ಜ್ ಪದದ ಮೂಲಕ್ಕೆ ಸಂಬಂಧಿಸಿದ ಪ್ರಮುಖ ಪರಿಕಲ್ಪನೆಗಳು ಏನೆಂದರೆ, ಅದು ವಿವೇಕತೆ, ಚರ್ಚೆ ಮಾತುಕತೆ ಅಥವಾ ತರ್ಕಸಮ್ಮತ ವಾದದ ಮೇಲೆ ಆಧಾರಿತವಾದ ಯುಕ್ತಿಭರಿತ ಸವಾಲು ತೆಗೆದುಕೊಳ್ಳುವುದು ಅಥವಾ ಎದುರಿಸುವುದು ಎಂದಾಗಿದೆ. ಇದಕ್ಕೂ ತೀರ್ಥಯಾತ್ರೆಗೂ ಯಾವುದೇ ಸಂಬಂಧವಿಲ್ಲ.

ಮೂರ್ತಿ ಆರಾಧಕರ ವಿರುದ್ಧ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಶತ್ರುತ್ವದ ಒಂದು ತಾತ್ಕಾಲಿಕ ತಡೆಯ ಬಗ್ಗೆ ಸೂರ 9 ರಲ್ಲಿ ಒಂದು ಆಸಕ್ತಿದಾಯಕ ಸಂದೇಶವನ್ನು ಕಾಣುತ್ತೇವೆ.

> ನೀವು ಒಪ್ಪಂದ ಮಾಡಿಕೊಂಡಿದ್ದ ಮೂರ್ತಿ ಆರಾಧಕರಿಗೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕನ ಕಡೆಯಿಂದ ತಾತ್ಕಾಲಿಕ ವಿಮೋಚನೆ ಘೋಷಿಸಲಾಗಿದೆ. ಆದುದರಿಂದ, ನೀವು ನಾಲ್ಕು ತಿಂಗಳು ಮುಕ್ತವಾಗಿ ಭೂಮಿಯ ಮೇಲೆ ಸಂಚರಿಸಬಹುದು, ಮತ್ತು ನೀವು ಅಲ್ಲಾಹನಿಂದ ಎಂದಿಗೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದೂ, ಅಲ್ಲಾಹನು ತಿರಸ್ಕರಿಸುವವರನ್ನು ಅನಿವಾರ್ಯವಾಗಿ ಸೋಲಿಸುವನೆಂದೂ ನೀವು ತಿಳಿದುಕೊಳ್ಳಿರಿ. ಅಲ್ಲಾಹನು ಹಾಗೆಯೇ ಅವನ ಸಂದೇಶವಾಹಕರೂ ಮೂರ್ತಿ ಆರಾಧಕರಿಂದ ಸಂಬಂಧ ಕಡಿದುಹಾಕಿದ್ದಾರೆಂದು, ಮಹಾ ಸವಾಲಿನ ದಿನದಂದು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಕಡೆಯಿಂದ ಒಂದು ಘೋಷಣೆಯು ಹೊರಡಿಸಲಾಗಿದೆ. ನೀವು

> ಪ್ರಶ್ಚಾತಾಪ ಪಟ್ಟರೆ ನಿಮಗೇ ಒಳಿತು. ನೀವು ವಿಮುಖರಾದರೆ ನೀವು ಅಲ್ಲಾಹನಿಂದ ಎಂದಿಗೂ ತಪ್ಪಿಸಿಕೊಳ್ಳಲಾರಿರಿ. (9:1-3)

ಅಲ್ಲಾಹನ ಹೆಸರಿನಲ್ಲಿ ಮೂರ್ತಿ ಆರಾಧನೆಯ ಅಥವಾ ಧಾರ್ಮಿಕ ಆಚರಣೆಗಳ ಮೂಲಕ ಭೂಮಿಯಲ್ಲಿ ಭ್ರಷ್ಟತೆಯನ್ನು ಹರಡುವವರ ವಿರುದ್ಧ, ಅಲ್ಲಾಹನ ಪಥದಲ್ಲಿ ಹೋರಾಡಲು ವಿಶ್ವಾಸಿಗಳಿಗೆ ಪ್ರೇರೇಪಿಸಲಾಗಿದೆ. ಮಾನವರು ಎಲ್ಲಾ ರೀತಿಯ ಧಾರ್ಮಿಕ ಬಂಧನ ಅಥವಾ ಗುಲಾಮಗಿರಿಯಿಂದ ತಮ್ಮನ್ನು ಮುಕ್ತರಾಗಿಸಬೇಕು ಮತ್ತು ಸಂಪೂರ್ಣ ಸ್ವಾತಂತ್ರ್ಯದಿಂದ ಅಲ್ಲಾಹನು ನಿರ್ದೇಶಿಸಿದ ಜೀವನದ ರೀತಿಯನ್ನು ಸಾಗಿಸಬೇಕು. ಅಲ್ಲಾಹನ ವ್ಯವಸ್ಥೆಗೆ ತಮ್ಮ ದಾರಿಯನ್ನು ಕಂಡುಕೊಳ್ಳುವವರು, ಧರ್ಮವೆಂಬುವುದು ಮೂರ್ತಿ ಆರಾಧನೆಯ ಭಾಗವಾಗಿದೆ ಎಂದು ತಿಳಿದುಕೊಳ್ಳುತ್ತಾರೆ. ಮೂರ್ತಿ ಆರಾಧನೆಯ ವಿರುದ್ಧ ಶ್ರಮ ನಡೆಸುವುದು, ಅಲ್ಲಾಹನ ವ್ಯವಸ್ಥೆಗೆ ಬದ್ಧರಾದ ಎಲ್ಲರ ಕರ್ತವ್ಯವಾಗಿದೆ.

ಸತ್ಯವಿಶ್ವಾಸಿಗಳು ಮೂರ್ತಿ ಆರಾಧಕರೊಂದಿಗೆ ಸವಾಲು ಹಾಕಿದ್ದಾರೆಂದು ಘೋಷಿಸುವ ಸಮಯವು ಮಹಾ ಸವಾಲಿನ ದಿನವಾಗಿದೆ *(ಹಜ್ಜಿಲ್ ಅಕ್ಬರ್)*. ಕುರ್‌ಆನ್ ತನ್ನ ಅಪರಿಮಿತ ಜ್ಞಾನದಿಂದ, ಯಾವುದೇ ಮುಖಾಮುಖಿಯಲ್ಲಿ ತೊಡಗುವ ಮೊದಲು ನಾಲ್ಕು ತಿಂಗಳ ಶಾಂತಿಯುತ ಒಪ್ಪಂದವನ್ನು ಅನುಮತಿಸುತ್ತದೆ. ಮೂರ್ತಿ ಆರಾಧಕರು ತಮ್ಮ ಒಪ್ಪಂದವನ್ನು ಬದ್ಧರಾಗಿ ಪಾಲಿಸುವವರೆಗೆ, ಸತ್ಯವಿಶ್ವಾಸಿಗಳು ಅವರೊಂದಿಗೆ ಯಾವುದೇ ರೀತಿಯ ವಿರೋಧವನ್ನು ವ್ಯಕ್ತಪಡಿಸಕೂಡದು. ಶಸ್ತ್ರಾಸ್ತ್ರಗಳ ಯುದ್ಧದ ಸಾಂಪ್ರದಾಯಿಕ ತಿಳುವಳಿಕೆಗೆ ವಿರುದ್ಧವಾಗಿ, ಯುದ್ಧದ ಬಗ್ಗೆ ಕುರ್‌ಆನಿನ ಪರಿಕಲ್ಪನೆಯು, ಅಸತ್ಯದ ವಿರುದ್ಧ ಸತ್ಯವನ್ನು ಹರಡುವ ಉದ್ದೇಶವನ್ನು ಹೊಂದಿರುವ ಹೋರಾಟವಾಗಿದೆ. ಶಾಂತಿಪರತೆಯನ್ನು ಉತ್ತೇಜಿಸಲು ಬೇಕಾದ ಮಹಾನ್ ಜಿಹಾದ್ ಅಥವಾ *ಜಿಹಾದನ್ ಕಬೀರ* ಅಥವಾ ಮಹತ್ವದ ಹೋರಾಟವು, ಕುರ್‌ಆನಿನ ಮೂಲಕವಾಗಿರಬೇಕು, ಅಲ್ಲದೆ ಯಾವುದೇ ರೀತಿಯ ಶಾರೀರಿಕ ಸಂಘರ್ಷಗಳಿಂದಲ್ಲ. ಅಸತ್ಯದ ವಿರುದ್ಧ ಹೋರಾಡಲು ಇರುವ ಪ್ರಬಲ ಆಯುಧವು ಕುರ್‌ಆನ್ ಆಗಿದೆ.

> ಮೂರ್ತಿ ಆರಾಧಕರನ್ನು ಅನುಸರಿಸಬೇಡಿರಿ ಮತ್ತು ಇದರ (ಕುರ್‌ಆನಿನ) ಜೊತೆಗೆ ಅವರೊಂದಿಗೆ ಮಹಾನ್ ಹೋರಾಟವನ್ನು *(ಜಿಹಾದನ್ ಕಬೀರ)* ಹೋರಾಡಿರಿ. (25:52)

ಇತ್ತೀಚಿನ ದಿನಗಳಲ್ಲಿ, ಯಾರೂ ಯಾವುದೇ ವಿನಾಶಕಾರಿ ಆಯುಧಗಳನ್ನು ಹಿಡಿದುಕೊಳ್ಳದೆಯೇ ಅನೇಕ ರೀತಿಯಲ್ಲಿ ಜಿಹಾದನ್ನು ಮಾಡಬಹುದು. ಏಕೆಂದರೆ, ಯುದ್ಧವು ಅಸತ್ಯ ಮತ್ತು ಮೂರ್ತಿಗಳ ಬಗ್ಗೆಯಾಗಿದೆ. ಇಬ್ರಾಹೀಮರು ತನ್ನ ಜನರಿಗೆ ಮೂರ್ತಿಗಳನ್ನು ಸೇವೆಮಾಡುವುದನ್ನು ನಿಲ್ಲಿಸಲು ಹೇಳಿದಾಗ, ಅವರ ವಿರುದ್ಧ ಯುದ್ಧವನ್ನು ಹೂಡಲು ಯಾವುದೇ ಅಸ್ತ್ರಗಳನ್ನು ಬಳಸಲಿಲ್ಲ. ಅವರು ತನ್ನ ಸಾಮಾನ್ಯ ಜ್ಞಾನವನ್ನು ಬಳಸಿದರು. ಇದೇ ರೀತಿ, ಮೂರ್ತಿಗಳ ಭಾಗಶಃ ಅಥವಾ ಯಥಾರ್ಥವಾದ ಸೇವೆ ಮಾಡುತ್ತಿರುವುದರ ಬಗ್ಗೆ ತಮ್ಮ ಸಾಮಾನ್ಯ ಪ್ರಜ್ಞೆಯನ್ನು ಬಳಸಲು ಜನರಿಗೆ ಹೇಳಲು, ನಮಗೆ ಶಸ್ತ್ರಾಸ್ತ್ರಗಳನ್ನು ಬಳಸುವ ಅವಶ್ಯಕತೆಯಿಲ್ಲ. ತಮ್ಮೊಂದಿಗೆ ಹೋರಾಡುವವರ ವಿರುದ್ಧ ಹೋರಾಡಲು ಅಲ್ಲಾಹನು ವಿಶ್ವಾಸಿಗಳಿಗೆ

ಪ್ರೋತ್ಸಾಹಿಸುತ್ತಾನಾದರೂ, ಆಕ್ರಮಣಗಳನ್ನು ನಿರುತ್ಸಾಹಿಸುತ್ತಾನೆ. ನಾವು ಸತ್ಯನಿಷೇಧಿಗಳ ಹಾಗೂ ಮೂರ್ತಿ ಆರಾಧಕರ ವಿರುದ್ಧ ಸವಾಲು ತೆಗೆದುಕೊಳ್ಳಲು ಉದ್ದೇಶಿಸಿದರೆ, ಆ ವಚನದಲ್ಲಿ ನಿರೂಪಿಸಲಾದ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಲೇ ಬೇಕಾಗಿದೆ.

'ನಾಸ್ತಿಕರ' ಕೊಲೆಯನ್ನು ವ್ಯಾಪಕಗೊಳಿಸುವುದಕ್ಕೆ, ಕುರ್‌ಆನಿನ ಬೋಧನೆಗಳನ್ನು ಮುಸ್ಲಿಮೇತರರು ಯಾವಾಗಲೂ ದೂಷಿಸುತ್ತಾರೆ. ಇದು ಅರ್ಥೈಸಬಹುದಾದ ತಪ್ಪು ತಿಳಿವಳಿಕೆಯಾಗಿದೆ. ಈ ಗ್ರಂಥವನ್ನು, ಅದರಲ್ಲಿ ವಿಶ್ವಾಸವಿರಿಸುತ್ತೇವೆ ಎಂದು ಹೆಸರಿಗಾಗಿ ಹೇಳಿಕೊಳ್ಳುವ ಜನರೊಂದಿಗೆ ಸಂಬಂಧಿಸಿಕೊಳ್ಳುವ ಜನರನ್ನು ನಮಗೆ ದೂಷಿಸಲು ಸಾಧ್ಯವಿಲ್ಲ. ಈ ವಚನದಲ್ಲಿ ಘೋಷಿಸಲಾದ ಯುದ್ಧವು ಸ್ಪಷ್ಟವಾಗಿ ಹೇಳುವುದೇನೆಂದರೆ, *ಶತ್ರುಗಳು ಅಲ್ಲಾಹನ ಬಳಿ ಪಶ್ಚಾತ್ತಾಪ ಪಡುವಂತೆ ಮತ್ತು ತಮ್ಮನ್ನು ಸುಧಾರಿಸಿಕೊಳ್ಳುವಂತೆ ನಿರೀಕ್ಷಿಸಲಾಗಿದೆ.* ಅಷ್ಟೆ! ಅವರು ತಿರಸ್ಕರಿಸಿದರೆ, ನಾವು ಅವರೊಂದಿಗೆ ಹೇಳಬೇಕಿರುವುದು ಇಷ್ಟೆ - *ಅವರಿಗೆ ಅಲ್ಲಾಹನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.* ಅಂದರೆ, ಅವರು ಭೋಧಿಸುತ್ತಿರುವ ಅಸತ್ಯಕ್ಕಾಗಿ ಅಲ್ಲಾಹನು ಅವರೊಂದಿಗೆ ಈ ಲೋಕದಲ್ಲಿ ಅಥವಾ ಮುಂದಿನ ಜೀವನದಲ್ಲಿ ವ್ಯವಹರಿಸುತ್ತಾನೆ. ಶತ್ರುಗಳೇ ಆರಂಭಿಸಿದ ಸಂದರ್ಭವನ್ನು ಹೊರತು ಪಡಿಸಿ, ಯಾರ ವಿರುದ್ಧವೂ ಒಂದು ಶಾರೀರಿಕ ಯುದ್ಧವನ್ನು ನಡೆಸುವ ವಿಷಯವೇ ಇಲ್ಲ.

ಅಲ್ಲಾಹನ ಪಥದಲ್ಲಿ ತಮ್ಮೊಡನೆ ಹೋರಾಡುವವರ ವಿರುದ್ಧ ಪಣತೊಡುವುದು, ಅಲ್ಲಾಹನ ಹಾಗೂ ಅಂತ್ಯದಿನದ ಮೇಲೆ ವಿಶ್ವಾಸವಿರಿಸುವವರ ಕರ್ತವ್ಯವಾಗಿದೆ ಎಂದು 2:190-193 ರಲ್ಲಿ ಹೇಳಲಾಗಿದೆ. ಕುರ್‌ಆನಿನ ಪ್ರಕಾರ ಇದಾಗಿದೆ ನಿಜವಾದ *ಜಿಹಾದ್*. ಶತ್ರುಗಳು ನಿಮ್ಮನ್ನು ಕೊಲ್ಲುವ ಉದ್ದೇಶದಿಂದ ನಿಮ್ಮ ಮೇಲೆ ದಾಳಿ ನಡೆಸಿದರೆ ಮಾತ್ರ ಅವರನ್ನು ಕೊಲ್ಲಲು ಅನುಮತಿಸಲಾಗಿದೆ, ಮತ್ತು ಅವರು ನಿಮ್ಮನ್ನು ಎಲ್ಲಿಂದ ಹೊರದಬ್ಬಿಸಿದರೋ ಅಲ್ಲಿಂದ ಮಾತ್ರ ನೀವು ಅವರನ್ನು ಹೊರದಬ್ಬಿಸಬಹುದಾಗಿದೆ.

ಶತ್ರುಗಳು ಹಿಂದೆ ಸರಿದರೆ, ಅವರ ವಿರುದ್ಧ ಹೋರಾಟವನ್ನು ಮುಂದುವರಿಸುವುದಕ್ಕೆ ಯಾವುದೇ ಕಾರಣವಿರುವುದಿಲ್ಲ. ಜನರು ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ಆದೇಶಗಳನ್ನು ಸಂಪೂರ್ಣ ಸ್ವಾತಂತ್ರ್ಯದಿಂದ ನಿರ್ವಹಿಸುವುದರ ವಿರುದ್ಧ ಇರುವ ದಬ್ಬಾಳಿಕೆಯನ್ನು ತಡೆಯಲು ಮಾತ್ರ ಹೋರಾಟವನ್ನು ಪ್ರೋತ್ಸಾಹಿಸಲಾಗಿದೆ.

ನಾಲ್ಕು ನಿರ್ಬಂಧಿತ ತಿಂಗಳುಗಳಲ್ಲಿ ಸತ್ಯವಿಶ್ವಾಸಿಗಳು ಶತ್ರುಗಳ ವಿರುದ್ಧ ಹೋರಾಡಬಾರದು. ಈ ನಿರ್ಬಂಧಿತ ತಿಂಗಳಲ್ಲಿ ಆಕ್ರಮಣಕ್ಕೊಳಗಾದ ಸಂದರ್ಭದಲ್ಲಿ, 2:194 ಅನ್ವಯಿಸುತ್ತದೆ:

> ನಿರ್ಬಂಧಿಸುವ ತಿಂಗಳುಗಳು ನಿರ್ಬಂಧಿತ ತಿಂಗಳುಗಳಾಗಿವೆ ಮತ್ತು ನಿರ್ಬಂಧಿಸಲಾಗುವುದೆಲ್ಲವೂ ಘೋಷಿತವಾಗಿರಬೇಕು. ಆದುದರಿಂದ ನೀವು ಆಕ್ರಮಿಸಲ್ಪಟ್ಟರೆ, ಅವರು ನಿಮ್ಮ ಮೇಲೆ

> ಆಕ್ರಮಿಸಿದಂತೆಯೇ ನೀವೂ ಅವರನ್ನು ಆಕ್ರಮಿಸಿರಿ. ಮತ್ತು ಅಲ್ಲಾಹನನ್ನು ಲಕ್ಷಿಸಿರಿ, ಮತ್ತು ಅಲ್ಲಾಹನು ಲಕ್ಷ್ಯತೆ ವಹಿಸುವವರ ಜೊತೆಗಿದ್ದಾನೆಂದು ತಿಳಿದುಕೊಳ್ಳಿರಿ. (2:194)
>
> ನಿರ್ಬಂಧಿತ ಮಾಸಗಳು ಕಳೆದ ಬಳಿಕ, ಮೂರ್ತಿ ಆರಾಧಕರು ನಿಮಗೆ ಎಲ್ಲೇ ಎದುರಾದರೂ ಅವರೊಂದಿಗೆ ಹೋರಾಡಿರಿ, ಉದ್ರೇಕಿಸಿರಿ, ಪ್ರಚೋದಿಸಿರಿ ಮತ್ತು ಅವರ ಬಗ್ಗೆ ಎಚ್ಚರದಿಂದಿರಿ. ಅವರು ಪಶ್ಚಾತ್ತಾಪ ಪಟ್ಟರೆ ಮತ್ತು ತಮ್ಮ ಬದ್ಧತೆಗಳನ್ನು ಪಾಲಿಸಿದರೆ ಮತ್ತು ಅವುಗಳನ್ನು ಶುದ್ಧವಾಗಿರಿಸಿದರೆ, ನೀವು ಅವರನ್ನು ಕ್ಷಮಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿದ್ದಾನೆ. (9:5)

ಅಲ್ಲಾಹನ ಪಥದಲ್ಲಿ ಹೋರಾಡುವುದು *(ಅಥವಾ ಜಿಹಾದು ಫೀಸಬೀಲಿಲ್ಲಾಹಿ)* ಎಂಬ ಪರಿಕಲ್ಪನೆಯು, ಅರಬೀ ಧರ್ಮದ ಜಿಹಾದಿಗೆ ವಿರುದ್ಧವಾಗಿದೆ. ಧಾರ್ಮಿಕರು ಜನರನ್ನು ಕೊಲ್ಲುವುದರಲ್ಲಿ ಸಂತೋಷಪಡುತ್ತಾರೆ. 'ನಾಸ್ತಿಕರನ್ನು' ಕೊಂದರೆ ಸ್ವರ್ಗವು ಕಟ್ಟಿಟ್ಟ ಬುತ್ತಿಯೆಂದು ಅವರು ತಮ್ಮ ಅನುಯಾಯಿಗಳಿಗೆ ಕಲಿಸುತ್ತಾರೆ. ಇಂತಹ ಬೋಧನೆಗಳು ತಪ್ಪಾಗಿ ಅಲ್ಲಾಹನ ಮೇಲೆ ಹೊರಿಸಲಾಗಿದೆ ಮತ್ತು ಅವರು ಆಳವಾಗಿ ನಿಂದಿಸಿರುವ ಗ್ರಂಥವಾದ ಕುರ್‌ಆನಿನಲ್ಲಿ ಇದು ಎಲ್ಲಿಯೂ ಕಂಡುಬರುವುದಿಲ್ಲ.

ಹಾಗೆ 9:1-4 ವಚನವು, ಕುರ್‌ಆನಿನಲ್ಲಿನ ಅರಬೀ ಧಾರ್ಮಿಕರಿಂದ ಅತ್ಯಂತ ನಿಂದಿಸಲ್ಪಟ್ಟ ವಚನಗಳಲ್ಲಿ ಒಂದಾಗಿದೆ. ಅದಲ್ಲದೆ ಈ ವಾಕ್ಯವೃಂಧವು, ಸಂದೇಶವಾಹಕರಿಂದ ಅಥವಾ ಅವರ ಅನುಯಾಯಿಗಳಿಂದ *ಹಜ್ಜೆಲ್ ಅಕ್ಬರ್* ಅಥವಾ ಮಹಾ ಸವಾಲಿನ ದಿನ ಎಂದು ಕರೆಯಲ್ಪಡುವ, ಮೂರ್ತಿ ಆರಾಧಕರಿಂದ ಸಂಪರ್ಕ ಕಡೆದುಕೊಳ್ಳುವ ಘೋಷಣೆಯ ಪ್ರಾಮುಖ್ಯತೆಗೆ ಒತ್ತುನೀಡುತ್ತದೆ. ಇದು ಯಾವುದೇ ರೀತಿಯ 'ಮಹಾ ತೀರ್ಥಯಾತ್ರೆ' ಅಲ್ಲ.

ಹಾಜ್ಜ ಇಬ್ರಾಹೀಮ

2:258 ವಚನವು ಇಬ್ರಾಹೀಮರ ವಿರುದ್ಧ ಸವಾಲು ತೆಗೆದುಕೊಂಡ ಒಬ್ಬ ಮನುಷ್ಯನ ಕಥೆಯಾಗಿದೆ. ಇಲ್ಲಿ ಬಳಸಲಾದ ಪದಗಳು *ಹಾಜ್ಜ ಇಬ್ರಾಹೀಮ* ಎಂದಾಗಿದೆ. ಇದರ ಅರ್ಥವು ಆ ಮನುಷ್ಯನು *ಇಬ್ರಾಹೀಮರನ್ನು ಮಕ್ಕಾದ ತೀರ್ಥಯಾತ್ರೆಗೆ ಕಳುಹಿಸಿದನು* ಎಂದಲ್ಲವೆಂದು ನಮಗೆ ಸ್ಪಷ್ಟವಾಗುತ್ತದೆ.

ಮಕ್ಕಾದ ಕಲ್ಲಿನ ವಿಗ್ರಹಕ್ಕೆ ತಮ್ಮ ತೀರ್ಥಯಾತ್ರೆಯನ್ನು ಪೂರ್ಣಗೊಳಿಸಿದ ಹಲವಾರು ಅರಬೇತರ ಮುಸ್ಲಿಮರು ತಮ್ಮ ಹೆಸರಿನ ಜೊತೆಗೆ ಹಾಜಿ ಎಂದು ಸೇರಿಸಿಕೊಳ್ಳುತ್ತಾರೆ (ಉದಾ: ಹಾಜಿ ಸುಲೈಮಾನ್ ಅಥವಾ ಹಾಜಿ ರಹೀಮುದ್ದೀನ್). ಈ ರೂಢಿಯ ಮೇಲೆ ಸ್ವತಃ ಅರಬರೂ ನಗುತ್ತಾರೆ.

ಅಲಮ್ ತರ ಇಲಲ್ಲಝೀ ಹಾಜ್ಜ ಇಬ್ರಾಹೀಮ ಫೀ ರಬ್ಬಿಹೀ (2:258)

ಇಬ್ರಾಹೀಮರೊಂದಿಗೆ ಅವರ ಪ್ರಭುವಿನ ಬಗ್ಗೆ ಸವಾಲು ತೆಗೆದುಕೊಂಡಂತಹ ವ್ಯಕ್ತಿಯನ್ನು ನೀವು ಪರಿಗಣಿಸುವುದಿಲ್ಲವೇ? (2:258)

ಮೇಲಿನ ವಚನದಲ್ಲಿನ *ಹಾಜ್ಜ* ಎಂಬ ಪದವು, 9:19 ರಲ್ಲಿ ಉಲ್ಲೇಖಿಸಲಾದ *ಹಾಜ್ಜೀ* (*ಹಾಜ್ಜೀ ವಲ್ ಇಮಾರತಲ್ ಮಸ್ಜಿದಿಲ್ ಹರಾಮಿ* - ಅಂದರೆ, ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು ಉತ್ತೇಜಿಸಲು ಸವಾಲು ತೆಗೆದುಕೊಳ್ಳುವ ಜನರು) ಎಂಬ ಎರಡೂ ಪದಗಳು ಒಂದೇ ಮೂಲಪದಿಂದಿರುವ ಉತ್ಪನ್ನಗಳಾಗಿವೆ.

ಈ ಅಧ್ಯಯನವು, ಧಾರ್ಮಿಕರ ಮೂಲಕ ಕುರ್‌ಆನಿನ ವಿರುದ್ಧ ನಡೆದ ಭಾಷಾರ್ಥಶಾಸ್ತ್ರದ ತಿರುಚುವಿಕೆಯು ಹೇಗೆ ಗಂಭೀರ ಹಾಗೂ ಹಾನಿಕಾರಕ ಪರಿಣಾಮವನ್ನು ಬೀರಿತು ಎಂಬುವುದನ್ನು ತೋರಿಸುತ್ತದೆ. ಅವರು ಒಂದು ಪದವನ್ನು ತಿರುಚಿದ ಕೂಡಲೆ, ಒಂದು ಸರಣಿ ಪ್ರಕ್ರಿಯೆಯು ಸಂಭವಿಸುತ್ತದೆ. ಏಕೆಂದರೆ, ತಮ್ಮ ವಂಚನೆಯನ್ನು ಬೆಂಬಲಿಸಲಿಕ್ಕಾಗಿ ಅದೇ ಮೂಲಪದದಿಂದಿರುವ ಇತರ ಪದಗಳ ಅರ್ಥವನ್ನೂ ಅವರಿಗೆ ಬದಲಾಯಿಸಬೇಕಾಗುತ್ತದೆ. ನಾವು ನೋಡಿದಂತೆ, *ಹಜ್ಜ್* ಎಂಬ ಪದವನ್ನೂ ಸಹ ಈ ನಿಟ್ಟಿನಲ್ಲಿ ಅವರು ಹಾನಿಗೊಳಿಸಿದ್ದಾರೆ.

ಕುರ್‌ಆನಿನ ಅರಬೀ ಭಾಷೆಯು ಸುಲಭವೂ ಮತ್ತು ಪರಿಪೂರ್ಣವೂ ಆಗಿದೆ. ಅದು ಮೂಲ ಪದ ಪರಿಕಲ್ಪನೆಗಳಿಗೆ ಸಂಬಂಧಿಸಿದ ಕ್ರಿಯಾಕರ್ತನನ್ನು ಸೂಚಿಸುವ ನಾಮಪದಗಳನ್ನು ಹೇಗೆ ನಿರೂಪಿಸುತ್ತದೆ ಎಂದು ನಾವು ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ.

- *ಸ್ವಲಾತ್* ಪದದ ಅರ್ಥವು *ಬದ್ಧತೆ* ಅಥವಾ *ಕರ್ತವ್ಯ* ಎಂದಾಗಿದೆ. ಬದ್ಧನಾದ ವ್ಯಕ್ತಿಗೆ (ಏಕವಚನದಲ್ಲಿ) *ಮುಸ್ವಲ್ಲನ್* ಎಂದು ಕರೆಯಲಾಗುತ್ತದೆ (2:125). ಬಹುವಚನದಲ್ಲಿ ಅದು *ಮುಸ್ವಲ್ಲೀನ್* ಎಂದಾಗುತ್ತದೆ.

- *ಇಸ್ಲಾಂ* ಪದದ ಅರ್ಥವು *ಶಾಂತಿಪರತೆ* ಎಂದಾಗಿದೆ. ಶಾಂತಿಯಲ್ಲಿರುವ ವ್ಯಕ್ತಿಯು *ಮುಸ್ಲಿಂ* ಆಗಿರುತ್ತಾನೆ (2:131). ಬಹುವಚನದಲ್ಲಿ *ಮುಸ್ಲಿಮೀನ್* (ಪುಲ್ಲಿಂಗ), *ಮುಸ್ಲಿಮಾತ್* (ಸ್ತ್ರೀಲಿಂಗ).

- *ಇಹ್ತದ* ಪದದ ಅರ್ಥವು *ಸನ್ಮಾರ್ಗಿಯಾದನು* ಎಂದಾಗಿದೆ. ಸನ್ಮಾರ್ಗಿಗಳಾದ ಅನೇಕರಿಗೆ *ಮುಹ್ತದೀನ್* ಎನ್ನಲಾಗುತ್ತದೆ (2:16).

- *ಅಝಾನ್* ಎಂದರೆ *ಘೋಷಣೆ*. ಘೋಷಿಸುವ ವ್ಯಕ್ತಿಯು *ಮುಅಝ್ಝಿನ್* ಆಗಿರುತ್ತಾನೆ (7:44).

ಅದೇ ರೀತಿಯಲ್ಲಿ *ಹಜ್ಜ್* ಎಂಬ ಪದದ ಅರ್ಥವು *ಸವಾಲು* ಎಂದಾಗಿದೆ. ಸವಾಲು ತೆಗೆದುಕೊಳ್ಳುವ ಜನರನ್ನು *ಹಾಜ್ಜಿ* (9:19) ಎನ್ನಲಾಗುತ್ತದೆ. ಸವಾಲು ತೆಗೆದುಕೊಳ್ಳುವದರಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಜನರನ್ನು *ಮುಹಾಜಿರೀನ್* (9:100) ಎನ್ನಲಾಗುತ್ತದೆ.

ಸವಾಲು ಎಂಬುವುದು *ಹಜ್ಜ್* ಆಗಿದೆ. 3:97 ರಲ್ಲಿ, ಅಲ್ಲಾಹನ ವ್ಯವಸ್ಥೆಗೆ ನಾವು ನಮ್ಮ ದಾರಿಯನ್ನು ಕಂಡುಕೊಂಡರೆ ಅದರ ದಿಸೆಯಲ್ಲಿ ಸವಾಲನ್ನು ತೆಗೆದುಕೊಳ್ಳಬೇಕು *(ಹಾಜ್ಜ)* ಎಂದು ಅಲ್ಲಾಹನು ಹೇಳುತ್ತಾನೆ. ಮಾರ್ಗದರ್ಶನವನ್ನು *(ಹದ್ಯ)* ಜನರಿಗೆ ಉತ್ತೇಜಿಸಲು *(ಇಮಾರತ)* ಸವಾಲನ್ನು ತೆಗೆದು ಕೊಳ್ಳಿರಿ *(ಹಜ್ಜ)* ಅದು ಸ್ವೀಕಾರಾರ್ಹವಾಗುವ ತನಕ *(ಮಹಿಲ್ಲ)* (2:196). ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು ಉತ್ತೇಜಿಸುವುದರ ಮೂಲಕ *(ಇಮಾರತ)* ಸವಾಲನ್ನು ತೆಗೆದುಕೊಳ್ಳುವವರು *(ಹಾಜಿ)* (9:19) ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು *(ಮಸ್ಜಿದಲ್ಲಾಹ್)* (9:18) ಉತ್ತೇಜಿಸಲು ಯುಕ್ತರಾದ *(ಯಾ'ಮುರು)* ಜನರಾಗಿದ್ದಾರೆ.

> ತಮ್ಮ ದಾರಿಯನ್ನು ಕಂಡುಕೊಳ್ಳುವವರು ವ್ಯವಸ್ಥೆಗೆ *(ಬೈತ)* ಸವಾಲು ತೆಗೆದುಕೊಳ್ಳುವುದು *(ಹಾಜ್ಜ)* ಅಲ್ಲಾಹನ ಕಡೆಯಿಂದ ಮನುಕುಲದ ಮೇಲಿರುವ ಜವಾಬ್ದಾರಿಯಾಗಿದೆ. (3:97)

ಅಲ್ಲಾಹನ ಬಗ್ಗೆ ಮನವರಿಕೆಯಾದವರು ಮತ್ತು ಅವನಿಂದ ನಿಗದಿಪಡಿಸಲಾದ ಜೀವನ ರೀತಿಯನ್ನು ಪಾಲಿಸಲು ಬಯಸುವವರು, ಅವನ ವ್ಯವಸ್ಥೆಗಿರುವ ತಮ್ಮ ಕ್ರಮವನ್ನು ಅವರು ಕಂಡುಕೊಂಡರೆ, ಅದಕ್ಕಾಗಿ ಸವಾಲನ್ನು ತೆಗೆದುಕೊಳ್ಳಲೇಬೇಕು *(ಹಾಜ್ಜ)*. ಇದು ಕೇವಲ, ಸಮ್ಮತಿಸಲ್ಪಟ್ಟ ಆದೇಶಗಳಲ್ಲಿನ ನಿರ್ಬಂಧಗಳನ್ನು ಪ್ರಚಾರ ಮಾಡಲು, ತಮ್ಮ ಹಣ ಮತ್ತು ಪ್ರಾಣದೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಪಣತೊಡುವ ಜವಾಬ್ದಾರಿಯನ್ನು ಸ್ವೀಕರಿಸಿಕೊಳ್ಳಲು ಸಿದ್ಧರಾಗಿರುವವರಿಗೆ ಮಾತ್ರ ತೆಗೆದುಕೊಳ್ಳಲಿರುವ ಸವಾಲು ಅಥವಾ *ಹಜ್ಜ್* ಆಗಿದೆ. ಅವರಿಗಿರುವ ಒಂದು ಸಾಮಾನ್ಯ ಶತ್ರುವು - ಸಂಘಟಿತ ಧರ್ಮಗಳಾಗಿವೆ. ಪ್ರಜ್ಞಾಪೂರ್ವಕವಾಗಿಯೋ ಅಥವಾ ಅಲ್ಲವೋ – ಧರ್ಮ ಎಂಬುವುದು ಮಾನವೀಯತೆಯ ಮಹಾನ್ ಶತ್ರುವಾಗಿದೆ ಮತ್ತು ಅದರ ತತ್ವವು ಪರ್ವತಗಳನ್ನೂ ಅಳಿಸಿಹಾಕಬಹುದು. ಧಾರ್ಮಿಕ ಪ್ರವರ್ತಕರು ಜನರ ಮನಸ್ಸು, ದೇಹ ಮತ್ತು ಆತ್ಮವನ್ನು ಗುಲಾಮಗೊಳಿಸಿ, ಅವರಿಗೆ ಅಲ್ಲಾಹನ ಹೆಸರಿನಲ್ಲಿ ಬೇರ್ಪಡಿಸುವಿಕೆ ಮತ್ತು ಅಸಹಿಷ್ಣುತೆಯನ್ನು ಬೋಧಿಸುವ ಮೂಲಕ ಭೂಮಿಯನ್ನು ಭ್ರಷ್ಟಗೊಳಿಸುತ್ತಾರೆ. ಧಾರ್ಮಿಕ ನಾಯಕರು ಮತ್ತು ಸಂಕೋಲೆಗೊಳಪಟ್ಟ ಅವರ ಅನುಯಾಯಿಗಳು ಮೂರ್ತಿ ಆರಾಧಕರಾಗಿದ್ದಾರೆ. ಕುರ್'ಆನಿನಲ್ಲಿ, ಮೂರ್ತಿ ಆರಾಧಕರನ್ನು ಹೊರತುಪಡಿಸಿ ಯಾರ ವಿರುದ್ಧವೂ ಹೋರಾಡಲು ನಮಗೆ ಯಾವುದೇ ಸೂಚನೆಯನ್ನು ನೀಡಲಾಗಿಲ್ಲ. ಆದುದರಿಂದ, ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳುತ್ತಿರುವುದರಿಂದ ಅವರು ಅಲ್ಲಾಹನಿಂದ ತಪ್ಪಿಸಿಕೊಳ್ಳಲು ಎಂದಿಗೂ ಸಾಧ್ಯವಿಲ್ಲ ಎಂದು ನಿಷ್ಠುರವಾಗಿ ಜ್ಞಾಪಿಸಿಕೊಡುವುದುರ ಜೊತೆಗೆ ಮೂರ್ತಿ ಆರಾಧನೆಯಿಂದ ತಮ್ಮ ಸಂಬಂಧವನ್ನು ಕಡಿದುಹಾಕುವುದು ಮಾನವ ಸಮುದಾಯಕ್ಕಿರುವ ಮಹಾ ಸವಾಲು (*ಹಜ್ಜಿಲ್ ಅಕ್ಬರ್* - 9:3) ಆಗಿದೆ.

ಈ ಸವಾಲಿನ ಜೊತೆ ಭಾಗಿಯಾಗಿರದ ವ್ಯಕ್ತಿಗಳು ಸಾಮಾನ್ಯ ಮಾನವರಂತೆ ಶಾಂತಿಯುತವಾಗಿ ಈ ಪ್ರಪಂಚದಲ್ಲಿ ಜೀವಿಸಬಹುದು. ಅವರು ಏಕದೇವನೊಡನೆ ಯಾವುದನ್ನೂ ಸಂಯೋಜಿಸದೆ, ಉತ್ತಮ ಕಾರ್ಯಗಳನ್ನು ಮತ್ತು ಒಳ್ಳೆಯ ಕೆಲಸಗಳನ್ನು ಮಾಡುತ್ತಾ, ತಮ್ಮ ಬದ್ಧತೆಗಳನ್ನು ಪಾಲಿಸುತ್ತಿರುವ ವಾಸ್ತುಶಿಲ್ಪಿಗಳು, ವಿಜ್ಞಾನಿಗಳು, ವೈದ್ಯರು, ಅಗ್ನಿಶಾಮಕ ದಳ, ಇಂಜಿನೀಯರುಗಳು, ಸೈನಿಕರು, ವಿದ್ಯಾರ್ಥಿಗಳು, ಟ್ಯಾಕ್ಸಿ ಅಥವಾ ಟ್ರಕ್ ಚಾಲಕರು, ವ್ಯಾಪಾರಿಗಳು, ಶಿಕ್ಷಕರು, ಅಥವಾ ಸಮಾಜ ಮತ್ತು ಇಡೀ ಮಾನವಕುಲಕ್ಕೆ ಪ್ರಯೋಜನಕರವಾದ ವೃತ್ತಿಗಳಲ್ಲಿ ತೊಡಗಿರುವವರು ಆಗಿರಬಹುದು. ಈ ಭೂಮಿಯ ಮೇಲೆ ನಾವು ಮಾಡಬೇಕಿರುವುದು ಇದೇ ಆಗಿದೆ.

ಹಜ್ಜ್ ಎಂಬುವುದು, ಮಕ್ಕಾದಲ್ಲಿ ಅವರು ಕಟ್ಟಿರುವ ಒಂದು ಚೌಕ ಮನೆಯ ಸುತ್ತಲಿನ ಪ್ರದೇಶಕ್ಕಿರುವ ಗೌರವಾರ್ಪಣೆಯಲ್ಲಿ ಅಂತ್ಯಗೊಳ್ಳುವ ತೀರ್ಥಯಾತ್ರೆಯಾಗಿದೆ ಎಂದು ಧಾರ್ಮಿಕರು ಹೇಳುತ್ತಾರೆ. ಇದಾಗಿದೆ ಅವರ ಅಸ್ಪಷ್ಟತೆಯ ಪರಿಧಿ.

ಒಂದು ರೋಮನ್ ತೊಗವನ್ನುಟ್ಟುಕೊಂಡು, ನಮ್ಮ ತಲೆಯನ್ನು ಬೋಳಿಸಿ, ಕೆಲವು ಕಂಬಗಳಿಗೆ ಕಲ್ಲುಗಳನ್ನು ಎಸೆದು, ಕಪ್ಪು ಗ್ರಾನೈಟ್ ಕಲ್ಲಿಗೆ ಚುಂಬಿಸಿ ನಂತರ ಇನ್ನೊಂದು ಕಲ್ಲಿನ ಕಟ್ಟಡಕ್ಕೆ ಸುತ್ತು ಹೊಡೆದು, '*ಅಲ್ಲಾಹುವೇ ನಾನು ಬಂದಿರುವೆನು, ನಾನು ಬಂದಿರುವೆನು*' ಎಂದು ಕೂಗಿಕೊಳ್ಳುತ್ತಾ, ನಂತರ ತಮ್ಮ ಬದ್ಧತೆಗಳನ್ನು ಪೂರ್ಣಗೊಳಿಸಿದೆವು ಎಂಬ ತೃಪ್ತಿಯ ಭಾವನೆಯೊಂದಿಗೆ ದೂರ ಸರಿಯುವುದು ನಾವು ಮಾಡಬೇಕಾಗಿರುವುದಲ್ಲ. ಬದಲಿಗೆ, ಅಲ್ಲಾಹನು ಸಮ್ಮತಿಸಿಕೊಟ್ಟಿರುವ ಜೀವನ ರೀತಿಗೆ (ದೀನ್) ತಮ್ಮನ್ನು ಸಮೀಪಿಸಿಕೊಳ್ಳಲು, ಸಕ್ರಿಯವಾಗಿಯೂ ಪ್ರಜ್ಞಾಪೂರ್ವಕವಾಗಿಯೂ ನಾವು ಸವಾಲನ್ನು ತೆಗೆದುಕೊಳ್ಳುತ್ತಿರಬೇಕು. ಇದಾಗಿದೆ *ಹಜ್ಜ್*.

3:97 ಪ್ರಸ್ತಾಪಿಸುತ್ತದೆ: '*ಮನಿಸ್ತಥಾಅ ಇಲೈಹಿ ಸಬೀಲ*' ಅಂದರೆ '*ಅದಕ್ಕಿರುವ ತಮ್ಮ ಹಾದಿಯನ್ನು ಕಂಡುಕೊಳ್ಳುವವರು*'. ತೀರ್ಥಯಾತ್ರೆಯು ವಾಸ್ತವವಾಗಿಯೂ ಸೌದಿ ಅರೇಬಿಯಾದಲ್ಲಿನ ಇಂದಿನ ಮಕ್ಕಾದಲ್ಲಿರುವ ಅಥವಾ 500 ವರ್ಷಗಳ ಹಿಂದೆ ಇದ್ದ ಮಕ್ಕಾದಲ್ಲಿದ್ದ ಕಾಬಾಕ್ಕಿರುವ ಒಂದು ಧಾರ್ಮಿಕ ವಿಧಿಯಾಗಿದೆ ಎಂದು ಭಾವಿಸಿದರೂ ಸಹ, ಅಲ್ಲಿಗೆ ನಮ್ಮ ಮಾರ್ಗವನ್ನು ಕಂಡುಕೊಳ್ಳುವುದರಲ್ಲಿ ಯಾವುದೇ ರಹಸ್ಯವಿಲ್ಲ. 500 ವರ್ಷಗಳ ಹಿಂದೆಯೂ ಸಹ, ಜನರು ಮಕ್ಕಾ ಎಲ್ಲಿತ್ತೆಂದು ತಿಳಿದಿದ್ದರು. ಅಂದು ಜನರಿಗೆ ಅಲ್ಲಿಗೆ ತಲುಪಲು ಕೇವಲ ಒಂದು ಒಂಟೆ ಅಥವಾ ಕುದುರೆಯ ಮೇಲೇರಬೇಕಿತ್ತು (ಅಥವಾ ಇಂದು ಒಂದು ವಿಮಾನವನ್ನು ಏರಬೇಕಾಗಿದೆ) ಅಷ್ಟೆ. ಅದನ್ನು ಹುಡುಕುವುದರಲ್ಲಿ ಏನು ಕಷ್ಟವಿದೆ?

ಆದರೆ ಒಂದು ವಿಮಾನದಲ್ಲಿ ಅಥವಾ ಒಂಟೆಯ ಮೇಲೆ ಸವಾರಿ ಮಾಡುವ ಮೂಲಕ ಅಲ್ಲಾಹನ ವ್ಯವಸ್ಥೆಗೆ ತಲುಪಲು ಸಾಧ್ಯವಿಲ್ಲ. ಅದಕ್ಕೆ ತಲುಪಲು ನಾವು ಸವಾಲನ್ನು ತೆಗೆದುಕೊಳ್ಳಲೇಬೇಕು. ಇದು ನಮ್ಮ ಬದ್ಧತೆಗಿರುವ ಪರೀಕ್ಷೆಯಾಗಿದೆ. ನಾವು ಖಂಡಿತವಾಗಿಯೂ, ನಮ್ಮ ತಲೆಯನ್ನು ಬೋಳಿಸುವುದರಿಂದ, ಒಂದು ಜೋಡಿ ಬಳಿ ವಸ್ತ್ರ ಧರಿಸುವುದರಿಂದ, ಮಕ್ಕಳ ಹಾಗೆ ಒಂದು ಕಲ್ಲಿನ ಕಂಬಕ್ಕೆ ಕೆಲವು ಕಲ್ಲುಗಳು

ಎಸೆಯುವುದರಿಂದ, ಕಪ್ಪು ಗ್ರಾನೈಟಿನ ಒಂದು ಆಕಾರಕ್ಕೆ ಚುಂಬಿಸುವುದರಿಂದ ಅಥವಾ ಮತ್ತೊಂದು ಕಲ್ಲಿನ ಮೂರ್ತಿಗೆ ಸುತ್ತುಹೊಡೆಯುವುದರಿಂದ ಅದಕ್ಕೆ ತಲುಪಲು ಸಾಧ್ಯವಿಲ್ಲ. ನಾವು ಇವುಗಳನ್ನು ಮಾಡುವುದರಲ್ಲಿ ಪಟ್ಟುಹಿಡಿದರೆ, ನಾವು ನಮ್ಮ ಸಾಮಾನ್ಯ ಪ್ರಜ್ಞೆಯನ್ನು ಬಳಸದೆ ಮತ್ತು ಕುರ್‌ಆನಿನ ಯಾವುದೇ ಜ್ಞಾನವೂ ಇಲ್ಲದೆ, ಏನನ್ನಾದರೂ ನಿರ್ವಹಿಸುವ ಧಾರ್ಮಿಕ ಮಂದಬುದ್ಧಿಗಳಾಗಿ ಹೋಗಬಹುದು. ಮಾನವರಿಗೆ ಅಲ್ಲಾಹನ ವ್ಯವಸ್ಥೆಯ ಕಡೆಗೆ ಸವಾಲು ತೆಗೆದುಕೊಳ್ಳುವುದು *(ಹಾಜೂ)* ಮತ್ತು ಅವನ ವ್ಯವಸ್ಥೆಗೆ ತಮ್ಮನ್ನು ಅರ್ಪಿಸುವುದು ಅಥವಾ ಅವನ ವ್ಯವಸ್ಥೆಗೆ ವಿಧೇಯತೆಯಿಂದ ಸಮ್ಮತಿಸಿಕೊಳ್ಳುವುದು ಕಷ್ಟಕರವೇನಲ್ಲ. ಅವನ ವ್ಯವಸ್ಥೆಯು ಒಂದು ಧರ್ಮವಲ್ಲ. ಪೂರ್ಣವಿರಾಮ.

ಇಸ್ಲಾಂ ಅಥವಾ 'ಶಾಂತಿಪರತೆ' ಎಂಬುವುದು, ಭೂಮಿಯ ಮೇಲೆ ಯಾವುದೇ ಮಾನವನು ಪಾಲಿಸಬಹುದಾದಂತಹ, ಸಾರ್ವತ್ರಿಕ ಜೀವನ ರೀತಿಯಾಗಿದೆ. ಇದಕ್ಕೆ ಯಾವುದೇ ಸಂಸ್ಥೆಯ ಅಥವಾ ಸಂಘಟನೆಯ ಅಗತ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ, ಲುಕ್ಮಾನಿನಂತಹ ಬುದ್ಧಿವಂತ ಪುರುಷರೂ ಇರುತ್ತಾರೆ, ಅವರು ಅಲ್ಲಾಹನಿಂದ ಯಾವುದೇ ಸಮ್ಮತಿಸಲ್ಪಟ್ಟ ಆದೇಶಗಳನ್ನು ಪಡೆಯಲಿಲ್ಲ, ಆದರೆ ಅವರಿಗೆ ವಿವೇಕತೆಯನ್ನು ನೀಡಲಾಗಿತ್ತು.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಮಾಡುವುದಕ್ಕೆಲ್ಲವೂ ತಾನೇ ಜವಾಬ್ದಾರನಾಗಿದ್ದಾನೆ. ಪ್ರತಿಯೊಬ್ಬನನ್ನೂ ವೈಯ್ಯಕ್ತಿಕವಾಗಿ ವಿಚಾರಣೆ ಮಾಡಲಾಗುತ್ತದೆ. ವಿಶ್ವಾಸವಿರಿಸಲು ಅಥವಾ ವಿಶ್ವಾಸವಿರಿಸದೇ ಇರಲು ನಮಗೆ ಸ್ವಾತಂತ್ರ್ಯವಿದೆ.

ಹಜ್ಜ್ ಎಂದರೆ ಬೌದ್ಧಿಕ ಸವಾಲು ಅಥವಾ ಒಂದು ಸವಾಲಿಗಿರುವ ಪ್ರತಿಕ್ರಿಯೆ ಎಂದಾಗಿದೆ. ಅದು ಯಾವುದೇ ಆಕಾರ ಅಥವಾ ರೂಪದಲ್ಲಿ ತೀರ್ಥಯಾತ್ರೆ ಎಂಬ ಅರ್ಥವನ್ನು ನೀಡುವುದಿಲ್ಲ.

ಇಬ್ರಾಹೀಮ್ ಮತ್ತು ಇಸ್ಮಾಯೀಲರು ಯಾವತ್ತೂ ಮಕ್ಕಾಗೆ ಬಂದಿರಲಿಲ್ಲ

ಮುಸ್ಲಿಮರು ತಮ್ಮ ಗ್ರಂಥದಲ್ಲಿ ಲಿಖಿತಗೊಂಡಿರುವುದನ್ನು ನಿಷೇಧಿಸುವುದಕ್ಕೆ ಹೊರತುಪಡಿಸಿದರೆ - ಇಬ್ರಾಹೀಮರು ಮತ್ತು ಇಸ್ಮಾಯೀಲರು ಮಕ್ಕಾದಲ್ಲಿ ಎಂದಿಗೂ ತಮ್ಮ ಕಾಲೂರಲೇ ಇಲ್ಲ ಎಂಬುವುದಕ್ಕೆ ಕುರ್‌ಆನಿನಲ್ಲಿ ದೃಢವಾದ ಪುರಾವೆಗಳಿವೆ.

ಇಬ್ರಾಹೀಮರು ಮತ್ತು ಇಸ್ಮಾಯೀಲರು ಒಂದು ಭೌತಿಕ ಮನೆಯನ್ನು ಕಟ್ಟಿಸಿದರು ಎಂಬುವುದಕ್ಕೆ ಕುರ್‌ಆನಿನಲ್ಲಿ (2:125-129 ಸೇರಿದಂತೆ) ಯಾವುದೇ ಪುರಾವೆ ಇಲ್ಲ. ಸತ್ಯಾಂಶವೇನೆಂದರೆ, ಮೂಸಾ, ಈಸಾ ಮತ್ತು ಇತರ ಸಂದೇಶವಾಹಕರ ಹಾಗೆ, ಇಬ್ರಾಹೀಮರು ಮತ್ತು ಇಸ್ಮಾಯೀಲರು ಅರಬರನ್ನು ಎಚ್ಚರಿಸುವುದಕ್ಕಾಗಿ ಪ್ರವಾದಿಗಳಾಗಿಯೋ ಅಥವಾ ಸಂದೇಶವಾಹಕರಾಗಿಯೋ ಮಕ್ಕಾಕ್ಕೆ ಬಂದಿರಲೇ ಇಲ್ಲ.

ಅಲ್ಲಾಹನ ಮನೆಯನ್ನು ನಿರ್ಮಿಸಲು ಮತ್ತು ಶುದ್ಧೀಕರಿಸಲು ಮಕ್ಕಾಗೆ[87] ಹೋಗಲು ಅಲ್ಲಾಹನು ಇಬ್ರಾಹೀಮರನ್ನು ಪ್ರೇರೇಪಿಸಿರುತ್ತಿದ್ದರೆ, ಮಕ್ಕಾದ ಅರಬರನ್ನು ಮತ್ತು ಅದರ ಸುತ್ತಲಿನ ಅರಬರನ್ನು ಎಚ್ಚರಿಸುವುದು ಖಂಡಿತವಾಗಿಯೂ ಹಾಗೂ ಸಹಜವಾಗಿಯೂ ಅವರ ಬಾಧ್ಯತೆಯಾಗುತ್ತಿತ್ತು.

ಆದರೆ ಕುರ್‌ಆನ್ ಹೇಳುವುದು, ಅರಬರು ಉಮ್ಮೀಗಳಾಗಿದ್ದರು, ಅಂದರೆ ಅವರು ಅಲ್ಲಾಹನ ಗ್ರಂಥದ ಯಾವುದೇ ಪೂರ್ವಜ್ಞಾನ ಇಲ್ಲದವರಾಗಿದ್ದರು ಅಥವಾ ಅಲ್ಲಾಹನ ಸೇವೆಯ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆಯದವರಾಗಿದ್ದರು. ಅವರು ಮಹಮ್ಮದರಿಗಿಂತ ಮುಂಚೆ, ಯಾವುದೇ ಎಚ್ಚರಿಕೆಗಾರರನ್ನು ಸ್ವೀಕರಿಸಿರಲಿಲ್ಲ.

> ವಸ್ತುಶಃ ನಾವು ಈ ಮುಂಚೆ ಇವರಿಗೆ ಓದತಕ್ಕ ಯಾವುದೇ ಗ್ರಂಥವನ್ನು ಕೊಡಲೂ ಇಲ್ಲ ಮತ್ತು ನಿಮಗಿಂತ ಮುಂಚೆ ಇವರ ಕಡೆಗೆ ಎಚ್ಚರಿಕೆ ಕೊಡುವಂತಹವನನ್ನು ಕಳುಹಿಸಿದ್ದೂ ಇಲ್ಲ. (34:44)

ಇದೊಂದು ಪ್ರಬಲವಾದ ಪುರಾವೆಯಾಗಿದೆ ಮತ್ತು ಅರ್ಥಮಾಡಿಕೊಳ್ಳಲು ಸುಲಭವಾದುದಾಗಿದೆ. "*ನಿಮಗಿಂತ ಮುಂಚೆ ಇವರ ಕಡೆಗೆ ಎಚ್ಚರಿಕೆ ಕೊಡುವಂತಹವನನ್ನು ಕಳುಹಿಸಿಲೇ ಇಲ್ಲ*".

ಮುಹಮ್ಮದರು ಅವರ ಸುತ್ತಲಿನ ಅರಬರಿಗೆ ಕಳುಹಿಸಲಾದ ಮೊದಲ ಸಂದೇಶವಾಹಕರಾಗಿದ್ದರು. ಮುಹಮ್ಮದರು ಮಕ್ಕಾದಲ್ಲಿ ಜನಿಸಿದ್ದರು ಎಂದು ಧಾರ್ಮಿಕರು ನಂಬುವುದರಿಂದ, ಇಬ್ರಾಹೀಮರು ಈ ಹಿಂದೆ ಅಲ್ಲಿಗೆ ಬಂದಿರಲು ಯಾವುದೇ ಸಾಧ್ಯತೆಗಳಿಲ್ಲ.

ಅಲ್ಲಾಹನಿಗೆ ಸಮ್ಮತಿಸಿಕೊಳ್ಳುವುದು ಎಂದರೆ, ಅವನ ಗ್ರಂಥದಲ್ಲಿ ಸಮ್ಮತಿಸಿರುವವುಗಳನ್ನು ಎತ್ತಿಹಿಡಿಯುವುದಾಗಿದೆ. ಅವನಿಂದ ವಿಧಿಸಲಾಗಿರುವ ಆದೇಶಗಳು, ಅಲ್ಲಾಹನ ಮೂಲ ವ್ಯವಸ್ಥೆಯಾಗಿ *(ಬೈತುಲ್ ಅತೀಕ್)* ಮನುಕುಲಕ್ಕೆ ಸ್ಥಾಪಿಸಲಾಗಿದೆ. ಈ ಆಜ್ಞೆಗಳನ್ನು ಮೊತ್ತಮೊದಲು ಮಾನವ ಸಮುದಾಯಕ್ಕೆ ನಾಯಕನನ್ನಾಗಿ ನಿಯೋಜಿಸಲಾದಾಗ ಇಬ್ರಾಹೀಮರಿಗೆ ಅವತರಿಸಲಾಗಿತ್ತು. ನಂತರ, ಈ ಆದೇಶಗಳನ್ನು ಅಶುದ್ಧಗೊಳಿಸಬಾರದೆಂದು ಜನರಿಗೆ ಘೋಷಿಸಲು ಇಬ್ರಾಹೀಮರಿಗೆ ಹೇಳಲಾಯಿತು.

> ಸತ್ಯನಿಷೇಧವನ್ನು ಕೈಗೊಂಡವರು, ಅಲ್ಲಾಹನ ಮಾರ್ಗದಿಂದ ಹಾಗೂ ನಾವು ಸಕಲ ಮಾನವರಿಗಾಗಿ ನಾವು ಸ್ಥಾಪಿಸಿರುವಂತಹ ಸಮಾನವಾಗಿ ಸಮರ್ಪಿಸಿಕೊಳ್ಳಬಹುದಾದ ಮತ್ತು ಸ್ಪಷ್ಟವಾದ ಸಮ್ಮತಿಸಲ್ಪಟ್ಟ ಆದೇಶಗಳಲ್ಲಿನ ನಿರ್ಬಂಧಗಳಿಂದ ಇತರರನ್ನು ತಡೆಯುವವರು, ಮತ್ತು ದುರಾಗ್ರಹವನ್ನು ಕೈಗೆತ್ತಿಕೊಂಡವರು - ನಾವು ಇವರಿಗೆ ವೇದನಾಯುಕ್ತ ಯಾತನೆಯ ರುಚಿಯನ್ನು ಸವಿಸುವೆವು. ಮತ್ತು ನಾವು ಇಬ್ರಾಹೀಮರಿಗೆ ವ್ಯವಸ್ಥೆಯಲ್ಲಿ *(ಬೈತ)* ಒಂದು ಸ್ಥಾನವನ್ನು ನಿಯೋಜಿಸಿದ ಸಂದರ್ಭ, (ಅವರಿಗೆ ಹೇಳಲಾಯಿತು), '*ನನ್ನ ಜೊತೆ ಯಾವುದನ್ನೂ*

[87] ಅನೇಕ ವರ್ಷಗಳ ಕಾಲ ನಾನು ಕುರ್‌ಆನನ್ನು ಓದುತ್ತಿದ್ದರೂ, ಮುಹಮ್ಮದರ ಮುಂಚಿತವಾಗಿ ಅರಬೀ ಜನಾಂಗಕ್ಕೆ ಯಾವುದೇ ಪ್ರವಾದಿಗಳು ಅಥವಾ ಸಂದೇಶವಾಹಕರನ್ನು ಕಳುಹಿಸಲಾಗಿಲ್ಲ ಎಂಬ ಕುರ್‌ಆನಿನ ಸಂದೇಶವನ್ನು ನಾನು ಗಮನಿಸಿಯೇ ಇರಲಿಲ್ಲ.

ಸಂಯೋಜಿಸಬೇಡಿರಿ, ಮತ್ತು ನನ್ನ ವ್ಯವಸ್ಥೆಯನ್ನು *(ಬೈತಿಯ)* ಜನಸಮೂಹಕ್ಕೆ, ನಿಷ್ಠಾವಂತರಿಗೆ, ವಿಧೇಯರಾಗಿ ಸಮ್ಮತಿಸಿಕೊಳ್ಳುವವರಿಗೆ ಶುದ್ಧೀಕರಿಸಿರಿ. ನಿಮಗೆ ಒಂದು ವ್ಯಕ್ತಿಯ ನೆಲೆಯಲ್ಲಿ ನೀಡಲಾದ ಮತ್ತು ಪ್ರತಿಯೊಂದು ಜವಬ್ದಾರಿಯುತ ವ್ಯಕ್ತಿಗಳಿಗೆ ಪ್ರತಿಯೊಂದು ರೀತಿಯ ಯುಕ್ತಿಸಾಧನಗಳಿಂದ ಅಗಾಧವಾಗಿ ನೀಡಲಾದ ಸವಾಲಿನೊಂದಿಗೆ ಜನರಿಗೆ ಘೋಷಿರಿಸಿರಿ. ಹಾಗೆ ಅವರು ತಮ್ಮ ಪ್ರಯೋಜನಗಳನ್ನು ಸ್ವತಃ ಸಾಕ್ಷಿಯಾಗಬಹುದು. ಮತ್ತು ಸಾಕು ಪ್ರಾಣಿಗಳಿಂದ ಅವರಿಗೆ ನೀಡಿಲಾಗಿರುವ ಅನುಗ್ರಹಗಳ ಮೇಲೆ ಅವರು ತಮಗೆ ತಿಳಿದಿರುವ ದಿನಗಳಲ್ಲಿ ಅಲ್ಲಾಹನ ಹೆಸರನ್ನು ಜ್ಞಾಪಿಸಿಕೊಳ್ಳುವರು. ಆದ್ದರಿಂದ ಅವುಗಳಿಂದ ತಿನ್ನಿರಿ ಹಾಗೂ ಅಗತ್ಯವಿರುವವರಿಗೆ ಮತ್ತು ಬಡವರಿಗೆ ನೀಡಿರಿ. ನಂತರ ಅವರು ತಮ್ಮ ಅಶುದ್ಧತೆಯನ್ನು ತೆಗೆದು ಹಾಕಬೇಕು ಮತ್ತು ಅವರು ತಮ್ಮ ಒಪ್ಪಂದವನ್ನು ಪೂರೈಸಬೇಕು, ಹಾಗೆ ಅವರು ಮೂಲ ವ್ಯವಸ್ಥೆಗೆ *(ಬೈತಿಲ್ ಅತೀಕ್)* ಪರಿಚಿತರಾಗುವರು. ಮತ್ತು ಯಾರು ಅಲ್ಲಾಹನ ನಿರ್ಬಂಧಗಳನ್ನು ಗೌರವಿಸುವನು, ಅದು ಅವನಿಗೆ ತನ್ನ ಪ್ರಭುವಿನಿಂದಿರುವ ಸದ್ಗುಣವಾಗಿದೆ. ಮತ್ತು ನಿಮಗೆ ಓದಿ ಹೇಳಲಾದವುಗಳನ್ನು ಹೊರತುಪಡಿಸಿರುವ ಜಾನುವಾರುಗಳು ನಿಮಗೆ ಅನುಮತಿಸಲಾಗಿದೆ. ಮತ್ತು ಮೂರ್ತಿ ಆರಾಧನೆಯ ಅಶುದ್ಧಿಯನ್ನು ತೊಲಗಿಸಿರಿ ಮತ್ತು ಸುಳ್ಳು ಹೇಳುವುದರಿಂದ ದೂರವಿರಿ. ಅಲ್ಲಾಹನಿಗೆ ಪ್ರಾಮಾಣಿಕರಾಗಿರಿ ಮತ್ತು ಅವನ ಜೊತೆ ಯಾವುದನ್ನೂ ಸಂಯೋಜಿಸದಿರಿ.....(22:25-31)

60:4 ರಲ್ಲಿ, *'ನಿಮಗೆ ಇಬ್ರಾಹೀಮ್ ಮತ್ತು ಅವರ ಸಂಗಾತಿಗಳಲ್ಲಿ ಒಂದು ಉತ್ತಮ ಆದರ್ಶವಿದೆ'* ಎಂದು ಹೇಳಲಾಗಿದೆ. ಇಬ್ರಾಹೀಮರು ಮತ್ತು ಅವರನ್ನು ಹಿಂಬಾಲಿಸಿದವರು ಸಮ್ಮತಿಸಲ್ಪಟ್ಟಿರುವ ಆದೇಶಗಳಲ್ಲಿನ ನಿರ್ಬಂಧಗಳನ್ನು ಪರಿಶುದ್ಧವಾಗಿ ಉಳಿಸಿಕೊಂಡರು. ಅವರು ಸುಳ್ಳು ಹೇಳಿಕೆಗಳನ್ನು ಅಥವಾ ಅಲ್ಲಾಹನ ಅವತೀರ್ಣವಲ್ಲದವುಗಳನ್ನು ದೂರವಿರಿಸಿದರು. 22:27 ರಲ್ಲಿ ನಾವು ಕಂಡಂತೆ, ಇಬ್ರಾಹೀಮರಿಗೆ ಅಲ್ಲಾಹನ ವ್ಯವಸ್ಥೆಗೆ ನಿಜವಾದ ಮುಸ್ಲಿಮರನ್ನು ಮುನ್ನಡೆಸುವ ಸವಾಲನ್ನು *(ಬಿಲ್ ಹಜ್ಜಿ)* ನೀಡಲಾಗಿತ್ತು. ಒಂದು ಅನಾಚಾರಿಕ ವಿಧಿಯನ್ನು ನಿರ್ವಹಿಸಲು ಮಕ್ಕಾಗೆ ಹೋಗಲು ಇಬ್ರಾಹೀಮರು ಯಾರಿಗೂ ಕರೆನೀಡಿರಲಿಲ್ಲ ಬದಲಿಗೆ ಅಲ್ಲಾಹನಿಂದ ಸಮ್ಮತಿಸಲ್ಪಟ್ಟಿರುವ ಆದೇಶಗಳಲ್ಲಿನ ನಿರ್ಬಂಧಗಳನ್ನು ಪಾಲಿಸುವುದರ ಮೂಲಕ ಮೂರ್ತಿ ಪೂಜೆಯಿಂದ ದೂರ ಉಳಿಯುವ ಸವಾಲನ್ನು ತೆಗೆದುಕೊಳ್ಳಲು ಹೇಳಿದರು.

ಒಂದು ವೇಳೆ *ಹಜ್ಜ್* ಎಂಬುವುದು ಧಾರ್ಮಿಕರು ನಮ್ಮನ್ನು ನಂಬಿಸಲು ಪ್ರಯತ್ನಿಸುತ್ತಿರುವುದೇ ಆಗಿದ್ದರೆ - ಇಬ್ರಾಹೀಮರಿಂದ ಹಿಡಿದು, ಯುಗಯುಗಾಂತರವಾಗಿ ಗತಿಸಿಹೋದ ಎಲ್ಲಾ ದೈವಭಯುವುಳ್ಳ ಜನರು ಮಕ್ಕಾಗೆ ಕನಿಷ್ಠ ಒಂದು ಪ್ರಯಾಣವನ್ನಾದರೂ ಮಾಡಿರುತ್ತಿದ್ದರು. ಇಸ್ಹಾಕ್, ಯಾಕೂಬ್, ಇಸ್ಮಾಯೀಲ್, ಯೂಸುಫ್, ಝಕರಿಯ್ಯಾ, ಯೂನುಸ್, ಮೂಸಾ, ಹಾರೂನ್, ದಾವೂದ್, ಸುಲೈಮಾನ್, ಯಹ್ಯಾ ಅಥವಾ ಈಸಾ ಇವರಾರೂ ಯಾವುದೇ ಕಾರಣಕ್ಕಾಗಿಯೂ ಮಕ್ಕಾಗೆ ಪ್ರಯಾಣ ಮಾಡಿರುದನ್ನು ಸೂಚಿಸುವ ಒಂದೇ ಒಂದು ಪುರಾವೆಯು ಕುರ್‌ಆನಿನಲ್ಲಿ ಎಲ್ಲಿಯೂ ಇಲ್ಲ. ಅವರು ಬಂದಿರುತ್ತಿದ್ದರೆ, ಅರಬೀ ಜನಾಂಗಕ್ಕೆ

ಮುಹಮ್ಮದರ ಮುಂಚಿತವಾಗಿ ಸಂದೇಶವಾಹಕರು ಬಂದಿದ್ದರು ಎಂದಾಗುತ್ತಿತ್ತು, ಅದು ಮೇಲೆ ಈಗಾಗಲೇ ತಿಳಿಸಿದಂತೆ ಕುರ್‌ಆನ್ ನಿರಾಕರಿಸುತ್ತದೆ.

ಅರಬರು ಅನಾಚಾರಿಗಳಾಗಿದ್ದರು

ಅರಬೀ ಧಾರ್ಮಿಕರು ಅಲ್ಲಾಹನ ಗ್ರಂಥಗಳ ಬಗ್ಗೆ ಅಜ್ಞರಾಗಿದ್ದರು ಮತ್ತು ಇಬ್ರಾಹೀಮ್, ಇಸ್ಮಾಯೀಲ್, ಇಸ್ಹಾಕ್, ಯಾಕೂಬ್ ಮತ್ತು ಇತರ ಪ್ರವಾದಿಗಳು ಪಾಲಿಸುತ್ತಿದ್ದ ವ್ಯವಸ್ಥಿತ ಜೀವನ ರೀತಿ ಅಥವಾ ದೀನಿನ ಬಗ್ಗೆ ಮತ್ತು ಮಾಸಾ, ಈಸಾರಿಗೆ ಅವತರಿಸಲಾಗಿರುವುದರ ಬಗ್ಗೆ ತಿಳುವಳಿಕೆ ಇಲ್ಲದವರಾಗಿದ್ದರು. ಆದ್ದರಿಂದ ಇಬ್ರಾಹೀಮ್, ಮೂಸಾ, ಈಸಾ ಮತ್ತು ಹಿಂದಿನ ಇತರ ಸಂದೇಶವಾಹಕರು ಪರಿಚಿತರಾಗಿದ್ದಂತಹ, ಅಲ್ಲಾಹನಿಂದ ನಿಗದಿಪಡಿಸಲಾದ ಜೀವನ ರೀತಿ *(ದೀನಿಲ್ಲಾಹ್)*, ಅವನ ಕಾನೂನುಗಳ *(ಶಆಇರಲ್ಲಾಹ್)* ಅಳವಡಿಸಿಕೊಳ್ಳುವಿಕೆ, ಅವನ ಮಿತಿಗಳು *(ಹುದೂದುಲ್ಲಾಹ್)*, ಅವನಿಂದ ನಿರೂಪಿಸಲ್ಪಟ್ಟ ಒಂದು ಸಾಮರಸ್ಯವಾದ ವ್ಯವಸ್ಥೆ *(ಆಮಿನಲ್ ಬೈತಲ್ ಹರಾಮಿ)*, ಅವನ ಸಮ್ಮತಿಸಲ್ಪಟ್ಟ ಆದೇಶಗಳು *(ಮಸಾಜಿದಲ್ಲಾಹ್)*, ಸಮ್ಮತಿಸಲ್ಪಟ್ಟ ನಿರ್ಬಂಧಗಳು *(ಮಸ್ಜಿದಿಲ್ ಹರಾಮಿ)* ಮತ್ತು 'ಅಲ್ಲಾಹನ ಪಥ' *(ಫೀ ಸಬೀಲಿಲ್ಲಾಹ್)* ಎಂಬಿತ್ಯಾದಿ ಪರಿಕಲ್ಪನೆಗಳ ಬಗ್ಗೆ ಅವರಿಗೆ ಯಾವುದೇ ಜ್ಞಾನವಿರಲಿಲ್ಲ.

ಅವರು ಅಲ್ಲಾಹನ ಗ್ರಂಥಗಳ ಬಗ್ಗೆ ಪೂರ್ವಜ್ಞಾನವನ್ನು ಹೊಂದಿರದೇ ಇದ್ದ ಒಂದು ಜನಾಂಗವಾಗಿದ್ದರಿಂದ ಅಲ್ಲಾಹನು ಅವರನ್ನು ಉಮ್ಮೀಗಳೆಂದು ಉಲ್ಲೇಖಿಸಿದ್ದಾನೆ. 62:2 ಹೇಳುತ್ತದೆ:

> ಅವನು ಗ್ರಂಥದ ಬಗ್ಗೆ ಯಾವುದೇ ಜ್ಞಾನವಿರದ ಜನಾಂಗದ[88] ಪೈಕಿಯಿಂದ ಒಬ್ಬ ಸಂದೇಶವಾಹಕನನ್ನು ಕಳುಹಿಸಿದನು, ಅವರಿಗೆ ಗ್ರಂಥವನ್ನೂ, ವಿವೇಕತೆಯನ್ನೂ ಕಲಿಸಿಕೊಡಲು, ಮತ್ತು ಅವರನ್ನು ಸಂಸ್ಕರಿಸಲು ಅವರು (ಸಂದೇಶವಾಹಕರು) ಅವತೀರ್ಣವನ್ನು ಓದಿ ಹೇಳುತ್ತಾರೆ. ಮತ್ತು ವಾಸ್ತವವಾಗಿ ಅವರು, ಹಿಂದಿನಿಂದಲೂ ಸಂಪೂರ್ಣ ನಷ್ಟದಲ್ಲಿದ್ದರು. (62:2)

ವಾಸ್ತವದಲ್ಲಿ, ಅರಬರ ಕಡೆಗೆ ಮುಹಮ್ಮದರನ್ನು ಕಳುಹಿಸುವ ಮೊದಲು, ಜೀವನದ ವ್ಯವಸ್ಥಿತ ರೀತಿ ಅಥವಾ ದೀನಿನ ಬಗ್ಗೆ ಸಂಪೂರ್ಣ ನಷ್ಟದಲ್ಲಿದ್ದರು. ದುಃಖಕರವೆಂದರೆ ನಿರೀಕ್ಷಿಸಲಾದಂತೆ, ಅವರು ಅದರಲ್ಲೇ ಮುಂದುವರೆದಿದ್ದಾರೆ.

---

[88] 'ಉಮ್ಮಿಯ್ಯೀನ್' ಎಂಬ ಪದವನ್ನು ಎಲ್ಲಾ ಜನಪ್ರಿಯ ಅನುವಾದಕರು *ಅನಕ್ಷರಸ್ತರು* ಎಂದು ತಪ್ಪಾಗಿ ಭಾಷಾಂತರಿಸಿದ್ದಾರೆ. ಈ ಪದವು ಅನಕ್ಷರಸ್ತರನ್ನು ಸೂಚಿಸುತ್ತದೆ ಎಂದೂ, ಸಂಪೂರ್ಣ ಅರಬೀ ಜನಾಂಗವು ಅನಕ್ಷರಸ್ತರಾಗಿದ್ದರು ಎಂದೂ ಪರಿಣಿತ ವಿದ್ವಾಂಸರು ಈಗಲೂ ಭಾವಿಸಿದ್ದಾರೆ. ಯಾವುದೇ ಚಿಂತನಾರ್ಹ ವ್ಯಕ್ತಿಯು ಇದನ್ನು ಒಪ್ಪಲು ಸಾಧ್ಯವಿದೆಯೇ?

ಅವರು ಅನಾಚಾರಿಗಳಾಗಿದ್ದ ಕಾರಣ, ಸಹಜವಾಗಿ ಅವರು ಕೇವಲ ಅಲ್ಲಾಹನ ಸೇವೆಯನ್ನು ಮಾತ್ರ ಮಾಡಲು ನಿರಾಕರಿಸಿದರು. ಮೊದಲ ದಿನದಿಂದಲೇ, ಅವರು ಸಂದೇಶವಾಹಕರನ್ನೂ ಮತ್ತು ಅವತೀರ್ಣವನ್ನೂ ತಿರಸ್ಕರಿಸಿದರು. ಮುಸ್ಲಿಂ ವಿದ್ವಾಂಸರು, ಈ ಮನುಷ್ಯನನ್ನು ಅರಬರ ನಡುವೆ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿ ಚಿತ್ರಿಸುತ್ತಾರೆ ಆದರೆ ಅವರ ನಿರಾಶೆ ಮತ್ತು ಹತಾಶೆಯ ಬಗ್ಗೆ ಏನೂ ಹೇಳುವುದಿಲ್ಲ. ನಾವು ಈ ವ್ಯಕ್ತಿಯ ಬಗೆಗಿನ ಕುರ್‌ಆನಿನಲ್ಲಿ ಹೇಳಿರುವಂತಹ, ನಮ್ಮಲ್ಲಿ ಹೆಚ್ಚಿನವರು ಕೇಳಲೇ ಇದ್ದಂತಹ ಕೆಲವು ಸನ್ನಿವೇಶಗಳನ್ನು ಓದೋಣ.

ಮೊದಲು, ಅವರಿಗೆ ಆಪ್ತರಾದವರನ್ನು ಸೇರಿದಂತೆ ಅವರ ಸುತ್ತಮುತ್ತಲಿದ್ದ ಜನರ ಬಗ್ಗೆ ಅನ್ವೇಷಣೆ ನಡೆಯುವಾಗ, ಕುರ್‌ಆನ್ ಸಂಪೂರ್ಣವಾಗಿ ವಿಭಿನ್ನವಾದ ಚಿತ್ರಣವನ್ನು ನೀಡುವುದಾಗಿ ನಾವು ಕಾಣುತ್ತೇವೆ. ಕುರ್‌ಆನಿನ ಹೊರಗಿರುವ ಪ್ರವಾದಿಗಳ ಹೇಳಿಕೆಗಳು ತಮ್ಮ ವಶದಲ್ಲಿವೆ ಎಂದು ಉಲೆಮಾಗಳು ಹೇಳುತ್ತಾರೆ. ಅವರು ಜೀವಂತವಾಗಿರುವಾಗಲೂ, ಅವರ ಆಪ್ತ ಸ್ನೇಹಿತರು ಪ್ರವಾದಿಯೊಂದಿಗೆ ಬೇಡಿಕೆ ಮುಂದಿರಿಸಿದ್ದು ಅದನ್ನೇ ಆಗಿತ್ತು. "ಕುರ್‌ಆನಿನ ಬದಲಿಗೆ *ಬೇರೆ ಯಾವುದನ್ನಾದರೂ* ತನ್ನಿರಿ" ಎಂದು ಅವರು ಹೇಳುತ್ತಿದ್ದರು. ನಿಸ್ಸಂಶಯವಾಗಿ ಮುಹಮ್ಮದರು ಅದನ್ನು ನಿರಾಕರಿಸಿದ್ದರು.

> ನಮ್ಮ ಸುವ್ಯಕ್ತ ಅವತೀರ್ಣಗಳನ್ನು ಅವರಿಗೆ ಓದಿಕೇಳಿಸುವಾಗ, ನಮ್ಮನ್ನು ಭೇಟಿಯಾಗುವ ನಿರೀಕ್ಷೆ ಇಲ್ಲದವರು, "ಇದರ ಬದಲಿಗೆ ಇನ್ನೊಂದು ಕುರ್‌ಆನನ್ನು ತನ್ನಿರಿ, ಇಲ್ಲವೇ ಇದರಲ್ಲಿ ತಿದ್ದುಪಡಿ ಮಾಡಿರಿ" ಎಂದು ಹೇಳುತ್ತಾರೆ. ನೀವು ಹೇಳಿರಿ, "ನನ್ನ ಇಚ್ಛೆಯಿಂದ ಇದರಲ್ಲೇನಾದರೂ ಮಾರ್ಪಾಟು ಮಾಡಲು ನನಗೆ ಸಾಧ್ಯವಿಲ್ಲ. ನಾನಂತೂ ಕೇವಲ ನನಗೆ ಅವತೀರ್ಣಿಸಲ್ಪಡುವುದನ್ನು ಅನುಸರಿಸುತ್ತೇನೆ. ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ ನನಗೆ ಒಂದು ಭಯಾನಕ ಯಾತನೆಯ ಭಯವಿದೆ" (ಹೀಗೂ) ಹೇಳಿರಿ, "ಅಲ್ಲಾಹನು ಇಚ್ಛಿಸಿದ್ದರೆ, ನಾನು ಇದನ್ನು ನಿಮಗೆ ಓದಿ ಕೇಳಿಸುತ್ತಿರಲಿಲ್ಲ ಹಾಗೂ ನೀವು ಇದರ ಬಗ್ಗೆ ಎಂದಿಗೂ ಅರಿಯುತ್ತಿರಲಿಲ್ಲ. ನಾನು ಇದಕ್ಕೆ ಮುಂಚೆ ನಿಮ್ಮ ನಡುವೆ ದೀರ್ಘಕಾಲ ಕಳೆದಿರುತ್ತೇನೆ. ನೀವೇಕೆ ವಿವೇಚಿಸುವುದಿಲ್ಲ?" (10:15-16)

ಹಾಗಾದರೆ, ಮುಸ್ಲಿಂ ವಿದ್ವಾಂಸರು 'ಪ್ರವಾದಿಯ ಹೇಳಿಕೆಗಳು' ಎಂದು ಕರೆಯುವ ಹದೀಸುಗಳು ಎಲ್ಲಿಂದ ಬಂದವು? ಕೊನೆಯ ಪ್ರವಾದಿಯು ತನ್ನ ಸ್ನೇಹಿತರಿಗೆ, 'ನಾನು ನನ್ನ ಕಡೆಗೆ ಅವತರಿಸಲ್ಪಡುವುದನ್ನು ಮಾತ್ರ ಅನುಸರಿಸುತ್ತೇನೆ' ಎಂದು ಹೇಳಿದ್ದರು - ಮತ್ತು ಅವರಿಗೆ ಅವತೀರ್ಣಗೊಳಿಸಲ್ಪಟ್ಟಿರುವ ಏಕೈಕ ಸಂಗತಿಯು ಕುರ್‌ಆನ್ ಮಾತ್ರವಾಗಿದೆ ಹಾಗೂ ಕುರ್‌ಆನಲ್ಲದೇ ಬೇರೇನೂ ಅಲ್ಲ ಎಂದು ನಮಗೆಲ್ಲರಿಗೂ ತಿಳಿದಿದೆ. ಪ್ರವಾದಿಯ ಹದೀಸುಗಳು ವಾಸ್ತವದಲ್ಲಿ ಕುರ್‌ಆನಿನ ಹೊರಗಿನ ಅರಬರು ಕೇಳಿಕೊಳ್ಳುತ್ತಿದ್ದ '*ಬೇರೆ ಏನೋ*' ಆಗಿದೆ.

ಕೊನೆಯ ಪ್ರವಾದಿಯು ತಮ್ಮ ಸಮಕಾಲೀನರ ಸ್ನೇಹವನ್ನು ಕಾಪಾಡುವ ಸಲುವಾಗಿ ಅವರ ಬೇಡಿಕೆಯನ್ನು ಬಹುತೇಕ ಒಪ್ಪಿಕೊಂಡಿದ್ದರು. ಅಲ್ಲಾಹನು ತನ್ನ ಕರುಣೆಯ ಕಾರಣದಿಂದಾಗಿ, ಅವರ ಹೃದಯವನ್ನು

ಬಲಗೊಳಿಸಿದನು ಮತ್ತು ಒಂದು ವೇಳೆ ಪ್ರವಾದಿಯರು ಕುರ್‌ಆನಿನ ಹೊರತು *'ಬೇರೆ ಏನನ್ನಾದರೂ'* ಆವಿಷ್ಕರಿಸಿದರೆ, ಅಲ್ಲಾಹನು ಅವರಿಗೆ ಈ ಪ್ರಪಂಚದಲ್ಲಿಯೂ ಮತ್ತು ಮರಣಾನಂತರವೂ ದ್ವಿಗುಣ ಶಿಕ್ಷೆಯನ್ನು ವಿಧಿಸುವನು ಎಂಬ ಬಲವಾದ ಪದ ಪ್ರಯೋಗದೊಂದಿಗೆ ಬೆದರಿಸಿದನು.

> ನೀವು ನಮ್ಮ ಹೆಸರಿನಲ್ಲಿ *'ಬೇರೆ ಏನನ್ನಾದರೂ'* ಕೃತಕವಾಗಿ ಆವಿಷ್ಕರಿಸುವ ಸಲುವಾಗಿ, ಅವರು ನಿಮ್ಮನ್ನು ನಮ್ಮ ಅವತೀರ್ಣದಿಂದ ಬಹುತೇಕವಾಗಿ ತಿರುಗಿಸಿಬಿಟ್ಟಿದ್ದರು. (ನೀವು ಹಾಗೆ ಮಾಡಿರುತ್ತಿದ್ದರೆ) ತಕ್ಷಣ ಅವರು ನಿಮ್ಮನ್ನು ತಮ್ಮ ಆಪ್ತ ಮಿತ್ರನನ್ನಾಗಿ ಮಾಡುತ್ತಿದ್ದರು. ನಾವು ನಿಮ್ಮನ್ನು ಬಲಪಡಿಸದೆ ಇರುತ್ತಿದ್ದರೆ, ನೀವು ಅಲ್ಪ ಸ್ವಲ್ಪವಾದರೂ ಅವರ ಕಡೆಗೆ ವಾಲಿ ಬಿಡುವವರಾಗಿದ್ದಿರಿ. ನೀವು ಹಾಗೆ ಮಾಡಿರುತ್ತಿದ್ದರೆ, ನಾವು ನಿಮಗೆ ಈ ಜೀವನದಲ್ಲೂ ಮತ್ತು ಮರಣಾನಂತರವೂ ಇಮ್ಮಡಿ ಯಾತನೆಯ ಸವಿಯುನ್ನುಣಿಸುತ್ತಿದ್ದೆವು. ಅನಂತರ ನೀವು ನಮ್ಮ ವಿರುದ್ಧ ಯಾವ ಸಹಾಯಕನನ್ನೂ ಪಡೆಯುತ್ತಿರಲಿಲ್ಲ. (17:73-75)

ಇಂತಹ ಸ್ಥಳಗಳಲ್ಲಿ ಕುರ್‌ಆನ್ ಸ್ಪಷ್ಟವಾಗಿ ಹೇಳುವುದನ್ನು ನಮ್ಮ ಮುಸ್ಲಿಂ ವಿದ್ವಾಂಸರು ಮತ್ತು ಮುಲ್ಲಾಗಳು ನಂಬವುದಿಲ್ಲ. ಸಂದೇಶವಾಹಕರು ಅವರಿಗೆ ಕುರ್‌ಆನ್ ಅಲ್ಲದೆ *'ಬೇರೆ ಏನನ್ನೋ'* ನೀಡಿದ್ದಾರೆಂದು ಅವರು ವಾದಿಸುತ್ತಾರೆ. ಈ *'ಬೇರೆ ಏನೋ'* ಎಂಬ ಸಂಗತಿಯನ್ನು ಅವರು *ಹದೀಸ್* ಎಂದು ಕರೆಯುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕುರ್‌ಆನ್ ಹೇಳುತ್ತಿರುವುದು ಸುಳ್ಳಾಗಿದೆ ಎಂದು ಅವರು ಹೇಳುತ್ತಾರೆ.

ಕೊನೆಯ ಪ್ರವಾದಿಗೆ ಅನೇಕ ಆಪ್ತ ಸಂಗಾತಿಗಳಿದ್ದರೆಂದು ವಿಶ್ವದ ಮುಗ್ಧ ಮುಸ್ಲಿಮರು ಹೇಳಿಕೊಳ್ಳುವ ಮೂಲಕ ತಮ್ಮ ಉಲೆಮಾರಿಂದ ವಂಚಿಸಲ್ಪಟ್ಟಿದ್ದಾರೆ. ಪ್ರವಾದಿಗೆ ಸಾವಿರಾರು ಅನುಯಾಯಿಗಳು ಮತ್ತು ಬೆಂಬಲಿಗರು ಇದ್ದರು ಎಂದೂ ಅವರು ಹೇಳುತ್ತಾರೆ. ಪ್ರವಾದಿಯು ಒಂದು ಗುಹೆಯೊಳಗೆ ಶತ್ರುಗಳಿಂದ ರಕ್ಷಣೆ ಪಡೆದುಕೊಂಡಿದ್ದಾಗ ಅವರ ಜೊತೆಗೆ ಇದ್ದದ್ದು, ಕೇವಲ ಒಬ್ಬ ವ್ಯಕ್ತಿಯಾಗಿತ್ತೆಂದು 9:40 ವಚನವು ಹೇಳುತ್ತದೆ. ಆವಾಗ ಅವರ ಇತರ ನಿಷ್ಠಾವಂತ ಅನುಯಾಯಿಗಳು ಎಲ್ಲಿ ಹೋಗಿದ್ದರು?

ಪ್ರವಾದಿಯು ಅಕ್ಷರಸ್ತ ವ್ಯಕ್ತಿಯಾಗಿದ್ದರು ಎಂಬುವುದಕ್ಕೆ ಕುರ್‌ಆನಿನಲ್ಲಿ ಸ್ಪಷ್ಟ ಪುರಾವೆಗಳಿದ್ದರೂ ಸಹ, ಎಲ್ಲಾ ಮುಸ್ಲಿಂ ವಿದ್ವಾಂಸರು ಈ ಮನುಷ್ಯನು ಅನಕ್ಷರಸ್ತ ವ್ಯಕ್ತಿಯೆಂದು ಹೇಳುವ ಮೂಲಕ ಪ್ರವಾದಿಯನ್ನು ಅವಹೇಳನ ಮಾಡುತ್ತಿದ್ದಾರೆ. 44:14 ರಲ್ಲಿ ಕೊನೆಯ ಪ್ರವಾದಿಯ ಸುತ್ತಲಿನ ಅರಬರು, 'ಇವನು ಅಕ್ಷರಜ್ಞನಾಗಿದ್ದಾನೆ (*ಮುಅಲ್ಲಮುನ್*)' ಎಂದು ಕರೆದಿದ್ದರು, ಆದರೆ ಅವರೇ 'ಇವನು *ಮಜ್ನೂನ್* ಅಂದರೆ ಹುಚ್ಚ' ಎಂದೂ ಕರೆದಿದ್ದರು.

> ಅವರು ಜ್ಞಾಪಿಸಿಕೊಟ್ಟಾಗ ಹೇಗೆ ಪ್ರತಿಕ್ರಿಯೆ ನೀಡಿದ್ದರು? ಮತ್ತು ಇವರ ಬಳಿಗೆ ನಿಶ್ಚಯವಾಗಿಯೂ ಸುವ್ಯಕ್ತ ಸಂದೇಶವಾಹಕನು ಬಂದಿದ್ದನು. ಆದರೆ ಅವರು ಅವನನ್ನು ಕಡೆಗಣಿಸಿದರು ಮತ್ತು 'ಇವನ್ನೊಬ್ಬ ಅಕ್ಷರಜ್ಞನೂ *(ಮುಅಲ್ಲಮುನ್)* ಹುಚ್ಚನೂ *(ಮಜ್ನೂನ್)* ಆಗಿದ್ದಾನೆ' ಎಂದು ಹೇಳಿದರು.

ಕೊನೆಯ ಪ್ರವಾದಿಯು ಅನಕ್ಷರಸ್ಥರಾಗಿದ್ದರು ಎಂಬ ಸುಳ್ಳಾರೋಪವನ್ನು ಇಂದು ವಿಶ್ವದಾದ್ಯಂತ ಧಾರ್ಮಿಕರು, ಆಯತುಲ್ಲಾಹ್'ಗಳು, ಉಲೆಮಾಗಳು, ಗುರುಗಳು, ಮುಲ್ಲಾಗಳು ಮತ್ತು ಇಸ್ಲಾಮೀ ವಿದ್ವಾಂಸರು, ಪ್ರಚಾರಮಾಡುತ್ತಿದ್ದಾರೆ. ಆದರೆ ಕುರ್'ಆನ್ ಇದಕ್ಕೆ ವಿರುದ್ಧವಾಗಿ ಹೇಳುತ್ತಿದೆ. ಪ್ರವಾದಿಯ ಬಗ್ಗೆಗಿನ ಅವರ ಈ ಹೇಳಿಕೆಗಳು ತೀರಾ ಸರಳವಾದ ವಿಷಯವಾಗಿದೆ ಎಂದು ಅವರು ಭಾವಿಸುತ್ತಿದ್ದರೆ, ಬಹುಶಃ ಅವರು ಸುಳ್ಳಾರೋಪ ಹಾಕುವುದರ ಬಗ್ಗೆ ಕುರ್'ಆನ್ ಏನು ಹೇಳುತ್ತದೆ ಎಂಬುವುದನ್ನು ಯೋಚಿಸಬೇಕಾಗಿದೆ:

> ನೀವು ನಿಮ್ಮ ನಾಲಿಗೆಯೊಂದಿಗೆ ಅಪವಾದವನ್ನು ಪುನರಾವರ್ತಿಸುತ್ತೀರಿ, ಹಾಗೆಯೇ ನಿಮ್ಮ ಬಾಯಿಗಳಿಂದ ಉಚ್ಚರಿಸುತ್ತೀರಿ. ಅದು ಸರಳ ಸಂಗತಿಯೆಂದೂ ನೀವು ಭಾವಿಸಿರುತ್ತೀರಿ ಆದರೆ ಅದು ಅಲ್ಲಾಹನ ನೋಟದಲ್ಲಿ ಬಹಳ ಗಂಭೀರವಾದ ಅಪರಾಧವಾಗಿದೆ. (24:15)

'ಇಸ್ಲಾಮೀ ವಿದ್ವಾಂಸರು' ಪ್ರವಾದಿಯ ಸಾಕ್ಷರತೆಯ ಬಗ್ಗೆ ಎದ್ದುಕಾಣುವಂತಹ ಸುಳ್ಳನ್ನು ರಚಿಸಿರುವಾಗ - ಉಳಿದವುಗಳೆಲ್ಲವೂ ನಮಗೆ ತಿಳಿದಿರುವ ಇತಿಹಾಸವಾಗಿದೆ.

ಅವರು ಕೊನೆಯ ಪ್ರವಾದಿಯ ಸುತ್ತಲಿದ್ದ ಅರಬರ ಬಗ್ಗೆ ಕುರ್'ಆನಿನ ಪುಟಗಳೊಳಗೆ ಬರೆದಿರುವ ಐತಿಹಾಸಿಕ ಸತ್ಯಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ತನ್ನ ಜನರು ಅವರ ಬಗ್ಗೆ ಹೇಳಿದ ಮೊದಲ ಮಾತು ಇದಾಗಿತ್ತು:

> ಇವರಿಗೆ ನಮ್ಮ ಸುವ್ಯಕ್ತ ಅವತೀರ್ಣವನ್ನು ಓದಿ ಹೇಳಿದಾಗ ಇವರು, "ನಿಮ್ಮ ಪೂರ್ವಜರು ಪೂಜಿಸುತ್ತಾ ಬಂದಿದ್ದಂತಹ ಮೂರ್ತಿಗಳಿಂದ ನಿಮ್ಮನ್ನು ತಿರುಗಿಸಿ ಬಿಡಬೇಕೆಂದೇ ಇವನ ಇಚ್ಛೆಯಾಗಿದೆ" ಎನ್ನುತ್ತಾರೆ ಮತ್ತು "ಇದು (ಕುರ್'ಆನ್) ಕೇವಲ ಒಂದು ಕಲ್ಪಿತ ಸುಳ್ಳು" ಎಂದು ಹೇಳುತ್ತಾರೆ. ಈ ಸತ್ಯನಿಷೇಧಿಗಳ ಮುಂದೆ ಸತ್ಯವು ಬಂದಾಗ ಇವರು, "ಇದು ಸ್ಪಷ್ಟವಾದ ಮಾಟವೇ ಹೊರತು ಇನ್ನೇನೂ ಅಲ್ಲ" ಎಂದು ಹೇಳಿ ಬಿಟ್ಟರು. (34:43)

ಹುಚ್ಚ, ಸುಳ್ಳುಗಾರ, ಜಾದೂಗಾರ, ಕೃತ್ರಿಮ ರಚನೆಕಾರ ಎಂಬಿವುಗಳು ಕೊನೆಯ ಪ್ರವಾದಿಯ ವಿರುದ್ಧ ಅರಬರು ಬಳಸಿದ ಸಾಮಾನ್ಯ ಪದಗಳಾಗಿತ್ತು. ಅವರ ಸುತ್ತಲಿದ್ದ ಅರಬರು ಅವತೀರ್ಣದಲ್ಲಿ ವಿಶ್ವಾಸವಿರಿಸಲು ನಿರಾಕರಿಸಿದರು. ಪ್ರವಾದಿಯು ಅವತೀರ್ಣವನ್ನು ಸ್ವತಃ ತಯಾರಿಸಿರುವುದಾಗಿದೆ ಎಂದು ಗಾಯದ ಮೇಲೆ ಉಪ್ಪನ್ನು ಹಾಕಲು ಅವರು ಹೇಳಿದರು, ಆದರೆ ಅಲ್ಲಾಹನು ಅದಕ್ಕೆ ಉತ್ತರ ನೀಡುತ್ತಾನೆ:

> ಇದನ್ನು ಈ ವ್ಯಕ್ತಿಯು ಸ್ವತಃ ಸೃಷ್ಟಿಸಿಕೊಂಡಿದ್ದಾನೆಂದು ಇವರು ಹೇಳುತ್ತಾರೆಯೇ? ಅಲ್ಲ, ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯವಾಗಿದೆ. (ಇದು) ಅವರು ಸನ್ಮಾರ್ಗಿಗಳಾಗಲೆಂದು, ನಿಮಗಿಂತ ಮುಂಚೆ ಎಚ್ಚರಿಕೆ ನೀಡುವವರು ಯಾರು ಬಂದಿಲ್ಲದಂತಹ ಒಂದು ಜನಾಂಗಕ್ಕೆ *(ಕೌಮ್)* ನೀವು ಎಚ್ಚರಿಕೆ ನೀಡಲಿಕ್ಕಾಗಿದೆ. (32:3)

ಅವರ ಸುತ್ತಮುತ್ತಲಿದ್ದ ಅರಬರು, ಕೇವಲ ಕಠೋರ ಕಪಟರು ಹಾಗೂ ಸತ್ಯನಿಷೇಧಿಗಳು ಮಾತ್ರವಲ್ಲ, ಅವರು ಉತ್ತಮ ವದಂತಿ ಮಾರಾಟಗಾರರೂ ಆಗಿದ್ದರು. ಪ್ರವಾದಿಯವರು ಅವತೀರ್ಣವನ್ನು ಬರೆದಿಡುವುದರಲ್ಲಿ ತಲ್ಲೀಣರಾಗಿದ್ದರೆಂದು ಅವರಿಗೆ ಗೊತ್ತಿತ್ತು, ಆದರೆ ಪ್ರವಾದಿಯವರು ಬರೆಯುತ್ತಿರುವುದರಲ್ಲಿ ವಿವಾದವನ್ನು ಸೃಷ್ಟಿಸುವ ಸಲುವಾಗಿ ಅವರು ಕೆಲವು ವದಂತಿಗಳನ್ನು ಪಸರಿಸಲು ಪ್ರಾರಂಭಿಸಿದರು.

> ಸತ್ಯನಿಷೇಧಿಗಳು (ಅರಬರು) ಹೇಳಿದರು "ಇದು ಇವನು ಬೇರೆ ಕೆಲವು ಜನರ ಸಹಾಯದಿಂದ ಸ್ವತಃ ಸೃಷ್ಟಿಸಿದಂತಹ ಒಂದು ಆವಿಷ್ಕಾರವಾಗಿದೆ". ಖಂಡಿತವಾಗಿಯೂ, ಅವರು ದೈವದೂಷಣೆ ಮತ್ತು ಸುಳ್ಳುತನವನ್ನು ಮುಂದಿರಿಸಿದ್ದಾರೆ. "ಹಗಲೂ ರಾತ್ರಿ ಇವನಿಗೆ ಓದಿ ಹೇಳಾಗುತ್ತಿರುವ ಹಳೆಯ ಕಾಲದವರ ಕಥೆಗಳನ್ನು **ಇವನು ಬರೆಯುತ್ತಿದ್ದಾನೆ**" ಎಂದೂ ಹೇಳುತ್ತಾರೆ. (25:4-5)

ಕುರ್‌ಆನ್ ಹೇಗೆ ಸಂಕಲನ ಮಾಡಲಾಗಿತ್ತು ಎಂಬುವುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ. ಇದು ಒಂದೇ ವಿಷಯಕ್ಕೆ ಪುನಃ ಹಿಂದಿರುಗಿ ಅದನ್ನು ಅನೇಕ ಸ್ಥಳಗಳಲ್ಲಿ ಪುನರುಚ್ಚರಿಸುತ್ತದೆ. ಈ ವಚನದಲ್ಲಿ, ಅರಬರು ವದಂತಿ ಮಾರಾಟಗಾರರು ಎಂಬುವುದನ್ನು ಸೂಚಿಸುತ್ತದೆ. ಉಲೆಮಾಗಳು ತಮ್ಮ ಮೋಕ್ಷಕ್ಕಾಗಿ ಪ್ರೀತಿಯಿಂದ ತಮ್ಮದಾಗಿಸಿರುವ, ಕುರ್‌ಆನ್ ಬಾಹಿರವಾದ *ಹದೀಸ್* ಎಂಬುವುದು ಇವರಿಂದಲೇ ಬಂದಿರುವ ಉಪ-ಉತ್ಪನ್ನಗಳಾಗಿವೆ.

ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ, ಕೊನೆಯ ಪ್ರವಾದಿಗೆ ತನ್ನ ಜನರಿಂದ ಸಕರಾತ್ಮಕವಾದ ಯಾವುದೇ ಪ್ರತಿಕ್ರಿಯೆಯನ್ನು ಗಳಿಸಲು ಸಾಧ್ಯವಾಗಿರಲಿಲ್ಲ. ಅವರ ನಿರಾಶೆಯನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು:

> ಈ ಸಂದೇಶವನ್ನು ವಿಶ್ವಾಸವಿರಿಸುದಕ್ಕೆ ಅವರ ತಿರಸ್ಕಾರದ ಕಾರಣವಾಗಿ ನೀವು ಬಹುಶಃ ನಿಮ್ಮನ್ನೇ ಕೊಲ್ಲಲು ಬಯಸುತ್ತೀರಿ. (18:6)

ಅರಬರು ಕುರ್‌ಆನನ್ನು ನಿರಾಕರಿಸಿದ ಕಾರಣ ಪ್ರವಾದಿಯು ಆತ್ಮಹತ್ಯೆಗೆ ಆಶಿಸಿದ್ದರು ಎಂದು ಕೆಲವು ಅನುವಾದಕರೂ ಸೂಚಿಸಿದ್ದಾರೆ. ನಾವು ಕುರ್‌ಆನಿನಲ್ಲಿ ಅವರ ಬಗ್ಗೆ ಓದುವಾಗ ಪ್ರವಾದಿಯ ಬಗ್ಗೆ ನಮಗೂ ಈ ಅನುಭೂತಿಯು ತೋರುತ್ತದೆ. ಕುರ್‌ಆನಿನ ಬೋಧನೆಗಳನ್ನು ಆಧುನಿಕ ಅರಬರು ಅನುಸರಿಸುತ್ತಿದ್ದಾರೆಂದು ದಾವೆಮಾಡುತ್ತಿದ್ದಾರೆ, ಆದರೆ ಕುರ್‌ಆನ್ ಅದರ ವಿರುದ್ಧವಾಗಿ ಹೇಳುತ್ತದೆ.

ವಿಶ್ವದಾದ್ಯಂತ ಮುಸ್ಲಿಮರು, ಎಲ್ಲಿಯವರೆಗೆ ಅರಬೀ ಧರ್ಮಕ್ಕೆ ನಿಷ್ಠಾವಂತರಾಗಿರುತ್ತಾರೆ, ಅವರು ಅಂತ್ಯ ದಿನದ ವರೆಗೂ ಈ ಸುಳ್ಳು ನಂಬಿಕೆಯ ಸಂಕೋಲೆಗಳಿಂದ ಬಂಧನಕ್ಕೊಳಗಾಗಿಯೇ ಇರುವರು. ಆ ಮಹಾ ದಿನದಂದು ಅವರು ಸಂದೇಶವಾಹಕರ ನಿಜವಾದ ಹೇಳಿಕೆಗಳನ್ನು ಕೇಳುವರು:

> **'ನನ್ನ ಪ್ರಭುವೇ ನನ್ನ ಜನರು ಈ ಕುರ್‌ಆನನ್ನು ತ್ಯಜಿಸಿದರು' ಎಂದು ಸಂದೇಶವಾಹಕರು ಹೇಳುವರು. (25:30)**

ಕುರ್‌ಆನಿನ ಈ ಸತ್ಯವನ್ನು ಮುಸ್ಲಿಮರಿಗೆ ತಿರಸ್ಕರಿಸಲು ಸಾಧ್ಯವಿಲ್ಲ. **ಪರಲೋಕದಲ್ಲಿ ಸಂದೇಶವಾಹಕರು ಅರಬೀ ಪುರೋಹಿತರು ಪೂಜ್ಯಭಾವದಿಂದ ನೋಡುವ 'ಹದೀಸ್' ಅಥವಾ 'ಸುನ್ನ'ದ ಬಗ್ಗೆ ಒಂದೇ ಒಂದು ಶಬ್ದವನ್ನು ಉಚ್ಚರಿಸಲಾರರು. ಮೇಲಿನ ವಚನವು ಸುಸ್ಪಷ್ಟವಾಗಿ ಹೇಳುವಂತೆ ಅವರು ಉಲ್ಲೇಖಿಸಲಿರುವುದು ಈ ಕುರ್‌ಆನಿನ ಬಗ್ಗೆ ಮಾತ್ರವಾಗಿದೆ.**

34:44 ರಲ್ಲಿ, ಅರಬರು ಮುಹಮ್ಮದರ ಮೊದಲು ಯಾವುದೇ ಎಚ್ಚರಿಕೆಗಾರನನ್ನು ಸ್ವೀಕರಿಸಿಲ್ಲ ಎಂದು ಹೇಳಲಾಗಿದೆ. ಮಕ್ಕಾ ಎಂಬ ಸ್ಥಳದಲ್ಲಿ ಅಲ್ಲಾಹನಿಗಾಗಿ ಒಂದು ಮನೆಯ ಕಟ್ಟಡವನ್ನು ನಿರ್ಮಿಸುವ ಕಲಾಕೌಶಲ್ಯಗಳನ್ನು ಕಲಿಸುವ ಸಲುವಾಗಿ, ಇಬ್ರಾಹೀಮರನ್ನು ಅರಬರ ಕಡೆಗೆ ಕಳುಹಿಸಲಾಗಿದೆ ಎಂಬುವುದಕ್ಕೆ ಕುರ್‌ಆನಿನಲ್ಲಿ ಯಾವುದೇ ಪುರಾವೆಯಿಲ್ಲ. ಇಬ್ರಾಹೀಮ್ ಮತ್ತು ಇಸ್ಮಾಯೀಲರನ್ನು ಮಕ್ಕಾದ ಅರಬರಿಗಾಗಿ ನಿರ್ಮಾಣ ಕಾರ್ಮಿಕರಾಗಿ ಕಳುಹಿಸಲಾಗಿಲ್ಲ. ಮೂರ್ತಿಗಳನ್ನು ನಾಶ ಮಾಡಿದ ಇಬ್ರಾಹೀಮರು, ಒಂದು ಧ್ವಂಸ-ತಜ್ಞರಾಗಿದ್ದರು ಎಂದು ಹೇಳಿದರೆ ಹೆಚ್ಚು ಅನ್ವಯವಾಗುವುದು. ಅವರು ಚೌಕಾಕಾರ ಮನೆಯ ರೂಪದಲ್ಲಿ ಒಂದು ಹೊಸ ಮೂರ್ತಿಯನ್ನು ನಿರ್ಮಿಸಿ, 'ಇದು ಅಲ್ಲಾಹನ ಮನೆ!' ಎಂದು ಕರೆಯಲಿಲ್ಲ. ಹೀಗೆ ಹೇಳುವುದು ಮೂರ್ತಿಪೂಜಕರಾಗಿದ್ದಾರೆ ಮತ್ತು ಬಹುದೇವಾರಾಧಕರಾಗಿದ್ದಾರೆ. ಅವರು ಮೂರ್ತಿಗಳನ್ನು ನಿರ್ಮಿಸಿ, "ಇದು ನಮ್ಮ ದೇವರು!" ಎಂದು ಹೇಳುತ್ತಾರೆ.

ಇಂದು ಮಕ್ಕಾದಲ್ಲಿರುವ ಕಾಬಾ ಎಂದು ಹೇಳಿಕೊಳ್ಳುವ ಒಂದು ಸರಳ ಬಂಡೆಕಲ್ಲಿನ ರಚನೆಯು, ಧಾರ್ಮಿಕರ ವಂಚನೆಗಳಲ್ಲಿ ಅತ್ಯಂತ ಮಹತ್ತರವಾದುದಾಗಿದೆ. ಇದನ್ನು ನಿರ್ಮಿಸಿರುವುದು ಧಾರ್ಮಿಕರಾಗಿದ್ದಾರೆ ಮತ್ತು ಅವರು ಈ ಮೂರ್ತಿಯನ್ನು ಆರಾಧಿಸುವಂತೆ ಕೋಟ್ಯಾಂತರ ಜನರನ್ನು ಮರುಳುಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸುನ್ನಿ ಮತ್ತು ಶಿಯಾಗಳು ತೆಗೆದುಕೊಳ್ಳಬೇಕಾದ ಸವಾಲು

ಪವಿತ್ರ ಮಸೀದಿ, ಪವಿತ್ರ ಮನೆ, ಪವಿತ್ರ ಭೂಮಿ, ಪವಿತ್ರ ನೀರು, ಪವಿತ್ರ ಕಪ್ಪುಕಲ್ಲು, ಪವಿತ್ರ ಸಮಾಧಿ ಮತ್ತು ಪವಿತ್ರ ಹೆಜ್ಜೆ ಗುರುತುಗಳು ಎಂಬಿತ್ಯಾದಿಗಳು ನಿಜವಾಗಿಯೂ ಇವೆಯೆಂದು ಇದುವರೆಗೆ ನಂಬಿರುವಂತಹ, ಇದನ್ನು ಓದುತ್ತಿರುವ ಸುನ್ನಿ ಮತ್ತು ಷಿಯಾ ಪಂಥವನ್ನು ಪಾಲಿಸುತ್ತಿರುವವರು, ಈಗ ಒಂದು ಆಯ್ಕೆಯನ್ನು ಮಾಡಬೇಕಾಗಿದೆ.

1. ಮೂರ್ತಿ ಆರಾಧನೆಗೆ ಸಂಬಂಧಿಸಿದ ವಸ್ತುಗಳಾದಂತಹ, ಒಂದು ಕಲ್ಲಿನ ಕ್ಷೇತ್ರಕ್ಕೆ ಅಥವಾ ಕಲ್ಲಿನ ಮೂರ್ತಿಗೆ ತಮ್ಮನ್ನು ಸಮರ್ಪಿಸಿಕೊಂಡು ಮತ್ತು ವಿಧೇಯರಾಗಿಸಿಕೊಂಡು ಮುಂದುವರಿಯಬಹುದು

(ಆದರೆ, ಅವರು ತಮ್ಮ ಹೃದಯಗಳಲ್ಲಿ ಬಚ್ಚಿಟ್ಟುಕೊಂಡಿರುವ ಯಾವುದೂ ಅಲ್ಲಾಹನ ನೋಟದ ಪರಿಧಿಯಿಂದ ಹೊರಗಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು).

ಅಥವಾ:

2. ಮಕ್ಕಾದಲ್ಲಿರುವ ಕಲ್ಲಿನ ಮೂರ್ತಿಯನ್ನು ಆರಾಧಿಸುವುದನ್ನು ನಿಲ್ಲಿಸಬೇಕು ಮತ್ತು ಧಾರ್ಮಿಕ ಉದ್ದೇಶ ಮತ್ತು ಆವಿಷ್ಕಾರದಿಂದ ಮುಕ್ತವಾದ, ಕೇವಲ ಕುರ್‌ಆನಿನ ಬೋಧನೆಗಳ ಮೇಲೆ ಮಾತ್ರ ಆಧಾರಿತವಾದ, ಅಲ್ಲಾಹನ ವ್ಯವಸ್ಥೆಯಲ್ಲಿನ *(ಬೈತ್)* ಅವನ ಅನುಗ್ರಹಗಳ ಮೂಲಕ, ಏಕದೇವನಾದ ಅಲ್ಲಾಹನಿಗೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕು ಮತ್ತು ವಿಧೇಯತೆಯಿಂದ ಸಮ್ಮತಿಸಿಕೊಳ್ಳಬೇಕು.

'*ನಿಮಗೆ*' ತೀರ್ಪಿನ ದಿನದಂದು ಉತ್ತರ ನೀಡಲು ಯಾವುದು ಉತ್ತಮವಾಗಿದೆ?

ನೀವು ಮುಸ್ಲಿಮ್ ಸಂಪ್ರದಾಯದಲ್ಲಿ ಹುಟ್ಟಿರುವ ವಾಸ್ತವವು, ನಿಮ್ಮ ಯೋಚಿಸುವ, ಮಾತನಾಡುವ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಬಳಸುವ ಹಕ್ಕನ್ನು ಕಸಿದುಕೊಳ್ಳುವುದಿಲ್ಲ.

ಮಾನಸಿಕ ಬಂಧನವು ಆನುವಂಶಿಕವಾಗಿ ನಿಮ್ಮ ಮುಗ್ಧ ಮಾತಾಪಿತರಿಂದ ಪಡೆದುಕೊಂಡಿರುವುದಾಗಿದೆ ಹಾಗೂ ಅವರು ಅದನ್ನು ಆನುವಂಶಿಕವಾಗಿ ತಮ್ಮ ಪೂರ್ವಜರಿಂದ ಪಡೆದಿದ್ದಾರೆ. ಅವರು ಹಿಂದಿನ ತಲೆಮಾರುಗಳಾಗಿದ್ದರು. ಅವರು ಸಂಪಾದಿಸಿರುವುದನ್ನು ಅವರು ಪ್ರತೀಕ್ಷಿಸುತ್ತಿದ್ದಾರೆ, ಮತ್ತು ನೀವು ಸಂಪಾದಿಸಿರುವುದನ್ನು ನೀವು ಪ್ರತೀಕ್ಷಿಸುತ್ತಿದ್ದೀರಿ. ಅವರು ಏನು ಮಾಡುತ್ತಿದ್ದರೆಂದು ನಿಮ್ಮನ್ನು ಪ್ರಶ್ನಿಸಲಾಗುವುದಿಲ್ಲ. ಹಾಗೆಯೇ, ನಿಮ್ಮ ಬಗ್ಗೆ ನಿಮ್ಮ ಮಕ್ಕಳೊಂದಿಗೂ ಪ್ರಶ್ನಿಸಲಾಗುವುದಿಲ್ಲ.

ಅಂತಿಮವಾಗಿ ಪ್ರಶ್ನೆಗಳನ್ನು ಪ್ರತಿಯೊಬ್ಬರೊಂದಿಗೂ ಏಕಾಂಗಿಯಾಗಿ ಕೇಳಲಾಗುವುದು. ಸಂಕೋಲೆಗಳಲ್ಲಿ ಬಂಧಿತರಾಗಿ ಉಳಿಯುತ್ತೀರಾ ಅಥವಾ ನಿಮ್ಮನ್ನು ಬಂಧಿಸಿರುವ ಸರಪಳಿಗಳಿಂದ ನಿಮ್ಮನ್ನು ವಿಮುಕ್ತಗೊಳಿಸುವಿರಾ ಎಂಬುದನ್ನು ನೀವು ನಿರ್ಧರಿಸಿರಿ. **ನೀವು ವ್ಯಕ್ತಪಡಿಸಲು ಇಷ್ಟಪಡದೇ ಇರುವುದನ್ನು ನೀವು ಅನುಭವಿಸಲು ಸಾಧ್ಯವೇ ಇಲ್ಲ.**

ಈ ಲೇಖನವನ್ನು ಸಮಾರೋಪ ಮಾಡುವ ಮುಂಚೆ, ಜಗತ್ತಿನಾದ್ಯಂತ ಮುಸ್ಲಿಮರಿಗೆ ಅಲ್ಲಾಹನ ಪದಗಳನ್ನು ತಾವು ಹರಡುತ್ತಿದ್ದೇವೆ ಎಂದು ದಾವೆ ಮಾಡುತ್ತಿರುವಂತಹ ಅರಬೀ ಧರ್ಮದ ಪುರೋಹಿತರು ಮತ್ತು ವಿದ್ವಾಂಸರ ವಿರುದ್ಧ ಬೌದ್ಧಿಕ (ಬುದ್ಧಿವಂತಿಕೆಯುಳ್ಳ) ಸವಾಲನ್ನು ತೆಗೆದುಕೊಳ್ಳುವ ಮೂಲಕ, ಅತ್ಯಂತ ವೈಚಾರಿಕವಾದ ವಿಧಾನಗಳನ್ನು ನಾವು ಅಳವಡಿಸಿಕೊಳ್ಳಬೇಕಾಗಿದೆ.

ನಾವು

ನಮ್ಮ 'ಅಂಹಕಾರದೊಂದಿಗೆ'

ಅಥವಾ ನಮ್ಮ 'ಯುಕ್ತಿಯೊಂದಿಗೆ'

ಜೀವಿಸಲು ಆಯ್ಕೆಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದೇವೆ

ನಾವು ಏನಾಗಿದ್ದೇವೆ

ಅಥವಾ ಯಾರಾಗಿದ್ದೇವೆ

ಎಂಬುವುದು ಈ ಆಯ್ಕೆಯ ಮೇಲೆ ಆಧರಿತವಾಗಿರುತ್ತದೆ

ಅರಬೀ ಧಾರ್ಮಿಕರಿಗೊಂದು ಸಂದೇಶ

ಇದು ಕುರ್‌ಆನನ್ನು ಅನುಸರಿಸುತ್ತಿದ್ದೇವೆಂದು ಪ್ರತಿಪಾದಿಸುತ್ತಿರುವ ಅರಬೀ ಧರ್ಮದ ಪುರೋಹಿತರಿಗಿರುವ ಒಂದು ವಿಶೇಷ ಸಂದೇಶವಾಗಿದೆ. ನಾನು ನಿಮ್ಮ ಮುಂದಿಡಲು ಬಯಸುವ ಪ್ರಾಥಮಿಕ ಸವಾಲು, ಐದು ಮೂಲಭೂತ ಪ್ರಶ್ನೆಗಳಿಗೆ ಸಂಬಂಧಪಟ್ಟಿದೆ:

- ಬ್ರಹ್ಮಾಂಡದ ಪ್ರಭುವಾದ ಅಲ್ಲಾಹನು, ಮಕ್ಕಾ ನಗರದಲ್ಲಿರುವ ಮನೆಯಲ್ಲಿ ವಾಸಿಸುತ್ತಿದ್ದಾನೆಯೇ?
- ಮಕ್ಕಾದಲ್ಲಿನ ಖಾಲಿ ಚೌಕಕಾರದ ಶಿಲಾರಚನೆಯು, ಅಲ್ಲಾಹನ ನೇರ ಆದೇಶಗಳ ಪ್ರಕಾರ ರೂಪುಗೊಳಿಸಲಾಗಿದೆ ಎಂಬುವುದರ ಬಗ್ಗೆ ನೀವು ಖಚಿತರಾಗಿರುವಿರಾ?
- ದಿನಂಪ್ರತಿ ನೀವು ಶಿಲಾಮೂರ್ತಿಗೆ ಏಕೆ ಬಗ್ಗುವುದು ಮತ್ತು ಸಾಷ್ಟಾಂಗ ಮಾಡುವುದು?
- ನೀವು ಅಲ್ಲಾಹನ ವಿರುದ್ಧ ಹೋರಾಡಲು ಮತ್ತು ಅವನಿಂದಿರುವ ಜೀವನ ರೀತಿಯನ್ನು ನಾಶಪಡಿಸಲು ಮುಂದುವರಿಸುತ್ತೀರಾ ಅಥವಾ ಕೊನೆಯ ಪ್ರವಾದಿಗೆ ಅವತೀರ್ಣವಾದ ಅಲ್ಲಾಹನ ದೀನನ್ನು ಕಾಪಾಡಿಕೊಳ್ಳಲು ಬಯಸುತ್ತೀರಾ?
- ಅರಬರಿಂದ ಕೆತ್ತಲ್ಪಟ್ಟ ಒಂದು ಶಿಲಾರಚನೆಗೆ ನೀವು ಹೇಗೆ 'ಸೇವೆ'ಯನ್ನು ಮಾಡುತ್ತಿದ್ದೀರಿ? ಅರಬರನ್ನೂ, ಕಲ್ಲುಗಳನ್ನೂ ಸೃಷ್ಟಿಸಿದವನು ಅಲ್ಲಾಹನಲ್ಲವೇ? ಜನರನ್ನು ನೀವೇಕೆ ಅದನ್ನು ಆರಾಧಿಸುವಂತೆ ಮುನ್ನಡುಸುತ್ತಿದ್ದೀರಿ?

ಅರಬೀ ಧರ್ಮದ ತಿರುಳು ಮತ್ತು ಆಧಾರವು, ತಪ್ಪಾಗಿ ಕಾಬಾ ಎಂದು ಕರೆಯಲಾಗುವ ಶಿಲಾ-ಮೂರ್ತಿಯಾಗಿದೆ. ಈ ಶಿಲಾ-ರಚನೆಯು ಇಲ್ಲದಿದ್ದರೆ, ನಿಮ್ಮ 'ಧರ್ಮ'ದ ಅಸ್ತಿತ್ವವು ನೆಲೆನಿಲ್ಲುವುದಿಲ್ಲ. ಇದರ ಬಗ್ಗೆ ಸ್ವಲ್ಪ ಯೋಚಿಸಿ. ನಿಶ್ಚಯವಾಗಿಯೂ, ನರಕಾಗ್ನಿಯಲ್ಲಿ ನಿಮ್ಮ ಆತ್ಮದ ಶಾಶ್ವತ ಯಾತನೆಯು, ನಿಮ್ಮ ವಿವೇಕ-ಪ್ರಜ್ಞೆಯ ಮೇಲೆ ಆಧರಿಸಿರುತ್ತದೆ. ಸಂದೇಶವಾಹಕರಾದ ಸ್ಯಾಲಿಹರ[89] ಮಾತುಗಳನ್ನು ನಾನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ, ಅವರು ತನ್ನ ಜನರಿಗೆ ಹೇಳಿದರು: *'ಆದುದರಿಂದ, ನೀವು ಅವನೊಂದಿಗೆ ಕ್ಷಮೆಯನ್ನು ಯಾಚಿಸಿರಿ ಮತ್ತು ಅವನೊಂದಿಗೆ ಪಶ್ಚಾತ್ತಾಪ ಪಡಿರಿ.'* (11: 61)

ಹಾಗಾಗಿ, ಪುರೋಹಿತರಿಗಿರುವ ನನ್ನ ಸವಾಲು ಹೀಗಿದೆ:

[89] ಇವರು ಕುರ್‌ಆನಿನಲ್ಲಿ ಉಲ್ಲೇಖಿತವಾದ ಒಂದು ಪ್ರವಾದಿಯಾಗಿದ್ದಾರೆ ಹಾಗೂ ಇವರ ಹೆಸರಾಗಲೀ, ಇವರ ಕಾರ್ಯಗಳ ಬಗ್ಗೆಯಾಗಲೀ ಕ್ರೈಸ್ತ ಮತ್ತು ಯಹೂದಿ ಧರ್ಮಗಳಲ್ಲಿ ಕಂಡುಬರುವುದಿಲ್ಲ.

- ಮಾನವಕುಲಕ್ಕೆ ಪ್ರಯೋಜನಕರವಾದ ಒಂದು ವ್ಯಾಪಾರ ಅಥವಾ ವೃತ್ತಿಯನ್ನು ಕೈಗೆತ್ತಿಕೊಂಡು, ಅಲ್ಲಾಹು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸುವ ಸಲುವಾಗಿ ನಿಮ್ಮ ಬದ್ಧತೆಗಳನ್ನು ಎತ್ತಿಹಿಡಿಯಿರಿ ಮತ್ತು ಅವುಗಳನ್ನು ಶುದ್ಧವಾಗಿರಿಸಿ.

- ಕೇವಲ ಕುರ್‌ಆನಿನ ಆಧಾರದ ಮೇಲೆ, ಅಲ್ಲಾಹನನ್ನು ಮತ್ತು ಅವನಿಂದ ನಿಗದಿತ ಪಡಿಸಲಾದ ರೀತಿಗೆ ಅಥವಾ ದೀನಿಲ್ಲಾಹಿಗೆ ಸಮ್ಮತಿಸಿಕೊಳ್ಳಿರಿ.

ಆದಾಗ್ಯೂ, ಇಲ್ಲಿ ವಿವರಿಸಿರುವುದಕ್ಕೆ ಭಿನ್ನವಾದ ದೃಷ್ಟಿಕೋನವನ್ನು ಹೊಂದಿರುವವರು ಮತ್ತು ತಮ್ಮ ಅನುಯಾಯಿಗಳಿಗೆ ನೇರ ಮಾರ್ಗದಲ್ಲಿ ಮುನ್ನಡೆಸುವ ವಾಗ್ದಾನ ಮಾಡುವವರು ಮತ್ತು ತಮ್ಮ 'ಪ್ರಾದೇಶಿಕ' ಛಾಯೆಯಲ್ಲಿ ಅಭಿವೃದ್ಧಿಗೊಳಿಸುವ ಇಸ್ಲಾಮನ್ನು ಸಮರ್ಥಿಸಲು, ಕುರ್‌ಆನಿನಲ್ಲಿ ಯಾವುದೇ ಆಧಾರವನ್ನು ಹೊಂದಿದ್ದರೆ, ಕುರ್‌ಆನಿಂದ ಪುರಾವೆಗಳನ್ನು ದಯವಿಟ್ಟು ಮಂಡಿಸಿರಿ.

ಕುರ್‌ಆನ್ ಹೇಳುತ್ತದೆ: '*ನೀವು ಸತ್ಯವಾದಿಗಳಾಗಿದ್ದರೆ ನಿಮ್ಮ ಪುರಾವೆಗಳನ್ನು ಹಾಜರಿ ಪಡಿಸಿರಿ*' ಮತ್ತು ಅದು ಹೀಗೂ ಹೇಳುತ್ತದೆ '*ಅಭಿಪ್ರಾಯವು ಸತ್ಯದ ಬದಲಿ ಅಲ್ಲ*'. ಚೌಕ ಶಿಲಾಗೃಹಕ್ಕೆ ನಿಮ್ಮ ಅನುಯಾಯಿಗಳನ್ನು ದಾರಿತೋರಿಸುತ್ತಿರುವ ನೀವು, ಪರಲೋಕದಲ್ಲಿ ಕಲ್ಲುಗಳ ಬಗ್ಗೆ ಇರುವ ಮತ್ತೊಂದು ಕುರ್‌ಆನಿನ ಉಲ್ಲೇಖವನ್ನು ಬಹುಶಃ ವಿಮರ್ಶಿಸಬೇಕಾಗಿದೆ:

> **ಮನುಷ್ಯರನ್ನೂ ಮತ್ತು ಶಿಲೆಗಳನ್ನೂ** ಇಂಧನವಾಗಿ ಉರಿಸುವ ನರಕಾಗ್ನಿಯನ್ನು ಭಯಪಡಿರಿ. ಅದು ತಿರಸ್ಕರಿಸಿದವರನ್ನು ಕಾಯುತ್ತಿದೆ. (2:24)

ಇದೂ ಸಹ ನಿಮಗೆ ಪರ್ಯಾಲೋಚನೆ ನಡೆಸಲು ಉತ್ತೇಜನ ನೀಡದಿದ್ದರೆ - ಕಾದು ನಿಲ್ಲಿರಿ – ನಾನೂ ನಿಮ್ಮೊಂದಿಗೆ ಕಾಯುತ್ತಿದ್ದೇನೆ.

ನಿಷ್ಠಾವಂತರು ಮತ್ತು ಸೂಕ್ಷ್ಮದರ್ಶಿಗಳನ್ನು ಸಂಬಂಧಿಸಿದಂತೆ, ಶಾಸ್ತ್ರೀಯ ಮೈ-ಕೈ ಕಸರತ್ತಿನ ಮತ್ತು ಶಬ್ದಾಟದ ದಿನಗಳು ಕಳೆದುಹೋದವು. '*ಪ್ರವಾದಿಯು ತಾನು ಪ್ರೀತಿಸುವವರನ್ನೂ ಸೇರಿದಂತೆ ಯಾರಿಗೂ ಮಾರ್ಗದರ್ಶನ ನೀಡಲು ಸಾಧ್ಯವಿಲ್ಲ*' (28:56) ಎಂದಾದರೆ, ಮತ್ತು ಸ್ವತಃ ನಿಮಗೂ ಮಾರ್ಗದರ್ಶನವನ್ನು ಪಡೆಯಲು ಅಲ್ಲಾಹನ ಅವಶ್ಯಕತೆ ಇರುವಾಗ, ಜನರನ್ನು ನೀವು ಹೇಗೆ ಮಾರ್ಗದರ್ಶನ ಮಾಡುತ್ತೀರಿ?

ಧರ್ಮಶಾಸ್ತ್ರ ಎಂಬುವುದು ಅಲ್ಲಾಹನ ಗ್ರಂಥಗಳಲ್ಲಿ ಇಲ್ಲವೇ ಇಲ್ಲ. 6:59 ಹೇಳುತ್ತದೆ: 'ಎಲ್ಲಾ ರಹಸ್ಯಗಳ ಬೀಗದ ಕೀಲಿಗಳು ಅವನ ವಶದಲ್ಲೇ ಇವೆ – *ಅವುಗಳನ್ನು ಅವನ ಹೊರತು ಇನ್ನಾರೂ ಅರಿಯರು*. ಮತ್ತು 6:103 ಹೇಳುತ್ತದೆ: '*ಯಾವುದೇ ದೃಷ್ಟಿಗೆ ಅವನನ್ನು ಆವರಿಸಿಕೊಳ್ಳಲು ಸಾಧ್ಯವಿಲ್ಲ, ಆದರೆ ಅವನು ಎಲ್ಲಾ ದೃಷ್ಟಿಯನ್ನು ಆವರಿಸುತ್ತಾನೆ*'. ಹಾಗಾದರೆ, ಅಲ್ಲಾಹನು ಏನನ್ನು ಬಯಸುತ್ತಾನೆಂದು ನಿಮಗೆ ತಿಳಿದಿರುವುದಾಗಿ ನೀವು ಹೇಗೆ ಹಕ್ಕುಸಾಧಿಸುತ್ತಿದ್ದೀರಿ?

ಕುರ್‌ಆನ್ ಹೇಳುತ್ತದೆ: ಮಾರ್ಗದರ್ಶನ ಕೊಡುವವನು ಅಲ್ಲಾಹನು ಮಾತ್ರ[90]. ನಮ್ಮನ್ನು ಸೃಷ್ಟಿಸಿದವನೂ ಅವನೇ ಆಗಿದ್ದಾನೆ[91]. ಅವನು ಮಾನವರಿಗೆ ಲೇಖನಿಯ ಮೂಲಕ ಕಲಿಸುತ್ತಾನೆ. ಅವರು ತಿಳಿದೇ ಇಲ್ಲದವುಗಳನ್ನು ಅವನು ಅವರಿಗೆ ಕಲಿಸುತ್ತಾನೆ[92]. ಅವರಿಗೆ ತಮ್ಮ ನಿದರ್ಶನಗಳ ಬಗ್ಗೆ ಸುಸ್ಪಷ್ಟ ಮಾಹಿತಿಗಳನ್ನು ನೀಡುವವನು ಅವನು ಮಾತ್ರ ಆಗಿದ್ದಾನೆ[93].

ಭೂಮಿ ಮತ್ತು ಆಕಾಶಗಳಲ್ಲಿನ ಅಲ್ಲಾಹನ ನಿದರ್ಶನಗಳನ್ನು ಅಧ್ಯಯನ ಮಾಡಿರುತ್ತಿದ್ದರೆ, ಮುಸ್ಲಿಮರು ಬಹುಶಃ ವಿಜ್ಞಾನ, ಭೌತಶಾಸ್ತ್ರ ಅಥವಾ ಜೀವಶಾಸ್ತ್ರದಲ್ಲಿ ಅಗ್ರಸ್ಥಾನದಲ್ಲಿರಲು ಸಾಧ್ಯವಿತ್ತು. ದುರದೃಷ್ಟವಶಾತ್ ಅವರ ಮನಸ್ಸುಗಳು ಅವನತಿಯನ್ನು ಉತ್ತೇಜಿಸುವ ಒಂದು ನಂಬಿಕೆಯ ಸಂಕೋಲೆಗಳಿಂದ ಬಂಧಿಸಲ್ಪಟ್ಟಿವೆ. 2:164 ರಲ್ಲಿ *'ಬುದ್ಧಿವಂತ ಜನರಿಗೆ, ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ನಿದರ್ಶನಗಳಿವೆ...'* ಎಂದು ಹೇಳುತ್ತದೆ. ಸೂರ್ಯ ಮತ್ತು ಚಂದ್ರ, ಅಂತರೀಕ್ಷ, ಜಲಚಕ್ರ, ಗಾಳಿಯ ಚಲನೆ, ವಿದ್ಯುತ್ಕಾಂತ ಬಲ, ರೇಡಿಯೋ ಅಲೆಗಳು, ನೌಕಯಾನ, ಮೋಡಗಳು, ಧಾನ್ಯಗಳು, ಹಣ್ಣುಗಳು, ಇತ್ಯಾದಿಗಳನ್ನು ವಿಜ್ಞಾನಿಗಳು ಅಧ್ಯಯನ ಮಾಡಿದರು. ಇವುಗಳು 2:164 ರಲ್ಲಿ ಮತ್ತು ಕುರ್‌ಆನಿನ ಇತರ ಅನೇಕ ವಚನಗಳಲ್ಲಿ ಉಲ್ಲೇಖಿಸಲಾದ ವಿಷಯಗಳಾಗಿವೆ, ಮತ್ತು ಪಾಶ್ಚಿಮಾತ್ಯರು ಇಂದು ಈ ಕ್ಷೇತ್ರಗಳಲ್ಲಿ ಪೂರ್ವಗಾಮಿಗಳಾಗಿದ್ದಾರೆ. ಮನುಕುಲದ ಪ್ರಯೋಜನಕ್ಕಾಗಿ, ಆಕಾಶಗಳಲ್ಲಿ ಹಾಗೂ ಭೂಮಿಯಲ್ಲಿ ಅಲ್ಲಾಹನ ನಿದರ್ಶನಗಳನ್ನು ಅಧ್ಯಯನ ಮಾಡಿದ ಅವರು ಅಲ್ಲಾಹನ ನಿಜವಾದ ಸೇವಕರಾಗಿದ್ದಾರೆ.

ಉದಾಹರಣೆಗೆ, ಪಾಶ್ಚಾತ್ಯರು ಹಾರಾಡಲು ಕಠಿಣವಾಗಿ ಪ್ರಯತ್ನಿಸುತ್ತಿದ್ದ ಸಮಯದಲ್ಲಿ - ಅವರು ಗಾಳಿಯ ಚಲನೆಯ ಬಗ್ಗೆ ಅಲ್ಲಾಹನ ನಿದರ್ಶನವನ್ನು ಅಧ್ಯಯನ ಮಾಡಿದರು - ಆದರೆ ಅರಬೀ ಉಲೆಮಾಗಳು, ಮಧ್ಯಯುಗದ ಅರಬೀ ಪುರಾಣ ಮತ್ತು ಸಂಸ್ಕೃತಿಯಲ್ಲಿ ಹೇಗೆ ಪರಿಣಿತರಾಗುವುದೆಂದು ಕಂಡುಹಿಡಿಯುವುದರಲ್ಲಿ ನಿರತರಾಗಿದ್ದರು. ಪಾಶ್ಚಾತ್ಯರು ಏಕ ವ್ಯಕ್ತಿ ಮಾತ್ರ ಹಾರಾಡಲು ಸಾಧ್ಯವುಳ್ಳ ವಿಮಾನದಿಂದ ಸೂಪರ್-ಸೋನಿಕ್ ವಿಮಾನಕ್ಕೆ ಅಭಿವೃದ್ಧಿಗೊಳ್ಳುತ್ತಿರುವಾಗ, ಉಲೆಮಾಗಳು ಭೂಮಿ ಆಕಾಶಗಳಲ್ಲಿರುವ ಅಲ್ಲಾಹನ ದೃಷ್ಟಾಂತಗಳನ್ನು ನಿರ್ಲಕ್ಷಿಸುತ್ತಾ ಮುಂದುವರಿದರು. ಅವರು ಅನಾಚಾರಿಗಳ ಆಚರಣೆಗಳು ಮತ್ತು ವಿಧಿಗಳಲ್ಲಿ ಮುಳುಗಿಹೋಗಿದ್ದರು ಮತ್ತು ಮನುಷ್ಯನ ಗಡ್ಡದ ಸೂಕ್ತ ಉದ್ದವನ್ನು ಮತ್ತು ಮಹಿಳೆಯ ದೇಹವನ್ನು ವಸ್ತ್ರವು ಯಾವ ಪ್ರಮಾಣದಲ್ಲಿ ಮರೆಮಾಡಿಕೊಳ್ಳಬೇಕು ಎಂದು ಚರ್ಚಿಸುವುದರಲ್ಲಿ ತಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥಮಾಡಿದರು. ದುಃಖಕರವೆಂದರೆ, ಅವುಗಳಿಗೆ ಇಂದಿನವರೆಗೂ

[90] ನಿನಗೆ ಯಾರನ್ನೂ ಸನ್ಮಾರ್ಗಿಗಳಾಗಿಸಲು ಸಾಧ್ಯವಿಲ್ಲ. ತನ್ನ ಇಚ್ಛೆಯ ಪ್ರಕಾರ ಮಾರ್ಗದರ್ಶನವನ್ನು ನೀಡುವವನು ಅವನು ಮಾತ್ರ ಆಗಿದ್ದಾನೆ. (2:272)

[91] ಮಾನವರನ್ನು ಸೃಷ್ಟಿಸಿರುವುದು ಅವನಾಗಿದ್ದಾನೆ. (55:3 & 96:1)

[92] ಅವನು ಅವರಿಗೆ ಲೇಖನಿಯ ಮೂಲಕ ಕಲಿಸುತ್ತಾನೆ ಮತ್ತು ಅವನು ಅವರಿಗೆ ಅರಿವೇ ಇಲ್ಲದವುಗಳನ್ನು ಕಲಿಸುತ್ತಾನೆ. (96:4-5)

[93] ಆಕಾಶ ಮತ್ತು ಭೂಮಿಯಲ್ಲಿರುವ ತನ್ನ ನಿದರ್ಶನಗಳ ಬಗ್ಗೆ ಅವನು ಮಾನವರಿಗೆ ಕಲಿಸುತ್ತಾನೆ. (55:1-4)

ಅವರು ಸಮರ್ಪಕವಾದ ಉತ್ತರಗಳನ್ನು ಕಂಡುಹಿಡಿದಿಲ್ಲ. ಇನ್ನೊಂದೆಡೆ, ಪ್ರಪಂಚದ ಮಿಕ್ಕವರೆಲ್ಲಾ ತಮ್ಮ ಸೃಷ್ಟಿಕರ್ತನಿಂದಿರುವ ಜೀವನದ ಮೂಲದ ಬಗ್ಗೆ ಹೊಸ ಸಂಶೋಧನೆಗಳನ್ನು ನಡೆಸಲು ಶ್ರಮಿಸುತ್ತಿದ್ದಾರೆ.

ಜಂಬೋ ಮತ್ತು ಏರ್-ಬಸ್'ಗಳಲ್ಲಿ, ಒಂದು ದೇಶದಿಂದ ಮತ್ತೊಂದಕ್ಕೆ ಪ್ರಯಾಣಿಸುವ ಸೌಕರ್ಯವನ್ನು ಆನಂದಿಸಿಕೊಳ್ಳುವುದರ ಹೊರತಾಗಿಯೂ, ಪಾಶ್ಚಾತ್ಯ ಕಲ್ಪನೆಗಳು ಮತ್ತು ತಂತ್ರಜ್ಞಾನಗಳು ಜಾತ್ಯತೀತ ಮೇಲೆ ಆಧಾರಿತವಾಗಿವೆ ಮತ್ತು ಅವರು ನಾಸ್ತಿಕರಾಗಿದ್ದಾರೆಂದು ಉಲೆಮಾಗಳು ಹೇಳಿಕೊಳ್ಳುತ್ತಾರೆ. ಖಂಡಿತವಾಗಿಯೂ ಇದು ದುರ್ನೀತಿಯೂ ಮತ್ತು ಅನ್ಯಾಯವೂ ಆಗಿದೆ. ಜಾತ್ಯತೀತತೆಯು ಇಲ್ಲದಿರುತ್ತಿದ್ದರೆ, ಪ್ರಪಂಚದಾದ್ಯಂತ ಮುಸ್ಲಿಂ ವಿದ್ವಾಂಸರು ತಮ್ಮ ಹಳ್ಳಿಗಳಲ್ಲಿ ಪರಾವಲಂಬಿಗಳಾಗಿಯೇ ಉಳಿಯುತ್ತಿದ್ದರು. ವಿಶ್ವ ಮಾರುಕಟ್ಟೆಗೆ ಬೇಕಾದ ಗ್ರಾಹಕ ಉತ್ಪನ್ನಗಳನ್ನು ಆವಿಷ್ಕಾರಿಸುವ, ವಿನ್ಯಾಸ ಮಾಡುವ ಅಥವಾ ಉತ್ಪಾದಿಸುವ ಬಗ್ಗೆ ಯೋಚಿಸಲು ಸಹ ಅರಬರಿಗೆ ಇಂದಿಗೂ ಸಾಧ್ಯವಿಲ್ಲ. ಅವರಲ್ಲಿ ಕೆಲವರು ಮರದ ಕೆಲವು ಕೊಂಬೆಗಳನ್ನು ಕತ್ತರಿಸಿ ಅದನ್ನು ಹಲ್ಲುಜ್ಜುವ ಬ್ರಶ್ ಆಗಿ ಬಳಸುತ್ತಿದ್ದಾರೆ ಹಾಗೂ ಈ ನಿಸ್ಸಾರವಾದ ಕಾರ್ಯವನ್ನೂ ಅವರು ಸಂದೇಶವಾಹಕರ ಮೇಲೆ ಹೊರಿಸುತ್ತಾರೆ.

'ಉಲೆಮಾ' ಅಥವಾ 'ತಜ್ಞರು' ಎಂಬ ಧಾರ್ಮಿಕ ಪದವಿಯು ಅಲ್ಲಾಹನಿಂದ ನಿಗದಿತವಾದ ಜೀವನ ರೀತಿಯಲ್ಲಿ ಅಥವಾ ದೀನಿಲ್ಲಾಹಿಯಲ್ಲಿ ಇಲ್ಲವೇ ಇಲ್ಲ. ಕಪಟ ಉಲೆಮಾಗಳು 35:28 ವಚನವನ್ನು ಸಂದರ್ಭ-ಬಾಹಿರವಾಗಿ ಉಲ್ಲೇಖಿಸುವುದರ ಮೂಲಕ ಜನರನ್ನು ತಪ್ಪುದಾರಿಗೆಳೆಯತ್ತಾರೆ. ಅಲ್ಲಾಹನನ್ನು ಗೌರವಿಸುವವರು ತಾವಾಗಿದ್ದೇವೆಂದು ದಾವೆಮಾಡಿಕೊಳ್ಳುತ್ತಾ, ಆ ಹೆಸರಿಗೆ ತಮ್ಮನ್ನು ತಾವೇ ಅರ್ಹರನ್ನಾಗಿ ಮಾಡುತ್ತಾರೆ. ಈ ವಚನವನ್ನು ನಾವು ಸರಿಯಾಗಿ ಓದಿದರೆ, ಅದು ಹೇಳುತ್ತದೆ:

> ಅಲ್ಲಾಹನು ಆಕಾಶದಿಂದ ನೀರನ್ನು ಸುರಿಸುವುದನ್ನೂ ಆ ಬಳಿಕ ಅದರ ಮೂಲಕ ನಾವು ನಾನಾ ಬಣ್ಣಗಳಿರುವ ತರತರದ ಫಲಗಳನ್ನು ಹೊರ ತರುವುದನ್ನು ನೀವು ನೋಡುವುದಿಲ್ಲವೇ? ಪರ್ವತಗಳಲ್ಲೂ ಬಳಿ, ಕೆಂಪು, ಕಡುಕಪ್ಪು ಹಾಗೂ ವಿವಿಧ ಬಣ್ಣಗಳ ಬರೆಗಳಿರುತ್ತವೆ. ಮತ್ತು ಮನುಷ್ಯರ, ಪ್ರಾಣಿಗಳ ಮತ್ತು ಜಾನುವಾರುಗಳ ಬಣ್ಣಗಳೂ ವಿಭಿನ್ನವಾಗಿವೆ. ಆದುದರಿಂದ, ಅಲ್ಲಾಹನ ಸೇವಕರಲ್ಲಿ ಅವನನ್ನು ಗೌರವಿಸುವವರು ಮಾತ್ರ ಜ್ಞಾನಿಗಳಾಗಿದ್ದಾರೆ (ಉಲೆಮಾ)? ಅಲ್ಲಾಹನು ಸರ್ವಶಕ್ತನೂ, ಕ್ಷಮಾಶೀಲನೂ ಆಗಿರುತ್ತಾನೆ. (35:27-28)

ಕುರ್'ಆನಿನಲ್ಲಿ ಇರುವ ಉಲೆಮಾ ಎಂಬ ಅರಬೀ ಪದವು ಉಲ್ಲೇಖಿಸುವುದು, ಭೂಮಿ ಮತ್ತು ಆಕಾಶಗಳಲ್ಲಿನ ಅಲ್ಲಾಹನ ನಿದರ್ಶನಗಳ ಬಗ್ಗೆ ಜ್ಞಾನವುಳ್ಳವರನ್ನಾಗಿದೆಯೇ ಹೊರತು ಧರ್ಮದ ಬಗ್ಗೆ ಜ್ಞಾನವುಳ್ಳವರನ್ನಲ್ಲ. 26:197 ರಲ್ಲಿ ಇಸ್ರಾಯೀಲರ ಸಂತತಿಗಳಲ್ಲಿದ್ದ ಜ್ಞಾನಿಗಳನ್ನು ಸೂಚಿಸಲು ಬಳಸಿರುವುದನ್ನು ಹೊರತು ಪಡಿಸಿದರೆ, ಉಲೆಮಾ ಎಂಬ ಪದವು ಈ ವಚನದಲ್ಲಿ ಮಾತ್ರ ಕಾಣಸಿಗುತ್ತದೆ. ಈ ವಚನವು ಆಚರಣೆಗಳ ಮತ್ತು ವಿಧಿಗಳ ಸ್ವಘೋಷಿತ ತಜ್ಞರನ್ನು ಹೊರಗಿಡುತ್ತದೆ. ದುರದೃಷ್ಟವಶಾತ್, ಇದೇ ತಜ್ಞರು, ವೈಜ್ಞಾನಿಕ

ಕ್ಷೇತ್ರಗಳಲ್ಲಿ ಪರಿಣಿತರಾದವರನ್ನು ಅಲ್ಲಾಹನಲ್ಲಿ ವಿಶ್ವಾಸವಿರಿಸದವರು ಮತ್ತು ಇಸ್ಲಾಮಿನ ವಿರೋಧಿಗಳು ಎಂದು ಆಪಾದಿಸುತ್ತಾರೆ.

ಈ ನಕಲಿ-ವಿದ್ವಾಂಸರು, ಅಲ್ಲಾಹನ ಅವತೀರ್ಣವನ್ನು ಅತ್ಯಂತ ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವುಳ್ಳವರಾಗಿದ್ದರೂ, ಅವರು ಅಡ್ಡದಾರಿಯನ್ನು ಹಿಡಿದರು, ಮತ್ತು ಅಲ್ಲಾಹನ ಪಥದಿಂದ ಜನರನ್ನು ದಿಕ್ಕುಗೆಡಿಸಿದರು ಮತ್ತು ಕುರ್‌ಆನ್ ಸತ್ಯವಾಗಿದೆ ಎಂದು ಸಾಕ್ಷಿ ಹೇಳಿಕೊಳ್ಳುತ್ತಲೇ, ತಮ್ಮ ಕರ್ಮಗಳಿಂದಾಗಿ ಅದನ್ನು ಅವಹೇಳನ ಮಾಡಲು ಮುಂದುವರಿಸಿದರು. ಇದು ಕುರ್‌ಆನಿನ ಪ್ರಕಾರದ ಅಲ್ಲಾಹನೊಂದಿಗೆ ತಮ್ಮ ಒಪ್ಪಂದಗಳನ್ನು ಈಡೇರಿಸುವ ರೀತಿಯೇ ಅಲ್ಲ.

ಕುರ್‌ಆನಿನಲ್ಲಿ ಸುಸ್ಪಷ್ಟವಾಗಿ ತಿಳಿಸಿರುವ ಎಚ್ಚರಿಕೆಗಳನ್ನು ನಿರ್ಲಕ್ಷಿಸುವವರಿಗೆ, ಈ ಕೆಳಗಿನವುಗಳು ನೆನಪಿನಲ್ಲಿಡಲು ಸೂಕ್ತವಾಗಿರುವುದಾಗಿದೆ:

- ವಾಸ್ತವವಾಗಿಯೂ, ಈ ಅವತೀರ್ಣವು ಜ್ಞಾನ ನೀಡಲ್ಪಟ್ಟಿರುವವರ ಹೃದಯಗಳಲ್ಲಿ ಸ್ಪಟವಾಗಿವೆ. ದುಷ್ಟರು ಮಾತ್ರ ನಮ್ಮ ಅವತೀರ್ಣವನ್ನು ಉಪೇಕ್ಷಿಸುತ್ತಾರೆ. (29:49)

- ಮತ್ತು ಕೆಲವರು ಯಾವುದೇ ಜ್ಞಾನ, ಮಾರ್ಗದರ್ಶನ ಮತ್ತು ಪ್ರಕಾಶ ನೀಡುವಂತಹ ಗ್ರಂಥದ ಹೊರತಾಗಿಯೇ ಅಲ್ಲಾಹನ ವಿಷಯದಲ್ಲಿ ತರ್ಕಿಸುತ್ತಾರೆ. (22:8)

- ನೀವು ಪ್ರೀತಿಸುವವರಿಗೆ ಸನ್ಮಾರ್ಗ ನೀಡಲು ನಿಮ್ಮಿಂದಾಗದು, ಆದರೆ ಅಲ್ಲಾಹನು ತಾನಿಚ್ಛಿಸಿದವರಿಗೆ ಸನ್ಮಾರ್ಗ ನೀಡುತ್ತಾನೆ. ಸನ್ಮಾರ್ಗವನ್ನು ಪಡೆಯಲು ಅರ್ಹರಾದವರನ್ನು ಅವನು ಚೆನ್ನಾಗಿ ಅರಿತಿರುತ್ತಾನೆ. (28:56)

- ಅವರ ಮುಂದಿರುವುದನ್ನೂ ಅವರಿಂದ ಮರೆಯಾಗಿರುವುದನ್ನೂ ಅವನು ಬಲ್ಲನು. ಅವನು ಸ್ವತಃ ತಿಳಿಯಗೊಡಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ವಿಷಯವನ್ನೂ ಅವರು ತಿಳಿಯಲಾರರು. (2:255)

- ತಮ್ಮನ್ನೇ ಪರಿಶುದ್ಧರು ಎಂದು ದಾವೆಮಾಡುವವರನ್ನು ನೀವು ಗಮನಿಸಿದ್ದೀರಾ? ತಾನಿಚ್ಛಿಸುವವರನ್ನು ಶುದ್ಧೀಕರಿಸುವುದು ಕೇವಲ ಅಲ್ಲಾಹನಾಗಿದ್ದಾನೆ ಮತ್ತು ಅವರ ಮೇಲೆ ಕಿಂಚಿತ್ತೂ ಅನ್ಯಾಯವೆಸಗಲಾಗದು. (4:49-50)

ಆದ್ದರಿಂದ, ನಿಮಗಿರುವ ನನ್ನ ಪ್ರಶ್ನೆಯು – ನೀವು ಯಾವುದೇ ಆಧಾರವಿಲ್ಲದೆ ನಿಮ್ಮನ್ನೇ ನೀವು ಪರಿಶುದ್ಧರೆಂದು ಘೋಷಿಸುತ್ತಿದ್ದೀರಾ? ಜನರನ್ನು ಸನ್ಮಾರ್ಗಿಗಳಾಗಿಸಲು ಅಲ್ಲಾಹನಿಗಲ್ಲದೇ ಯಾರಿಗೂ ಸಾಧ್ಯವಿಲ್ಲವೆಂದು ಅವನು ಸಷ್ಟವಾಗಿ ಹೇಳಿರುವಾಗಲೂ, ನೀವು ಆ ಕಾರ್ಯವನ್ನು ನಿರ್ವಹಿಸಲು

ಬಯಸುತ್ತಿದ್ದೀರಾ? ಅಲ್ಲಾಹನಿಂದ ನಿರೂಪಿಸಲ್ಪಟ್ಟ ಜೀವನ ರೀತಿಯು (ದೀನಿಲ್ಲಾಹ್) ಅರಬೀ ಸಂಸ್ಕೃತಿ, ಉಡುಗೆ ಅಥವಾ ಭಾಷೆಯ ಮೇಲೆ ಅವಲಂಬಿತವಾಗಿಲ್ಲ ಎಂದು ನಿಮಗೆ ಗೊತ್ತಿಲ್ಲವೇ?

ಅನೇಕರು ಅರಬೀ ಧರ್ಮವನ್ನು ಅಧ್ಯಯನ ಮಾಡುತ್ತಾರೆ, ಆದರೆ ದೀನನ್ನು ಕಡೆಗಣಿಸುತ್ತಾರೆ. ಈ ದೀನ್ ಈಗ ನೀವು ಸಮ್ಮತಿ ನೀಡುವಂತಹ ಎಲ್ಲಾ ಆಚರಣೆಗಳು, ಮಂತ್ರಯೋಗಗಳು, ಪ್ರಾರ್ಥನಾ-ವಿಧಿಗಳು ಮತ್ತು ಭೌತಿಕ ದೇಹಚಲನೆಗಳಿಂದ ಕೂಡಿದ 'ಧರ್ಮ'ವಾಗಿ ಮಾರ್ಪಟ್ಟಿದೆ. ನೀವು ಆರಾಧನೆಯನ್ನು ಒತ್ತಾಯಿಸುತ್ತೀರಿ, ಆದರೆ ಅಲ್ಲಾಹನಿಗೆ ಆರಾಧನೆಯ ಅಗತ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮ ಕರ್ಮಗಳನ್ನು ಮಾಡುತ್ತಾ, ತಮ್ಮ ವೈಯಕ್ತಿಕ ಬದ್ಧತೆಗಳ ಮೂಲಕ ಅವನ ಸೇವೆಯನ್ನು ಮಾಡಬೇಕೆಂದು ಅವನು ಬಯಸುತ್ತಾನೆ. ಅಲ್ಲಾಹನು ತನ್ನ ಎಲ್ಲಾ ಸಂದೇಶವಾಹಕರನ್ನು ಕಳುಹಿಸಿದ್ದ ಮುಖ್ಯ ಉದ್ದೇಶವು - ಧರ್ಮ, ಆರಾಧನೆ, ಅನಾಚಾರಿಕ ಆಚರಣೆಗಳು ಮತ್ತು ವಿಧಿಗಳನ್ನು (ಉದಾಹರಣೆಗೆ, ನೀವು ಎತ್ತಿಹಿಡಿಯುತ್ತಿರುವಂತಹ ವ್ಯವಸ್ಥೆಯನ್ನು) ನೆಲಸಮಗೊಳಿಸಲಾಗಿತ್ತು. ಎಲ್ಲಾ ವಿಷಯಗಳಲ್ಲಿಯೂ, ನೀವು ಅನಾಚಾರಿಕ ಜೀವನ ರೀತಿಯನ್ನು ಪ್ರಚಾರ ಮಾಡುವ ಸಲುವಾಗಿ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ವಿರುದ್ಧ ಹೋರಾಡುತ್ತಿದ್ದೀರಿ. ನೀವು ಪ್ರಚಂಡನಾದ ವೈರಿಯನ್ನು ಆಯ್ಕೆ ಮಾಡಿರುವಿರಿ - ಎಚ್ಚರಿಕೆ!

ಸತ್ಯವಿಶ್ವಾಸದ ಸಂರಕ್ಷಕರಾದ ನೂಹ್, ಇಬ್ರಾಹೀಮ್, ಇಸ್ಮಾಯೀಲ್, ಇಸ್ಹಾಕ್, ಯಾಕೂಬ್, ಯೂಸುಫ್, ಮೂಸಾ, ಹಾರೂನ್ ಮತ್ತು ಈಸಾ, ಇವೆರೆಲ್ಲರೂ ಅಲ್ಲಾಹನಿಂದ ನಿಗದಿತವಾದ ಜೀವನ ರೀತಿಯಲ್ಲಿ ಮುಂಚೂನಿಯಲ್ಲಿದ್ದರು. ಅವರೆಲ್ಲರೂ ಧರ್ಮವನ್ನು ನಿರ್ಮೂಲಗೊಳಿಸುವ ಉದ್ದೇಶವನ್ನು ಹೊಂದಿದ್ದರು. ಕೊನೆಯ ಪ್ರವಾದಿಯ ಧ್ಯೇಯವೂ ಭಿನ್ನವಾಗಿರಲಿಲ್ಲ.

ಇವರೆಲ್ಲರೂ ಒಂದು ಸಾಮಾನ್ಯ ಉದ್ದೇಶವನ್ನು ಹೊಂದಿದ್ದರು. ಅವತೀರ್ಣವು ತಮ್ಮ ಪ್ರಭುವಿನಿಂದ ಕಳುಹಿಸಲಾದ ಸತ್ಯವಾಗಿದೆ ಎಂದು ಅವರು ಪ್ರಾಮಾಣಿಕವಾಗಿ ನಂಬಿದ್ದರು ಮತ್ತು ಅವರು ತಮ್ಮ ಒಪ್ಪಂದವನ್ನು ಎತ್ತಿಹಿಡಿಯುವ ಮೂಲಕ ತಮ್ಮ ಪ್ರತಿಜ್ಞೆಗಳನ್ನು ಪೂರ್ಣಗೊಳಿಸಿದ್ದರು. ತಮ್ಮನ್ನು ಸೃಷ್ಟಿಸಿದ ಪ್ರಭುವಿನ ಸೇವೆಯನ್ನು ಮಾಡುವ ಸಲುವಾಗಿ, ಉತ್ತಮ ಕಾರ್ಯಗಳನ್ನು ಮತ್ತು ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಜೀವನದ ಒಂದು ಕ್ರಮಬದ್ಧ ರೀತಿಗೆ ಜನರನ್ನು ಬದ್ಧ ಪಡಿಸುವುದಕ್ಕೆ *(ಅನ್-ಯಾ'ಅಸಿಲು)*, ಅಲ್ಲಾಹನು ತನ್ನ ಆದೇಶಗಳಾಗಿ ವಿಧಿಸಿರುವುದನ್ನು ಪರಸ್ಪರ ಜೋಡಿಸಿಕೊಟ್ಟರು *(ಯಸಿಲು)*.

ಅವರು ಎಂದಿಗೂ ತಮ್ಮ ಸ್ವಂತ ವಿಚಾರಗಳನ್ನು ಪ್ರಚಾರ ಮಾಡಲಿಲ್ಲ ಅಥವಾ ತಮ್ಮ ವೈಯಕ್ತಿಕ ಆಸಕ್ತಿಗಳಿಗೆ ಅಲ್ಲಾಹನ ಅವತೀರ್ಣವನ್ನು ದುರುಪಯೋಗ ಪಡಿಸಲಿಲ್ಲ. ನೀವು ಮಾಡುತ್ತಿರುವ ಹಾಗೆ, ಅವನ ಪದಗಳನ್ನು ಅವರು ಯಾವತ್ತೂ ಕುಶಲತೆಯಿಂದ ತಿರುಚಲಿಲ್ಲ. ಅವರಲ್ಲಿ ಯಾವೊಬ್ಬರೂ ದೀನಿನ ಮೂಲಕ ತಮ್ಮ ಜೀವನಾಧಾರವನ್ನು ಸಂಪಾದಿಸಲಿಲ್ಲ. ಜನರಿಗೆ ಸದ್ಗುಣವನ್ನು ಪ್ರತಿಪಾದಿಸುತ್ತಿರುವಾಗ, ಅವರು ಸತ್ಯವನ್ನು ಸುಳ್ಳಿನೊಂದಿಗೆ ಬದಲಿ ಮಾಡಲಿಲ್ಲ ಅಥವಾ ತಿಳಿದೂ ತಿಳಿದೂ ಸತ್ಯವನ್ನು ಅಡಗಿಸಿಡಲಿಲ್ಲ. ಜೊತೆಗೆ, ಅವರಲ್ಲಿ

ಯಾರೂ ಸಹ ವಿಲಕ್ಷಣವಾದ ಧಾರ್ಮಿಕ ಉಡುಪುಗಳನ್ನು ಧರಿಸುವುದರ ಮೂಲಕ ಸಾಮಾನ್ಯ ಜನರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿಲ್ಲ ಅಥವಾ ಅವರು ತಮ್ಮನ್ನು ಪುರೋಹಿತರೆಂದೋ, ಉಲೆಮಾಗಳೆಂದೋ ಕರೆಯಿಸಿಕೊಳ್ಳಲಿಲ್ಲ.

ಬಹು ಮುಖ್ಯವಾಗಿ, ಮಹಮ್ಮದರೂ ಸೇರಿದಂತೆ, ಯಾರೂ ಕೂಡಾ ಯಾರಿಗೂ ಸ್ವರ್ಗದ ಭರವಸೆಯನ್ನು ನೀಡಲಿಲ್ಲ.

ಈ ಕೆಳಗಿನ ವಚನವು ಕುರ್‌ಆನಿನಲ್ಲಿ ನಾಲ್ಕು ಬಾರಿ ಪುನರಾವರ್ತಿಸಲಾಗಿದೆ. ನಿಗದಿತ ದೀನಿನ ಪ್ರಕಾರ ಬದುಕಿದ ಇತಿಹಾಸದಲ್ಲಿನ ನಿಷ್ಠಾವಂತರ ಅನೇಕ ಉದಾಹರಣೆಗಳು ನಮಗೆ ಒಂದು ಪಾಠವಾಗಿರಬೇಕು:

> **ಅವರು ಪ್ರಜ್ಞಾವಂತರಾಗಲೆಂದು ನಾವು ಈ ಕುರ್‌ಆನಿನಲ್ಲಿ ಪ್ರತಿಯೊಂದು ಬಗೆಯ ಉದಾಹರಣೆಗಳನ್ನು ನೀಡಿದ್ದೇವೆ.** (39:27; 17:89; 18:54; 30:58)

ಅರಬೀ ಧರ್ಮದ ಪುರೋಹಿತರು, ಮುಗ್ಧ ಮತ್ತು ಪ್ರಾಮಾಣಿಕ ಜನರ ಮೇಲೆ, ತಮ್ಮ ಮುದ್ರೆಯ ಧರ್ಮವನ್ನು ವಿಧಿಸಲು ಪ್ರಯತ್ನಿಸಿದ ಅನಾಚಾರಿ ಅರಬಿಗಳ ಪ್ರಯತ್ನಗಳ ಫಲವಾಗಿದ್ದಾರೆ. ಅವರ 'ಕಾರ್ಯವಿಧಿಗಳು' ಯಾವುದೇ ಅಸಮ್ಮತಿ ಅಥವಾ ಅನನುಸರಣೆಯನ್ನು ಸಹಿಸುವುದಿಲ್ಲ ಮತ್ತು ಅವುಗಳು ತಮ್ಮ ಮೌಲ್ಯಗಳು ಮತ್ತು ಬೋಧನೆಗಳನ್ನು ಎತ್ತಿಹಿಡಿಯುವುದಕ್ಕೆ ಮತ್ತು ಪ್ರತಿಪಾದಿಸುವುದಕ್ಕೆ ಸಮರ್ಥರಾದ, ಪೂರ್ವಯೋಜಿತ ನಡವಳಿಕೆಯುಳ್ಳ ಕಾರ್ಯನಿರ್ವಹಕರನ್ನು ಜಗತ್ತಿನಾದ್ಯಂತ ನಿರ್ಮಿಸಿವೆ. ನೀವು ಅಲ್ಲಾಹನ ನಿಗದಿತ ಜೀವನ ರೀತಿಗೆ ಸಂಪೂರ್ಣವಾಗಿ ಬದ್ಧರಾಗಿದ್ದ, ಮನುಕುಲದ ನಾಯಕರಾಗಿ ಆರಿಸಲ್ಪಟ್ಟ ಇಬ್ರಾಹೀಮರನ್ನು ದೂಷಣೆ ಮಾಡಿದಿರಿ. ಇದಲ್ಲದೆ, ಮಕ್ಕಾದ ಶಿಲಾಮೂರ್ತಿಯನ್ನು ಪೂಜಿಸಿದ ಮೊದಲ ವ್ಯಕ್ತಿ ಅವರೆಂಬ ಕಥೆಯೊಂದನ್ನು ನೀವು ಸೃಷ್ಟಿಸಿದಿರಿ. ನಿಮ್ಮ ಸುಳ್ಳುವದಂತಿಗಳಲ್ಲಿ ನೀವು ಮಹಮ್ಮದರನ್ನು ಸಹ ಬಿಟ್ಟುಬಿಡಲಿಲ್ಲ.

ಆದುದರಿಂದ, ನೀವು ಈ ಮಾರ್ಗದಲ್ಲಿ ಮುಂದುವರಿಯುವುದು ಕೊನೆಯಿಲ್ಲದಂತಹ ಅವಿವೇಕತನ ಎಂದು ಲೇಖಕರು ಒತ್ತಿಹೇಳುತ್ತಿದ್ದಾರೆ. ನಿಮ್ಮ ಇಂತಹ ನಡವಳಿಕೆಯು - ನಿಮ್ಮ ಜೀವನಕ್ಕೆ ಮಾತ್ರವಲ್ಲ ಇಂದಿನ ಮತ್ತು ನಾಳಿನ ಮುಸ್ಲಿಮರ ಜೀವನಕ್ಕೂ ಸಹ - ಈ ಲೋಕದಲ್ಲಿ ಮಾತ್ರವಲ್ಲ, ಮುಂದಿನ ಲೋಕದಲ್ಲೂ ಸಹ – ಸ್ವವಿನಾಶಕಾರಿಯಾಗಿದೆ. ನೀವು ನಿಮ್ಮ ಪ್ರಜ್ಞಾವಸ್ಥೆಗೆ ಹಿಂದಿರುಗಿರಿ ಮತ್ತು ಯಾವುದೇ ಭೌತಿಕ ವಸ್ತುಗಳನ್ನು ಅಲ್ಲಾಹನೊಂದಿಗೆ ಸಂಯೋಜಿಸಬೇಡಿರಿ ಎಂದು ಶಾಂತಿಯ ಒಂದು ವ್ಯಕ್ತಿಯಾಗಿ ನಾನು ನಿಮ್ಮೊಂದಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಕೊನೆಯದಾಗಿ, ಅಲ್ಲಾಹನ ಬಗ್ಗೆ ಸತ್ಯವನ್ನಲ್ಲದೇ ಬೇರೇನನ್ನೂ ಹೇಳದಿರಿ ಮತ್ತು ಅವನು ಅತ್ಯುನ್ನತ ಖ್ಯಾತಿಯನ್ನು ಹೊಂದಿದವನಾಗಿರುವುದರಿಂದ ಅವನ ಜೊತೆ ನಿಮ್ಮ ಶಿಲಾಮೂರ್ತಿಯನ್ನು ಸಂಯೋಜಿಸಬೇಡಿರಿ.

ಸಮಾರೋಪ

ಕುರ್‌ಆನಿನ ಸಂದೇಶ

ಕುರ್‌ಆನಿನ ಮೂಲ ಸಂದೇಶವು, ಬ್ರಹ್ಮಾಂಡದ ಪ್ರಭುವಾದ ಅಲ್ಲಾಹನನ್ನು ಸಮ್ಮತಿಯೊಂದಿಗೆ ಲಕ್ಷಿಸುವುದಾಗಿದೆ. ಅದು - ಏಕದೇವನಲ್ಲಿ ಮತ್ತು ಕೊನೆಯ ದಿನದಲ್ಲಿ ವಿಶ್ವಾಸವಿರಿಸುವುದು ಮತ್ತು ಸಚ್ಚಾರಿತ್ರ್ಯೆಯ ಕಾರ್ಯಗಳನ್ನು ಮಾಡುವುದರ ಬಗ್ಗೆಯಾಗಿದೆ; ಅದು - ಪ್ರತಿಯೊಬ್ಬನು ತನ್ನನ್ನು ಬದ್ಧಗೊಳಿಸುವಂತಹ ಒಪ್ಪಂದಗಳನ್ನು ಎತ್ತಿಹಿಡಿಯುವ ಮೂಲಕ ತನ್ನ ಕರ್ತವ್ಯಗಳನ್ನು ಪೂರೈಸುವುದರ ಕುರಿತಾಗಿದೆ.

ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳಲ್ಲಿ *(ಮಸಾಜಿದಲ್ಲಾಹ್)* ಅಲ್ಲಾಹನ ಕಾನೂನುಗಳು *(ಶಆಇರಲ್ಲಾಹ್)* ಮತ್ತು ಅಲ್ಲಾಹನ ಮಿತಿಗಳು *(ಹುದೂದುಲ್ಲಾಹ್)* ಇವೆ.

ಉದಾಹರಣೆಗೆ, 5:3 ರಲ್ಲಿ ಅಲ್ಲಾಹನು ಆಹಾರದ ಬಗೆಗಿನ ನಿರ್ಬಂಧಗಳ ಮಿತಿಯನ್ನು ವಿಧಿಸಿದ್ದಾನೆ. ಈ ಕೆಳಗಿನವುಗಳನ್ನು ಸೇವಿಸುವುದನ್ನು ನಿಷೇಧಿಸಲಾಗಿದೆ ಎಂದು ಅವನು ಹೇಳುತ್ತಾನೆ:

1. ರಕ್ತ
2. ಸತ್ತ ಮಾಂಸ
3. ಹಂದಿಯ ಮಾಂಸ
4. ಅಲ್ಲಾಹನ ಹೊರತು ಇತರಿಗೆ ಮೀಸಲಾಗಿಸಿದ ಆಹಾರ
5. ದುರ್ಮರಣ ಹೊಂದಿದ ಪ್ರಾಣಿಗಳು

ಆಹಾರ ವಿಷಯವು ಅಲ್ಲಾಹನ ಸಮ್ಮತಿಸ್ಪಟ್ಟ ಆದೇಶಗಳ ಭಾಗವಾಗಿದೆ. ಕೇವಲ ಐದು ಬಗೆಯ ಆಹಾರಗಳು ಮಾತ್ರ ನಿಷೇಧಿಸಲಾಗಿದೆ ಎಂದು ಅವನು ವಿಧಿಸುತ್ತಾನೆ. ದೀನಿಗೆ ತಮ್ಮನ್ನು ಸಮ್ಮತಿಸಿಕೊಳ್ಳುವವರು ಈ ನಿರ್ಬಂಧಗಳಿಗೆ ತಮ್ಮನ್ನು ಕೇಂದ್ರೀಕರಿಸಿಕೊಳ್ಳುವ ಅಗತ್ಯವಿದೆ.

> ನೀವು ಸಮ್ಮತಿಸಲ್ಪಟ್ಟ ನಿರ್ಬಂಧಗಳಿಗೆ *(ಮಸ್ಜಿದಲ್ ಹರಾಮ್)* ನಿಮ್ಮನ್ನು ಕೇಂದ್ರೀಕರಿಸಿರಿ. ನೀವು ಎಲ್ಲೇ ಆಗಿರಿ, ನೀವು ನಿಮ್ಮನ್ನು ಅದಕ್ಕೆ ಕೇಂದ್ರಿತಗೊಳಿಸಿರಬೇಕು. ಹಿಂದಿನ ಗ್ರಂಥವನ್ನು ಸ್ವೀಕರಿಸಿದವರು ಸಹ, ಇದು ತಮ್ಮ ಪ್ರಭುವಿನಿಂದಿರುವ ಸತ್ಯವೆಂದು ಗುರುತಿಸುತ್ತಾರೆ. (2:144)

ನಾವು ಮಾಡುತ್ತಿರುವುದನ್ನೆಲ್ಲಾ ಅಲ್ಲಾಹನು ಅರಿಯುತ್ತಿದ್ದಾನೆಂದು ಅವನು ಹೇಳುತ್ತಾನೆ. ನಾವು ಯಾವ ಸ್ಥಳದಲ್ಲಿ ವಾಸಿಸುತ್ತಿದ್ದೇವೆ ಅಥವಾ ನಾವು ಎಲ್ಲಿಗೆ ಹೋಗುತ್ತೇವೆ ಎಂಬುವುದರಲ್ಲಿ ಅವನಿಗೆ ಆಸಕ್ತಿಯಿಲ್ಲ. ಆದರೆ ನಾವು ಎಲ್ಲಿದ್ದರೂ ಅವನಿಂದ ಸಮ್ಮತಿಸಲ್ಪಟ್ಟ ನಿರ್ಬಂಧಗಳಿಗೆ ನಾವು ಕೇಂದ್ರಿತರಾಗಿರಬೇಕು.

ಒಂದು ನಿರ್ದಿಷ್ಟ ಬದ್ಧತೆಗಳನ್ನು ತನ್ನ ಸೇವಕರು ಲಕ್ಷಿಸಬೇಕೆಂದು ಅಲ್ಲಾಹನು ನಿರ್ದೇಶಿಸುವ ಪ್ರತಿ ಬಾರಿಯೂ, *'ಇವುಗಳು ಅಲ್ಲಾಹನ ಮಿತಿ ಅಥವಾ ಮೇರೆಗಳಾಗಿವೆ'* ಎಂದು ಅವನು ಸೂಚಿಸುತ್ತಾನೆ. ಉದಾಹರಣೆಗೆ:

ನಿಗದಿತ ಮಿತಿಗಳನ್ನು (ಅಥವಾ ಹುದೂದುಲ್ಲಾಹ್) 14 ಬಾರಿ ಪ್ರಸ್ತಾಪಿಸಲಾಗಿದೆ ಮತ್ತು ಅವುಗಳು ಸಾಂಸಾರಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿದೆ. ಧಾರ್ಮಿಕರು ತಮ್ಮದೇ ಆದ ಪೂರ್ವಯೋಜಿತ ತಂತ್ರಗಳ ಮೂಲಕ ಕೆಲವು ಒರಟು ಕಾನೂನುಗಳ ಕೂಟವನ್ನು ಪರಿಚಯಿಸಿ ಅದಕ್ಕೆ *ಹುದೂದ್ ಕಾನೂನು* ಎಂದು ಹೆಸರು ನೀಡುವ ಮೂಲಕ ಹೂದೂದ್ ಎಂಬ ಪದವನ್ನು ದುರುಪಯೋಗ ಪಡಿಸಿದರು. ಸಹಜವಾಗಿ, ಈ ಕಾನೂನುಗಳಿಗೂ, ವಿವೇಕಭರಿತವಾದ ಹಾಗೂ ಸಮತೋಲಿತವಾದ ಕುರ್‌ಆನಿನ ಆಜ್ಞೆಗಳಿಗೂ ಯಾವುದೇ ಸಾಮ್ಯತೆಯು ಕಂಡುಬರುವುದಿಲ್ಲ.

ಹೀಗೆ ಅವರು ಅಲ್ಲಾಹನ ಹೆಸರನ್ನು ದುರ್ಬಳಕೆ ಮಾಡುತ್ತಾರೆ. ಅಲ್ಲಾಹನು ತನ್ನ ಮಿತಿಗಳಿಗೆ ಆಯ್ಕೆ ಮಾಡಿದ ಅದೇ ಹೆಸರನಡಿಯಲ್ಲಿ, ತಮ್ಮ ಅವಿಷ್ಕೃತ ಹುದೂದ್ ಕಾನೂನಿನ ಆಧಾರದಲ್ಲಿ – ಅವರಿಗೆ ಜನರನ್ನು ಕಲ್ಲು ಹೊಡೆದು ಸಾಯಿಸಬಹುದು, ಸಂಬಂಧಪಟ್ಟ ಕಕ್ಷಿಗಳ ಅವಹಾಲಿಗೆ ಅವಕಾಶ ನೀಡದೆಯೇ ವಿವಾಹಗಳನ್ನು ಅನೂರ್ಜಿತಗೊಳಿಸಬಹುದು, ತಮ್ಮ ಅರಬೀ ಧರ್ಮದ ಮಾಪನದ ಪ್ರಕಾರ ನಿಮ್ಮನ್ನು ಧರ್ಮಭ್ರಷ್ಟನೆಂದು ಘೋಷಿಸಬಹುದು, ಅರಬೀ ಧರ್ಮವನ್ನು ಒಪ್ಪಿಕೊಳ್ಳದಿದ್ದರೆ ನಿಮ್ಮನ್ನು ಸೆರೆಯಲ್ಲಿಡಬಹುದು, ನಿಮ್ಮನ್ನು ಗಡಿಪಾರು ಮಾಡಬಹುದು ಮತ್ತು ನಿಮ್ಮ ಆಸ್ತಿಯನ್ನು ವಶಪಡಿಸಿಕೊಳ್ಳಬಹುದು. ಇವುಗಳನ್ನು ಅವರು ಅಲ್ಲಾಹನ ನಾಮದಲ್ಲೇ ಮಾಡುತ್ತಾರೆ!

ಉಲೆಮಾ ಹಾಗೂ ಪುರೋಹಿತರಿಗೆ ಮತ್ತೊಂದು ಸವಾಲು ಇಲ್ಲಿದೆ. ಇಸ್ಲಾಮೀ ದೇಶಗಳು ಎಂದು ಹೇಳಿಕೊಳ್ಳುವ ದೇಶಗಳು ಜಾರಿಗೊಳಿಸಿರುವ, ಅರಬೀ ಧರ್ಮದ <u>ಒಂದೇ ಒಂದು</u> ಹುದೂದ್ ಕಾನೂನು ಕೂಡಾ ಕುರ್‌ಆನಿನಿಂದ ಪಡೆದಿರುವುದಲ್ಲ. ಅಲ್ಲವೆಂದು ನಿಮಗೆ ಸಾಬೀತು ಮಾಡಬಹುದೇ? ಸಾಧ್ಯವಿಲ್ಲವೆಂದಾದರೆ, ಬಹಳ ತಡವಾಗಿ ಹೋಗುವ ಮೊದಲು, ನಿಮ್ಮ ನಿಲುವಂಗಿಯನ್ನು ಬಹಿಷ್ಕರಿಸಿ, ನಿಮ್ಮ ಜೀವನದಲ್ಲಿ ಹೆಚ್ಚು ಉಪಯುಕ್ತವಾದ ಏನಾದರೂ ಕಾರ್ಯಗಳನ್ನು ಮಾಡತೊಡಗಿರಿ.

ಹುದೂದ್ ಕಾನೂನುಗಳೆಂದು ಕರೆಯಲ್ಪಡುವ ಅರಬೀ ಬುಡಕಟ್ಟು ಕಾನೂನುಗಳು, ಅಲ್ಲಾಹನಿಂದ ಕುರ್‌ಆನಿನಲ್ಲಿ ಸೂಚಿಸಲ್ಪಟ್ಟವುಗಳಲ್ಲ. ನಿಜವಾದ ನಿಗದಿತ ಮಿತಿಗಳು ಅಥವಾ ಕುರ್‌ಆನಿನ ಹುದೂದ್ ಎಂಬುವುದು, ಯಾವುದೇ ಧಾರ್ಮಿಕ ಅಂಶಗಳಿಲ್ಲದೆ, ಪ್ರತಿಯೊಬ್ಬ ವ್ಯಕ್ತಿಯು ಅರ್ಥೈಸಬಹುದಾದ ಮತ್ತು ಅನ್ವಯಿಸಿಕೊಳ್ಳಬಹುದಾದ ನ್ಯಾಯೋಚಿತ ತತ್ವಗಳನ್ನು ಹೊಂದಿದೆ. ಇವುಗಳು ಸತ್ಯಾಂಶಗಳಾಗಿವೆ.

ವೈಯ್ಯಕ್ತಿಕವಾಗಿ ಅಲ್ಲಾಹನ ಸೇವೆಯನ್ನು ಮಾಡುವುದು

ಆದರಮರ ಕಾಲದಿಂದಲೂ ಅಲ್ಲಾಹನು ತನ್ನ ಸೇವಕರೊಂದಿಗೆ ವೈಯ್ಯಕ್ತಿಕವಾಗಿಯೇ ವ್ಯವಹರಿಸಿದ್ದಾನೆ. ಭೂಮಿಯ ಮೇಲಿರುವ ಪ್ರತಿಯೊಬ್ಬ ಮನಷ್ಯನನ್ನೂ ಸೃಷ್ಟಿಸಿದವನು ಅವನಾಗಿದ್ದಾನೆ, ಮತ್ತು ಪ್ರತಿಯೊಬ್ಬನೂ ತೀರ್ಪಿನ ದಿನದಂದು ವೈಯ್ಯಕ್ತಿಕವಾಗಿಯೇ ಅವನ ಮುಂದೆ ಹಾಜರಿಪಡುವರು. ಅವನು ತನ್ನ ರಾಜಪ್ರಭುತ್ವವನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ. ಮತ್ತು ತನ್ನ ನಿಗದಿತ ಮಿತಿಗಳನ್ನು ಯಾರ ಮೇಲೂ ಬಲವಂತವಾಗಿ ವಿಧಿಸಲು ಅವನು ಪ್ರವಾದಿಗಳೂ ಸೇರಿದಂತೆ ತನ್ನ ಯಾವುದೇ ಸೇವಕರಿಗೂ ಅನುಮತಿ ನೀಡಲಿಲ್ಲ.

'ಅಲ್ಲಾಹನ ಮನೆ' ಎಂಬ ಕಟ್ಟಡವನ್ನು ಕಟ್ಟಲು ಅಲ್ಲಾಹನು ಧಾರ್ಮಿಕರನ್ನು ವಿನಂತಿಸಲಿಲ್ಲ. ಅವರು ಒಂದು ಮಂದಿರವಾಗಿ ತನ್ನ ಜೀವನವನ್ನು ಪ್ರಾರಂಭಿಸಿದ ಹಾಗೂ ಈಗ ಮತ್ತೊಂದು ದೇವಾಲಯದ ಮಧ್ಯದಲ್ಲಿ ಒಂದು ಮೂರ್ತಿಯಾಗಿ ಕಾರ್ಯನಿರ್ವಹಿಸುತ್ತಿರುವ ಒಂದು ಚೌಕಾಕಾರದ ಶಿಲಾರಚನೆಯನ್ನು ರಚಿಸಿದರು. ಅದು 'ಮುಸ್ಲಿಮರು' ಅನಾಚಾರಿಗಳೆಂದು ದೂಷಿಸುವಂತಹ ಜನರ ಮಂದಿರಕ್ಕಿಂತ ವ್ಯತ್ಯಸ್ತವಾಗಿಲ್ಲ.

ನಮ್ಮ ನಂಬಿಕೆಯು ಏನೇ ಆಗಿರಲಿ, ಅರಬರು ಅತ್ಯಂತ ಕೆಟ್ಟ ಸಮುದಾಯವಾಗಿದೆ ಎಂದು ಅಲ್ಲಾಹನು ಹೇಳುವ ಅವನ ಸತ್ಯ ವಾಕ್ಯವನ್ನು ವಿರೋಧಿಸಲು ನಮಗೆ ಸಾಧ್ಯವಿಲ್ಲ. ಕುರ್‌ಆನಿನಲ್ಲಿ ಪ್ರಸ್ತಾಪಿಸಲಾದ *ಆ'ರಾಬಿ* ಎಂಬ ಪದವು, ಬದು-ಅರಬಿಗಳನ್ನು ಅಥವಾ ಅರಬಿಗಳಲ್ಲಿನ ಒಂದು ವಿಶೇಷ ವರ್ಗವನ್ನು ಸೂಚಿಸುತ್ತಿದೆ ಎಂದು ಅರಬರನ್ನು ನಿರ್ದೋಷಗೊಳಿಸಲು ಅನುವಾದಕರನ್ನು ಬಲವಂತಗೊಳಿಸಲಾಗಿದೆ. ಅಲ್ಲಾಹನು ಎಲ್ಲಾದರಲ್ಲೂ ಸುಸ್ಪಷ್ಟನಾಗಿದ್ದಾನೆ. *ಆ'ರಾಬಿ* ಎಂಬ ಪದಕ್ಕೂ ಬದು-ಅರಬಿಗಳಿಗೂ ಯಾವುದೇ ಸಂಬಂಧವಿಲ್ಲ. ಬದು-ಅರಬಿಗಳಿಗೆ, *ಬದೂನ-ಫಿಲ್-ಆ'ರಾಬಿ* ಎನ್ನಲಾಗುತ್ತದೆ ಹಾಗೂ ಈ ಪದವು ಕುರ್‌ಆನಿನಲ್ಲೂ ಸಹ ಕಂಡುಬರುತ್ತದೆ. *ಆ'ರಾಬಿ* ಎಂಬ ಪದವು ನಗರ-ವಾಸಿಗಳನ್ನೂ ಸೇರಿದಂತೆ ಸಾಮಾನ್ಯ ಅರಬರನ್ನು ಸೂಚಿಸುತ್ತದೆ.

> ನಿಮ್ಮ ಸುತ್ತಮುತ್ತಲಲ್ಲಿ ಇರುವವರ ಪೈಕಿ, ಕಪಟ ಅರಬರು ಇದ್ದಾರೆ ಮತ್ತು ನಗರ ವಾಸಿಗಳು ಇದ್ದಾರೆ. ಅವರು ಕಪಟತನದಲ್ಲಿ ಕಠೋರರಾಗಿದ್ದಾರೆ. ನೀವು ಅವರನ್ನು ಅರಿತಿಲ್ಲ. ನಾವು ಅವರನ್ನು ಅರಿತಿದ್ದೇವೆ. (9:101)

ಕುರ್‌ಆನ್ ಅವತೀರ್ಣಗೊಂಡ ದಿನದಿಂದಲೂ ಅದು ಸಮರ್ಪಕವಾಗಿಯೇ ಇತ್ತು, ಇಂದಿಗೂ ಹಾಗೆಯೇ ಇದೆ ಹಾಗೂ ಅಂತಿಮ ದಿನದ ವರೆಗೂ ಅದು ಹಾಗೆಯೇ ಉಳಿಯುವುದು. *ಅರಬರು* ಎಂದು ಹೇಳುವಾಗ ಅದು ಸೂಚಿಸುವುದು ಕೇವಲ ಅರಬರನ್ನೇ ಆಗಿದೆ. ಅಪರಾಧಿ ಯಾರೆಂದು ಗುರುತಿಸುವ ಮೂಲಕ ಅರಬರು

ತಮ್ಮತಮ್ಮಲ್ಲೇ ಈ ಸಮಸ್ಯೆಯನ್ನು ಬಗೆಹರಿಸಬೇಕು. ಈ ನಡುವೆ, ಕುರ್‌ಆನಿನಲ್ಲಿರುವ ಸತ್ಯವಾಕ್ಯಗಳನ್ನು ಯಾರಿಗೂ ಬದಲಾಯಿಸಲು ಸಾಧ್ಯವಿಲ್ಲ ಮತ್ತು ಅವಿಶ್ವಾಸಿಗಳಾದ ಅರಬರ ಬಗ್ಗೆ ಸ್ವಲ್ಪ ಹಿತಕರವಾದ ಏನನ್ನಾದರೂ ಹೇಳುವಂತೆ ಈ ವಚನಗಳನ್ನು ಪರಿವರ್ತಿಸಲು ಅವರಿಗೆ ಸಾಧ್ಯವಿಲ್ಲ. ಅವರು ಪಶ್ಚಾತ್ತಾಪ ಪಡುವವರೆಗೆ ಮತ್ತು ಕುರ್‌ಆನಿನ ಮೇಲೆ ವಿಶ್ವಾಸವಿರಿಸುವವರೆಗೆ, ಅಲ್ಲಾಹನು ಈ ಜನರನ್ನು ಶಾಶ್ವತವಾಗಿ ಖಂಡಿಸುತ್ತಾನೆ. ಈಗ ಇಲ್ಲಿರುವ ಪ್ರಶ್ನೆಯು ಇದಾಗಿದೆ: *ತಮ್ಮ ತಪ್ಪುಗಳನ್ನು ಅವರು ಒಪ್ಪಿಕೊಳ್ಳುವರೇ ಮತ್ತು ಅವರು ಪಶ್ಚಾತ್ತಾಪ ಪಡುವರೇ?*

ಶಾಂತಿಪರತೆಯನ್ನು ಪಡೆಯುವುದಕ್ಕಾಗಿ, ಜೀವನದ ಕ್ರಮಬದ್ಧ ರೀತಿಯ ಮಹತ್ವದ ಬಗ್ಗೆ ಈ ಕೆಳಗಿನ ಪ್ರಶ್ನೆಗಳನ್ನು ಸ್ವತಃ ತಮ್ಮೊಂದಿಗೆಯೇ ಕೇಳಿಕೊಂಡರೆ, ಬಹುಶಃ ಮುಗ್ಧ ಅರಬರು ಉತ್ತರವನ್ನು ಕಂಡುಕೊಳ್ಳಬಲ್ಲರು:

- ಶಾಂತಿಪರತೆಯಲ್ಲಿ, *ಅಲ್ಲಾಹನ ಮನೆ* ಎಂಬ ಒಂದು ಪರಿಕಲ್ಪನೆಯು ಇದೆಯೇ?

- ಒಂದು ಶಿಲಾರಚನೆಯನ್ನು ಅಭಿಮಾನಿಸುವುದರಿಂದ ಮತ್ತು ಅದನ್ನು ಅಲ್ಲಾಹನ ಮನೆ ಎಂದು ಕರೆಯುವುದರಿಂದ, ವಿಶ್ವಶಾಂತಿಯನ್ನು ಸಾಧಿಸಲು ಸಾಧ್ಯವಿದೆಯೇ?

- ಒಂದು ಕಲ್ಲಿನ ಮನೆ, ಸಣ್ಣ ಕಪ್ಪು ಗ್ರಾನೈಟ್ ಕಲ್ಲು, ಎರಡು ಪರ್ವತಗಳ ತುದಿಗಳು, ತಾಮ್ರದ ಬ್ಲಾಕಿನ ಹೆಜ್ಜೆಗುರುತುಗಳು, ಕಲ್ಲಿನ ಕಂಬಗಳು, ಎಂಬಿತ್ಯಾದಿಗಳಿಗೂ, ಅಲ್ಲಾಹನಿಗೂ ಏನು ಸಂಬಂಧ?

- ತಮ್ಮದೇ ಕೈಗಳಿಂದ ನಿರ್ಮಿಸಿದ ಶಿಲಾರಚನೆಯ ಸುತ್ತ ಧಾರ್ಮಿಕ ವಿಧಿಗಳನ್ನು ನಿರ್ವಹಿಸುವುದರಿಂದ, ಮನುಕುಲಕ್ಕಾಗಿ ಯಾವ ರೀತಿಯ ಶಾಂತಿಪರತೆಯನ್ನು ಗಳಿಸಲು ಅವರಿಗೆ ಸಾಧ್ಯವಿದೆ?

ಈ ಕಲ್ಪನೆಗಳು ಕುರ್‌ಆನಿನಲ್ಲಿ ಕಂಡುಬರುವುದಿಲ್ಲ.

ನಲವತ್ತು ವರ್ಷಗಳ ಹಿಂದೆ ಮರಳುಗಾಡಿನಿಂದ ಸುತ್ತುವರಿದಿದ್ದ, ಅನೇಕ ಬಾರಿ ಪುನರ್-ನಿರ್ಮಿಸಲ್ಪಟ್ಟ ಘನಾಕೃತಿಯ ಕಾಬಾ ಮನೆಯು, ಈಗ ಇಟಾಲಿಯನ್ ಮಾರ್ಬಲ್'ಗಳನ್ನು ಹಾಸಲ್ಪಟ್ಟ ಮತ್ತು (ಅವರು ಪವಿತ್ರವೆಂದು ಘೋಷಿಸುವ) 'ರಿವರ್ಸ್-ಆಸ್ಮೋಸಿಸ್' ನೀರನ್ನು ಹರಿಸಲು ಚೌಕ ಮನೆಯ ಕೆಳಗಡೆ ಅಳವಡಿಸಲಾದ ಪಂಪುಗಳನ್ನು ಹೊಂದಿರುವ ಒಂದು ಅದ್ದೂರಿಯಾದ ಕಟ್ಟಡವಾಗಿ ಪರಿವರ್ತನೆಗೊಂಡಿದೆ. ಕೊಂಚ ಕಲ್ಪನಾಶಕ್ತಿಯಿದ್ದರೆ, ಅರಬೀ ಮಣ್ಣಿನ ಮೇಲೆ ಯಾವುದೂ ಅಸಾಧ್ಯವಲ್ಲ. ಶಿಲೆಗಳು ಪಾವನವಾಗುತ್ತದೆ ಮತ್ತು ಶುದ್ಧೀಕರಿಸಲ್ಪಟ್ಟ ಸಮುದ್ರದ ನೀರು ಪವಿತ್ರವಾಗಿ ಬಿಡುತ್ತದೆ.

ಧಾರ್ಮಿಕರು ಈ ನೀರನ್ನು 'ಪವಿತ್ರ'ವಾಗಿಸಲು, *ಝಂ-ಝಂ* ಎಂಬ ಕೇವಲ ಎರಡು ಮಾಯಾ ಪದಗಳನ್ನು ಉಚ್ಚರಿಸಿದರು. ಇಂದು ತೀರ್ಥಯಾತ್ರೆಯ ಬಳಿಕ ಪ್ರಪಂಚದಾದ್ಯಂತದ ಮುಸ್ಲಿಮರು ಮನೆಗೆ ತೆಗೆದುಕೊಂಡು ಹೋಗಲು, 20-50 ಲೀಟರ್ ಝಂ-ಝಂ ನೀರನ್ನು ಹೆಚ್ಚುವರಿ ಸರಕುಗಳಾಗಿ ಸೇರಿಸಿಕೊಳ್ಳುತ್ತಾರೆ.

ಮಕ್ಕಾದಲ್ಲಿ ಅಲ್ಲಾಹನ ಮನೆಯನ್ನು ಸ್ಥಾಪಿಸಿದ ನಂತರ ಹತ್ತಿರದ ಮೀನಾದಲ್ಲಿ ಶೈತಾನನ್ನು ನೆರೆಕರೆಯನ್ನಾಗಿ ಇರಿಸುವಂತಹ ಹಾಸ್ಯಾಸ್ಪದ ಕಲ್ಪನೆಯನ್ನು ಜನಕೋಟಿಗಳಿಗೆ ನಂಬಿಸಲು ಅರಬೀ ಧಾರ್ಮಿಕರಿಗೆ ಮಾತ್ರ ಸಾಧ್ಯವಾಗಿದೆ.

ಸಾಮಾನ್ಯ ಯಾತ್ರಿಗಳಿಗೆ ಉಮ್ರ ಮತ್ತು ಹಜ್ಜ್ ಪದಗಳ ನಿಜವಾದ ಅರ್ಥಗಳಲ್ಲಿ ಆಸಕ್ತಿ ಇಲ್ಲ, ಏಕೆಂದರೆ ಅವುಗಳು ಅರಬೀ ಭಾಷೆಯಲ್ಲಿವೆ. ಭಾಷೆಯನ್ನು ಅವರು ಧಾರ್ಮಿಕರಿಗೆ ಬಿಟ್ಟುಬಿಟ್ಟಿದ್ದಾರೆ. ಅಲ್ಲಿನ ಸ್ಥಳೀಯ ಶಿಲೆಗಳಿಗೆ ಬಗ್ಗಬೇಕಾದರೂ ಹಾಗೂ ಸಾಷ್ಟಾಂಗವೆಸಬೇಕಾದರೂ ಸರಿ, ಅವರ ಪ್ರಮುಖ ಉದ್ದೇಶವು ಉಮ್ರ ಮತ್ತು ಹಜ್ಜ್ ಕರ್ಮಗಳನ್ನು ಪೂರ್ತಿಗೊಳಿಸುವುದಾಗಿದೆ.

ವಿವಾದಿತ ಡೊಂಬರಾಟಗಳು

ಮಕ್ಕಾದಲ್ಲಿರುವ ಕಲ್ಲಿನ ಮನೆಯು ಅಲ್ಲಾಹನ ವೈಭವವನ್ನು ಪ್ರತಿನಿಧಿಸುತ್ತದೆ ಎಂದು ಕೆಲವು ಮೂರ್ತಿ ಆರಾಧಕರು *(ಮುಶ್ರಿಕೀನ್)* ಹೇಳುತ್ತಾರೆ; ಇತರರು, ಅದು ಕೇವಲ ಸಾಂಕೇತಿಕವಾದ ಅಲ್ಲಾಹನ ಮನೆಯಾಗಿದೆ ಎಂದು ಹೇಳುತ್ತಾರೆ. ಇದಾಗಿದೆ ಅವರ ವಿವಾದಿತ ಡೊಂಬರಾಟಗಳು ಅಥವಾ ದ್ವಂದ್ವಾತ್ಮಕ ಚಮತ್ಕಾರಗಳು. ಅದೇ ರೀತಿ, ಮೀನಾದಲ್ಲಿರುವ ಗೋಡೆಗಳು (2004 ರ ವರೆಗೆ ಇವುಗಳು ಸ್ತಂಭಗಳಾಗಿದ್ದವು. ಅನೇಕ ಯಾತ್ರಿಗಳು ಕಲ್ಲುತೂರಟ ನಡೆಸುವಾಗ ಅದು ಇನ್ನೊಂದು ಬದಿಯಲ್ಲಿರುವ ಯಾತ್ರಿಗಳ ಮೇಲೆ ಬೀಳುತ್ತಿದ್ದ ಕಾರಣ, ಸೌದಿ ಅಧಿಕಾರಿಗಳು ಈ ಸ್ತಂಭಗಳನ್ನು 26 ಮೀಟರ್ ಉದ್ದದ ಗೋಡೆಗಳಾಗಿ ಪರಿವರ್ತಿಸಿದರು). ಈ ಗೋಡೆಯು ನಿಜವಾಗಿ ಶೈತಾನನಲ್ಲ, ಬದಲಿಗೆ ಶೈತಾನನ ಸಂಕೇತವಾಗಿದೆ ಎಂದು ಅವರು ಹೇಳುತ್ತಾರೆ. ಅಲ್ಲಾಹನು ಸರ್ವವ್ಯಾಪಿಯೂ ಮತ್ತು ಸರ್ವಶಕ್ತನೂ ಆಗಿರುವಾಗ, ಅವರು ಅಲ್ಲಾಹನನ್ನು ಭೂಮಿಯ ಮೇಲೆ ಸಾಂಕೇತಿಸಲು ಏಕೆ ಬಯಸುತ್ತಾರೆ ಮತ್ತು ಶೈತಾನನ್ನು ಸಾಂಕೇತಿಸಿಕೊಂಡು ಅವರು ಅಲ್ಲಾಹನ ನಾಮದಲ್ಲಿ ಶೈತಾನನಿಗೆ ಏಕೆ ಘನತೆ ಮತ್ತು ಮನ್ನಣೆಯನ್ನು ನೀಡುತ್ತಾರೆ?

'ಸಂಕೇತ' ಎಂದರೆ, 'ಯಾವುದಾದರೊಂದನ್ನು - ಸಂಬಂಧದಲ್ಲಿ, ಹೋಲಿಕೆಯಲ್ಲಿ ಅಥವಾ ರೀತಿನೀತಿಯಲ್ಲಿ - ಬೇರೆ ಯಾವುದಾದರೊಂದರ ಮೂಲಕ ಪ್ರತಿನಿಧಿಸುವುದು' ಎಂದಾಗಿದೆ, ವಿಶೇಷವಾಗಿ ಒಂದು ಭೌತಿಕ ವಸ್ತುವು, ಅಗೋಚರವಾದ ಅಥವಾ ಅದೃಷ್ಯವಾದ ಯಾವುದಾದರೊಂದನ್ನು ಪ್ರತಿನಿಧಿಸುತ್ತದೆ.

ಅದೃಷ್ಯನಾದ ಅಲ್ಲಾಹನ ಮೇಲೆ ವಿಶ್ವಾಸವಿರಿಸುವುದು ಕುರ್‌ಆನಿನ ಮೂಲಭೂತ ಬೋಧನೆಯಾಗಿದೆ. ಕುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ, *"ಈ ಗ್ರಂಥವು ದೋಷಾತೀತವಾಗಿದೆ; ಲಕ್ಷ್ಯತೆ ವಹಿಸುವವರಿಗೂ, ಅದೃಷ್ಯದಲ್ಲಿ ವಿಶ್ವಾಸವಿರಿಸುವವರಿಗೂ ಇದು ಒಂದು ಮಾರ್ಗದರ್ಶಿಯಾಗಿದೆ..."* (2:2-3) ಮತ್ತು ಮೂಸಾ, ಈಸಾ ಹಾಗೂ ಮುಹಮ್ಮದರು ತಂದಿದ್ದ ಪ್ರಮುಖ ಅನುಶಾಸನವು, *"ನೀವು ಅಲ್ಲಾಹನನ್ನು ಹೊರತುಪಡಿಸಿ ಬೇರಾವುದನ್ನೂ ಸೇವೆ ಮಾಡಬಾರದು"* ಎಂದಾಗಿತ್ತು.

ಜನರು ಒಂದು ಸಂಕೇತಕ್ಕೆ ಭೇಟಿ ನೀಡುವುದನ್ನು ತಮ್ಮ ಮೇಲೆ ಕಡ್ಡಾಯಗೊಳಿಸುವಾಗ – ವಾಸ್ತವದಲ್ಲಿ ಅವರು ಆ ಸಂಕೇತವನ್ನು ಪರಮಾತ್ಮನ ಜೊತೆ ಸಂಯೋಜಿಸಿಕೊಳ್ಳುತ್ತಾರೆ ಮತ್ತು ಅದರ ಸೇವೆಯನ್ನು ಮಾಡುತ್ತಾರೆ. ಆದರೆ ಕುರ್‌ಆನ್ ಹೇಳುತ್ತದೆ, *"ತನ್ನ ಜೊತೆ ಯಾವುದನ್ನಾದರೂ ಸಂಯೋಜಿಸಲ್ಪಡುವುದನ್ನು ಅಲ್ಲಾಹನು ಕ್ಷಮಿಸುವುದಿಲ್ಲ... ಯಾರು ಅಲ್ಲಾಹನ ಜೊತೆ ಇತರ ಯಾವುದನ್ನಾದರೂ ಸಂಯೋಜಿಸುತ್ತಾನೆ, ಖಂಡಿತವಾಗಿಯೂ ಅವನು ಅತಿ ದೊಡ್ಡ ಸುಳ್ಳನ್ನು ಸೃಷ್ಟಿಸಿದ್ದಾನೆ"* (4:48). ಕುರ್‌ಆನ್ ಹೀಗೂ ಹೇಳುತ್ತದೆ: *"ಮಾನವನು ತನ್ನ ಮುಂದೆ ಕಾಣುತ್ತಿರುವುದನ್ನು ಮಾತ್ರ ನಂಬಲು ಒಲವು ತೋರಿಸುತ್ತಾನೆ"*. (75:5).

ಆದರೂ ಕೆಲವು ಮೂರ್ತಿ ಆರಾಧಕರು ತಮ್ಮ ವಿಧ್ಯುಕ್ತ ಪ್ರಾರ್ಥನೆಗಾಗಿ ಮುಖಮಾಡಲು, ಮಕ್ಕಾದ ಚೌಕ ಶೀಲಾರಚನೆಯು ಅಗತ್ಯವಿದೆ ಎಂದು ಹೇಳಿಕೊಳ್ಳುತ್ತಾರೆ. ಮುಸ್ಲಿಮರನ್ನು ಒಗ್ಗೂಡಿಸಲು, ಈ ಚೌಕ ಮನೆಯ ಅಗತ್ಯವಿದೆ ಎಂದು ಇನ್ನು ಕೆಲವರು ಹೇಳುತ್ತಾರೆ. ಆದರೆ, ಅವರು ಯಾವುದೇ ನೆಪವನ್ನು ಮುಂದಿಟ್ಟರೂ, ಅದು ಅವರು ಹೇಳುವುದಕ್ಕೆ ವಿರುದ್ಧವಾಗಿಯೇ ಕಾರ್ಯನಿರ್ವಹಿಸುತ್ತದೆ. ಜನರು ಪ್ರಾರ್ಥಿಸುವಾಗ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಮುಖಮಾಡಬೇಕೆಂಬ ಯಾವುದೇ ಸೂಚನೆಗಳು ಕುರ್‌ಆನಿನಲ್ಲ. ಆದರೆ, ಕುರ್‌ಆನಿನಲ್ಲಿ ಅವತೀರ್ಣಗೊಂಡ ಅಲ್ಲಾಹನಿಂದ ನಿಗದಿಪಡಿಸಿದಂತಹ ನಿರ್ಬಂಧಗಳ ಕಡೆಗೆ, ತಮ್ಮ ಗಮನವನ್ನು ಕೇಂದ್ರೀಕರಿಸಿಕೊಳ್ಳಬೇಕೆಂಬ ಸ್ಪಷ್ಟ ಆದೇಶಗಳು ಇವೆ.

> ನಿಮ್ಮ ಮುಖಗಳನ್ನು ಪೂರ್ವ ಅಥವಾ ಪಶ್ಚಿಮದ ಕಡೆಗೆ ತಿರುಗಿಸುವುದರಲ್ಲಿ ಯಾವುದೇ ಪುಣ್ಯಶೀಲತೆ ಇಲ್ಲ. ಆದರೆ ಪುಣ್ಯವು ಇವುಗಳಲ್ಲಿದೆ - ಅಲ್ಲಾಹನಲ್ಲಿ, ಮುಂದಿನ ಜೀವನದಲ್ಲಿ, ಶಕ್ತಿಗಳಲ್ಲಿ, ಗ್ರಂಥಗಳಲ್ಲಿ ಮತ್ತು ಪ್ರವಾದಿಗಳಲ್ಲಿ ವಿಶ್ವಾಸವಿಡುವುದು; ತಮ್ಮ ಸಂಪ್ರೀತಿಯ ಸಂಪತ್ತನ್ನು ಬಂಧುಗಳಿಗೆ, ಅನಾಥರಿಗೆ, ಬಡವರಿಗೆ, ಸಂಕಷ್ಟಗಳನ್ನು ಎದುರಿಸುತ್ತಿರುವವರಿಗೆ, ಯಾಚಿಸುವವರಿಗೆ ದಾನಮಾಡುವುದು; ಬದ್ಧತೆಗಳನ್ನು ಎತ್ತಿಹಿಡಿಯುವುದು ಹಾಗೂ ಅವುಗಳನ್ನು ಶುದ್ಧವಾಗಿ ಇಟ್ಟುಕೊಳ್ಳುವುದರಿಂದ ಮಾನಸಿಕ ಗುಲಾಮಗಿರಿಯನ್ನು ಸ್ವತಂತ್ರಗೊಳಿಸುವುದು; ಮತ್ತು ನೀಡಿದ ವಾಗ್ದಾನಗಳನ್ನು ಉಳಿಸಿಕೊಳ್ಳುವುದು; ಮತ್ತು ಪ್ರತಿಕೂಲದ, ಸಂಕಷ್ಟದ ಮತ್ತು ವಿಪತ್ತಿನ ಸಂಧರ್ಭದಲ್ಲಿ ದೃಢಕಾಯರಾಗಿ ನಿಲ್ಲುವುದು - ಇವರೇ ಸತ್ಯಸಂಧರು, ಇವರೇ ಸದ್ಗುಣರು. (2:177)

ಕುರ್‌ಆನಿನಲ್ಲಿರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ನಂತರ, ಉಮ್ರ ಎಂಬ ಪದದ ಅರ್ಥವು *ಜೀವನ ನೀಡುವುದು* ಅಥವಾ *ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳನ್ನು (ಮಸಾಪಿದಲ್ಲಾಹ್) ಉತ್ತೇಜಿಸುವುದು*

ಎಂದಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಅದು ಮಕ್ಕಾದಲ್ಲಿ ಅರಬರು ನಿರ್ಮಿಸಿದ ಕಲ್ಲಿನ ರಚನೆಯನ್ನು ಉತ್ತೇಜಿಸುವುದರ ಬಗ್ಗೆ ಚರ್ಚೆ ಮಾಡುತ್ತಿಲ್ಲ.

ಅಲ್ಲಾಹನ ವ್ಯವಸ್ಥೆಯನ್ನು ಸ್ವಚ್ಛಗೊಳಿಸುವುದು, ಅದನ್ನು ಶುದ್ಧವಾಗಿರಿಸಿಕೊಳ್ಳುವುದು, ಅಲ್ಲಾಹನ ದೀನನ್ನು ಮಲಿನಗೊಳಿಸುವ (ಅಥವಾ ಮಲಿನಗೊಳಿಸಿದ) ಮೂರ್ತಿ ಆರಾಧಕರ ಹಾಗೂ ಸತ್ಯನಿಷೇಧಿಗಳ ವಿರುದ್ಧ ಪಣತೊಟ್ಟು ಅವರ ಸವಾಲಿಗೆ ಪ್ರತಿಕ್ರಿಯಿಸಬೇಕಾಗಿರುವುದು ದೀನನ್ನು ಅನುಸರಿಸುವವರ ಮೇಲಿರುವ ಬಾಧ್ಯತೆಯಾಗಿದೆ. ಮಕ್ಕಾದಲ್ಲಿ ಅಥವಾ ಪ್ರಪಂಚದಲ್ಲಿ ಎಲ್ಲಿಯಾದರೂ ಇರುವ ಒಂದು ಘನಾಕೃತಿಯನ್ನು ಶುದ್ಧೀಕರಿಸಲು ಅಲ್ಲಾಹನು ಯಾರಿಗೂ ಸೂಚನೆ ನೀಡಲಿಲ್ಲ.

ಅಲ್ಲಾಹನು ದೀಕ್ಷೆ ಮಾಡಿರುವ ದೀನನ್ನು ಅನುಸರಿಸಲು ಮಾನವರಿಗೆ ದೃಷ್ಟಿಕೋನದ ಒಂದು ಬದಲಾವಣೆಯ ಅವಶ್ಯಕತೆಯಿದೆ. ಅಲ್ಲಾಹನ ವ್ಯವಸ್ಥೆಗಿರುವ ಸವಾಲನ್ನು ತೆಗೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. **ಇದು ಸಾರ್ವತ್ರಿಕ ಮೌಲ್ಯಗಳ ಆಧಾರದ ಮೇಲೆ ನೈತಿಕ ನಡತೆಯನ್ನು ಪಾಲಿಸುವ ಒಂದು ವ್ಯವಸ್ಥೆಯಾಗಿದೆ**. ಇದು ಯಾವುದೇ ಪುರುಷ ಅಥವಾ ಮಹಿಳೆಯು ಪಾಲಿಸಬಹುದಾದಂತಹ, ಸುಲಭ ಹಾಗೂ ಸರಳವಾದ ಪರಿಕಲ್ಪನೆಯಾಗಿದೆ. ನಾವು ತಲುಪಿರುವ ಈ ಪ್ರಗತಿಯ ಮತ್ತು ತಂತ್ರಜ್ಞಾನದ ಯುಗದಲ್ಲಿ, ಈ ವಿಕೃತಿಗೊಂಡ ಮನಸ್ಸುಗಳ ಕುತಂತ್ರಗಳು ಇನ್ನು ನಮ್ಮೊಂದಿಗೆ ಕಣ್ಣುಮುಚ್ಚಾಲೆಯಾಡಲು ಸಾಧ್ಯವಿಲ್ಲ. ಆದ್ದರಿಂದ, ನಿಮ್ಮ ಸ್ವಂತ ಒಳಿತಿಗಾಗಿ ಸವಾಲನ್ನು ತೆಗೆದುಕೊಳ್ಳಿರಿ.

ವ್ಯವಸ್ಥೆಗೆ ಸಮ್ಮತಿಸಿಕೊಳ್ಳುವವರಿಗೆ, ಸುರಕ್ಷತೆಯ ಭರವಸೆಯು ಇದೆ. ಕನಿಷ್ಟ ಪಕ್ಷ, ನಿಮ್ಮ ಕುತ್ತಿಗೆಗೆ ಭಾರವಾಗಿರುವಂತಹ ಸರಪಳಿಗಳಿಂದ ನಿಮಗೆ ಮುಕ್ತವಾಗಬಹುದು. ಅಲ್ಲಾಹನ ವ್ಯವಸ್ಥೆಯು - ಲಿಂಗ, ಜನಾಂಗೀಯ ಮೂಲ, ಸಂಸ್ಕೃತಿ ಅಥವಾ ಬಣ್ಣ ಇವುಗಳಾವುದನ್ನೂ ಗಣನೆಗೆ ತೆಗೆದುಕೊಳ್ಳದೇ - ಯಾರಿಗೂ ಪಾಲಿಸುವಂತಹುದಾಗಿದೆ. ಅಲ್ಲಾಹನ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗಿದ್ದಾರೆ, ಏಕೆಂದರೆ ಅವರನ್ನು ಸೃಷ್ಟಿಸಿದವನು ಅವನಾಗಿದ್ದಾನೆ, ಆದ್ದರಿಂದ ಅವನನ್ನು ಲಕ್ಷಿಸಬೇಕಾದ ರೀತಿಯಲ್ಲಿ ಅವನನ್ನು ಲಕ್ಷಿಸಬೇಕಾಗಿದೆ.

ಮಾನವರು ನಿಜವಾದ ಶಾಂತಿಪರತೆಯನ್ನು ಆನಂದಿಸಬೇಕಾದರೆ, ಅಲ್ಲಾಹನ ವ್ಯವಸ್ಥೆಯ (ಬೈತ) ದಿಸೆಯಲ್ಲಿ ಸವಾಲನ್ನು ತೆಗೆದುಕೊಳ್ಳಬೇಕು (ಹಾಜ್ಜೂ) ಮತ್ತು ಅದಕ್ಕೆ ಜೀವವನ್ನು ನೀಡಬೇಕು *(ಇಮಾರತ)*. 'ಧರ್ಮ' ಎಂಬುವುದು, ಶಾಂತಿಪರತೆ ಅಥವಾ ಇಸ್ಲಾಮಿನ ಮಹಾನ್ ಶತ್ರುವಾಗಿದೆ. ಅರಬೀ ಧರ್ಮ, ಕ್ರೈಸ್ತ ಧರ್ಮ ಮತ್ತು ಯಹೂದಿ ಧರ್ಮ ಮತ್ತು ಇತರ ಎಲ್ಲಾ ಧರ್ಮಗಳನ್ನು ಮರೆತುಬಿಡಿರಿ.

ಅಲ್ಲಾಹನನ್ನು ತಿರಸ್ಕರಿಸಲು ಅವರಿಗೆ ಹೇಗೆ ಸಾಧ್ಯವಾಗುತ್ತದೆ? ನಾವು ಏನೂ ಅಲ್ಲದವರಾಗಿದ್ದೆವು, ಅವನು ನಮಗೆ ಈ ಪ್ರಪಂಚದಲ್ಲಿ ಬದುಕಲು ಜೀವನವನ್ನು ನೀಡಿದನು, ತದನಂತರ ಅವನು ನಮ್ಮನ್ನು ಮರಣಕ್ಕೀಡು ಮಾಡುತ್ತಾನೆ, ನಂತರ ನಮ್ಮನ್ನು ಪುನರ್ಜೀವಿತಗೊಳಿಸುತ್ತಾನೆ. ಮರಣಾನಂತರದ ಜೀವನದ ಬಗ್ಗೆ ಖಚಿತರಾಗುವುದು ಬಹುಶಃ ನಮ್ಮ ಜೀವನದ ಅತ್ಯಂತ ಕಷ್ಟಕರವಾದ ಭಾಗವಾಗಿದೆ. ಬಹುಶಃ ವಿಶ್ವದ

ಜನಸಂಖ್ಯೆಯಲ್ಲಿ ಶೇಕಡಾ ಒಂದಕ್ಕಿಂತ ಕಡಿಮೆ ಜನರು ಅದರಲ್ಲಿ ವಿಶ್ವಾಸವಿರಿಸುತ್ತಾರೆ. ಅದರಲ್ಲಿ ವಿಶ್ವಾಸವಿಡುವುದರಲ್ಲಿ ಏನು ವೆಚ್ಚವಿದೆ? ಖಂಡಿತವಾಗಲೂ ಏನೂ ಇಲ್ಲ! ಮರಣದೊಂದಿಗೆ ಎಲ್ಲವೂ ಕೊನೆಗೊಳ್ಳುತ್ತದೆ ಎಂದು ನಾವು ಭಾವಿಸಿದರೆ, ಒಂದು ವೇಳೆ ಸಾವಿನ ನಂತರದ ಜೀವನವು ಆಕಸ್ಮಿಕವಾಗಿ ಎಂದುರಾದರೆ ಏನಾಗಬಹುದು? ಎಷ್ಟೇ ಪ್ರಮಾಣದ ಹಣವು ಅಂದಿನ ತೀರ್ಪಿನಿಂದ ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ ಎಂದು ತಿಳಿದುಕೊಳ್ಳಲು, ಆ ಸಮಯವು ಬಹಳ ತಡವಾಗಿ ಹೋಗಿರಬಹುದು. ಅಥವಾ ಮಾತಾಪಿತರೂ, ಜೀವನ ಸಂಗಾತಿಯೂ, ಮಕ್ಕಳೂ ಸೇರಿದಂತೆ ಯಾರೂ ಸಹ ನಮ್ಮ ಹೊರೆಯನ್ನು ಸ್ವಲ್ಪ ಮಟ್ಟಿಗೂ ಹೊರಲು ಮುಂದೆ ಬರಲಾರರು ಅಥವಾ ಯಾರೂ ಕೂಡಾ ಸಹಾಯ ನೀಡಲ್ಪಡರು ಮತ್ತು ಯಾವುದೇ ರೀತಿಯ ಶಿಫಾರಸನ್ನು ಸ್ವೀಕರಿಸಲಾಗದು ಎಂದು ತಿಳಿಯಲು ಆಗ ಹೊತ್ತು ಮೀರಿರಬಹುದು.

ನಾವು ನಮ್ಮ ನಡುವಿನ ಎಲ್ಲಾ ರೀತಿಯ ಸಂಬಂಧಗಳನ್ನು ಕಡಿದುಕೊಂಡು, ನಮಗೆ ಜೀವನ ಹಾಗೂ ಮರಣವನ್ನು ದಯಪಾಲಿಸಿದವನ ಸನ್ನಿಧಿಗೆ 'ಏಕಾಂಗಿಗಳಾಗಿ' ಮರಳಲಿದೆ ಎಂಬುವುದನ್ನು ಭಾವಿಸುವುದು ಕೂಡಾ ನಮ್ಮನ್ನು ಭಯಭೀತರನ್ನಾಗಿಸುತ್ತದೆ.

ಪ್ರತಿಯೊಂದು ಪ್ರವಾದಿಯೂ ಈ ಜೀವನದ ಮತ್ತು ಮುಂದಿನ ಜೀವನದ ಕುರಿತು ಹೇಳಿರುವುದು ಒಂದು ವಾಸ್ತವಾಂಶವೇ ಆಗಿದೆ. ಇಬ್ರಾಹೀಮ್, ಮೂಸಾ, ಈಸಾ ಮತ್ತು ಮಹಮ್ಮದರು ಇದರ ಕುರಿತು ಮಾತನಾಡಿದ್ದಾರೆ. ದೇವನೆಂಬ ಅದೃಷ್ಯ ಶಕ್ತಿಯು, ನಾವು ಈ ಜೀವನದಲ್ಲಿ ಮಾಡಿರುವುದಕ್ಕೆಲ್ಲವೂ ಅನಿವಾರ್ಯವಾಗಿ ಉತ್ತರಿಸುವಂತೆ ಮಾಡುತ್ತಾನೆ. ಭೂಮಿಯ ಮತ್ತು ಆಕಾಶದಲ್ಲಿರುವ ಪ್ರತಿಯೊಂದನ್ನೂ, ಗಂಡು ಮತ್ತು ಹೆಣ್ಣು ಸೇರಿದಂತೆ, ನಮ್ಮಲ್ಲಿ ಪ್ರತಿಯೊಬ್ಬರನ್ನೂ ಅವನು ಗಣನೆಗೆ ತೆಗೆದುಕೊಂಡಿದ್ದಾನೆ. ನಾವು ಕೇವಲ ನಮ್ಮನ್ನು ಸೃಷ್ಟಿಸಿದ ಮಾಲಿಕನ ಸೇವಕರಾಗಿದ್ದೇವೆ. ಅಲ್ಲಾಹನ ಜೊತೆಗೆ ತಮ್ಮ ಸೇವೆಯನ್ನೂ ಮಾಡಬೇಕೆಂದು ಸೂಚನೆ ನೀಡಲು ಯಾವುದೇ ಪ್ರವಾದಿಗಳಿಗೂ ಸಾಧ್ಯವಿಲ್ಲ. ಬದಲಿಗೆ ಅವರು ನಿರಂತರವಾಗಿ ಹೇಳಿರುವುದು, "*ಅಲ್ಲಾಹನ ಹೊರತು ನೀವು ಸೇವೆ ಮಾಡದಿರಿ*" ಎಂದಾಗಿದೆ.

ಅಲ್ಲಾಹನು ಮನುಕುಲಕ್ಕೆ ಪ್ರತಿಯೊಂದನ್ನೂ ಸುಲಭಗೊಳಿಸಿದ್ದಾನೆ. ಅವನು ಯಾವುದೇ ಆತ್ಮಕ್ಕೂ ಅದರ ಸಾಮರ್ಥ್ಯವನ್ನು ಮೀರಿದ ಭಾರವನ್ನು ಹೊರಿಸುವುದಿಲ್ಲ. ಹೀಗಾಗಿ, ಜನರು ತಮ್ಮ ನಿವಾಸಗಳಲ್ಲಿ, ಕಚೇರಿಗಳಲ್ಲಿ ಅಥವಾ ಅವರು ಎಲ್ಲೇ ಇರಲಿ, ಅಲ್ಲಿ ಅವರಿಗೆ ಅವನ ವ್ಯವಸ್ಥೆಯನ್ನು ಪಾಲಿಸಬಹುದಾಗಿದೆ. ಕುರ್‌ಆನಿನ ಮಾನದಂಡದ ಪ್ರಕಾರ, ವಿಲಕ್ಷಣವಾದ 'ಧಾರ್ಮಿಕ' ಉಡುಪನ್ನು ಧರಿಸಿರುವವರನ್ನು ಕಪಟವೇಷದಾರಿಗಳು ಎಂದು ಬಣ್ಣಿಸಲಾಗಿದೆ, '*ನೀವು ಅವರನ್ನು ನೋಡಿದರೆ, ಅವರ ರೂಪವನ್ನು ಕಂಡು ನೀವು ಪ್ರಭಾವಿತನಾಗಬಹುದು, ಅವರು ಮಾತನಾಡುವಾಗ ಅವರ ಧ್ವನಿಯು ನೀವು ಆಲಿಸಿಹೋಗಬಹುದು. ಆದರೆ ಅವರ ಉಪಮೆಯು ಮರದ ದಿಮ್ಮಿಗಳಂತೆ. ಪ್ರತಿಯೊಂದು ಪ್ರತಿಭಟನೆಯು ಅವರ ವಿರುದ್ಧ ಉದ್ದೇಶಿಸಿರುವಂತೆ ಅವರು ಭಾವಿಸುತ್ತಾರೆ. ಅವರ ಬಗ್ಗೆ ಎಚ್ಚರಿಕೆ ವಹಿಸಿರಿ. ಅವರು ಪಥಭ್ರಷ್ಟರಾದ ಕಾರಣ ಅಲ್ಲಾಹನು ಅವರನ್ನು ಶಪಿಸಿದ್ದಾನೆ.* (63:4).

ಭ್ರಷ್ಟಾಚಾರಗಳು

ತಮ್ಮ ಉದ್ದೇಶಗಳನ್ನು ಪೂರೈಸುವ ಸಲುವಾಗಿ ಅರಬೀ ಧಾರ್ಮಿಕರ ಮೂಲಕ ಕುರ್‌ಆನಿನ ಆಶಯಕ್ಕೆ ವಿರುದ್ಧವಾಗಿ ರೂಢಿಗೊಳಿಸಲಾಗಿರುವ ಭ್ರಷ್ಟಾಚಾರಗಳ ಸಾರಾಂಶವು ಹೀಗಿದೆ:

1. 2:125 ಮತ್ತು 22:26 ರಲ್ಲಿನ *ರುಕ್ಕ ಇ-ಸ್ಸುಜೂದ್* ಎಂಬುವುದನ್ನು *ಬಗ್ಗುವುದು, ಸಾಷ್ಟಾಂಗವೆಸಗುವುದು* ಎಂಬ ಅರ್ಥಬರುವಂತೆ ಮಾಡಲಾಯಿತು. ಆದರೆ ಅದು ನಿಜವಾಗಿ ಸೂಚಿಸುವುದು, ಅಲ್ಲಾಹನಿಂದ ಸಮ್ಮತಿಸಲ್ಪಟ್ಟ ವ್ಯವಸ್ಥೆಗೆ *ವಿಧೇಯತೆಯಿಂದ ತಮ್ಮನ್ನು ಸಮ್ಮತಿಸಿಕೊಳ್ಳುವುದು* ಎಂದಾಗಿದೆ.

2. *ಅಖೀಮು-ಸ್ಸಲಾತ-ವ-ಆತು-ಝ್ಝಕಾತ* ಎಂದರೆ ವಿಧ್ಯುಕ್ತ ಪ್ರಾರ್ಥನೆ ಮತ್ತು ಸಂಪತ್ತಿನ ತೆರಿಗೆ ಎಂದರ್ಥವಲ್ಲ. ಅದು ಹೇಳುವುದು, *ನಾವು ನಮ್ಮ ಬದ್ಧತೆಗಳನ್ನು ಎತ್ತಿಹಿಡಿಯಬೇಕು ಮತ್ತು ಅವುಗಳನ್ನು ಶುದ್ಧವಾಗಿರಿಸಬೇಕು* ಎಂದಾಗಿದೆ.

3. *ಸ್ಸಲಾತ್* ಎಂಬುವುದು ವಿಧ್ಯುಕ್ತ ಪ್ರಾರ್ಥನೆಗಳನ್ನು ಉಲ್ಲೇಖಿಸುವುದಿಲ್ಲ. ಇದರ ಅರ್ಥವು *ವಿಧಿವತ್ತಾದ ಒಂದು ಆಚರಣೆ* ಎಂದಾಗುವಂತೆ ಭ್ರಷ್ಟಗೊಳಿಸಲಾಗಿದೆ. ಕುರ್‌ಆನ್, ಕರ್ಮಗಳ ಮೂಲಕ ವೈಯಕ್ತಿಕ ಬದ್ಧತೆಗಳನ್ನು ಪ್ರೋತ್ಸಾಹಿಸುತ್ತದೆ.

4. *ಥ್ವಾಇಫೀನ* ಎಂದರೆ ಮಕ್ಕಾದ ಕಲ್ಲಿನ ವಿಗ್ರಹದ ಸುತ್ತ ಪ್ರದಕ್ಷಿಣೆ ಮಾಡುವುದು ಅಥವಾ *ಥ್ವವಾಫ್* ಮಾಡುವುದು ಎಂದರ್ಥವಲ್ಲ. ಬದಲಿಗೆ, ಅದರ ಅರ್ಥವು *ಜನರ ಸಮೂಹ* ಅಥವಾ *ಗುಂಪು* ಎಂದಾಗಿದೆ.

5. *ಆಕಿಫೀನ* ಎಂದರೆ ಅಲ್ಲಾಹನ ಮನೆಯಲ್ಲಿ ಅಥವಾ ಮಸೀದಿಯಲ್ಲಿ ತಪಶ್ಚರ್ಯೆ ಅಥವಾ ಏಕಾಂತವಾಸ ಮಾಡುವುದು ಎಂದಲ್ಲ. ಬದಲಿಗೆ, ಅಲ್ಲಾಹನ ವ್ಯವಸ್ಥೆಯನ್ನು (ಅಥವಾ ಬೈತವನ್ನು) ದೃಢವಾಗಿ ಹಿಡಿದುಕೊಳ್ಳುವುದು ಅಥವಾ ಸಮರ್ಪಿಸಿಕೊಳ್ಳುವುದು ಎಂದಾಗಿದೆ. 2:187 ರ *ವ-ಅನ್ತುಮ್ ಆಕಿಫೀನ ಫಿಲ್ ಮಾಸಾಜಿದ್* ಎಂದರೆ, *ಸಮ್ಮತಿಸಲ್ಪಟ್ಟ ಆದೇಶಗಳಿಗೆ ನೀವು ನಿಮ್ಮನ್ನು ಸಮರ್ಪಿಸಿಕೊಂಡಿರುವಾಗ* ಎಂದರ್ಥವಾಗಿದೆ.

6. *ಮಸಾಜಿದ್* ಎಂದರೆ, ಕಟ್ಟಡಗಳಲ್ಲ. ಬದಲಿಗೆ, *ಸಮ್ಮತಿಸಲ್ಪಟ್ಟವುಗಳು* ಎಂದಾಗಿದೆ. ಕುರ್‌ಆನನ್ನು ಸಂಬಂಧಿಸಿದಂತೆ, ಅದು *ಸಮ್ಮತಿಸಲ್ಪಟ್ಟ ಆದೇಶಗಳು* ಎಂದಾಗಿವೆ.

7. *ಮಸಾಜಿದಲ್ಲಾಹ್* ಎಂದರೆ ಅಲ್ಲಾಹನ ಮಸೀದಿಗಳು ಎಂದಲ್ಲ, ಅದು ಕುರ್‌ಆನಿನಲ್ಲಿರುವ *ಅಲ್ಲಾಹನು ನಿಗದಿಪಡಿಸಿರುವ ಸಮ್ಮತಿಸಲ್ಪಟ್ಟ ಆದೇಶಗಳಾಗಿವೆ.*

8. *ಮಸ್ಜಿದಿಲ್ ಹರಾಮ್* ಎಂದರೆ 'ಪವಿತ್ರ ಮಸೀದಿ' ಎಂದಲ್ಲ. ಅದು ಕುರ್‌ಆನಿನಲ್ಲಿರುವ *ಅಲ್ಲಾಹನು ನಿಗದಿಪಡಿಸಿರುವ ಸಮ್ಮತಿಸಲ್ಪಟ್ಟ ನಿರ್ಬಂಧಗಳು* ಎಂದಾಗಿದೆ.

9. *ಬೈತ* ಎಂದರೆ ಅಲ್ಲಾಹನಿಗೆ ಸೇರಿದ ಒಂದು ಭೌತಿಕ ಮನೆಯಲ್ಲ. ಅದು ಒಂದು ವ್ಯವಸ್ಥೆಯನ್ನು ಸೂಚಿಸುತ್ತದೆ.

10. *ಬೈತಿಯ* ಎಂದರೆ *ನನ್ನ ಮನೆ* ಎಂದಲ್ಲ, *ನನ್ನ ವ್ಯವಸ್ಥೆ* ಎಂದಾಗಿದೆ. ನೂಹರು ತನ್ನ ನಂಬಿಕೆಯ ವ್ಯವಸ್ಥೆಯನ್ನು ಸೂಚಿಸಲು ಈ ಪದವನ್ನು ಬಳಸಿದ್ದರು. ಅಲ್ಲಾಹನು ನಮಗೆ ಸತ್ಯವನ್ನು ಸುವ್ಯಕ್ತಗೊಳಿಸಿದ ನಂತರ ನಮ್ಮ ಪ್ರಸ್ತುತ ವ್ಯವಸ್ಥೆಯಿಂದ ಅವನು ನಿರೂಪಿಸಿದ ವ್ಯವಸ್ಥೆಗೆ ನಮ್ಮನ್ನು ಕೊಂಡೊಯ್ಯುತ್ತಾನೆ ಎಂಬುವುದನ್ನು ಸೂಚಿಸುವುದಕ್ಕಾಗಿ ನಮ್ಮಲ್ಲಿ ಪ್ರತಿಯೊಬ್ಬರನ್ನೂ ಸಂಬೋಧಿಸಿ *ಬೈತಿಕ* (ನಿನ್ನ ಪ್ರಸ್ತುತ ವ್ಯವಸ್ಥೆ) ಎಂಬ ಪದವನ್ನು ಅಲ್ಲಾಹನು ಬಳಸುತ್ತಾನೆ.

11. *ಹುರುಮುನ್* ಎಂದರೆ, *ಯಾತ್ರಿಯ ಉಡುಪು* ಅಥವಾ *ತೀರ್ಥಯಾತ್ರೆಗೆ ಹೊರಟಿರುವ ಸ್ಥಿತಿ* ಎಂದಲ್ಲ. ಅರಬೀ ಧರ್ಮದ ಆವಿಷ್ಕಾರಿತ *ಹಜ್ಜ್* ತೀರ್ಥಯಾತ್ರೆಯನ್ನು ಚಿರಸ್ಮರಣೀಯಗೊಳಿಸುವ ಸಲುವಾಗಿ 5:1 ವಚನವನ್ನು ತಿರುಚಲಾಗಿದೆ. *ಹುರುಮುನ್* ಎಂಬ ಪದವು ಕೇವಲ *ನಿರ್ಬಂಧಿತ* ಅಥವಾ *ನಿಷೇಧಿತ* ಎಂಬರ್ಥವನ್ನು ನೀಡುತ್ತದೆ.

12. *ಉಮ್ರ* ಎಂದರೆ ಅರಬೀ ಭೂಮಿಗಿರುವ ಒಂದು ಭೇಟಿ ಎಂದಲ್ಲ, ಆದರೆ ಅಲ್ಲಾಹನ ಕುರ್‌ಆನಿನಲ್ಲಿ ನಿಗದಿಪಡಿಸಲಾದ ಅಲ್ಲಾಹನ ಸಮ್ಮತಿಸಲ್ಪಟ್ಟ ಆದೇಶಗಳ (ಅಥವಾ ಮಸ್ಜಿದುಲ್ಲಾಹ್) ಪ್ರಕಾರ, ದೀನನ್ನು *ಉತ್ತೇಜಿಸುವುದು* ಅಥವಾ *ಪ್ರೋತ್ಸಾಹಿಸುವುದು* ಅಥವಾ *ಜೀವನೀಡುವುದು* ಎಂದಾಗಿದೆ.

13. *ಹಜ್ಜ್* ಎಂದರೆ ಮಕ್ಕಾ ನಗರಕ್ಕಿರುವ ವಾರ್ಷಿಕ ತೀರ್ಥಯಾತ್ರೆಯಲ್ಲ. ಅದು ಈ ಕೆಳಗಿನವುಗಳ ದಿಸೆಯಲ್ಲಿ ತೆಗೆದುಕೊಳ್ಳಬೇಕಾದ 'ಸವಾಲು' ಆಗಿದೆ:

    - ಅಲ್ಲಾಹನ ವ್ಯವಸ್ಥೆಗಾಗಿ
    - ಸಮಾಜದಲ್ಲಿ ಅಂಗೀಕೃತವಾಗುವ ತನಕ ಸಂದೇಶವನ್ನು ತಲುಪಿಸುದಕ್ಕಾಗಿ
    - ಅಲ್ಲಾಹನ ಸಮ್ಮತಿಸಲ್ಪಟ್ಟ ನಿರ್ಬಂಧಗಳನ್ನು ಉತ್ತೇಜಿಸಲಿಕ್ಕಾಗಿ
    - ಅಲ್ಲಾಹನ ಪಥದಲ್ಲಿ ಪಣತೊಡಲಿಕ್ಕಾಗಿ

(ನೋಡಿ: 3:97, 2:196, 9:19 ಮತ್ತು 4:100).

ಕುರ್‌ಆನಿನ ಸ್ವೀಕಾರ್ಹವಾದ ಅನೇಕ ಪದಗಳ ಅರ್ಥವನ್ನು, ಮಾನವಕೃತ ಅರಬೀ ಧರ್ಮದ ಆಚರಣೆಗಳಿಗೆ ಯೋಜಿಸುವಂತೆ ತೀವ್ರವಾಗಿ ಇರಿಯಲಾಯಿತು. ಅಲ್ಲಾಹನ ಪದದ ಅತ್ಯಂತ ಕೆಟ್ಟ ವಿಕೃತಿಯು 2:196 ರಲ್ಲಿ ಕಂಡುಬರುತ್ತದೆ. ಆ ವಚನದ ಬಹುತೇಕ ಎಲ್ಲಾ ಪದಗಳ ಅರ್ಥಗಳ ಪರಿಕಲ್ಪನೆಯನ್ನು ತಿರುಚಲಾಗಿದೆ. ಜನಸಮೂಹಕ್ಕೆ ಸ್ವೀಕಾರಾರ್ಹವಾಗುವ ತನಕ ಅಲ್ಲಾಹನ ಮಾರ್ಗದರ್ಶನವನ್ನು ಉತ್ತೇಜಿಸಲು ಸವಾಲು ತೆಗೆದುಕೊಂಡಾಗ, ಪುರುಷ ಅಥವಾ ಮಹಿಳೆಯು ಏನು ಮಾಡಬೇಕು ಎಂಬುವುದರ ಮಾರ್ಗದರ್ಶನವನ್ನು ಈ ವಚನವು ನೀಡುತ್ತದೆ - ಆದರೆ ಅದನ್ನು, ಪುರುಷರಿಗೆ ಮಾತ್ರ ಹೊಂದಿಕೊಳ್ಳುವಂತಹ ತೀರ್ಥಯಾತ್ರೆಯನ್ನು ಬಿಂಬಿಸುವಂತೆ ತಿರುಚಲಾಗಿತು.

ಕುರ್‌ಆನ್ ಅಲ್ಲಾಹನ ಪದಗಳಾಗಿವೆ ಎಂದು ವಿಶ್ವಾಸವಿರಿಸುವಂತಹ ಮುಸ್ಲಿಮರ ಕರ್ತವ್ಯವು ಇವುಗಳಾಗಿವೆ:

1. ಅಲ್ಲಾಹನ ವ್ಯವಸ್ಥೆಗೆ *(ಬೈತಿಯ)* ಇರುವ ಮಾರ್ಗವನ್ನು ಹುಡುಕಬೇಕು ಮತ್ತು ಶಾಂತಿಪರತೆ ಅಥವಾ ನಿಜವಾದ ಇಸ್ಲಾಮನ್ನು ಸ್ಥಾಪಿಸಲು ಕುರ್‌ಆನಿನಲ್ಲಿ ಅಲ್ಲಾಹನು ಸಮ್ಮತಿಸಿರುವವುಗಳನ್ನು ಉತ್ತೇಜಿಸುವ ಸವಾಲನ್ನು *(ಹಜ್ಜ್)* ತೆಗೆದುಕೊಳ್ಳಬೇಕು.

2. ಅಲ್ಲಾಹನ ಕಾನೂನುಗಳ *(ಶಆಇರಲ್ಲಾಹ್)* ಪ್ರಕಾರ, ಬದ್ಧತೆಗಳನ್ನು *(ಸ್ವಲಾತ್)* ಎತ್ತಿಹಿಡಿಯಬೇಕು, ಅವುಗಳನ್ನು ಪರಿಶುದ್ಧವಾಗಿರಿಸಬೇಕು *(ಝಕಾತ್)* ಮತ್ತು ಕುರ್‌ಆನಿನಲ್ಲಿ ನಿರೂಪಿಸಲಾದ ಸಮ್ಮತಿಸಲ್ಪಟ್ಟ ಆದೇಶಗಳನ್ನು *(ಮಸಾಜಿದಲ್ಲಾಹ್)* ಉತ್ತೇಜಿಸಬೇಕು *(ಯಾ'ಮುರು)*.

3. ಸಮ್ಮತಿಸಲ್ಪಟ್ಟ ನಿರ್ಬಂಧಗಳ *(ಮಸ್ಜಿದಿಲ್ ಹರಾಮ್)* ದಿಸೆಯಲ್ಲಿ ಸವಾಲನ್ನು ತೆಗೆದುಕೊಳ್ಳಬೇಕು *(ಹಜ್ಜ್)* ಮತ್ತು ಅವುಗಳನ್ನು ಉತ್ತೇಜಿಸಬೇಕು *(ಇಮಾರತ)* ಮತ್ತು ಕಲ್ಲುಗಳಿಗೆ, ಶಿಲೆಗಳಿಗೆ ಮತ್ತು ಇತರ ವಸ್ತುಗಳಿಗೆ ಬಗ್ಗುವ ಹಾಗೂ ಸಾಷ್ಟಾಂಗ ಮಾಡುವ (ಇವುಗಳನ್ನು ತಪ್ಪಾಗಿ ಇಸ್ಲಾಮಿನ ಮೇಲೆ ಹೊರಿಸುವಂತಹ) ಮೂರ್ತಿ ಆರಾಧಕರ *(ಮುಶ್ರಕೀನ್)* ಹಾಗೂ ಸತ್ಯನಿಷೇಧಿಗಳ *(ಕಾಫಿರೀನ್)* ವಿರುದ್ಧ ಪಣತೊಡಬೇಕು *(ಜಾಹಿದೂ)*.

4. ಆದೇಶಗಳನ್ನು ಉಲ್ಲಂಘಿಸಬಾರದು ಅಥವಾ ನಿರ್ಬಂಧಿತ ವ್ಯವಸ್ಥೆಯಲ್ಲಿನ ಸಾಮರಸ್ಯವನ್ನು *(ಆಮಿನಲ್ ಬೈತಲ್ ಹರಾಮಿ)* ಕದಡಬಾರದು.

5. ವ್ಯವಸ್ಥೆಯಲ್ಲಿನ ನಿರ್ಬಂಧಗಳ ಪ್ರಕಾರ ಜೀವಿಸಬೇಕು ಮತ್ತು ತಮ್ಮ ಜವಾಬ್ದಾರಿಗಳನ್ನು ಎತ್ತಿಹಿಡಿಯಬೇಕು.

ಜನರ ಮನಸ್ಸನ್ನು ಗುಲಾಮನನ್ನಾಗಿ ಮಾಡುವುದರಲ್ಲಿ ಧಾರ್ಮಿಕ ವ್ಯವಸ್ಥೆಯು ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ಅದು ದ್ವೇಷ, ತಪ್ಪುಕಲ್ಪನೆ ಮತ್ತು ಮೂಢನಂಬಿಕೆಗಳ ಆಧಾರದಲ್ಲಿ ಭಯವನ್ನು ತುಂಬುತ್ತದೆ, ಅವ್ಯವಸ್ಥೆಯನ್ನು ಬೆಳೆಸುತ್ತದೆ, ಜನರನ್ನು ಬೇರ್ಪಡಿಸುತ್ತದೆ. ಅದು ಒಂದು ಸಣ್ಣ ಆಡಳಿತ ವರ್ಗದ ಗಣ್ಯರ ತಾತ್ಕಾಲಿಕ ಹಿತಾಸಕ್ತಿಗಳ ಒಂದು ಸ್ಥಿತಿಯಾಗಿರುತ್ತದೆ. ನಾವು ನಮ್ಮ ಸುತ್ತಲೂ ನೋಡಿದರೆ ನಮಗೆ ಕಾಣಿಸಿಗುವುದು ಇದಾಗಿದೆ. **ಇಂದು, ನಮ್ಮ ನಾಗರೀಕತೆಯು, ಹದಗೆಡುತ್ತಿರುವಂತಹ ವಿಶ್ವದಲ್ಲಿ ಜೀವಿಸುತ್ತಿದೆ ಮತ್ತು ಮಾನವರು ಹಲವು ರೀತಿಯಲ್ಲಿ, ಹಲವು ಹಂತಗಳಲ್ಲಿ, ವಿಶ್ವದ ಪಿಡುಗನ್ನು ನಿವಾರಿಸಲು ಪ್ರಯತ್ನಿಸಿದ್ದಾರೆ. ಆದರೆ ದುಃಖಕರವೇನೆಂದರೆ, ಅವರು ಸಮಸ್ಯೆಗಳ ಬುಡವನ್ನು ಕಂಡುಹಿಡಿಯುವುದರಲ್ಲಿ ವಿಫಲರಾಗಿದ್ದಾರೆ. ಆ ಸಮಸ್ಯೆಗಳ ಬುಡವು 'ಸಂಘಟಿತ ಧರ್ಮ'ಗಳಾಗಿವೆ.**

ಅನುವಾದಗಳನ್ನು ಓದುವವರಿಗೆ

ಮಾನವ ಲಿಖಿತ ಹದೀಸ್ ಪುಸ್ತಕಗಳನ್ನು ತಿರಸ್ಕರಿಸಿದ ಅನೇಕರಿಗೆ, ಈ ಪುಸ್ತಕವು ಅಲ್ಲಾಹನ ಪಥದಲ್ಲಿ ತಮ್ಮ ಪ್ರಯಾಣಕ್ಕಿರುವ ಮತ್ತೊಂದು ಹೆಜ್ಜೆಯನ್ನು ಪ್ರತಿನಿಧಿಸುತ್ತದೆ.

ಆದರೆ ಶೈತಾನನು ಹೇಳುತ್ತಾನೆ: '*ನಾನು ನಿನ್ನ ನೇರ ಪಥದಲ್ಲಿ ಅವರಿಗಾಗಿ ಕಾಯುತ್ತಿದ್ದೇನೆ, ಮತ್ತು ನಾನು ಒಬ್ಬರನ್ನೂ ಬಿಡದೆ ಎಲ್ಲರನ್ನೂ ದಿಕ್ಕುಗೆಡಿಸುವೆನು*'. ಈಗಾಗಲೇ ತಪ್ಪು ಮಾರ್ಗದಲ್ಲಿರುವಂತಹ ಜನರಿಗಾಗಿ ಕಾದು ಕುಳಿತು ತನ್ನ ಸಮಯವನ್ನು ಅವನು ವ್ಯರ್ಥಮಾಡಲಾರನು.

ಕುರ್'ಆನನ್ನು ಓದಿದವರಿಗೆ ಈ ವಚನವು ನೆನಪಿಗೆ ಬರಬಹುದು:

> ಅವನು (ಶೈತಾನನು) ಹೇಳಿದನು, "ಹಾಗಾದರೆ ನೀನು ನನ್ನನ್ನು ಪಥಭ್ರಷ್ಟಗೊಳಪಡಿಸಿದ ಕಾರಣ, ನಾನು ಅವರೆಲ್ಲರಿಗಾಗಿ (ಮನುಕುಲಕ್ಕಾಗಿ) ನಿನ್ನ ನೇರ ಪಥದಲ್ಲಿ ಹೊಂಚುಹಾಕುತ್ತಿರುವೆನು. ನಂತರ ಅವರ ಮುಂದಿನಿಂದಲೂ ಹಿಂದಿನಿಂದಲೂ ಬಲಭಾಗದಿಂದಲೂ ಎಡಭಾಗದಿಂದಲೂ ನಾನು ಅವರನ್ನು ಸಮೀಪಿಸುವೆನು. ನೀನು ಅವರಲ್ಲಿ ಬಹುಪಾಲು ಜನರನ್ನು ಕೃತಜ್ಞರನ್ನಾಗಿ ಕಾಣಲಾರೆ". (7:16-17)

ಎಚ್ಚರಿಕೆಯಿಂದ ಅಧ್ಯಯನ ಅಥವಾ ಪರಿಶೀಲನೆ ಮಾಡದೆಯೇ, ಅನುವಾದಗಳಿಂದ ಅರ್ಥಮಾಡಿಕೊಳ್ಳುವುದರಲ್ಲಿ ತೃಪ್ತಿಪಟ್ಟುಕೊಳ್ಳುವವರು, ಅನುವಾದಕರ ವೈಯಕ್ತಿಕ ತಿಳುವಳಿಕೆ ಮತ್ತು ನಂಬಿಕೆಗಳ ಜೊತೆಗೆ ಹೆಪ್ಪುಗಟ್ಟಿ ಹೋಗುವ ಸಂಭವವಿದೆ. ಅನುವಾದಕರ ಈ ತಿಳುವಳಿಕೆ ಮತ್ತು ನಂಬಿಕೆಗಳು, ಒಂದು ನಿಯಮದಂತೆ, ಓದುಗರು ಈಗಾಗಲೇ ತಿರಸ್ಕರಿಸಿರುವ ಹದೀಸ್ ಪುಸ್ತಕಗಳಿಂದಲೇ ಒಟ್ಟುಗಟ್ಟಲೆಯಾಗಿ ಪಡೆದಿರುವಂತಹುದಾಗಿದೆ.

ಕುರ್‌ಆನನ್ನು ಅದರ ಪರಿಶುದ್ಧತೆಯೊಂದಿಗೆ ಓದುವುದು ಮತ್ತು ಧಾರ್ಮಿಕರ ಬೋಧನೆಗಳ ಯೋಗ್ಯತೆಯನ್ನು ನಿರ್ಣಯಿಸಲು ಅದನ್ನು ಒಂದು ಮಾನದಂಡವಾಗಿ ಬಳಸುವುದು, ನಿಜವಾದ ಇಸ್ಲಾಮಿನ ಬಗ್ಗೆ ತಿಳಿಯಲಿರುವ ಏಕೈಕ ಮಾರ್ಗವಾಗಿದೆ. ಅನುವಾದಗಳಲ್ಲಿರುವ ವಿಕೃತಿಗಳನ್ನು ಪತ್ತೆಹಚ್ಚಲು ನಿಮ್ಮದೇ ಆದ ಅನ್ವೇಷಣೆಯನ್ನು ಮಾಡಿರಿ ಮತ್ತು ಅಲ್ಲಾಹನ ಮೇಲೆ ಭರವಸೆಯನ್ನಿಡಿರಿ. ನಮ್ಮ ಸಂರಕ್ಷಕನು ಕೇವಲ ಅವನು ಮಾತ್ರನಾಗಿದ್ದಾನೆ.

> ನೀವು ಸ್ವತಃ ಖಚಿತ ಪಡಿಸಿಕೊಳ್ಳುವುದನ್ನಲ್ಲದೇ (ಅಥವಾ ನಿಮಗೆ ಜ್ಞಾನವಿಲ್ಲದವುಗಳನ್ನು) ನೀವು ಸ್ವೀಕರಿಸಬೇಡಿರಿ. ನಿಶ್ಚಯವಾಗಿಯೂ ಶ್ರವಣ, ದೃಷ್ಟಿ, ಮತ್ತು ಮನಸ್ಸು ಇವೆಲ್ಲವುಗಳ ವಿಚಾರಣೆ ನಡೆಯಲಿದೆ. (17: 36)

ಆದ್ದರಿಂದ, ನಿಮಗೆ ಪರಿಶೀಲಿಸಲು ಸಾಧ್ಯವಾಗದಿದ್ದರೆ, ಸಂಘಟಿತ ಧರ್ಮದಿಂದ ದೂರವಿರಿ. ಒಂದು ಸಮೃದ್ಧ ಜೀವನವನ್ನು ನಡೆಸಿರಿ. ಅದೃಷ್ಯನಾದ ದೇವನಲ್ಲಿ ವಿಶ್ವಾಸವಿರಿಸುವುದು ಮತ್ತು ನಿಮ್ಮದೇ ಸ್ವಂತದ ಒಳಿತಿಗಾಗಿ ಒಂದು ಪ್ರಾಮಾಣಿಕ ವ್ಯಕ್ತಿಯಾಗುವುದು, ಈ ಪ್ರಪಂಚದಲ್ಲಿ ಒಂದು ಶಾಂತಿಯುತ ಜೀವನವನ್ನು ಪಡೆಯುಲಿರುವ ನೈತಿಕ ನಿಯಮವಾಗಿದೆ. ಇದಕ್ಕೆ ಅರ್ಹತೆಯನ್ನು ಪಡೆಯಲು ನಾವು ಮಾಡಬೇಕಾಗಿರುವುದು - ನೈಸರ್ಗಿಕ ನಿಯಮಗಳನ್ನು ಲಕ್ಷಿಸುವುದು, ಉತ್ತಮ ಕಾರ್ಯಗಳು ಮಾಡುವುದರ ಮೂಲಕ ಒಂದು ಅತ್ಯುತ್ಕೃಷ್ಟವಾದ ಜೀವನವನ್ನು ನಡೆಸುವುದು ಮತ್ತು ಸಾಮಾನ್ಯ ಮಾನವನಿಗೆ ಮನದಟ್ಟಾಗುವ ಕಾರ್ಯಗಳನ್ನು ನಿರ್ವಹಿಸುವುದಾಗಿದೆ. ಯಾವುದು ಒಳ್ಳೆಯದು ಅಥವಾ ಕೆಟ್ಟದು ಎಂದು ಅರ್ಥಮಾಡಿಕೊಳ್ಳುವಂತಹ ಹುಟ್ಟುಗುಣದೊಂದಿಗೆ ಅಲ್ಲಾಹನು ಪುರುಷರನ್ನು ಮತ್ತು ಮಹಿಳೆಯರನ್ನು ಸೃಷ್ಟಿಸಿದ್ದಾನೆ. 'ನಿಮ್ಮ ಮಾತಾಪಿತರನ್ನು ಗೌರವಿಸಿರಿ' ಎಂಬ ಆದೇಶವನ್ನು ಅವನು ನೀಡುವಾಗ, ನಮ್ಮ ಮಾತಾಪಿತರನ್ನು ಹೇಗೆ ಗೌರವಿಸಬೇಕೆಂದು ನಮಗೆ ಹೇಳಿಕೊಡಲು ಯಾವುದೇ ಉಲೆಮಾಗಳ, ಪುರೋಹಿತರ, ಮೌಲವಿಗಳ ಅಥವಾ ಮುಲ್ಲಾಗಳ ಅವಶ್ಯಕತೆಯು ನಮಗಿಲ್ಲ.

ಕೊನೆಯದಾಗಿ – 'ಅಲ್ಲಾಹನಿಗೆ ಏನು ಬೇಕಾಗಿದೆ' ಎಂದು ತಮಗೆ ತಿಳಿದಿದೆ ಎಂದು ಭಾವಿಸಿರುವ ರಬ್ಬಿಗಳು, ಆಯತುಲ್ಲಾಹ್'ಗಳು, ಪುರೋಹಿತರು, ಉಲೆಮಾಗಳು, ಮುಲ್ಲಾಗಳು, ಮೌಲವಿಗಳು, ಧರ್ಮಶಾಸ್ತ್ರಜ್ಞರು, ಧಾರ್ಮಿಕ ವಿದ್ವಾಂಸರು ಮತ್ತು ಆಧ್ಯಾತ್ಮಿಕ ನಾಯಕರು ಸೇರಿದಂತೆ, '*ಯಾರ ಅಗತ್ಯವೂ ನಮ್ಮ ಪ್ರಭುವಾದ ಅಲ್ಲಾಹನಿಗಿಲ್ಲ*'. ಇವುಗಳು, ನಾವು ಹಾಗೂ ನಮ್ಮ ಪೂರ್ವಜರು ಆವಿಷ್ಕರಿಸಿದ ಹೆಸರುಗಳಾಗಿವೆ. ಈ ಹೆಸರುಗಳು, ಯಾವುದೇ ಸಮಯದಲ್ಲಿ ಅಥವಾ ಸ್ಥಳದಲ್ಲಿ ಸ್ಫೋಟಗೊಳ್ಳಲು ಸಿದ್ಧವಾಗಿರುವಂತಹ, ಚಲಿಸುತ್ತಿರುವ ಟೈಮ್ ಬಾಂಬ್'ಗಳ ಸಮೂಹವಾಗಿದ್ದಾರೆ. ಅವರು ಏಕದೇವನ ಬಗ್ಗೆ ಊಹಾಪೋಹಗಳನ್ನು ಮತ್ತು ತಮ್ಮ ಸ್ವಂತ ಅಭಿಪ್ರಾಯಗಳನ್ನು ಹೊರತುಪಡಿಸಿ ಬೇರೇನನ್ನೂ ಹಿಂಬಾಲಿಸುವುದಿಲ್ಲ. ಅಲ್ಲಾಹನು ಅವರಿಗೆ ಯಾವುದೇ ಅಧಿಕಾರವನ್ನು ನೀಡಲಿಲ್ಲ. ಅವರನ್ನು ಈ ಉತ್ತುಂಗಕ್ಕೇರಿಸಿರುವುದೂ, ಅವರಿಗೆ ಗಣತೆ ಗೌರವವನ್ನು ನೀಡುತ್ತಿರುವುದೂ ನಮ್ಮಂತಹ ಜನರೇ ಆಗಿದ್ದಾರೆ. ನೀವು ಅವರನ್ನು ಅಧಿಕಾರದಲ್ಲಿ ನಿಲ್ಲಿಸಿದರೆ,

ಅವರು ನಿಮ್ಮ ಹಕ್ಕುಗಳನ್ನು ತಕ್ಷಣ ಕಿತ್ತುಕೊಳ್ಳುತ್ತಾರೆ, ನಂತರ *"ನೀವು ನಮ್ಮ ವಿರುದ್ಧ ಮಾತನಾಡಿದರೆ ನೀವು ಧರ್ಮಭ್ರಷ್ಟರು"*, *"ನೀವು ನಾಸ್ತಿಕರು"* ಅಥವಾ *"ನೀವು ಸತ್ಯನಾಶ ಹೊಂದಿದವರು"*, ಎಂದು ಹೇಳುವರು ಮತ್ತು ನಿಮ್ಮನ್ನು ಒಬ್ಬ ವಿಶ್ವಾಸಿಯ ಕೈಯಿಂದಲೇ ಕಲ್ಲು ಹೊಡೆದು ಕೊಲ್ಲುವರು.

ಆದುದರಿಂದ, ನಮಗೆ ಬೇಕಾಗಿರುವುದು ಅಲ್ಲಾಹನು ಮಾತ್ರನಾಗಿದ್ದಾನೆ ವಿನಹಃ ಈ ಮಂದಬುದ್ಧಿಗಳಲ್ಲ. *ಅನುಸರಿಸಲ್ಪಡಲು ಯೋಗ್ಯನಾದವನು ಕೇವಲ ಅಲ್ಲಾಹನೋ ಅಥವಾ ಮಾರ್ಗದರ್ಶನವು ಸ್ವತಃ ಅಗತ್ಯವಿರುವ ಈ ಭೌತಿಕ ದೇವರುಗಳೋ?*

ಇದರ ಬಗ್ಗೆ ಶ್ರದ್ಧೆಯಿಂದ ಆಲೋಚಿಸಿರಿ. ನಮಗೆ ಏನಾಗಬೇಕು ಅಥವಾ ಯಾರಾಗಬೇಕು ಎಂದು ಇಚ್ಛಿಸುತ್ತೇವೆಯೋ, ಅದು ನಾವೇ ಸ್ವತಃ ಆಗಬಹುದಾದರೆ, ನಾವು ಏಕೆ ಒಂದು ಸಂಘಟಿತ ಧರ್ಮದ ಸದಸ್ಯರಾಗಬೇಕು? ನೀವು ಒಬ್ಬ ಪ್ರಾಮಾಣಿಕ, ವಿನಮ್ರ, ದೃಢ, ಮತ್ತು ಸಹಾನುಭೂತಿ ಹಾಗೂ ಸ್ನೇಹವುಳ್ಳ ಶಾಂತಿಯುತ ಪುರುಷ ಅಥವಾ ಮಹಿಳೆಯಾಗಿದ್ದರೆ - ನೀವು ಈ ಸಂಘಟನೆಗಳ ಸದಸ್ಯತ್ವ ಪಡೆಯದಿರುವುದು ಅಲ್ಲಾಹನ ದೃಷ್ಟಿಯಲ್ಲಿ ಒಂದು ಗಮನಾರ್ಹ ಸಂಗತಿಯಾಗಿರಲು ಸಾಧ್ಯವೇ? ಒಂದು ಧರ್ಮದ ಹಣೆಪಟ್ಟಿ ಧರಿಸುವುದು ಕಡ್ಡಾಯವೇ?

ನಾವು ಈ ಭೌತಿಕ-ಪ್ರಭುಗಳನ್ನು ತಿರಸ್ಕರಿಸಿದರೆ, ಅಲ್ಲಾಹನನ್ನು ತಿರಸ್ಕರಿಸಿದಂತಾಗುತ್ತದೆಯೇ? ಖಂಡಿತವಾಗಿಯೂ ಇಲ್ಲ! ಈ ದುಷ್ಟ ದೇವರುಗಳ ಜೊತೆಗಿನ ಸಂಬಂಧವನ್ನು ಮುರಿದು ಹಾಕಿದರೆ ಮತ್ತು ನಮ್ಮನ್ನು ಸೃಷ್ಟಿಸಿದ ನೈಜ್ಯ ದೇವನ ಕಡೆಗೆ ಮರಳಿದರೆ, ಅದು ನಮ್ಮ ಜೀವನದಲ್ಲಿ ನಾವು ತೆಗೆದುಕೊಳ್ಳಬಹುದಾದಂತಹ ಅತ್ಯುತ್ತಮ ನಿರ್ಧಾರವಾಗಿದೆ. ನಮಗೆ ಅವನಲ್ಲಿ ವಿಶ್ವಾಸವಿರಿಸಲು ಅನೇಕ ಕಾರಣಗಳಿವೆ. ಏಕೆಂದರೆ, ಅವನ ವ್ಯವಸ್ಥೆಯು ನಮ್ಮ ಜೀವನದಲ್ಲಿ ಒಂದು ಪಾತ್ರವನ್ನು ವಹಿಸುವ ಸಾಧ್ಯತೆಯನ್ನು ಅದು ತೆರೆದಿಡುತ್ತದೆ. ನಾವು ಕೇವಲ ಅವನಲ್ಲಿ ನಂಬಿಕೆಯನ್ನಿಟ್ಟರೆ ಮತ್ತು ಉತ್ತಮ ಕಾರ್ಯಗಳನ್ನು ಮಾಡಲು ಬದ್ಧರಾದರೆ ಮತ್ತು ನಮ್ಮ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ಪಾಲಿಸಿದರೆ, ಅವನು ನಮ್ಮನ್ನು (ಪುರುಷರು ಮತ್ತು ಮಹಿಳೆಯರು) ಭೂಮಿಯ ಮೇಲೆ ಶಾಂತಿಯ ಅಗ್ರಗಣ್ಯರನ್ನಾಗಿ ಸ್ವತಂತ್ರಗೊಳಿಸುವನು ಮತ್ತು ನಮಗೆ ಶಾಂತಿಪರತೆಯನ್ನು ದಯಪಾಲಿಸುವನು ಎಂದು ಅವನು ನಮಗೆ ಭರವಸೆ ನೀಡಿದ್ದಾನೆ.